TIGHT BINDING BOOK

UNIVERSAL
LIBRARY
OU_200427
UNIVERSAL
LIBRARY

OSMANIA UNIVERSITY LIBRARY

Call No. K 83/R16V Accession No. K 4300

Author [illegible]

Title [illegible] 1957

This book should be returned on or before the date last marked below.

# ವಜ್ರದುಂಗುರ

ನಾ. ರಾಜಲಕ್ಷ್ಮಿ

ವಾಹಿನಿ ಪ್ರಕಾಶನ
ಜಯಚಾಮರಾಜ ರಸ್ತೆ, ಬೆಂಗಳೂರು-೨

ಮೊದಲನೆಯ ಮುದ್ರಣ : ೧೯೫೪

ಎಲ್ಲ ಹಕ್ಕುಗಳೂ ಲೇಖಕರದು

ಮುಖಚಿತ್ರ :
ಆರ್. ಎಸ್. ಎನ್.

ಮುದ್ರಕರು :
ಎಂ. ಎಸ್. ಚಿಂತಾಮಣಿ ಬಿ. ಎಸ್‌ಸಿ.,
"ಈಸ್ಟರ್ನ್ ಪ್ರೆಸ್", ಜಯಚಾಮರಾಜ ರಸ್ತೆ,
ಬೆಂಗಳೂರು–೨

ಈ ಪುಸ್ತಕದ ವಿಮರ್ಶೆ ಕಳುಹಿಸಲು
ಕಡೆಯ ತಾರೀಖು: ೬-೩-೧೯೫೪

# ೧

ಬೆಳಗಿನಿಂದ ಒಂದೇ ಸಮನೆ ಒಲೆ ಮೊರೆಯುತ್ತ ಇದ್ದಿತು. ಸುಬ್ಬಮ್ಮನವರು ಅಷ್ಟು ಹೊತ್ತಿಗೇ ಎದ್ದು ಕಾಫಿ ಕಾಯಿಸಲು ಒಲೆ ಹಚ್ಚುತ್ತಿದ್ದರು. ಬಚ್ಚಲ ಮನೆ ಒಲೆಗೆ ತೆಂಗಿನಗರಿ ತುರಕಿ, ಎರಡು ಸೌದೆ ಇಟ್ಟು, ನಾಲ್ಕೈದು ಬೆರಣಿ ಹಾಕಿ ಕಡ್ಡಿ ಗೀಚಿ ಬಂದಿದ್ದರು. ಒಲೆ ಹೊತ್ತಿಕೊಂಡು ಧಗಧಗನೆ ಉರಿಯುತ್ತಿತ್ತು. ಅಡುಗೆ ಮನೆಗೇ ಆ ಒಲೆಮೊರೆತ ಕೇಳುತ್ತಿದ್ದಿತು. 'ಇದೇನು ಹೇಗೆ ಮೊರೀತಾ ಇದೆ ಒಲೆ. ನಮ್ಮನೇಗೆ ಯಾರು ಬರ್ತಾರೆ. ನೆಂಟರಿಲ್ಲ. ಇಷ್ಟರಿಲ್ಲ. ಇರೋ ಒಬ್ಬ ತಮ್ಮ ಮುಖ ತೋರಿಸಿ ಎಂಟು ವರ್ಷವಾಯ್ತು. ಹೆಂಡ್ತಿ ಹಡದ್ಲು ಅಂತ ಮೂರು ತಿಂಗಳ ಹಿಂದೆ ಕಾಗದ ಹಾಕಿದ್ದ. ಮತ್ತೆ ಕಾಗದವೇ ಇಲ್ಲ' ಎಂದು ಕಣ್ಣೀರು ತಂದುಕೊಂಡರು ಕಾಫಿ ಒಲೆ ಹತ್ತಿಕೊಳ್ಳುತ್ತಲೇ ಕಾಫಿಗೆ ನೀರಿಟ್ಟು ಬೀದಿ ಬಾಗಿಲಿಗೆ ನೀರು ಹಾಕಿ ರಂಗೋಲಿ ಇಡಲು ಹೊರಗೆ ಬಂದರು. ಅಂಗಳದಲ್ಲಿ ಕಾಗೆಯೊಂದು ಸೀಬೆ ಮರದ ಕೊಂಬೆಯ ಮೇಲೆ ಕುಳಿತುಕೊಂಡು ಇವರು ಬರುತ್ತಲೂ ಒಂದೇ ಸಮನೆ "ಕಾಕಾಕಾಕಾಕಾ" ಎಂದು ಅರಚಿಕೊಂಡಿತು. ಸುಬ್ಬಮ್ಮನವರಿಗೆ ಮತ್ತೂ ಆಶ್ಚರ್ಯವಾಯಿತು. ಅವರಿಗೆ ಇಂತಹ ಶಕುನ ಗಳಲ್ಲಿ ಬಹಳ ನಂಬಿಕೆ. ಯಾರು ಬರುತ್ತಾರೋ ಎಂದುಕೊಂಡು ಹೊರಗೆ ಬಂದು ಬೀದಿಬಾಗಿಲನ್ನು ಗುಡಿಸಿ, ನೀರು ಹಾಕಿ, ರಂಗೋಲಿ

ಇಟ್ಟು ಒಳಕ್ಕೆ ಬಂದರು. ಇನ್ನೂ ಆ ಕಾಗೆ ಕೂಗುತ್ತಲೇ ಇದ್ದಿತು. ಹುಷ್ ಎಂದು ಕೈಯ್ಯಾಡಿಸಿದರು. ಕಾಗೆ ಹಾರಿಹೋಯಿತು.

ಒಳಕ್ಕೆ ಬರುತ್ತಿರುವಂತೆಯೇ ಹೊರಗೆ ಗಾಡಿಯೊಂದು ಬಂದು ನಿಂತಂತಾಯಿತು. ಕುದುರೆಯ ಕತ್ತಿಗೆ ಕಟ್ಟಿದ ಗೆಜ್ಜೆ "ಝಣ್ ಝಣ್ ಝಣಕ್" ಎಂದು ಶಬ್ದಮಾಡಿ ನಿಂತಿತು. ಸುಬ್ಬಮ್ಮ ಸರ ಸರನೆ ಹೊರಗೆ ಹೋದರು. ಗಾಡಿ ಅವರ ಮನೆಯ ಮುಂದೇ ನಿಂತಿದ್ದಿತು. ಮೈತುಂಬ ಶಾಲುಹೊದ್ದುಕೊಂಡು ಒಬ್ಬಾತ, ಮಗುವನ್ನೆತ್ತಿಕೊಂಡು ಕೆಳಗಿಳಿದರು. ಸಾಬಿಗೆ ಬಾಡಿಗೆ ಕೊಟ್ಟು ಮಗುವಿಗೆ ಚೆನ್ನಾಗಿ ಹೊದ್ದಿಸಿಕೊಂಡು ಮುಂದೆ ನಡೆದು ಬಂದರು. ಸುಬ್ಬಮ್ಮನವರಿಗೆ ಅವರು ಯಾರೋ ತಿಳಿಯಲಿಲ್ಲ. ಆಶ್ಚರ್ಯದಿಂದ ನೋಡುತ್ತ ನಿಂತರು. ಆ ವ್ಯಕ್ತಿ ಸುಬ್ಬಮ್ಮನವರನ್ನು ನೋಡಿದಾಕ್ಷಣ "ಅಕ್ಕಯ್ಯ, ಕಡೇಗೂ ಬಂದುಬಿಟ್ಟೆ" ಎಂದರು. ಸುಬ್ಬಮ್ಮನವರು ದಿಗ್ಭ್ರಾಂತರಾದರು. ತಮ್ಮನನ್ನೇ ದಿಟ್ಟಿಸಿನೋಡುತ್ತ ಕೊಂಚಹೊತ್ತು ನಿಂತುಬಿಟ್ಟರು. ಅವರಿಗೆ ಬಾಯಿ ಕಟ್ಟಿದಂತೆ ಆಯಿತು. ಕಡೆಗೆ ಚೇತರಿಸಿಕೊಂಡರು.

"ಯಾರು ಸುಬ್ಬಯ್ಯನೇ !........ಏಕೋ ಗುರ್ತೇ ಸಿಕ್ಕಲಿಲ್ಲ. ಬಾಪ್ಪಾ ಬಾ. ನಿನಗೆ ನೂರು ವರ್ಷ ಆಯುಸ್ಸು. ಈಗತಾನೇ ಕಾಗೆ ಕೂಗ್ತಾ ಅಂತ ನಿನ್ನ ನೆನಸಿಕೊಂಡೆ. ನೀನೇ ಬಂದು ಬಿಟ್ಟೆ. ಹುಷಾರಾಗಿದ್ದೀಯಾಪ್ಪಾ"

"ಹ್ಞು ಅಕ್ಕಯ್ಯ. ಇದ್ದೀನಿ ನೋಡು ಗುಂಡುಕಲ್ಲಿನಹಾಗೆ. ಇನ್ನೂ ಬದುಕಿದ್ದೀನಿ."

ಅವರಿಗೆ ಹೆದರಿಕೆಯಾಯಿತು. ತಮ್ಮ ಅಷ್ಟು ಕಂಗೆಟ್ಟು ಹೋಗಿದ್ದನು. ತಮ್ಮನನ್ನು ಒಳಗೆ ಬರಮಾಡಿಕೊಳ್ಳುತ್ತಲೇ ಮುಖ ಅರಳಿಸಿ ಕೇಳಿದರು.

"ಇದೇ ಏನೋ ಮಗು....ತಾ ಇಲ್ಲಿ....ಅವಳೆಲ್ಲಿ....ಸೀತಮ್ಮ ಬರಲಿಲ್ಲವೇ ?"

ಸುಬ್ಬಮ್ಮ ಮಗುವನ್ನು ಎತ್ತಿಕೊಳ್ಳಲು ಕೈನೀಡಿದರು. ಅವರ

ಕೈ ನಡುಗುತ್ತಿದ್ದಿತು. ಸುಬ್ಬಯ್ಯ ಹಿಂದೆ ಚಿಮ್ಮಿ ನಿಂತರು.

"ಮುಟ್ಟಬೇಡ ಅಕ್ಕಯ್ಯ...............ಅವಳು ಹೋಗಿಬಿಟ್ಟಳು ........ಈ ಮಗುವನ್ನೂ ನನ್ನೂ ಅನಾಥರನ್ನಾಗಿ ಮಾಡಿ ಹೋಗಿ ಬಿಟ್ಟಳು ಅಕ್ಕಯ್ಯ" ಎಂದು ಅತ್ತುಬಿಟ್ಟರು. ಸುಬ್ಬಮ್ಮನವರಿಗೆ ಸುದ್ದಿ ಕೇಳಿ ಸಿಡಿಲುಬಡಿದಂತಾಯಿತು.

"ಏನೋ ಸುಬ್ಬ........ನನಗೆ ಒಂದು ಕಾಗದ ಹಾಕ್ಬಾರದಾಗಿ ತ್ತೇನೋ........ಏನಾಗಿತ್ತೋ ಅವಳಿಗೆ. ಮೂರು ತಿಂಗಳ ಹಿಂದೆ ಕಾಗದ ಬರೆದಿದ್ದವನು ಮತ್ತೆ ಬರೀಬೇಡ್ವೆ" ಎಂದು ಅಳುತ್ತಲೇ ತಮ್ಮನನ್ನು ಅಂಗಳದಲ್ಲೇ ಕೂಡಿಸಿದರು. ಸುಬ್ಬಯ್ಯ ಮಗುವನ್ನು ತೊಡೆಯಮೇಲೆ ಮಲಗಿಸಿಕೊಂಡು ಕುಳಿತುಕೊಂಡರು. ಮಗುವಿಗೆ ಹಸಿವಾಗಿತ್ತೇನೋ, ಅಳತೊಡಗಿತು.

ಸುಬ್ಬಮ್ಮನವರಿಗೆ ಮಗುವು ಅಳುತ್ತಿರುವುದನ್ನು ನೋಡಲಾಗ ಲಿಲ್ಲ. ಸರ್ರನೆ ಎತ್ತಿಕೊಂಡುಬಿಟ್ಟರು....ಆ ಎಳೆಗೂಸಿಗೂ ತಾಯಿಯ ತೆಕ್ಕೆಯ ಅನುಭವವಾಗಿದ್ದಿತು. ಸುಬ್ಬಮ್ಮನವರು ಎತ್ತಿಕೊಂಡ ತಕ್ಷಣ ಸುಮ್ಮನಾಗಿಬಿಟ್ಟಿತು. ಸುಬ್ಬಯ್ಯ ಆಕಾಶವನ್ನು ದಿಟ್ಟಿಸಿ ನೋಡುತ್ತ ಕುಳಿತಿದ್ದರು. ಮುಖದ ತುಂಬ ನರೆತಕೂದಲು ಪೊದೆಯಂತೆ ಬೆಳೆದಿ ದ್ದಿತು. ಕಣ್ಣುಗಳು ಗುಳಿಬಿದ್ದಿದ್ದುವು. ಮೈ ಬಿಳಚಿಕೊಂಡಿದ್ದಿತು. ತಾವು ಎಂಟು ವರ್ಷಗಳ ಹಿಂದೆ ನೋಡಿದ ತಮ್ಮನೇ ಇವನು ಎನ್ನಿಸಿತು. ತಮ್ಮನ ದುಃಸ್ಥಿತಿಯನ್ನು ನೋಡಿ ಸುಬ್ಬಮ್ಮನವರಿಗೆ ದುಃಖವು ಒತ್ತ ರಿಸಿಕೊಂಡು ಬಂದಿತು ಮತ್ತೆ ಕೇಳಿದರು.

"ಸೀತಾಗೆ ಏನಾಗಿತ್ತೋ?"

"ಬಾಣಂತಿ ಖಾಯಿಲೆ. ಹೆತ್ತಮೇಲೆ ಒಂದು ತಿಂಗಳು ಹಾಯಾ ಗಿದ್ದಳು. ಆಮೇಲೆ ಜ್ವರ ಬರುತ್ತಿತ್ತು ಅಕ್ಕಯ್ಯ. ಹಳ್ಳಿ ವೈದ್ಯರ ಕೈಯ್ಯಲ್ಲಿ ಔಷಧಿ ಕೊಡಿಸಿದೆ. ಜಪತಪ ಮಂತ್ರ ಎಲ್ಲಾ ಆಗಿ ಹೋಯಿತು. ಏನೂ ಫಲ ಕಾಣಲಿಲ್ಲ. ಮೊನ್ನೆ ಬೆಳಿಗ್ಗೆ ಎಲ್ಲಾ ಮುಗಿದು ಹೋಯಿತು. ಬಂದು ಬಿಟ್ಟೆ."

"ಏನೋ ಸುಬ್ಬ, ಕಡೆಗೂ ನಿನ್ನ ಹಟ ಸಾಧಿಸಿಬಿಟ್ಟೆಯಲ್ಲಾ.

ಎಂಟು ವರ್ಷದ ಹಿಂದೆ ಜಗಳವಾಡಿಕೊಂಡು ಹೋದವನು..........."

ಸುಬ್ಬಯ್ಯನವರಿಗೆ ಮನಸ್ಸು ಅಳುಕಿತು. ನೊಂದ ಧ್ವನಿಯಲ್ಲಿ ಹೇಳಿದರು

" ಅಕ್ಕಯ್ಯ, ಅದನ್ನೆಲ್ಲಾ ನನಗೆ ಜ್ಞಾಪಿಸಬೇಡ. ಎಲ್ಲಾ ನನ್ನ ಪ್ರಾರಬ್ಧಕರ್ಮ. ಏನು ಅನುಭವಿಸಬೇಕೋ ಅನುಭವಿಸಿಯಾಯ್ತು. ಅದನ್ನೆಲ್ಲಾ ಮರೆತುಬಿಟ್ಟಿದ್ದೀನಿ."

ಅಷ್ಟುಹೊತ್ತಿಗೆ ಶಾಮಣ್ಣನವರು ಎದ್ದು ಹೊರಕ್ಕೆ ಬಂದರು. ಅಂಗಳದಲ್ಲಿ ಯಾರೋ ಹೊಸವ್ಯಕ್ತಿ. ತಮ್ಮ ಹೆಂಡತಿ ಕೈಯ್ಯಲ್ಲಿ ಒಂದು ಮಗು! ಮಗು ಮತ್ತೆ ಅತ್ತಿತು. ಅವರಿಗೆ ಕುತೂಹಲವಾಯಿತು. ಹತ್ತಿರ ಬಂದು " ಯಾರೇ ಸುಬ್ಬಿ ಅದು........" ಎಂದರು. ಸುಬ್ಬಮ್ಮನವರು ಕಣ್ಣೀರು ತಂದುಕೊಂಡು ಹೇಳಿದರು.

" ಗೊತ್ತಾಗ್ಲಿಲ್ವೇ........ನನ್ನ ತಮ್ಮ....ಸುಬ್ಬಯ್ಯ. ಸೀತಮ್ಮ ಹೋಗ್ಬಿಟ್ಲಂತೆ. ಈ ಮಗೂನ ಕರ್ಕೊಂಡು ಬಂದಿದಾನೆ."

ಸುಬ್ಬಯ್ಯ ಅಂದ ತಕ್ಷಣ ಶಾಮಣ್ಣನವರ ಮುಖ ಹುಳಿಹುಳಿಯಾಯಿತು. ಹಿಂದಿನ ಜಗಳವೆಲ್ಲ ನೆನಪಾಯಿತು ಒಳಗೆ ಹೋಗಬೇಕೆಂದಿದ್ದರು. ಅಷ್ಟರಲ್ಲೇ ಸುಬ್ಬಯ್ಯ " ಭಾವಯ್ಯ, ನಾನು ಈ ದಿನ ನಾಚಿಕೆ ಬಿಟ್ಟು ನಿಮ್ಮ ಮನೇಗೆ ಬಂದಿದ್ದೀನಿ. ಹಿಂದಿನದೆಲ್ಲಾ ಮರೆತುಬಿಡಿ" ಎಂದು ಎದ್ದು ನಿಂತರು. ಶಾಮಣ್ಣನವರ ಹೃದಯ ಮೆತ್ತಗಾಗಿ ಹೋಯಿತು. ಆ ಕರುಣಾಪೂರಿತ ನೊಂದ ಮಾತುಗಳನ್ನು ಕೇಳಿ 'ಅಯ್ಯೋ' ಅನ್ನಿಸಿತು. ತಕ್ಷಣ

" ಬಾ ಸುಬ್ಬಯ್ಯ ಬಾ. ಬೇಕಾದ ಹಾಗೆ ಬಾ. ಇದು ನಿನ್ನ ಮನೆಯೆಂದೇ ತಿಳಿದುಕೊ........ಪಾಪ ಸೀತಮ್ಮ ಹೋಗಿಬಿಟ್ಟಳೇ ?" ಎಂದು ಹೇಳಿ ಬಚ್ಚಲು ಮನೆಗೆ ಹೊರಟುಹೋದರು. ಅದಕ್ಕಿಂತ ಅವರಿಗೆ ಹೆಚ್ಚಾಗಿ ಹೇಳಲು ತೋರಲಿಲ್ಲ. ತಾವು ಒಳ್ಳೆಯ ಸಂಬಂಧವಲ್ಲವೆಂದು ಹೇಳಿ ತಾತ್ಸಾರಮಾಡಿದ್ದ ಸೀತಮ್ಮನ ವಿಚಾರವಾಗಿ ಅವರಿಗೆ ಏನು ಹೇಳಲೂ ತೋರಲಿಲ್ಲ. ಆದರೆ ಸುಬ್ಬಯ್ಯ ಹಟಹಿಡಿದು ಸೀತಮ್ಮನನ್ನೇ ಮದುವೆಯಾಗಿದ್ದರು. ಅಪವಾದದ ಹೊರೆಯನ್ನು

ಹೊತ್ತ ಸೀತಮ್ಮನ ವಿಧವೆ ತಾಯಿ ಮಗಳೊಡನೆ ಆರು ತಿಂಗಳ ಸಂಸಾರ ನಡೆಸಿ ಜೀವನಯಾತ್ರೆಯನ್ನು ಮುಗಿಸಿದ್ದಳು. ಶಾಮಣ್ಣ ನವರಿಗೆ ಎಲ್ಲ ನೆನಪಾಯಿತು. ಅವರ ಹೃದಯದಲ್ಲಿ ಅರೆಕ್ಷಣ ಸುಬ್ಬಯ್ಯನ ವಿಚಾರವಾಗಿ, ತಬ್ಬಲಿಯಾದ ಆ ಎಳೆಗೂಸಿನ ವಿಚಾರ ವಾಗಿ ಅನುಕಂಪ ಮೂಡಿತು. ಸುಬ್ಬಮ್ಮನವರು ಅಳು ನಿಲ್ಲಿಸಿ ಕಾರ್ಯೋನ್ಮುಖರಾದರು.

ಸುಬ್ಬಮ್ಮನವರು ಪಕ್ಕದಮನೆಯಾಕೆಯನ್ನು ಕರೆದುಕೊಂಡು ಬಂದು ಮಗುವಿಗೆ ನೀರು ಹಾಕಿಸಿ ತಾವೂ ಸ್ನಾನಮಾಡಿದರು. ಅಷ್ಟು ಹೊತ್ತಿಗೆ ಅವರ ಮಗಳು ಕಾಮಾಕ್ಷಿ ಮಗುವಿನ ಅಳುವನ್ನು ಕೇಳಿ ಕುತೂಹಲದಿಂದ ಹೊರಗೆದ್ದು ಬಂದಳು. ನಡುಮನೆಯಲ್ಲಿ ತಾಯಿಯು ಯಾವುದೋ ಮಗುವನ್ನು ಕೈಯಲ್ಲಿ ಹಿಡಿದುಕೊಂಡು ಸಾಂಬ್ರಾಣಿ ಹೊಗೆ ಹಾಕುತ್ತಿದ್ದರು. ಮನೆಯಲ್ಲೆಲ್ಲಾ ಸಾಂಬ್ರಾಣಿಯ ಸುವಾಸನೆ ಹರಡಿದ್ದಿತು. ಕಾಮಾಕ್ಷಿ ತಾಯಿಯ ಹತ್ತಿರ ಓಡಿಹೋಗಿ, "ಅಮ್ಮ, ಅಮ್ಮ, ಪಾಪ ಯಾಲ್ದಮ್ಮ" ಎಂದಳು. ಸುಬ್ಬಮ್ಮನವರು, "ಪಾಪ, ನಂದು ಕಾಣಮ್ಮ. ನಿನ್ನ ತಂಗಿ ಪಾಪ........" ಎಂದು ಮಗುವಿ ಗೊಂದು ಮುತ್ತು ಕೊಟ್ಟರು. ಎಷ್ಟು ಬೇಗ ತನಗೆ ಒಬ್ಬಳು ತಂಗಿ ಹುಟ್ಟಿಬಿಟ್ಟಳೆಂದು ಅವಳಿಗೆ ಆಶ್ಚರ್ಯವಾಯಿತು. ಚಪ್ಪಾಳೆ ತಟ್ಟಿ ಕೊಂಡು ಕುಣಿದಾಡಿಬಿಟ್ಟಳು.

"ಪಾಪ, ಪಾಪ....ದೇವರು ಯಾವಾಗ ಕೊಟ್ನಮ್ಮ ಈ ಪಾಪಾನ್ನ ನಿಂಗೆ ? "

ಅವಳಿಗೆ ಯಾರೋ ಹೇಳಿದ್ದರು ಪುಟ್ಟ ಮಕ್ಕಳನ್ನು ದೇವರು ಕೊಡುತ್ತಾನೆಂದು. ಸುಬ್ಬಮ್ಮ ನಗುತ್ತಾ ಹೇಳಿದರು,

"ಈವತ್ತು ಬೆಳಿಗ್ಗೆ ನಿಮ್ಮ ಮಾವ ತಂದುಕೊಟ್ಟರು. ದೇವರು ಅವರ ಕೈಯಲ್ಲಿ ಕಳ್ಸಿದಾನೆ ಈ ಪಾಪಾನ್ನ, ನಿಂಗೆ ಆಟ ಆಡ್ಕೊಳ್ಳೋಕೆ. ಹೋಗಿ ನೋಡು ನಿಮ್ಮ ಮಾವ ಹೊರಗೆ ಇದ್ದಾರೆ."

ಕಾಮಾಕ್ಷಿ ಮಗುವನ್ನು ಒಂದು ಸಾರಿ ಮುಟ್ಟಿ, ಅದರ ಗುಂಗುರು ಕೂದಲಮೇಲೆ ಕೈ ಆಡಿಸಿ "ಅಮ್ಮಾ, ಪಾಪ ನಂದು. ಎಷ್ಟು

ಚೆನ್ನಾಗಿದ್ದೈನಮ್ಮಾ. ಇರು ಮುಖ ತೊಳ್ಕೊಂಡು ಬರ್ತೀನಿ" ಅಂತ ಹೊರಗೆ ಓಡಿಹೋದಳು. ಅವಳ ಆನಂದವೇ ಆನಂದ. ಸುಬ್ಬಮ್ಮನವರು ಮಗುವಿಗೆ ಕೊಂಚ ಹಾಲು ಹುಯ್ದು ಸೀರೆಯಲ್ಲಿ ಸುತ್ತಿ, ಮೊರದಲ್ಲಿ ಮಲಗಿಸಿ ಹೊರಕ್ಕೆ ಬಂದರು.

ಸುಬ್ಬಯ್ಯ ಹಾಗೇ ಕುಳಿತುಬಿಟ್ಟಿದ್ದರು. ಕಾಮಾಕ್ಷಿ ದೂರದಲ್ಲಿ ನಿಂತು ತನ್ನ ಮಾವನನ್ನು ನೋಡುತ್ತಿದ್ದಳು. ಅವಳಿಗೆ ಹತ್ತಿರ ಹೋಗುವುದಕ್ಕೆ ಹೆದರಿಕೆಯಾಯಿತು. ಆ ಪೊದೆಯ ದಾಡಿ, ಆ ಸುಕ್ಕಿನ ಮುಖ, ಅವಳಿಗೆ ಆ ಗಡ್ಡದ ವ್ಯಕ್ತಿ ತನ್ನ ಮಾವ ಎನ್ನಿಸಲಿಲ್ಲ. ಸುಬ್ಬಮ್ಮನವರು ತಮ್ಮನಿಗೆ ನೀರು ಹಾಕುವುದಕ್ಕಾಗಿ ಕರೆದುಕೊಂಡು ಹೋಗಲು ಬಂದವರು ಕಾಮಾಕ್ಷಿಗೆ ಹೇಳಿದರು "ನೋಡೇ ಇವರೇ ನಿನ್ನ ಮಾವ. ಮಾವನ್ನ ಮಾತಾಡ್ಸೋಲ್ವೇನೇ ? "

ಕಾಮಾಕ್ಷಿ ಇಲ್ಲವೆಂದು ತಲೆ ಅಲ್ಲಾಡಿಸಿದಳು. ಸುಬ್ಬಯ್ಯ ವೇದನಾಪೂರಿತವಾದ ಒಂದು ನಗುವನ್ನು ಬೀರಿ ಕೇಳಿದರು

"ಅಕ್ಕಯ್ಯಾ, ಇವಳು ಯಾರು ?"

"ನನ್ನ ಮಗಳು ಕಾಣೋ ಸುಬ್ಬ "

ಸುಬ್ಬಯ್ಯ ಕಣ್ಣರಳಿಸಿ ಕೇಳಿದರು.

" ನಿಂದೇ ಮಗು ಅಕ್ಕಯ್ಯ ? ನನಗೆ ಗೊತ್ತೇ ಇರಲಿಲ್ಲ. ನಿನಗೆ ಮಗುವಾದ್ದು ನನಗೆ ಬಹಳ ಸಂತೋಷ. ನನ್ನ ಮಗೂಗೆ ಜೊತೆ ಯಾಯ್ತು."

ಸುಬ್ಬಮ್ಮನವರಿಗೆ ಆನಂದವಾಯಿತು. ಕಡೆಗೂ ತಾವು ತಾಯಿ ಆದರೆಂದು ಹೆಮ್ಮೆಯಿಂದ ತಮ್ಮನನ್ನು ನೋಡಿದರು. ಅಕ್ಕರೆಯಿಂದ ಹೇಳಿದರು

"ನೀರು ಕಾದಿದೆ. ಸ್ನಾನಕ್ಕೆ ಏಳೋ ಸುಬ್ಬ"

"ಇಲ್ಲ ಅಕ್ಕಯ್ಯ. ನಾನು ಬಿಸಿ ನೀರು ಸ್ನಾನ ಮಾಡೊಲ್ಲ. ನನಗೆ ತಣ್ಣೀರೇ ಅಭ್ಯಾಸ. ನಾನು ಹೊಳೆಗೆ ಹೋಗುತ್ತೇನೆ" ಎಂದು ಸುಬ್ಬಯ್ಯ ಎದ್ದು ಹೊರಟೇಹೋದರು.

ಸುಬ್ಬಮ್ಮನವರಿಗೆ ತುಂಬ ಸಂತೋಷವಾಗಿದ್ದಿತು. ಎಂಟು

ವರ್ಷಗಳ ಮೇಲೆ ಬಂದ ತಮ್ಮನನ್ನು ಎಷ್ಟು ನೋಡಿದರೂ ತೃಪ್ತಿಯಿಲ್ಲ. ಎಷ್ಟು ಮಾತನಾಡಿಸಿದರೂ ಸಾಕೆನ್ನಿಸಲಿಲ್ಲ. ತಮ್ಮ ತವರುಮನೆಯ ಗುರುತಾಗಿ ಅವನೊಬ್ಬ ಉಳಿದಿದ್ದನು. ಆದರೆ ಎಂಟು ವರ್ಷಗಳ ಹಿಂದೆ ಎರಡನೆಯ ಮದುವೆ ಮಾಡಿಕೊಂಡು ಹಟ ಕಟ್ಟಿಕೊಂಡು ಹೊರಟುಹೋಗಿದ್ದ ತಮ್ಮನ ಮುಖವನ್ನು ಆ ದಿನವೇ ಕಂಡಿದ್ದು. ಅಂದು ತನ್ನ ಆಸ್ತಿ ಎಲ್ಲವನ್ನೂ ಮಾರಿ ಹಣ ತೆಗೆದುಕೊಂಡು ಅಷ್ಟು ದಿಟ್ಟತನದಿಂದ ಹೊರಟುಹೋಗಿದ್ದ ತಮ್ಮ ಇಂದು ಇಷ್ಟು ದೀನನಾಗಿ, ದರಿದ್ರನಂತೆ, ಎಲ್ಲಾ ಕಳೆದುಕೊಂಡು ಅನಾಥನಾಗಿ ಮನೆಗೆ ಬಂದಿದ್ದನು. ಅವರಿಗೆ ಅದನ್ನು ನೋಡಿ ಸಂಕಟವಾದರೂ ತಮ್ಮನನ್ನು ನೋಡಿದೆನಲ್ಲಾ ಎಂದು ಆನಂದವಾಗಿದ್ದಿತು.

ತಮ್ಮನ ವಂಶವೃಕ್ಷದ ಆ ಎಳೆಗೂಸನ್ನು ತಮ್ಮ ಮಗುವೆಂದೇ ಅಂದುಕೊಂಡುಬಿಟ್ಟರು.

ಮಧ್ಯಾಹ್ನ ಊಟವಾದಮೇಲೆ ಶಾಮಣ್ಣನವರು ನಿದ್ದೆ ಹೋದರು. ಕಾಮಾಕ್ಷಿ ತನ್ನ ತಂಗಿಯನ್ನು ಬಿಟ್ಟು ಬರಲಿಲ್ಲ. ತಾನು ಮಣ್ಣಿನ ನಿರ್ಜೀವ ಬೊಂಬೆಯ ಜೊತೆ ಆಡುವ ಆಟಗಳನ್ನೆಲ್ಲ ಆ ಸಜೀವ ಬೊಂಬೆಯೊಡನೆ ಆಡಿಬಿಟ್ಟಳು. ಅದಕ್ಕೆ ಹಾಲು ಹಾಕಲು ಹೋಗಿ ಬಾಯಿ ಚುಚ್ಚಿ ಅಳಿಸಿದಳು. ಲಾಲಿ ಹಾಡನ್ನು ಹೇಳಿ ತಪ ತಪನೆ ತಟ್ಟಿ ಉಸಿರುಕಟ್ಟುವಂತೆ ಅಳಿಸಿದಳು. ಸುಬ್ಬಮ್ಮ ಗದರಿಸಿ ಕೊಂಡರು. “ನೀನು ಹೀಗೆಲ್ಲಾ ಮಾಡಿದರೆ, ಮಾವಯ್ಯನಿಗೆ ಮಗೂನ ಕೊಟ್ಟುಬಿಡ್ತೀನಿ” ಎಂದು ಹೆದರಿಸಿದರು.

ಕಾಮಾಕ್ಷಿ “ಊಹ್ಞ, ಬೇಲಾಮ್ಮ........ನಾನು ಆಗೆಲ್ಲಾ ಮಾಡೊಲ್ಲ. ಜುಮ್ನೆ ಆಡ್ಕೋತೀನಿ” ಎಂದು ಕೇಳಿಕೊಂಡಳು. ಮಗುವಿನ ಪಕ್ಕದಲ್ಲಿ ಚಾಪೆಯ ಮೇಲೆ ತಾನೂ ಮಲಗಿಕೊಂಡು ನಿದ್ದೆಹೋದಳು.

ಸುಬ್ಬಮ್ಮನವರು ಮಧ್ಯಾಹ್ನ ಕಾಫಿ ತಿಂಡಿ ತೆಗೆದುಕೊಂಡು ಬಂದು ತಮ್ಮನಿಗೆ ಕೊಟ್ಟರು ಕಾಮಾಕ್ಷಿ “ಅಮ್ಮಾ ....ಅಮ್ಮಾ” ಎಂದು ಕುಣಿಯುತ್ತ ಓಡಿಬಂದಳು. ತಾಯಿಯ ಬೆನ್ನಮೇಲೆ ಒರಗಿ

ಕೊಂಡು, "ಅಮ್ಮಾ, ಅಮ್ಮಾ.....ನಾನು ಪಾಪಾಗೆ ಎಚರಿಟ್ಟೇಮ್ಮಾ...." ಎಂದಳು.

"ಏನೇ..........ಏನು ಹೆಸರಿಟ್ಟೇ"

"ಮೀನಾಚ್ಚಿ.... ನಾನು ಕಾಮಾಚ್ಚಿ, ಅವಳು ಮೀನಾಚ್ಚಿ."

ಎಂದು ಚಪ್ಪಾಳೆ ತಟ್ಟಿಕೊಂಡು ಕುಣಿದಾಡಿದಳು. ಚಿಕ್ಕ ಮಗುವಿನ ಬುದ್ಧಿಗೆ ತಲೆತೂಗಿ ಅಕ್ಕತಮ್ಮಂದಿರು ಒಟ್ಟಿಗೇ ನಕ್ಕು ಬಿಟ್ಟರು.

"ನೋಡಿದೆಯಾ, ಸುಬ್ಬಯ್ಯ. ನಿನ್ನ ಮಗೂಗೆ ಇವಳು ಆವಾಗಲೇ ಹೆಸರಿಟ್ಟುಬಿಟ್ಟಳು. ಅದು ಅವಳ ಪಾಪಾ ಅಂತೆ."

ಸುಬ್ಬಯ್ಯ ಯಾವುದೋ ಕಾಣದ ವಸ್ತುವಿನೆಡೆಗೆ ಗಮನವನ್ನು ಹರಿಸಿ ಮಾರುದ್ದ ದೇಹವನ್ನು ಚೋಟುದ್ದ ಮಾಡಿಕೊಂಡು ಮೆಲ್ಲನೆ ಹೇಳಿದರು; "ಮಕ್ಕಳೇ ಹಾಗೆ ಅಕ್ಕಯ್ಯ ! ನನ್ನದೊಂದು ಬೇಡಿಕೆ. ಈ ಮಗೂನ ನೀನೇ ಸಾಕ್ಕೋಬೇಕು. ನಿನ್ನ ಮಗಳಿಗೂ ಜೊತೆಯಾಗುತ್ತೆ. ಅದನ್ನ ನಿನ್ನ ಕೈಯಲ್ಲಿ ಹಾಕಿದ್ದೇನೆ."

ಸುಬ್ಬಮ್ಮ ಸುಮ್ಮನೇ ಇದ್ದರು. ಸುಬ್ಬಯ್ಯನ ಧ್ವನಿ ಭಾರ ವಾಗಿತ್ತು.

"ನನ್ನ ಕುಲದ ಹೆಸರು ಹೇಳೋಕೆ ಒಬ್ಬಳನ್ನು ಬಿಟ್ಟು ಹೋಗಿದಾಳೆ ಸೀತೆ. ಐದು ಮಕ್ಕಳು ಸತ್ತು ಕಡೆಗೆ ಇವಳು ಉಳಿದು ಕೊಂಡಿದ್ದಾಳೆ, ದೇವರು ಕಾಪಾಡಬೇಕು. ನಾನು ಪಾಪಿ ಅಕ್ಕಯ್ಯ. ಎಲ್ಲಾ ಹಾಳುಮಾಡಿಕೊಂಡೆ. ನಮ್ಮ ಕುಲದ ಹೆಸರು ಹೇಳಲು ನೀನೊಬ್ಬಳಿದ್ದೀಯೆ. ನನಗೆ ಇವಳೇ ಗಂಡು, ಹೆಣ್ಣು ಎಲ್ಲಾ. ಇವಳನ್ನ ನೀನೇ ಕಾಪಾಡಬೇಕು."

ಸುಬ್ಬಮ್ಮನವರಿಗೆ ತಾವು ತಕ್ಷಣ ಉತ್ತರ ಹೇಳಲಿಲ್ಲವಲ್ಲಾ ಎಂದು ಅಳುಕಿತು. ಅವರು ಆವಾಗಲೇ ಎಲ್ಲಾ ಯೋಚಿಸಿಕೊಂಡಿದ್ದರು. ತಮ್ಮನಿಗೆ ತಮ್ಮ ಭರವಸೆಯನ್ನು ಕೊಟ್ಟುಬಿಟ್ಟರು.

"ನೀನು ಯೋಚಿಸಬೇಡ ಸುಬ್ಬು. ನನಗೇನೂ ಇವಳೊಬ್ಬಳು ಭಾರವಲ್ಲ. ನನ್ನ ಮಗಳು ಕಾಮಾಕ್ಷಿ ಇಲ್ವೆ. ಅವಳೂ ಇವಳೂ

ಇಬ್ಬರೂ ನನಗೆ ಒಂದೇ."

ಸುಬ್ಬಯ್ಯ ನಿಶ್ಚಿಂತೆಯ ನಿಟ್ಟುಸಿರು ಬಿಟ್ಟರು. ತಮ್ಮ ಪಕ್ಕದಲ್ಲಿದ್ದ ಒಂದು ಸಣ್ಣ ಟ್ರಂಕನ್ನು ತೆಗೆದು, "ಅಕ್ಕಯ್ಯ.....ನೋಡು ನನಗೆ ಉಳಿದಿರುವ ಆಸ್ತಿಯೆಲ್ಲಾ ಇಷ್ಟೆ. ನನಗೆ ಉಳಿದಿದ್ದ ಎರಡೆಕರೆ ಗದ್ದೆ ಮಾರಿ ಸಾವಿರ ರೂಪಾಯಿ ತಂದಿದ್ದೀನಿ. ಇದರಲ್ಲಿ ೩೦೦ ತಗೊಂಡು ಅವಳ ಕರ್ಮಗಳನ್ನೆಲ್ಲಾ ಮುಗಿಸುತ್ತೇನೆ. ನಾನು ಕರ್ಮಗಳನ್ನು ಇಲ್ಲಿ ಮಾಡೊಲ್ಲ, ಅಕ್ಕಯ್ಯ. ನಿಮಗೆಲ್ಲಾ ವ್ಯಥಾ ತೊಂದರೆ. ಗಯಾಗೆ ಹೋಗಿ ಅಲ್ಲಿ ಮುಗಿಸಿಬಿಡುತ್ತೇನೆ. ನೋಡು, ಇದು ಅವಳ ಸೀರೆಗಳು. ಇದು ಅವಳ ಅವಲಕ್ಕಿ ಸರ. ಇದು ಅವಳ ವಜ್ರದ ಮೂಗುಬಟ್ಟು. ಎಲ್ಲಾ ಇವಳಿಗೇ. ನಾನು ಪಾಪಿ, ಇದಕ್ಕಿಂತ ಹೆಚ್ಚು ಕೊಡಲಾರೆ" ಎಂದರು.

ಸುಬ್ಬಮ್ಮನವರಿಗೆ ಕೋಪ ಬಂದಿತು.

"ಸುಬ್ಬು, ನೀನು ಈ ತರಹ ಎಲ್ಲಾ ಮಾತಾಡಬೇಡ. ಗಯಾಗೆ ಹೋಗ್ತಾನಂತೆ ಗಯಾಗೆ. ನಾನು ಸತ್ತುಹೋಗಿದ್ದೇನೆ ಅಂದ್ಕೊಂಡ್ಯೇನು. ನಾನು ಸತ್ತುಹೋದಮೇಲೆ ಬೇಕಾದ್ರೆ ಗಯಾಗೆ ಹೋಗು, ಇಲ್ಲ ರಾಮೇಶ್ವರಕ್ಕೆ ಹೋಗು. ಅಲ್ಲೀವರೆಗೂ ಆ ಸುದ್ದಿ ಎತ್ತಬೇಡ."

ಸುಬ್ಬಯ್ಯ ನಿರಾಶೆಯಿಂದ ನಕ್ಕರು.

"ಅಕ್ಕಯ್ಯ, ನೀನು ನನ್ನನ್ನು ಬಲವಂತ ಮಾಡಬೇಡ. ಹುಟ್ಟಿ ಎಲ್ಲಾ ಅನುಭವಿಸಿ ಆಗಿಹೋಯಿತು. ನಾನು ಇನ್ನು ಏಕೆ ಬದುಕಿರಬೇಕು. ನನ್ನನ್ನು ಮತ್ತೆ ಸಂಸಾರಕ್ಕೆ ಕಟ್ಟಿಹಾಕಬೇಡ."

"ನೀನು ಹಾಗೆಲ್ಲಾ ಹಟಮಾಡಬೇಡಪ್ಪಾ. ಈಗ ಅನುಭವಿಸಿದ್ದೇ ಸಾಕಾಗಿದೆ. ಇದ್ದೊಬ್ಬ ತಮ್ಮ ತೊರೆದುಹೋದ ಅಂತ ಸಂಕಟಪಡುತ್ತಿದ್ದೆ. ಆ ರಾಮದೇವರ ದಯೆ. ಈಗ ಮತ್ತೆ ಬಂದಿದ್ದೀಯೆ. ನೀನು ಹೀಗೆಲ್ಲಾ ಅಶುಭ ಮಾತಾಡಬೇಡಪ್ಪಾ. ಈಗ ಆಗಿದ್ದೇ ಸಾಕಾಗಿದೆ."

ಹೇಳುತ್ತ ಹೇಳುತ್ತ ಅವರ ಕಂಠ ಭಾರವಾಯಿತು. ಒಳಗಿನಿಂದ

ಶಾಮಣ್ಣನವರು ಕರೆದರು. ಸುಬ್ಬಮ್ಮನವರು ಗಂಡನಿಗೆ ಕಾಫಿ ಕೊಡಲು ಎದ್ದರು. "ಅಕ್ಕಯ್ಯ, ಇದನ್ನು ತೆಗೆದುಕೊಂಡು ಹೋಗು" ಎಂದು ಸುಬ್ಬಯ್ಯ ಮುನ್ನೂರು ರೂಪಾಯಿಗಳನ್ನು ಎಣಿಸಿ ತೆಗೆದುಕೊಂಡು ಪೆಟ್ಟಿಗೆಯನ್ನು ಅಕ್ಕನಿಗೆ ಕೊಟ್ಟುಬಿಟ್ಟರು. ಸುಬ್ಬಮ್ಮ ಅದನ್ನು ಒಳಕೋಣೆಯಲ್ಲಿ ಭದ್ರವಾಗಿ ತೆಗೆದಿಟ್ಟು ಯಜಮಾನರಿಗೆ ಕಾಫಿ ತೆಗೆದುಕೊಂಡು ಹೋದರು.

ಸುಬ್ಬಯ್ಯ ಸಾಯಂಕಾಲ ತಿರುಗಾಡಿಕೊಂಡು ಬರಲು ಹೊರಗೆ ಹೋದರು. ಕಾವೇರಿ ಸಂಗಮ, ದರಿಯಾದೌಲತ್, ಗುಂಬಜ್‌ಗಳನ್ನು ನೋಡಿಕೊಂಡು, ರಂಗನಾಥಸ್ವಾಮಿಯ ದರ್ಶನ ಮಾಡಿಕೊಂಡು ಮನೆಗೆ ಬಂದು ಊಟಮಾಡಿದರು. ಆಗಲೂ ಹೆಚ್ಚು ಮಾತುಕಥೆ ಯಾಗಲಿಲ್ಲ. ದುಃಖದಲ್ಲಿ ಮುಳುಗಿದ್ದಾನೆಂದು ಶಾಮಣ್ಣನವರೂ ಹೆಚ್ಚು ಮಾತನಾಡಿಸಲಿಲ್ಲ.

ರಾತ್ರಿ ಹನ್ನೆರಡು ಘಂಟೆಗೆ "ಮೀನಾಕ್ಷಿ" ರಾಗ ತೆಗೆದು ಅತ್ತಳು. ಸುಬ್ಬಯ್ಯ ಎದ್ದುಹೋಗಿ ಮಗಳನ್ನು ತೊಡೆಯಮೇಲೆ ಎತ್ತಿಕೊಂಡು ತಟ್ಟಿ, ಸಮಾಧಾನ ಮಾಡಿದರು. ಸುಬ್ಬಮ್ಮನವರು ನಿದ್ದೆಯಿಂದ ಎದ್ದವರು ತಮ್ಮನನ್ನೇ ನೋಡುತ್ತ ಮಲಗಿದ್ದರು. ಸುಬ್ಬಯ್ಯ ಮಗಳನ್ನು ಎತ್ತಿಕೊಂಡು ಅವಳನ್ನೇ ನೋಡುತ್ತ ಕುಳಿತರು. ಅವರ ಕಣ್ಣಿಂದ ನೀರು ಹರಿದು ಬರುತ್ತಿದ್ದಿತು. ಸುಬ್ಬಮ್ಮನವರಿಗೆ ಆ ಚಿಮಿಣಿಯ ಮಂಕು ಬೆಳಕಿನಲ್ಲಿ ಕಣ್ಣೀರು ಅಸ್ಪಷ್ಟವಾಗಿ ಕಂಡಿತು. ತಮ್ಮನಿಗಾಗಿ ಕರುಳು ಮಿಡಿಯಿತು. ಬೆಳಗಿನಿಂದ ತಮ್ಮ ತವರುಮನೆಯ ದುಃಸ್ಥಿತಿಯನ್ನು ಯೋಚಿಸಿ ಯೋಚಿಸಿ ಅವರಿಗೆ ತಲೆನೋವು ಬಂದಿದ್ದಿತು. ದುಃಖಿಸಿಕೊಂಡೇ ಮತ್ತೆ ಮಲಗಿದರು.

ಬೆಳಗಾಗೆದ್ದು ತಮ್ಮ ನಿತ್ಯದ ಮನೆಗೆಲಸ ಸಾಗಿಸಿದರು. ಆರು ಗಂಟೆಗೇ ಕಾಫಿ ಮಾಡಿ ತಮ್ಮನನ್ನು ಎಬ್ಬಿಸಲು ಅವನು ಮಲಗಿದ್ದ ಕೊಠಡಿಗೆ ಹೋದರು. ಬರೀ ಹಾಸಿಗೆ ಮುದುರಿಕೊಂಡು ಬಿದ್ದಿದ್ದಿತು. ಅವರಿಗೆ ದಿಗಿಲು ಬಡಿದುಕೊಂಡಿತು. ಬೀದಿ ಬಾಗಿಲು ದೊಡ್ಡದಾಗಿ ತೆರೆದು ಕೊಂಡಿತ್ತು. ಸ್ನಾನಕ್ಕೆ ಹೊಳೆಗೆ ಹೋಗಿರಬೇಕೆಂದು ಸಮಾಧಾನ

ತಂದುಕೊಂಡರು. ಮತ್ತೆ ಮನೆಗೆಲಸದಲ್ಲಿ ಮನಸ್ಸು ಹಚ್ಚಿದರು. ಏಳು ಘಂಟೆ ಹೊಡೆಯಿತು. ಮಕ್ಕಳು ಎದ್ದು ಬಿಟ್ಟರು. ಮಗು ಒಂದೇ ಸಮನೆ ಅಳುತ್ತಿದ್ದಿತು. ಚಮಚೆಯಲ್ಲಿ ಅದಕ್ಕೆ ಹಾಲು ಹಾಕಿದರು. ಮಗು ಸುಮ್ಮನಾಯಿತು. ಮತ್ತೆ ನಿದ್ದೆ ಮಾಡಿತು.

ಶಾಮಣ್ಣನವರು ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿ ಕಾಫಿ ಕುಡಿದು, ಹೊರಗೆ ಹೊರಟಿದ್ದರು. ಇನ್ನೂ ಸುಬ್ಬಯ್ಯನವರು ಬಂದಿರಲಿಲ್ಲ. ಸುಬ್ಬಮ್ಮನವರು ಗಾಬರಿಯಿಂದ ವಿಷಯವನ್ನು ಗಂಡನ ಕಿವಿಗೆ ಹಾಕಿದರು

"ಬೆಳಿಗ್ಗೆ ಇಂದಲೂ, ಸುಬ್ಬು ಕಾಣಲೇ ಇಲ್ಲ. ಆಗಲೇ ಎಂಟು ಘಂಟೆ ಆಯಿತು. ಎಲ್ಲಿ ಹೋದನೋ, ಏನೋ."

ಶಾಮಣ್ಣನವರು ತಾವೇ ಹೊಳೆಯ ದಂಡೆಗೆ ಹೋಗಿ ಅಲ್ಲೆಲ್ಲ ಹುಡುಕಿ ಬಂದರು. ದೇವಸ್ಥಾನಕ್ಕೆ ಹೋಗಿ ಬಂದರು. ಎಲ್ಲೂ ಸುಬ್ಬಯ್ಯನವರ ಸುಳಿವೇ ಇರಲಿಲ್ಲ. ಸುಬ್ಬಮ್ಮನವರು ಮೈಮೇಲೆ ಪರಿವೆಯಿಲ್ಲದೆ ಏನೋ ಕೆಲಸಮಾಡುತ್ತಿದ್ದರು ಹತ್ತು ಘಂಟೆ ಆಯಿತು, ಮಗುವಿಗೆ ಬಟ್ಟೆ ಬದಲಾಯಿಸಲು ಕುಳಿತುಕೊಂಡರು. ಮೀನಾಕ್ಷಿಯ ತೋಳಿಗೆ ಕಪ್ಪಗೆ ಏನೋ ಸುತ್ತಿದಂತಿದ್ದಿತು ತಕ್ಷಣ ಅವಳ ಕೈ ಹಿಡಿದು ನೋಡಿದರು. ಮೀನಾಕ್ಷಿ ತೋಳಿಗೆ ತಾಳಿಕಟ್ಟಿದ ಕರಿಮಣಿಯ ಸರವನ್ನು ಸುಬ್ಬಯ್ಯ ಸುತ್ತಿ ಹೊರಟು ಹೋಗಿದ್ದರು. ಆ ಮಂಗಲ ಸೂತ್ರವನ್ನು ನೋಡಿದಾಕ್ಷಣ ಸುಬ್ಬಮ್ಮನವರಿಗ ಎಲ್ಲಾ ತಿಳಿದು ಹೋಯಿತು. "ನಿಮ್ಮ ಅಪ್ಪನೂ, ನಿನ್ನನ್ನು ಬಿಟ್ಟು ಹೋದನಲ್ಲೇ.... ನಿನ್ನದು ಎಂಥ ಹೀನ ಅದೃಷ್ಟವೇ" ಎಂದು ರೋದಿಸಿದರು.

ಹನ್ನೆರಡು ಘಂಟೆ ಹೊತ್ತಿಗೆ ಶಾಮಣ್ಣನವರು ಒಬ್ಬರೇ ಬಂದರು. ಅವರ ಸಪ್ಪೆ ಮೋರೆಯನ್ನು ನೋಡಿ ಸುಬ್ಬಮ್ಮನವರು ವಿಷಯವನ್ನು ಊಹಿಸಿ ಕಣ್ಣೀರಿಟ್ಟರು.

"ಸುಬ್ಬು, ನನ್ನೆಯೇ ಹೇಳಿದ್ದಾಂದ್ರೆ. ಗಯೆಗೆ ಹೊರಟು ಹೋಗಿರಬೇಕು. ಇನ್ನು ಅವನ ಮುಖವನ್ನು ಕಾಣಲಾರೆ"

"ಆಗಲಿ ಸುಬ್ಬಿ. ಎಲ್ಲಾ ಭಗವಂತನ ಇಚ್ಛೆ. ಆ ಮಗುವನ್ನು

ಚೆನ್ನಾಗಿ ನೋಡಿಕೋ"

ಎಂದು ಶಾಮಣ್ಣನವರು ದೇವರ ಮನೆಯನ್ನು ಸೇರಿಕೊಂಡರು. ಸುಬ್ಬಮ್ಮನವರು ಮಗುವನ್ನು ಎದೆಗವಚಿಕೊಂಡರು. ಕಾಮಾಕ್ಷಿ "ಲೇ ಮೀನಾಚಿ........ಅಚ್ಚಿ ಚ್ಚಿ ಕಳ್ಳಾ"

ಎಂದು ಮೀನಾಕ್ಷಿಯನ್ನು ನಗಿಸುತ್ತಿದ್ದಳು.

ಶಾಮಣ್ಣನವರು ಮೀನಾಕ್ಷಿಯನ್ನು ಬಹಳ ಒಗ್ಗಿಸಿಕೊಂಡು ಬಿಟ್ಟರು. ಹನ್ನೆರಡು ವರ್ಷಗಳಿಂದ ಮಕ್ಕಳಿಲ್ಲದೆ ಸುಬ್ಬಮ್ಮನವರಿಗೆ ಕೈ ಬಿಂ ಅನ್ನುತ್ತಿದ್ದಿತು. ಅವರಿಗೆ ಹೆಚ್ಚು ಮಕ್ಕಳಿಲ್ಲದ ಮನೆ ಭಣ ಭಣ ಅನ್ನುತ್ತಿದ್ದಿತು. ಈಗ ಮೀನಾಕ್ಷಿ ಅವರ ಕೈ ತುಂಬಿಸಿದಳು. ಹೃದಯ ವನ್ನು ರಮಿಸಿದಳು. ತಾಯಿಗಿಂತ ಹೆಚ್ಚಾಗಿ ಸುಬ್ಬಮ್ಮ ಮಗುವನ್ನು ನೋಡಿಕೊಳ್ಳುತ್ತಿದ್ದರು. ಮನೆಯಲ್ಲೇ ಕರೆಯುತ್ತಿದ್ದ ಹಸುವಿನ ಅಪ್ಪಟ ಹಾಲು ಕುಡಿದು ಮೀನಾಕ್ಷಿ ಮೈ ತುಂಬಿಕೊಂಡಳು. ಒಂದು ವರ್ಷದ ಮೀನಾಕ್ಷಿ ಪುಟ್ಟ ಪುಟ್ಟ ಹೆಜ್ಜೆ ಇಡುತ್ತಿದ್ದಳು. ತೊದಲು ಮಾತಿನಲ್ಲಿ "ಅಮ್ಮ.... ಅಪ್ಪ" ಅನ್ನುತ್ತಿದ್ದಳು. ಅವಳ ಮಾತಿನಲ್ಲಿ ಸುಬ್ಬಮ್ಮ ಮೈ ಮರೆಯುತ್ತಿದ್ದರು. ಮೀನಾಕ್ಷಿಯನ್ನು ನೋಡಿ ನೋಡಿ ಆನಂದ ಪಡುತ್ತಿದ್ದರು. ವಿಶಾಲವಾದ ಬಾನಿನಂತಹ ತಿಳಿ ನೀಲಿಯ ಕಣ್ಣುಗಳು, ಮುಖದ ಮಾಟವನ್ನು ಎತ್ತಿ ಹಿಡಿದಿದ್ದ ಹಾಲುಗೆನ್ನೆಗಳು, ಒಂದು ವರ್ಷಕ್ಕೇ ನೀಳವಾಗಿ ಬೆಳೆದು ಬಂದಿದ್ದ ಮೀನಾಕ್ಷಿಯ ಗುಂಗುರು ಕೂದಲು ಅವರ ಮನಸ್ಸನ್ನು ಸೆಳೆದು ಕೊಂಡಿದ್ದಿತು. ಅವನ್ನು ನೋಡಿದಾಗಲೆಲ್ಲಾ ಅವರಿಗೆ ಅದೇ ಮಾತು.

"ಎಲ್ಲಾ ಸೀತಮ್ಮನ ಹಾಗೇಂದ್ರೆ ಇವಳು. ಸುಬ್ಬು, ಈಗ ಇವಳನ್ನು ನೋಡಿದ್ದರೆ ಖಂಡಿತ ಬಿಟ್ಟು ಹೋಗ್ತಿರ್ಲಿಲ್ಲಾ ಅಕ್ಕೇಂದ್ರೆ" ಎಂದು ಜಂಭ ಕೊಚ್ಚಿ ಕೊಳ್ಳುತ್ತಿದ್ದರು.

ಶಾಮಣ್ಣನವರೂ ಅವರ ಮಾತಿಗೆ ತಲೆದೂಗುತ್ತಿದ್ದರು. ಮಧ್ಯಾಹ್ನವೆಲ್ಲಾ ಮೀನಾಕ್ಷಿಯನ್ನು ನಗಿಸಿ, ನಕ್ಕು ನಲಿಯುತ್ತಿದ್ದರು. ಆ ಮೋಹಕ ನಗು ಅವರ ಹೃದಯಕ್ಕೆ ತನಿರಸವನ್ನೆರೆಯುತ್ತಿದ್ದಿತು. ಕಾಮಾಕ್ಷಿಯ ಮಾತಿನ ಚಿನಕುರಳಿ, ಮೀನಾಕ್ಷಿಯ ಕೇಕೆ ನಗುವಿನ

ಲಹರಿಯ ಮುಂದೆ ಸಪ್ಪೆಯಾಗಿ ತೋರುತ್ತಿದ್ದಿತು ಅವರಿಗೆ!

ಶಾಮಣ್ಣನವರು ಶ್ರೀರಂಗ ಪಟ್ಟಣದಲ್ಲಿ ಶಾನುಭೋಗರಾಗಿದ್ದರು. ಅವರ ಶಾನುಭೋಗತನ ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿದ್ದಿತು. ಮನುಷ್ಯ ಬಹಳ ಉದಾರಿಗಳೆಂದೂ, ದೈವಭಕ್ತರೆಂದೂ ಹೆಸರು ತೆಗೆದುಕೊಂಡಿದ್ದರು. ಶಾನುಭೋಗ್ಯದ ಜೊತೆಗೆ ಪಾಲ್ಹಳ್ಳಿ ಹತ್ತಿರ ಪಿತ್ರಾರ್ಜಿತವಾದ ಆಸ್ತಿಯೂ ಇದ್ದಿತು. ಸುಖವಾಗಿ ಸಂಸಾರ ಸಾಗಿಸಿಕೊಂಡು ಹೋಗುತ್ತಿದ್ದರು. ಅವರಿಗೆ ಗಂಡು ಮಕ್ಕಳಿಲ್ಲವೆಂಬ ಯೋಚನೆ ಒಂದೇ ಆಗಿದ್ದಿತು. ಗಂಡಿಗೆ ಬದಲಾಗಿ ದೇವರು ಮತ್ತೊಂದು ಹೆಣ್ಣು ಮಗುವನ್ನು ಕೊಟ್ಟನು. ಅವರಿಬ್ಬರೇ ಅವರಿಗೆ ಹೆಣ್ಣು, ಗಂಡು ಎರಡೂ ಆದರು.

ಕಾಮಾಕ್ಷಿಯನ್ನು ಶಾಲೆಗೆ ಹಾಕಿದ್ದರು. ಮೀನಾಕ್ಷಿಗೆ ನಾಲ್ಕು ವರ್ಷ ತುಂಬಿಹೋಯಿತು. ಅವಳೇ ಈಗ ಮನೆಗೆ ಚಿಕ್ಕ ಮಗು. ಮೀನಾಕ್ಷಿಯದು ವಯಸ್ಸಿಗೆ ಮೀರಿದ ಬುದ್ಧಿ. ಆದರೆ ಅವಳದು ದುರ್ಬಲ ಪ್ರಕೃತಿ. ತಾಯಿಯ ದುರ್ಬಲತೆ ಅವಳಲ್ಲೂ ಮನೆ ಮಾಡಿಕೊಂಡಿದ್ದಿತು. ಬಹಳ ಹೆದರಿಕೆಯ ಸ್ವಭಾವ. ಆದರೂ ಮೈ ಕೈ ತುಂಬಿಕೊಂಡು ಕಾಮಾಕ್ಷಿಗಿಂತ ಚೆನ್ನಾಗಿ ಬೆಳೆದಳು. ಆ ಬೀದಿಗೆಲ್ಲಾ ಚೆಂದದ ಚೆಲುವೆಯಾದಳು.

ಮೀನಾಕ್ಷಿಗೆ ಮೊದಲಿನಿಂದಲೂ ಬೊಂಬೆಗಳೆಂದರೆ ಪ್ರಾಣ.

ಶಾಮಣ್ಣನವರು ಒಮ್ಮೆ ಮೈಸೂರಿಗೆ ಹೋಗಿದ್ದಾಗ ಒಂದು ಕರ್ಪೂರದ ಬೊಂಬೆಯನ್ನು ತಂದು ಕೊಟ್ಟಿದ್ದರು. ಅದರ ಸಿಲ್ಕಿನ ಲಂಗ, ಬೂಡ್ಸು ಕಾಲುಗಳನ್ನು ನೋಡಿ ಮೀನಾಕ್ಷಿ ಹಿಗ್ಗಿದಳು. ಅದಕ್ಕೆ ಮಣಿ ಪೋಣಿಸಿ ಸರ ಹಾಕಿದಳು. ಅದನ್ನು ಯಾವಾಗಲೂ ಕುಂಕುಳಲ್ಲಿ ಇಟ್ಟುಕೊಂಡು ತಿರುಗಾಡುತ್ತಿದ್ದಳು. ಅರೆಕ್ಷಣವೂ ಅದನ್ನು ಬಿಟ್ಟಿರುತ್ತಿರಲಿಲ್ಲ. ಊಟಮಾಡುವಾಗ ಅದು ಪಕ್ಕದಲ್ಲಿ ಇರಬೇಕು; ಆಟವಾಡುವಾಗ ಅದು ಪಕ್ಕದಲ್ಲಿರಬೇಕು. ಮಲಗಿಕೊಳ್ಳುವಾಗಲಂತೂ "ಅಮ್ಮ"ನೂ ಬೇಡ. ಹತ್ತಿರದಲ್ಲಿ ಆ ಬೊಂಬೆ, ಅವಳದೇ ಮಾತಿನಲ್ಲಿ 'ನನ್ನ ಮಗು' ಇದ್ದರೆ ಸಾಕಾಗಿದ್ದಿತು.

ಒಂದು ದಿನ ಮೀನಾಕ್ಷಿ ಪಕ್ಕದ ಮನೆಯ ಪಾಪಚ್ಚಿ ಜೊತೆ ಆಟ ಆಡುವುದಕ್ಕೆ ಹೋಗಿದ್ದಳು. ಮೀನಾಕ್ಷಿ, ಪಾಪಚ್ಚಿ ಇಬ್ಬರೂ ಒಂದೇ ವಯಸ್ಸಿನವರು ಅಥವಾ ಒಂದು ಆರು ತಿಂಗಳು ಮೀನಾಕ್ಷಿಯೇ ದೊಡ್ಡವಳಿರಬಹುದು. ಆಡುತ್ತ ಆಡುತ್ತ ಇಬ್ಬರಿಗೂ ಜಗಳ ಬಂದು ಬಿಟ್ಟಿತು. ಮೀನಾಕ್ಷಿ "ಬೇಡ ಕಣೆ, ನನ್ನ ಪಾಪಗೆ ಬಚ್ಚಲು ಮನೇಲಿ ಸ್ನಾನ ಮಾಡಿಸೋಣ" ಎಂದಳು. ಪಾಪಚ್ಚೀದು ಭಾವೀಲೇ ಸ್ನಾನ ಮಾಡಿಸ ಬೇಕು ಅಂತ ಹಟ. "ಭಾವೀಲಿ ಸ್ನಾನ ಮಾಡ್ಸಿದ್ರೇ ಚೆಂದ" ಎಂದು ಹಟ ಹಿಡಿದಳು. ಮೀನಾಕ್ಷಿ ಬೇಡ ಎಂದು ವೊಂಡುತನ ಮಾಡಿದಳು ಪಾಪಚ್ಚೀಗೆ ಬಹಳ ಸಿಟ್ಟು. ಮೀನಾಕ್ಷಿಯ ಕೂದಲು ಹಿಡಿದು ಎಳೆದು ಅವಳ ಕೆನ್ನೆ ಚಿಗುಟಿಬಿಟ್ಟಳು. ಹಸೆ ಮೇಲೆ ತಾಳಿ ಎಂದು ಕತ್ತಿಗೆ ಕಲ್ಲು ಕಟ್ಟಿ ಕೂಡಿಸಿದ್ದ ಬೊಂಬೆಯನ್ನು ನೆಲಕ್ಕೆ ಕುಕ್ಕಿ ಅದನ್ನು ತುಳಿದು ಹಾಕಿದಳು. ಮೀನಾಕ್ಷಿ ರಾಗ ತೆಗೆದು ಅತ್ತಳು. ಪಾಪಚ್ಚಿ ಅಷ್ಟೂ ಸಾಲದು ಅನ್ನುವಂತೆ ಆ ಅಜ್ಜಿಬಜ್ಜಿಯಾದ ಬೊಂಬೆಯನ್ನು ತೆಗೆದುಕೊಂಡು ಹೋಗಿ ಭಾವಿಗೆ ಎಸೆದು "ನಿನ್ನ ಜೊತೆ ಠೂಠೂ....ಮೀನಾಚ್ಚಿ ಗೋಮಾಚ್ಚಿ...." ಎಂದು ಅಣಕಿಸಿ ಒಳಗೆ ಓಡಿ ಹೋದಳು. ಮೀನಾಕ್ಷಿಗೆ ತನ್ನ ಮಗು ಸತ್ತು ಹೋಯಿತೆಂದು ಅಳು ಬಂದು ಬಿಟ್ಟಿತು.

ಮನೆಗೆ ಓಡಿ ಬಂದು "ಅಮ್ಮಾ, ಅಮ್ಮಾ. ಪಾಪಚ್ಚಿ ನನ್ನ ಮಗೂನ ಭಾವಿಗೆ ಹಾಕಿಬಿಟ್ಟಳು...." ಎಂದು ನೆಲದ ಮೇಲೆ ಹೊರಳಾಡಿ ಅತ್ತಳು. ಸುಬ್ಬಮ್ಮನವರಿಗೆ ಅವಳ ಜೀವಕ್ಕೆ ಆ ಬೊಂಬೆ ಎಷ್ಟು ಅವಶ್ಯಕವೆಂದು ತಿಳಿದಿದ್ದಿತು. ತಕ್ಷಣ ಹೋಗಿ ಪಾಪಚ್ಚಿ ತಾಯಿಯೊಡನೆ ಕೂಗಾಡಿ, ಬೊಂಬೆ ಅಲ್ಲೆಲ್ಲಾ ಹುಡುಕಾಡಿದರು. ಭಾವೀಲಿ ಹಾಕಿದ್ದಂತೂ ತೆಗೆಯುವುದು ತೀರ ಅಸಾಧ್ಯವಾಗಿದ್ದಿತು. ಮೀನಾಕ್ಷಿಯನ್ನು ಎತ್ತಿಕೊಂಡು, "ಬೇರೆ ಬೊಂಬೆ ತರಿಸಿಕೊಡ್ತೀನಿ ಸುಮ್ಮನಿರಮ್ಮ" ಎಂದು ಸಮಾಧಾನಮಾಡಿದರು. ದರೆ ಮೀನಾಕ್ಷಿಯದು ಒಂದೇ ರಂಪ, "ನಂಗೆ ಅದೇ ಬೇಕು. ನನ್ನ ನೀಲಿ ಲಂಗದ ಪಾಪ-ಭಾವೀಲಿ ಬಿದ್ದು ಸತ್ತೋಯ್ತು. ಪಾಪಚ್ಚಿ ಅದನ್ನ ತುಳ್ದು ತುಳ್ದು ಭಾವೀಲಿ

ಎಸದ್ಬಿಟ್ಳು. ನಂಗೆ ಅದೇ ತೆಗೆಸಿಕೊಡೇಮ್ಮ" ಎಂದು ರಾತ್ರಿಯೆಲ್ಲಾ ಒಂದೇ ಸಮನಾಗಿ ಅತ್ತಳು. ಶಾಮಣ್ಣನವರೂ ಸಮಾಧಾನ ಮಾಡಿ ಸುಸ್ತಾದರು. ಸುಬ್ಬಮ್ಮನವರಿಗೆ ಕೋಪ ಬಂದಿತು. ಎಂದೂ ಹೊಡೆಯದಿದ್ದವರು ಮೀನಾಕ್ಷಿಯ ಗಲಾಟೆ ತಡೆಯಲಾರದೆ ಒಂದೇಟು ಬಿಗಿದರು.

ಮೀನಾಕ್ಷಿ ಹೆದರಿಕೊಂಡು ಸುಮ್ಮನಾಗಿ ಬಿಟ್ಟಳು. ಕಾಮಾಕ್ಷಿ ಆಗಲೇ ಪುಟ್ಟ ಹೆಂಗಸಿನಂತಾಗಿ ಬಿಟ್ಟಿದ್ದಳು. ತಾನೇ ತಂಗಿಯನ್ನು ತೊಡೆಯ ಮೇಲೆ ಮಲಗಿಸಿಕೊಂಡು ಸಮಾಧಾನ ಮಾಡಿದಳು.

"ಸುಮ್ನಿರಮ್ಮ ಮೀನಾ, ಅಳ್ಬೇಡ. ಅಪ್ಪನಿಗೆ ಹೇಳಿ ನಾನು ನಿನಗೆ ಈ ಸಾರಿ ಮೈಸೂರಿನಿಂದ ಜರತಾರಿ ಲಂಗ ಉಡಿಸಿರುವ ಬೊಂಬೆ ತರಿಸಿಕೊಡ್ತೀನಿ."

ಮೀನಾಕ್ಷಿ ಅಳು ನಿಲ್ಲಿಸಲಿಲ್ಲ. "ಉಹ್ಞು........ನಂಗೆ ಅದೇ ಪಾಪ ಬೇಕು..... ನನ್ನ ಮಗು ಪಾಪ" ಎಂದು ಗೊಣಗಿಕೊಂಡು ಮುಸಕಿನಲ್ಲಿಯೇ ಅತ್ತಳು. ಸುಬ್ಬಮ್ಮನವರ ಹೆದರಿಕೆಗೆ ಗಟ್ಟಿಯಾಗಿ ಅಳಲಿಲ್ಲ. ಕಾಮಾಕ್ಷಿಗೂ ಸಮಾಧಾನ ಮಾಡಿ ಸಾಕಾಯ್ತು. ಯಾರು ಎಷ್ಟು ಬಲವಂತ ಮಾಡಿದರೂ ಊಟ ಕೂಡ ಮಾಡದೆ ಅತ್ತು ಅತ್ತು ಚಾಪೆಯ ಮೇಲೆ ಮಲಗಿಕೊಂಡು ನಿದ್ದೆ ಮಾಡಿ ಬಿಟ್ಟಳು. ರಾತ್ರಿಯೆಲ್ಲಾ 'ಪಾಪ....ನಂದು ಮಗು ಪಾಪ ಸತ್ಹೋಯ್ತು....ಅಮ್ಮ ತೆಕ್ಕೊಡೇ' ಎಂದು ಕನವರಿಸಿಕೊಳ್ಳುತ್ತಿದ್ದಳು. ಪಕ್ಕದಲ್ಲಿ ಮಲಗಿದ್ದ ಸುಬ್ಬಮ್ಮನವರಿಗೂ ಅಯ್ಯೋ ಅನ್ನಿಸಿತು. 'ಈಗಲಿಂದಲೂ ಮಕ್ಕಳು ಅಂದರೆ ಇಷ್ಟು ಪ್ರಾಣಬಿಡ್ತಾಳಲ್ಲಾ, ಒಳ್ಳೇ ಮಗು ಇದು' ಅಂದುಕೊಂಡರು.

ಮೀನಾಕ್ಷಿ ಬೆಳಿಗ್ಗೆ ಯಾವಾಗ ಎದ್ದಳೋ, ಅದ್ಯಾವ ಮಾಯದಲ್ಲೋ ಪಕ್ಕದ ಮನೇಗೆ ಹೋಗಿ ಭಾವಿ ಕಟ್ಟೆ ಹತ್ತಿರ ನಿಂತು "ಪಾಪಾ, ಪಾಪಾ" ಎಂದು ಕಿರುಚಿಕೊಳ್ಳುತ್ತಿದ್ದಳು. ಪಕ್ಕದಲ್ಲಿ ನೆಟ್ಟಿದ್ದ ಕಲ್ಲನ್ನು ಹತ್ತಿ ಇನ್ನೇನು ಒಳಗೆ ಬಗ್ಗಿ ನೋಡಬೇಕು, ಅಷ್ಟರಲ್ಲಿ ಪಾಪಚ್ಚಿ ತಾಯಿ ನೀರು ಸೇದಿಕೊಳ್ಳಲು ಬಂದವರು ಅವಳನ್ನು ನೋಡಿ

ಓಡಿಬಂದು ಎತ್ತಿಕೊಂಡರು. ಮೀನಾಕ್ಷಿ "ರೀ....ನಂದು ಪಾಪ ಅಲ್ಲಿದೆ....ತೆಕ್ಕೊಡ್ರಿ....ಪಾಪಚ್ಚಿ ಒಳ್ಗೆ ಹಾಕ್ಬಿಟ್ರು" ಎಂದು ಕೇಳಿ ಕೊಂಡು ಬಿಕ್ಕಿಬಿಕ್ಕಿ ಅತ್ತಳು. ಆಕೆ ಮೀನಾಕ್ಷೀನ ಎತ್ತಿಕೊಂಡು ಬಂದು "ನೋಡಿ ಸುಬ್ಬಮ್ಮನವರೇ, ಈ ವತ್ತು ನಾನು ನೋಡ್ದೇ ಹೋಗಿದ್ರೆ ಆ ಬೊಂಬೇನ ಹುಡ್ಕ್ಕೋಕ್ಹೋಗಿ ಭಾವೀಲಿ ಮುಗಚ್ಕೋ ತಿದ್ಲು" ಎಂದು ಮೀನಾಕ್ಷಿಯನ್ನು ಕೆಳಗಿಳಿಸಿದರು.

"ಅಯ್ಯೋ. ಇಲ್ಲೇ ಮಲಗಿದ್ಲಾರೀ, ನಾನು ಬೆಳಗ್ಗೆ ಎದ್ದಾಗ ಅದ್ಯಾವ ಮಾಯದಲ್ಲಿ ಎದ್ದು ಹೋದ್ಲೋ, ಅದೇ ಗೀಳು ಹಿಡ್ದು ಬಿಟ್ಟಿದೇರ್ರಿ, ಈ ಹುಡ್ಗೀಗೆ. ನೆನ್ನೆ ರಾತ್ರೀನೂ ಊಟ ಮಾಡಿಲ್ಲ" ಎಂದು ಸುಬ್ಬಮ್ಮ ಮೀನಾಕ್ಷಿಯನ್ನು ಎತ್ತಿಕೊಂಡು ಒಳಗೆ ಹೋಗಿ ರಮಿಸಿ ಕಾಫಿ ಕುಡಿಸಿದರು. ಸಜ್ಜಿಗೆ ಮಾಡಿ ತಿನ್ನಿಸಿದರು. ಆದರೂ ಮೀನಾಕ್ಷಿಗೆ ಸಮಾಧಾನವಾಗಲಿಲ್ಲ. ಆಗಾಗ ಬಿಕ್ಕಿಬಿಕ್ಕಿ ಆಳುತ್ತಿದ್ದಳು. ಕರ್ಪೂರದ ಬೊಂಬೆಯನ್ನು ನೆನೆಸಿಕೊಂಡು ಕಾಮಾಕ್ಷಿ ಹತ್ತಿರ ಹೋಗಿ ಅವಳ ಲಂಗ ಎಳೆದು, ಜಡೆ ಎಳೆದು ನಿಶ್ಶಬ್ದವಾಗಿ ಬಿಕ್ಕುತ್ತಾ "ಅಕ್ಕಾ, ನಂಗೆ ಆ ಪಾಪ ತೆಕ್ಕೊಡೆ. ನಂದು ನೀಲಿ ಲಂಗದ ಪಾಪ ಭಾವೀಲಿ ಬಿದ್ಹೋಯ್ತು. ತೆಕ್ಕೊಡೇ" ಎಂದು ಪೀಡಿಸುತ್ತಿದ್ದಳು. ಕಾಮಾಕ್ಷಿಗೂ ಕೋಪ ಬಂದಿತು. ಚೆನ್ನಾಗಿ ರೇಗಿ ತಾನೊಬ್ಬಳೇ ಆಟವಾಡಲು ಹೊರಟು ಹೋದಳು. ಮಧ್ಯಾಹ್ನ ಸುಬ್ಬಮ್ಮನವರು ಮರದ ಪೆಟ್ಟಿಗೆ ಯಲ್ಲಿದ್ದ ಮರದ ಬೊಂಬೆಗಳನ್ನೂ ಮಣ್ಣಿನ ಬೊಂಬೆಗಳನ್ನೂ ತೆಗೆದು ತೋರಿಸಿದರು. ಮೀನಾಕ್ಷಿ "ನಂಗೆ ಯಾವ್ದೂ ಬೇಡ. ಥೂ ಚೆನ್ನಾಗಿಲ್ಲ. ನಂಗೆ ನೀಲಿ ಲಂಗದ ಪಾಪಾನೇ ಬೇಕು" ಎಂದು ಮತ್ತೆ ರಂಪ ಮಾಡಿದಳು. ಸುಬ್ಬಮ್ಮನವರಿಗೆ ಮತ್ತೆ ಸಿಟ್ಟು ಬಂದಿತು. ಎರಡೇಟು ಕೊಟ್ಟರು. ಮೀನಾಕ್ಷಿ ಕಂಬದ ಮರೆಯಲ್ಲಿ ಹೋಗಿ ಆಳುತ್ತ ಕುಳಿತು ಬಿಟ್ಟಳು.

ಮಾರನೆಯದಿನ ಸುಬ್ಬಮ್ಮನವರು ಆಳೊಬ್ಬನನ್ನು ಭಾವಿಗೆ ಇಳಿಸಿ ಹುಡುಕಿಸಿದರು. ಅವನು ತಡಕಾಡಿ ಕಡೆಗೆ ಅಜ್ಜಿಬಜ್ಜಿಯಾಗಿದ್ದ, ಮುಖವೆಲ್ಲ ನೆಗ್ಗಿ ಹೋಗಿದ್ದ ಕರ್ಪೂರದ ಬೊಂಬೆಯನ್ನು ಮೇಲಕ್ಕೆ

ತಂದನು. ಸುಬ್ಬಮ್ಮನವರು ನೀರು ಹಾಕಿ ಆ ಬೊಂಬೆಯನ್ನು ತೆಗೆದು ಕೊಂಡು ಮೀನಾಕ್ಷಿಗೆ ಕೊಟ್ಟರು. ಮೀನಾಕ್ಷಿಗೆ ಆ ನೆಗ್ಗಿ ಹೋದ ಬೊಂಬೆ ಅನಳದೆನ್ನಿಸಲಿಲ್ಲ. ಮುಖ ಮುಚ್ಚಿಕೊಂಡು "ಥೂ....ಆ ಪಾಪ ನಂದಲ್ಲ. ಇವೆಲ್ಲಾ ಮುದಿರ್ೊಗಿವೆ. ನಂಗೆ ಬೇರೆ ಪಾಪ ಬೇಕು ..." ಎಂದು ನೆಲದ ಮೇಲೆ ಬಿದ್ದು ಹೊರಳಾಡಿದಳು. ಸುಬ್ಬಮ್ಮನವರಿಗೆ ಸಿಟ್ಟು ಹತ್ತಿತು. "ಹಾಳು ರಂಡೆ, ಹಾಳಾಗಿ ಹೋಗು...." ಎಂದು ಬೊಂಬೆಯನ್ನು ದೂರ ಎಸೆದು ಮೀನಾಕ್ಷಿಯನ್ನು ಅಲ್ಲೇ ಬಿಟ್ಟು ಹೊರಟು ಹೋದರು. ಶಾಮಣ್ಣನವರು ಮೀನಾಕ್ಷಿಯನ್ನು ಎತ್ತಿಕೊಂಡು ಸಂತೈಸಿದರು.

ಮೀನಾಕ್ಷಿಗೆ ತಿಂಗಳಿಂದ ಮಂಕು ಹಿಡಿದಂತಾಗಿದ್ದಿತು. ಯಾವಾಗಲೂ ಮನೆಯಲ್ಲೇ ಮೂಲೆಯೊಂದರಲ್ಲಿ ಪೆಚ್ಚಾಗಿ ಕುಳಿತುಕೊಂಡು ಬಿಡುತ್ತಿದ್ದಳು. ಶಾಮಣ್ಣನವರಿಗೂ ಗಾಬರಿಯಾಯಿತು. ರಾಹು ಹಿಡಿದಿದೆಯೆಂದು ಮಂತ್ರ ಹಾಕಿಸಿದರು. ಹೆದರಿಕೊಂಡಿದ್ದಾಳೆ ಎಂದು ಯಂತ್ರ ಕಟ್ಟಿಸಿದರು. ಏನೂ ಪ್ರಯೋಜನವಾಗಲಿಲ್ಲ. ಎಲ್ಲರೂ ಮೈಸೂರಿಗೆ ದಸರಾ ಹಬ್ಬಕ್ಕೆ ಬಂದರು. ಶಾಮಣ್ಣನವರ ತಂಗಿಯ ಮನೆಯಲ್ಲಿಯೇ ಇಳಿದುಕೊಂಡರು. ಮೈಸೂರಿನ ವಸ್ತುಪ್ರದರ್ಶನಾಲಯದಲ್ಲಿ ಜರತಾರಿ ಲಂಗ ಹಾಕಿದ್ದ ಒಂದು ಕರ್ಪೂರದ ಬೊಂಬೆಯನ್ನು ತೆಗೆದು ಕೊಟ್ಟಾಗಲೇ ಮೀನಾಕ್ಷಿಯ ಮುಖ ಹಿಗ್ಗಿದ್ದು. ಅಲ್ಲಿ ಬೊಂಬೆಯಂಗಡಿಗಳನ್ನು ನೋಡಿ ಅವಳಲ್ಲಿ ನವಚೈತನ್ಯ ಹುಟ್ಟಿಕೊಂಡಿತು. ಅವುಗಳನ್ನು ನೋಡಿ ಅವಳು ಆನಂದ ಪಟ್ಟಷ್ಟು ಬೇರೆ ಯಾವ ಮಕ್ಕಳೂ ಪಟ್ಟಿರಲಾರರು. ಊರಿಗೆ ಬಂದ ಮೀನಾಕ್ಷಿ ಮೊದಲಿನ ಮೀನಾಕ್ಷಿಯಾದಳು. ಮನೆಯಲ್ಲಿ ಮತ್ತೆ ಎಲ್ಲರೂ ನಕ್ಕು ನಲಿದರು. ಆ ಸಂತೋಷ ಮೀನಾಕ್ಷಿಗೆ ಐದು ವರ್ಷ ತುಂಬಿದ ಮಾರನೆಯ ದಿನ ಮತ್ತಷ್ಟು ವೃದ್ಧಿಯಾಯಿತು. ಸುಬ್ಬಮ್ಮನವರು ಗಂಡು ಮಗುವನ್ನು ಹೆತ್ತರು! ಬಹಳ ವರ್ಷಗಳಿಂದ ಬಯಸಿದ ಅವರ ಬಯಕೆ ಆ ಇಳಿ ವಯಸ್ಸಿನಲ್ಲಿ ಈಡೇರಿತ್ತು. ಕುಲೋದ್ಧಾರಕನ ಜನ್ಮವಾಯಿತು. ಮನೆ ಆನಂದದ ಆಗರವಾಯಿತು. ಮೀನಾಕ್ಷಿಗೊಂದು ಆಟವಾಡಲು

ಸಜೀವವಾದ ಬೊಂಬೆಯಾಯಿತು. ಮಗುವಿಗೆ ವಿಜೃಂಭಣೆಯಿಂದ ನಾಮಕರಣ ಮಾಡಿದರು. ಅವರ ಕುಲದೇವರು ಶ್ರೀನಿವಾಸನ ಹೆಸರೇ ಅವರ ಕುಲೋದ್ಧಾರಕನಿಗೂ ಆಯಿತು. ಮೀನಾಕ್ಷಿ ಯಾವಾಗಲೂ ಶ್ರೀನಿವಾಸನ ಬಳಿಯೇ ಇರುತ್ತಿದ್ದಳು. ಶ್ರೀನಿವಾಸನು ಬೆಳೆಯುತ್ತ ಬಂದಂತೆ ಮೀನಾಕ್ಷಿಯೂ ಬೆಳೆದಳು. ಒಂದು ವರ್ಷದ ಶೀನಿಯ ಸಮಸ್ತ ಸೇವೆಯನ್ನೂ ಮೀನಾಕ್ಷಿಯೇ ಮಾಡುತ್ತಿದ್ದಳು. ಅಳುವಾಗ ತೊಟ್ಟಿಲು ತೂಗಿ ಸಮಾಧಾನ ಮಾಡುವವಳು ಅವಳು. ಅಚ್ಚಿಚ್ಚಿ ಕಳ್ಳಾ ಎಂದು ನಗಿಸುವವಳು ಅವಳು. ಅವನಿಗೆ ಹಾಲು ಹಾಕಬೇಕಾದರೆ ಅವಳು. ನೀರು ಹಾಕುವ ದಿನ ನೀರು ಹುಯ್ಯುವವಳೂ ಅವಳೇ. ಮೀನಾ ಮನೆಗೆಲಸದಲ್ಲಿ ಅಸಾಧಾರಣವಾದ ಪ್ರತಿಭೆಯನ್ನು ತೋರಿಸುತ್ತಿದ್ದಳು. ಸುಬ್ಬಮ್ಮನವರಿಗೆ ಅನೇಕ ವಿಧದಲ್ಲಿ ಮನೆಗೆಲಸದಲ್ಲಿ ನೆರವಾಗುತ್ತಿದ್ದಳು.

ಕಾಮಾಕ್ಷಿ ಮಗುವಿನ ಬಳಿ ಸುಳಿಯುತ್ತಲೇ ಇರಲಿಲ್ಲ. ಯಾವಾಗಲಾದರೊಮ್ಮೆ ಬಂದು ಮಗುವನ್ನು ಒಡ್ಡೊಡ್ಡಾಗಿ ಆಡಿಸಿ ಅಳಿಸಿ ಓಡಿ ಹೋಗುತ್ತಿದ್ದಳು. ಆಗ ಮೀನಾ ಓಡಿ ಬಂದು ಲಾಲಿ ಹಾಡು ಹೇಳಿ ಮಲಗಿಸುತ್ತಿದ್ದಳು. ಕಾಮಾಕ್ಷಿಗೆ ಅವನು ಅಳುವುದನ್ನು ಕಂಡರೆ ಕೋಪ. ಅವನು ಯಾವಾಗಲೂ ಅಳುತ್ತಾನೆಂದು ಸಿಡಿ ಗುಟ್ಟುತ್ತಿದ್ದಳು. ಅವಳಾಯಿತು, ಅವಳ ಮಣಿಕೆಲಸ, ಕಸೂತಿ ಕೆಲಸವಾಯಿತು.

ತಮ್ಮದೇ ಆದ ಗುಣಗಳನ್ನು ಬೆಳೆಸಿಕೊಂಡು, ತಮ್ಮ ಲೋಕ ದಲ್ಲಿ ವಿಹಂಗಮಗಳಂತೆ ವಿಹರಿಸುತ್ತಾ ಅಕ್ಕತಂಗಿಯರು ಬೆಳೆದರು. ಹೀಗೇ ನಾಲ್ಕು ವರ್ಷ ಕಳೆದು ಹೋಯಿತು.

## ೨

" ಮೀನಾಕ್ಷೀ........ಮೀನಾಕ್ಷೀ "
" ಬಂದೆ ಕಣೋ ಚಂದ್ರು "

" ಲೇ ಬೇಗ ಬಾರೇ........ಕಾಮಾಕ್ಷಿ ಬಂದ್ಬಿಡ್ತಾಳೆ "

" ಇಗೋ ಬಂದೆ....ತಿಂಡಿ ತಿಂದ್ಬಿಟ್ಟು ಗೋಪೆ ಹಚ್ಚಿಬಿಟ್ಟು ಬಂದ್ಬಿಡ್ತೀನಿ "

" ಬಾರೆ ಅಂದ್ರೆ....ಹೊತ್ತಾಗುತ್ತೆ. ಅವಳು ಸ್ಕೂಲಿಂದ ಬಂದ್ಬಿಡ್ತಾಳೆ ಕಾಣೇ. ಆಮೇಲೆ ನಾವಿಬ್ರೇ ಹೋಗೋಕೆ ಆಗೊಲ್ಲ "

ಚಂದ್ರು ಸ್ಕೂಲಿನಿಂದ ಬೇಗ ಬಂದುಬಿಟ್ಟಿದ್ದನು. ಅವನಿಗೆ ಮೀನಾಕ್ಷಿ ಜೊತೆ ಒಬ್ಬನೇ ತಿರುಗಾಡಿಕೊಂಡು ಬರಬೇಕೆಂದು ಆಸೆ. ತನ್ನ ಸೋದರಮಾವನ ಮನೆಗೆ ಓದುವುದಕ್ಕೆ ಬಂದು ಒಂದು ವರುಷ ಕಳೆದಿತ್ತು. ಆ ಒಂದು ವರ್ಷದಲ್ಲಿ ಮೀನಾಕ್ಷಿ ಜೊತೆ ಗೆಳೆತನ ಕೂಡಿ ಬಂದಿದ್ದಿತು. ಆ ಗೆಳೆತನ ಕೂಡಿ ಬರಲು ಒಂದು ಕಾರಣವೂ ಇತ್ತು. ಮೀನಾಕ್ಷೀನ ಶಾಲೆಗೆ ಹಾಕಿರಲಿಲ್ಲ. ಈಗೀಗ ಸುಬ್ಬಮ್ಮನವರೂ ಒಂದು ತರಹ ಆಗಿಬಿಟ್ಟಿದ್ದರು. ಮೀನಾಕ್ಷಿಯೇ ಮನೆಗೆಲಸ ಮಾಡಬೇಕಾಗಿತ್ತು. ಮೀನಾಕ್ಷಿ ಮೈತುಂಬಿಕೊಂಡು ಹನ್ನೊಂದು ವರ್ಷಕ್ಕೇ ಹದಿನಾಲ್ಕು ವರ್ಷಗಳ ಹುಡುಗಿಯಂತೆ ಕಾಣುತ್ತಿದ್ದಳು. ಅವಳ ಸೌಂದರ್ಯ ಅವಳ ಬೆಳವಣಿಗೆ ಅವಳಿಗೆ ಕಂಟಕಪ್ರಾಯವಾಗಿದ್ದುವು. ಚಂದ್ರೂಗೆ ಅವಳು ಶಾಲೆಗೆ ಹೋಗದೆ ಮನೆಯಲ್ಲೇ ಕುಳಿತುಕೊಂಡು ದುಡಿಯುತ್ತಿದ್ದುದನ್ನು ನೋಡಿ ಕರುಣೆ ಹುಟ್ಟಿದ್ದಿತು. ಕಾಮಾಕ್ಷಿ ಅಷ್ಟು ಬುದ್ಧಿವಂತಳಲ್ಲ. ನೋಡುವುದಕ್ಕೂ ಅಷ್ಟೇನೂ ಚೆನ್ನಾಗಿರಲಿಲ್ಲ. ಅವಳಿಗೆ ಯಾವಾಗಲೂ ಸಿಟ್ಟು. ಚಂದ್ರೂಗೆ ಅವಳನ್ನು ಕಂಡರೆ ಆಗುತ್ತಿರಲಿಲ್ಲ. ಒಂದು ವರ್ಷದಿಂದ ಮಾವನ ಮನೆಯಲ್ಲೇ ಇದ್ದ ಅವನಿಗೆ ಮೀನಾಕ್ಷಿಯ ವಿಷಯವೆಲ್ಲ ತಿಳಿದಿತ್ತು. ತಾಯಿತಂದೆಯಿಲ್ಲದ ತಬ್ಬಲಿಯೆಂದು ಅವಳಿಗಾಗಿ ಅವನ ಮನಸ್ಸು ಮರುಕಗೊಂಡಿತ್ತು. ಅವನಿಗೆ ತನ್ನ ಸೋದರತ್ತೆಯ ಈ ವಂಚನೆ ಸರಿಬೀಳುತ್ತಿರಲಿಲ್ಲ. ಶಾಮಣ್ಣನವರೂ ಮೀನಾಕ್ಷಿಯನ್ನು ಸ್ಕೂಲಿಗೆ ಕಳುಹಿಸುವಂತೆ ಎಷ್ಟೋ ಹೇಳಿ ನೋಡಿದ್ದರು. ಅದಕ್ಕೆ ಸುಬ್ಬಮ್ಮನವರು,

" ನಿಮಗೆ ಗೊತ್ತಿಲ್ಲ ಸುಮ್ನಿರಿ. ಅವಳಿಗೇಕೆ ಸ್ಕೂಲು ? ಕಾಮಾಕ್ಷೀನೆ ಮನೇಲಿ ಒಂದಿಷ್ಟು ಓದೋದು ಬರೆಯೋದು ಹೇಳಿ

ಕೊಡುತ್ತಾಳೆ. ಅವಳಿಗೇನು ರೂಪಿಲ್ಲವೆ. ಯಾರಾದರೂ ದಮ್ಮಯ್ಯ ಅಂತ ಮದುವೆ ಮಾಡಿಕೊಂಡು ಹೋಗ್ತಾರೆ" ಎಂದುಬಿಡುತ್ತಿದ್ದರು.

ಆದರೆ ಅವರ ಮನಸ್ಸಿನಲ್ಲಿ ಬೇರೆ ಯೋಚನೆ ಸಟ್ಟಿದ್ದಿತು. ಓದು ಬರಹ ಬಂದ ಮೀನಾಕ್ಷಿ ಬೆಳವಣಿಗೆ, ಅವಳ ರೂಪವನ್ನು ನೋಡಿ ಎಲ್ಲರೂ ಅವಳನ್ನೇ ಮದುವೆಯಾಗಲಿಚ್ಛಿಸಿ, ತಮ್ಮ ಮಗಳು ಕಾಮಾಕ್ಷಿಗೆ ಎಲ್ಲಿ ಗಂಡು ಸಿಕ್ಕುವುದಿಲ್ಲವೋ ಎಂದು ಹೆದರಿದ್ದರು. ಅದಕ್ಕೇ ಆ ವಯಸ್ಸಿನಲ್ಲೂ ಮೀನಾಕ್ಷಿಗೆ ಲಂಗ ಹಾಕಿ ಮನೆಯಲ್ಲೇ ಇಟ್ಟು ಕೊಂಡಿದ್ದರು. ಅವರು ಏನೇ ಮಾಡಿದರೂ ಮೀನಾಕ್ಷಿಯ ಬೆಳವಣಿಗೆಯನ್ನೂ, ರೂಪವನ್ನೂ ಮುಚ್ಚಿಡಲಾಗಲಿಲ್ಲ. ಹೊಸಬರು ಮೀನಾಕ್ಷಿಯೇ ದೊಡ್ಡವಳೆಂದೂ, ಕಾಮಾಕ್ಷಿಯೇ ಚಿಕ್ಕವಳೆಂದೂ ತಿಳಿದುಕೊಳ್ಳುತ್ತಿದ್ದರು. ಅವಳ ಮೈ ಕರಗಿಸಬೇಕೆಂದು, ನೀರು ಹೊತ್ತುತರುವುದು, ಹಸುಗಳನ್ನು ನೋಡಿಕೊಳ್ಳುವುದು, ಕುಟ್ಟುವುದು, ಬೀಸುವುದು ಮುಂತಾದ ಕೆಲಸಗಳಿಗೆಲ್ಲ ಹಚ್ಚಿದ್ದರು. ಆ ವಯಸ್ಸಿನಲ್ಲಿ ಅಡಿಗೆಯನ್ನೂ ಮಾಡಿಸಿಬಿಡುತ್ತಿದ್ದರು. ಶಾಮಣ್ಣನವರಿಗೂ ಇದೆಲ್ಲ ತಿಳಿದಿದ್ದಿತು. ಒಂದೊಂದು ಸಾರೆ,

"ಯಾಕೆ ಸುಬ್ಬಿ, ಕಂಡವರ ಮನೆ ಹುಡುಗಿ ಕೈಯ್ಯಲ್ಲಿ ಹಾಗೆ ದುಡಿಸುತ್ತೀಯೆ" ಎಂದು ಆಕ್ಷೇಪಿಸುತ್ತಿದ್ದರು.

"ಹೌದೊಂದ್ರೆ. ಕಂಡವರ ಮನೆ ಹುಡುಗಿ ಅಲ್ವೆ. ನನ್ನ ತಮ್ಮನ ಮಗೂನ ನೋಡ್ದ್ರೆ ನನಗೆ ಹೊಟ್ಟೆಕಿಚ್ಚು. ನಾಳೆ ಮದ್ವೆ ಆಗಿ ಅತ್ತೇ ಮನೆಗೆ ಹೋದರೆ ತಿಳಿಯುತ್ತೆ. ನಿನ್ನನ್ನು ಸಾಕಿದ ಅಮ್ಮ ನಿನಗೆ ಇದೇ ಏನು ಹೇಳಿಕೊಟ್ಟಿರೋದು ಅಂತ ತಲೆಮೇಲೆ ಮೊಟಕಲಿ, ಆಗ ತಿಳಿಯುತ್ತೆ. ನನಗೂ ಕೆಟ್ಟ ಹೆಸರು. ಅವಳಿಗೂ ಪಡುಪಾಟ್ಲು. ಏನೀಗ ಮೈ ಸೊರಗಿಹೋಗೋದು, ಕಲ್ತುಕೊಳ್ಳಿ ಬಿಡಿ. ಎಲ್ಲಾ ಅವಳ ಒಳ್ಳೇದಕ್ಕೇ" ಅಂತ ಬಾಯಿ ಮುಚ್ಚಿಸಿಬಿಡುತ್ತಿದ್ದರು. ಆದರೂ ಅವರ ಇಷ್ಟ ನೆರವೇರಲಿಲ್ಲ. ಕೆಲಸಮಾಡಿದಷ್ಟೂ ಮೀನಾಕ್ಷಿ ಆರೋಗ್ಯದಿಂದ ಮೈಕೈ ತುಂಬಿಕೊಂಡು ಬೆಳೆಯುತ್ತಿದ್ದಳು.

ಚಂದ್ರುವಿನ ಕಣ್ಣಿಗೂ, ಇವೆಲ್ಲಾ ಗೋಚರವಾಗಿದ್ದುವು.

ಅವಳಿಗಾಗಿ ಅವನ ಹೃದಯ ಮಿಡಿಯುತ್ತಿದ್ದಿತು. ಅವಳಿಗಾಗಿ ಅವನ ಹೃದಯ ಅನುಕಂಪಿಸುತ್ತಿದ್ದಿತು. ತಾನೇ ಪ್ರೀತಿಯಿಂದ ಅವಳಿಗೆ ಮನೆಯಲ್ಲೇ ಪಾಠ ಹೇಳಿಕೊಡುತ್ತಿದ್ದನು. ಮೀನಾಕ್ಷಿಯೂ ಚಂದ್ರುವೆಂದರೆ ಪ್ರಾಣಬಿಡುತ್ತಿದ್ದಳು. ಆ ಪುಟ್ಟ ಹೃದಯಕ್ಕೆ ಮತ್ತೊಂದು ಹೃದಯದ ಸಹಾನುಭೂತಿ, ಪ್ರೀತಿ ಆದರಗಳು ಬಹಳ ಸವಿಯಾಗಿ ಕಂಡವು. ಅವಳ ಮನೋಬೆಳವಣಿಗೆಗೆ ಆ ಪ್ರೀತಿ ಆದರಗಳು ತೀರ ಅವಶ್ಯಕವಾಗಿದ್ದುವು.

ಮೀನಾಕ್ಷಿ ಗೋಮೆಹಚ್ಚಿ ಕೈತೊಳೆದುಕೊಂಡು ಓಡಿಬಂದಳು. ಬಾಗಿಲಲ್ಲಿ ಚಂದ್ರು ಹೊರಟು ನಿಂತಿದ್ದನು. ಇಬ್ಬರೂ ಸುಬ್ಬಮ್ಮನವರ ಕಣ್ಣು ತಪ್ಪಿಸಿ ನದಿಯ ದಡಕ್ಕೆ ಓಡಿಹೋದರು.

ಕಾವೇರಿ ಕಲಕಲರವದಿಂದ ಮಂದಗಮನೆಯಂತೆ ಹರಿದು ಹೋಗುತ್ತಿದ್ದಳು. ಇಬ್ಬರೂ ಸ್ವಚ್ಛ ತಿಳಿನೀರಿನಲ್ಲಿ ಮುಖ ತೊಳೆದುಕೊಂಡರು. ಬೊಗಸೆತುಂಬ ನೀರು ಕುಡಿದರು. ಚಂದ್ರು ಒಂದು ಬಂಡೆಯಿಂದ ಮತ್ತೊಂದು ಬಂಡೆಗೆ ಹಾರುತ್ತಾ ನದಿಯ ಮಧ್ಯೆ ಇದ್ದ ಒಂದು ಮರಳಿನ ದ್ವೀಪಕ್ಕೆ ಧಾವಿಸಿ ನಡೆದಿದ್ದನು. ಮೀನಾಕ್ಷಿಗೆ ಏನೋ ಆನಂದ. ಅವಳು ಗೂಡಿನಲ್ಲಿ ಕೂಡಿಟ್ಟ ಹಕ್ಕಿಯಂತಾಗಿದ್ದಳು ಇದುವರೆವಿಗೆ. ಈಗ ತಾನೇ ತಾನಾಗಿ ನಿರ್ಭಯವಾಗಿ ಪ್ರಕೃತಿಯಲ್ಲಿ ವಿಹರಿಸುವ ವಿಹಂಗಮದಂತಾಗಿಬಿಟ್ಟಳು. “ಚಂದ್ರು ಎಷ್ಟು ಚೆನ್ನಾಗಿದ್ಯೋ ಈ ನದಿ. ಈ ನೀರೆಷ್ಟು ಸಿಹಿಯಾಗಿದ್ಯೋ” ಎಂದು ಆನಂದದಿಂದ ಕೂಗಿಕೊಳ್ಳುತ್ತಿದ್ದಳು. ಆಗಾಗ ನಿಂತು ತನ್ನ ಕೈಯಲ್ಲಿದ್ದ ಕಡಲೆಕಾಳನ್ನು ನೀರಿಗೆ ಹಾಕುತ್ತಿದ್ದಳು. ತಾನೇ ಗುನುಗುನು ಹಾಡಿಕೊಳ್ಳುತ್ತಿದ್ದಳು. ನೂರಾರು ಮೀನುಗಳು ಸರ್ರನೆ ಈಜಿ ಬಂದು ಮುತ್ತಿಕೊಂಡು ಆ ಕಾಳಿಗಾಗಿ ಜಗಳವಾಡುತ್ತಿದ್ದುದನ್ನು ನೋಡಿ ಅವಳ ಮುಖ ಅರಳುತ್ತಿದ್ದಿತು. ಬಿಸಿಲು ಬಿದ್ದಾಗ ಅವುಗಳ ತಳಮೈ ಥಳಥಳಗುಟ್ಟುತ್ತಿದ್ದವು. ಮೀನಾಕ್ಷಿ “ಚಂದ್ರು ನೋಡೋ ಎಷ್ಟು ಚೆನ್ನಾಗಿದೆ ಈ ಮೀನುಗಳು. ನನ್ನ ಕಡಲೆ ಎಲ್ಲಾ ಮುಗಿಸಿಬಿಟ್ಟವು” ಎಂದು ಆನಂದದಿಂದ ಕೂಗಿ ಹೇಳಿದಳು.

ಚಂದ್ರು ದೂರದಲ್ಲೇ ನಿಂತು ಲಂಗ ತೊಟ್ಟ ಆ ಚೆಲುವೆಯನ್ನು ನೋಡುತ್ತಿದ್ದನು. ಅವನಿಗೆ ಅವಳು ನಗುವುದನ್ನು ನೋಡಿಯೇ ಆನಂದ. ಮೀನಾಕ್ಷಿ ಮೀನುಗಳನ್ನು ನೋಡುವುದರಲ್ಲಿ ತಲ್ಲೀನ ಳಾಗಿದ್ದಳು. ಚಂದ್ರು ಅವಳ ಹಿಂದೆ ಬಂದು ನಿಂತಿದ್ದುದು ಅವಳಿಗೆ ತಿಳಿಯಲಿಲ್ಲ. ದೊಡ್ಡ ಮೀನೊಂದು ಜಳ್ಳಾಗಿ ನೀರಿನ ಮೇಲೆ ತೇಲುತ್ತಿದ್ದ ಕಡಲೆಕಾಳನ್ನು ನುಂಗಲು ಫಳ್ಳನೆ ಮೇಲೆ ಹಾರಿತು. ಅದರ ತಳವೆಲ್ಲ ಬಿಸಿಲಿನ ಝಳಕ್ಕೆ ಥಳಥಳನೆ ಹೊಳೆಯಿತು. ಮೀನನ್ನು ಹಿಡಿಯಬೇಕೆಂದು ನೀರಿಗೆ ಕೈಹಾಕಿದ್ದ ಮೀನಾಕ್ಷಿ ಬೆದರಿ "ಅಬ್ಬಾ, ಚಂದ್ರೂ......ಮೊಸಳೇ" ಎಂದು ಹಿಂದಕ್ಕೆ ಎಗರಿದಳು. ಚಂದ್ರು ಅವಳನ್ನು ಆತುಕೊಂಡನು. ಮೀನಾಕ್ಷಿಗೆ ನಾಚಿಕೆಯಾಯಿತು.

"ಆಹಾ, ಎಷ್ಟು ಧೈರ್ಯವಂತಳೇ. ಮೀನಿಗೆ ಹೆದರಿಬಿಟ್ಟೆಯಲ್ಲೇ ಮೀನಾಕ್ಷೀ" ಎಂದು ಚಂದ್ರು ಹಾಸ್ಯ ಮಾಡಿ ನಕ್ಕನು.

"ಹೋಗೋ....ನೀನು ನೋಡಲಿಲ್ಲವೇನೋ. ಎಷ್ಟು ದೊಡ್ಡ ದಾಗಿತ್ತು. ನಾನು ಮೊಸಳೆ ಎಂದುಕೊಂಡುಬಿಟ್ಟೆ. ನಾನು ಬರ್ಲೇ ಬಾರದಾಗಿತ್ತು" ಎಂದು ಚಂದ್ರುವಿಗೆ ಕೋಪ ಬಂದಿದೆಯೇನೋ ಎಂದು ಮೀನಾಕ್ಷಿ ಅವನ ಮುಖವನ್ನು ನೋಡಿದಳು.

"ನಿನ್ನನ್ನು ಅದಕ್ಕೇ ಕರೆದುಕೊಂಡು ಬರಬಾರದು"

ಎಂದು ಚಂದ್ರು ಮುಂದಿದ್ದ ಬಂಡೆಗೆ ಹಾರಿನಿಂತನು. ಆ ಬಂಡೆಗಳೆರಡರ ಮಧ್ಯೆ ನೀರು ರಭಸದಿಂದ ನೊರೆನೊರೆಯಾಗಿ ಹರಿದು ಹೋಗುತ್ತಿದ್ದಿತು. ಮೀನಾಕ್ಷಿಗೆ ಅದನ್ನು ದಾಟುವುದಕ್ಕೆ ಹೆದರಿಕೆ ಯಾಯಿತು. ಚಂದ್ರು ಅಲ್ಲಿ ಠೀವಿಯಿಂದ ನಿಂತುಕೊಂಡು ಮೀನಾಕ್ಷಿ ಯನ್ನೇ ನೋಡುತ್ತಿದ್ದನು. ಅವನ ಮುಖದಲ್ಲಿ ತುಂಟನಗೆ ನಾಟ್ಯ ಮಾಡುತ್ತಿದ್ದಿತು. ಮೀನಾಕ್ಷಿಗೂ ಅಲ್ಲಿಗೆ ಹೋಗಬೇಕೆನ್ನಿಸಿತು. ಹೆಣ್ಣು ಹುಡುಗಿಯ ಸಹಜವಾದ ಮಧುರಧ್ವನಿಯಿಂದ ಕೇಳಿಕೊಂಡಳು :

"ನಾನೂ ಬರ್ತೀನಿ ಕಾಣೋ ಚಂದ್ರು."

"ಬೇಡಮ್ಮಾ, ನಿನಗೆ ತಲೆ ತಿರುಗಿ ಬಂದುಬಿಡುತ್ತೆ, ಇಷ್ಟು ಮೇಲೆ ಬಂದ್ರೆ."

"ಇಲ್ಲಾ ಕಾಣೋ......ಇನ್ನು ಹೆದರ್ಕೊಳ್ಳೊಲ್ಲ. ನನ್ನೂ ಕರ್ಕೊಳ್ಳೊ."

"ಉಹ್ಞು......ನಾನು, ನೋಡು ಅಲ್ಲಿದ್ಯಲ್ಲಾ ಆ ಮರಳು ದ್ವೀಪ ಅಲ್ಲೀಗೆ ಹೋಗ್ತೀನಿ. ಅಲ್ಲಿ ಎಷ್ಟು ಚೆನ್ನಾಗಿರುತ್ತೋ. ಅಲ್ಲೆಲ್ಲಾ ಕಪ್ಪೆಚಿಪ್ಪಿದೆ !"

ಚಂದ್ರು ಕೀಟಲೆಗಾಗಿ ಮುಸಿನಕ್ಕು, ಆ ದೊಡ್ಡ ಬಂಡೆಯಿಂದ ನೀರಿಗೆ ಇಳಿದು ಮತ್ತೆ ಇನ್ನೊಂದು ಬಂಡೆಯನ್ನು ಹತ್ತುತ್ತಿದ್ದನು. ಮೀನಾಕ್ಷಿ ದೀನಳಾಗಿ ಕೇಳಿಕೊಂಡಳು.

"ನಾನೂ ಬರ್ತೀನಿ ಕಾಣೋ ಚಂದ್ರೂ. ಆಸೆ ಆಗುತ್ತೆ. ಅಲ್ಲಿ ಕಪ್ಪೆಚಿಪ್ಪಿದೆ ಅಂದ್ಯಲ್ಲೋ."

ಚಂದ್ರು ಮತ್ತೊಂದು ದೊಡ್ಡ ಬಂಡೆಯ ಮೇಲೆ ಪ್ರಯಾಸದಿಂದ ಹತ್ತಿ ಠೀವಿಯಿಂದ ನಿಂತುಕೊಂಡು ಪೌರುಷದಿಂದ ಕೇಳಿದನು :

"ತಪ್ಪಾಯ್ತು ದಮ್ಮಯ್ಯ ಅನ್ನು."

"ತಪ್ಪಾಯ್ತು........ಥೂ ಹೋಗೋ ನಾ ಅನ್ನೊಲ್ಲ."

"ಹಾಗಾದ್ರೆ ನಾ ನಿನ್ನ ಕರ್ಕೊಂಡು ಹೋಗೊಲ್ಲ. ನಾಳೆಯಿಂದ ಕಾಮಾಕ್ಷೀನೆ ಕರ್ಕೊಂಡು ಬರ್ತೀನಿ."

"ಇಲ್ಲ ಇಲ್ಲ....ದಮ್ಮಯ್ಯ."

ಮೀನಳ ಹೆಣ್ಣು ಹೃದಯ ಆ ಪುಟ್ಟ ಪುರುಷನ ಸಾಹಸಕ್ಕೆ ಸೋತುಹೋಯಿತು. ಕಾಮಾಕ್ಷಿಯ ಮೇಲಿನ ಅಸೂಯೆ ಅವಳನ್ನು ಪರಾಭವಗೊಳಿಸಿತು.

ಚಂದ್ರು ನಕ್ಕು ಹಿಂತಿರುಗಿ ಬಂದು ಮೀನಾಕ್ಷಿಯ ಕೈಹಿಡಿದು ಬಂಡೆಗಳನ್ನು ಹತ್ತಿಸಿ, ಇಳಿಸಿ, ನೀರಿನಲ್ಲಿ ನಡೆದು ನದಿಯ ಮಧ್ಯೆ ಇದ್ದ ದ್ವೀಪಕ್ಕೆ ಕರೆದುಕೊಂಡು ಹೋದನು. ಅಲ್ಲಿಗೆ ಹೋಗುವ ಹೊತ್ತಿಗೆ ಮೀನಾಕ್ಷಿಯ ಲಂಗವೆಲ್ಲ ಅರ್ಧ ನೆನೆದುಹೋಗಿದ್ದಿತು. ಆಗಲೇ ಸಂಜೆಯ ಸೂರ್ಯ ಕೆಂಬಣ್ಣವನ್ನು ತಳೆದು ದಿಗಂತದಲ್ಲಿ ಮುಳುಗ ತೊಡಗಿದ್ದನು. ಮೀನಾಕ್ಷಿ ಮಂಡಿಯತನಕ ಲಂಗ ಎತ್ತಿಹಿಡಿದಿದ್ದಳು. ಅವಳ ಬಿಳಿಯ ದುಂಡುದುಂಡಾದ ಕಾಲುಗಳು ನೀರಿನಲ್ಲಿ ನೆನೆದು

ಬಿಸಲಿಗೆ ಮಿಂಚುತ್ತಿದ್ದವು. ಚಂದ್ರು ಆ ಕಾಲುಗಳನ್ನೇ ದಿಟ್ಟಿಸಿ ನೋಡುತ್ತಿದ್ದನು. ಮೀನಾಕ್ಷಿ ಆ ಅಗಾಧವಾದ ಬಿಳಿಯ ಮರಳಿನ ಮೇಲೆ ಬಿದ್ದು ಹೊರಳಾಡಿದಳು. ಕಪ್ಪೆಚಿಪ್ಪುಗಳನ್ನು ಆಯ್ದು ಚಂದ್ರುವಿನ ಜೇಬಿಗೆ ತುಂಬಿದಳು. ನದಿಯ ಮೇಲಿನಿಂದ ಕುಳಿಗಾಳಿಯು ಬೀಸಿತು. ಚಂದ್ರು ಮೀನಾಕ್ಷಿಯನ್ನು ಹತ್ತಿರ ಬರುವಂತೆ ಕರೆದನು. ಮೀನಾಕ್ಷಿ ಹತ್ತಿರ ಹೋಗಿ ಕುಳಿತಳು. ನೆನೆದಿದ್ದ ಲಂಗವನ್ನು ಬಿಸಲಿಗೆ ಸುತ್ತಲೂ ಹರಡಿಕೊಂಡು ಕುಳಿತು ಅಕ್ಕರೆಯಿಂದ ಕೇಳಿದಳು :

"ಏನೋ ಚಂದ್ರು ಕರೆದ್ಯಲ್ಲಾ"

"ನಾನೊಂದು ಮಾತು ಕೇಳ್ತೀನಿ, ಹೇಳ್ತೀಯ ?"

"ಹ್ಞ.... ... ....."

"ಸುಳ್ಳು ಹೇಳಬಾರದು"

"ಇಲ್ಲ.......... .... ಹೇಳೋಂದ್ರೆ"

"ಕಾಮಾಕ್ಷಿಗೆ ಮದುವೆ ಗೊತ್ತುಮಾಡ್ತಾ ಇದಾರಂತೆ ಹೌದೇ ?"

"ಸಂಗೊತ್ತಿಲ್ಲಪ್ಪ........ ಹಾಗೆ ಮಾತಾಡ್ಕೋತಾ ಇದ್ರು, ಅಮ್ಮ"

"ಹುಡುಗ ಯಾರು ಗೋತ್ತೇನೆ ಮೀನಾಕ್ಷಿ!"

"ನಂಗೊತ್ತಿಲ್ಲಪ್ಪ .... .... ...."

"ಕಳ್ಳಿ, ನಿನಗೆ ಗೊತ್ತಿದೆ.... ...ನಗ್ತಾ ಇದೀಯಾ"

"ನಂಗೊತ್ತಿಲ್ಲಪ್ಪ.... .... .... ಖಂಡಿತವಾಗಿ"

"ಸಾಕು ಜಂಭ ಮಾಡ್ಬೇಡ ಹೇಳೇ"

"ಅದ್ಯಾರೋ ಚಂದ್ರಶೇಖರ ಅಂತೆ !"

ಮೀನಾಕ್ಷಿ ನಕ್ಕು ಮತ್ತೆ ಮರಳಿನಲ್ಲಿ ಆಟವಾಡಲು ಓಡಿ ಹೋದಳು. ಮರಳಿನಲ್ಲಿ 'ಕಪ್ಪೆಮನೆ' ಕಟ್ಟುತ್ತ ಕುಳಿತಳು. ಚಂದ್ರು ಎದ್ದು ಹೋಗಿ ಅವಳ ಕೈಹಿಡಿದು ಅದರಲ್ಲಿ ಒಂದು "ನೆಸಲ್ಸ್" ಚಾಕಲೇಟ್ ಇಟ್ಟು

"ತಗೋ ಮೀನಾಕ್ಷಿ ನಿನಗೋಸ್ಕರ ಮೊನ್ನೆ ಮೈಸೂರಿಂದ

ತಂದಿದ್ದೆ" ಎಂದನು. ಮೀನಾಕ್ಷಿ ಕೃತಜ್ಞತೆಯಿಂದ ಚಂದ್ರುವಿನ ಕಡೆಗೆ ದೃಷ್ಟಿಬೀರಿ ಹೇಳಿದಳು :

"ನೀನು ಎಷ್ಟು ಒಳ್ಳೇವನೋ ಚಂದ್ರು"

ಆ ಮಾತಿನಲ್ಲಿ ಅವಳ ಹೃದಯದ ಪ್ರೇಮಮಾಧುರ್ಯಗಳೆಲ್ಲ ಅಡಗಿದ್ದವು. ಚಂದ್ರುವಿನ ಪ್ರೀತಿಗೆ ಆ ಪುಟ್ಟ ಹೆಣ್ಣು ಹೃದಯ ಆಗಲೇ ಮಾರುಹೋಗಿದ್ದಿತು.

"ನಿಂದು ಎಲ್ಲಾ ಬಾಯಿಮಾತು. ನಾನು ಕಾಮಾಕ್ಷೀನ ಮದುವೆಮಾಡಿಕೊಂಡರೆ ನಿನಗೇನನ್ನಿಸುತ್ತೇ ಮೀನಾಕ್ಷಿ" ಎಂದು ಚಂದ್ರು ಆ ಲಂಗ ಉಟ್ಟ ಚೆಲುವೆಯನ್ನು ಕೇಳಿದನು. ಅವಳ ಮೆಚ್ಚುಗೆಯಿಂದ ಅವನ ಹೃದಯ ಪ್ರೇಮಪೂರಿತವಾಗಿದ್ದಿತು. ಮೀನಾಕ್ಷಿ ತುಂಟನಗೆ ನಗುತ್ತಾ ಕಣ್ಣರಳಿಸಿ ಕೇಳಿದಳು.

"ಆಂ.... .... ಹಾಗಾದರೆ ನೀನು ಕಾಮಾಕ್ಷೀನ ಮದುವೆಮಾಡಿಕೊಳ್ಳುತ್ತೀಯ"

"ಹ್ಞು, ಮಾವ ನಮ್ಮ ಅಮ್ಮನ ಹತ್ತಿರ ಹಾಗೇ ಹೇಳಿದ್ದಾರೆ"

"ಹಾಗಾದ್ರೆ ಮಾಡಿಕೋ"

"ಹಾಗಾದ್ರೆ ನಿನಗೆ ನನ್ನ ಮದುವೆಮಾಡಿಕೊಳ್ಳೋಕೆ ಇಷ್ಟವಿಲ್ಲವೇನೇ ಮೀನಾ"

"ಥೂ ಹೋಗೋ...... ನಾನು ಮದ್ವೇನೇ ಮಾಡ್ಕೊಳ್ಳೊಲ್ಲ"

ಮೀನಾಕ್ಷಿಗೆ ನಾಚಿಕೆಯಿಂದ ಮುಖ ಕೆಂಪಾಯಿತು. ಚಂದ್ರುವಿನ ಮುಖವನ್ನು ಅವಳು ನೋಡಲಾರದೇ ಹೋದಳು. ಎರಡೂ ಕೈಗಳಿಂದ ಮುಖಮುಚ್ಚಿಕೊಂಡು ಬಿಟ್ಟಳು.

ಚಂದ್ರಶೇಖರ ಹದಿನೇಳು ವರ್ಷದ ಹುಡುಗನಾಗಿದ್ದನು. ಪಟ್ಟಣದ ಗಾಳಿ ಬೀಸಿ ಕೊಂಚ ರಸಿಕತನ ಮೈಯಲ್ಲಿ ಮನೆಮಾಡಿಕೊಂಡಿದ್ದಿತು. ತಂದೆ ಮೈಸೂರಿನಲ್ಲಿ ಪ್ರೈಮರಿ ಸ್ಕೂಲ್ ಉಪಾಧ್ಯಾಯರಾಗಿದ್ದರು. ಅವರಿಗೆ ಮನೆತುಂಬ ಹೆಣ್ಣುಮಕ್ಕಳು. ಚಂದ್ರುವೇ ಹಿರಿಯವನು. ಮತ್ತೊಬ್ಬ ಹತ್ತು ವರ್ಷದ ತಮ್ಮ. ಮೈಸೂರಿನ ಹುಡುಗ. ಮೊದಲಿಂದಲೂ ಸಿನಿಮಾ, ಹೋಟೆಲುಗಳ ಷೋಕಿ ಹತ್ತಿ

ದ್ದಿತು. ಹದಿನೇಳು ವರ್ಷವಾದರೂ ಚಂದ್ರು ಲೋಅರ್ ಸೆಕೆಂಡರಿ ಪಾಸು ಮಾಡಿರಲಿಲ್ಲ. ನೂರುವರ್ಷಗಳಿಂದ ಫೇಲಾಗುತ್ತಿದ್ದನು. ಮಗ ಕೆಟ್ಟ ಸಹವಾಸಕ್ಕೆ ಬಿದ್ದು ಬಿಡುವನೆಂದು ಹೆದರಿಕೊಂಡ ತಾಯಿ ಉಪಾಯಮಾಡಿ ಮಗನನ್ನು ಶ್ರೀರಂಗಪಟ್ಟಣದಲ್ಲಿದ್ದ ಅಣ್ಣನ ಮನೆಗೆ ಸಾಗಹಾಕಿದ್ದರು. ಚಂದ್ರುವಿಗೆ ಸುಬ್ಬಮ್ಮನವರೆಂದರೆ ಹೆದರಿಕೆ. ಯಾರಿಗೂ ಹೆದರುವುದಿಲ್ಲವೆಂದು ಹೇಳುತ್ತಿದ್ದ ಚಂದ್ರು ಸುಬ್ಬಮ್ಮನವರ ಆರ್ಭಟಕ್ಕೆ ಹೆದರಿಬಿಡುತ್ತಿದ್ದನು. ಆ ವರ್ಷ ಚಂದ್ರು ಪಾಸಾಗುವ ನಿರೀಕ್ಷೆಯಿದ್ದಿತು. ಶಾಮಣ್ಣನವರೂ ತಂಗಿಯ ಮಗನನ್ನು ಪ್ರೀತಿ ಯಿಂದ ಕಂಡರು. ಹನ್ನೆರಡು ವರ್ಷ ತುಂಬಿದ್ದ ಕಾಮಾಕ್ಷಿಯನ್ನು ಚಂದ್ರುವಿಗೆ ಎಸ್.ಎಸ್.ಎಲ್.ಸಿ. ಆದ ತಕ್ಷಣ ಮದುವೆಮಾಡ ಬೇಕೆಂದು ಗುಣಾಕಾರ ಹಾಕಿಕೊಂಡಿದ್ದರು. ತಿಂಗಳ ಹಿಂದೆ ತಂಗಿ ಬಂದಿದ್ದಾಗ ಅದರ ವಿಚಾರ ಪ್ರಸ್ತಾಪವನ್ನೂ ಮಾಡಿದ್ದರು. ಆದರೆ ಸುಬ್ಬಮ್ಮನವರಿಗೆ ಲೋಅರ್ ಸೆಕೆಂಡರಿ ಪರೀಕ್ಷೆಯನ್ನೂ ಮಾಡಲಾರದ ಚಂದ್ರುವಿಗೆ ಮಗಳನ್ನು ಕೊಡುವ ಇಷ್ಟವಾಗಲಿಲ್ಲ. ಈ ವಿಷಯದಲ್ಲಿ ಆಕೆ ಗಂಡನ ಅಭಿಪ್ರಾಯಕ್ಕೆ ತೀರ ವಿರುದ್ಧವಾಗಿದ್ದರು. ಗಂಡ ಹೆಂಡತಿ ಯರಿಗೆ ಮಾತು ನಡೆದು ಚಂದ್ರುವಿಗೆ ಎಲ್.ಎಸ್. ಪಾಸಾದರೆ ಎಸ್.ಎಸ್.ಎಲ್.ಸಿ. ವರೆವಿಗೂ ಓದಿಸಿ ಅವನನ್ನು ಅಳಿಯನನ್ನಾಗಿ ಮಾಡಿ ಕೊಳ್ಳಬೇಕೆಂದೂ, ಅಲ್ಲಿಯವರೆಗೆ ಚಂದ್ರು ಅವರ ಊರಿನಲ್ಲಿಯೇ ಓದಬೇಕೆಂತಲೂ ಒಂದು ನಿರ್ಧಾರಕ್ಕೆ ಬಂದಿದ್ದರು. ಆ ಧೈರ್ಯದ ಮೇಲೆ ಕಾಮಾಕ್ಷಿಯನ್ನು ಸ್ಕೂಲಿಗೆ ಕಳುಹಿಸುತ್ತಿದ್ದರು. ಅವಳಿಗೆ ೧೫ ವರ್ಷ ಆಗುವವರೆವಿಗೆ ಹೇಗೊ ತಳ್ಳಿಬಿಡಬಹುದೆಂದು ನಿಶ್ಚಯಿಸಿದ್ದರು. ಆ ಮದುವೆಯ ಮಾತನ್ನು ಚಂದ್ರಶೇಖರ ಹೊಂಚಿ ಕೇಳಿದ್ದನು. ಅವನಿಗೆ ಕಾಮಾಕ್ಷಿಯನ್ನು ಮದುವೆಯಾಗುವ ಆಸೆ ಇರಲಿಲ್ಲ. ಅವನ ದೃಷ್ಟಿ ಮೀನಾಕ್ಷಿಯ ಕಡೆ ಹರಿದಿತ್ತು. ಅವನ ಬಾಳಿನ ದೃಷ್ಟಿಯನ್ನು ಬದಲಾಯಿಸಿದ್ದವಳು ಚೆಲುವೆ ಮೀನಾ. ಯೌವನ ಕುಡಿಯಿಟ್ಟಿದ್ದ ಚಂದ್ರುವಿನಲ್ಲಿ ಮೀನಳಿಗಾಗಿ ಪ್ರೇಮ ಉತ್ಪನ್ನವಾಗಿದ್ದಿತು. . ಅವಳನ್ನು ಪಡೆಯಲು, ಅವಳನ್ನು ಮೆಚ್ಚಿಸಲು ಚಂದ್ರು ತನ್ನ ಬಾಳನ್ನು ತಿದ್ದಿ

ಕೊಂಡಿದ್ದನು. ತಾನು ಓದಿ ಪಾಸುಮಾಡಿ ಮೀನಳ ಹೊಗಳಿಕೆಗೆ ಪಾತ್ರನಾಗಬೇಕೆಂದು ಒಂದು ಪುರುಷಸಹಜವಾದ ಆಸೆ ಅವನಲ್ಲಿ ಅಂಕು ರಿಸಿದ್ದಿತು. ಮೀನಾ ಅವನ ಮೇಲೆ ತನ್ನ ಪ್ರಭಾವವನ್ನು ಬೀರಿ ಅವನನ್ನೂ ಒಬ್ಬ ಮನುಷ್ಯನನ್ನಾಗಿಸುತ್ತಿದ್ದಳು. ಚಂದ್ರು ಅವಳಿಗಾಗಿ ಅವಳ ಮುಗುಳ್ನಗೆಗಾಗಿ ಏನು ಬೇಕಾದರೂ ಮಾಡಲು ಸಿದ್ಧವಾಗಿದ್ದನು.

ಕತ್ತಲೆ ಆವರಿಸಿಕೊಂಡುಬರುತ್ತಿದ್ದಿತು. ಮೀನಾಕ್ಷಿ ಹೆದರಿ ಕೊಂಡು ಮನೆಗೆ ಹೋಗಲು ಎದ್ದು ನಿಂತಳು. ಚಂದ್ರುವಿಗೆ ಅವಳು ಸರಿಯಾದ ಸಮಾಧಾನ ಹೇಳಲಿಲ್ಲವೆಂದು ಅಸಮಾಧಾನವಾಗಿದ್ದಿತು. ಮತ್ತೆ ಮತ್ತೆ ಅವಳನ್ನು ಪೀಡಿಸಿದನು.

"ಮೀನಾ, ಕೋಪ ಬಂದಿತೆ ?"

"ಇಲ್ಲಪ್ಪ .... .... ...."

"ಮತ್ತೆ ಏಕೆ ಮುಖ ಮುಚ್ಚಿಕೊಂಡು ಬಿಟ್ಟೆ ? "

"ಇಲ್ಲವಲ್ಲಾ .... .... ...."

"ನಿನಗೆ ಕೋಪ ಬಂದರೆ ನಾನು ಮಾತೇ ಆಡೊಲ್ಲ ಮೀನಾಕ್ಷಿ."

"ಇಲ್ಲಾ ಕಾಣೋ .... ...."

ಮೀನಾ ನಿಜವಾಗಿ ಹೆದರಿದಳು. ತಕ್ಷಣ ಕೈತೆಗೆದು ಅವನನ್ನು ದಿಟ್ಟಿಸಿದಳು. ಚಂದ್ರು ಕೋಪಮಾಡಿಕೊಂಡವನಂತೆ ದೂರ ಹೋಗಿ ಕುಳಿತನು. ಮೀನಾಕ್ಷಿಯೇ ಕೇಳಿದಳು.

"ನೋಡಿದ್ಯಾ, ನಿನಗೇ ಈಗ ಕೋಪ ಬಂದು ಬಿಡ್ತು "

ಚಂದ್ರುವಿಗೆ ಸಮಾಧಾನವಾಯಿತು.

"ಮತ್ತೆ ನೀನು ನಾನು ಕೇಳಿದ್ದಕ್ಕೆ ಜವಾಬೇ ಹೇಳುವುದಿಲ್ಲ"

"ಹೇಳಿದೆನಲ್ಲಾ .... ...."

"ಸುಳ್ಳು ಹೇಳ್ತೀ. ನೀನೇನೂ ಹೇಳಲಿಲ್ಲ "

"ಹೋಗಲಿ ನನಗೆ ಮರೆತು ಹೋಯಿತು. ಇನ್ನೊಂದು ಸಾರಿ ಕೇಳು ಹೇಳ್ತೀನಿ. ಅದೇನು ಕೇಳ್ತಿಯೋ "

"ಏನೇ ಮೀನಾಕ್ಷಿ, ನನ್ನ ಕಂಡರೆ ನಿನಗೆ ಪ್ರೀತಿ ಇಲ್ಲವೇ ? "

"ಇದೆ, ನೀನು ಒಳ್ಳೆಯವನು ಅಂತ ನಾನು ಹೇಳೊಲ್ಲವೆ.

ನನಗೆ ಪಾಠ ಹೇಳಿಕೊಡುತ್ತೀಯ. ಇಲ್ಲೀಗೆಲ್ಲಾ ತಿರುಗಾಡಿಕೊಂಡು ಬರಲು ಕರೆದುಕೊಂಡು ಬರ್ತೀಯ. ಚಾಕಲೇಟ್ ಕೊಟ್ಟಿದೀಯ"

"ಮತ್ತೆ ನನ್ನ ಮದ್ವೆ ಮಾಡ್ಕೊಳೊಲ್ಲ ಅಂತೀಯ"

"ನಾನೆಲ್ಲಿ ಹೇಳಿದೆನೋ. ನೀನು ಕಾಮಾಕ್ಷೀನ ಮಾಡ್ಕೋತೀನಿ ಅಂತ ಹೇಳ್ಲಿಲ್ವೇ"

"ಅವಳನ್ನು ಮಾಡಿಕೊಳ್ದೇ ಹೋದ್ರೆ"

"ಅಮ್ಮನ್ನ ಕೇಳ್ಬೇಕು. ನನಗೆ ಹೆದರಿಕೆಯಾಗುತ್ತೆ. ಇಷ್ಟು ಬೇಗ ಮದುವೆ!"

"ಬೆಪ್ಪೆ, ಈಗಲೇ ಅಲ್ಲ ಕಣೇ. ಇನ್ನು ಎರಡು ವರ್ಷ ಆಗೋ ಹೊತ್ತಿಗೆ ನೀನೂ ದೊಡ್ಡವಳಾಗಿರುತ್ತೀ. ಆಗ"

"ನೋಡೋಣ.... ಬಾರೋ ಹೋಗೋಣ ಚಂದ್ರು, ಅಮ್ಮ ಹೊಡೀತಾಳೆ. ಕಾಮಾಕ್ಷೀಗೂ ಹೇಳ್ದೇ ಬಂದ್ಬಿಟ್ಟಿದೀನಿ."

ಚಂದ್ರುವಿಗೆ ಕೊಂಚ ಸಮಾಧಾನವಾಯಿತು. ಚಿತ್ರಗಳ ಪ್ರೇಮ ಕಥೆಗಳು ಅವನ ತಲೆಯಲ್ಲಿ ಅನೇಕ ಭಾವನೆಗಳನ್ನು ತುಂಬಿದ್ದಿತು. ಅವನಿಗೆ ಮೊದಲಿನಿಂದಲೂ ಒಂದು ಸ್ಟುಡಿಯೋ ತೆಗೆಯಬೇಕು, ತಾನು ಛಾಯಾಗ್ರಾಹಕನಾಗಬೇಕು ಎನ್ನುವ ಆಸೆ ತಲೆಯಲ್ಲಿ ಬೇರೂರಿದ್ದಿತು. ಅವನ ಭಾವನೆಗಳೆಲ್ಲಾ ಕಲೆತು ಅವನ ದೃಷ್ಟಿ ಪಟಲದಲ್ಲಿ ಸುಂದರ ಚಿತ್ರವಾಗಿ ಮೂಡಿಬಂದಿತು. ಚಂದ್ರು ತನ್ನ ಬಾಳಿನ ಹಗಲು ಗನಸನ್ನು, ತನ್ನ ಭಾವನೆಯನ್ನು ಉದ್ವಿಗ್ನನಾಗಿ ಹೇಳಿಕೊಂಡನು.

"ನಿನ್ನನ್ನು ಈ ಹೊಳೇ ಬಂಡೆ ಮೇಲೆ ನಿಲ್ಲಿಸಿ ಫೋಟೋ ತೆಗದ್ರೆ ಎಷ್ಟು ಚೆನ್ನಾಗಿರುತ್ತೆ ಗೊತ್ತೇ ಮೀನಾಕ್ಷಿ"

"ನಿನ್ಹತ್ರ ಫೋಟೋ ತೆಗೀತಾರಲ್ಲ ಪೆಟ್ಟಿಗೆ ಅದೆಲ್ಲಿದೆಯೋ?"

"ಕ್ಯಾಮರಾ ಅನ್ನೆ ಮಂಕೆ. ತಗೋತೀನಿ. ಈ ಸಾರಿ ಪಾಸ್ ಆದಮೇಲೆ ಗಲಾಟೆ ಮಾಡಿ ಒಂದು ತೆಗೆಸಿಕೋತೀನಿ. ಆಗ ಮೊದಲು ನಿನ್ನ ಫೋಟೋ ತೆಗೀತೀನಿ. ಆ ಕೆಲಸ ಎಷ್ಟು ಚೆನ್ನಾಗಿರುತ್ತೆ ಗೊತ್ತೆ ಮೀನಾಕ್ಷಿ. ನಾನು ಒಂದು ಸ್ಟುಡಿಯೋ ತೆಗೆದು ದುಡ್ಡು ಸಂಪಾದಿಸ್ತೀನಿ. ನಂಗೆ ತುಂಬಾ ದುಡ್ಡು ಬೇಕು ಮೀನಾ. ದುಡ್ಡಿದ್ದವನೇ

ಈ ಪ್ರಪಂಚದಲ್ಲಿ ದೊಡ್ಡಪ್ಪ. ದುಡ್ಡಿದ್ರೆ ಎಲ್ಲಾ ನಮ್ಮ ಕಾಲಿಗೆ ಬೀಳ್ತಾರೆ. ದುಡ್ಡಿದ್ದರೆ ಯಾವ ಸುಖ ಬೇಕಾದ್ರೂ ಸಿಕ್ಕುತ್ತೆ ಮೀನಾ. ನೋಡು ಈಗ ನನ್ನ ಕೈಯ್ಯಲ್ಲಿ ದುಡ್ಡಿಲ್ಲ. ನಮ್ಮಪ್ಪನಿಗೆ ಬರೋ ಇಪ್ಪತ್ತೈದು ರೂಪಾಯಿ ನಮ್ಮ ಹೊಟ್ಟೆಗೆ ಸರಿಹೋಗುತ್ತೆ. ಅವರು ತಾನೇ ಕ್ಯಾಮರಾಗೆ ಹೇಗೆ ದುಡ್ಡು ಕೊಡುತ್ತಾರೆ? ನಂಗೋ ಕ್ಯಾಮರಾ ಅಂದ್ರೆ ತುಂಬಾ ಆಸೆ ಹಾವಂಗಾದರೂ ಹೇಳಿ ಖಂಡಿತ ಈ ಸಾರಿ ಪಾಸಾದ ತಕ್ಷಣ ತೆಗೆಸ್ಕೋತೀನಿ. ಆಗ ಬರಿಯ ನಿನ್ನ ಫೋಟೋಗಳನ್ನೇ ತೆಗೀತೇನೆ"

"ಕಾಮಾಕ್ಷೀಗೆ .... .... ...."

"ಆಮೇಲೆ"

ಮೀನಾಕ್ಷಿಯ ಮುಖ ಸಂತೋಷದಿಂದ ಅರಳಿತು. ಚಂದ್ರುವಿನ ಬಗ್ಗೆ ಅವಳ ಹೃದಯದಲ್ಲಿ ಅಭಿಮಾನ ಮೂಡಿ ಬಂದಿತು. ಅವನ ಪ್ರತಿಯೊಂದು ಪ್ರೀತಿಯ ಮಾತುಗಳೂ, ಪ್ರತಿಯೊಂದು ಆಶ್ವಾಸನೆ, ಭರವಸೆಗಳೂ ಅವರಿಬ್ಬರ ಮಧುರ ಬಾಂಧವ್ಯಕ್ಕೆ ಒಂದರ ಮೇಲೊಂದರಂತೆ ಬಿಗಿಯಾದ ಗಂಟುಗಳನ್ನು ಹಾಕುತ್ತಿದ್ದಿತು. ಆ ಗಂಟುಗಳನ್ನು ಎಂದೂ ಯಾರೂ ಬಿಡಿಸದಾದರು.

ಮೀನಾಕ್ಷಿಗೆ ತಕ್ಷಣ ಕತ್ತಲೆಯಾಗುತ್ತಿರುವ ಅರಿವಾಯಿತು. ಸುಬ್ಬಮ್ಮನವರ ರುದ್ರಾವತಾರವನ್ನು ನೆನೆಸಿಕೊಂಡು ಮೈನಡುಗಿತು. ತಕ್ಷಣ ಎದ್ದು ನಿಂತು ಹೆದರಿಕೆಯ ಧ್ವನಿಯಲ್ಲೇ ಕೇಳಿಕೊಂಡಳು.

"ಬಾರೋ ಚಂದ್ರು ಹೋಗೋಣ. ಕತ್ತಲಾಗಿ ಹೋಯಿತು. ಹೆದರಿಕೆಯಾಗುತ್ತೆ. ಅಮ್ಮ ರೇಗಿಬಿಡ್ತಾಳೆ ಕಣೋ"

ಇಬ್ಬರೂ ಬೇಗ ಬೇಗ ಮನೆಗೆ ಬಂದರು. ದಾರಿಯಲ್ಲಿ ಮೀನಾಕ್ಷಿ ಚಾಕಲೇಟ್ ಮುಗಿಸಿ ಇನ್ನರ್ಧವನ್ನು ಮುಚ್ಚಿಟ್ಟುಕೊಂಡಳು.

ಮನೆಗೆಬಂದ ತಕ್ಷಣ ಮೀನಾಕ್ಷಿಗೆ ಸುಬ್ಬಮ್ಮನವರ ಉಗ್ರಾವತಾರ ನೋಡಿ ಹೆದರಿಕೆಯಾಯಿತು. ಸುಬ್ಬಮ್ಮನವರು ದೇವರ ದೀಪ ಹಚ್ಚಿ ಹೊರಗೆ ಬಂದವರು ಇವರನ್ನು ನೋಡಿದ ತಕ್ಷಣ ಕಣ್ಣು ಮೊದಟಿಸಿ ಕೇಳಿದರು.

"ಏನೇ ಎಲ್ಲೀಗೆ ಹೋಗಿದ್ಯೆ ಅವನ ಜತೇಲಿ ?"

"ಎಲ್ಲೂ ಇಲ್ಲಮ್ಮ. ಇಲ್ಲೇ ದೇವಸ್ಥಾನಕ್ಕೆ ಹೋಗಿದ್ವಿ"

"ದೇವಸ್ಥಾನವಂತೆ ದೇವಸ್ಥಾನ. ಕಾಮಾಕ್ಷೀನ ಬಿಟ್ಟು ಇಬ್ಬರೂ ದೇವಸ್ಥಾನಕ್ಕೆ ಹೋಗಿದ್ರೇನೋ ಪಾಪ, ದೇವರ ದರ್ಶನಕ್ಕೆ. ನಿಜ ಹೇಳೇ, ಎಲ್ಲೀಗೆ ಹೋಗಿದ್ದೆ, ಗಂಡುಬೀರಿ ?"

ಸುಬ್ಬಮ್ಮ ಫಟಾರನೆ ಮೀನಾಕ್ಷಿಯ ಕೆನ್ನೆಗೆ ಒಂದೇಟು ಬಿಗಿದರು. ಚಂದ್ರುವಿಗೆ ಅದನ್ನು ನೋಡಲಾಗಲಿಲ್ಲ.

"ಎಲ್ಲೂ ಇಲ್ಲ ಅತ್ತೆ. ದೇವಸ್ಥಾನಕ್ಕೆ ಹೋಗಿದ್ದೆವು. ಅಲ್ಲಿ ಯಾವುದೋ ಊರಿಂದ ಜನ ಬಂದಿದ್ದಾರೆ. ನೋಡೋಕೆ ಹೋಗಿದ್ದೆವು. ಅವಳು ಬರ್ತೀನಿ ಅನ್ನಲಿಲ್ಲ. ನಾನೇ ಕರೆದುಕೊಂಡು ಹೋದೆ. ಹೊತ್ತಾಗ್ಹೋಯ್ತು" ಎಂದು ಹೇಳಿದ.

ಸುಬ್ಬಮ್ಮನವರು ಅವನ ಮಾತಿಗೆ ಏನೂ ಹೇಳಲಿಲ್ಲ. ಅವನು ಅವರ ಭಾವೀ ಅಳಿಯನಾಗಿದ್ದನು. ಅದಷ್ಟು ಸಮಾಧಾನ ಮಾಡಿಕೊಂಡು ಆದರೂ ಕೊಂಚ ಖಾರವಾಗಿ

"ನೀನು ಹಾಗೆಲ್ಲಾ ಅವಳ ಜೊತೆ ಅಲೀಬಾರದಪ್ಪ. ನೋಡ್ದವ್ರು ಏನಂದ್ಕೋತಾರೆ. ಕಾಮಾಕ್ಷೀನ ಬಿಟ್ಟು ಅವಳು ಎಲ್ಲೀಗೂ ಹೋಗಕೂಡ್ದು" ಎಂದು ಒಳಗೆ ಹೊರಟು ಹೋದರು. ಚಂದ್ರುವಿಗೂ ಮೀನಾಕ್ಷಿಯ ಅಳುವನ್ನು ನೋಡಿ ಕಣ್ಣಲ್ಲಿ ನೀರು ಬಂದಿತು. ತನ್ನದೇ ತಪ್ಪು ಎಂದುಕೊಂಡು ತನ್ನನ್ನೇ ಬೈದುಕೊಂಡನು. ಕಾಮಾಕ್ಷಿ ಎದುರಿಗಿದ್ದರೂ, ಯಾವ ಮಾತನ್ನೂ ಆಡಲಿಲ್ಲ. ತನ್ನನ್ನು ಬಿಟ್ಟು ಹೋದರೆಂದು ಅವಳಿಗೂ ಕೋಪ ಬಂದಿದ್ದಿತು. ಜೊತೆಗೆ ಚಂದ್ರು ತನ್ನ ಗಂಡನಾಗುವವನು. ಈಗ ಅವನೆದುರಿಗೆ ನಿಂತುಕೊಳ್ಳುವುದಕ್ಕೂ ಅವಳಿಗೆ ನಾಚಿಕೆಯಾಗುತ್ತಿದ್ದಿತು.

ಶೀನಿ ಆಟಕ್ಕೆ ಹೋಗಿದ್ದವನು ಮನೆಗೆ ಬಂದ. ಮೀನಾಕ್ಷಿ ಅಳುತ್ತಿದ್ದುದನ್ನು ನೋಡಿ ಅವನ ಮುಖ ಸಪ್ಪಗಾಯಿತು. ಅವಳ ಹತ್ತಿರ ಹೋಗಿ "ಏಕೇ ಅಳ್ತೀ, ಮೀನಾ" ಎಂದನು. ಮೀನಾಕ್ಷಿಗೆ ಏನು ಹೇಳುವುದಕ್ಕೂ ಭಯವಾಯಿತು. ಸುಬ್ಬಮ್ಮನವರ ಧ್ವನಿ ಗುಡು

ಗಿತು : " ನಡ್ಯೋ ಒಳಕ್ಕೆ, ಕೈಕಾಲು ತೊಳೆದುಕೊಂಡು ದೇವರಿಗೆ ನಮಸ್ಕಾರ ಹಾಕು. ಬಂದ್ಬಿಟ್ಟೆ ಸಮಾಧಾನ ಮಾಡೋಕೆ " ಶೀನು ಒಳಗೆ ಹೊರಟು ಹೋದನು. ಮೀನಾಕ್ಷಿಯ ವಿಚಾರದಲ್ಲಿ ಮಾತ್ರ ತಾನು ತಲೆಹಾಕಿದರೆ ಏಟು ತಿನ್ನಬೇಕಾಗುವುದೆಂದು ಅವನಿಗೆ ತಿಳಿದಿದ್ದಿತು. ಬಾಕಿ ವಿಚಾರದಲ್ಲೆಲ್ಲಾ ಮನೆಯಲ್ಲಿ ಅವನದೇ ಮಾತು. ಅವನದೇ ಹಟ. ಮೀನಾಕ್ಷಿ ಕಣ್ಣೊರಸಿಕೊಂಡು ಸುಬ್ಬಮ್ಮನವರಿಗೆ ಸಹಾಯ ಮಾಡಲು ಒಳಗೆ ಹೊರಟು ಹೋದಳು.

ಚಂದ್ರು ಕೈ ಕಾಲು ತೊಳೆದುಕೊಂಡು ಸಂಧ್ಯಾವಂದನೆಯ ಶಾಸ್ತ್ರಮಾಡಿ ರೂಮಿಗೆ ಓದಿಕೊಳ್ಳುವುದಕ್ಕೆ ಹೋದನು. ಆ ದಿನವೆಲ್ಲ ಅವನಿಗೆ ಓದು ಸಾಗಲಿಲ್ಲ. ಮೀನಾಕ್ಷಿಯದೇ ಯೋಚನೆ. ಅವಳಿಗೆ ಏಟು ಬಿದ್ದಿದ್ದು ತನ್ನಿಂದಲೇ ಎಂದು ತನ್ನನ್ನು ಬೈದುಕೊಂಡನು. ಮೀನಾಕ್ಷಿಗೆ ಆದ ನೋವನ್ನು ತಾನೂ ಅನುಭವಿಸಬೇಕೆಂದು ರೂಲು ದೊಣ್ಣೆಯಿಂದ ತನ್ನ ಅಂಗೈ ಮೇಲೆ ಜೋರಾಗಿ ಏಟು ಹೊಡೆದುಕೊಂಡ ಮೇಲೇ ಅವನ ಹೃದಯಕ್ಕೆ ಶಾಂತಿಯಾಯಿತು.

ಮೀನಾಕ್ಷಿ ಎಲ್ಲರ ಊಟವಾದ ಮೇಲೆ ತಟ್ಟೆ ತೊಳೆಯಲು ಹಿತ್ತಲಿಗೆ ಹೋದಳು. ಶೀನಿ ಅಲ್ಲಿ ಕೈ ತೊಳೆಯುತ್ತಿದ್ದನು. ಮೀನಾಕ್ಷಿಯನ್ನು ನೋಡಿ ಮತ್ತೆ ಕೇಳಿದನು.

" ಏಕೆ ಮೀನಾ ಆಗ ಅಳುತ್ತಿದ್ದೆ ? "

" ಅಮ್ಮ ಚಂದ್ರುವಿನ ಜೊತೆ ಹೊಳೆಗೆ ಹೋಗಿದ್ದೆ ಅಂತ ಹೊಡೆದರು."

ಶೀನಿಗೆ ಅವನ ತಾಯಿ ಮೀನಾಕ್ಷಿಯನ್ನು ಹೊಡೆಯುತ್ತಾರೆ ಎಂದು ತಿಳಿದಿದ್ದಿತ್ತು. 'ಆದರೆ ಏಕೆ ಹೊಡೆಯುತ್ತಾರೆ ಎಂದು ತಿಳಿದಿರಲಿಲ್ಲ ತಾಯಿಗೆ ವಿರೋಧವಾಗಿ ಮಾತನಾಡುವುದಕ್ಕೂ ಅವನಿಗೆ ಇಷ್ಟವಾಗುತ್ತಿರಲಿಲ್ಲ. ತಾಯಿಯ ಪ್ರೇಮ ಒಂದೇ ಅವನಿಗೆ ತಿಳಿದಿದ್ದುದು. ಅವರು ಏನು ಮಾಡಲಿ ಎಲ್ಲಾ ಒಳ್ಳೆಯದಕ್ಕೇ ಎಂದು ಅವನ ಭಾವನೆ. ಜೊತೆಗೆ ಮೀನಾ ತನ್ನ ತಾಯಿಯ ಮಗಳಲ್ಲ. ಅವಳನ್ನು ಹಾಗೆ ಹೊಡೆಯಬಹುದೇನೋ. ಅದು ಲೋಕದ ರೀತಿ

ಯೇನೋ ಎನ್ನಿಸುತ್ತಿತ್ತು ಅವನಿಗೆ. ಆದರೂ ಅವನ ಪುಟ್ಟ ಹೃದಯದಲ್ಲಿ ಅಪಾರವಾದ ಪ್ರೇಮವಿದ್ದಿತು. ಆದರೆ ಅದು ತಾಯಿಯ ಪ್ರೇಮದೆದುರು ಅಣುವಾಗಿ ಹೋಗುತ್ತಿದ್ದಿತು. ತಾಯಿಯ ಪ್ರೇಮವನ್ನು ಮೀರಿ ಅವನ ಪ್ರೀತಿ ಮೀನಾಕ್ಷಿಯ ಕಡೆ ಹರಿಯಲಾರದೇ ಹೋಗುತ್ತಿದ್ದಿತು. ಶೀನು ತನಗೆ ತೋಚಿದ ಸುಲಭವಾದ ಉಪಾಯವನ್ನು ಹೇಳಿಬಿಟ್ಟನು.

"ನೀನು ಚಂದ್ರುವಿನ ಜೊತೆ ಹೋಗಲೇಬೇಡ. ಅಮ್ಮ ಆಗ ನಿನ್ನನ್ನು ಹೊಡೆಯುವುದೇ ಇಲ್ಲ."

ಮೀನಾ ತಲೆ ಅಲ್ಲಾಡಿಸಿದಳು.

"ಇಲ್ಲಾಪ್ಪ, ನಾನು ಅವನು ಕರೆದಾಗ ಉಹ್ಞು ಅಂತ ಹೇಳುವುದಕ್ಕೇ ಆಗುವುದಿಲ್ಲ. ಚಂದ್ರುವನ್ನು ಕಂಡರೆ ನನಗೆ ತುಂಬ ಇಷ್ಟ. ಅವನು ನನ್ನನ್ನು ಅಲ್ಲೆಲ್ಲಾ ಸುತ್ತಾಡಿಸಿಕೊಂಡು ಬರಲು ಕರೆದುಕೊಂಡು ಹೋಗುತ್ತಾನೆ. ನನಗೆ ಚಾಕಲೇಟು ಕೊಡುತ್ತಾನೆ. ಅವನು ತುಂಬ ಒಳ್ಳೆಯವನು ಕಾಣೊ ಶೀನಿ. ಇರು ನಿಂಗೂ ಕೊಡ್ತೀನಿ ಚಾಕಲೇಟು. ನಿನಗಾಗೇ ತೆಗೆದಿಟ್ಟಿದ್ದೀನಿ. ಶೀನಿ, ಅಮ್ಮನಿಗೆ ಇದೆಲ್ಲ ಹೇಳಬೇಡ ಕಾಣೋ. ಹೊಡೆಯುತ್ತಾಳೆ. ಹೇಳಿದ್ರೆ ನನ್ನಾಣೆ."

ಶೀನಿ ಆಣೆಯಿಟ್ಟು ಅಮ್ಮನಿಗೆ ಹೇಳುವುದಿಲ್ಲವೆಂದನು. ಮೀನಾಕ್ಷಿ ತಾನು ಬಚ್ಚಿಟ್ಟುಕೊಂಡಿದ್ದ ಚಾಕಲೇಟನ್ನು ಅವನಿಗ ಕೊಟ್ಟಳು. ಶೀನಿ ಅದನ್ನು ಕಚ್ಚಿ ತಿಂದು ಕಣ್ಣರಳಿಸಿ, "ಎಷ್ಟು ಚೆನ್ನಾಗಿದ್ಯೇ ಮೀನಾ. ನೀನೆಷ್ಟು ಒಳ್ಳೆಯವಳೇ" ಎಂದನು. ಮೀನಾ ಹೊತ್ತಾಯಿತೆಂದು ಬೇಗಬೇಗ ತಟ್ಟೆ ತೊಳೆದು "ಅವನು ಕೊಟ್ಟಾಗಲ್ಲೆಲ್ಲಾ ನಿನಗೆ ಇನ್ನೂ ಕೊಡ್ತೀನಿ" ಎಂದು ಶೀನಿಗೆ ಹೇಳಿ ತಟ್ಟೆಗಳನ್ನು ಎತ್ತಿಕೊಂಡು ಒಳಗೆ ಹೋದಳು.

ಆ ವರ್ಷ ಚಂದ್ರುವಿಗೆ ಪಾಸಾಗಿ ಹೋಯಿತು. ಮೀನಾಕ್ಷಿಗೆ ಬಹಳ ಆನಂದವಾಯಿತು. "ಚಂದ್ರು ಪಾಸ್ ಅತ್ತೇ, ಚಂದ್ರು ಪಾಸ್ ಅತ್ತೆ" ಎಂದು ಸುಬ್ಬಮ್ಮನವರ ಹತ್ತಿರ ಓಡಿಹೋಗಿ ಹೇಳಿದಳು. ಸುಬ್ಬಮ್ಮ ಕಣ್ಣು ಮೆದಟಿಸಿ "ನಿಂಗೇನೇ ಅವನಿಗೆ ಪಾಸಾದರೆ. ನೀನೇಕೆ

ಹೀಗೆ ಕುಣೀತೀಯ ನಾಯಕ್ನಾನೀ ಹಾಗೆ. ಹೋಗೇ ಒಳ್ಗೆ. ಹಿತ್ತಲಲ್ಲಿ ಒಣಗ್ಹಾಕಿರೋ ಸಂಡಿಗೇನ ಒಳಕ್ಕೆ ತೊಗೊಂಡ್ಬಂದಿಡು. ಮಳೇ ಬರೋ ಹಾಗಿದೆ" ಎಂದರು. ಮೀನಾಕ್ಷಿ ಪೆಚ್ಚು ಮುಖ ಹಾಕಿಕೊಂಡು ಹಿತ್ತಲಿಗೆ ಹೋದಳು.

ಆ ದಿನ ಮನೆಯಲ್ಲಿ ಎಲ್ಲರಿಗೂ ಸಂತೋಷವಾಗಿದ್ದಿತು. ಶಾಮಣ್ಣನವರ ತಂಗಿಯೂ ಮಕ್ಕಳನ್ನು ಕರೆದುಕೊಂಡು ಬಂದು ಎಂಟು ದಿವಸಗಳಾಗಿದ್ದಿತು. ಶಾಮಣ್ಣನವರ ಸಂತೋಷ ಹೇಳತೀರದು. ತಮ್ಮ ಹತ್ತಿರ ಇದ್ದುಕೊಂಡು ಅವನು ಪಾಸು ಮಾಡಿಬಿಟ್ಟನೆಂದು ತಂಗಿಯ ಹತ್ತಿರ ಜಂಭ ಹೇಳಿಕೊಂಡರು. ಸುಬ್ಬಮ್ಮನವರಿಗೆ ಕಡೆಗೂ ಅವನು ಎಲ್. ಎಸ್. ಪಾಸ್ ಮಾಡಿಬಿಟ್ಟನೆಂದು ಸಮಾಧಾನವಾಯಿತು. ಅವನ ಅಳಿಯತನ ಅರ್ಧ ಸ್ಥಿರವಾದಂತಾಯಿತು. ಶಾಮಣ್ಣನವರೇ ಅವನ ಮುಂದಿನ ಓದಿಗೆ ಸಹಾಯ ಮಾಡುವುದಾಗಿ ಒಪ್ಪಿಕೊಂಡರು. ಈ ಮಾತಿಗೆ ಸುಬ್ಬಮ್ಮನವರ ಅಂಗೀಕಾರ ಮುದ್ರೆಯೂ ಬಿದ್ದಿತು.

ಪಾಸಾದ ಉತ್ಸಾಹದಲ್ಲಿ ಚಂದ್ರು ಮಾವನಿಗೆ ಹೇಳಿ ಒಂದು ಕ್ಯಾಮರಾ ತೆಗೆಸಿಕೊಂಡನು. ಆ ಇಪ್ಪತ್ತುರೂಪಾಯಿನ ಕೊಡಕ್ ಕ್ಯಾಮರಾವನ್ನು ತೆಗೆದುಕೊಂಡದಿನ ಅವನ ಉತ್ಸಾಹ ಹೇಳತೀರದು. ಅವನು ಅದುವರೆವಿಗೆ ಸ್ನೇಹಿತರನ್ನಾಶ್ರಯಿಸಿ, ಫೋಟೋಗ್ರಾಫರುಗಳನ್ನಾಶ್ರಯಿಸಿ ಕಲಿತುಕೊಂಡಿದ್ದ ವಿದ್ಯೆಯ ಪ್ರದರ್ಶನಕ್ಕೆ ಆ ಕ್ಯಾಮರಾ ಒಂದು ಸಾಧನವಾಯಿತು. ಅವನು ತನ್ನ ಮಾತನ್ನು ಮರೆಯಲಿಲ್ಲ. ಮೊದಲ ಫೋಟೋ ಮೀನಾಕ್ಷಿಗೇ ತೆಗೆದನು. ಆದರೆ ನದಿಯ ದಂಡೆಯ ಮೇಲಲ್ಲ. ಗುಟ್ಟಾಗಿ, ಮನೆಯ ಹಿತ್ತಲಿನ ತುಳಸಿಗಿಡದ ಬಳಿ ನಿಲ್ಲಿಸಿ! ಆಮೇಲೆ ಕಾಮಾಕ್ಷಿಗೆ. ಶಾಮಣ್ಣ, ಸುಬ್ಬಮ್ಮನವರೂ ಉತ್ಸಾಹದಿಂದ ಫೋಟೋ ತೆಗೆಸಿಕೊಂಡುಬಿಟ್ಟರು. ಫೋಟೋಗಳೆಲ್ಲ ಬಹಳ ಚೆನ್ನಾಗಿ ಬಂದಿದ್ದುವು. ಅವುಗಳಲ್ಲಿ ಸುಂದರವಾದ ಮೀನಾಕ್ಷಿಯ ಚಿತ್ರ ಮಟ್ಟಿಗೆ ಚಂದ್ರುವಿಗೆ ಬಹಳ ಪ್ರಿಯವಾಯಿತು. ಹೇಗೋ ಹೊಂಚುಹಾಕಿ ಕೊಟ್ಟಿಗೆಯ ಬಳಿ ಮೀನಳನ್ನು ಸಂಧಿಸಿ ಹೇಳಿದನು

"ಮೀನಾ ನಿನ್ನ ಫೋಟೋ ನೋಡಿದೆಯಾ ಎಷ್ಟು ಚೆನ್ನಾಗಿದೆ"

"ಹೌದು ಕಣೋ ಚಂದ್ರು, ತುಂಬ ಚೆನ್ನಾಗಿದೆ. ಅದನ್ನು ನಂಗೆ ಕೊಡೋ"

"ನಿಂಗೇಕೇ ಆ ಫೋಟೋ. ನಿನ್ನ ಮುಖ ಕನ್ನಡಿಯಲ್ಲಿ ಕಾಣುತ್ತಲ್ಲ. ಇದು ನಂಗೆ ಬೇಕು. ಅದನ್ನು ಯಾವಾಗಲೂ ನನ್ನ ಪೆಟ್ಟಿಗೆಯಲ್ಲಿ ಇಟ್ಟುಕೊಂಡಿರುತ್ತೇನೆ."

ಅಷ್ಟರಲ್ಲಿ ಸುಬ್ಬಮ್ಮನವರು ಅಡಿಗೆಮನೆಯಿಂದಲೇ "ಲೇ ಮೀನಾ ಆಯ್ತೇನೇ ಅಕ್ಕಚ್ಚು ಬೆರಸಿದ್ದು, ಹರಿವಾಣ ತಗೊಂಡು ಬಾರೇ" ಎಂದು ಕೂಗಿಕೊಂಡರು. ಮೀನಾ ಹುಲಿಯ ಘರ್ಜನೆಯನ್ನು ಕೇಳಿ ಬೆದರಿದ ಜಿಂಕೆಯಂತೆ ಹರಿವಾಣವನ್ನು ತೆಗೆದುಕೊಂಡು ಒಳಗೆ ಓಡಿ ಹೋದಳು.

ದಿವಸಗಳು ಆನಂದದಿಂದ ಕಳೆದುಹೋದವು. ಚಂದ್ರುವಿನ ರಜ ಮುಗಿಯುತ್ತ ಬಂದಿತು. ಅವನು ಮೈಸೂರಿಗೆ ಹೋಗಿ ಹೈಸ್ಕೂಲು ಸೇರಬೇಕಾಗಿತ್ತು. ತಾಯಿಯೊಡನೆ ಊರಿಗೆ ಹೊರಡಬೇಕಾಗಿ ಬಂದಿತು. ಶಾಮಣ್ಣನವರು ಚಂದ್ರುವನ್ನು ಕರೆದು ಬುದ್ಧಿ ಹೇಳಿದರು.

"ಚಂದ್ರು, ನೀನು ಇನ್ನುಮೇಲೆ ಆಟ ಅಲೆತಗಳನ್ನು ಬಿಟ್ಟು ಚೆನ್ನಾಗಿ ಓದಬೇಕು. ಎಸ್.ಎಸ್.ಎಲ್.ಸಿ ಬೇಗ ಪಾಸುಮಾಡಿಬಿಟ್ಟರೆ ನಮ್ಮ ಕಾಮಾಕ್ಷೀನ ಕೊಟ್ಟು ಮದುವೆ ಮಾಡ್ತೀವಿ. ಆಮೇಲೆ ನೀನೂ ಬಂದು ಇಲ್ಲೇ ಇದ್ದುಬಿಡು" ಎಂದರು.

ಚಂದ್ರು ಅದೇ ಮೊದಲಸಾರಿ ತನ್ನ ಮಾವನ ಬಾಯಿಂದ ಕಾಮಾಕ್ಷಿಯ ಮತ್ತು ತನ್ನ ಮದುವೆಯ ಮಾತು ಕೇಳಿದ್ದು. ಅವನಿಗೆ ಆ ಮದುವೆಯ ಮಾತು ಕೇಳಿ ಆನಂದವಾಗಲಿಲ್ಲ. ಅವನ ಚಿತ್ತ ಸರ್ರನೆ ಮೀನಾಕ್ಷಿಯ ಕಡೆ ಹರಿಯಿತು. ತನ್ನ ಮದುವೆಯನ್ನು ಮೀನಾಕ್ಷಿಯೊಡನೆ ಬೆರಸಿ ನೋಡಿದನು. ಆಗ ಅವನ ಮುಖ ಪ್ರಫುಲ್ಲವಾಯಿತು. ಮೀನಾಕ್ಷಿ ಚಂದ್ರುವಿನ ತಾಯಿಯೊಡನೆ ಅವರ ಕೈಮಗುವನ್ನು ಎತ್ತಿಕೊಂಡು ಅಲ್ಲಿಯೇ ನಿಂತಿದ್ದಳು. ಚಂದ್ರು ಅರೆಕ್ಷಣ ಅವಳನ್ನೇ ನೋಡಿದನು. ಮೀನಾಕ್ಷಿ ಮುಸಿನಕ್ಕಳು. ಊರಿಗೆ ಹೊರಡುವುದಕ್ಕೆ ಕೊಂಚ ಹೊತ್ತಿಗೆ ಮುಂಚೆ ಚಂದ್ರು ಹೊಂಚುಹಾಕಿ ಮೀನಾಕ್ಷಿಯ

ಬಳಿಗೆ ಹೋದನು. ಮೀನಾಕ್ಷಿ ಕೊಟ್ಟಣ ಕುಟ್ಟಿಸುವ ಆಳಿಗೆ ಭತ್ತ ಕೊಡಲು ಏಣಿಯಮೇಲೆ ಹತ್ತಿ ಕಣಜದಿಂದ, ಕೊಳಗದಲ್ಲಿ ಭತ್ತತೆಗೆದು ತೆಗೆದು ಹೆಡಿಗೆಗೆ ತುಂಬುತ್ತಿದ್ದಳು. ಚಂದ್ರು ಹಿಂದಿನಿಂದ "ಮೀನಾ" ಎಂದನು. ಮೀನಾಕ್ಷಿ ಸರ್ರನೆ ತಿರುಗಿ ನೋಡಿದಳು. ಭತ್ತ ತುಂಬಿದ ಕೊಳಗ ಕಣಜದಲ್ಲೇ ಉಳಿಯಿತು. ಚಂದ್ರು ದುಃಖದಿಂದ ಹೇಳಿದನು.

"ಮೀನಾ, ನಾನು ಊರಿಗೆ ಹೋಗುತ್ತೇನೆ."

"ಹಾಗಾದ್ರೆ ಹೊರಟು ಹೋಗ್ತೀಯಾ ಚಂದ್ರು. ನಂಗೆ ತುಂಬ ಬೇಜಾರಾಗುತ್ತೆ ಕಾಣೋ"

ಮೀನಾಕ್ಷಿ ಕಣ್ಣಲ್ಲಿ ತಕ್ಷಣ ನೀರೂರಿತು. ಮೀನಾ ಬಿಕ್ಕಿ ಬಿಕ್ಕಿ ಅತ್ತಳು. ಚಂದ್ರುವಿಗೆ ಕರುಳು ಕಿವುಚಿದಂತಾಯಿತು. ಅಕ್ಕರೆಯಿಂದ ಸಮಾಧಾನ ಮಾಡಿದ್ದನು.

"ಇಲ್ಲ ಮೀನಾ. ನಾನು ಹೋಗ್ಲೇ ಬೇಕಾಗಿದೆ. ಓದ್ಬೇಡ್ವ ? ನಿನ್ನ ಬಿಟ್ಟು ಹೋಗೋಕೆ ನಂಗೂ ಬೇಜಾರಾಗುತ್ತೆ. ಆದ್ರೆ ಇಲ್ಲಿ ಹೈಸ್ಕೂಲು ಇಲ್ವಲ್ಲಾ. ಅಳ್ಬೇಡ ಮೀನಾ. ನಾನು ಆಗಾಗ ಬರ್ತೀನಿ. ಶ್ರೀರಂಗಪಟ್ಟಣ ಏನು ಬಹಳ ದೂರ ಇದ್ಯಾ. ಅಳ್ಬೇಡ ಮೀನಾ."

ಮೀನಾಗೆ ಆ ಭರವಸೆಯಿಂದ ಕೊಂಚ ಸಮಾಧಾನವಾಯಿತು. ಕತ್ತೆತ್ತಿ "ಖಂಡಿತವಾಗಿ ಬರ್ತೀಯಾ ಚಂದ್ರು.... " ಎಂದಳು.

"ಖಂಡಿತ ಬರ್ತೀನಿ ಮೀನಾ, ನಿನ್ನ ನೋಡೋಕೆ"

ಅಷ್ಟರಲ್ಲಿ ಸುಬ್ಬಮ್ಮನವರ ಗುಡುಗಿನ ಶಬ್ದ ಕೇಳಿಸಿತು.

"ಲೇ, ಮೀನಾ ಆಯ್ತೇನೇ. ಎಷ್ಟೊತ್ತೇ ಒಂದಿಪ್ಪತ್ತೈದು ಕೊಳಗ ಭತ್ತ ಅಳ್ಯೋದು"

ಸುಬ್ಬಮ್ಮನವರು ಆರ್ಭಟಿಸಿಕೊಂಡು ಕಣಜದ ಕೋಣೆಗೆ ಬಂದೇ ಬಿಟ್ಟರು. ಮೀನಾ ಸರ್ರನೆ ಬಗ್ಗಿ ಕೊಳಗದಲ್ಲಿದ್ದ ಭತ್ತ ತೆಗೆದುಕೊಂಡು ಹೆಡಿಗೆಗೆ ಸುರಿದು, ಮತ್ತೆ ತುಂಬಿಕೊಂಡಳು. ಚಂದ್ರು ಹೆಡಿಗೆಯನ್ನು ಹಿಡಿದುಕೊಂಡು ಭತ್ತ ಸರಿಮಾಡುವವನಂತೆ "ಹ್ನು, ಎಷ್ಟಾಯ್ತು ಮೀನಾ............" ಎಂದು ಮೀನಳನ್ನು ಕೇಳಿದನು. 'ಇಪ್ಪತ್ತು'

ಎಂದು ಮೀನಾ ಬೇಗ ಬೇಗ ಭತ್ತವನ್ನು ಅಳೆಯುತ್ತ "ಇಪ್ಪತ್ತೊಂದು, ಇಪ್ಪತ್ತೆರಡು" ಎಂದು ಎಣಿಸುತ್ತಿದ್ದಳು. ಸುಬ್ಬಮ್ಮನವರು ಚಂದ್ರು ವನ್ನು ನೋಡಿ

"ನೀನೇಕಪ್ಪಾ ಬಂದೆ? ಪಾಪ ಊರಿಗೆ ಹೊರಟು ನಿಂತಿದ್ದೀಯೆ. ಹೊತ್ತಾಯ್ತು. ಪಾರ್ವತಿ ಕಾದಿದಾಳೆ. ಲೇ ಏನೇ ಸಿಂಗೇನೇ ಬಂದಿದೆ ಧಾಡಿ. ಅವನ್ನೇಕೆ ಕೂಗ್ದೆ ಭತ್ತ ಅಳ್ಯೋಕೆ"

"ಇಲ್ಲ ಅತ್ತೆ, ಅವ್ನು ಕೂಗ್ಲಿಲ್ಲ, ನಾನೇ ಬಂದೆ. ಹೊರಗೆ ಕೆಂಚ ಕೂಕ್ಕೋತಿದ್ದ. ಭತ್ತ ತಗೊಂಡು ಹೋಗಿ ಕೊಡೋಣ ಅಂತ ಬಂದೆ."

ಎಂದು ಚಂದ್ರು ಅತ್ತೆಯ ಬಾಯಿ ಮುಚ್ಚಿಸಿ ಬಿಟ್ಟನು. ಮೀನಾಕ್ಷಿ "ಇಪ್ಪತ್ಮೂರು, ಇಪ್ಪತ್ನಾಲ್ಕು.... .... ...." ಎಂದು ಕಡೆಯ ಕೊಳಗದ ಭತ್ತವನ್ನು ತಾನೇ ತೆಗೆದುಕೊಂಡು ಕೆಳಗಿಳಿದು ಹೆಡಿಗೆಯಲ್ಲಿ ಸುರಿದಳು. ಸುಬ್ಬಮ್ಮನವರು ಬಾಗಿಲಲ್ಲಿ ನಿಂತಿದ್ದರು. ಚಂದ್ರು ಮೆಲ್ಲನೆ "ಮೀನಾಕ್ಷಿ ಊರಿಗೆ ಹೋಗ್ಬಿಟ್ಟು ಬರ್ತೀನಿ. ನನ್ನ ಮರೆತು ಬಿಡಬೇಡ" ಎಂದನು. ಮೀನಾ "ನಾನೇಕಪ್ಪ ಮರೀಲಿ. ನೀನೇ ಮರ್ತು ಬಿಡ್ತೀಯ. ಹೈಸ್ಕೂಲ್ ಸೇರಿಬಿಡ್ತೀಯ" ಎಂದು ಮೆಲ್ಲನೆ ಉಸುರಿದಳು. ಚಂದ್ರು ಭತ್ತದ ಹೆಡಿಗೆಯನ್ನು ಸುಬ್ಬಮ್ಮನವರು ಬೇಡವೆಂದು ಹೇಳಿದರೂ ಕೇಳದೆ "ಬಿಡಿ ಅತ್ತೆ, ಪರ್ವಾಗಿಲ್ಲ" ಎಂದು ಹೇಳಿ ಹೊತ್ತುಕೊಂಡು ಹೊರಗೆ ಹೋದನು. ಮೀನಾ ಕಸಗುಡಿಸ ತೊಡಗಿದಳು. ಅವಳ ಮನಸ್ಸೆಲ್ಲ ಚಂದ್ರುಮಯವಾಗಿದ್ದಿತು. ಬೇಗ ಬೇಗ ಕೆಲಸ ಮುಗಿಸಿ ಚಂದ್ರು ಊರಿಗೆ ಹೋಗುವುದನ್ನು ನೋಡಬೇಕೆಂದು ಆಶೆಯಿಂದ ಎಂಜಲು ಪಾತ್ರೆ ತೊಳೆಯಲು ಬಚ್ಚಲು ಮನೆಗೆ ಓಡಿದಳು.

ಮಧ್ಯಾಹ್ನ ಕಾಫಿ ಕುಡಿದು ಚಂದ್ರು ತಾಯಿಯೊಡನೆ ಊರಿಗೆ ಹೊರಟು ಹೋದನು. ಮೀನಾಕ್ಷಿ ಗುಟ್ಟಾಗಿ ಕಣ್ಣೀರು ಮಿಡಿದಳು. ಅವಳ ಬಾಳಿಗಿದ್ದ ಒಂದು ಆಸರೆಯೂ, ಆನಂದವೂ ತಪ್ಪಿಹೋಯಿತು. ನಿರಾಶೆ ಕವಿದುಕೊಂಡಿತು. ಆದರೆ ಚಂದ್ರುವನ್ನು ಆಗಾಗ ನೋಡುವೆನೆಂಬ ಭರವಸೆಯ ಬೆಳಕಿನಲ್ಲಿ ಮೀನಾ ತನ್ನ ದಿನಗಳನ್ನು ಕಳೆದಳು.

೩

ಮತ್ತೆ ಒಂದು ವರ್ಷ ಉರುಳಿಹೋಯಿತು. ಚಂದ್ರುವಿನಿಂದ ಚೆನ್ನಾಗಿ ಓದುತ್ತಿರುವೆನೆಂದು ಶಾಮಣ್ಣನವರಿಗೆ ಕಾಗದಗಳು ಬರುತ್ತಿದ್ದುವು. ಅವನೂ ತಿಂಗಳಿಗೆ, ಎರಡು ತಿಂಗಳಿಗೆ ಒಂದು ಸಾರಿಯಾದರೂ ಬಂದು ನೋಡಿಕೊಂಡು ಹೋಗುತ್ತಿದ್ದನು. ಕಾಮಾಕ್ಷಿಯನ್ನು– ಅಲ್ಲ ಮೀನಾಕ್ಷಿಗಾಗಿ ! ಆದರೆ ಆ ಎರಡು ದಿವಸಗಳಲ್ಲಿ ಅವರಿಬ್ಬರಿಗೂ ಒಬ್ಬರನ್ನೊಬ್ಬರು ಸಂಧಿಸಲು ಅವಕಾಶವೇ ಸಿಕ್ಕುತ್ತಿರಲಿಲ್ಲ. ಮೀನಾಕ್ಷಿಗೆ ಚಂದ್ರುವಿನೊಡನೆ ಮಾತನಾಡಬೇಕೆಂದು ಬಲವಾದ ಬಯಕೆ ಉಂಟಾಗುತ್ತಿದ್ದಿತು. ಆದರೆ ಏನು ಮಾತನಾಡುವುದು ? ಸುಬ್ಬಮ್ಮನವರ ಹೆದರಿಕೆ ಅವಳನ್ನು ಅಧೈರ್ಯಪಡಿಸುತ್ತಿದ್ದಿತು. ಚಂದ್ರುವಿನ ಮೇಲಿನ ಬಯಕೆ ಉಕ್ಕಿ ಉಕ್ಕಿ ಆವಿ ಆಗಿ ಹೋಗಲು ಅವಕಾಶ ಸಿಕ್ಕದೆ ಅವಳ ಹೃದಯದ ಅಂತರಾಳದಲ್ಲೇ ಅಡಗಿಕೊಂಡಿತು. ಮೀನಾಕ್ಷಿ ಬೆಳೆದಂತೆ, ಅವಳ ಮನಸ್ಸು ವಿಕಾಸಗೊಂಡಂತೆ ಆ ಬಯಕೆ ಪ್ರೇಮವಾಗಿ ಮಾರ್ಪಟ್ಟು ಹೃದಯವನ್ನು ತುಂಬಿಕೊಂಡಿತು. ಅವನು ಇರುತ್ತಿದ್ದಷ್ಟು ದಿನವೂ ಮೀನಾಕ್ಷಿ ಹಕ್ಕಿಯಂತೆ ಹಗುರವಾಗಿ, ಆನಂದವಾಗಿ ಓಡಾಡುತ್ತಿದ್ದಳು. ಚಂದ್ರುವಿನೊಡನೆ ಒಂದು ಮಾತನ್ನು ಆಡಿದರೂ ಅವಳಿಗೆ ಅತ್ಯಾನಂದವಾಗುತ್ತಿದ್ದಿತು. ಕಷ್ಟತರವಾದ ಮನೆಗೆಲಸಗಳೂ ಹಗುರವಾಗಿ ಕಾಣುತ್ತಿದ್ದವು. ಆದರೆ ಚಂದ್ರು ಹೋದೊಡನೆ ಮೀನಾಕ್ಷಿಯ ಮನಸ್ಸಿಗೆ ಕಾರ್ಮೋಡ ಕವಿಯುತ್ತಿದ್ದಿತು. ಹೃದಯ ಭಾರವಾಗುತ್ತಿದ್ದಿತು. ಚಂದ್ರುವಿನ ನೆನಪು ಆ ಭಾರಕ್ಕೆ ಆಸರೆಯಾಗಿ ನಿಂತು, ಹೃದಯವನ್ನು ಅರೆಕ್ಷಣ ಹಗುರವನ್ನಾಗಿ ಮಾಡುತ್ತಿದ್ದಿತು.

ಮೀನಾಕ್ಷಿಯ ಬೆಳವಣಿಗೆಗೆ ತಡೆಯೇ ಇರಲಿಲ್ಲ. ಅಕ್ಕಪಕ್ಕದ ಮನೆಯವರು ಆಡಿಕೊಳ್ಳಲು ಪ್ರಾರಂಭಿಸಿದರು. ಸುಬ್ಬಮ್ಮನವರು ಜನರ ಬಾಯಿಗೆ ಹೆದರಿ ಮೀನಾಕ್ಷಿಗೆ ಸೀರೆ ಉಡಿಸಿದರು. ಎಲ್ಲರಿಗೂ ಸೀರೆಯುಟ್ಟ ಆ ಪುಟ್ಟ ರತಿಯನ್ನು ನೋಡಿ ಹೊಟ್ಟೆಯುರಿಯಿತು.

ಅವಳು ಸೀರೆಯುಟ್ಟ ಮೇಲೆ ಒಂದು ಸಾರಿ ಚಂದ್ರು ಮಾವನ ಮನೆಗೆ ಬಂದನು. ಅವನಿಗೆ ಸೀರೆಯುಟ್ಟ ಮೀನಾಕ್ಷಿಯನ್ನು ನೋಡಿ ಆಶ್ಚರ್ಯವಾಯಿತು. ಊಟಮಾಡುವಾಗ ಹಾಸ್ಯಮಾಡಿಯೇ ಬಿಟ್ಟನು. "ಏನತ್ತೆ, ಮೀನಾಕ್ಷಿಗೂ ಸೀರೆ ಉಡ್ಸಿಬಿಟ್ರಿ. ಎಷ್ಟು ದೊಡ್ಡವಳಾಗಿ ಬಿಟ್ಟಿದ್ದಾಳೆ. ಮದ್ವೆ ಆಗ್ಲೋಯ್ತೇನತ್ತೆ?" ಮೀನಾಕ್ಷಿಗೆ ನಾಚಿಕೆಯಾಯಿತು. "ಥೂ ಹೋಗೋ ಹಾಗೆಲ್ಲ ಅನ್ಬೇಡ ನನ್ನ" ಎಂದುಬಿಟ್ಟಳು. ಸುಬ್ಬಮ್ಮನವರಿಗೆ ಚಂದ್ರುವಿನ ಮಾತಿನಿಂದ ಬೇರೆ ರೀತಿಯ ಅರ್ಥವೇ ಬಂದಿದ್ದಿತು. ಅವಳ ಬೆಳವಣಿಗೆ ಅವನನ್ನೂ ಆಕರ್ಷಿಸಿದೆ ಎಂದು ಆಕೆಗೆ ಹೊಟ್ಟೆಯುರಿಯಿತು ಅದಕ್ಕೆ ತೀರ ಕಠಿಣವಾದ ಶಾಸನದಿಂದ ನಿರ್ಬಂಧಹಾಕಿಬಿಟ್ಟರು.

"ಏನೇ, ಅವನೇನು ಎಳೆ ಮಗು ಅಂದ್ಕೊಂಡ್ಯೇನು. ಗಂಡು ಹುಡುಗರ್ನ ಇನ್ನು ಮೇಲೆ ಹಾಗೆಲ್ಲ ಮರ್‍ಯಾದೆ ಇಲ್ದೆ ಏನೋ, ಬಾರೋ ಎಂದು ಮಾತನಾಡಿಸಕೂಡದು. ಏನ್ರೀ, ಬನ್ರೀ ಎಂದು ಮರ್‍ಯಾದೆಯಿಂದ ಎಷ್ಟೋ ಅಷ್ಟು ಮಾತಾಡ್ಬೇಕು."

ಆ ಮಾತು ಚಂದ್ರುವಿಗೂ ಬಹಳ ನೋವನ್ನುಂಟುಮಾಡಿತು. ಮೀನಾಕ್ಷಿಯ ಮನಸ್ಸಿಗೆ ವ್ಯಥೆಯಾಯಿತು. ಚಂದ್ರುವನ್ನು ಏನ್ರೀ, ಬನ್ರೀ ಎನ್ನಬೇಕು. ಅಪರಿಚಿತನಂತೆ ಯಾವಾಗಲಾದರೊಮ್ಮೆ ಮರ್‍ಯಾದೆಯಿಂದ ಮಾತನಾಡಿಸಬೇಕು. ಎಂತಹ ಅಗ್ನಿಪರೀಕ್ಷೆ ಅನ್ನಿಸಿತು. ಎಂತಹ ಘೋರವಾದ ಶಿಕ್ಷೆ ಎಂದಿತು ಅವಳ ಹೃದಯ! ಮೀನಾಕ್ಷಿಗೆ ಅಂದಿನಿಂದ ಚಂದ್ರುವನ್ನು ಹೇಗೆ ಮಾತನಾಡಿಸಬೇಕೋ ತಿಳಿಯದಾಯಿತು. ಅವಳ ಮನಸ್ಸು ವಿಲವಿಲನೆ ಒದ್ದಾಡುತ್ತಿದ್ದಿತು. ಯಾವಾಗಾದರೊಮ್ಮೆ ದೊರೆಯುತ್ತಿದ್ದ ಅಪರೂಪದ ಏಕಾಂತ ಭೇಟಿಯಲ್ಲಿ ಬಾಯಿತುಂಬ "ಏನು ಚಂದ್ರು, ನಿನ್ನ ಓದು ಹೇಗಿದೆ? ಮೈಸೂರು ಹೇಗಿದೆ?" ಎಂದು ಮಾತನಾಡಿಸಿ ಆತ್ಮತೃಪ್ತಿಯನ್ನು ಅನುಭವಿಸುತ್ತಿದ್ದಳು. ಚಂದ್ರು ಅಕ್ಕರೆಯಿಂದ ತಂದುಕೊಟ್ಟ ಚಾಕಲೇಟು, ಮಿಠಾಯಿಗಳನ್ನು ಆದರದಿಂದ, ಹೆಮ್ಮೆಯಿಂದ ಸ್ವೀಕರಿಸುತ್ತಿದ್ದಳು. ಅವನು ತಂದುಕೊಟ್ಟ ಬಳೆ, ಕರವಸ್ತ್ರಗಳನ್ನು ಜೋಪಾನವಾಗಿ ತೆಗೆದಿಟ್ಟುಕೊಳ್ಳುತ್ತಿದ್ದಳು!

ಅದನ್ನು ಧೈರ್ಯವಾಗಿ ಉಪಯೋಗಿಸಿ ಆನಂದಪಡುವುದಕ್ಕೂ ಮೀನ ಳಿಗೆ ಮಾರ್ಗವಿರಲಿಲ್ಲ. ಯಾರೂ ಕಾಣದಂತೆ ಅರೆಕ್ಷಣ ಆ ಬಳೆಗಳನ್ನು ತೊಟ್ಟುಕೊಂಡು ಮತ್ತೆ ತೆಗೆದಿಟ್ಟುಬಿಡುತ್ತಿದ್ದಳು ಮೀನಾ.

ಕಾಮಾಕ್ಷಿಗೂ ಒಮ್ಮೊಮ್ಮೆ ಮೀನಳ ಚೆಲುವು ಕಣ್ಣುಕುಕ್ಕುತ್ತಿದ್ದಿತು. ಗೆಳತಿಯರೆಲ್ಲ ಮೀನಾಕ್ಷಿ ಸುಂದರಿಯೆಂದು ಹೇಳಿದಾಗ ಕಾಮಾಕ್ಷಿಯ ಮೂತಿ ಊದಿಕೊಳ್ಳುತ್ತಿದ್ದಿತು. ಅಕಾರಣವಾಗಿ ಮೀನಳ ಮೇಲೆ ಸಿಡಿದುಬೀಳುತ್ತಿದ್ದಳು. ಅವಳಿಗೆ ತಾನೇ ಸುಂದರಿ, ವಿದ್ಯಾವತಿ ಎಂದು ಹೇಳಿಸಿಕೊಳ್ಳಬೇಕೆಂದು ಬಯಕೆಯಾಗುತ್ತಿದ್ದಿತು. ಆದರೆ ತಾನು ಎಷ್ಟೇ ಓದಿದರೂ ನಾಲ್ಕನೆಯ ಕ್ಲಾಸಿನಲ್ಲೇ ಫೇಲಾದುದು ಕಾಮಾಕ್ಷಿಗೆ ತೀರ ಅಪಮಾನಕರವಾಗಿ ತೋರಿತು. ಮೀನಳು ಚಂದ್ರು ಹಿಂದೆ ಹೇಳಿಕೊಟ್ಟಿದ್ದ ಪಾಠದ ಬಲದಮೇಲೆ ತನ್ನ ಅಕ್ಷರಜ್ಞಾನವನ್ನೂ ಬರವಣಿಗೆಯನ್ನೂ ಅಭಿವೃದ್ಧಿಪಡಿಸಿಕೊಂಡಿದ್ದಳು. ತಪ್ಪಿಲ್ಲದೆ, ಮುತ್ತಿನಂತೆ ಮೀನಾ ಕಾಗದ ಬರೆದು ಕೊಡುತ್ತಿದ್ದಳು. ಕಾಮಾಕ್ಷಿಯ ಕ್ಲಾಸಿನ ಪುಸ್ತಕಗಳನ್ನೆಲ್ಲ ಉರುಹೊಡೆಯುತ್ತಿದ್ದಳು. ಚಂದ್ರು ಬಂದಾಗ ತಂದು ಕೊಟ್ಟು ಹೋಗುತ್ತಿದ್ದ ಕಥೆಯ ಪುಸ್ತಕಗಳನ್ನೆಲ್ಲ ಮೀನಾಕ್ಷಿ ಲೀಲಾಜಾಲವಾಗಿ ಓದಿ ಮುಗಿಸುತ್ತಿದ್ದಳು. ಕಾಮಾಕ್ಷಿಗೆ ಓದುವುದೆಂದರೆ ಬೇಸರ. ಮೀನಾಕ್ಷಿ, ಚಂದ್ರು ಒಂದು ಸಾರಿ ತಂದು ಕೊಟ್ಟಿದ್ದ ಇಂಗ್ಲೀಷ್ ಪ್ರೈಮರ್ ಪುಸ್ತಕದ ಸಹಾಯದಿಂದ ಇಂಗ್ಲೀಷ್ ಅಕ್ಷರಗಳನ್ನು ಕಲಿತುಕೊಂಡು ತಕ್ಕಮಟ್ಟಿಗೆ ಪ್ರೈಮರ್ ಪುಸ್ತಕವನ್ನು ಓದುವುದನ್ನೂ ಕಲಿತುಕೊಂಡಳು! ಆಗ ಸುಬ್ಬಮ್ಮನವರಿಗೂ ಹೊಟ್ಟೆ ಉರಿಯಿತು. ಅವಳು ಇಂಗ್ಲೀಷ್ ಓದಿದರೆ ನಾಲಿಗೆಯ ಮೇಲೆ ಬರೆ ಹಾಕುತ್ತೇನೆಂದು ಹೆದರಿಸಿ ಆ ಪುಸ್ತಕವನ್ನು ಹರಿದು, ಹತ್ತಿಸಿ ಕಾಫಿ ಕಾಯಿಸಿದರು. ಆಗ ಕಾಮಾಕ್ಷಿಗೆ ಸಮಾಧಾನವಾಯಿತು. ಆದರೆ ಮೀನಾಕ್ಷಿಯ ತೀಕ್ಷ್ಣಬುದ್ಧಿ, ಬೆಳವಣಿಗೆ, ಸೌಂದರ್ಯದ ಬಗ್ಗೆ ಕಾಮಾಕ್ಷಿಯ ಹೃದಯದಲ್ಲಿ ಅಡಿಗಡಿಗೆ ಅಸೂಯೆಯ ಕಿಡಿ ಹತ್ತಿಕೊಂಡು ಹೊಗೆಯಾಡುತ್ತಲೇ ಇದ್ದಿತು.

ಒಂದು ದಿನ ಕಾಮಾಕ್ಷಿ, ಮೀನಾಕ್ಷಿ ಇಬ್ಬರೂ ಅಮಲ್ದಾರರ

ಮನೆಗೆ ಅರಶಿನ ಕುಂಕುಮಕ್ಕೆ ಹೋದರು. ಅಮಲ್ದಾರರು ಮರಾಠಾ ಜನರು. ಪೂನಾ ಕಡೆಯಿಂದ ಬಂದು ಇಲ್ಲಿ ನೆಲಸಿದ್ದರು. ಆ ದಿನ ಅವರ ಮೊಮ್ಮಗನಿಗೆ ಆರತಕ್ಷತೆ ಪೂನಾಕಡೆಯಿಂದ ನೆಂಟರಿಷ್ಟರು ಬಂದಿದ್ದರು. ಮೀನಾಕ್ಷಿ ತನ್ನ ತಾಯಿಯ ಮೇಘವರ್ಣದ, ದೊಡ್ಡ ಅಂಚಿನ ಧರ್ಮಾವರದ ಸೀರೆ ಉಟ್ಟುಕೊಂಡು, ಕಾಮಾಕ್ಷಿ ಜೊತೆ ಕುಳಿತಿದ್ದಳು. ಕಾಮಾಕ್ಷಿ ರೋಜಾಬಣ್ಣದ ಬೂಟ್ಟಾ ಸೀರೆಯನ್ನುಟ್ಟು ಕೊಂಡಿದ್ದಳು ಸುಬ್ಬಮ್ಮನವರಿಗೂ ಅಮಲ್ದಾರರ ಮನೆ ಹೆಂಗಸರಿಗೂ ಮೊದಲಿನಿಂದ ಪರಿಚಯವಿದ್ದಿತು. ಆಕೆ ಕಾಮಾಕ್ಷಿಯನ್ನು ಮಾತ ನಾಡಿಸಿದರು. ಬಹಳ ಫ್ಯಾಷನಬಲ್ ಆಗಿದ್ದ ಇಬ್ಬರು ಹೆಂಗಸರು ಅಲ್ಲೇ ಕುಳಿತಿದ್ದರು ಮೀನಾಕ್ಷಿಯನ್ನು ಎವೆಯಿಕ್ಕದೇ ನೋಡುತ್ತ ಏನೇನೋ ಮಾತನಾಡಿಕೊಳ್ಳುತ್ತಿದ್ದರು. ಅಮಲ್ದಾರರ ಹೆಂಡತಿ ಕಾಮಾಕ್ಷಿಯನ್ನು ಅವರಿಗೆ ಪರಿಚಯ ಮಾಡಿಕೊಟ್ಟರು. ಅವರಿಬ್ಬರಿಗೂ ಮೀನಾಕ್ಷಿ ಯಾರೆಂದು ತಿಳಿದುಕೊಳ್ಳುವ ಕುತೂಹಲ. ಕಾಮಾಕ್ಷಿಗೆ ತಾನು ಅಷ್ಟು ದೊಡ್ಡ ಮನುಷ್ಯರನ್ನು ಮಾತನಾಡಿಸಿಬಿಟ್ಟೆ ಎಂಬ ಹೆಮ್ಮೆ. ಅವರ ಕೊರಳಲ್ಲಿದ್ದ ವಜ್ರದ ಹಾರವನ್ನು ಆಗಾಗ ಕದ್ದು ಕದ್ದು ನೋಡುತ್ತಿದ್ದಳು. ಅಮಲ್ದಾರರ ಹೆಂಡತಿ ಇಬ್ಬರಿಗೂ ಅರಶಿನ ಕುಂಕುಮ ಕೊಟ್ಟರು. ಅವರಲ್ಲಿ ಒಬ್ಬಾಕೆ,

"ಕಕ್ಕೀ, ಈ ಹುಡುಗಿ ಯಾರು ?" ಎಂದರು.

"ಅವಳು ಶಾನುಭೋಗರ ಮನೆಯಲ್ಲಿ ಇದ್ದುಕೊಂಡಿದ್ದಾಳೆ."

"ಅಂದರೆ.........."

"ಅವಳಿಗೆ ತಾಯಿ ತಂದೆ ಯಾರೂ ಇಲ್ಲ. ಶಾನುಭೋಗರ ಸಂಬಂಧದವರ ಮಗಳು. ಅವರೇ ಸಾಕ್ಕೊಂಡಿದಾರೆ ಚಿಕ್ಕಂದಿನಿಂದ."

"ಪಾಪ! poor girl. ಎಷ್ಟು ಚೆನ್ನಾಗಿದಾಳೆ. ರವಿ ವರ್ಮನ ಲಕ್ಷ್ಮಿ ಇದ್ದ ಹಾಗೇ ಇದ್ದಾಳೆ. ಅಲ್ವೇ ಕಕ್ಕೀ"

"ಹೌದು, ಚೆನ್ನಾಗಿದಾಳೆ. ಅದಕ್ಕೇನು ಮನೇಲಿ ಚೆನ್ನಾಗಿ ಸಾಕ್ಕೊಂಡಿದಾರೆ. ಕೆಲಸವಿಲ್ಲ ಕಾರ್ಯವಿಲ್ಲ. ಪಾಪ ಆ ಹುಡುಗೀನೇ ಸ್ಕೂಲಿಗೆ ಹೋಗಿ ಎಲ್ಲಾ ಕೆಲಸಾನೂ ಮಾಡ್ತಾಳೆ. ಅದಕ್ಕೇ ತೆಗೆದು

ಹೋಗಿದಾಳೆ."

"ಈ ಹುಡುಗಿ ಸ್ಕೂಲಿಗೆ ಹೋಗೋದಿಲ್ವೆ ?"

"ಅವಳಿಗೆ ಅದೆಲ್ಲ ಇಷ್ಟವಿಲ್ಲ. ಶುದ್ಧ ಸೋಮಾರಿ. ತುಂಬಾ ಮೊಂಡ್ತನ ಮಾಡ್ತಾಳೆ. ಪಾಪ ಅವರೇನು ಮಾಡ್ತಾರೆ ?"

ಕಾಮಾಕ್ಷಿಗಂತೂ ಆ ಇಬ್ಬರು ಪೂನಾ ಹೆಂಗಸರು ತನ್ನನ್ನು ಬಿಟ್ಟು ಮೀನಾಕ್ಷಿಯನ್ನು ಅಷ್ಟು ಹೊಗಳಿದರೆಂದು ಹೊಟ್ಟೆಯುರಿಯಿತು. ಆದರೆ ಅಮಲ್ದಾರರ ಹೆಂಡತಿ ತನ್ನನ್ನು ಹೊಗಳಿ ಮೀನಾಕ್ಷಿಯ ಅವಹೇಳನ ಮಾಡಿದ್ದನ್ನು ಕೇಳಿ ಅವಳಿಗೆ ಸಮಾಧಾನವಾಯಿತು.

ಅಮಲ್ದಾರರ ಹೆಂಡತಿ ಎಲೆ ಅಡಿಕೆ ತಟ್ಟೆ ತರಲು ಒಳಗೆ ಹೋದರು. ಅವರ ಮಗಳು ಕುಸುಮಾ ಬೇರೆ ಒಂದು ಗುಂಪಿಗೆ ಹೂವು ಹಂಚುತ್ತಿದ್ದಳು. ಆ ಇಬ್ಬರು ಪೂನಾ ಹೆಂಗಸರು ಗುಸಗುಸ ಎಂದು ಕಾಮಾಕ್ಷಿಯ ಕಡೆ ನೋಡುತ್ತ ನಗುತ್ತಿದ್ದರು. ಕಾಮಾಕ್ಷಿಗೆ ಅವರ ಮನೆಗೆ ಹೋಗಿ ಪಳಕೆಯಾಗಿದ್ದಿತು. ಮರಾಠಾ ಮಾತು ಅರ್ಥವಾಗುತ್ತಿತ್ತು. ಅವರ ಹಾಸ್ಯ ಕಾಮಾಕ್ಷಿಯ ಸೀರೆ ಸೌಂದರ್ಯಗಳ ವಿಚಾರಕ್ಕೇ ಆಗಿತ್ತು.

"ಅವಳ ಕರೀ ಬಣ್ಣಕ್ಕೆ, ಆ ರೋಜಾ ಬಣ್ಣ ರಾಹು ಹೊಡೆದ ಹಾಗಿದೆ."

"ಹೌದು, ಏನು taste ಓ. ಎಲ್ಲೋ ಹಳ್ಳಿ ಗುಗ್ಗು. ಅದೇ ಆ ಹುಡ್ಗಿ ಆ ಸೀರೆ ಉಟ್ಕೊಂಡಿದ್ರೆ ರತೀದೇವಿ ಇದ್ದಾಗೆ ಇರ್ತಿದ್ಲು. ಪಾಪ, ಅವಳನ್ನು ಸ್ಕೂಲಿಗೂ ಕಳಿಸುವುದಿಲ್ಲವಂತೆ. ಎಂಥ ಜನವೋ"

"ನನಗೊಳ್ಳೆ ಕಾಶ್ಮೀರಿ ಹುಡುಗಿ ಕಂಡಹಾಗೆ ಕಾಣ್ತಾಳೆ. ಅದೇ ರಂಗು. ಅದೇ ಮೈ ಬೆಳವಣಿಗೆ. ಅವಳ ಕೂದಲು ನೋಡು. ಎಷ್ಟು ಕರ್ಲಿಯಾಗಿದೆ, lovely !"

"ಹೌದು, ಇತ್ಲಾ ಕಡೇ ಇರೋದು ನೋಡು. ಮದ್ರಾಸಿ ಇದ್ದಾಗಿದೆ, ಕೋಡಂಗಿ."

ಕಾಮಾಕ್ಷಿಗೆ ಮೈ ಉರಿಯಿತು. ಅಮಲ್ದಾರರ ಹೆಂಡತಿ ಎಲೆ ಅಡಿಕೆ ಕೊಟ್ಟ ತಕ್ಷಣ, ಮೀನಾಕ್ಷಿಗೂ ಕಾಯದೆ ಸಿಡಂಗೆಂದು ಎದ್ದು

ಹೊರಟು ಹೋದಳು.

ಮೀನಾಕ್ಷಿ ಒಬ್ಬಳೇ ಮನೆಗೆ ಬಂದಳು. ಮನೆಯಲ್ಲಿ ರಾದ್ಧಾಂತ ನಡೆದು ಹೋಗಿದ್ದಿತು. ಕಾಮಾಕ್ಷಿ ಅಳುತ್ತ ಕುಳಿತಿದ್ದಳು. ಸುಬ್ಬಮ್ಮನವರು ಕೆಂಡವಾಗಿದ್ದರು. ಮೀನಾಕ್ಷಿಯ ಚೆಲುವು ಅವರನ್ನು ಮತ್ತಷ್ಟು ಹೊಟ್ಟೆಯುರಿಸಿತು. ಬರುವಾಗ ಆ ಪೂನಾದ ಒಬ್ಬಾಕೆ ಅವಳಿಗೆರಡು ಗುಲಾಬಿ ಹೂ ಕೊಟ್ಟರು. ರಸಿಕ ಚಂದ್ರು ಒಂದು ದಿನ ಅವಳಿಗೆ, ಚೆನ್ನಾಗಿ ಕಾಣಬೇಕಾದರೆ, ರೋಜಾ ಹೂವನ್ನು ಕೊಂಚ ಪಕ್ಕಕ್ಕೆ ವಾರೆಯಾಗಿ ತುರುಬಿನಲ್ಲಿ ಮುಡಿದುಕೊಳ್ಳಬೇಕೆಂದು ಹೇಳಿದ್ದನು. ಮುಗ್ಧೆ ಮೀನಾಕ್ಷಿ, ಆ ಎರಡು ಹೂಗಳನ್ನೂ ಕೊಂಚ ಪಕ್ಕಕ್ಕೆ ಮುಡಿದುಕೊಂಡು ಜಡೆಯನ್ನು ಎದೆಯ ಮೇಲೆ ಬಿಟ್ಟುಕೊಂಡು ಎದುರಿಗೆ ಬಂದ ತಕ್ಷಣ ಅವಳ ರೋಜಾ ಹೂವಿನ ಹಿನ್ನೆಲೆಯಲ್ಲಿ ಅಡಗಿದ್ದ ಸೌಂದರ್ಯ ಸುಬ್ಬಮ್ಮನವರ ಕಣ್ಣು ಕುಕ್ಕಿತು.

" ಏನೇ, ವಯಸ್ಸಾಗ್ತಾ ಆಗ್ತಾ ಅಲಂಕಾರ ಶುರು ಮಾಡ್ಬಿಟ್ಟೆ. ಏನೇ ನಿನ್ನ ಅವತಾರ. ರೋಜಾ ಹೂ ಮುಡ್ಕೊಂಡಿರೋದು ನೋಡು ಸೊಟ್ಟಾಗಿ ಜಡೇ ಏನೇ ಎದೆಮೇಲೆ ಬಿಟ್ಕೊಂಡು ನಟುವ್ರೋಳ ಹಾಗೆ" ಎಂದು ಪಟಪಟಗುಟ್ಟಿ ಅವಳ ತಲೆಯಲ್ಲಿ ಮೆರೆಯುತ್ತಿದ್ದ ರೋಜಾ ಹೂವನ್ನು ಕಿತ್ತುಹಾಕಿ, ಜಡೆಯನ್ನು ರಪ್ಪನೆ ಹಿಂದಕ್ಕೆ ಒಗೆದು, "ನೀನು ಇನ್ಮೇಲೆ ಮನೇಲೇ ಬಿದ್ದಿರು. ಅವಳ ಜೊತೆ ಎಲ್ಲಿಗೂ ಹೋಗಕೂಡದು. ನೀನು ತಿಂದು ಗೂಳಿಹಾಗೆ ಬೆಳಿ. ಊರೆಲ್ಲಾ ನಿನ್ನ ಹೊಗಳ್ದೆ ಏನುಮಾಡ್ತಾರೆ. ರತಿದೇವಿಯಂತೆ ಇವ್ಳು, ರವಿವರ್ಮನ ರಂಭೆ. ರೂಪುಕೊಳ್ಳೇ ಹೋಗ್ತಿದೆ" ಎಂದು ಮೂತಿ ತಿವಿದರು.

ಮೀನಾಕ್ಷಿಯ ಹೃದಯಕ್ಕೆ ಈಗೀಗ ತನ್ನ ಸ್ಥಿತಿಯು ಅರಿವಾಗುತ್ತಿದ್ದಿತು. ' ನಾನೇನು ತಪ್ಪುಮಾಡಿದೆ. ನನ್ನನ್ನು ಏಕೆ ಅಮ್ಮ ಈ ನಡುವೆ ಈ ರೀತಿ ರೇಗ್ತಾರೆ ? ನಾನು ಚೆನ್ನಾಗಿದ್ದೀನಿ ಅಂತ ಇವರಿಗೆಲ್ಲಾ ಏಕೆ ಇಷ್ಟು ರೋಷ. ನಾನು ಹೆಚ್ಚಾಗಿ ತಿಂದು ತಿಂದು ಮೈಬೆಳೆಸಿಕೊಂಡಿದ್ದೀನಂತೆ. ಕೆಲಸ ಮಾಡುವುದಿಲ್ಲವಂತೆ. ಎಷ್ಟು ಅನ್ಯಾಯ. ನಾನು ನಾಳೆಯಿಂದ ಊಟವನ್ನೇ ಮಾಡೊಲ್ಲ ' ಎಂದು ದುಃಖ

ಪಟ್ಟುಕೊಂಡಳು. ಸೀರೆ ಬದಲಾಯಿಸಿ ತನ್ನ ನಿತ್ಯದ ಹರಕಲು ಉಟ್ಟುಕೊಂಡು, ಕಾಮಾಕ್ಷಿ ಹತ್ತಿರ ಹೋಗಿ ಪ್ರೀತಿಯಿಂದ ಅವಳ ತಲೆಹಿಡಿದೆತ್ತಿ ಮಾತನಾಡಿಸಿದಳು.

"ಏಕೆ ಅಕ್ಕಾ, ಅಳ್ತಿದೀಯು. ಯಾರು ಏನಂದ್ರೆ ?"

"ಸಾಕು ಹೋಗೆ, ನಿನ್ನ ಜೊತೆ ಬಂದಿದ್ದಕ್ಕೆ ನನಗೆ ಚೆನ್ನಾಗಿ ಅವಮಾನ ಮಾಡ್ಸಿದ್ಯೆಲ್ಲಾ, ಅವರ ಕೈಲಿ. ನನ್ನ ನೋಡಿ ಚೆನ್ನಾಗಿಲ್ಲ ಅಂತ ಕಿಲಕಿಲಾಂತ ನಕ್ರಲ್ಲ. ಅವರ ಪಲ್ಲು ಬಿದ್ಹೋಗ"

"ಅದಕ್ಕೆ ನಾನೇನು ಮಾಡಿದೆ ಅಕ್ಕ ?"

"ಸಾಕು ಹೋಗೇ. ನನ್ನ ಹೊಟ್ಟೆ ಉರಿಸೋಕೆ ಬಂದ್ಯೇನೋ ತಿರ್ಗಿ. ತಾನು ಚೆನ್ನಾಗಿದಾಳೆ ಅಂತ, ಅಹಂಕಾರ ಬಂದ್ಬಿಟ್ಟಿದೆ. ನಿನ್ನ ಚೆನ್ನಗಿನ್ನ ಯಾರು ನೋಡಿ ಹಿಗ್ಗಬೇಕೋ. ತಂದೆ ಇಲ್ಲ ತಾಯಿ ಇಲ್ಲ. ಇಬ್ಬರ್ನೂ ತಿಂದ್ಕೊಂಡೇ ಹುಟ್ಟಿದ್ದೀಯು."

ಕಾಮಾಕ್ಷಿ ಪಟಪಟ ಅಂತ ಮಾತಿನ ಜಡಿಮಳೆ ಕರೆದುಬಿಟ್ಟಳು. ತನ್ನ ಅಕ್ಕ ಅಂತಹ ಮಾತಾಡುವಳೆಂದು ಅವಳು ಅಂದುಕೊಂಡಿರಲಿಲ್ಲ. ಆ ದಿನ ಅವಳಾಡಿದ ಮಾತು ಮೀನಾಕ್ಷಿಗೆ ಬಹಳ ದಿವಸಗಳವರೆವಿಗೆ ಮರೆಯಲಾಗಲಿಲ್ಲ. ತಟ್ಟನೆ ಕಣ್ಣೀರು ಬಂತು. ಕಾಣದ ತಾಯಿ ತಂದೆಗಳನ್ನು ನೆನೆಸಿಕೊಂಡು ಬಿಕ್ಕಿಬಿಕ್ಕಿ ಅತ್ತಳು. ಅರೆಕ್ಷಣ ಅವಳಿಗೆ ತನ್ನ ತಾಯಿ ಇದ್ದಿದ್ದರೆ ? ಎನ್ನಿಸಿತು. ತನ್ನ ತಾಯಿತಂದೆ ಜೀವಿಸಿದ್ದು ಅವರೊಡನೆ ತನ್ನ ಸುಖಮಯ, ಪ್ರೇಮಮಯ ಬಾಳ್ವೆಯನ್ನು ನೆನೆಸಿ ಕೊಂಡು ಮೀನಾ ಕನಸುಕಂಡಳು. ಕೊಂಚ ಹೊತ್ತಿಗೆಲ್ಲಾ ಅಡುಗೆ ಮನೆಯಿಂದ ಆರ್ಭಟ ಕೇಳಿಬಂದಿತು.

"ಲೇ ಮೀನಾ, ಎದ್ಬಾರೇ. ಊರೆಲ್ಲಾ ಮೆರ್ಕೊಂಡ್ಬಂದ್ಯೆಲ್ಲಾ ಸಾಲ್ದೇನು. ಕೊಂಚ ಪಾತ್ರೇಗೆ ಹುಳಿಯಿಟ್ಟು ತೊಳೆದುಕೊಂಡು ಬಾ. ಊಟಕ್ಕೆ ಎಲೆ ಹಾಕು."

ಮೀನಾಕ್ಷಿ ಭಾವನಾಲೋಕದಿಂದ ಭೂಮಿಗಿಳಿದು ಬಂದಳು. ಎದ್ದುಹೋಗಿ. ಪಾತ್ರೆಪದಾರ್ಥಗಳನ್ನು ತೊಳೆದು, ಎಲ್ಲರಿಗೂ ಮಣೆ, ತಟ್ಟೆ ಲೋಟಗಳನ್ನು ಅಣಿಮಾಡಿಟ್ಟಳು. ಆ ದಿನ ಕಾಮಾಕ್ಷಿಯು

ಕೋಪದ ಫಲವೆಂದರೆ ಗೋವೆುಹಚ್ಚುವುದು, ಪಾತ್ರೆಗಳನ್ನು ತೊಳೆಯು ವುದು, ಮುಂತಾದ ಎಲ್ಲ ಕೆಲಸವೂ ಮೀನಾಕ್ಷಿ ಪಾಲಿಗೆ ಬಿದ್ದಿತು. ಈ ರೀತಿಯ ಹೆಚ್ಚು ಕೆಲಸ ಕಾಮಾಕ್ಷಿಯ ಕೋಪದ ಫಲವಾಗಿ ಅಡಿಗಡಿಗೆ ಬಿದ್ದು, ಮೀನಾಕ್ಷಿಗೆ ಅದರ ಅನುಭವ ಸರ್ವ ಸಾಮಾನ್ಯವಾಗಿ ಹೋಗಿದ್ದಿತು. ಕಾಮಾಕ್ಷಿಯ ಸಿಟ್ಟು ಅಕ್ಕಪಕ್ಕದವರ ಮನೆಗೆಲ್ಲಾ ತಿಳಿದಿತ್ತು.

ಮೀನಾಕ್ಷಿಗೆ ವಯಸ್ಸಾದಂತೆ ಪ್ರಪಂಚ ತಿಳಿಯತೊಡಗಿತ್ತು. ಆದರೂ ಅವಳು ಬೊಂಬೆಯಾಟವನ್ನು ಬಿಟ್ಟಿರಲಿಲ್ಲ. ಈಗ ಹಾಗೆಲ್ಲಾ ಬೊಂಬೆಗಳ ಜೊತೆ ಆಡುವುದುಂಟೆ ? ಆದರೂ ತನ್ನ ಜರತಾರಿ ಲಂಗದ ಕರ್ಪೂರದ ಬೊಂಬೆಯನ್ನು ಜೋಪಾನವಾಗಿ ತನ್ನ ಪೆಟ್ಟಿಗೆಯಲ್ಲಿ ತೆಗೆದಿಟ್ಟುಕೊಂಡಿದ್ದಳು. ಅದರೊಡನೆ ದಿನಕ್ಕೆ ಅರ್ಧಗಂಟೆಯಾದರೂ ಆಟವಾಡದೇಹೋದರೆ ಅವಳ ಆತ್ಮಕ್ಕೆ ತೃಪ್ತಿಯಿಲ್ಲ. ಈಗಲೂ ಅದಕ್ಕೆ ಮಣಿಸರ ಮಾಡಿ ಹಾಕುತ್ತಿದ್ದಳು. ಪುಡಿಕಾಸುಗಳನ್ನು ಕೂಡಿಟ್ಟು ಕೊಂಡು ತಾಯಿಗೆ ಹೇಳಿ ಚಂದ್ರುವಿನ ಕೈಯ್ಯಲ್ಲಿ ಉಲ್ಲನ್ ತರಿಸಿಕೊಂಡಿದ್ದಳು. ಅದರಲ್ಲಿ ಆ ಬೊಂಬೆಗೊಂದು ಸ್ವೆಟ್ಟರ್, ಒಂದು ಜೊತೆ ಕಾಲುಚೀಲಗಳನ್ನು ಹಾಕಿದ್ದಳು. ಅದಕ್ಕೆ ಕಿವಿ ಚುಚ್ಚಿ, ಎರಡಾಣೆ ಕೊಟ್ಟು ಬೀದಿಯಲ್ಲಿ ಮಾರಲು ಬಂದ ಹರಳಿನ ಹಿತ್ತಾಳೆಯ ಲೋಲಾಕನ್ನು ಕೊಂಡು ತಗಲಿಸಿದ್ದಳು. ಅವಳಿಗೆ ಇದ್ದ ಸ್ನೇಹಿತೆಯರೆಂದರೆ ಪಕ್ಕದ ಮನೆಯ ಪಾಪಚ್ಚಿ. ಪಾಪಚ್ಚಿಗೂ, ಮೀನಾಕ್ಷಿಯ ಹಾಗೆ ಬೊಂಬೆ ಹುಚ್ಚು. ಆದರೆ ಅವರ ಮನೆಯಲ್ಲಿದ್ದ ಎಂಟು ಮಕ್ಕಳಿಗೆ ಪಾಪಚ್ಚಿಯೇ ಅಮ್ಮನಾಗಬೇಕಾಗಿತ್ತು. ಅವರಿಗೆ ಮೈ ತೊಳೆಸುವುದು, ಬಟ್ಟೆ ಹಾಕುವುದು, ಊಟ ಮಾಡಿಸುವುದು, ಎಲ್ಲಾ ಪಾಪಚ್ಚಿ. ಮೀನಾಕ್ಷಿಗೆ ಅವಳನ್ನು ನೋಡಿದರೆ ಒಂದು ಬಗೆಯ ಗೌರವ, ಪ್ರೀತಿ.

ಆ ದಿನ ಮೀನಾಕ್ಷಿ ಪುರಸತ್ತು ಮಾಡಿಕೊಂಡು ಪಾಪಚ್ಚಿ ಮನೆಗೆ ಹೋದಳು. ಪಾಪಚ್ಚಿ ಮಕ್ಕಳಿಗೆಲ್ಲ ನೀರು ಹುಯ್ಯುತ್ತಿದ್ದಳು.

"ಏನೇ ಪಾಪಚ್ಚಿ, ನೀನು ಎಷ್ಟು ಘಟ್ಟಿಗಿತ್ತಿ. ಈ ವಯಸ್ಸಿಗೇ

ಸಂಸಾರ ನಿಭಾಯಿಸ್ತೀಯಲ್ಲಾ. ಒಳ್ಳೇ ಅದೃಷ್ಟವಂತಳು ಕಾಣೇಮ್ಮ ನೀನು."

"ಇನ್ನೇನೇ ಮಾಡೋದು ಮೀನಾ, ಮನೆಗೆ ನಾನು ತಾನೇ ದೊಡ್ಡವಳು. ಎಲ್ಲಾ ನಾನೇ ನೋಡಿಕೊಳ್ಳಬೇಕು. ಇನ್ನಾರಿದಾರೆ ಹೇಳು. ಈ ಪಾಟಿಯ ಮಕ್ಕಳು. ಅಮ್ಮನ ಪ್ರಾಣ ತೆಗೆದುಬಿಡುತ್ವೆ. ಏಕೆ ಹುಟ್ಟಿದುವೋ ಅನ್ನಿಸುತ್ತೆ."

"ಛೇ! ಹಾಗನ್ನಬಾರದು ಕಣೆ. ನಂಗೇನೋ ಮಕ್ಕಳು ಅಂದರೆ ತುಂಬ ಇಷ್ಟಾಮ್ಮ. ಅವರ ಜೊತೆ ಆಟ ಆಡ್ತಾ ಇದ್ರೆ ಎಷ್ಟು ಚೆನ್ನಾಗಿರುತ್ತೆ."

ಮೀನಾಕ್ಷಿ ಆ ಮಕ್ಕಳನ್ನೆಲ್ಲ ಒಗ್ಗಿಸಿಕೊಂಡುಬಿಟ್ಟಿದ್ದಳು. ಅವು ಯಾವಾಗಲೂ "ಮೀನಕ್ಕ ಮೀನಕ್ಕ" ಎಂದು ಅವಳ ಹಿಂದೆಯೇ ಓಡಾಡುತ್ತಿದ್ದುವು. ತನಗೆ ಕೊಟ್ಟ ತಿಂಡಿಯನ್ನು ಬಚ್ಚಿಟ್ಟು ಅವುಗಳಿಗೆ ಕೊಡುತ್ತಿದ್ದಳು. ಈ ರೀತಿ ಮಕ್ಕಳ ಮೇಲಿನ ಪ್ರೇಮ ನಾನಾ ರೂಪದಲ್ಲಿ ವ್ಯಕ್ತವಾಗುತ್ತಿದ್ದಿತು. ಮೀನಾಕ್ಷಿಗೆ ಮಕ್ಕಳ ಮೋಹ ಜೀವನದೊಡನೆ ಬೆರೆತುಹೋಯಿತು.

ಮತ್ತೆ ಒಂದು ವರ್ಷ ಉರುಳಿಹೋಯಿತು. ಚಂದ್ರು ಹೈಸ್ಕೂಲು ಎರಡನೆ ಇಯತ್ತೆ ಪಾಸಾಯಿತೆಂದು ಕಾಗದ ಬರೆದನು. ಸುಬ್ಬಮ್ಮ ಮಗಳ ಮದುವೆ ಹತ್ತಿರವಾಯಿತೆಂದು ಸಂತೋಷಪಟ್ಟರು. ಕಾಮಾಕ್ಷಿಯನ್ನು ಮದುವೆಗಾಗಿ ತಯಾರು ಮಾಡುವ ಕಾರ್ಯದಲ್ಲಿ ತೊಡಗಿದರು. ಅವಳ ಆರೈಕೆ ಅದ್ಭುತವಾಗಿ ನಡೆಯಿತು. ಆ ಆರೈಕೆಯ ಫಲವಾಗಿ ಕಾಮಾಕ್ಷಿಯ ಮೈ ತುಂಬಿಕೊಂಡಿತು. ಕಾಮಾಕ್ಷಿ ಸುಬ್ಬಮ್ಮನವರ ದೃಷ್ಟಿಗೆ ಮೀನಾಕ್ಷಿಗಿಂತಲೂ ಚೆಲುವಾಗಿ ಕಂಡಳು. ಆದರೆ ಆ ಸಂತೋಷ ಹೆಚ್ಚು ಕಾಲ ಉಳಿಯಲಿಲ್ಲ. ಮೂರು ತಿಂಗಳಲ್ಲೇ ಅವರಿದ್ದ ಬ್ರಾಹ್ಮಣರ ಕೇರಿಯಲ್ಲಿ ಸಿಡುಬು ಕಾಣಿಸಿಕೊಂಡಿತು. ಸುಬ್ಬಮ್ಮನವರ ಗಾಬರಿಗೆ ಸರಿಯಾಗಿ ಕಾಮಾಕ್ಷಿಗೆ ಸಿಡುಬು ಎದ್ದಿತು. ಆದರ ಪುಣ್ಯಕ್ಕೆ ಸುಮಾರಾಗಿ ಅಲ್ಲೊಂದು ಇಲ್ಲೊಂದು ಕಾಣಿಸಿಕೊಂಡು ಇಂಗಿಹೋಯಿತು. ಮುಖದ ಮೇಲೆ ಮಟ್ಟಿಗೆ ಅಲ್ಲಲ್ಲಿ ಒತ್ತೊತ್ತಾಗಿ

ಸಿಡುಬಿನ ಕಲೆಗಳು ನಿಂತುಹೋದುವು. ಈ ಸಮಾಚಾರವನ್ನು ಮಾತ್ರ ಚಂದ್ರುವಿಗೆ ತಿಳಿಸಲಿಲ್ಲ. ಅವಳಿಗೆ ಸಿಡುಬು ಬಂದಿದ್ದಕ್ಕೆ ಮೀನಾಕ್ಷಿಯೇ ಹೊಣೆಯಾದಳು. ಸುಬ್ಬಮ್ಮನವರು ಎಲ್ಲರಿಗೂ "ನೋಡಿ ಶನಿ ಬಂದ್ಹಾಗೆ ಬಂದ್ಳು ನನ್ನ ಮನೆಗೆ. ಯಾವ ಗಳಿಗೆಯಲ್ಲಿ ಬಂದಳೋ ಮಹಾತಾಯಿ. ನನ್ನ ಮಗಳು ಸವೆದು ಸವೆದು ಅವಳ ರೂಪೇ ಕೆಟ್ಹೋಯ್ತೂಂದ್ರೆ. ಹೇಗಿದ್ಲು ಅಂತೀರಿ ನಮ್ಮ ಕಾಮಾಕ್ಷಿ ಚಿಕ್ಕಂದಿನಲ್ಲಿ. ದೃಷ್ಟಿ ನಿವಾಳಿಸೋ ಹಾಗಿದ್ದಳು. ಈಗ ನೋಡಿ ಈ ಮಾರಮ್ಮನಿಂದ ಅವಳಿಗೆ ಸಿಡುಬು ಎದ್ದು ಮುಖ ವಿಕಾರವಾಗಿ ಹೋಯ್ತು" ಎಂದು ದೂರಿಕೊಳ್ಳುತ್ತಿದ್ದರು. ಮೀನಾಕ್ಷಿಗೆ ಎಲ್ಲ ಕೇಳಿ ಕೇಳಿ ತಲೆ ಚಿಟ್ಟುಹಿಡಿದುಹೋಗಿತ್ತು. "ದೇವರೇ ನನಗೆ ಯಾವತ್ತಿಗಪ್ಪಾ ಈ ಮನೆಯಿಂದ ಮುಕ್ತಿ" ಎಂದು ಅತ್ತುಕೊಳ್ಳುತ್ತಿದ್ದಳು. ಕಾಮಾಕ್ಷಿ ಮೀನಾಕ್ಷಿಯನ್ನು ಕಂಡರೆ ಕೆಂಡಕಾರತೊಡಗಿದ್ದಳು. ಅವಳು ಯಾವ ಮಾತಾಡಲೀ, "ಮಾರಿ ಬಂದ್ಹಾಗೆ ಬಂದ್ಯಲ್ಲೇ ನಮ್ಮನೇಗೆ. ನಿನ್ನ ಶಾಪ ತಟ್ಟಿ ನನ್ನ ರೂಪು ಹಾಳಾಯ್ತಲ್ಲೇ. ನಿಂಗೂ ಏಳ್ಬಾರ್ದೇ ಸಿಡುಬು" ಎಂದು ನಿರ್ದಾಕ್ಷಿಣ್ಯವಾಗಿ ಅಂದುಬಿಡುತ್ತಿದ್ದಳು. ಮೀನಾಕ್ಷಿ ವೇದಾಂತಿಯಂತೆ ಎಲ್ಲ ಕೇಳಿಕೊಂಡು ಸುಮ್ಮನಿದ್ದುಬಿಡುತ್ತಿದ್ದಳು. ಅವಳಿಗೆ ಆ ಮನೆಯಲ್ಲಿ ಪ್ರಿಯವಾದ ಜೀವವೆಂದರೆ ಶೀನು ಒಬ್ಬನೇ. ಶೀನುವಿನ ಸವಿಮಾತಿನಿಂದ, ನಿಷ್ಕಪಟ ಪ್ರೇಮದಿಂದ ಮೀನಾಕ್ಷಿ ತನ್ನ ದುಃಖವನ್ನೆಲ್ಲ ಮರೆಯುತ್ತಿದ್ದಳು.

ಕಾಮಾಕ್ಷಿಗೆ ಸಿಡುಬು ಬಂದಿದ್ದು ಮೀನಾಕ್ಷಿಯ ಶಾಪದ ಫಲವೆಂದು ಸುಬ್ಬಮ್ಮನವರು ತೀರ್ಮಾನಿಸಿಬಿಟ್ಟರು. ಕಾಮಾಕ್ಷಿ ಹೊಳೆಗೆ ಹೋಗಲೂ ನಾಚಿಕೊಳ್ಳುತ್ತಿದ್ದಳು. ಆರೈಕೆ ಆರೈಕೆ ಎಂದು ಸ್ವಸ್ಥವಾಗಿ ಕುಳಿತುಕೊಂಡು ಬಿಡುತ್ತಿದ್ದಳು. ಮನೆಯ ಕೆಲಸಗಳ ಜೊತೆಗೆ ಹೊಳೆಯಿಂದ ಸೀನೀರು ತರುವುದು, ಮಡಿ ಬಟ್ಟೆಗಳನ್ನು ಒಗೆದುಕೊಂಡು ಬರುವುದು ಮುಂತಾದ ಕೆಲಸಗಳೆಲ್ಲವನ್ನೂ ಮೀನಾಕ್ಷಿಯೇ ಮಾಡಬೇಕಾಯಿತು.

ಇನ್ನೊಂದು ವರ್ಷ ಕಳೆದು ಸಿಡುಬಿನ ಕಲೆಗಳು ಪೂರ್ತಿ ಇಂಗಿ

ಹೋದ ಮೇಲೆ ಮದುವೆಮಾಡಿಬಿಡಬೇಕೆಂದು ಶಾಮಣ್ಣನವರು ನಿಶ್ಚಯಿಸಿಕೊಂಡರು. ಆದರೆ ಅದು ಸಂಪೂರ್ಣವಾಗಿ ಇಂಗಿಹೋಗುವ ಸೂಚನೆ ಕಾಣಲಿಲ್ಲ. ಒಂದು ಸಾರಿ ಚಂದ್ರು ಬಂದಿದ್ದನು. ಆಗ ಕಾಮಾಕ್ಷಿಯನ್ನು ಪ್ರಯತ್ನಪೂರ್ವಕವಾಗಿ ಅವನ ದೃಷ್ಟಿಯಿಂದ ಬಚ್ಚಿಟ್ಟರು. ಎರಡು ದಿವಸಗಳಿದ್ದು ಚಂದ್ರು ಬೇಸರದಿಂದ ಹೊರಟು ಹೋದನು. ಕಾರಣ ಸುಬ್ಬಮ್ಮನವರ ಆಜ್ಞೆಯಂತೆ ಮೀನಾಕ್ಷಿ ಅಡುಗೆಮನೆಯಲ್ಲೇ ಇರಬೇಕಾಯಿತು. ಮಗಳ ಕಂಗೆಟ್ಟ ಮುಖ ನೋಡಿ ಚಂದ್ರು ಮೀನಾಕ್ಷಿಯ ಕಡೆ ತನ್ನ ಮನಸ್ಸನ್ನು ಹರಿಸಿಬಿಟ್ಟರೆ ಕಷ್ಟ ಎಂದು ಅವರಿಗೆ ಹೆದರಿಕೆಯಾಯಿತು. ಈಗ ಆಕೆಗೆ ಚಂದ್ರುವೆಂದರೆ ಪ್ರಾಣ. ಚಂದ್ರು ಕ್ಲಾಸಿನಲ್ಲಿ ಮೊದಲನೆಯವನೆಂದು ನಾದಿನಿ ಕಾಗದ ಬರೆಸಿದ್ದ ಮೇಲಂತೂ ಆಕೆಗೆ ಬಹಳ ಸಂತೋಷವಾಗಿದ್ದಿತು. ತಮ್ಮ ಮಗಳ ಗಂಡ ಎಸ್. ಎಸ್. ಎಲ್. ಸಿ. ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡಿ ವಿದ್ಯಾವಂತನಾಗುತ್ತಾನೆಂದು ಕಂಡವರಲ್ಲೆಲ್ಲಾ ಜಂಭ ಹೇಳಿಕೊಳ್ಳುತ್ತಿದ್ದರು. ಅಂತಹ ಚಂದ್ರು ಮೀನಾಕ್ಷಿಯನ್ನು ಮೆಚ್ಚಿ ತಮ್ಮ ಮಗಳನ್ನು ಮದುವೆ ಮಾಡಿಕೊಳ್ಳದೇ ಹೋದರೆ? ಆ ಭಯದಿಂದ ಮೀನಾಕ್ಷಿಯನ್ನು ಚಂದ್ರುವಿನ ಕಣ್ಣು ತಪ್ಪಿಸಿ ದೂರ ಇಟ್ಟರು. ಚಂದ್ರು ನಿರಾಶನಾಗಿ ಊರಿಗೆ ಮರಳಿದನು.

ಕಾಮಾಕ್ಷಿಗೆ ಹದಿನೈದನೆ ವರ್ಷ ನಡೆಯುತ್ತಿದ್ದಿತು. ಸಿಡುಬೆದ್ದ ಆರು ತಿಂಗಳಿನಲ್ಲೇ ದೊಡ್ಡವಳಾಗಿಬಿಟ್ಟಳು. ಎಷ್ಟೇ ಮುಚ್ಚಿಟ್ಟರೂ ಅಕ್ಕ ಪಕ್ಕದವರ ಬಾಯಿ ಮುಚ್ಚಿಸಲಾಗಲಿಲ್ಲ. ಅವರ ಹುಡುಕುವ ಕಣ್ಣುಗಳಿಗೆ ಕಾಮಾಕ್ಷಿ ದೊಡ್ಡವಳಾಗಿರುವುದು ತಿಳಿದುಹೋಯಿತು.

"ಇದೇನು ಬಂತು ಇವರಿಗೆ ಕೇಡು. ಮನೇಲಿ ನೆರೆದ ಹುಡುಗೀನ ಇಟ್ಕೊಂಡು ಮದುವೆ ಮಾಡೋಕೆ ಮೀನ ಮೇಷ ನೋಡ್ತಿದಾರೆ" ಎಂದು ಆಡಿಕೊಳ್ಳುತ್ತಿದ್ದರು. ಒಂದು ತಿಂಗಳು ಕಳೆಯಿತು. ಹೊಳೆಯ ಹತ್ತಿರ, ಭಾವಿಯ ಹತ್ತಿರ ಇದೇ ಮಾತಾಯಿತು. ಊರಿನ ಹೆಂಗಸರೆಲ್ಲಾ ಗುಸಗುಸ ಎಂದು ಸುಬ್ಬಮ್ಮನವರನ್ನು ದೂರಿಕೊಂಡರು.

ಒಂದು ದಿನ ಪಕ್ಕದ ಮನೆಯ ಪಾಪಚ್ಚಿ ತಂದೆ ರಾಮಾಶಾಸ್ತ್ರಿಗಳು

ಬಂದು ಶಾಮಣ್ಣನವರೊಡನೆ ಇದೇ ವಿಷಯವನ್ನು ಪ್ರಸ್ತಾಪಿಸಿದರು.

"ಇದೇನು ಶಾಮಣ್ಣನವರೇ. ನೀವು ಬ್ರಾಹ್ಮಣರು, ಶ್ರೋತ್ರೀಯರು. ಹೀಗೆ ನಮ್ಮ ಧರ್ಮಕ್ಕೇ ಕಳಂಕ ತರುತ್ತಿರುವಿರಲ್ಲಾ. ಮನೇಲಿ ನೆರೆದ ಹುಡುಗೀನ ಇಟ್ಟುಕೊಂಡು ಬೀದಿಗಲ್ಲಾ ಮೈಲಿಗೆ ಹಚ್ಚುತ್ತಿರುವಿರಲ್ಲಾ. ಇದೆಲ್ಲಾ ಚೆನ್ನಾಗಿರೊಲ್ಲ ನೋಡಿ. ನಾಳೆ ಮಠದವರ ಕಿವಿಗೆ ಬಿದ್ರೆ ಏನಾದ್ರೂ ಗಲಾಟೆ ಆದೀತು. ಮೊದಲು ಒಂದು ಲಗ್ನ ನಡೆಸಿಬಿಡಿ."

"ಇನ್ನಾರು ತಿಂಗಳು ಅಷ್ಟೆ, ರಾಮಾಶಾಸ್ತ್ರಿಗಳೇ. ನನಗೆ ಗೊತ್ತಿಲ್ಲವೆ? ಗಂಡು ಆಗಲೇ ಹುಡಿಕಿಟ್ಟಿದ್ದೀನಿ. ಮದುವೆ ಮಾಡಿಬಿಡ್ತೀನಿ. ಅವನಿಗೂ ಈಗ ಹತ್ತೊಂಭತ್ತಾಯ್ತು. ಇನ್ನೊಂದು ಆರು ತಿಂಗಳು ಕಳೀಲಿ ಅಂತ ಸುಮ್ಮನಿದ್ದೀನಿ. ನಮ್ಮ ಚಂದ್ರು ಗೊತ್ತಿಲ್ಲವೇ? ಅವನಿಗೇ ಕೊಡುವುದು ಅಂತ ನಿಶ್ಚಯವಾಗಿದೆ."

"ನೋಡಿ, ನನಗೆ ಬೇಕಾದವರು ಅಂತ ಮೊದಲೇ ಎಚ್ಚರಿಕೆ ಕೊಟ್ಟೆ. ನಾಳೆ ಏನಾದರೂ ಗಲಾಟೆಯಾದರೆ ನನ್ನ ಮೇಲೆ ತಪ್ಪಿಲ್ಲ. ನಿಮಗೇನು ಕಷ್ಟ ಮದುವೆ ಮಾಡೋಕೆ? ಗಂಡು ಸಿಕ್ಕಿಲ್ಲವೆ. ಕೈಯ್ಯಲ್ಲಿ ಹಣವಿದೆ. ಮನೆಯಲ್ಲೇ ಗಂಡನ್ನು ಇಟ್ಟುಕೊಂಡಿದ್ದೀರಿ. ಇನ್ನು ಮದುವೆ ಮಾಡುವುದಕ್ಕೆ ಏಕೆ ಮೀನ ಮೇಷ ನೋಡಬೇಕು ಈ ಕಾರ್ತೀಕದಲ್ಲಿ ಮದುವೆ ಮಾಡಿಬಿಡಿ ಶಾಮಣ್ಣನವರೇ"

ರಾಮಾಶಾಸ್ತ್ರಿಗಳು ಖಡಾಖಂಡಿತವಾಗಿ ಹೇಳಿ ಹೊರಟು ಹೋದರು. ರಾಮಾಶಾಸ್ತ್ರಿಗಳೊಡನೆ ದ್ವೇಷ ಕಟ್ಟಿಕೊಳ್ಳುವುದೂ ನಾಗರ ಹಾವಿನೊಡನೆ ದ್ವೇಷ ಕಟ್ಟಿಕೊಳ್ಳುವುದೂ ಎರಡೂ ಒಂದೇ ಎಂದು ಶಾಮಣ್ಣನವರಿಗೆ ತಿಳಿದಿದ್ದಿತು. ಕಾರ್ತೀಕದಲ್ಲಿ ಮದುವೆ ನಿಶ್ಚಯಿಸಿ ತಂಗಿಗೆ ಕಾಗದ ಬರೆದುಬಿಟ್ಟರು.

ಸುಬ್ಬಮ್ಮನವರು ಅದ್ದೂರಿಯಿಂದ ಮಗಳ ಮದುವೆಗೆ ಬೇಕಾದ ಸಿದ್ಧತೆಗಳನ್ನು ನಡೆಸಿದರು. ಕಾರ್ತೀಕಕ್ಕೆ ಎರಡೇ ತಿಂಗಳು ಬಾಕಿಯಿದ್ದಿತು. ಅವರ ದೂರದ ಬಳಗದವರು ಆ ಊರಿನಲ್ಲಿದ್ದರು. ಶಾಮಣ್ಣನವರು ತಮ್ಮ ಸೋದರತ್ತೆ ಒಬ್ಬರನ್ನು ಚಿಂತಾಮಣಿಯಿಂದ

ಕರೆಸಿಕೊಂಡರು. ಸುಬ್ಬಮ್ಮನವರು ಅಕ್ಕಪಕ್ಕದ ಹೆಂಗೆಳೆಯರ ನೆರವಿನಿಂದ ಶಾವಿಗೆ, ಚಕ್ಕುಲಿಹಿಟ್ಟು, ಕೋಡಬಳೆಹಿಟ್ಟು, ತೇಂಗೊಳಲಿನ ಹಿಟ್ಟು, ಹಪ್ಪಳ, ಸಂಡಿಗೆ ಎಲ್ಲಾ ಮಾಡಿಕೊಂಡರು. ಮೈಸೂರಿಗೆ ಹೋಗಿ ಜವುಳಿಯನ್ನು ತೆಗೆದುಕೊಂಡಿದ್ದೂ ಆಯಿತು. ಸುಬ್ಬಮ್ಮನವರು ಯೋಚಿಸಿ, ಯೋಚಿಸಿ ಮೀನಾಕ್ಷಿಗೆ ಸುಬ್ಬಣ್ಣನವರು ಕೊಟ್ಟು ಹೋದ, ಸೀತಮ್ಮನ ಮೂಗುಬೊಟ್ಟಿನ ವಜ್ರವನ್ನು ತೆಗೆಸಿ, ಚಂದ್ರುವಿಗೆ ಒಂದು ತೊಲ ಚಿನ್ನಕ್ಕೆ ಉಂಗುರ ಮಾಡಿಸಿದರು. ಆ ವಿಚಾರವಾಗಿ ಶಾಮಣ್ಣನವರಿಗೆ ತಮ್ಮ ಹತ್ತಿರ ಕೂಡಿಟ್ಟುಕೊಂಡಿದ್ದ ದುಡ್ಡಿನಲ್ಲಿ ವಜ್ರವನ್ನು ಕೊಂಡುಕೊಂಡು ಬಂದೆ ಎಂದು ಸುಳ್ಳು ಹೇಳಿದರು. ಕಾಮಾಕ್ಷಿಗೆ ಮತ್ತೆ ಒಂದು ಎಳೆ ಚೈನು, ಎರಡು ಜತೆ ಬೊಂಬಾಯಿ ಬಳೆ, ಒಂದು ತೊಲ ಚಿನ್ನಕ್ಕೆ ಮಾಂಗಲ್ಯಗಳನ್ನು ಮಾಡಿಸಿದರು. ಮೀನಾಕ್ಷಿಗೆಂದು ತಮ್ಮ ಕೊಟ್ಟಿದ್ದ ಒಂಟಿ ಅವಲಕ್ಕಿ ಸರ ಐದು ಸವರ್ನ ಇದ್ದಿತು. ಅದರಲ್ಲಿ ಅರ್ಧ ಚಿನ್ನ ಕಾಮಾಕ್ಷಿಯ ಒಡವೆಗಾಗಿ ಕರಗಿ ಹೋಯಿತು. ಅದರ ಬದಲು ಮೀನಾಕ್ಷಿಗೆ ಎರಡುವರೆ ತೊಲ ಚಿನ್ನಕ್ಕೆ ದಾರದಂತೆ ಎರಡೆಳೆ ಸರಪಳಿ ಸರ ಸಿದ್ಧವಾಯಿತು. ಸೂಟು ಗಡಿಯಾರಗಳನ್ನು ತೆಗೆದುಕೊಳ್ಳಲು ಶಾಮಣ್ಣನವರು ಚಂದ್ರುವಿನ ಕೈಗೆ ಇನ್ನೂರೈವತ್ತು ರೂಪಾಯಿಗಳನ್ನು ಕೊಟ್ಟರು. ಅದರ ಜೊತೆಗ ಸುಬ್ಬಮ್ಮನವರು ಗುಟ್ಟಾಗಿ ನೂರು ರೂಪಾಯಿಗಳನ್ನು ಸೇರಿಸಿ ಕೊಟ್ಟರು. ಕಾಮಾಕ್ಷಿಗೆ ನೂರು ರೂಪಾಯಿಗೆ ಒಂದು ಬಂಗಾರದ ಮಲ್ಲಿಗ ಮೊಗ್ಗನ್ನು ತೆಗೆದು ಕೊಟ್ಟರು! ಅದನ್ನು ಶಾಮಣ್ಣನವರಿಗೆ ತೋರಿಸಬೇಡವೆಂದು ಹೇಳಿ ಕೊಟ್ಟರು. ಮೀನಾಕ್ಷಿಯ ಏಳುನೂರು ರೂಪಾಯಿಗಳಲ್ಲಿ ಇನ್ನೂರು ರೂಪಾಯಿಗಳು ಈ ರೀತಿ ಕರಗಿ ಹೋಯಿತು! ಎಲ್ಲ ಸಾಂಗವಾಗಿ ಸಿದ್ಧವಾಯಿತು. ಊರಿಂದ ಬೀಗರೂ, ಅವರ ನೆಂಟರಿಷ್ಟರೂ ಬಂದರು. ಬೀಗರ ಸಡಗರದಿಂದ ಆ ಬೀದಿಗೊಂದು ಕಳೆ ಬಂದಿತು.

ಮೀನಾಕ್ಷಿಯ ಮನೋಸ್ಥಿತಿ ಬೇರೆ ರೀತಿಯಾಯಿತು. ಅವಳಲ್ಲಿ ಯೌವ್ವನ ಕುಡಿಯಿಡುತ್ತಿದ್ದಿತು. ಅವಳ ಹೃದಯದಲ್ಲಿ ಪ್ರೇಮ ಉದಯವಾಗುತ್ತಿದ್ದಿತು. ಆ ಪ್ರೇಮಲತೆಗೆ ಚಂದ್ರು ಆಸರೆಯಾಗಿ

ನಿಂತನು. ಅವಳ ಪ್ರೇಮ ಚಂದ್ರುವಿನೊಡನೆ ಐಕ್ಯವಾಗಿದ್ದಿತು. ಚಂದ್ರು ಕಾಮಾಕ್ಷಿಗಾಗಿ ಮೀಸಲಾಗಿದ್ದಾನೆ ಎಂದು ಅವಳಿಗೆ ಎಂದೋ ತಿಳಿದಿತ್ತು. ಎರಡು ವರ್ಷಗಳ ಹಿಂದೆ ಆಗಿದ್ದರೆ ಮೀನಾಕ್ಷಿಗೆ ಈ ಮದುವೆ ಕೇವಲ ಆಟದ ಮದುವೆಯಾಗಿ ತೋರುತ್ತಿದ್ದಿತು. ತನ್ನ ಬಳಿಯಲ್ಲಿದ್ದ, ತನಗೆ ಸೇರಿದ ಒಂದು ಬೊಂಬೆಯನ್ನು ಕಿತ್ತುಕೊಂಡು ತಮ್ಮ ಮಗಳಿಗೆ ಕೊಟ್ಟರು. ಆದರೂ ಆ ಬೊಂಬೆ ತನ್ನದೇ. ಮಗಳನ್ನು ರಮಿಸಿ ಆ ಬೊಂಬೆಯನ್ನು ಮತ್ತೆ ಹಿಂದಕ್ಕೆ ತೆಗೆದುಕೊಳ್ಳಬಹುದೆಂಬ ಭರವಸೆಯಿರುತ್ತಿದ್ದಿತು ಆಗ. ಆದರೆ ಈಗ? ಮೀನಾಕ್ಷಿಗೆ ಶಾಸ್ತ್ರಬದ್ಧವಾದ ವಿವಾಹವೆಂದರೆ ಏನೆಂದು ಅರ್ಥವಾಗಿದ್ದಿತು. ಸ್ತ್ರೀಗೆ ಅವಳ ಜೀವಮಾನದಲ್ಲೆಲ್ಲ ಒಂದೇ ಮದುವೆಯೆಂದೂ, ಅವಳಿಗೆ ಪತಿಯೇ ಪರದೈವವೆಂದೂ, ಅವನು ಕುರುಡನಾಗಲಿ, ಕುಡುಕನಾಗಲಿ, ರೋಗಿಯಾಗಲಿ, ಕಳ್ಳನಾಗಲಿ ಅವನೊಡನೆ ಬಾಳ್ವೆಯನ್ನು ಸಾಗಿಸಬೇಕಾದುದು ಸ್ತ್ರೀಯ ಧರ್ಮವೆಂದೂ ಅರಿತಿದ್ದಳು. ಅದಕ್ಕಿಂತ ಹೆಚ್ಚಾಗಿ ಸಮಾಜಬಂಧನ ಸ್ತ್ರೀಯನ್ನು ತುಳಿದು, ಅವಳನ್ನು ಮೃಗವನ್ನಾಗಿ ಮಾರ್ಪಡಿಸಿ ಅವಳ ಸರ್ವನಾಶ ಮಾಡುವುದೆಂಬ ಕಠೋರ ಸತ್ಯವನ್ನೂ ಮೀನಳ ಅಪ್ರಬುದ್ಧ ಮನಸ್ಸು ಅರಿತಿದ್ದಿತು! 'ಹಾಗಿದ್ದಲ್ಲಿ ಕಾಮಾಕ್ಷಿ ಚಂದ್ರುವಿನ ಆಜನ್ಮ ಹೆಂಡತಿಯಾಗಿ ಹೋಗುವಳು. ಚಂದ್ರು ಕಾಮಾಕ್ಷಿಯ ಗಂಡನಾಗುವನು. ಅವಳೊಡನೆ ಸಂಸಾರ ಮಾಡುವನು. ಅವನ ಪ್ರೇಮವೆಲ್ಲ ಕಾಮಾಕ್ಷಿಗೇ ಮೀಸಲು. ಆಗ ನನಗೇನು ಉಳಿದ ಹಾಗಾಯಿತು? ಆಗ ನನ್ನ ಗತಿ ಏನು? ನನ್ನ ಮನಸ್ಸೇಕೆ ಹಗಲಿರುಳು ಚಂದ್ರುವನ್ನು ಬಯಸುತ್ತದೆ. ಚಂದ್ರುವನ್ನು ನಾನು ಮದುವೆಯಾದರೆ? ಛೀ........ಹಾಗನ್ನಬಾರದು. ಚಂದ್ರುವನ್ನು ಕಾಮಾಕ್ಷಿಗಾಗಿ ಇಟ್ಟುಕೊಂಡು ಓದಿಸಿದ್ದು. ಅವನು ಅವಳನ್ನು ಮದುವೆ ಮಾಡಿಕೊಳ್ಳಲೇ ಬೇಕು. ಆದರೆ ನಾನು? ನೀನೂ ಮದುವೆ ಮಾಡಿಕೊಳ್ಳಬೇಕು. ಆದರೆ ಬೇರೆ ಯಾರಾದರೊಬ್ಬನನ್ನು? ಅವನೊಡನೆ ನೀನೂ ಸಂಸಾರ ಮಾಡಬೇಕು. . ಚಂದ್ರುವನ್ನು ಮರೆತು ಬಿಡಬೇಕು. ಚಂದ್ರುವನ್ನು ಮರ್ಯಾದೆಯಿಂದ,

ಗೌರವದಿಂದ ಮಾತನಾಡಿಸಿ "ಭಾವ" ಎನ್ನಬೇಕು ........... ಹೌದು, ಅನ್ನಲೇ ಬೇಕು. ಅಯ್ಯೋ, ದೇವರೆ ನನಗೆ ಎಂತಹ ಕಷ್ಟ ಬಂತು. ನನ್ನಿಂದ ದೂರ ಹೊರಟುಹೋಗುತ್ತಿರುವನಲ್ಲಾ. ನನ್ನ ಗತಿ ಏನು' ಎಂದು ಮೀನಾ ಬಿಕ್ಕಿಬಿಕ್ಕಿ ಅತ್ತುಕೊಂಡಳು. ರಾತ್ರಿಯೆಲ್ಲ ಯಾರೂ ಕಾಣದಂತೆ ಎದ್ದು ಕುಳಿತು, ಅಳುತ್ತಿದ್ದಳು. ಮದುವೆ ಹತ್ತಿರವಾದಂತೆ ಮೀನಾಕ್ಷಿಯ ಶೋಕ ಇಮ್ಮಡಿಸಿತು. ತನಗೆ ಎಂತಹ ಅಪಾರವಾದ ನಷ್ಟವಾಗುತ್ತಿದೆ ಎಂದು ಅವಳಿಗೆ ಅರಿವಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ಮದುವೆಯ ಕೆಲಸಕಾರ್ಯದಲ್ಲಿ ನೆರವಾದಳು.

ಮದುವೆಯು ಬಂದೇ ಬಿಟ್ಟಿತು.

ಅಂದು ಕಾಮಾಕ್ಷಿಯ ಮದುವೆ. ಕೆಲಸಕಾರ್ಯಗಳೆಲ್ಲ ವಿಜೃಂಭಣೆಯಿಂದ ನೆರವೇರುತ್ತಿದ್ದುವು. ಹತ್ತು ಘಂಟೆಯ ಹೊತ್ತಿಗೆ ಚಂದ್ರುವಿನ ಕಾಶೀಯಾತ್ರೆಯ ಶಾಸ್ತ್ರವಾಯಿತು. ಮೀನಾಕ್ಷಿ ಸುಮಂಗಲಿಯ ರೊಡನೆ ಮಂಗಳದ್ರವ್ಯಗಳ ತಟ್ಟೆಯನ್ನು ಹೊತ್ತುಕೊಂಡು ತಾನೂ ವರನನ್ನು ಸಮಾಧಾನ ಪಡಿಸಿ ತನ್ನಕ್ಕನನ್ನು ಮದುವೆಯಾಗಲು ಕರೆದು ಕೊಂಡು ಬರುವುದಕ್ಕೆ ಹೋದಳು! ದೊಡ್ಡ ಬೆಳ್ಳಿಯ ತಟ್ಟೆಯಲ್ಲಿ ಮಾವನವರು ಅಳಿಯನಿಗೆ ಕಾಲು ತೊಳೆದ ಶಾಸ್ತ್ರವೂ ಆಯಿತು. ಆಗ ಮೀನಾಕ್ಷಿ ಗುಂಪಿನ ಮುಂದೆ ಚಂದ್ರುವಿಗಾಗಿ ಹೋಗಿ ನಿಂತಳು. ಚಂದ್ರು ತಕ್ಷಣ ಮೀನಾಕ್ಷಿಯನ್ನು ನೋಡಿದನು. ಅವನ ಎದೆ ಛಳ್ ಎಂದಿತು. ಮೀನಳ ಮುಖ ಬಾಡಿಹೋದಂತಿದ್ದಿತು. ಕಣ್ಣುಗಳು ತೇವಗೊಂಡಿದ್ದುವು. 'ನೀನು ಹೀಗೆಯೇ ಕಾಶಿಯಾತ್ರೆ ಹೊರಟುಹೋಗಬಾರದೇ ಚಂದ್ರು. ನನ್ನನ್ನೂ ಕರೆದುಕೊಂಡು ಹಿಂತಿರುಗದೆ ಹೊರಟುಹೋಗ ಬಾರದೇ' ಎಂದು ದುಃಖದಿಂದ ಬೇಡಿಕೊಳ್ಳುವಂತಿತ್ತು ಆ ದೃಷ್ಟಿ. ಮೀನಳಿಗೂ ಅರೆಕ್ಷಣ ಹಾಗನಿಸಿದ್ದು ನಿಜ! ಚಂದ್ರು ತನ್ನನ್ನೂ ಕರೆದು ಕೊಂಡು, ಬೇಡ, ಕಡೆಗೆ ತಾನೊಬ್ಬನಾದರೂ ದೂರ, ಬಹಳ ದೂರದ ಕಾಶೀಯಾತ್ರೆಗೆ ಹೊರಟುಹೋಗಬಾರದೇ ? ಕಾಮಾಕ್ಷಿಯ ಕೊರಳಿಗೆ ತಾಳಿಕಟ್ಟದೆ ಹೊರಟುಹೋಗಬಾರದೇ ಎನ್ನಿಸಿತು. ಚಂದ್ರು ಆ ದೃಷ್ಟಿಯನ್ನು ಎದುರಿಸಲಾರದೇ ಹೋದನು. ತಕ್ಷಣ ದೃಷ್ಟಿಯನ್ನು

ಕಾಲು ತೊಳೆಯುತ್ತಿದ್ದ ಮಾವನ ಕಡೆ ಹರಿಸಿದನು. ಅವನ ಕಣ್ಣು ತುಂಬ ಆ ಐದು ಸೇರಿನ ದಪ್ಪವಾದ, ಅಗಲವಾದ ಮಿರಮಿರನೆ ಮಿಂಚು ತ್ತಿದ್ದ ಬೆಳ್ಳಿಯ ತಟ್ಟೆ, ಬೆಳ್ಳಿಯ ಚೆಂಬುಗಳು ತುಂಬಿಕೊಂಡವು! ದೃಷ್ಟಿ ತನ್ನ ಬೆರಳಿನಲ್ಲಿ ಮಿರಿಮಿರಿ ಮಿಂಚುತ್ತಿದ್ದ ವಜ್ರದುಂಗುರದೆಡೆ ಹರಿಯಿತು! ಚಂದ್ರುವಿನ ಹೃದಯದಲ್ಲಿ ತತ್‌ಕ್ಷಣ ಬಿರುಗಾಳಿ ಬೀಸಿತು. ಸಮಾಧಾನಹೊಂದಿದ ಅಳಿಯ ಮತ್ತೆ ಸಂಸಾರಸ್ಥನಾಗಲು ಮದುವೆಯ ಮನೆಗೆ ಹಿಂತಿರುಗಿದನು. ಮೀನಾಕ್ಷಿ ತಾನೇ ಚಂದ್ರುವನ್ನು ಕಾಮಾಕ್ಷಿಗೆ ಮದುವೆ ಮಾಡಿಸಲು ಜೊತೆಯಲ್ಲಿ ಕರೆದುಕೊಂಡು ಬಂದಳು!

ಲಗ್ನ ಸಮೀಪಿಸುತ್ತಿದ್ದಿತು. ಚಪ್ಪರದ ತುಂಬ ಜನ ಸೇರಿದ್ದರು. ಮಂಗಳವಾದ್ಯಗಳು ಭೋರ್ಗರೆಯುತ್ತಿದ್ದುವು. ಜೋಯಿಸರು ಕಾಮಾಕ್ಷಿಯ, ಚಂದ್ರುವಿನ ನಡುವೆ ಅಂತರ್ಪಟವನ್ನು ಹಿಡಿದು ಉಚ್ಚ ಕಂಠದಲ್ಲಿ ಮಂತ್ರೋಚ್ಚಾರಣೆ ನಡೆಸಿದ್ದರು. ಮದುವೆಯ ಹೆಣ್ಣಿನ ಕಡೆ ತಿರುಗಿ "ನೋಡಮ್ಮಾ, ನಾನು ಹ್ಞೂ ಅಂದ ತಕ್ಷಣ ನೀನೇ ಮೊದಲು ನಿನ್ನ ಯಜಮಾನರ ತಲೆಯಮೇಲೆ ಜೀರಿಗೆಬೆಲ್ಲ ಹಾಕಿಬಿಡ ಬೇಕು. ಆಗ ಅವರು ನೀನು ಹೇಳಿದಂತೆ ಕೇಳಿಕೊಂಡಿರುತ್ತಾರೆ" ಎಂದರು. ಸುತ್ತಲಿದ್ದ ಹೆಂಗೆಳೆಯರೆಲ್ಲ ಘೊಳ್ಳನೆ ನಕ್ಕುಬಿಟ್ಟರು. ಪಾಪಚ್ಚಿ, ಕಾಮಾಕ್ಷಿಯ ಗೆಳತಿಯರು, ಶಾಮಣ್ಣನವರು ಸುಬ್ಬಮ್ಮ ನವರು ಎಲ್ಲರೂ "ನೀನೇ ಮೊದಲು ಹಾಕಿಬಿಡೇ ಕಾಮಾಕ್ಷಿ" ಎಂದು ನಗುತ್ತಿದ್ದರು. ಎಲ್ಲರೂ ಕುತೂಹಲದಿಂದ ಕಾದು ನಿಂತಿದ್ದರು! ಮಂತ್ರೋಚ್ಚಾರಣೆ ಮಾಡುತ್ತ ಶಾಸ್ತ್ರಿಗಳು "ಹ್ಞ" ಎಂದರು. ಕಾಮಾಕ್ಷಿ ತಕ್ಷಣ ಚಂದ್ರುವಿನ ತಲೆಯಮೇಲೆ ಜೀರಿಗೆ ಬೆಲ್ಲ ಹಾಕಿ ಬಿಟ್ಟಳು. ಮೀನಾಕ್ಷಿ ಘೊಳ್ಳನೆ ನಕ್ಕುಬಿಟ್ಟಳು. ಅಂತರ್ಪಟ ಜಾರಿಬಿದ್ದಿತು. ತನ್ನನ್ನೇ ದೃಷ್ಟಿಸಿ ನೋಡುತ್ತಿದ್ದ ಕಾಮಾಕ್ಷಿಯ ಮುಖ ಚಂದ್ರುವಿಗೆ ಕಂಡಿತು. ಅವನಿಗೆ ಆ ಸಿಡುಬೆದ್ದ ಮುಖ ಕಂಡು ಸಿಡಿಲುಬಡಿದಂತಾಯಿತು. ಇವಳು ಕಾಮಾಕ್ಷಿಯೇ ಎನ್ನಿಸಿತು. ಎಂತಹ ಮೋಸ! ಆ ಕಲೆಗಳನ್ನು ಮುಚ್ಚಲು ಸುಬ್ಬಮ್ಮನವರು ಮಾಡಿದ್ದ ಪ್ರಯತ್ನವೆಲ್ಲ ಮಣ್ಣುಗೂಡಿತ್ತು. 'ಮುಖಕ್ಕೆ ಹಚ್ಚಿದ

ಸ್ನೋ, ರೋಜ್, ಪೌಡರ್‌ಗಳು ಬೆಂಕಿಯ ಶಾಖಕ್ಕೆ ಕರಗಿ ಹರಿದು ಹೋಗಿತ್ತು ! ಚಂದ್ರುವಿಗೆ ಸಿಟ್ಟು ಹತ್ತಿತು. ಎಂತಹ ಮೋಸ ಎನ್ನಿಸಿತು. ಶಾಮಣ್ಣನವರು, ಸುಬ್ಬಮ್ಮನವರು ತಂದೆ, ತಾಯಿ ಕೂಗಿಕೊಳ್ಳುತ್ತಿದ್ದರೂ ಕೇಳದೆ ಚಂದ್ರು ಸರ್‍ರನೆ ಒಳಕೋಣೆಗೆ ಹೊರಟುಹೋದನು. ಜೋಯಿಸರು ಕಕ್ಕಾವಿಕ್ಕಿಯಾಗಿ ನೋಡುತ್ತ ನಿಂತರು. ಕಾಮಾಕ್ಷಿಗೆ ನಾಚಿಕೆಯಿಂದ ಕಣ್ಣೀರು ಬಂದಿತು. ಜನರೆಲ್ಲ "ಏನಾಯಿತು, ಏನಾಯಿತು" ಎಂದು ಹುಯಿಲೆಬ್ಬಿಸಿದರು. ಶಾಮಣ್ಣ ನವರು, ಸುಬ್ಬಮ್ಮನವರು, ಚಂದ್ರುವಿನ ತಾಯಿ ಗಾಬರಿಯಿಂದ ಚಂದ್ರುವಿನ ಹಿಂದೆಯೇ ಓಡಿ ಹೋದರು. ಪಾಪಚ್ಚಿಯ ತಂದೆ ಅಧಿಕಾರ ವಾಣಿಯಿಂದ ಗಲಾಟೆ ಅಡಗಿಸುವ ಕಾರ್ಯದಲ್ಲಿ ನೆರವಾದರು. ಜನ ಕೇಳಿದ ಪ್ರಶ್ನೆಗಳಿಗೆಲ್ಲಾ "ಏನಿಲ್ಲ. ಏನೋ ಅಸಮಾಧಾನವಾಗಿರಬಹುದು ಅಷ್ಟೆ. ಇದೆಲ್ಲಾ ಸರ್ವೇ ಸಾಮಾನ್ಯ" ಎಂದು ಸಮಾಧಾನ ಹೇಳುತ್ತಿದ್ದರು.

ಅರ್ಧಘಂಟೆಯಾಯಿತು. ಒಳಕೋಣೆಯಲ್ಲಿ ದೊಡ್ಡ ಗಲಾಟೆ ನಡೆದಿತ್ತು. ಚಂದ್ರು "ಮೋಸ, ನನಗೆ ಎಂತಹ ಮೋಸ ಮಾಡಿದ್ದೀರಿ. ಅವಳಿಗೆ ಸಿಡುಬೆದ್ದಿದೆ ಎಂದು ನನಗೆ ಹೇಳಿದಿರಾ ? ನಾನು ಖಂಡಿತ ಅವಳನ್ನು ಮದುವೆ ಮಾಡಿಕೊಳ್ಳೊಲ್ಲ" ಎಂದು ಒಂದೇ ಪಟ್ಟುಹಿಡಿದಿದ್ದನು. ಚಂದ್ರುವಿಗೆ ಸುಬ್ಬಮ್ಮನವರ ಮೇಲೆ ಅಧಿಕಾರ ತೋರಿಸಲು, ತನ್ನ ಮನಸ್ಸಿನಲ್ಲಿ ಅವರೆಬ್ಬಿಸಿದ್ದ ಕಿಚ್ಚನ್ನು ಉರಿಸಿ ಶಾಂತಿ ಮಾಡಿಕೊಳ್ಳಲು ಒಳ್ಳೆಯ ಅವಕಾಶ ಸಿಕ್ಕಿದ್ದಿತು. ಆ ಘಳಿಗೆಯಲ್ಲಿ ಅವರನ್ನು ಹಣ್ಣು ಮಾಡಿ ಮೀನಾಕ್ಷಿಗೆ ಅವರು ಕೊಡುತ್ತಿದ್ದ ಶಿಕ್ಷೆಗೆ ಒಟ್ಟಾಗಿ ಸೇಡು ತೀರಿಸಿಕೊಳ್ಳಬೇಕೆಂದು ನಿರ್ಧರಿಸಿಕೊಂಡನು. ಆರು ತಿಂಗಳಿಂದ ಮೀನಾಕ್ಷಿಯ ಮುಖವನ್ನೂ ತೋರಿಸದೆ ಅವಳು ತನ್ನೊಡನೆ ಮಾತನಾಡಕೂಡದೆಂದು ಕಟ್ಟು ಮಾಡಿದ್ದನ್ನು ನೆನೆಸಿಕೊಂಡು ಅವನ ಮೈ ಉರಿಯಿತು.

ಶಾಮಣ್ಣನವರು, ಪಾರ್ವತಮ್ಮನವರು, ಸುಬ್ಬಮ್ಮನವರು ನಾರಣಪ್ಪನವರು ಚಂದ್ರುವನ್ನು ಕೇಳಿಕೊಂಡು ಸುಸ್ತಾದರು. ಜೋಯಿ

ಸರು ಲಗ್ನದ ವೇಳೆ ಮೀರಿ ಹೋಗುತ್ತಿದೆಯೆಂದು ಹಾರಾಡುತ್ತಿದ್ದರು. ಸುಬ್ಬಮ್ಮನವರು ಮೆತ್ತಗಾಗಿ ಹೋಗಿದ್ದರು. ಇನ್ನೇನು ಗತಿ ? ಮಗಳ ಮದುವೆ ನಿಂತು ಹೋದರೆ ತಾವು ತಲೆ ಎತ್ತಿ ತಿರುಗಾಡಬಹುದೆ ? ಆ ಊರಿನಲ್ಲಿ ತಮ್ಮ ಮಗಳಿಗೆ ಮದುವೆಯೇ ಆಗುವುದಿಲ್ಲವೆಂದು ಅವರಿಗೆ ತೋರಿತು. ತಾವು ಪಟ್ಟ ಕಷ್ಟವೆಲ್ಲಾ ನೀರಿನಲ್ಲಿ ಹೋಮ ಮಾಡಿದಂತಾ ಗುತ್ತದೆ ಎಂದು ಹೆದರಿದರು. ಅತ್ತರು, ಬೇಡಿಕೊಂಡರು. "ನಂದು ತಪ್ಪಾಯ್ತು ಚಂದ್ರು. ಹೆಣ್ಮಗು, ಅವಳ ಬಾಳು ಹಾಳಾಗುತ್ತಪ್ಪಾ. ಕೈ ಹಿಡಿದು ಉದ್ಧಾರ ಮಾಡಪ್ಪಾ" ಎಂದು ಅಳುತ್ತಾ ಚಂದ್ರುವಿನ ಕಾಲು ಹಿಡಿದುಕೊಂಡು ಬಿಟ್ಟರು. ಆಗ ಚಂದ್ರು ಪ್ರಸನ್ನನಾದನು! ಅವನ ಸೇಡಿನ ಸಮಾಪ್ತಿಯಾಯಿತು. ಚಂದ್ರು ಎದ್ದು ಹೊರಗೆ ಹೋದನು. ಶಾಮಣ್ಣನವರು ಕೃತಾರ್ಥರಾದೆವೆಂದು ಅಳಿಯ ದೇವ ರನ್ನು ಹಿಂಬಾಲಿಸಿ ಹೋದರು. ಮೀನಾಕ್ಷಿ ಬಾಗಿಲಲ್ಲಿ ನಿಂತು ನೋಡು ತ್ತಿದ್ದಳು. ಚಂದ್ರು ಅವಳನ್ನು ನೋಡಿ ದಿಗ್ಭ್ರಮೆಯಿಂದ ನಿಂತು ಬಿಟ್ಟನು. ಮೆಲ್ಲನೆ "ಏಕೆ ಮೀನಾ ಅಳುತ್ತಿರುವೆ?" ಎಂದನು. ಮೀನಾಕ್ಷಿ ಮರೆತು,

"ನಿನಗೆ ಇಷ್ಟು ಕೋಪ ಇದೆ ಎಂದು ತಿಳಿದಿರಲಿಲ್ಲ ಚಂದ್ರು. ಕಾಮಾಕ್ಷಿಯನ್ನು ಎಲ್ಲಿ ಬೇಡವೆಂದು ಬಿಡುತ್ತೀಯೋ ಎಂದು ಹೆದರಿಕೆ ಯಾಯಿತು. ನನಗೆ ಅಳು ಬಂದಿತು" ಎಂದು ಏಕವಚನದಲ್ಲಿಯೇ ಮಾತನಾಡಿಸಿದಳು.

ಚಂದ್ರು ನಿರುತ್ತರನಾದನು. ಶಾಮಣ್ಣನವರು ಹೆಮ್ಮೆಯಿಂದ ನಕ್ಕರು. ಸುಬ್ಬಮ್ಮನವರು ಹಿಂಬಾಲಿಸಿ ಬಂದವರು ಚಂದ್ರು, ಮೀನಾಕ್ಷಿ ಮಾತನಾಡುತ್ತ ನಿಂತಿದ್ದನ್ನು ನೋಡಿ ಗರ ಬಡೆದವರಂತೆ ನಿಂತುಬಿಟ್ಟರು. ಮೀನಾಕ್ಷಿಯ ಮಾತನ್ನೂ ಕೇಳಿದರು. ಚಂದ್ರು, ಶಾಮಣ್ಣನವರು ಹೊರಟು ಹೋದ ತಕ್ಷಣ, ಆಚೀಚೆ ನೋಡಿ ಬಾಗಿಲ ಹೊರಗೆ ನಿಂತಿದ್ದ ಮೀನಾಕ್ಷಿಯ ಜಡೆ ಹಿಡಿದು ಒಳಗೆ ಜಗ್ಗಿ ಕೊಂಡು

"ಏನೇ ರಂಡೆ, ಮತ್ತೆ ಅವನ್ನ ನೀನು, ತಾನು ಎಂದು ಮಾತ

ನಾಡಿಸ್ತೀಯೇನೇ ನಾಚಿಕ್ಕೆಟ್ಟೋಳೆ. ಕಾಮಾಕ್ಷೀನ ಅಪ್ಪ ಮದ್ವೆ ಮಾಡ್ಕೊಳ್ಳೊಲ್ಲ ಅಂತ ಇವಳಿಗೆ ಅಳು ಬಂದು ಬಿಡ್ತು ಪಾಪ. ಚಿನಾಲಿ, ಸಂಗೊತ್ತು ಕಾಣೇ ನಿನ್ನ ಮನಸ್ನಲ್ಲಿ ಏನಿದೆ ಅಂತ. ಇನ್ನೇನು ಅವನು ನಿನಗೆ ದಕ್ಕೋಹಾಗಿಲ್ಲ. ಅಲಂಕಾರ ಮಾಡ್ಕೊಂಡು ಅವನೆದ್ರೊಗೆ ಮೆರೀತಾಳೆ. ಎಲ್ಲಾ ನಿನ್ನಿಂದ್ಲೇ ಕಾಣೇ ಆದ್ದು. ನಿನ್ನ ಮುಖ ನೋಡಿ ಅವನ ಮನಸ್ಸು ಕೆಟ್ಹೋಗಿದೆ. ನೀನು ಏಕಾದ್ರೂ ಬಂದ್ಯೇ ನನ್ಮನೇಗೆ. ಪ್ರಾರಬ್ಧ ಎಲ್ಲಾದರೂ ಹಾಳಾಗಿ ಹೋಗ್ಬಾರ್ದೇ" ಎಂದು ಅವಳ ತೊಡೆ ಚಿವುಟಿ ಸಿಡಿಗುಟ್ಟುತ್ತಾ ಹೊರಗೆ ಹೊರಟು ಹೋದರು. ತಾವು ಚಂದ್ರುವಿನ ಕಾಲಿಗೆ ಬಿದ್ದ ರೋಷವನ್ನೆಲ್ಲ ಮೀನಾಕ್ಷಿಯ ಮೇಲೆ ತೀರಿಸಿಕೊಂಡರು. ಅವಳನ್ನು ನೋಡಿ ಮತ್ತೆ ಚಂದ್ರು ತಮ್ಮ ಮಗಳನ್ನು ಎಲ್ಲಿಬೇಡವೆಂದು ಬಿಡುವನೋ ಎಂದು ಆಕೆಗೆ ಹೆದರಿಕೆಯಾಗಿತ್ತು. ಅದನ್ನು ತಪ್ಪಿಸುವುದಕ್ಕಾಗಿ ಆಕೆ ಚಂದ್ರುವಿನ ಕಾಲಿಗೆ ಬೀಳಲೂ ಸಿದ್ಧವಾದರು !

ಮೀನಾಕ್ಷಿಯ ದುಃಖಭರಿತ ಹೃದಯಕ್ಕೆ ಒದೆ ಕೊಟ್ಟಂತಾಯಿತು. ಸುಬ್ಬಮ್ಮನವರು ಆಡಿದ ಮಾತುಗಳನ್ನು ಕೇಳಿ ಅವಳ ಹೃದಯ ಒಡೆದು ಹೋದಂತಾಯಿತು. ಹೊರಗೆ ಲಗ್ನದ ಸಂಕೇತವಾಗಿ ವಾಲಗದವರು ಉತ್ಸಾಹದಿಂದ ವಾಲಗ ಊದುತ್ತಿದ್ದರು. ಹೊರಗೆ ಆನಂದದ ಧ್ವನಿ ವಾಲಗದಿಂದ ಉಕ್ಕಿ ಬರುತ್ತಿದ್ದರೆ ಒಳಗೆ ಮೀನಾಕ್ಷಿಯ ಕಣ್ಣುಗಳಿಂದ ದುಃಖದ ಕಣ್ಣೀರು ಉಕ್ಕಿ ಹರಿಯುತ್ತಿತ್ತು. "ಸುಲಗ್ನಾ ಸಾವಧಾನ, ಸುಮುಹೂರ್ತಾ ಸಾವಧಾನ" ಎಂದು ಹೊರಗೆ ಜೋಯಿಸರ ಮಂತ್ರೋಚ್ಚಾರಣೆ ಉಚ್ಚ ಕಂಠದಿಂದ ತೆರೆತೆರೆಯಾಗಿ ಮನೆಯನ್ನೆಲ್ಲ ವ್ಯಾಪಿಸಿಕೊಳ್ಳುತ್ತಿದ್ದಿತು. ಇದ್ದಕ್ಕಿದ್ದಂತೆ ವಾಲಗ ಭೋರ್ಗರೆಯಿತು. ಚಂದ್ರು ಕಾಮಾಕ್ಷಿಯ ಕೊರಳಿಗೆ ಮಾಂಗಲ್ಯ ಕಟ್ಟಿಬಿಟ್ಟನು ! ಮೀನಾಕ್ಷಿಯ ಕಣ್ಣುಗಳು ಅರೆಕ್ಷಣ ಹೊಳಪಾದವು. ಆದರೆ....ಆ ಸುಮುಹೂರ್ತಾ ಸಾವಧಾನದ ಮಂತ್ರೋಚ್ಚಾರಣೆಯೊಡನೆ ಬೆರೆತ ವಾಲಗದ ಸದ್ದು ಅವಳ ಎದೆಯ ಮೇಲೆ ಪ್ರಳಯನಾಟ್ಯವನ್ನಾಡಿತು. ಅದರ ಸದ್ದಿನಿಂದ ಮೀನಳ ಕಿವಿ ಮುಚ್ಚಿ ಹೋದಂತಾಯಿತು.

'ಚಂದ್ರು ಕಾಮಾಕ್ಷಿಯ ಗಂಡನಾಗಿ ಹೋದನು...... ನನ್ನ ಸರ್ವ ನಾಶವಾಯಿತು' ಎಂದು ಮೀನಾಕ್ಷಿ ಬಿಕ್ಕಿಬಿಕ್ಕಿ ಅತ್ತಳು. ಹಾಸಿಗೆಯ ಮೇಲೆ ಬಿದ್ದು ಹೊರಳಾಡಿದಳು ಕಾಮಾಕ್ಷಿ ಮದುವೆ ಮುಗಿಯಿತು. ಅವಳು ಮೀನಳ ಚಂದ್ರುವಿನ ಕೈ ಹಿಡಿದಳು. ಚಂದ್ರುವು ಅನಿಶ್ಚಿತ ಭಾವನೆಗಳ ಹೊಡೆತಕ್ಕೆ ಸಿಕ್ಕಿ, ತಂದೆ ತಾಯಿಗಳ ಮಾತಿನಿಂದ ಪ್ರಚೋದಿತನಾಗಿ, ತಂದೆಯು ಪ್ರೈಮರೀ ಸ್ಕೂಲು ಮೇಷ್ಟರಿನ ಬಡ ತನದ ಜೀವನದಲ್ಲಿ ಬೆಳೆದು ಬೇಸತ್ತು ಹಣದಾಸೆಗಾಗಿ ಕಾಮಾಕ್ಷಿ ಯನ್ನು ಮದುವೆಯಾದನು !

ಮೀನಳನ್ನೇ ಮದುವೆಯಾಗಬೇಕೆಂಬ ಚಂದ್ರುವಿನ ಹಂಬಲ ಮಣ್ಣುಗೂಡಿತ್ತು. ಮೀನಾಕ್ಷಿ ತನ್ನ ಅತ್ತೆಯ ಮನೆಯಲ್ಲಿ ತೊತ್ತಿನ ಹೆಣ್ಣಿನಂತಿದ್ದಳು. ಧರ್ಮದ ದೃಷ್ಟಿಯಲ್ಲಿ, ಸಮಾಜದ ದೃಷ್ಟಿಯಲ್ಲಿ, ಮೀನಾಕ್ಷಿ ಶಾಮಣ್ಣನವರ, ಸುಬ್ಬಮ್ಮನವರ ಸೊತ್ತಾಗಿದ್ದಳು. ಅವರ ಮಗಳನ್ನು ಮಾಡಿಕೊಳ್ಳದೆ ತನಗೆ ಅವರ ಮನೆಯ ಸಾಕಿದ ತೊತ್ತು ಸಿಕ್ಕುತ್ತಾಳೆಂಬುದು ಕನಸಿನ ಮಾತಾಗಿದ್ದಿತು. ಮೀನಾಕ್ಷಿಗೆ ಅವರ ಹಿಡಿತದಿಂದ ವಿಮೋಚನೆಯೇ ಇಲ್ಲವೆಂದು ಅವನಿಗನ್ನಿಸಿದ್ದಿತು. ಚಂದ್ರುವಿನ ಅವಿಕಸಿತ ಮನಸ್ಸು ಸಮಾಜದ ಬಂಧನಗಳನ್ನು ಕಡಿದೊಗೆದು, ಧೈರ್ಯದಿಂದ ಮುನ್ನುಗ್ಗಿ, ಅಬಲೆಯೊಬ್ಬಳ ಉದ್ಧಾರ ಮಾಡುವಷ್ಟು ಸಾಹಸಿಯಾಗಿರಲಿಲ್ಲ. ಚಂದ್ರು ಸಮಾಜಕ್ಕೆ ಹೆದರಿದನು. ಅವನ ಪ್ರೇಮವೂ ಕುಸುಮಿಸಿರಲಿಲ್ಲ. ಅವನ ಪ್ರೇಮದ ಬುಗ್ಗೆಯೊಡನೆ ತ್ಯಾಗದ ಚಿಲುಮೆ ಬೆರೆತಿರಲಿಲ್ಲ. ಅವನ ಹೃದಯ ಮನಸ್ಸುಗಳೆರಡೂ ಅಂತಹ ಚಿದಾನಂದಮಯ ಪ್ರೇಮವನ್ನು ಉಕ್ಕಿ ಹರಿಸಿ ತಾನು ಬಯಸಿದ ಹೆಣ್ಣನ್ನು ಪಡೆಯುವುದಕ್ಕಾಗಿ ಸಮಾಜವನ್ನು ಎದುರಿಸಿ ನಿಲ್ಲುವಷ್ಟು ಜಾಗೃತವಾಗಿರಲಿಲ್ಲ. ಚಂದ್ರು ಆ ಘಳಿಗೆ ಯಲ್ಲಿ ಪ್ರೇಮಕ್ಕಿಂತ ಸುಖ ಜೀವನದೆಡೆಗೆ, ಹಣದಾಸೆಗೆ ಮನಸೋತಿ ದ್ದನು. ಅದು ಅವನ ತಪ್ಪಾಗಿರಲಿಲ್ಲ. ವಿಕಸಿತವಾಗದ ಅವನ ಮನೋದಾರ್ಢ್ಯದ ದುರ್ಬಲತೆಯಾಗಿದ್ದಿತು.

ಸುಬ್ಬಮ್ಮನವರಿಗೆ ತಾಯಿಯ ಮನೆಯಿಂದ ಅರಶಿನ ಕುಂಕು

ಮಕ್ಕೆಂದು ನಾಲ್ಕು ಎಕರೆ ಜಮೀನು ಕೊಟ್ಟಿದ್ದರು. ಮನೆಯ ರಾಜ್ಯಭಾರ ಅವರದಾಗಿದ್ದಿತು. ಕಾಮಾಕ್ಷಿ, ಅವರ ಒಬ್ಬಳೇ ಮಗಳು, ಅವರ ಪ್ರೇಮದ ಬೊಂಬೆಯಾಗಿದ್ದಳು. ಆ ಹಣದ, ಆ ಸುಖದ ದೂರಾಲೋಚನೆಯಲ್ಲಿ ಚಂದ್ರು ಮೈ ಮರೆತನು. ತನ್ನ ಜೀವಮಾನ ದಲ್ಲೇ ಘೋರವಾದ ಒಂದು ತಪ್ಪನ್ನು ಮಾಡಿದನು. ಅದು ಅವನು ಬದುಕಿರುವವರೆಗೆ ಅವನ ಬಾಳನ್ನು ವಿಷಮಯವನ್ನಾಗಿ ಮಾಡಿತು.

ಮೀನಾಕ್ಷಿಗೂ ಚಂದ್ರು ಕಾಮಾಕ್ಷಿಯನ್ನು ಮದುವೆಯಾದ್ದು ಹೊಟ್ಟೆ ಉರಿಯಿತು. ಯುವಕ ಚಂದ್ರುವಿನಲ್ಲಿ ಪುರುಷತ್ವ ಕುಡಿಯಿಡು ತ್ತಿದ್ದಿತು. ಚಂದ್ರು ಹೊಸ ಹುಮ್ಮಸ್ಸಿನ, ಚಿಗುರು ಮೀಸೆಯ ಸುಂದರ ಯುವಕನಾಗಿ ಮಾರ್ಪಾಡು ಹೊಂದುತ್ತಿದ್ದನು. ಅವಳಲ್ಲಿ ಈಗ ಸ್ತ್ರೀತ್ವ ಎಚ್ಚೆತ್ತಿತ್ತು. ಅವಳು ಚಂದ್ರುವನ್ನು ಮನಸಾರ ಬಯಸಿದಳು. ಆದರೆ ಏಕೆ ಎಂದು ಅವಳಿಗೆ ತಿಳಿದಿರಲಿಲ್ಲ. ಚಂದ್ರುವನ್ನು ಮದುವೆ ಮಾಡಿಕೊಳ್ಳಲಾಗಲಿಲ್ಲವಲ್ಲಾ ಎಂದು ಗುಟ್ಟಾಗಿ ಅತ್ತಳು. ಅವಳ ಚಿತ್ತಫಲಕದಲ್ಲಿ ಚಂದ್ರು ನದಿಯ ತೀರದ ಬಳಿಯಾಡುತ್ತಿದ್ದ ಮಾತು ಗಳೆಲ್ಲ ಅಕ್ಷರ ಒತ್ತಿದಂತೆ ಬಂದು ನಿಂತವು. ಅವುಗಳ ಸವಿನೆನಪಿ ನಿಂದ ಅವಳ ಮೈ ಪುಳಕಿತವಾಯಿತು. ನಾನೇಕೆ ಚಂದ್ರು ನನ್ನನ್ನು ಮದುವೆ ಮಾಡಿಕೊಳ್ಳುನೆಯಾ ಎಂದು ಕೇಳಿದಾಗ ಏನೂ ಹೇಳದೇ ಹೋದೆ ? ಅವನದೇನು ತಪ್ಪು ? ನನ್ನದೇ ತಪ್ಪು. ಚಂದ್ರು ನನ್ನನ್ನು ಹೇಗೆ ಮದುವೆ ಮಾಡಿಕೊಳ್ಳುವನು ? ಅಪ್ಪ, ಅಮ್ಮ ಎಲ್ಲರೂ ಕಾಮಾಕ್ಷಿಗಾಗಿ ಅವನನ್ನು ದುಡ್ಡು ಕೊಟ್ಟು ಓದಿಸಿದರು. ಅವರ ಬಡತನದ ಸಂಸಾರಕ್ಕೆ ಯೋಗ್ಯತೆ ಮೀರಿ ಹಣ ಸಹಾಯ ಮಾಡಿದರು. ಪಾಪ ! ಅವನದೇನು ತಪ್ಪು ? ಎಂದು ಸಮಾಧಾನ ಮಾಡಿಕೊಂಡಳು. ಅವಳ ದಾರುಣವಾದ ದುಃಖ ಮದುವೆಯೊಡನೆಯೇ ಕಳೆದು ಹೋಯಿತು. ಆದರೂ ಒಂದು ವಿಷಯ ಮಾತ್ರ ಅವಳ ಮನಸ್ಸಿನಲ್ಲಿ ಕೊರೆಯುತ್ತಿದ್ದಿತು. ಚಂದ್ರುವನ್ನೊಮ್ಮೆ ಮಾತನಾಡಿಸಿ ಅವನು ಕಾಮಾಕ್ಷಿಯನ್ನು ಏಕೆ ಮದುವೆ ಮಾಡಿಕೊಂಡ ಎಂದು ಕೇಳಲು ಆಸೆಯಾಗುತ್ತಿತ್ತು. ಆದರೆ ಮೀನಾಕ್ಷಿಗೆ ಆ ಅವಕಾಶ ಆ ಗಲಾಟೆಯ

ಮನೆಯಲ್ಲಿ ದೊರೆಯಲಿಲ್ಲ. ಮುಂದೆ ಅನೇಕ ವರ್ಷಗಳವರೆಗೆ ಆ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು.

ಮದುವೆಯ ಗಲಾಟೆಯೆಲ್ಲ ಕಳೆದು ಹದಿನೈದು ದಿವಸಗಳಾಗಿದ್ದಿತು. ಮೀನಾ ಪದ್ಧತಿಯಂತೆ ಸಾಯಂಕಾಲ ಹಾಲು ಕರೆಯಲು ಕೊಟ್ಟಿಗೆಗೆ ಹೋದಳು. ಚಂದ್ರು ಅವಳೊಡನೆ ಏಕಾಂತವಾಗಿ ಸಂಧಿಸಿ ಮಾತನಾಡಬೇಕೆಂದು ಹೊಂಚು ಹಾಕುತ್ತಿದ್ದನು. ಮೀನಾ ಕರಿಯ ಹಸು ಗಂಗೆಯ ಹಾಲನ್ನು ಕರೆಯುತ್ತಿದ್ದಳು. ಕಾಮಾಕ್ಷಿ, ಸುಬ್ಬಮ್ಮನವರು ಇಬ್ಬರೂ ಅಮಲ್ದಾರರ ಮುದಿತಾಯಿ ಮದುವೆಯಾದ ಕಾಮಾಕ್ಷಿಯನ್ನು ನೋಡಲು ಆಸೆಪಟ್ಟಿದ್ದರಿಂದ ಪುರಸತ್ತು ಮಾಡಿಕೊಂಡು ಅವರ ಮನೆಗೆ ಹೋಗಿದ್ದರು. ಪಾರ್ವತಮ್ಮನವರು ಒಳಗೆ ಏನೋ ಕೆಲಸ ಮಾಡುತ್ತಿದ್ದರು ಚಂದ್ರು ಸಮಯ ಸಾಧಿಸಿ ಕೊಟ್ಟಿಗೆಗೆ ಹೋದನು. ಮೀನಾಗೆ ಅವನು ಬಂದ ಸುಳಿವು ತೋರಿತು. ಚಂದ್ರು ಬಂದ ಸುಳಿವು ತೋರಿದ ಕೂಡಲೇ ಅವನೇ ಎಂದು ಖಚಿತ ಮಾಡಿಕೊಳ್ಳಲು ಸರ್ರನೆ ತಿರುಗಿ ನೋಡಿ ಮತ್ತೆ ಹಾಲನ್ನು ಕರೆಯ ತೊಡಗಿದಳು. ಅವಳ ಮುಖದ ಮೇಲೆ ಮೊದಲಿನ ಆ ಸಲಿಗೆಯ ನಗು, ಹಾಸ್ಯ ಎಲ್ಲ ಮಾಯವಾಗಿತ್ತು. ಚಂದ್ರು ಮೆಲ್ಲನೆ ಕೇಳಿದನು:

"ಏಕೆ ಮೀನಾ ನನ್ನ ಜೊತೆ ಮಾತನಾಡುವುದಿಲ್ಲ. ನನ್ನ ಮೇಲೆ ಕೋಪವೆ ?"

ಮೀನಾ ಉತ್ತರ ಕೊಡಲಿಲ್ಲ. ಚಂದ್ರು ಮತ್ತೆ ಕೇಳಿದನು. ಮೀನಾ ಆಗಲೂ ಉತ್ತರ ಕೊಡಲಿಲ್ಲ.

"ಹ್ಞು, ನಾನು ನಾಳೆ ಊರಿಗೆ ಹೋಗುತ್ತೇನೆ. ಹೇಳೋಣವೆಂದು ಬಂದೆ" ಎಂದುಕೊಂಡು ಚಂದ್ರು ಹೊರಡುವ ಸೂಚನೆ ಕೊಟ್ಟನು. ಮೀನಾ ದೈನ್ಯತುಂಬಿದ ದೃಷ್ಟಿಯನ್ನು ಚಂದ್ರುವಿನೆಡೆಗೆ ಹರಿಸಿ ಉತ್ತರ ಕೊಟ್ಟಳು.

"ಇಲ್ಲ ಚಂದ್ರು. ನನಗೇಕೆ ನಿನ್ನ ಮೇಲೆ ಕೋಪ ?"

ಚಂದ್ರುವಿನ ಮುಖ ಅರಳಿತು. ತಿರುಗಿ ನಿಂತು ಹೇಳಿದನು:

"ಯಾಕಿಲ್ಲ ಮೀನಾ. ನಾನು ಕಾಮಾಕ್ಷಿಯನ್ನು ಮದುವೆಯಾದೆ

ನೆಂದು ಕೋಪವಿರಬಹುದು."

ಮೀನಾ ಆ ಮಾತಿಗೆ ಏನೂ ಉತ್ತರ ಕೊಡಲಿಲ್ಲ. ಅವಳ ಕಣ್ಣಲ್ಲಿ ಕಣ್ಣೀರು ಮೂಡಿತು. ಮತ್ತೊಮ್ಮೆ ಹಿಂತಿರುಗಿ ನೋಡಿದಳು. ಚಂದ್ರುವಿಗೆ ಅವಳ ಕಣ್ಣೀರು ಕಂಡಿತು. ಕುತೂಹಲದಿಂದ ಕೇಳಿದನು.

"ಏಕೆ ಮೀನಾ, ಅಳುತ್ತಿರುವೆ ?"

"ಏಕೂ ಇಲ್ಲ ಚಂದ್ರು. ನಮ್ಮ ಆಟಗಳೆಲ್ಲ ನೆನಪಾಯಿತು. ಅಷ್ಟೆ. ನಿನ್ನ ಮೇಲೆ ನನಗೇಕೆ ಕೋಪ ಚಂದ್ರು. ನೀನು ಸುಖವಾಗಿದ್ದರೇ ನನಗೆ ಸಂತೋಷ."

ಚಂದ್ರು ನಿರುತ್ತರನಾದನು. ಅವನಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ಅವನ ಬಾಯಿಂದ ಒಂದು ಪ್ರಾರ್ಥನೆ ಹೊರಟಿತು.

"ಮೀನಾಕ್ಷಿ, ನೀನು ನನ್ನನ್ನು ಮರೆಯಬೇಡ"

"ಏಕೆ ಮರೆಯಬಾರದು ಚಂದ್ರು. ನಾನೇಕೆ ನಿನ್ನನ್ನು ನೆನೆಸಿಕೊಂಡು ಅಳುತ್ತಿರಬೇಕು ?"

"ಛೀ ! ಹಾಗಲ್ಲ. ನಿನ್ನನ್ನು ಅಳಬೇಕೆಂದು ಹೇಳಲಿಲ್ಲ. ನಾನು ನಿನ್ನನ್ನು ಮರೆಯಲಾರೆ. ಆದ್ದರಿಂದ ನೀನೂ ಮರೆಯಬೇಡ ಎಂದೆ ಅಷ್ಟೆ ಮೀನಾ."

ಮೀನಾ ಹಾಲು ಕರೆದು ಎದ್ದು ನಿಂತು, "ಅಂಬಾ" ಎಂದು ಹಾಲಿಗಾಗಿ ಅರಚುತ್ತಿದ್ದ ಕರುವನ್ನು ಹಾಲು ಕುಡಿಯಲು ಬಿಚ್ಚಿಬಿಟ್ಟಳು. ಕೃತಜ್ಞತಾಪೂರ್ವಕವಾಗಿ ಹಸು ಮೀನಳೆಡೆ ಮುಖ ತಿರುಗಿಸಿ ನೋಡಿತು ! ಮೀನಾಕ್ಷಿಯೂ ಕೃತಜ್ಞತಾಪೂರ್ವಕವಾಗಿ ಚಂದ್ರುವಿನ ಕಡೆ ತಿರುಗಿನೋಡಿ ಕೇಳಿದಳು.

"ಇದು ನಿಜವೇ ?"

ಚಂದ್ರು ಸರ್ರನೆ ತನ್ನ ಜೇಬಿನಿಂದ ತಾನು ತೆಗೆದ ಮೀನಾಕ್ಷಿಯ ಫೋಟೋವನ್ನು ತೆಗೆದು ತೋರಿಸಿ ಹೇಳಿದನು :

"ನೋಡು ಮೀನಾ, ಇದೇ ಸಾಕ್ಷಿ ನನ್ನ ಮಾತಿಗೆ. ಇದು ಯಾವಾಗಲೂ ನನ್ನ ಬಳಿ ಇರುತ್ತದೆ. ಈಗಲಾದರೂ ಹೇಳು ಮೀನಾ ನನ್ನನ್ನು ಮರೆಯುವುದಿಲ್ಲ ಎಂದು."

ಮೀನಾ ತುಂಬು ಹೃದಯದಿಂದ,

" ನಾನೂ ನಿನ್ನನ್ನು ಎಂದೆಂದಿಗೂ ಮರೆಯುವುದಿಲ್ಲ "

ಎಂದು ಹೇಳಿ ಹಾಲಿನ ಚೆಂಬನ್ನು ತೆಗೆದುಕೊಂಡು ಒಳಗೆ ಹೊರಟುಹೋದಳು.

ಚಂದ್ರು ತೃಪ್ತಿಯ ನಿಟ್ಟುಸಿರನ್ನು ಬಿಟ್ಟನು. ಅವನ ಹೃದಯ ಮೀನಳ ಭರವಸೆಯಿಂದ ಹಗುರವಾಯಿತು. ಆನಂದದ ಮಿಂಚು ಮೈಯನ್ನೊಮ್ಮೆ ಮಿಂಚಿಸಿತು. ಆದರೆ ಏಕೆ ಹಾಗಾಯಿತೋ ಆಕ್ಷಣ ಅವನಿಗೆ ತಿಳಿಯಲಿಲ್ಲ.

೪

ಚಂದ್ರುವಿಗೆ ಎಸ್.ಎಸ್.ಎಲ್.ಸಿ. ಪಾಸಾದ ಶುಭವರ್ತಮಾನ ಬಂದಿತು. ಸುಬ್ಬಯ್ಯನವರ ಆಸೆ ಪೂರೈಸಿತು. ಕಾಮಾಕ್ಷಿ ತನ್ನ ಗಂಡ ಎಸ್.ಎಸ್.ಎಲ್.ಸಿ. ಪರೀಕ್ಷೆಮಾಡಿ ಕಾಲೇಜಿಗೆ ಸೇರಿಬಿಡುವನೆಂದು ಅಹಂಕಾರದಲ್ಲಿ ಮೆರೆದಳು. ಆದರೆ ಮೀನಾಕ್ಷಿಗಾದ ಸಂತೋಷ ವರ್ಣನಾತೀತವಾಗಿದ್ದಿತು. ಚಂದ್ರು ಕಾಲೇಜಿಗೆ ಸೇರಿ ಬಿ.ಎ. ಪಾಸ್ ಮಾಡುವನು. ಮುಂದೆ ತಾನು ಹೇಳಿದ್ದಂತೆ ದೊಡ್ಡ ಕ್ಯಾಮರಾಮ್ಯಾ ಆಗುವನು. ನೂರಾರು ರೂಪಾಯಿಗಳನ್ನು ಸಂಪಾದಿಸುವನು. ಕಾಮಾಕ್ಷಿಯೊಡನೆ ಸಂಸಾರ ಮಾಡುವನು............... ಕಾಮಾಕ್ಷಿ ಚಂದ್ರುವಿನ ಮನೆ ತುಂಬಿಸುವಳು. ಅವನ ಮಕ್ಕಳು........ಹೋ ಚಂದ್ರುವಿನ ಮಕ್ಕಳು........ಮೀನಾಕ್ಷಿಯ ಭಾವನೆ ಅಲ್ಲಿಗೆ ಮುಗಿಯುತ್ತಿತ್ತು. ಕಾಮಾಕ್ಷಿಯ ಬಾಳು ಸುಖದ ಬೀಡಾಗಿ ತನ್ನ ಬಾಳು ಹಾಳಾಯಿತೆಂದು ಮೀನಾ ಕಣ್ಣೀರಿಡುತ್ತಿದ್ದಳು.

ಶಾಮಣ್ಣನವರು ನಿಷೇಕಮಾಡಿ ಕಾಮಾಕ್ಷಿಯನ್ನು ಅತ್ತೆಯ ಮನೆಗೆ ಕಳುಹಿಸಿಕೊಟ್ಟರು. ಮನೆಗೆಲ್ಲಾ ಮೀನಾಕ್ಷಿ ಒಬ್ಬಳೇ ಆದಳು.

ಸುಬ್ಬಮ್ಮನವರು ಅವಳು ಯಾವಾಗ ದೊಡ್ಡವಳಾಗುವಳೋ, ಇನ್ನು ಅವಳಿಗೊಂದು ಗಂಡು ಹುಡುಕಬೇಕೆಂದು ಗೊಣಗಿಕೊಂಡರು. ಅವರೇ ಅವಳ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ಅದನ್ನು ಪೂರೈಸಬೇಕಾಗಿದ್ದಿತು. ಅವರು ಹೆದರಿದ್ದಂತೆ ಕಾಮಾಕ್ಷಿಯ ನಿಷೇಕ ವಾದ ನಾಲ್ಕು ತಿಂಗಳಲ್ಲೇ ಮೀನಾಕ್ಷಿಯೂ ದೊಡ್ಡವಳಾಗಿಬಿಟ್ಟಳು. ಸುಬ್ಬಮ್ಮನವರಿಗೆ ಮತ್ತೆ ಜನಗಳ ಬಾಯಿಗೆ ಸಿಕ್ಕಬೇಕಲ್ಲಾ ಎಂದು ಹೆದರಿಕೆಯಾಯಿತು. ಶಾಮಣ್ಣನವರೂ ವರಾನ್ವೇಷಣೆಯ ಎತ್ತುಗಡೆ ನಡೆಸಿದ್ದರು. ಮತ್ತೆ ಪಾಪಚ್ಚಿಯ ತಂದೆ ಭೇಟಿಕೊಟ್ಟು ಶಾಮಣ್ಣ ನವರನ್ನು ಮಠದ ಬಗ್ಗೆ ಎಚ್ಚರಿಸಿ ಹೋದರು ! ಸುಬ್ಬಮ್ಮನವರಿಗೆ ಹೇಗೋ ಅಲ್ಪಖರ್ಚಿನಲ್ಲಿ ಒಂದು ಮದುವೆ ಮಾಡಿಬಿಟ್ಟು ಕೈತೊಳೆದು ಕೊಂಡುಬಿಡಬೇಕೆನ್ನಿಸಿತು. ಒಳ್ಳೆಯ ಕಡೆ ನೋಡಿದರೆ ಎಲ್ಲರೂ ವರದಕ್ಷಿಣೆ ಕೇಳುತ್ತಿದ್ದರು. ಶಾಮಣ್ಣನವರಿಗೆ ಬೇಜಾರು ಬಂದು ಹೋಗಿತ್ತು. ಸುಬ್ಬಮ್ಮನವರೂ "ವರದಕ್ಷಿಣೆ ಗಿರದಕ್ಷಿಣೆ ಕೊಡೋದಕ್ಕೆ ಆಗೋದಿಲ್ಲಾಂದ್ರೆ. ನಮಗೇನು ದುಡ್ಡು ಸುರಿದು ಹೋಗುತ್ತಿದೆಯೋ. ಈಗಲೇ ಹೊಲದಮೇಲೆ ಸಾಲತೆಗೆದಾಗಿದೆ. ಇರೋ ಒಂದು ಗುಡಿಸಲು, ಒಂದಷ್ಟು ಜಮೀನು ನಾಳೆ ಶೀನಿಗೆ ಬೇಡವೆ ? ಅವನ ಅದೃಷ್ಟ ಹೇಗಿದೆಯೋ ಏನೋ. ಚಂದ್ರು ಏನು ಮಾಡುತ್ತಾನೋ. ಅವನಿಗೂ ನಾವು ಸಹಾಯಮಾಡಬೇಡವೇ ? ಎರಡನೇ ಮದುವೆ ಆದರೂ ಪರವಾಗಿಲ್ಲ. ಅವನೇ ಬಂದು ಎರಡು ಖರ್ಚೂ ಹಾಕಿ ಮದುವೆ ಮಾಡಿಕೊಂಡು ಹೋಗಬೇಕು" ಎಂದು ಕಡ್ಡಿತುಂಡುಮಾಡಿದಂತೆ ಹೇಳಿಬಿಟ್ಟರು. ಶಾಮಣ್ಣನವರು ಕಂಡಕಂಡವರಿಗೆಲ್ಲಾ ಒಂದು ಗಂಡು ಹುಡುಕಿಕೊಡುವಂತೆ ಕೇಳಿಕೊಂಡು ವಿಶ್ವಪ್ರಯತ್ನ ನಡೆಸಿದರು. ಮೀನಾಕ್ಷಿಯ ರೂಪೊಂದೇ ಅವಳ ಸಹಾಯಕ್ಕೆ ಬರಲಿಲ್ಲ. ಮದುವೆಯ ಗಂಡುಗಳು ಶಾನುಭೋಗರಿಂದ ಆದಷ್ಟು ಹಣವನ್ನೂ ಕೀಳಲು ಪ್ರಯತ್ನಿಸಿ ಸೋತುಹೋಗುತ್ತಿದ್ದರು.

ಮತ್ತೆ ಮೂರು ತಿಂಗಳು ಕಳೆಯಿತು. ಅವರ ಅಭಿಲಾಷೆ ಪೂರೈಸಿರಲಿಲ್ಲ. ಕೊಂಚದರಲ್ಲಿ ಪೂರೈಸುವ ಸೂಚನೆಯೂ ಇರಲಿಲ್ಲ.

ಮೀನಾಕ್ಷಿಗೆ ಬಾಳು ಬೇಸರವಾಯಿತು. ಸುಂದರಿ ಎಂದು ಹೊಗಳುತ್ತಿದ್ದವರೆಲ್ಲ ಈಗ ದುರಾದೃಷ್ಟದ ಹೆಣ್ಣೆಂದು ಹಳಿಯತೊಡಗಿದರು. ಮೀನಾಕ್ಷಿಗೆ ತನ್ನ ಜೀವನ ಶೂನ್ಯವಾಗಿಹೋಗುತ್ತಿರುವಂತೆ ಕಂಡಿತು. ಮೀನಾ ಈಗ ಚಂದ್ರುವನ್ನು ಪ್ರಬುದ್ಧ ಸ್ತ್ರೀಯ ದೃಷ್ಟಿಯಿಂದ ಪ್ರೇಮಿಸತೊಡಗಿದಳು ಚಂದ್ರು ತನ್ನ ಕೈತಪ್ಪಿಹೋದನೆಂದೂ, ತನ್ನ ಬಾಳಿಗಿನ್ನು ಕಾರಿರುಳು ಕವಿಯಿತೆಂದೂ ಅವಳು ನಿರ್ಧರಿಸಿಬಿಟ್ಟಳು. ಇನ್ನು ಏನಾದರೇನು ? ಎಲ್ಲಿಗೆ ಹೋದರೇನು ? ಯಾರನ್ನು ಮದುವೆಯಾದರೆ ಏನು ? ಎಲ್ಲ ಒಂದೇ. ತನಗೆಲ್ಲೂ ಸುಖ ಸಿಕ್ಕುವುದಿಲ್ಲವೆಂದುಕೊಂಡಳು.

ಆದಿನ ಶಾಮಣ್ಣನವರು ಒಂಭತ್ತು ಗಂಟೆಯ ವೇಳೆಗೆ ಯಾರನ್ನೋ ಕರೆದುಕೊಂಡು ಮನೆಗೆ ಬಂದರು. ಅವರ ಹಿಂದೆಯೇ ಒಬ್ಬ ಮುತ್ತೈದೆ ಹೆಂಗಸು ಬಂದರು. ಸುಬ್ಬಮ್ಮನವರಿಗೆ ಅವರನ್ನು ಪರಿಚಯಮಾಡಿಕೊಡುತ್ತ, "ನೋಡು ಸುಬ್ಬಿ, ಇವರು ಸಾಗರದಿಂದ ಬಂದಿದ್ದಾರೆ ಸುಬ್ಬಯ್ಯನ್ನ ಹುಡುಕಿಕೊಂಡು. ಸೀತಮ್ಮನ ನೆಂಟರಂತೆ" ಎಂದರು.

ಸುಬ್ಬಮ್ಮನವರು ಆ ಮಧ್ಯವಯಸ್ಸನ್ನು ಮೀರಿದ ಮುತ್ತೈದೆಯನ್ನು ಒಳಗೆ ಕರೆದುಕೊಂಡು ಹೋಗಿ ಚಾಪೆ ಹಾಸಿ ಕೂಡಿಸಿದರು.

"ಬನ್ನಿ .... ಸೀತಮ್ಮನ ಕಡೆಯವರಂತೆ. ನನಗೆ ನಿಮ್ಮನ್ನು ನೋಡಿದ ನೆನಪೇ ಇಲ್ಲ."

"ಇದೇನು ? ನೀವು ಮರೆತುಬಿಟ್ರಿ ಅಂತ ಕಾಣುತ್ತೆ. ನಾನು ನಾಗವೇಣಮ್ಮ ಅಲ್ವೆ. ಸೀತಮ್ಮ ನನ್ನ ಸೋದರತ್ತೆ ಮಗಳು. ಮದುವೆಗೂ ಬಂದಿದ್ದೆನಲ್ಲ. ಅವಳ ಕಡೆ ನೆಂಟರು ಅಂತ ಇನ್ಯಾರಿದ್ದರು."

"ಏನೋ ಇಪ್ಪತ್ತು ಇಪ್ಪತ್ತೆರಡು ವರ್ಷ ಆಗ್ಹೋಯ್ತು. ಮರೆತು ಬಿಟ್ಟಿದ್ದೀನಿ. ಪಾಪ ರೈಲು ಪ್ರಯಾಣ. ಬಹಳ ಬೇಸರವಾಯ್ತೇನೋ."

"ನೆನ್ನೆ ಇಂದ್ಲೂ ಒಂದೇ ಸಮನೆ ಪ್ರಯಾಣ. ಹಾಳಾದ ರೈಲು. ಅದೇನು ಜನವೋ ಮಡಿ ಇಲ್ಲ ಮೈಲಿಗೆ ಇಲ್ಲ."

"ಏಳಿ ಹಾಗಾದ್ರೆ. ಪಾಪ, ಕಾಫಿ ಕುಡಿದು ಸ್ನಾನ ಮಾಡಿ ಬನ್ನಿ. ಒಂದಿಷ್ಟು ಉಪ್ಪಿಟ್ಟು ಮಾಡ್ತೀನಿ ಬೇಗ."

"ಬೇಡಮ್ಮ ಬೇಡ. ನನಗೆ ಕಾಫಿಗೀಫಿ ಸೇರೊಲ್ಲ. ಬಾಯಾರಿದೆ. ಒಂದ್ಪಂಚಪಾತ್ರೆ ನೀರು ಕೊಟ್ಬಿಡಿ."

"ತಾಳಿ ಹಾಗಾದ್ರೆ, ದಣಿದು ಬಂದಿದೀರಿ. ಒಂದ್ಲೋಟ ಸೀಮುಜ್ಜಿಗೆನಾದ್ರೂ ಕೊಡ್ತೀನಿ. ಅವರು ಯಾರೋ ಬಂದಿರೋದು ?"

"ನನ್ನ ಮಗ. ರಾಮಚಂದ್ರ ಅಂತ. ಇಬ್ಬರೂ ದೇವರ ದರ್ಶನ ಮಾಡಿಕೊಂಡು ಹೋಗೋಣ ಅಂತ ಬಂದ್ವು. ಎಲ್ಲಿ ಸುಬ್ಬಯ್ಯ ಕಾಣೋದೇ ಇಲ್ವಲ್ಲ."

"ಸುಬ್ಬಯ್ನೇ............ಹ್ಞ, ಅವನು ದೇಶಾಂತರ ಹೋಗಿ ಹದಿನಾಲ್ಕು ವರ್ಷ ಆಯ್ತು. ಅವನ ಕಥೆ ಏನ್ಕೇಳ್ತೀರಿ."

"ಅವನ ಮಗಳು. ಅದೇ ನಮ್ಮ ಸೀತೆ ಮಗಳು. ಅವಳು ಇಲ್ಲೇ ಇರಬೇಕು ಅಲ್ವೇ........"

"ಇದಾಳೆ, ಬೇಕಾದ ಹಾಗೆ ಇದಾಳೆ. ಅದಕ್ಕೇನಂತೆ. ಎರಡು ತಿಂಗಳ ಮಗೂನ ನನ್ನ ಕೈಲಿ ಹಾಕಿ ಹೋದ. ಅವಳನ್ನ ಬೆಳಸುವುದಕ್ಕೆ ನಾನು ಪಟ್ಟ ಪಾಡು ಅಷ್ಟಿಷ್ಟಲ್ಲ. ಮೊದಲಿಂದಲೂ ಖಾಯಿಲೆಯೇ ಆಗ್ಹೋಯ್ತು. ಈಗ ಎರಡು ವರ್ಷಗಳಿಂದ ವಾಸಿ. ಲೇ....ಮೀನಾಕ್ಷೀ ಮೀನಾಕ್ಷೀ."

ಮೀನಾಕ್ಷಿ ಹಿತ್ತಲಿನಲ್ಲಿ ಜೋಳದ ಕಡ್ಡಿ ಕತ್ತರಿಸುತ್ತಿದ್ದಳು. "ಬಂದೇಮ್ಮಾ" ಎಂದುಕೊಂಡು ಓಡಿಬಂದಳು. ಹೊಸಬರೊಬ್ಬರು ಇರುವುದನ್ನು ಗಮನಿಸಿ ಹಾಗೇ ಬಾಗಿಲಲ್ಲಿ ನಿಂತುಕೊಂಡಳು.

"ನೋಡೇ, ನಿನ್ನ ತಾಯಿ ನೆಂಟರಂತೆ. ನಿನ್ನ ನೋಡೋಕೆ ಬಂದಿದಾರೆ."

ಮೀನಾಕ್ಷಿ ಅಲ್ಲೇ ನಿಂತಿದ್ದಳು. ನಾಗವೇಣಮ್ಮನವರು ಮೀನಾಕ್ಷಿಯನ್ನು ಕಣ್ಣು ತುಂಬ ನೋಡಿದರು. ಅವಳ ಚೆಲುವನ್ನೆಲ್ಲ ಹೀರಿ ಬಿಡುವಂತೆ ಕಣ್ಣರಳಿಸಿ ನೋಡಿದರು.

"ಬಾರೇ ಒಳಗೆ. ಬಾ, ಚಾಪೆಯ ಮೇಲೆ ಕೂತುಕೋ"

ಮೀನಾಕ್ಷಿ ಬಂದು ನಾಗವೇಣಮ್ಮನವರ ಹತ್ತಿರ ಕುಳಿತುಕೊಂಡಳು. ನಾಗವೇಣಮ್ಮ ಅವಳ ಗಲ್ಲ ಹಿಡಿದೆತ್ತಿ "ಎಷ್ಟು ಲಕ್ಷಣ

ಹಾಗಿದ್ದೀಯಮ್ಮ ಎಲ್ಲಾ ಸೀತಮ್ಮನ ಹಾಗೇ ಅಲ್ವೇಂದ್ರೆ? ಅವಳಿದ್ದಿದ್ರೆ ಎಷ್ಟು ಸಂತೋಷ ಪಟ್ಟುಕೊಳ್ಳುತ್ತಿದ್ದಳೋ" ಎಂದು ಕಣ್ಣೀರು ತಂದುಕೊಂಡರು.

ಸುಬ್ಬಮ್ಮನವರಿಗೆ ಹೊಟ್ಟೆ ಉರಿಯಿತು. "ಹದಿನಾಲ್ಕು ವರ್ಷಗಳಿಂದ ಎಲ್ಲಿ ಹೋಗಿತ್ತೋ ಈ ಪ್ರೀತಿ, ಈ ನೆಂಟಸ್ತನ" ಅಂದುಕೊಂಡರು ಮನಸ್ಸಿನಲ್ಲೇ.

ಸುಬ್ಬಮ್ಮನವರು ಎದ್ದು ಹೋಗಿ ಒಂದು ಲೋಟ ಮಜ್ಜಿಗೆ ತಂದು ನಾಗವೇಣಮ್ಮನವರ ಮುಂದಿಟ್ಟರು. ಇನ್ನೊಂದು ಲೋಟಾ ಮಜ್ಜಿಗೆಯನ್ನು ಮೀನಾಕ್ಷಿ ಕೈಯ್ಯಲ್ಲಿ ರಾಮಚಂದ್ರಯ್ಯನಿಗೆ ಕೊಟ್ಟು ಕಳುಹಿಸಿದರು. ರಾಮಚಂದ್ರಯ್ಯ ಹೊರಗಡೆ ಚಾಪೆಯ ಮೇಲೆ ಶಾಮಣ್ಣನವರ ಜೊತೆ ಮಾತನಾಡುತ್ತ ಕುಳಿತಿದ್ದನು. ಮೀನಾಕ್ಷಿ ಬಾಗಿಲಲ್ಲೇ ನಿಂತುಕೊಂಡು "ಅಪ್ಪಾ........"ಎಂದಳು. ಶಾಮಣ್ಣನವರು "ಬಾಮ್ಮ, ತಗೊಂಡು ಬಾ. ಅವರು ನಿನ್ನ ತಾಯಿಯ ನೆಂಟರು. ಪರವಾಗಿಲ್ಲ ಬಾ" ಎಂದರು.

ಮೀನಾಕ್ಷಿಗೆ ಅವರಿಬ್ಬರೂ ತನ್ನ ತಾಯಿಯ ಕಡೆಯವರೆಂದ ಕೂಡಲೇ ಆನಂದವಾಗಿತ್ತು. ನನ್ನ ತಾಯಿ ಇಲ್ಲದೇ ಹೋದರೆ ಹೋಗಲಿ ಅವರ ಕಡೆಯವರಾದರೂ ಇದ್ದಾರಲ್ಲ ಅಂದುಕೊಂಡಳು. ಅಂದು ಅವಳಿಗೆ ಏನೋ ಒಂದು ಬಗೆಯ ಹೆಮ್ಮೆ, ಸಂತೋಷ. ಮೀನಾಕ್ಷಿ ಬೆಳ್ಳಿ ಬಟ್ಟಲಿನಲ್ಲಿ ಮಜ್ಜಿಗೆ ಇಟ್ಟು ಒಂದು ಸಾರಿ ತನ್ನ ತಾಯಿಯ ನೆಂಟನನ್ನು ನೋಡಿಕೊಂಡು ಹೋದಳು. ರಾಮಚಂದ್ರಯ್ಯ, ಶಾಮಣ್ಣನವರ ಕಣ್ಣು ತಪ್ಪಿಸಿ ಮೀನಾಕ್ಷಿಯನ್ನು ನುಂಗಿ ಹಾಕುವಂತೆ ನೋಡಿದನು. ಅವನ ದೃಷ್ಟಿಯಲ್ಲಿ ಪಶುತ್ವ ಎದ್ದು ಕಾಣುತ್ತಿದ್ದಿತು. ಹಸಿವಿನೊಡನೆ ಬೆರೆತ ಅಸಹಾಯಕತೆ ಅವನ ನೋಟದಲ್ಲಿ ವಿಲೀನವಾಗಿದ್ದಿತು. ಶಾಮಣ್ಣನವರು ರಾಮಚಂದ್ರಯ್ಯನನ್ನು ಸ್ನಾನಕ್ಕೆ ಎಬ್ಬಿಸಿದರು.

ಸ್ನಾನ ಮಾಡಿ ಬಂದ ಕೂಡಲೇ ಸುಬ್ಬಮ್ಮನವರು ಕಾಫಿ ಉಪ್ಪಿಟ್ಟನ್ನು ರಾಮಚಂದ್ರಯ್ಯನಿಗೆ ಕೊಟ್ಟು ಬಂದರು. ಮೀನಾಕ್ಷಿ

ಕೊಟ್ಟಿಗೆಯನ್ನು ಸಾರಿಸುತ್ತಿದ್ದಳು.

ಹನ್ನೆರಡು ಘಂಟೆಯ ಹೊತ್ತಿಗೆ ಎಲ್ಲರದೂ ಊಟವಾಯಿತು. ಹತ್ತು ನಿಮಿಷದಲ್ಲೇ ಊಟ ಮಾಡಿ ನಾಗವೇಣಮ್ಮನವರ ಮುಂದೆ, ಎಲೆ ಅಡಿಕೆ ತಟ್ಟೆ ಇಟ್ಟು ಸುಬ್ಬಮ್ಮನವರೂ ಕುಳಿತುಕೊಂಡರು. ಮೀನಾಕ್ಷಿ ಕಸಮುಸುರೆ ನೋಡಿಕೊಳ್ಳುತ್ತಿದ್ದಳು. ಎಲೆಗೆ ಸುಣ್ಣ ಹಚ್ಚುತ್ತ ನಾಗವೇಣಮ್ಮನವರೇ ಮಾತಿಗೆ ಆರಂಭಿಸಿದರು.

" ನಿಮ್ಮ ಮಗಳು ಒಬ್ಬಳು ಇದಾಳೇಂತ ಕೇಳಿದೆನಲ್ಲಾ."

" ಹೌದು ಕಾಮಾಕ್ಷಿಗೆ ಮದುವೆ ಆಗಿ ವರ್ಷವಾಯ್ತು. ಅತ್ತೇ ಮನೇಲಿದಾಳೆ."

" ಓಹೋ, ಸಂತೋಷ. ಯಾವ ಊರ್ನಲ್ಲೋ ?"

" ಮೈಸೂರಿನಲ್ಲಿ."

" ಅಳಿಯಂದಿರು ಏನು ದೊಡ್ಡ ಕೆಲಸದಲ್ಲಿದ್ದಾರೇನೋ ? "

" ಇಲ್ಲ, ಕಾಲೇಜಿನಲ್ಲಿ ಓದ್ತಿದಾನೆ. ನಮ್ಮ ಯಜಮಾನರ ತಂಗೀ ಮಗನೇ."

" ಸರಿ, ಸರಿ. ನೆಂಟಸ್ತನ ಬಿಟ್ಟುಹೋಗಬಾರದೂಂತ, ಅವನಿಗೇ ಕೊಟ್ಟರೇನೋ. ಕಾಲೇಜ್ನಲ್ಲಿ ಓದು ಮುಗಿದ ಮೇಲೆ ದೊಡ್ಡ ಕೆಲಸ ಸಿಕ್ಕುತ್ತೆ. ಕೈತುಂಬ ಹಣ ಸಿಕ್ಕುತ್ತೆ. ನಿಮಗೆಒಬ್ಳೇ ಮಗ್ಳು ಒಬ್ನೇ ಮಗ. ಮಗಳ ಸಂಸಾರಾನೂ ನಿಭಾಯಿಸಬಹುದು. ಮೊಮ್ಮಕ್ಕಳ ಸಂಸಾರಾನೂ ನಿಭಾಯಿಸಬಹುದು. ದೇವರು ನಿಮಗೇನೂ ಕಮ್ಮಿ ಮಾಡಿಲ್ಲ "

ಸುಬ್ಬಮ್ಮನವರ ಮುಖ ಅರಳಿಹೋಯಿತು.

" ನೀವು ಹೇಳೋದು ನಿಜಾನ್ನಿ. ಅವನಿಗೂ ಇನ್ನೂ ಇಪ್ಪತ್ತು ವರ್ಷ. ಬಹಳ ಒಳ್ಳೆಯವನು. ಕಾಮಾಕ್ಷಿ ಅಂದರೆ ಪ್ರಾಣಬಿಡ್ತಾನೆ. ಅವರ ಮನೆಯವರೂ ಅಷ್ಟೆ. ಬಹಳ ಚೆನ್ನಾಗಿ ನೋಡ್ಕೋತಾರೆ. ಏನೋ ಬಡವರಿರಬಹುದು. ಆದ್ರೆ ಪ್ರೀತಿ ತುಂಬಿದ ಮನೆ. ನಾವೂ ತಿಂಗಳ್ ತಿಂಗಳ್ಗೆ ದುಡ್ಡು ಕಳಿಸ್ತೀವಿ. ಅವರೇನು ದೂರ್ದವರೇ ಹೇಳಿ. ಖಾಸಾ ಅವರ ತಂಗಿ, ಅವ್ಳ ಮಕ್ಕಳು ಕೊಟ್ಟರೆ ಏನೂ ಅನ್ಯಾಯ

ವಾಗೊಲ್ಲ. ನಾವೂ ಅವಳಿಗೆ ಏನೂ ಕಡಿಮೆ ಮಾಡಿಲ್ಲಾಂದ್ರೆ. ಮೈ ತುಂಬ ಸೇರು ಬಂಗಾರ ಹಾಕಿದೀವಿ. ನಾಲ್ಕುಸಾವಿರ ರೂಪಾಯಿ ಖರ್ಚುಮಾಡಿ ಮದ್ವೆಮಾಡಿದ್ವಿ. ಅಳಿಯನಿಗೇ ಎರಡುಸಾವಿರ ರೂಪಾಯಿ ಕೊಟ್ವಿ. ಅವರು ಸಂಪಾದಿಸಿರೋದೆಲ್ಲಾ ಯಾರಿಗೆ ಹೇಳಿ. ಇವರಿಬ್ಬರಿಗೇ. ಇರೋನೊಬ್ಬ ಮಗ. ಅವನು ಓದದೇ ಹೋದ್ರೂ ಪರ್ವಾಗಿಲ್ಲ. ಅವರ ಶಾನುಭೋಗ್ಯದ ಹಕ್ಕು ಇದ್ದೇ ಇದೆ. ಹೇಗೋ ಆಗುತ್ತೆ ಅನ್ನಿ. ನಮ್ಮ ಕಾಮಾಕ್ಷಿ ಗಂಡನೂ ಖಂಡಿತ ಪಾಸು ಮಾಡ್ತಾನೆ. ಒಳ್ಳೇ ಕೆಲ್ಸ ಸಿಕ್ಕೇ ಸಿಕ್ಕುತ್ತೆ. ಆದರೆ ಈಗ ಇರೋ ಯೋಚನೆ ನೋಡಿ ಈ ತಬ್ಬಲಿ, ಹೆಣ್ಣೊಂದು. ಮೀನಾಕ್ಷೀನ ನನ್ನ ಕುತ್ತಿಗೇಗೆ ಕಟ್ಟಿ ದೇಶಾಂತರ ಹೋದ ತಮ್ಮ ಅನ್ನಿಸಿಕೊಂಡೋನು. ಅವಳನ್ನು ಒಬ್ಬ ಬ್ರಾಹ್ಮಣನಿಗೆ ದಾನ ಮಾಡಿಬಿಟ್ಟರೆ ನಾನು ನಿಶ್ಚಿಂತೆ ಯಾಗಿರಬಹುದು."

ನಾಗವೇಣಮ್ಮನವರು ತಾವು ಊರಿಗೆ ಬಂದ ಉದ್ದೇಶ ಮೆಲ್ಲ ಮೆಲ್ಲನೆ ಹೊರಗೆಡಹಿದರು. ಸುಬ್ಬಮ್ಮನವರೇ ಮೀನಾಕ್ಷಿಯ ಮಾತೆತ್ತಿ ಆ ಪ್ರಸ್ತಾಪನೆಗೆ ಪೀಠಿಕೆ ಹಾಕಿಕೊಟ್ಟಿದ್ದರು.

"ಮೀನಾಕ್ಷಿಗೆ ಎಷ್ಟು ವರ್ಷ ಅಂದಿರಿ ?"

"ಇನ್ನೇನು ಹದಿನೈದು ತುಂಬುತ್ತೆ "

"ದೊಡ್ಡವಳಾಗಿವಾಳೇಂತ ಕಾಣುತ್ತೆ."

"ಆರು ತಿಂಗಳಾಯ್ತು. ಅಕ್ಕಪಕ್ಕದವರೆಲ್ಲಾ ಆಡ್ಕೊಳ್ತಿದಾರೆ. ನನಗೆ ಈ ವಯಸ್ಸಿನಲ್ಲಿ ಇದೊಂದನ್ನು ಕಟ್ಟಿಬಿಟ್ಟು ಹೋದ ಮಹಾ ರಾಯ. ಅವಳಿಗೆ ಗಂಡು ಹುಡುಕಿ ಹುಡುಕಿ ಸಾಕಾಯ್ತು."

"ನೋಡಿ ಸುಬ್ಬಮ್ನೋರೆ. ನಾನು ಬಂದಿರೋದೂ ಅದೇ ವಿಚಾರಕ್ಕೆ. ವರ್ಷದ ಹಿಂದೆ ಯಾರೋ ಹೇಳಿದ್ದರು. ನಮ್ಮ ಸೀತಮ್ಮನ ಮಗಳು ಅವಳ ಸೋದರತ್ತೆ ಮನೇಲಿ ಇದಾಳೆ ಅಂತ. ನೋಡಿ ನಮ್ಮ ಖರ್ಮ ನನ್ನ ಮೊದಲ ಸೊಸೆ ತೀರಿಹೋಗಿ ಮೂರು ವರ್ಷ ಆಯ್ತು. ವಂಶದ ಹೆಸರು ಹೇಳೋಕೆ ಒಂದು ನುಗುವಾದ್ರೂ ಆಗ್ದೇ ಹೋಯ್ತು. ನಮ್ಮ ರಾಮೂಗೆ ಏನು ಇವತ್ತೆಲ್ಲಾ ಮೂವತ್ತು

ವರ್ಷವಾಗಿದ್ದರೆ ಹೆಚ್ಚು. ಅಷ್ಟೂ ಇಲ್ಲ. ಏನೋ ಮರೆವು. ನಿಮ್ಮ ಮೀನಾಕ್ಷೀನ ಮದುವೆ ಮಾಡಿಕೊಟ್ಟರೆ ನೋಡೀಮ್ಮ. ನಮ್ಮ ಸಂಸಾರಾನೂ ಉಳಿದ ಹಾಗಾಗುತ್ತೆ. ನನ್ನ ನೆಂಟಸ್ಥಿಕೇನೂ ಕುದರುತ್ತೆ."

ಸುಬ್ಬಮ್ಮನವರು ಯೋಚಿಸುವಂತೆ ನಟಿಸಿದರು.

"ನಾವೂ ಅದೇ ಯೋಚನೆಯಲ್ಲಿದ್ದೇವೆ....... ಆಸ್ತಿಗೀಸ್ತಿ ಏನಾದರೂ ಇದೆಯೋ ?"

"ಏನೋ ಸಾಗರದಲ್ಲಿ ಒಂದು ಮನೆ ಇದೆ, ಅಷ್ಟೆ. ಬಾಡಿಗೆ ಮನೆಗಾಗಿ ಮತ್ತೊಬ್ಬರ ಕಾಲು ಕಟ್ಟಬೇಕಾಗಿಲ್ಲ. ಒಂದೆರಡು ಎಕರೆ ಜಮೀನಿದೆ. ರಾಮು ಎಲೆಕ್ಟ್ರಿಕ್ ಆಫೀಸಿನಲ್ಲಿ ಕೆಲಸಕ್ಕಿದಾನೆ. ಅಲ್ಲೊಂದು ಐವತ್ತು ರೂಪಾಯಿ ಬರುತ್ತೆ. ಹೇಗೋ ಮಾನವಾಗಿ ಸಂಸಾರ ನಡೆಸಿ ಕೊಂಡು ಹೋಗಬಹುದು"

"ಸರಿ.............ಇನ್ನೇನು ಬೇಕು ಹೇಳಿ. ಅಷ್ಟು ಸಿಕ್ಕಿದರೆ ಅವಳ ಅದೃಷ್ಟ ಅನ್ನಬಹುದು. ನಾನು ಬೆಳೆಸಿದ ಹುಡುಗಿ. ನನ್ನ ಮಗಳಿಗೊಂದು, ಅವಳಿಗೊಂದು ಮಾಡಿಲ್ಲ ನೋಡಿ. ಅವಳ ಮನಸ್ಸಿಗೆ ಕೊಂಚವೂ ನೋವಾಗ್ದೇ ಇರೋಹಾಗೆ ಸಾಕ್ಕೊಂಡು ಬಂದಿದೀನಿ. ಪರಮಾತ್ಮನ ಇಚ್ಛೆ. ನಿಮ್ಮನೇಗೆ ಸೇರ್ಬೇಕು ಅಂತಿದ್ದರೆ ನಂದೇನು ನಡೆಯುತ್ತೆ ಹೇಳಿ."

"ಹಾಗಾದ್ರೆ, ಈ ವಿಷಯಾನ ನಿಮ್ಮ ಯಜಮಾನರ ಕಿವೀ ಮೇಲೆ ಹಾಕಿ ಒಪ್ಪಿಸಿಬಿಡಿ. ಎಲ್ಲಾ ಇತ್ಯರ್ಥವಾಗ್ಹೋಗ್ಲಿ ಇಲ್ಲೇ."

"ಒಡವೆ ಗಿಡವೆ........"

"ನೋಡಿ ನಾನು ವಂಚನೆಯಿಲ್ದೆ ಹೇಳ್ತೀನಿ. ನಮಗೆ ಹೊಸ ಒಡವೆ ಮಾಡಿಸೋಕೆ ಚೈತನ್ಯವಿಲ್ಲ. ಮೊದಲ ಹೆಂಡತೀಗೆ ಒಂದೆಳೆ ಸರ, ಒಂದು ಜೊತೆ ಬೊಂಬಾಯಿ ಬಳೆ ಮಾಡಿಸಿ ಹಾಕಿದ್ದೆ. ಅವರ ತಾಯೀ ಮನೇಲೂ ಒಂದೆಳೆ ಸರ, ಒಂದು ಜೊತೆ ವಂಕಿ ಬಳೆ ಮಾಡಿಸಿ ಹಾಕಿದ್ದರು. ಅದನ್ನೆಲ್ಲಾ ಇನ್ಯಾರಿಗೆ ಕೊಡಬೇಕು ಹೇಳಿ........ ನೀವೂ ಒಡವೆ ಮಾಡಿಸಿದ್ದೀರೇನೋ ?"

"ನಾವೇನು ಮಾಡಿಸುವ ಹಾಗಿದ್ದೀವಿ ಹೇಳಿ. ಏನೋ ಒಂದೆರಡೆಳೆ ಸರ ಮಾಡಿಸಿದ್ದೀನಿ. ಕಿವೀಗೆ ಒಂದು ಜೊತೆ ವಾಲೆ ಮಾಡಿಸಿ ಹಾಕಿದ್ದೀನಿ ಅವಳ ಅಪ್ಪನೇ ಇವಳ ಅಮ್ಮನ ಎರಡು ಸೀರೆ ಕೊಟ್ಟು ಹೋಗಿದ್ದಾನೆ. ಒಂದು ಹಸಿರು ಧರ್ಮಾವರದ ಸೀರೆ, ಇನ್ನೊಂದು ರೋಜಾ ಬಣ್ಣದ ಬುಟ್ಟಾ ಸೀರೆ. ಮದುವೆ ಖರ್ಚಿಗೇಂತ ಐನೂರು ರೂಪಾಯಿ ಬಿಟ್ಟು ಹೋಗಿದ್ದಾನೆ. ಅದನ್ನು ನಿರ್ವಂಚನೆ ಯಿಂದ ಅವಳಿಗೇ ಕೊಟ್ಟು ಬಿಡುತ್ತೇವೆ. ಮೇಲೆ ನಮ್ಮ ಕೈಲಾದಷ್ಟು ಹಾಕಿಕೊಂಡು ಮದುವೆ ಮಾಡುತ್ತೇವೆ."

"ನೋಡಿ, ನಮಗೂ ತೊಂದರೆ ಕಾಲ. ಮೊದಲ ಹೆಂಡತಿ ಖಾಯಿಲೆ ಕಸಾಲೇಗೇಂತ ಮಾಡಿದ ಸಾಲ ಇನ್ನೂ ತೀರಿಸಿಲ್ಲ. ನಾವೊಂದು ಇನ್ನೂರು ರೂಪಾಯಿ ಖರ್ಚು ಮಾಡಬಹುದು. ಅದನ್ನೂ ನಿಮ್ಮ ಕೈಗೇ ಕೊಟ್ಟುಬಿಡುತ್ತೇನೆ. ಎರಡು ಖರ್ಚೂ ನೀವೇ ಹಾಕ್ಕೊಂಡು ಇದ್ದುದರಲ್ಲೇ ಒಂದು ದಿನ ಶಾಸ್ತ್ರ ನೆರವೇರಿಸಿಬಿಡಿ"

ಸುಬ್ಬಮ್ಮನವರಿಗೆ ಎಲ್ಲಾ ಒಪ್ಪಿಗೆಯಾಯಿತು. ಎದ್ದು ಹೋಗಿ ಶಾಮಣ್ಣನವರಿಗೆ ವಿಷಯವನ್ನೆಲ್ಲಾ ತಿಳಿಸಿ ಅರ್ಧಘಂಟೆಯಲ್ಲೇ ಒಪ್ಪಿಸಿ ಬಂದುಬಿಟ್ಟರು.

ಮೀನಾಕ್ಷಿಗೆ ತನ್ನ ಮದುವೆಯ ಸುದ್ದಿ ಕೇಳಿ ಸಿಡಿಲುಬಡಿದಂತಾ ಯಿತು. 'ಏಕೆ ಹೆದರಬೇಕು? 'ವಿಧಿ ನನ್ನನ್ನು ವಂಚಿಸಿತು. ಚಂದ್ರು ನನ್ನ ಕೈತಪ್ಪಿಹೋದನು. ಇನ್ನು ನನಗೆ ಯಾವ ಕಷ್ಟ ಬಂದರೆ ತಾನೇ ಏನು? ನಾನು ಯಾವುದಕ್ಕೂ ಹೆದರುವುದಿಲ್ಲ. ಎಲ್ಲಾ ಸಂತೋಷ ದಿಂದ ಅನುಭವಿಸುತ್ತೇನೆ' ಎಂದು ಮೀನಾಕ್ಷಿ ತನಗೆ ತಾನೇ ಸಮಾಧಾನ ಮಾಡಿಕೊಂಡಳು. ಊಟಕ್ಕೆ ಬಡಿಸುವಾಗ ರಾಮಚಂದ್ರಯ್ಯನನ್ನು ಇನ್ನೊಂದು ಸಾರಿ ಚೆನ್ನಾಗಿ ನೋಡಿದಳು. ರಾಮಚಂದ್ರಯ್ಯ ಬಹಳ ಪೀಚು. ಗುಳಿಬಿದ್ದ ಕಣ್ಣುಗಳು. ಯಾವುದೋ ಖಾಯಿಲೆ ಯಿಂದ ನರಳುತ್ತಿದ್ದಂತೆ ತೋರುತ್ತಿದ್ದಿತು! ಅವಳ ಚಿತ್ರಫಲಕದಲ್ಲಿ ತಕ್ಷಣ ಚಂದ್ರು ಬಂದು ನಿಂತನು. ಆಜಾನುಬಾಹು ಸುಂದರ ಯುವಕ ಚಂದ್ರು ಎಲ್ಲಿ, ಈ ನರಪೇತಲ ನಾರಾಯಣ ರಾಮಚಂದ್ರಯ್ಯನೆಲ್ಲಿ?

ಅವಳಿಗೆ ತಕ್ಷಣ ಅಳು ಬಂದಿತು. ಅಡಿಗೆ ಮನೆಯ ಬಾಗಿಲ ಹಿಂದೆ ನಿಂತು ಸೆರಗಿನಿಂದ ಕಣ್ಣೀರು ಒರೆಸಿಕೊಂಡಳು. ತನಗೆ ಈ ಮದುವೆ ಬೇಡವೆಂದು ಸುಬ್ಬಮ್ಮನವರಿಗೆ ಹೇಳಿಬಿಡಲು ಯೋಚಿಸಿಕೊಂಡಳು. ರಾತ್ರಿ ಯಾವಾಗ ಬರುವುದೋ ಎಂದು ಕಾದುಕೊಂಡಿದ್ದಳು.

ರಾತ್ರಿ ಮಲಗಿದ್ದಾಗ ಮೆಲ್ಲನೆ "ಅಮ್ಮಾ......." ಎಂದಳು.

"ಏನೇ ಅದು ? "

"ನಂಗೆ......."

"ಏನೇ........ಏನೇ ನಿಂಗೆ?"

"ಈ ಮದುವೆ ಇಷ್ಟವಿಲ್ಲ. ನಿನ್ನನ್ನು ಬಿಟ್ಟು ಹೋಗೋದಕ್ಕೆ ಇಷ್ಟವಿಲ್ಲಾಮ್ಮ."

ಸುಬ್ಬಮ್ಮ ಝುಗ್ಗನೆ ಎದ್ದು ಕುಳಿತರು. ಗೋಡೆಯ ಮಗ್ಗುಲಲ್ಲಿ ನಾಗವೇಣಮ್ಮ ಗೊರಕೆ ಹೊಡೆಯುತ್ತ ಮಲಗಿದ್ದರು. ಕೊಂಚ ದೊಡ್ಡ ಧ್ವನಿಯಲ್ಲೇ

"ಚೆನ್ನಾಗಿದೆ, ಮೀನಾಕ್ಷಿ. ಇನ್ನೂ ಎಳೇ ಮಗು ಅಂದ್ಕೊಂಡ್ಯೇನು? ಈಗಲೇ ಮದುವೆ ಮಾಡಿಲ್ಲವೆಂದು ಊರಿನಲ್ಲೆಲ್ಲಾ ಉಗೀತಿದಾರೆ. ನಾವು ತಲೆ ಎತ್ತಿಕೊಂಡು ತಿರುಗಾಡಬೇಕೋ ಬೇಡವೋ. ಹುಡುಗ ನೇನು ಕುಂಟನೇ, ಕುರುಡನೇ. ಏನೋ ಕೊಂಚ ವಯಸ್ಸಾಗಿರಬಹುದು. ನಾವು ಮದುವೆ ಮಾಡಿಕೊಂಡಿದ್ದು ಹೇಗೆ? ಈಗ ಏನಾಗಿದ್ದೀವಿ, ಸಂಸಾರ ಮಾಡಿಕೊಂಡು ಇಲ್ವೇ ? ನೀನು ಈ ವಿಷಯಕ್ಕೆಲ್ಲ ಗಲಾಟೆ ಮಾಡಬಾರದು. ನಿನ್ನ ಸಾಕಿ ಸಲಹಿ ದೊಡ್ಡವಳನ್ನಾಗಿ ಮಾಡಿದವಳು ನನಗೆ ಗೊತ್ತಿಲ್ಲವೆ, ನಿನಗೆ ಯಾವುದು ಒಳ್ಳೆಯದೂ ಅಂತ ! ಹಾಗೆಲ್ಲಾ ಅನ್ಬಾರದಮ್ಮ. ಇಷ್ಟಾಯ್ತು ಅವರೇನು ಹೊರಗಿನವರೇ. ನಿನ್ನ ತಾಯಿಯ ಹತ್ತಿರದ ನೆಂಟರು. ಅವರು ಸಿಕ್ಕಿದ್ದು ನಿನ್ನ ಅದೃಷ್ಟ. ಕಂಡೂಕಾಣದ ದೇಶಕ್ಕೆ ನಿನ್ನ ಕೊಡಬೇಕಾಗಿತ್ತೇನು. ಅಯ್ಯೋ ಹುಚ್ಚಿ, ನಿನಗೆ ಈಗಲೇ ಅದೆಲ್ಲಾ ಗೊತ್ತಾಗೊಲ್ಲ. ಸ್ವಸ್ಥವಾಗಿ ಮಲಗಿಕೊಂಡು ನಿದ್ದೆಮಾಡು" ಎಂದು ಸುಬ್ಬಮ್ಮನವರು ಅವಳ ಬಾಯಿ ಮುಚ್ಚಿಸಿ, ಮುಸುಕೆಳೆದುಕೊಂಡು ಮಲಗಿಕೊಂಡರು. ಮೀನಾಕ್ಷಿ

ದಿಂಬಿಗೆ ಮುಖ ಕೊಟ್ಟು ಅಳುತ್ತ ಮಲಗಿಕೊಂಡಳು

ವೈಶಾಖದಲ್ಲಿ ಮದುವೆ ನಿಶ್ಚಯ ಮಾಡಿಕೊಂಡು ಬಂದಿದ್ದ ಅತಿಥಿಗಳು ಸಾಗರಕ್ಕೆ ಹೊರಟುಹೋದರು.

ವೈಶಾಖ ಓಡಿ ಬಂತು. ಸುಬ್ಬಮ್ಮನವರು ಮೀನಾಕ್ಷಿ ಮದುವೆಗೆ ಅಷ್ಟೇನೂ ಕಷ್ಟಪಡದಿದ್ದರೂ ಓಡಾಟ ಮಟ್ಟಿಗೆ ಹೆಚ್ಚಾಗಿದ್ದಿತು.

"ಎಲ್ಲಾ ಇದೆ. ಕಾಮಾಕ್ಷಿ ಮದುವೇಲಿ ಊರಿಗೇ ಸಾಕಾಗುವಷ್ಟು ಮಾಡಿದ್ದೆ. ಎಷ್ಟು ಜನ ಬಂದು ತಿಂದು ಹೋದರೂ ಮುಗಿಯಲಿಲ್ಲ" ಎಂದು ಮನೆ ಮನೆಗೂ ಹೇಳಿಕೊಂಡು ಬಂದರು ಒಂದಿಷ್ಟು ಹಪ್ಪಳ ಸಂಡಿಗೆ ಮಾಡಿಕೊಂಡರು. ಮೈಸೂರಿಗೆ ಹೋಗಿ ಅಳಿಯನ ಬಟ್ಟೆ ಬರೆ ಕೊಂಡುಕೊಂಡು ಬಂದರು. ಶಾಮಣ್ಣನವರೇ ಒಂದಿಷ್ಟು ಬೆಳ್ಳಿಯ ಪಾತ್ರೆಗಳನ್ನು ಹೆಂಡತಿಯ ಮಾತು ಮೀರಿ, ಅಳಿಯನಿಗೆ ಕೊಡುವುದಕ್ಕಾಗಿ ಕೊಂಡುಕೊಂಡರು.

ಮೈಸೂರಿನಿಂದ ಕಾಮಾಕ್ಷಿ, ಅತ್ತೆ ಮಾವಂದಿರ ಜೊತೆ ಎಂಟು ದಿನ ಮುಂಚಿತವಾಗಿ ಬಂದಿಳಿದಳು. ನಾಲ್ಕೈದು ದಿವಸಗಳ ಮೇಲೆ ಚಂದ್ರು ಬಂದನು. ಚಂದ್ರುವನ್ನು ನೋಡಿದ ತಕ್ಷಣ ಮೀನಾಕ್ಷಿಗೆ ಕಣ್ಣೀರು ಹರಿದು ಬಂದಿತು. ಕಣ್ಣುಗಳು ಹೃದಯದ ಮೂಕಸಂಕಟ ವನ್ನು ಹೇಳಿಕೊಂಡವು. ಆದರೆ ಮದುವೆ ಮನೆ. ಎಲ್ಲರ ಕಣ್ಣು ತಪ್ಪಿಸಿ ಇಬ್ಬರೇ ಮಾತನಾಡುವುದಕ್ಕೆ ಆಗಲಿಲ್ಲ. ಮೀನಾಕ್ಷಿ ದುಃಖ ವನ್ನು ಅದುಮಿ ಹಿಡಿದು ಹೊರಗೆ ಆಹ್ಲಾದದ ಮುಸುಕನ್ನು ಹಾಕಿ ಕೊಂಡಳು.

ಮದುವೆಯ ಮೊದಲು ಹೊಸದೊಂದು ಸಮಾಚಾರ ತಿಳಿಯಿತು. ಕಾಮಾಕ್ಷಿಗೆ ಎರಡು ತಿಂಗಳಾಗಿತ್ತು. ಅದೇ ಆ ಶುಭ ಸಮಾಚಾರ. ಮೀನಾಕ್ಷಿ ಹಿಗ್ಗಿಹೋದಳು. ಊಟ ಮಾಡಿ ಅಕ್ಕತಂಗಿಯರಿಬ್ಬರೂ ಚಾಪೆಯ ಮೇಲೆ ಮಲಗಿದ್ದರು. ಮೀನಾಕ್ಷಿ ಮೆಲ್ಲನೆ ಕೇಳಿದಳು.

"ಅಕ್ಕಾ, ನಿನ್ನ ಮಗೂನ ನೋಡೋಕೆ ಇಲ್ಲೇ ಇರ್ತೀನ್ಯೇನೇ?"

"ಇರದೇ ಏನ್ಮಾಡ್ತೀಯ. ಅವರು ಇಷ್ಟು ಬೇಗ ನಿನ್ನನ್ನು ಕರ್ಕೊಂಡು ಹೋಗ್ತಾರ್ಯೇನೇ?"

" ನೋಡೋಣ, ನಂಗೇನೋ ಆ ಅದೃಷ್ಟವೇ ಇಲ್ಲ ಅನ್ನಿಸುತ್ತೆ "

" ಇನ್ನೇನು, ನೀನೂ ಒಂದು ಮಗೂನ ಕೈಗೆ ಎತ್ಕೋತೀಯ "

" ಥೂ ಹೋಗೆ...........ನಂಗೆ ಮಕ್ಳೇ ಆಗೊಲ್ಲ "

" ನೋಡ್ತಾ ಇರು...........ಎಲ್ರೂ ಹಾಗೇ ಹೇಳೋದು "

ಮೀನಾಕ್ಷಿ ನಕ್ಕುಬಿಟ್ಟಳು. ಮನಸ್ಸಿನಲ್ಲಿಯೇ ಮುಂದೆ ಹುಟ್ಟುವ ತನ್ನ ಮಗುವಿನ ಅಂದಚೆಂದಗಳನ್ನು ಊಹಿಸಿಕೊಂಡು ಹಿಗ್ಗಿದಳು. ಅವಳಿಗೆ ತನ್ನ ಬೊಂಬೆಯ ನೆನಪಿನಿಂದ ಹೆದರಿಕೆಯಾಯಿತು. ಓಡಿ ಹೋಗಿ ತನ್ನ ಪೆಟ್ಟಿಗೆಯಲ್ಲಿದ್ದ ಕರ್ಪೂರದ ಬೊಂಬೆಯನ್ನು ತೆಗೆದು ಕಣ್ಣು ತುಂಬ ನೋಡಿ ಸಿಟ್ಟುಸಿರಿಟ್ಟಳು. ಅವಳ ದೃಷ್ಟಿಗೆ ಕರ್ಪೂರದ ಬೊಂಬೆ ಕಿಲಕಿಲನೆ ನಕ್ಕಂತೆ ಕಂಡಿತು. ಎದೆ ತುಂಬಿ ಬಂದು ಅದನ್ನು ಅಪ್ಪಿ ಚುಂಬಿಸಿದಳು.

ಒಂದು ವಾರದಲ್ಲೇ ಮೀನಾಕ್ಷಿಯ ಮದುವೆ ಆಗಿಹೋಯಿತು. ಮದುವೆ ವೈಭವದಿಂದೇನೂ ನಡೆಯಲಿಲ್ಲ. ಆದರೆ ಅಗ್ಗಕ್ಕೆ ಸಿಕ್ಕಿದ ವಾಲಗದವರ ಓಲಗ ಮಟ್ಟಿಗೆ ಬಹಳ ಭರ್ಜರಿಯಾಗಿದ್ದಿತು! ಸೀತಮ್ಮನ ತಾಳಿಯನ್ನೇ ಹೊಸದುಮಾಡಿಸಿ ಅವಳ ಕುತ್ತಿಗೆಗೆ ಕಟ್ಟಿಸಿದರು. ಸುಬ್ಬಮ್ಮನವರು ಅದಕ್ಕೂ ಖರ್ಚು ಮಾಡಲಿಲ್ಲ. ಒಂದು ಕುಂಭಕೋಣದ ಸೀರೆ, ಎಂಭತ್ತು ರೂಪಾಯಿಯ ಒಂದು ಜರತಾರಿಸೀರೆ ತಂದಿದ್ದರು. ಸೀತಮ್ಮನ ಜರತಾರಿ ಸೀರೆ ನಾಗೋಲಿಗಾಯಿತು. ನಾಗವೇಣಮ್ಮ ಎರಡು ಸೀರೆ ತಂದಿದ್ದರು. ಅದು ಅವರ ಎರಡನೆಯ ಸೊಸೆಯ ಸೀರೆಗಳಾಗಿದ್ದುವು. ಬೀಗರಿಗೆ ಅದನ್ನು ಹೊಸ ಸೀರೆಗಳೆಂದು ಹೇಳಿಕೊಂಡಿದ್ದರು. ಅಂತೂ ಮೀನಾಕ್ಷಿ ರಾಮಚಂದ್ರಯ್ಯನ ಕೈಹಿಡಿದಳು. ಶಾಮಣ್ಣನವರು ಮನಸ್ಸು ತಡೆಯಲಾರದೆ ಐವತ್ತು ರೂಪಾಯಿ ಓದಿಸಿದರು. ಅದಕ್ಕೆ ಸುಬ್ಬಮ್ಮನವರು ದೊಡ್ಡ ಮನಸ್ಸು ಮಾಡಿ ಏನೂ ಆಕ್ಷೇಪಣೆ ಮಾಡಲಿಲ್ಲ.

ಮದುವೆ ಮನೆಯಲ್ಲಿ ಹೆಚ್ಚಾಗಿ ನೆಂಟರೂ ಇರಲಿಲ್ಲ. ಎಲ್ಲ ಆಚೀಚಿನ ಮನೆಯವರು. ಶೀನಿ ಒಬ್ಬನಿಂದ ಮದುವೆ ಮನೆಗೆ ಕಳೆ ಕಟ್ಟಿದ್ದಿತು. ಅವನ ಪಿಟ್ಟಿಹಿಟ್ಟಿನ ಬಡಿದಾಟದಲ್ಲಿ ಚಂದ್ರುವೂ

ಸೇರಬೇಕಾಯಿತು. ಉತ್ಸಾಹವಿಲ್ಲದೆ ಚಂದ್ರು ವೈದುನನ ಜೊತೆ ಸೇರಿದನು.

ದೇವರ ಮನೆಗೆ ಹೋಗುವ ಶಾಸ್ತ್ರವಾದಾಗ, ಕಾಮಾಕ್ಷಿ, ಪಾಪಚ್ಚಿ, ವರನ ಕಡೆಯ ಕೆಲವರು ಹೆಂಗಸರು, ಅವಳ ಗೆಳತಿಯರು ಬಾಗಿಲು ಕಟ್ಟಿ ಮೀನಾಕ್ಷಿಯನ್ನು ಗಂಡನ ಹೆಸರು ಹೇಳುವಂತೆ ಪೀಡಿಸಿದರು. ಅವಳ ಮನಸ್ಸು ಎಲ್ಲಿ ಹರಿದಾಯುತ್ತಿತ್ತೋ ಏನೋ? ಯಾವುದೋ ಜ್ಞಾನದಲ್ಲಿ 'ಚಂದ್ರಶೇಖರ' ಎಂದು ಬಿಟ್ಟಳು. ಎಲ್ಲರೂ ಘೊಳ್ಳೆಂದು ನಕ್ಕರು. ಮೀನಾಕ್ಷಿಯ ಮುಖ ಕೆಂಪಿಟ್ಟಿತು. ಹತ್ತಿರದಲ್ಲೇ ನಿಂತಿದ್ದ ಚಂದ್ರುವಿಗೆ ಅಭಿಮಾನದಿಂದ, ಅವಳು ತನ್ನನ್ನು ಮರೆತಿಲ್ಲ ವೆಂಬ ಹೆಮ್ಮೆಯಿಂದ ಎದೆಯುಬ್ಬಿತು. ಮೀನಾಕ್ಷಿಗೆ ತನ್ನ ತಪ್ಪು ತಿಳಿದು ನಾಚಿಕೆಯಾಯಿತು. ಕಾಮಾಕ್ಷಿ, "ಅಲ್ಲ, ಅಲ್ಲ, ಅದು ನಿನ್ನ ಭಾವನ ಹೆಸರಾಯಿತು. ನಾವು ಕೇಳಿದ್ದು ನಿನ್ನ ಗಂಡನ ಹೆಸರನ್ನ" ಎಂದಳು. ಮೀನಾಕ್ಷಿ ಬಹಳ ಕಷ್ಟದಿಂದ "ರಾಮಚಂದ್ರಯ್ಯ" ಎಂದು ಅವರ ಕಾಟದಿಂದ ತಪ್ಪಿಸಿಕೊಂಡು ಒಳಗೆ ಹೋದಳು. ರಾಮಚಂದ್ರಯ್ಯನೊಡನೆ ದೇವರಿಗೆ ನಮಸ್ಕಾರ ಮಾಡಿದಳು.

ಆ ದಿನ ರಾತ್ರಿ ಮೀನಾಕ್ಷಿ ಕಣ್ಣೀರು ಕೋಡಿ ಹರಿಸಿದಳು. ಚಂದ್ರುವಿನ ನೆನಪು ಅಡಿಗಡಿಗೆ ಮರುಕಳಿಸಿತು. ಅವನ ನೆನಪು ಅವಳ ಚಿತ್ತಭಿತ್ತಿಯಲ್ಲಿ ಅಚ್ಚಳಿಯದೆ ನಿಂತು ಹೋಯಿತು. ತನ್ನ ದುರದೃಷ್ಟಕ್ಕಾಗಿ ಮುಸುಕಿನಲ್ಲೇ ಮೂಕ ಸಂಕಟ ಅನುಭವಿಸಿದಳು. ಚಂದ್ರು ಅವಳಿಗೊಂದು ದೊಡ್ಡ ಸೈಜಿನ ಬೆಳ್ಳಿಯ ಫೋಟೋ ಫ್ರೇಮನ್ನೂ, ಒಂದು ಬೆಳ್ಳಿಯ ಗಂಧದ ಬಟ್ಟಲನ್ನೂ ಓದಿಸಿದ್ದನು. ಮೀನಾಕ್ಷಿಗೆ, ತನಗೆ ಓದಿಸಿದ ಕೆಲವೇ ಪದಾರ್ಥಗಳಲ್ಲಿ ಅವುಗಳೇ ಅತ್ಯಂತ ಪ್ರಿಯವಸ್ತುಗಳಾದವು.

ನಾಲ್ಕು ದಿವಸಗಳಿದ್ದು ಬೀಗರ ಕಡೆಯವರೆಲ್ಲ ಮೂರು, ತಿಂಗ ಳೊಳಗೇ ನಿಶೇಕದ ಶಾಸ್ತ್ರ ಮುಗಿಸಬೇಕೆಂದು ಮಾತು ತೆಗೆದುಕೊಂಡು ಹೊರಟುಹೋದರು.

ಚಂದ್ರಶೇಖರ ಒಬ್ಬನೇ ಸಮಯ ಸಾಧಿಸಿ ಮೀನಾಕ್ಷಿ ಒಬ್ಬಳೇ

ಕೊಟ್ಟಿಗೆಯನ್ನು ಸಾರಿಸುತ್ತಿರುವಾಗ

"ಮೀನಾಕ್ಷೀ, ದೂರದ ಊರಿಗೆ ಹೊರಟುಹೋಗುತ್ತೀಯ. ನನ್ನನ್ನು ಮರೆತುಬಿಡಬೇಡ !" ಎಂದನು. ಕರಿಯ ಹಸು 'ಗಂಗೆ' ಹುಲ್ಲು ಮೇಯುತ್ತಿದ್ದುದು ಚಂದ್ರುವಿನ ಮನನೊಂದ ಮಾತನ್ನು ಕೇಳಿ ತಲೆ ಎತ್ತಿ, ಕಣ್ಣರಳಿಸಿ ಅವನನ್ನು ದಿಟ್ಟಿಸಿತು. ಅದರ ಕಣ್ಣುಗಳೂ ಹನಿ ಗೂಡಿದಂತೆ ಕಂಡವು. ಅದು ಮೆಲಕುಹಾಕುವುದನ್ನೂ ನಿಲ್ಲಿಸಿ ಇಬ್ಬರನ್ನೂ ನೋಡತೊಡಗಿತು. ಮೀನಾಕ್ಷಿ ಅವನನ್ನೇ ಎವೆಯಿಕ್ಕದೆ ನೋಡಿದಳು. ಅವಳಿಗೆ ಹಿಂದಿನ ನದಿಯ ಮರಳಿನ ದ್ವೀಪದ ಮೇಲೆ ಆಡಿದ ಮಾತುಗಳೆಲ್ಲ ಮತ್ತೆ ನೆನಪಾದವು. ಕಣ್ಣುಗಳು ತೇವಗೊಂಡವು.

"ನೀನು ದೊಡ್ಡ ಕ್ಯಾಮರಾಮ್ಯಾ ಆಗುವೆ. ಬಿ. ಎ. ಪ್ಯಾಸು ಮಾಡುತ್ತೀಯ. ದೊಡ್ಡಮನುಷ್ಯನಾದಮೇಲೆ ನನ್ನನ್ನು ನೀನೇ ಮರೆತುಬಿಡುತ್ತೀಯೆ ? "

"ಇಲ್ಲ ಮೀನಾಕ್ಷಿ, ಖಂಡಿತ ನಾನು ನಿನ್ನನ್ನು ಮರೆಯುವುದಿಲ್ಲ. ನಿನ್ನ ಫೋಟೋ ನನ್ನ ಹತ್ತಿರ ಇಲ್ಲವೇ ? ನೀನೇ ನನ್ನನ್ನು ಮರೆತು ಬಿಡುತ್ತೀ, ನನಗೆ ಗೊತ್ತು "

"ನಿನ್ನ ಬೆಳ್ಳಿಯ ಫೋಟೋ ಫ್ರೇಮ್ ನನ್ನ ಹತ್ತಿರ ಇಲ್ಲವೇ ? ಅದರಲ್ಲಿ ನಿನ್ನ ಕಾಮಾಕ್ಷಿಯ ಮದುವೆ ಫೋಟೋ ಹಾಕಿಸಿಡುತ್ತೇನೆ. ಅದನ್ನು ಯಾವಾಗಲೂ ನೋಡುತ್ತಿರುತ್ತೇನೆ. ನಾನು ಖಂಡಿತ... ...."

ಅಷ್ಟರಲ್ಲಿ ಯಾರೋ ಬಂದ ಹಾಗಾಯಿತು. ಹಾಗೆಯೇ ಹಿಂದಕ್ಕೆ ಹೊರಟುಹೋದರು. ಬಂದಿದ್ದವರು ಸುಬ್ಬಮ್ಮನವರೆಂದು ಮೀನಾಕ್ಷಿಗೆ ಗೊತ್ತಾಯಿತು ! ಮೀನಾಕ್ಷಿ ಕಲಗಚ್ಚನ್ನು ಬೆರಸಲು ತಂದಿದ್ದ ಪಾತ್ರೆಯನ್ನು ಎತ್ತಿಕೊಂಡು ಒಳಗೆ ಓಡಿಬಿಟ್ಟಳು. ಚಂದ್ರುವಿಗೆ ನಿರಾಶೆಯಾಯಿತು. ಅವಳು ಏನು ಹೇಳುತ್ತಿದ್ದಳೋ, ಕೇಳಬೇಕಾಗಿ ದ್ದಿತೆಂದು ಹೃದಯ ಹಂಬಲಿಸಿತು. ಕೊಂಚ ಹೊತ್ತು ಕಾದು ನಿಂತನು. ಮೀನಾಕ್ಷಿ ಬರಲಿಲ್ಲ.

ಮಾರನೆಯ ದಿನ ಚಂದ್ರು, ಕಾಮಾಕ್ಷಿ ಊರಿಗೆ ಹೊರಟು ಹೋದರು. ಮೀನಾಕ್ಷಿ ಗುಟ್ಟಾಗಿ ಅತ್ತಳು. ಅವಳಿಗೆ ಹೃದಯವೇ

ಕಿತ್ತುಬಂದಂತಾಯಿತು. ಬಾಳು ಶೂನ್ಯವಾಗಿಹೋದಂತೆ ಕಂಡಿತು. ಕುಳಿತಲ್ಲಿ ಎದ್ದಲ್ಲಿ 'ಚಂದ್ರು ನನ್ನನ್ನು ಮರೆತು ಬಿಡಬೇಡ!' ಎಂದು ದೈನ್ಯದಿಂದ ಮೊರೆಯಿಡುತ್ತಿದ್ದಳು. ತಕ್ಷಣ ಕೈಹಿಡಿದ ಗಂಡನ ನೆನಪಾಗುತ್ತಿದ್ದಿತು. ಛೀ! ಎಂತಹ ಅನಾಚಾರ! ಎಂತಹ ಅನ್ಯಾಯ! ನಾನು ಚಂದ್ರುವಿನ ಯೋಚನೆ ಮಾಡಕೂಡದು. ಚಂದ್ರು ಸಮಾಜದ ದೃಷ್ಟಿಯಲ್ಲಿ, ಧರ್ಮದ ದೃಷ್ಟಿಯಲ್ಲಿ ನನಗಿಂದು ಪರಪುರುಷ. ಚಂದ್ರು ನನ್ನ ಅಕ್ಕನ ಗಂಡ– ನನಗೆ ಭಾವ. ನಾನು ಅವನನ್ನು ಬಯಸಬಾರದು, ಇದು ತಪ್ಪು, ಎಂದು ತನ್ನನ್ನೇ ಬೈದು ಕೊಂಡು ಸಮಾಧಾನ ಮಾಡಿಕೊಳ್ಳುತ್ತಿದ್ದಳು.

ಮೂರುತಿಂಗಳು ಮೂರು ನಿಮಿಷಗಳಂತೆ ಕಳೆದುಹೋಯಿತು. ನಿಷೇಕದ ಶಾಸ್ತ್ರಕ್ಕೆ ಸಾಗರದಿಂದ ನಾಗವೇಣಮ್ಮ, ರಾಮಚಂದ್ರಯ್ಯ, ರಾಮಚಂದ್ರಯ್ಯನ ದೊಡ್ಡಪ್ಪನ ಮಗಳು, ಮತ್ತೆ ಅವನ ಗೆಳೆಯ ರೊಬ್ಬರು ಬಂದರು ವಾತರೋಗದಿಂದ ನರಳುತ್ತಿದ್ದ ಯಜಮಾನರನ್ನು ನಾಗವೇಣಮ್ಮನವರು ಸಂಬಂಧೀಕರ ಮನೆಯಲ್ಲಿ ಬಿಟ್ಟು ಬಂದಿದ್ದರು, ಮೈಸೂರಿಗೂ ಕಾಗದ ಹೋಯಿತು. ಚಂದ್ರುವಿಗೆ ಪರೀಕ್ಷೆಯಿದ್ದಿತು. ಕಾಮಾಕ್ಷಿ, ಅತ್ತೆಮಾವಂದಿರ ಜೊತೆ ಬಂದಿಳಿದಳು. ಮೀನಾಕ್ಷಿಗೆ ಚಂದ್ರು ಬಾರದಿದ್ದುದನ್ನು ನೋಡಿ ಹೃದಯ ಒಡೆದು ಹೋದಂತಾಯಿತು. ತನ್ನನ್ನು ಬಲಿಪೀಠಕ್ಕೆ ಬಲಿಕೊಡುವ ದಿನ ಹತ್ತಿರವಾಗುತ್ತಿದೆಯೆಂದು ಸಂಕಟಪಟ್ಟುಕೊಂಡಳು. ಅವಳ ಮನಸ್ಸಿನಲ್ಲಿ ಯೋಚನೆಗಳ ತಾಕಲಾಟ ನಡೆಯುತ್ತಿದ್ದಿತು. ಭಾವನೆಗಳ ಬಿರುಗಾಳಿ ಅವಳ ಮನಸ್ಸಿನಲ್ಲಿ ತೆರೆಗಳ ಅಲ್ಲಕಲ್ಲೋಲವನ್ನುಂಟುಮಾಡುತ್ತಿದ್ದಿತು. ಮೀನಾಕ್ಷಿ ಮತ್ತೆ ಅಕ್ಕನನ್ನು ಕೇಳಿದಳು.

"ಏನೇ ಅಕ್ಕ, ನಿನ್ನ ಮಗುವನ್ನು ನೋಡುವುದಕ್ಕೆ ನಾನಿರ್ತೀನ್ಯೇನೇ?" ಕಾಮಾಕ್ಷಿ ಗದರಿಸಿಕೊಂಡಳು.

"ಛೀ, ಸಂಸಾರ ನಡೆಸಿ ಸುಖಪಡುವುದಕ್ಕೆ ಗಂಡನ ಮನೆಗೆ ಹೋಗುತ್ತಿದ್ದೀ ಕೆಟ್ಟ ಮಾತನಾಡಬಾರದು."

ಮೀನಾ ಸುಮ್ಮನೆ ಕಾಮಾಕ್ಷಿಯ ಮುಖ ನೋಡಿದಳು.

ಕಾಮಾಕ್ಷಿಯ ಭಾಗ್ಯವನ್ನು ಕಣ್ಣಾರೆ ಕಂಡು ಅವಳ ಹೊಟ್ಟೆಯುರಿಯಿತು. ಅರೆಕ್ಷಣ ಕಾಮಾಕ್ಷಿ ಮೀನಾಕ್ಷಿಯ ಕಣ್ಣಿಗೆ ತನ್ನ ಬಾಳ ಪ್ರತಿಸ್ಪರ್ಧಿಯಾಗಿ, ತನ್ನ ಬಾಳನ್ನು ಮಣ್ಣುಗೂಡಿಸಿದ ಹೆಮ್ಮಾರಿಯಾಗಿ ಕಂಡಳು. ಸೇಡಿನ ಕಿಡಿ ಹೊಗೆಯಾಡಿತು. ಆದರೆ ಮೀನ ಸಾವರಿಸಿಕೊಂಡು, ಸಮಾಧಾನ ತಂದುಕೊಂಡಳು.

ನಿಷೇಕ ನಡೆದ ಮಾರನೆಯ ದಿನದಿಂದ ಮೀನಾ ಹೊಸಮನುಷ್ಯಳಾದಳು. ಅವಳು ಬಲಿಗೆಬಿದ್ದ ಕುರಿಯಂತಾಗಿದ್ದಳು. ಅವಳ ದೇಹ ವಿಕ್ರಯವಾಗಿ ಹೋಗಿತ್ತು. ಆ ದೇಹ ಅಪವಿತ್ರವಾಗಿದ್ದಿತು! ಆದರೆ ಮೀನಳ ಮನಸ್ಸು ಸರ್ವಸ್ವತಂತ್ರವಾಗಿದ್ದಿತು. ಅವಳಿಗೆ ತನ್ನ ತಿಳುವಳಿಕೆಗೆ ತೀರ ವಿರುದ್ಧವಾದ ಅನುಭವವಾಗಿದ್ದಿತು. ಆ ಅನುಭವ ಅತಿ ವಿಚಿತ್ರವಾಗಿತ್ತು! ಅದು ಅವಳ ಮನಸ್ಸಿನಲ್ಲಿ ಒಂದು ಹೊಸ ವಿಚಾರತರಂಗನನ್ನೆಬ್ಬಿಸಿತ್ತು. ಅದು ತಡೆಯಿಲ್ಲದೆ ಉಕ್ಕಿ ಉಕ್ಕಿ ಪ್ರವಾಹರೂಪವಾಗಿ ಹರಿಯತೊಡಗಿದ್ದಿತು. ಅದಕ್ಕೆ ತಡೆಹಾಕುವ ಶಕ್ತಿ ಮೀನಳಲ್ಲಿರಲಿಲ್ಲ.

ಮೀನಾಕ್ಷಿ ಗಂಡನ ಜೊತೆಯಲ್ಲಿ ಊರಿಗೆ ಹೊರಟುನಿಂತಳು. ಗಾಡಿ ಬಂದು ನಿಂತಿತು. ಸುಬ್ಬಮ್ಮನವರು ಮೀನಾಕ್ಷಿಯ ಉಡಿ ತುಂಬಿಸಿ, ಮಂಗಳ ದ್ರವ್ಯಗಳನ್ನು ಕೊಟ್ಟರು. ಮೀನಾಕ್ಷಿ ಭಕ್ತಿಯಿಂದ ಸುಬ್ಬಮ್ಮನವರಿಗೆ ನಮಸ್ಕಾರ ಮಾಡಿ ಎದ್ದುನಿಂತಳು. ಎದುರಿಗೆ ಶಾಮಣ್ಣನವರು ನಿಂತಿದ್ದರು. ಮೀನಾಕ್ಷಿ ಶಾಮಣ್ಣನವರಿಗೆ ನಮಸ್ಕಾರ ಮಾಡಿದಳು. ಶಾಮಣ್ಣನವರಿಗೆ ಅವಳ ಎಳೆತನದ ಆಟಗಳೆಲ್ಲ ನೆನಪಾಯಿತು. ಹೊರಟುಹೋಗುವಳಲ್ಲಾ ಎಂದು ಕರುಳು ಚುರ್ ಎಂದಿತು. ಕಣ್ಣೀರು ತುಂಬಿ, "ಹೋಗಿಬಿಟ್ಟು ಬಾಮ್ಮಾ. ದೇವರು ಒಳ್ಳೆಯದು ಮಾಡಲಿ" ಎಂದು ಆಶೀರ್ವಾದ ಮಾಡಿದರು. ಸುಬ್ಬಮ್ಮನವರು ಕಣ್ಣೀರು ಹಾಕಿದಂತೆ ನಟಿಸಿದರು. ಅವರ ಮನಸ್ಸು ಮದುವೆಗೆ ಮುಂಚೆ ಮೀನಾಕ್ಷಿಯ ಜಾತಕ ನೋಡಿದ ಅಗ್ರಹಾರದ ವೆಂಕಟರಾಮು ಜೋಯಿಸರು ಹೇಳಿದ ಅವಳ ಜಾತಕದ ಫಲವನ್ನು ಮೆಲಕುಹಾಕುತ್ತಿದ್ದಿತು. ಮೂರು ತಿಂಗಳಿನಿಂದ ಅವರ ಮುಖ

ಧುಮುಧುಮು ಉರಿಯುತ್ತಿದ್ದಿತು. ಮೀನಾಕ್ಷಿಯನ್ನು ನೋಡಿದರೆ ಸಿಡಿದುಬೀಳುತ್ತಿದ್ದರು. "ಸಧ್ಯ ಮನೆ ಬಿಟ್ಟು ತೊಲಗಿಹೋಗುವಳಲ್ಲಾ" ಎಂದು ಸಮಾಧಾನ ತಂದುಕೊಳ್ಳುತ್ತಿದ್ದರು. ಹೊರಬಾಗಿಲಿನ ಬಳಿ ಜಗುಲಿಯ ಕಂಬಕ್ಕೊರಗಿಕೊಂಡು ಶೀನು ಬಿಕ್ಕಿಬಿಕ್ಕಿ ಅಳುತ್ತಿದ್ದನು. ಅವನು ಆ ಸಮಯದಲ್ಲಿ ತನ್ನ ಗಂಡಸುತನದ ಠೋರೆಲ್ಲವನ್ನೂ ಮರೆತು ಬಿಟ್ಟಿದ್ದನು. ಮೀನಾಕ್ಷಿ ತನ್ನನ್ನು ಬಿಟ್ಟು ಹೊರಟುಹೋಗುವಳಲ್ಲಾ, ತಾನು ಮತ್ತೆ ಅವಳನ್ನು ನೋಡುವೆನೋ ಇಲ್ಲವೋ ಎಂದು ಆ ಪುಟ್ಟ ಹೃದಯದಲ್ಲಿ ದುಃಖದ ಬಿರುಗಾಳಿ ಎದ್ದಿದ್ದಿತು. ಇಲ್ಲ, ನೀನು ಮೀನಾಕ್ಷಿಯನ್ನು ಮತ್ತೆ ನೋಡುವುದಿಲ್ಲ ಎಂದು ಅವನಿಗೆ ಯಾರೋ ಹೇಳುತ್ತಿರುವಂತೆ ಭಾಸವಾಯಿತು. ಅದರಿಂದ ಅವನ ದುಃಖ, ಕಟ್ಟೆ ಯೊಡೆದು ಉಕ್ಕಿ ಕಣ್ಣೀರಿನ ರೂಪದಲ್ಲಿ ಹರಿಯಿತು. ವಾರದಿಂದ ಮೀನಾಕ್ಷಿಗೆ ಅವನನ್ನು ಸಮಾಧಾನಮಾಡಿ ಸಾಕಾಗಿದ್ದಿತು. ಅವನು ಕೇಳುತ್ತಿದ್ದುದು ಒಂದೇ ಪ್ರಶ್ನೆ. "ನೀನು ಹೊರಟುಹೋದರೆ ಹೇಗೆ ಮೀನಾ. ನನಗೆ ಈ ಮನೇಲಿ ಒಬ್ಬನೇ ಇರುವುದಕ್ಕೆ ಬೇಜಾರಾಗುತ್ತೆ. ಕಾಮಾಕ್ಷಿ ಹೋದಾಗ ನನಗೆ ಅಳುವೇ ಬರಲಿಲ್ಲ ಈಗ ನನಗೆ ತುಂಬ ಅಳು ಬರುತ್ತದೆ" ಎನ್ನುತ್ತಿದ್ದನು. ಮೀನಳಿಗೆ ಅವನ ಮಾತು ಕೇಳಿ, ಅವನ ಪ್ರೀತಿಯು ಅನುಭವವಾಗಿ ಹೃದಯ ಅರಳುತ್ತಿದ್ದಿತು. ಸಮ ಯೋಚಿತವಾಗಿ ಸಮಾಧಾನ ಮಾಡುತ್ತಿದ್ದಳು. "ಹಾಗೆಲ್ಲಾ ಅಳ ಬಾರದು. ಕಾಮಾಕ್ಷಿ ನಿನ್ನ ಅಕ್ಕ ಅಲ್ವಾ. ಅವಳು ಹತ್ತಿರಷ್ಟೇ ಇರುತ್ತಾಳೆ. ನಾನೂ ಪ್ರತಿವರ್ಷ ಬರುತ್ತಿರುತ್ತೇನೆ." ಮೀನಾಕ್ಷಿಗೆ ಬಿಕ್ಕಿಬಿಕ್ಕಿ ಅಳುತ್ತಿದ್ದ ಶೀನುವನ್ನು ನೋಡಿ ಕರುಳು ಮಿಡಿಯಿತು. ಅವನ ಬಳಿಗೆ ಧಾವಿಸಿ ನಡೆದು ಅವನನ್ನು ಅಪ್ಪಿಕೊಂಡು, ಕಣ್ಣೀರೊರಸಿ ಸಮಾಧಾನ ಮಾಡಿದಳು.

"ಹಾಗೆಲ್ಲಾ ಅಳಬಾರದಪ್ಪಾ. ನಾನು ಮತ್ತೆ ಬಂದುಬಿಡ್ತೇನೆ. ಜಾಣನಾಗಿ ಓದಿ ಪಾಸುಮಾಡಬೇಕು" ಎಂದು ಮೀನಾ ತನ್ನ ಸೊಂಟ ದಲ್ಲಿಟ್ಟುಕೊಂಡಿದ್ದ ಐದು ರೂಪಾಯಿಯ ನೋಟನ್ನು ಬಲವಂತದಿಂದ ಅವನ ಕೈಯ್ಯಲ್ಲಿಟ್ಟು "ಬಟ್ಟೆ ಹೊಲಿಸಿಕೋ ಶೀನಿ...........ಅಂ.......

ನನ್ನನ್ನು ಮರೀಬೇಡ. ಕಾಗ್ದಾ ಬರೀಬೇಕು" ಎಂದು ಹಿಂದಕ್ಕೆ ಬಂದುಬಿಟ್ಟಳು. ಕಾಮಾಕ್ಷಿಯ ಕಡೆ ತಿರುಗಿ, "ಅಕ್ಕಾ, ಹೋಗಿಬಿಟ್ಟ್ಬರ್ತೇನಮ್ಮಾ. ಏನಾದರೂ ಅಂದಿದ್ದರೆ ಮನಸ್ಸಿಲ್ಲಿ ಇಟ್ಟುಕೋ ಬೇಡಮ್ಮ. ಚಿಕ್ಕವಳು, ತಿಳಿಯದವಳು ಅಂತ ಕ್ಷಮಿಸಿಬಿಡು" ಎಂದು, ಸುಬ್ಬಮ್ಮನವರಿಗೂ ಅದೇ ಮಾತು ಹೇಳಿ ಗಾಡಿ ಹತ್ತಿದಳು. ಕಾಮಾಕ್ಷಿ ಹಾಸ್ಯಮಾಡಿ ನಕ್ಕಳು,

"ಮೀನಾ ಮುಂದಲ ಸಾರಿ ಬರುವಾಗ ಮಗನನ್ನು ಎತ್ತಿಕೊಂಡು ಬಾ"

"ಮಗ ಅಲ್ಲ, ಮಗಳು ಅನ್ನೇ ಕಾಮಾಕ್ಷಿ ನಿನ್ನ ಮಗನ ಹೆಂಡತಿ. ನಿನ್ನ ಪುಟ್ಟ ಸೊಸೆ" ಎಂದು ಶಾಮಣ್ಣನವರೂ ಹಾಸ್ಯದ ಚಟಾಕಿ ಹಾರಿಸಿದರು,

ಎಲ್ಲರೂ ನಕ್ಕರು. ಮೀನಾಕ್ಷಿ ನಗಲಿಲ್ಲ. ಮೀನಾಕ್ಷಿ ಅತ್ತೆಯ ಮನೆ ಸುಖ ಸವಿಯಲು ಸಾಗರಕ್ಕೆ ಹೊರಟುಹೋದಳು.

## ೫

ಮೀನಾಕ್ಷಿಗೆ, ಅತ್ತೆಯ ಮನೆಗೆ ಬಂದ ಮೊದಲೆರಡು ತಿಂಗಳು ಬಹಳ ಬೇಸರವಾಯಿತು. ನಾಗವೇಣಮ್ಮನವರು ಸೊಸೆ ನಡೆದರೆ ಎಲ್ಲಿ ಸವೆದುಹೋಗುವಳೋ ಎಂದು ಕೂಡಿಸಿ ಉಪಚಾರ ಮಾಡಿದರು. ಮೀನಾಕ್ಷಿಗೆ ಆ ಸುಖ ತೀರ ಹೊಸದಾಗಿದ್ದಿತು. ಅವಳಿಗೆ ಮೈ ಮುರಿದು ದುಡಿಯುವ ಅಭ್ಯಾಸವಾಗಿದ್ದಿತು. ಪ್ರತಿಯೊಂದು ಕೆಲಸಕ್ಕೂ ತಾನು ಮುಂದಾಗಿ ಹೋಗುತ್ತಿದ್ದಳು. ನಾಗವೇಣಮ್ಮನವರು,

"ನಿನ್ನ ನಮ್ಮನೇಗೆ ಕರ್ಕೊಂಡು ಬಂದಿರೋದು ದುಡ್ಸೋಕಲ್ಲ, ಮೀನಾ. ಅವರ ಮನೇಲಿ ದುಡಿದಿರೋದೇ ಸಾಕಾಗಿದೆ. ನೀನು ಸುಮ್ನೆ ಒಂದ್ಕಡೆ ಕೂತ್ಕೋ" ಅನ್ನುತ್ತಿದ್ದರು.

"ಬೇಡಿ ಅತ್ತೆ, ಎಲ್ಲಾ ಕೆಲಸಾನೂ ನೀವೇ ಮಾಡಿದರೆ ಹೇಗೆ. ನಾನೇನು ಮಾಡಬೇಕು ಸುಮ್ನೆ ಕೂತ್ಕೊಂಡು. ಸುಮ್ನೆ ಕೂತಿದ್ರೆ ನಂಗೆ ತಲೆನೋವು ಬರುತ್ತೆ. ನಾನಿರೋವಾಗ ನೀವು ಈ ವಯಸ್ಸಿನಲ್ಲೂ ದುಡೀಬೇಕೆ ?"

"ನೀನು ಸುಮ್ನಿರಮ್ಮ ಸಧ್ಯ. ಒಂದಾರು ತಿಂಗಳಾದರೂ ಸುಧಾರಿಸ್ಕೋ. ಆಮೇಲೆ ಬೇಕಾದ್ರೆ ದುಡಿಯುವಂತೆ. ನನಗೇನು ದೇವರು ಶಕ್ತಿ ಕಮ್ಮಿಮಾಡಿಲ್ಲ. ನನ್ನ ಕೈಲಾಗದಿದ್ದಾಗ ಇದ್ದೇ ಇದೆ. ನೀನೇ ಮಾಡೋದು. ನೀರು ನಿಡಿ ಹಾಕಿಕೊಂಡು, ಸರಿಯಾಗಿ ಹಾಲು ತುಪ್ಪ ತಿಂದು ಕೊಂಚ ಮೈ ಘಟ್ಟಿಮಾಡಿಕೋಮ್ಮ ಊರಿಂದ ಬಂದಮೇಲೆ ಎಷ್ಟು ತೆಗೆದುಹೋಗಿದ್ದೀಯಮ್ಮ ನಾನೇನು ಕಷ್ಟ ಕೊಡುತ್ತಿದ್ದೇನೆಯೇ ತಾಯಿ ?"

ನಾಗವೇಣಮ್ಮ ಸಂಕಟದಿಂದ ಹೇಳುತ್ತಿದ್ದರು ಮೀನಾಕ್ಷಿಯ ಮನಸ್ಸು ಅವರ ಮಮತೆಗೆ ಮಾರುಹೋಗುತ್ತಿದ್ದಿತು. ಅಷ್ಟೇ ಅಭಿಮಾನ ದಿಂದ, ಅಕ್ಕರೆಯಿಂದ ಹೇಳುತ್ತಿದ್ದಳು,

"ನೀವು ಹಾಗೆಲ್ಲಾ ನೊಂದುಕೊಳ್ಳಬೇಡಿ ಅತ್ತೆ. ತಾಯಿಗಿಂತ ಹೆಚ್ಚಾಗಿ ಆದರಿಸುತ್ತಿದ್ದೀರಿ."

ಮೀನಾಕ್ಷಿ ತನ್ನ ಹೃದಯ ತೋಡಿಕೊಳ್ಳುತ್ತಿದ್ದಳು. ದುಃಖ ದಿಂದ ಭಾರವಾದ ಅವಳ ಹೃದಯ ಆ ಅಮರ ಘಳಿಗೆಯಲ್ಲಿ ಹಗುರ ವಾದಂತಾಗುತ್ತಿದ್ದಿತು.

ನಾಗವೇಣಮ್ಮ ಮೀನಾಕ್ಷಿಯನ್ನು ಕೂಡಿಸಿ ಉಪಚರಿಸಿದರು. ಮೀನಾಕ್ಷಿಗೆ ತನ್ನ ಆ ಪುಟ್ಟ ಮನೆಯೇ ಅರಮನೆಯಾಯಿತು. ತಾನು ರಾಣಿಯಾಗಿ ನಿರ್ಯೋಚನೆಯಿಂದ ಮೆರೆದಳು. ಅಡಿಗಡಿಗೆ ನೊಂದು ಕೊಳ್ಳುವ ಅತ್ತೆಯ ಮನಸ್ಸನ್ನು ಸಂತೋಷಪಡಿಸಬೇಕೆಂದು ಯಾವಾ ಗಲೂ ಹಸನ್ಮುಖಿಯಾಗಿರುತ್ತಿದ್ದಳು. ಮೀನಾಕ್ಷಿ ಮನೆಯನ್ನು ಓರಣವಾಗಿಡಲು ಏನಾದರೂ ಮಾಡುತ್ತಲೇ ಇದ್ದಳು. ಮನೆಯ ಬಾಗಿಲಿಗೆಲ್ಲ ಕಸೂತಿಮಾಡಿ, ಕರ್ಟನ್ ಹಾಕಿದಳು. ಟೇಬಲ್ ಕ್ಲಾತು ಗಳ ಮೇಲೆ ವಿಧವಿಧವಾದ ಹೊಲಿಗೆ ಕೆಲಸಮಾಡಿದಳು. ಅವಳಿಂದ

ಆ ಮನೆಗೊಂದು ಖಳೆಯೇರಿತು. ಬೀದಿಯವರೆಲ್ಲ ಅವಳನ್ನು ಹೊಗಳುವವರೇ ಆದರು. ಮೀನಾಕ್ಷಿ ಬಂದ ನಾಲ್ಕು ತಿಂಗಳಲ್ಲೇ ಅವಳ ಸೌಂದರ್ಯ, ಇನಿಮಾತು, ಎಲ್ಲರ ಹೃದಯವನ್ನೂ ಗೆದ್ದುಕೊಂಡಿತು. ಮೀನಾಕ್ಷಿಗೆ ಅತ್ತೆಮನೆಯ ಜೀವನ ಸವಿಯಾಗಿ ಕಂಡಿತು. ಆದರೆ ಅವಳ ಬಾಳಿಗೆ ಒಂದೇ ಕೊರತೆ ಕೈಹಿಡಿದ ರಾಮಚಂದ್ರಯ್ಯ. ಅವನ ಮುಖ ಕಂಡಾಗಲೆಲ್ಲಾ ಅವಳ ಆನಂದ, ಉತ್ಸಾಹ ನೆಲಸಮವಾಗುತ್ತಿದ್ದವು. ಮೀನಾಕ್ಷಿ ಸಂಕಟದಿಂದ ನಿಟ್ಟುಸಿರು ಬಿಡುತ್ತಿದ್ದಳು. ದೂರ ಬಹಳ ದೂರದ ಮೈಸೂರಿನ ಕಾಲೇಜಿನೆಡೆಗೆ ಮನಸ್ಸು ವಿಹಂಗಮದಂತೆ ಹಾರಿಹೋಗುತ್ತಿದ್ದಿತು. ಆ ಅಲೆತದಲ್ಲಿ, ಆ ಭಾವನೆಯಲ್ಲಿ ಮೀನಾಕ್ಷಿ ತಲ್ಲೀನಳಾಗುತ್ತಿದ್ದಳು.

ಮೀನಾಕ್ಷಿಗೆ ಅಡಿಗಡಿಗೆ ನೆನಪಾಗುತ್ತಿದ್ದ ಮತ್ತೊಂದು ವ್ಯಕ್ತಿ ಎಂದರೆ, ಶೀನಿ. ಶೀನಿಯಿಂದ ಅವಳಿಗಾಗಲೇ ಎರಡು ಕಾಗದಗಳು ಬಂದಿದ್ದುವು. ಶೀನು ತನ್ನ ಪುಟ್ಟ ಹೃದಯದ, ಪ್ರೀತಿ ಎಲ್ಲವನ್ನೂ ಆ ತಪ್ಪುತಪ್ಪಾದ ಕಾಗದದಲ್ಲಿ ತುಂಬಿಕೊಂಡಿರುತ್ತಿದ್ದನು. ಆ ಕಾಗದವನ್ನು ಅಡಿಗಡಿಗೆ ಓದಿ ಮೀನಾಕ್ಷಿ ಆನಂದವನ್ನು ಅನುಭವಿಸುತ್ತಿದ್ದಳು. ಮನಸ್ಸು ಮತ್ತೆ ಶ್ರೀರಂಗಪಟ್ಟಣದ ನಿಸರ್ಗಸೌಂದರ್ಯದಲ್ಲಿ ಲೀನವಾಗುತ್ತಿದ್ದಿತು. ಆ ನದಿಯ ತೀರದ ಮರಳು ರಾಶಿಯ ಮೇಲೆ ಮೀನಾಕ್ಷಿ ಶೀನುವಿನೊಡನೆ ಆಡುತ್ತಿದ್ದಳು. ಅವನೊಡನೆ ನೀರಿಗಿಳಿದು ಕೇಳಿಯಾಡುತ್ತಿದ್ದಳು. ಅಲ್ಲಿ ಅವಳಿಗೆ ಸುಖ ಸಿಕ್ಕುತ್ತಿದ್ದಿತು. ಆದರೆ ಮೀನಾಕ್ಷಿಗೆ ಕಾಮಾಕ್ಷಿಯಿಂದಾಗಲೀ, ಸುಬ್ಬಮ್ಮನವರಿಂದಾಗಲೀ ಒಂದು ಕಾಗದವೂ ಬರಲಿಲ್ಲ.

ರಾಮಚಂದ್ರಯ್ಯನಂತೂ ಮೀನಾಕ್ಷಿಯ ರೂಪಿಗೆ ಮಾರುಹೋಗಿದ್ದನು. ಅವನಿಗೆ ಮೀನಾಕ್ಷಿ ದೇವತಾಸ್ವರೂಪಳಾಗಿದ್ದಳು. ತನ್ನ ರೂಪಿಗೆ, ತನ್ನ ಯೋಗ್ಯತೆಗೆ ಅವಳು ಮೀರಿದ ಹೆಂಡತಿಯೆಂದು ಅವನು ನಿರ್ಧರಿಸಿಬಿಟ್ಟಿದ್ದನು. ಅವಳ ಯೌವ್ವನ ಕೂರಸಿಯಂತೆ ಅವನ ಕಣ್ಣಿರಿಯುತ್ತಿದ್ದಿತು. ರಸಭರಿತ ಹಣ್ಣನ್ನು ಎದುರಿಗಿಟ್ಟುಕೊಂಡೂ ರಾಮಚಂದ್ರಯ್ಯ ಅದರ ರಸವನ್ನು ಸವಿಯದಾದನು! ಸವಿ

ಯಲು ಹೋಗಿ ಸೋತು ಹಿಂತಿರುಗುತ್ತಿದ್ದನು! ತನ್ನ ಅಸಹಾಯ ಕತೆಗಾಗಿ ಮನಸ್ಸು ಮರುಕಗೊಳ್ಳುತ್ತಿದ್ದಿತು. ಮನಸ್ಸು ತ್ವೇಷಗೊಳ್ಳುತ್ತಿದ್ದಿತು. ಆದರೆ ಆ ರೋಷ, ಕೋಪ ಸತ್ವಹೀನವಾಗಿದ್ದಿತು. ಅದರಲ್ಲಿ ಖಾರವಿರಲಿಲ್ಲ. ಆಗ ಮೀನಾಕ್ಷಿಗಾಗಿ ಅವನ ಹೃದಯ ಹಂಬಲಿಸುತ್ತಿದ್ದಿತು. ಮೀನಾಕ್ಷಿಯ ನಿಶ್ಕಪಟ, ಮುಖವನ್ನು ನೋಡಿ, ಅವಳ ಯೌವ್ವನ ತುಂಬಿದ ಸೌಂದರ್ಯವನ್ನು ಕಂಡು ತಾನೆಂತಹ ಮೋಸ ಮಾಡಿದೆ ಎಂದು ಹೃದಯ ಪಶ್ಚಾತ್ತಾಪ ಪಡುತ್ತಿದ್ದಿತು. ರಾಮಚಂದ್ರಯ್ಯನಿಗೆ ಮೀನಾಕ್ಷಿಯ ಸೌಂದರ್ಯದರ್ಶನದಿಂದ ಹೊಸ ಉತ್ಸಾಹ ಮೈಯ್ಯಲ್ಲಿ ಹರಿಯುತ್ತಿದ್ದಿತು. ಹೊಸ ಹುಮ್ಮಸ್ಸಿನಿಂದ, ಹೊಸ ಆವೇಶದಿಂದ ಮೀನಾಕ್ಷಿಯನ್ನು ಕೈವಶ ಮಾಡಿಕೊಳ್ಳಲು ರಾಮಚಂದ್ರಯ್ಯ ಪ್ರಯತ್ನಿಸುತ್ತಿದ್ದನು. ಆ ಪ್ರಯತ್ನದಲ್ಲಿ ಒಮ್ಮೊಮ್ಮೆ ಜಯಶೀಲನಾಗುತ್ತಿದ್ದನು. ಆದರೆ ಅದು ಎಂತಹ ಗೆಲುವು. ಕಾವು ಆರಿದ ಗೆಲುವು. ಆ ಸಮಯದಲ್ಲಿ ರಾಮಚಂದ್ರಯ್ಯನಿಗೆ ಮೀನಾಕ್ಷಿ ಹೆಂಗಸಿಗಿಂತ ಮಗುವಾಗಿ ಏನೂ ಅರಿಯದ ಹಸುಳೆಯಾಗಿ ಕಾಣುತ್ತಿದ್ದಳು. ರಾಮಚಂದ್ರಯ್ಯ ಅಪಮಾನಿತನಾಗಿ, ಲಜ್ಜಿತನಾಗಿ ದೂರ ಹೊರಟು ಹೋಗುತ್ತಿದ್ದನು. ಅವನು ಅನೇಕ ದಿವಸಗಳವರೆವಿಗೆ ಮೀನಾಕ್ಷಿಯ ಬಳಿ ಸುಳಿಯುತ್ತಿರಲಿಲ್ಲ. ಅವನಿಗೆ ಮೀನಾಕ್ಷಿ ತನ್ನವಳೆಂದಷ್ಟೇ ಸಮಾಧಾನ. ಆ ಸುಂದರ ಯುವತಿ ಎಂದೆಂದಿಗೂ ತನ್ನವಳೇ. ಎಂದು ಹೆಮ್ಮೆಪಟ್ಟುಕೊಳ್ಳುತ್ತಿದ್ದನು. ನಾಶವಾಗಿದ್ದ ಪುರುಷತ್ವದ ಸಂಪಾದನೆಗಾಗಿ ರಾಮಚಂದ್ರಯ್ಯ ಔಷಧಿಗಳ ಮರೆಹೊಕ್ಕನು. ವೈದ್ಯರಿಂದ ವೈದ್ಯರ ಬಳಿಗೆ ಓಡಾಡಿದನು. ಆದರೆ ಅವನೆಣಿಸಿದ ಸಿದ್ಧಿ ಸಿಕ್ಕಲಿಲ್ಲ.

ರಾಮಚಂದ್ರಯ್ಯ ಮೀನಾಕ್ಷಿಯನ್ನು ಸುಖದಲ್ಲಿಡಬೇಕೆಂದು, ಅವಳ ಮನಸ್ಸಿಗೆ ಸಂತೋಷವನ್ನುಂಟು ಮಾಡಬೇಕೆಂದು ಸೀಗರೇಟು ಬಿಟ್ಟನು. ಯಾವಾಗಲೂ ಗೆಳೆಯರ ಮನೆಗಳಲ್ಲಿ ಇಸ್ಪೀಟು ಆಟದಲ್ಲಿ ಕಾಲಕಳೆಯುತ್ತಿದ್ದವನು ಈಗ ಬೇಗ ಮನೆಗೆ ಬಂದುಬಿಡುತ್ತಿದ್ದನು. ಮೀನಾಕ್ಷಿಯ ದರ್ಶನದಿಂದ, ತನ್ನಲ್ಲಿ ಹೊಸ ಉತ್ಸಾಹವನ್ನು

ಚಿಗುರಿಸಿಕೊಳ್ಳಲು ರಾಮಚಂದ್ರಯ್ಯ ಹಗಲಿರುಳು ಯತ್ನಿಸುತ್ತಿದ್ದನು. ಮೀನಾಕ್ಷಿ ಮನೆಗೆ ಬಂದಮೇಲೆ ಅವನ ಮುಖದಲ್ಲೂ ಕಳೆ ಹುಟ್ಟಿಕೊಂಡಿದ್ದಿತು. ಬೆಳಗ್ಗೆ ಎದ್ದು ಹೋದರೆ ಹನ್ನೆರಡು ಘಂಟೆಗೆ ಊಟಕ್ಕೆ ಬರುತ್ತಿದ್ದನು. ಊಟಮಾಡಿ ರೂಮಿನಲ್ಲಿ ಮಲಗಿಕೊಳ್ಳುತ್ತಿದ್ದನು. ಮೀನಾಕ್ಷಿ ಎಲೆ ಅಡಿಕೆ ಮಡಿಸಿಕೊಡುತ್ತಿದ್ದಳು. ಮೊದಲು ಮೊದಲು ಮೀನಾಕ್ಷಿಗೆ ಅವನ ಮುಖ ಕಂಡರೆ ಅಸಹ್ಯವಾಗುತ್ತಿದ್ದಿತು. ಆದರೆ ದಿನ ಕಳೆದಂತೆ ಅವನ ಪ್ರೀತಿ ಆದರಗಳಿಗೆ ಮಾರು ಹೋದಳು. ಆದರೆ ಗಂಡನೆಂದಲ್ಲ. ಯಾರಾದರೊಬ್ಬ ದಯಾಳುವಾದ ಸ್ನೇಹಿತನಂತೆ, ಆತ್ಮೀಯ ಬಂಧುವಿನಂತೆ.

ರಾಮಚಂದ್ರಯ್ಯ ತಿಂಗಳಿಗೆ ನಲವತ್ತು ರೂಪಾಯಿಗಳನ್ನು ಸಂಪಾದಿಸುತ್ತಿದ್ದನು. ಗದ್ದೆಯ ಹುಟ್ಟುವಳಿಯಲ್ಲಿ ಮನೆಗೆ ವರ್ಷಕ್ಕೆ ಸಾಕಾಗುವಷ್ಟು ಅಕ್ಕಿ ಇಟ್ಟುಕೊಳ್ಳುತ್ತಿದ್ದರು. ಮಿಕ್ಕಿದ್ದನ್ನು ಮಾರಿ ತಾಯಿಯ ಕೈಗೆ ಕೊಟ್ಟುಬಿಡುತ್ತಿದ್ದನು. ವರ್ಷಕ್ಕೆ ಭತ್ತಮಾರಿದ ದುಡ್ಡು ನೂರೈವತ್ತುರೂಪಾಯಿ ಬರುತ್ತಿದ್ದಿತು. ಎಲ್ಲರೂ ಒಗ್ಗಟ್ಟಾಗಿ ತಿಂಗಳಿಗೆ ಅರವತ್ತುರೂಪಾಯಿಗಳಲ್ಲಿ ಅಚ್ಚುಕಟ್ಟಾಗಿ ಸಂಸಾರ ನಡೆಸುತ್ತಿದ್ದರು.

ರಾಮಚಂದ್ರಯ್ಯ ಕೈಗೆ ಸಂಬಳ ಬಂದಕೂಡಲೇ ಮೀನಾಕ್ಷಿಯ ಕೈಗೆಹಾಕಿಬಿಡುತ್ತಿದ್ದನು. ಮೀನಾಕ್ಷಿಯೇ ಅವನ ಸ್ವಂತದ ಖರ್ಚಿಗೆಂದು ಐದುರೂಪಾಯಿಗಳ ನೋಟೊಂದನ್ನು ಟೇಬಲ್ಲಿನಮೇಲಿಟ್ಟು ಮಾತಾಡದೆ ಹೊರಗೆ ಬಂದುಬಿಡುತ್ತಿದ್ದಳು. ಎಷ್ಟೋಸಾರಿ ರಾಮಚಂದ್ರಯ್ಯ ಅದರಲ್ಲೂ ಉಳಿಸಿ ಅವಳನ್ನು ಸಂತೋಷ ಪಡಿಸಲು ಅವಳ ಮನಸ್ಸಿನಲ್ಲಿ ಹುದಗಿದ್ದ ಸೂಜಿ, ದಾರ, ಕಸೂತಿಬಟ್ಟೆಗಳ ಆಶೆಯನ್ನು ಪೂರೈಸುತ್ತಿದ್ದನು ಮೀನಾಕ್ಷಿ ದುಡ್ಡನ್ನು ತೆಗೆದುಕೊಂಡು ಅತ್ತೆಯ ಕೈಗೆ ಕೊಡಲು ಹೋಗುತ್ತಿದ್ದಳು, ಅತ್ತೆ,

" ನೀನೇ ಇಟ್ಟುಕೋ ತಾಯಿ. ನಿನ್ನ ಹತ್ತಿರ ಇದ್ದರೆ ಏನು ನನ್ನ ಹತ್ತಿರ ಇದ್ದರೆ ಏನು. ಈ ಸಂಸಾರವೆಲ್ಲಾ ನಿಂದೇ " ಎಂದು ಬಲವಂತಮಾಡಿ ಒಪ್ಪಿಸಿ, ಮನೆಗೆ ಬೇಕಾದಾಗ ಅವಳಿಂದ ತೆಗೆದು

ಕೊಳ್ಳುತ್ತಿದ್ದರು.

ಇಷ್ಟೆಲ್ಲ ಪ್ರೀತಿ ಆದರಗಳು ಆ ಮನೆಯಲ್ಲಿ ಸಿಕ್ಕುವುದೆಂದು ಮೀನಾಕ್ಷಿ ಯೋಚಿಸಿಯೇ ಇರಲಿಲ್ಲ. ಆ ಪ್ರೀತಿ ಆದರಗಳು ಅವಳ ನಿರೀಕ್ಷಣೆಗೆ ಮೀರಿದುದಾಗಿದ್ದಿತು. ವಾತರೋಗದಿಂದ ಕಾಲುಬಿದ್ದು ಹೋಗಿ, ಮೂಲೆ ಹಿಡಿದಿದ್ದ ಮಾವ, ಲೋಕಜನಿತವಾದ 'ರಾಕ್ಷಸಿ' ಅತ್ತೆ, ಕೈ ಹಿಡಿದ ಗಂಡ ಎಲ್ಲರೂ ತನ್ನನ್ನು ಅಷ್ಟು ಪ್ರೀತಿಸಿ, ಆದರಿಸುವು ದನ್ನು ನೋಡಿ ಮೀನಳ ಮನಸ್ಸು ಧರ್ಮದೃಷ್ಟಿಯಿಂದ ಅವರೆಲ್ಲರ ಕಡೆಗೆ ಮಾರುಹೋಯಿತು.

ತನ್ನ ಬಿಂಕ, ಬಿಗುಮಾನ, ಕೋಪ, ವ್ಯಸನಗಳನ್ನು ದೂರ ಮಾಡಿ ಮೀನಾಕ್ಷಿ ಬಹಳ ದಿವಸಗಳ ಮೇಲೆ ಮೊದಲನೆಯಸಾರಿ ಸಲುಗೆ ಯಿಂದ ಗಂಡನ ಹತ್ತಿರ ಮಾತನಾಡಿದಳು. ರಾಮಚಂದ್ರಯ್ಯನಿಗೂ ಆಶ್ಚರ್ಯವಾಯಿತು. ಆದಿನ ಮೀನಾಕ್ಷಿ ಮಧ್ಯಾಹ್ನ ಕಾಫಿತೆಗೆದುಕೊಂಡು ಹೋಗಿ ಗಂಡನನ್ನು ಎಬ್ಬಿಸಿದಳು. ಎದ್ದು ಹಾಗೆಯೇ ದಿಂಬಿಗೆ ಒರಗಿ ಕೊಂಡು ರಾಮಚಂದ್ರಯ್ಯ ಟೇಬಲ್ಲಿನ ಮೇಲಿದ್ದ ಕಾಫಿ-ಕಪ್ಪನ್ನು ಕೈಗೆ ತೆಗೆದುಕೊಂಡನು. ಎಂದಿನಂತಾಗಿದ್ದರೆ ಅಷ್ಟು ಹೊತ್ತಿಗೆ ಮೀನಾಕ್ಷಿ ಹೊರಗಡೆ ಹೊರಟುಹೋಗಬೇಕಾಗಿದ್ದಿತು. ಮೀನಾಕ್ಷಿ ಮಂಚದ ಹತ್ತಿರ ನಿಂತು ಮೈ ತುಂಬಿಕೊಂಡಿದ್ದ ಗಂಡನನ್ನೇ ಎವೆಹಾಕದೆ ನೋಡುತ್ತಿ ದ್ದಳು. ರಾಮಚಂದ್ರಯ್ಯನಿಗೆ ಆಶ್ಚರ್ಯವಾಯಿತು. ಅವನಿಗೆ ಅಪ ರೂಪವಾಗಿ ಒಳ್ಳೆಯ ಸಂದರ್ಭ ಒದಗಿಬಂದಿತ್ತು. ಮೀನಾಕ್ಷಿಯ ಕೈ ಹಿಡಿದು,

"ಬಾ, ಮೀನಾ ಕೂತುಕೋ." ಎಂದನು.

ಮೀನಾಕ್ಷಿ ಮರುಮಾತಾಡದೆ ಮಂಚದಮೇಲೆ ಕುಳಿತುಕೊಂಡಳು. ರಾಮಚಂದ್ರಯ್ಯ ಹೆಂಡತಿಯ ಮುಖ ದಿಟ್ಟಿಸಿದನು. ಬಹಳ ದಿವಸ ಗಳಿಂದ ಕೇಳಬೇಕೆಂದು ಹೃದಯದಲ್ಲೇ ಅಡಗಿಸಿಟ್ಟಿದ್ದ ಮಾತು ಅಂದು ಹೊರಗೆ ಬಂದಿತು. ದೈನ್ಯದಿಂದ ಕೇಳಿದನು,

"ಮೀನಾ.... .... .... ನಾನು ನಿನಗೆ ಮೋಸಮಾಡಿದೆ ಅಂತ ಕೋಪವೇ"

"ಛೇ.... .... ಯಾರು ಹಾಗೆಂದರು. ಇಲ್ಲವಲ್ಲಾ, ನೀವೇನೂ ನನಗೆ ಮೋಸಮಾಡಿಲ್ಲ. ನನ್ನ ಕೈ ಹಿಡಿದು ಉದ್ಧಾರಮಾಡಿದಿರಿ"

"ನಾನು ಮುದುಕ. ನಿನಗೆ ಸರಿಯಾದ ಗಂಡನಲ್ಲ....ಅಲ್ಲವೇ?"

"ನಿಮ್ಮ ಪ್ರೀತಿ ಮುದಿಯಾಗಿಲ್ಲವಲ್ಲ!"

"ಎಷ್ಟು ಜಾಣಳಾಗಿ ಮಾತನಾಡುತ್ತೀಯಾ ಮೀನಾ. ಇದೆಲ್ಲಾ ನಿನಗೆ ಯಾರು ಹೇಳಿಕೊಟ್ಟರು"

"ಹೇಳಿಕೊಡಬೇಕೇ ನೋಡಿದರೆ ತಿಳಿಯುವುದಿಲ್ಲವೇ?"

"ಹಾಗಾದರೆ, ನನ್ನ ಮೇಲೆ ಕೋಪ ಇಲ್ಲ ತಾನೆ"

"ನನಗೇಕೆ ನಿಮ್ಮ ಮೇಲೆ ಕೋಪ?"

"ಮತ್ತೆ ನನ್ನ ಮಾತನಾಡಿಸುತ್ತಲೇ ಇರಲಿಲ್ಲ"

"ನಾಚಿಕೆಯಾಗುತ್ತಿತ್ತು, ಹೇಗೆ ಮಾತನಾಡಿಸಬೇಕೋ ತಿಳಿಯುತ್ತಿರಲಿಲ್ಲ"

"ಈಗ"

"ಈಗ ನಿಮ್ಮ ಮನಸ್ಸು ತಿಳಿಯಿತು. ನಾನು ತಿಳಿಯದೆ ಹೇಗೆ ಮಾತನಾಡಿದರೂ ನೀವು ತಪ್ಪರ್ಥ ಮಾಡಿಕೊಳ್ಳುವುದಿಲ್ಲವೆಂದು ತಿಳಿಯಿತು."

"ಎಷ್ಟು ಜಾಣಳೇ ನೀನು. ಇದೆಲ್ಲಾ ಇಲ್ಲಿಯುವರೆವಿಗೆ ಎಲ್ಲಿ ಮುಚ್ಚಿಟ್ಟಿದ್ದೆ?"

ಮೀನಾಕ್ಷಿ ಮುಸಿನಕ್ಕು, ರಾಮಚಂದ್ರಯ್ಯನ ಕೈ ಬಿಡಿಸಿಕೊಂಡು ಕಾಫಿ ಲೋಟ ತೆಗೆದುಕೊಂಡು ಒಳಗೆ ಓಡಿಹೋದಳು. ಅವನಿಗೆ ಅತ್ಯಾನಂದವಾಯಿತು. ಅವನ ತಲೆ ತಿನ್ನುತ್ತಿದ್ದ ದುರಾಲೋಚನೆಗಳೆಲ್ಲ ಸತ್ತು ಬಿದ್ದುವು. ಆ ದಿನ ಸ್ವರ್ಗದಲ್ಲಿ ವಿಹರಿಸಿದನು. ಒಂದು ವಾರವಾಯಿತು ರಾಮಚಂದ್ರಯ್ಯ ಇನ್ನೂ ಮೈ ಕೈ ತುಂಬಿಕೊಂಡು ಲಕ್ಷಣವಾಗಿ ಆದನು. ಆ ಬದಲಾವಣೆಗೆ ಮೀನಾಕ್ಷಿಯೇ ಕಾರಣವಾಗಿದ್ದಳು.

ಆ ದಿನವೇ ಮೊದಲ ಸಾರಿ ಮೀನಾಕ್ಷಿ ತನಗಾಗಿ ಬಾಯಿಬಿಟ್ಟು "ಇಂತಹುದು" ಬೇಕು ಎಂದು ಕೇಳಿದ್ದು. ರಾಮಚಂದ್ರಯ್ಯ

ಕೋಟು ಹಾಕಿಕೊಂಡು ಆಫೀಸಿಗೆ ಹೊರಡುತ್ತಿದ್ದನು. ಮೀನಾಕ್ಷಿ ಅವನ ಕೈಹಿಡಿದು ನಿಲ್ಲಿಸಿ, ಕೇಳಿದಳು,

"ನಾನೊಂದು ಕೇಳ್ತೀನಿ ತಂದ್ಕೊಡ್ತೀರಾ"

"ಏನು ಮೀನಾ ಅದು. ಇಲ್ಲಾ ಅಂತೇನ್ಬೇ ?"

"ನೀವು ನಗ್ಬಾರ್ದು"

"ಖಂಡಿತ ನಗೊಲ್ಲ"

"ನನಗೆ ಸ್ವೆಟ್ಟರ್ ಹಾಕೋಕೆ ಎರಡು ಔನ್ಸ್ ಕೆಂಪು ಉಲ್ಲನ್ ಬೇಕು"

"ಎರಡು ಔನ್ಸ್...............ಯಾರಿಗೇ ?"

"ನಿಮಗೇ.................."

"ನನಗೆ ಎರಡು ಔನ್ಸ್ ಉಲ್ಲನಿನಲ್ಲಿ ಸ್ವೆಟ್ಟರ್ ಹಾಕ್ತೀಯ. ಶಾಬ್ಬಾಷ್ ! ಬಹಳ ಜಾಣಳು ಹಾಗಾದ್ರೆ. ಎರಡು ಔನ್ಸ್ ಉಲ್ಲನ್ ಎರಡು ತಿಂಗಳ ಮಗೂಗೆ !"

"..............."

"ಯಾರಿಗೇ ಮೀನಾ"

"ನಮ್ಮ ಮಗೂಗೆ........"

"ಅಂದ್ರೆ............ನೀನು........ನೀನು !...."

ಮೀನಾಕ್ಷಿ ಅವನ ಬಾಯಿ ಮುಚ್ಚಿದಳು.

"ಥೂ, ಹೋಗೀಂದ್ರೆ. ಹಾಗೇನಿಲ್ಲ. ಆದ್ರೆ ಒಬ್ಬೇ ಕೂತ್ಕೊಂಡು ಬೇಜಾರು ಆಗುತ್ತೆ. ಅತ್ತೆ ಒಂದು ಕೆಲ್ಸಾನೂ ಮಾಡ್ಸೊಲ್ಲ. ಆದಾದ್ರೂ ಹಾಕೋಣ ಅಂತ........ಅಷ್ಟೆ....ಇವತ್ತಿಗೆ ಇಲ್ದಿದ್ರೆ ಯಾವತ್ತಿಗಾದರೂ ಆಗುತ್ತೆ"

"ಓಹೋ, ಕೂಸು ಹುಟ್ಟೋಕೆ ಮೊದಲು ಕುಲಾವಿ ಹೊಲ್ಸೋ ಸಮಾಚಾರ ನಿಂದು. ಹೆಣ್ಣಿಗೋ ಗಂಡಿಗೋ"

"ಹೋಗೀಂದ್ರೆ ...............ಯಾವ್ದೋ ಒಂದು........ಸ್ವೆಟ್ಟರ್ ಗೇನು ? ತಂದ್ಕೊಡ್ತೀರಿ ತಾನೆ"

"ಖಂಡಿತ ಈವತ್ತು ಸಾಯಂಕಾಲ ಬರೋವಾಗ ತರ್ತೀನಿ"

ರಾಮಚಂದ್ರಯ್ಯ ಅವಳ ಕೆನ್ನೆ ಹಿಂಡಿ, "ನಾನು ಬರೋ ತನಕ ನೆನಸಿಕೊಳ್ತಾ ಇರು" ಎಂದು ಹೇಳಿ ಹೊರಟುಹೋದನು. ಅವನಿಗೆ ಸಂತೋಷ ಉಕ್ಕಿ ಹರಿಯಿತು. ಅವನಲ್ಲಿ ಸುಪ್ತವಾಗಿದ್ದ, ಶುಷ್ಕವಾಗಿದ್ದ ಪುರುಷತ್ವ ಜಾಗೃತವಾಯಿತು. ಅವನಿಗೂ ತನ್ನದಾಗಿ ಒಂದು ಪುಟ್ಟ ಮಗು ಆಗಬೇಕೆಂದು ಬಯಕೆ ಹೃದಯದಲ್ಲಿ ಅಡಗಿಕೊಂಡಿದ್ದಿತು.

ಮೀನಾಕ್ಷಿಯ ಮನಸ್ಸಿನಲ್ಲಿ ಮಕ್ಕಳ ಆಸೆ ಜಾಗೃತವಾಗಿತ್ತು. ಅದರ ಸಿದ್ಧಿಗಾಗಿ ಅವಳು ಯಾವ ತ್ಯಾಗವನ್ನು ಮಾಡಲೂ ಸಿದ್ಧಳಾಗಿದ್ದಳು. ಆ ಆಸೆ ಅವಳ ರಕ್ತದಲ್ಲಿ ಬೆರೆತು ಹೋಗಿದ್ದಿತು. ಅವಳ ಧಮನಿಧಮನಿಗಳಲ್ಲಿ ಜೀವ ತುಂಬಿಕೊಂಡು ಹರಿಯುತ್ತಿದ್ದಿತು. ಚಂದ್ರುವಿನೆಡೆಗೆ ಹರಿಹಾಯುತ್ತಿದ್ದ ಮನಸ್ಸನ್ನು ಬಿಗಿಹಿಡಿಯಲು, ಆ ಮನಸ್ಸನ್ನು ಅತಿ ಪ್ರಿಯವಾದ ಒಂದು ವಸ್ತುವಿನ ಮೇಲೆ ಕೇಂದ್ರೀಕರಿಸಲು ಅವಳಿಗೆ ಒಂದು ಮಗು, ತನ್ನದೇ ಆದ ಒಂದು ಮುದ್ದು ಮಗು ಬೇಕೇ ಬೇಕಾಗಿದ್ದಿತು. ಆದರೆ ಆ ಭಾಗ್ಯ ಮೀನಳ ಬಾಳಿನಲ್ಲಿ ಉದಯವಾಗಿರಲಿಲ್ಲ. ಆ ಬಯಕೆ ಮತ್ತೊಂದು ವ್ಯಕ್ತಿಯ ಸುಖದ ಕಡೆ ಹರಿದಿತ್ತು. ಅವಳು ಬಂದ ದಿನದಿಂದ ಕಾಮಾಕ್ಷಿಯ ಮಗುವಿನ ವಿಚಾರವನ್ನೇ ಯೋಚಿಸುತ್ತಿದ್ದಳು. ತಾನು ಊರಿಗೆ ಬಂದು ಏಳು ತಿಂಗಳಾಗಿದ್ದರೂ ಅವರಿಂದ ಅವಳಿಗೆ ಕಾಗದವೇ ಬಂದಿರಲಿಲ್ಲ. ಅವಳು ಬರೆದಿದ್ದ ಎರಡು ಕಾಗದಗಳಿಗೂ ಜವಾಬೇ ಇಲ್ಲ. ಏನು ಕಾರಣ ಅಡ್ರೆಸ್ಸು ತಪ್ಪೇ? ಸಾಧ್ಯವೇ ಇಲ್ಲ. ಮತ್ತೆ....ಕಾಮಾಕ್ಷಿಗೆ ಏನಾಗಿದೆಯೋ ಏನೋ?........ಶೀನು ಬರೆದಿದ್ದ ನಾಲ್ಕು ತಿಂಗಳ ಹಿಂದೆ. ಈಗ ಅವನ ಕಾಗದವೂ ಇಲ್ಲ. ಕಾಮಾಕ್ಷಿ ಇಷ್ಟು ಹೊತ್ತಿಗೆ ಖಂಡಿತ ಹೆತ್ತಿರಲೇಬೇಕು. ಮಗುವಿಗೆ ಮೂರು ತಿಂಗಳಾದರೂ ಆಗಿರಲೇಬೇಕು. ಎಂತಹುದೋ ಮಗು? ಎಲ್ಲ ಚಂದ್ರುವಿನ ಹಾಗೆಯೇ ಇರಬೇಕು. ಚಂದ್ರು ............. ಹ್ಞು.........ಮತ್ತೆ ನನಗೇಕೆ ಬಾ ಎಂದು ಬರೆಯಲಿಲ್ಲ. ಸುದ್ದಿಯನ್ನೂ ತಿಳಿಸಿಲ್ಲ. ಪಾಪ ಏನು ತಾಪತ್ರಯವೋ? ಇಲ್ಲ ನನ್ನನ್ನು ಮರೆತೇ ಬಿಟ್ಟರೇನೋ? ಛೀ! ಅಮ್ಮ ಮರೆಯುತ್ತಾರೆಯೇ? ಕಾಗದ ಬರಸೇ ಬರಸುತ್ತಾರೆ ಹೇಗಾದ

ರಾಗಲಿ ಕಾಮಾಕ್ಷಿ ಮಗೂನ ನೋಡುವುದಕ್ಕೆ ಹೋಗಲು ಸಿದ್ಧಳಾಗಬೇಕು, ಅವಳ ಮಗೂಗೆ ಒಂದು ಸ್ವೆಟ್ಟರ್ ಹಾಕಬೇಕು. ಅವರು ಬರೆಸಿದರೆ ಹೋಗುವುದು. ಇಲ್ಲದಿದ್ದರೆ ನನ್ನ ಮಗುವಿಗೇ ಆಗುತ್ತೆ. ನನಗೇನು ಮಕ್ಕಳು ಆಗುವುದಿಲ್ಲವೇ? ನನ್ನ ಮಗುವಿಗೆ ಈಗಲೆ ಏನವಸರ. ಕಾಮಾಕ್ಷಿ ಮಗುವಿಗೇ ಕೊಟ್ಟು ಬಿಡೋಣ. ಕಾಗದ ಬಂದು ಬಿಟ್ಟರೆ ಹೊರಡಬೇಕಾಗುತ್ತೆ. ಎಂದು ಮೀನಾ ಕನಸಿನ ಪ್ರಪಂಚದಲ್ಲಿ ವಿಹರಿಸಿ, ಗಂಡನಿಗೆ ತನ್ನ ಆಶೆಯನ್ನು ಹೇಳಿಕೊಂಡಿದ್ದಳು.

ಸಾಯಂಕಾಲ ಉಲ್ಲನ್ ಲಡಿಯನ್ನು ತಂದು ಕೈಯಲ್ಲಿಟ್ಟಾಗ ಮೀನಾಕ್ಷಿಯ ಸಂತೋಷ ಹೇಳತೀರದು. ಅದರಲ್ಲಿ ಸ್ವೆಟ್ಟರ್ ಹಾಕಿ ಆ ಕೆಂಪು ಸ್ವೆಟ್ಟರನ್ನು, ತನ್ನ ಸುಂದರವಾದ ಮಗು ಹಾಕಿಕೊಂಡು ದೃಷ್ಟಿ ನಿವಾಳಿಸಿಕೊಂಡಹಾಗೆ ಹಗಲುಗನಸು ಕಂಡಳು. ರಾಮಚಂದ್ರಯ್ಯನೂ ಆ ರಾತ್ರಿ ಹೆಂಡತಿಯ ಕನಸಿನ ಸಾಮ್ರಾಜ್ಯದಲ್ಲಿ ಪಾಲುಗೊಂಡನು. ಮೀನಾಕ್ಷಿ ಹಿಂದಲ ಬೀದಿಯಲ್ಲಿದ್ದ ಡಾಕ್ಟರ ಮನೆಗೆ ಹೋಗಿ ಒಂದು ಹೊಸ ಪ್ಯಾಟರ್ನ್ ಸ್ವೆಟ್ಟರ್ ಹಾಕುವುದನ್ನು ಕಲಿತುಕೊಂಡಳು. ಹಗಲೂ ರಾತ್ರಿ ಕೆಲಸ ಮಾಡಿ ಆರು ದಿವಸಗಳಲ್ಲೇ ಒಂದು ಸ್ವೆಟ್ಟರ್ ಮುಗಿಸಿದಳು. ಹಾಕಿ ಮುಗಿಸಿದ ಮೇಲೆ ಅವಳ ಮನಸ್ಸು ಅದನ್ನು ಯಾವಾಗ ಕಾಮಾಕ್ಷಿ ಮಗುವಿಗೆ ಹಾಕಿನೋಡುವೆನೋ, ಎಂದು ಕಾತರಿಸುತ್ತಿದ್ದಿತು. ಆದರೆ ಊರಿನಿಂದ ಕಾಗದವೇ ಬರಲಿಲ್ಲ. ಚಿಂತೆಗೊಳಗಾದ ಅವಳ ಮನಸ್ಸಿನಲ್ಲಿ ತಕ್ಷಣ ತನಗೆ ಹುಟ್ಟಬೇಕಾದ ಮಗುವಿನ ರೂಪರೇಖೆಗಳು ಮೂಡುತ್ತಿದ್ದುವು. ಅವು ಕಲ್ಪನಾತೀತವಾಗಿದ್ದುವು. ಪಕ್ಕದ ಮನೆ ಚಂದ್ರಮ್ಮನವರ ಮಗು ಮೈ ಕೈ ತುಂಬಿಕೊಂಡು ಒಳ್ಳೇ ಕರ್ಪೂರದ ಬೊಂಬೆಯಹಾಗಿತ್ತು. ಅವಳು ಆ ಮಗುವಿಗೆ ಆ ಸ್ವೆಟ್ಟರ್ ಹಾಕಿ, ಹಿಗ್ಗಿ ನಲಿದಳು. ಆ ಮಗುವಿನಲ್ಲಿ ಕಾಮಾಕ್ಷಿಯ ಮಗುವನ್ನು ಕಂಡುಕೊಂಡಳು. ಮತ್ತೆ ಅದು ತನ್ನ ಮುಂಬರುವ ಮಗುವಿನ ಮೇಲೆ ಹರಿಯಿತು. ಎರಡೂ ಫಲಿಸದಿದ್ದರೆ ಆ ಸ್ವೆಟ್ಟರನ್ನು ಅದೇ ಮಗುವಿಗೆ ಕೊಟ್ಟುಬಿಡಬೇಕೆಂದು ಅವಳ ಸರಳ ಮನಸ್ಸು ಯೋಚಿಸಿಕೊಂಡಿತು.

ನಾಗವೇಣಮ್ಮನವರಿಗೂ ಸೊಸೆಯ ಮಕ್ಕಳ ದಾಹವನ್ನು ನೋಡಿ ಎದೆಯುಬ್ಬಿ ಬರುತ್ತಿದ್ದಿತು. ಈ ವರ್ಷವಿಲ್ಲದಿದ್ದರೆ ಮುಂದಲ ವರ್ಷವಾದರೂ ತಮಗೊಂದು ಮಗುವನ್ನು ಕೊಟ್ಟೇಕೊಡುತ್ತಾಳೆಂದು ನಂಬಿಕೊಂಡಿದ್ದರು.

ಆ ದಿನ ಡಾಕ್ಟರ ಮನೆಯಾಕೆಯಿಂದ ಮೆಚ್ಚುಗೆ ಪಡೆದು ಬಂದ ಮೀನಾಕ್ಷಿ ಪೆಟ್ಟಿಗೆ ತೆಗೆದು ತನ್ನ ದೊಡ್ಡ ಕರ್ಪೂರದ ಬೊಂಬೆಯನ್ನು ಹೊರಕ್ಕೆ ತೆಗೆದಳು. ಅದಕ್ಕೆ ಆ ಸ್ವೆಟ್ಟರನ್ನು ತೊಡಿಸಿ, ದಿಟ್ಟಿಸಿನೋಡಿ, ಅದನ್ನು ಸ್ಟ್ಯಾಂಡಿನ ಮೇಲಿಟ್ಟಳು. ಅಂದಿನಿಂದ ಹಗಲಿರುಳು ಮೀನಳಿಗೆ ಆ ಬೊಂಬೆಯನ್ನು ನೋಡುವುದೇ ಕೆಲಸವಾಯ್ತು.

ಮೀನಾಕ್ಷಿಗೆ ತವರುಮನೆಯ ಸುದ್ದಿ ತಿಳಿಯುತ್ತಲೇ ಇರಲಿಲ್ಲ. ಮದುವೆ ಮಾಡಿಕೊಟ್ಟು ಎಂದೆಂದಿಗೂ ದೂರತಳ್ಳಿಬಿಟ್ಟಂತೆ ತೋರಿತು. ಮೀನಾಕ್ಷಿಯೇ ಒಂದು ದಿನ ಕಾಗದ ಬರೆದು ಗಂಡನ ಕೈಯಲ್ಲಿ ಪೋಸ್ಟಿಗೆ ಹಾಕಿಸಿದಳು. ನಾಲ್ಕೈದು ದಿವಸಗಳ ಮೇಲೆ ಕಾಮಾಕ್ಷಿ ಹೆಣ್ಣುಮಗು ಹೆತ್ತಿದ್ದಾಳೆಂದು ಶೀನುವಿನಿಂದ ಸಮಾಚಾರ ಬಂದಿತು. ಕಾಮಾಕ್ಷಿಯ ಮಗುವನ್ನು ನೋಡಬೇಕೆಂದು ಎಷ್ಟು ಬಯಸಿದಳೋ. ಒಂದು ತಿಂಗಳವರೆಗೆ ಅದೇ ಗೀಳು ಹಿಡಿಯಿತು. ರಾಮಚಂದ್ರಯ್ಯನ ಹತ್ತಿರ ಒಂದೆರಡು ಸಾರಿ ತನ್ನ ಇಚ್ಛೆಯನ್ನು ಹೇಳಿಕೊಂಡಳು.

"ನನಗೆ ಕಾಮಾಕ್ಷಿ ಮಗೂನ ನೋಡಬೇಕು ಅನ್ನಿಸುತ್ತೇಂದ್ರೆ."

"ಅವರೇನು ನಿನಗೆ ಬಾ ಎಂದು ಬರೆದಿದ್ದಾರೆಯೋ?...."

"ಇಲ್ಲ....ಆದ್ರೂ...."

"ಸುಮ್ನಿರು, ಮೀನಾಕ್ಷಿ. ನೀನೇಕೆ ಇಷ್ಟು ಒದ್ದಾಡ್ತೀಯ. ಅವರಿಗೇ ಬೇಡದೆ ಇದ್ದ ಮೇಲೆ, ನಾವೇಕೆ ಒದ್ದಾಡಬೇಕು."

ಮೀನಾಕ್ಷಿ ಮನಸ್ಸಿಲ್ಲದ ಮನಸ್ಸಿನಿಂದ ಗಂಡನ ಮಾತಿಗೆ ಮನ್ನಣೆ ಕೊಟ್ಟು ಆ ಮಾತನಾಡುವುದನ್ನು ಬಿಟ್ಟಳು. ಆದಷ್ಟು ತವರುಮನೆ ಯನ್ನು ಮರೆಯಲು ಪ್ರಯತ್ನಿಸಿದಳು. ಆದರೂ ಅವಳು ತನ್ನ ಪ್ರಯತ್ನದಲ್ಲಿ ಸಂಪೂರ್ಣವಾಗಿ ಗೆಲ್ಲಲಿಲ್ಲ. ಮತ್ತೆ ಹದಿನೈದು ದಿವಸಗಳು ಉರುಳಿಹೋಯಿತು. ಮೀನಾಕ್ಷಿಗೆ ಎರಡು ದಿವಸಗಳಿಂದ ಮಂಕು

ಕವಿದುಕೊಂಡಂತಾಗಿದ್ದಿತು. ಹೊಟ್ಟೆಯಲ್ಲಿ ಏನೋ ಒಂದು ಬಗೆಯ ಸಂಕಟವಾಗುತ್ತಿದ್ದಿತು. ಆಡಿಗಡಿಗೆ ಚಂದ್ರುವಿನ ನೆನಪಾಗುತ್ತಿದ್ದಿತು ! ಅವನ ಮಗು ಹೇಗಿದೆಯೋ ಅನ್ನಿಸುತ್ತಿದ್ದಿತು. ಮಾರನೆಯ ದಿನವೇ ಕಾಮಾಕ್ಷಿಯ ಕಾಗದ ಬಂದಿತು. ಕಾಮಾಕ್ಷಿ ಕಾರ್ಡಿನಲ್ಲಿ ಒಂದೆರಡು ಸಾಲು ಗೀಚಿಹಾಕಿದ್ದಳು.

" ನೀನು ನನ್ನ ಮಗೂನ ನೋಡಬೇಕು, ನೋಡಬೇಕು ಅಂತ ಒಂದೇ ಸಮನೆ ಬಡಕೊಂಡು ಹೋದೆಯಲ್ಲಾ, ನಿನ್ನ ಹೊಟ್ಟೆ ಉರಿ ತಗಲಿ ನನ್ನ ಮಗು ಸತ್ತುಹೋಯಿತು. ಇನ್ನಾದರೂ ಹಾಯಾಗಿರು. ಎಲ್ಲಾ ನೀನು ಅತ್ತೆಯ ಮನೆಗೆ ಹೋದ ಘಳಿಗೆಯ ಫಲ "

ಎಂದು ಬರೆದಿದ್ದ ಕಾಮಾಕ್ಷಿಯ ಕಾಗದವನ್ನು ನೋಡಿ ಮೀನಾಕ್ಷಿ ದಿನವೆಲ್ಲ ಅತ್ತಳು ಆ ಕಾಗದ ನಿಜವಾಗಲೂ ಅವಳ ಎದೆಗೆ ಏಟು ಕೊಟ್ಟಿದ್ದಿತು. ' ಅವಳ ಮಗು ಸತ್ತಿದ್ದಕ್ಕೆ ನಾನು ಹೊಣೆಯೇ ? ' ಎಂದು ಸಂಕಟಪಟ್ಟಳು. 'ನಾನು ಅವಳ ಮಗುವನ್ನು ನೋಡಬೇಕೆಂದು ಆಸೆ ಇಟ್ಟುಕೊಂಡಿದ್ದೆ. ಆ ಮಗುವಿಗಾಗಿ ಸ್ವೆಟ್ಟರ್ ಹಾಕಿ ಇಟ್ಟುಕೊಂಡಿದ್ದೆನಲ್ಲಾ. ಅದು ಅಪರಾಧವಾಯಿತೇ, ಅಪಶಕುನ ವಾಯಿತೇ ? ' ಎಂದು ಮೀನಾಕ್ಷಿ ಗೋಳಾಡಿದಳು. ನಾಗವೇಣಮ್ಮ ರಾಮಚಂದ್ರಯ್ಯ ಇಬ್ಬರೂ ಸಮಾಧಾನ ಮಾಡಿದರು.

"ಅದೆಲ್ಲಾ ಮನಸ್ಸಿಗೆ ಹಚ್ಕೋಬೇಡ ಮೀನಾ. ಎಷ್ಟೇ ಆಗ್ಲಿ ಅವರು ನಿನ್ನನ್ನು ದಯಾಧರ್ಮ ಇಟ್ಟು ಸಾಕಿದವರು. ಹೆತ್ತ ಕರುಳಿನ ಪ್ರೀತಿ ಬರೋಕೆ ಸಾಧ್ಯವೇ. ಅವರಿಗೇ ಬೇಡವಾದ ಮೇಲೆ ನೀನೇಕೆ ಇಷ್ಟು ಒದ್ಕೋತೀಯ ? ತವರು ಮನೆಯ ಸಂಬಂಧವೇ ತೊಡೆದು ಹೋಯ್ತು ಅನ್ಕೋ."

ಅತ್ತೆ, ಗಂಡಂದಿರ ಮಾತಿನಿಂದ ಮೀನಾಕ್ಷಿಗೆ ಕೊಂಚ ಸಮಾಧಾನವಾಯಿತು. ಆದರೂ ಮೀನಾಕ್ಷಿ ತನಗಾದ ಅಪಮಾನವನ್ನು, ಅವಹೇಳನವನ್ನು, ಕರುಳಿನ ಸಂಕಟವನ್ನು ಮರೆಯದಾದಳು.

ತಿಂಗಳುಗಳು ಕಳೆದಂತೆ ಮೀನಾ ತನ್ನ ದುಃಖವನ್ನು ಮರೆಯತೊಡಗಿದಳು. ಅವಳ ಮನಸ್ಸು ಅವಳ ಎರಡನೆಯ ಆಶೆಯ ಕಡೆಗೆ ಹೊರಳಿತ್ತು. ತನ್ನ ಮಗುವಿನ ಕಡೆ ಮನಸ್ಸು ಹರಿಯತೊಡಗಿತ್ತು. ತನ್ನೆಲ್ಲ ದುಃಖವನ್ನೂ, ಹೃದಯದ ಸಂಕಟವನ್ನು ಮರೆಯಲು ತನಗೊಂದು ಮುದ್ದು ಮಗುವಾದರೆ ಮಾತ್ರ ಸಾಧ್ಯ ಎಂದು ಮೀನಾಕ್ಷಿ ಆ ಮುದ್ದು ಮಗುವಿಗಾಗಿ ಹಂಬಲಿಸಿದಳು. ಅದರ ಯೋಚನೆಯಲ್ಲಿ ಮೀನಾ ತನ್ನ ದುಃಖವನ್ನು ಮರೆತು ಸ್ವಪ್ನ ಸಾಮ್ರಾಜ್ಯದಲ್ಲಿ ವಿಹರಿಸಿದಳು. ಮೀನಾ ತನ್ನ ಗಮನವನ್ನು ಕೈಹಿಡಿದ ಪತಿಯ ಕಡೆಗೆ ತಿರುಗಿಸಿದಳು. ಅವನೊಡನೆ ನಕ್ಕು ನಲಿದು ಅವನ ಮನಸ್ಸನ್ನು ಸಂತೋಷಪಡಿಸಿ, ಮೀನಾಕ್ಷಿ ಗಂಡನಲ್ಲಿ ಹೊಸ ಹುಮ್ಮಸ್ಸನ್ನು, ಹೊಸ ಉತ್ಸಾಹವನ್ನು ತುಂಬಿದಳು.

ಆ ಪ್ರಯತ್ನ ತನ್ನ ಸ್ವಾರ್ಥ ಸಾಧನೆಗಾಗಿತ್ತು!

## ೬

ಎರಡು ತಿಂಗಳಲ್ಲೇ ಆ ಮಾತು ನಿಜವಾಯಿತು. ನಾಗವೇಣಮ್ಮನವರಿಗೆ, ಏಕೆ ಮನೆಮಂದಿಗೆಲ್ಲ ಅದು ಬಹಳ ಸಂತೋಷಕರವಾದ ಸಮಾಚಾರವಾಗಿದ್ದಿತು. ಮೀನಾಕ್ಷಿಗೆ ಎರಡು ತಿಂಗಳಾಗಿತ್ತು! ರಾಮಚಂದ್ರಯ್ಯನ ಹೃದಯಕ್ಕೆ ಆದ ಅತೀವ ಆನಂದ ವರ್ಣಿಸಲು ಸಾಧ್ಯವಿರಲಿಲ್ಲ. ನಾಗವೇಣಮ್ಮನವರು ಮೀನಾಕ್ಷಿಯನ್ನು ಬಗೆ ಬಗೆಯಾಗಿ ಉಪಚರಿಸಿದರು. ನಿತ್ಯ ಅವಳಿಗೆ ಹಾಲುಹಣ್ಣುಗಳ ಸಮಾರಾಧನೆ ಮಾಡತೊಡಗಿದರು ನಿತ್ಯ ಒಂದೊಂದು ಬಗೆಯ ತಿಂಡಿ. ದಿನ ಬಿಟ್ಟು ದಿನ ನೀರು. ಹೀಗಾಗಿ ಮೂರುತಿಂಗಳಾಗುವವೇಳೆಗೆ ಅವಳಿಗೆ ಬಯಕೆಗಳೇ ಇಲ್ಲ ಅನ್ನಿಸಿಬಿಟ್ಟರು.

ರಾಮಚಂದ್ರಯ್ಯ ಹೆಮ್ಮೆಯಿಂದ ಮೆರೆದನು. ಮೀನಾಕ್ಷಿಯ ಸೌಂದರ್ಯದರ್ಶನದಿಂದ, ಅವಳು ಕೇವಲ ಒಂದು ಮಗುವನ್ನು ಪಡೆ

ಯುವುದಕ್ಕಾಗಿ ನಟಿಸುತ್ತಿದ್ದ ಹಾವಭಾವಗಳಿಂದ ಉನ್ಮತ್ತನಾಗಿ ತನ್ನ ಕಳೆದುಹೋಗಿದ್ದ ಪುರುಷತ್ವವನ್ನು ಮತ್ತೆ ಜಾಗೃತಗೊಳಿಸಿಕೊಂಡಿದ್ದನು. ಅವನ ಮನಸ್ಸಿನಮೇಲೆ ಮೀನಾಕ್ಷಿ ಒಂದು ಬಗೆಯ ಪರಿಣಾಮವನ್ನುಂಟು ಮಾಡಿದ್ದಳು. ಕೇವಲ ಒಂದು ಮಗುವಿಗಾಗಿ ಅವನನ್ನು ಉತ್ತೇಜಿಸಿದ್ದಳು. ಮೀನಾಕ್ಷಿಗೆ ಜಯವಾಗಿದ್ದಿತು. ರಾಮಚಂದ್ರಯ್ಯನ ಮನಸ್ಸಿನ ಅಳುಕು ನಾಶವಾಗಿದ್ದಿತು. ಅವನು ಆನಂದಸಾಮ್ರಾಜ್ಯದಲ್ಲಿ ವಿಹರಿಸಿದನು. ತಾನೂ ಕಡೆಗೊಮ್ಮೆ ತಂದೆಯಾದೆನೆಂದು ತೃಪ್ತಿಪಟ್ಟುಕೊಂಡನು. ಆ ತೃಪ್ತಿ, ಆ ಸಂತೋಷ ಅವನ ಬಾಳಿನಲ್ಲಿ ಸುಖದ ಮಿಂಚನ್ನು ಮಿಂಚಿಸಿತು. ರಾಮಚಂದ್ರಯ್ಯ ಮೀನಾಕ್ಷಿ ಕೇಳಿದುದಕ್ಕೆ ಇಲ್ಲವೆನ್ನುತ್ತಿರಲಿಲ್ಲ. ತಕ್ಷಣ ತಂದುಕೊಡುತ್ತಿದ್ದನು. ಮೀನಾಕ್ಷಿ ಆಗಾಗ ಹಾಸ್ಯಮಾಡಿ ನಗುತ್ತಿದ್ದಳು.

"ನೋಡಿದಿರಾ, ಕೂಸು ಹುಟ್ಟೋಕೆ ಮೊದಲು ಕುಲಾವಿ ಅಂದರಲ್ಲಾ!"

"ಕುಲಾವಿ ಅಲ್ಲಕಣೇ, ಸ್ವೆಟರ್ ಅನ್ನಬೇಕಾಗಿತ್ತು. ನಂದು ತಪ್ಪಾಯ್ತು"

"ಇನ್ನೊಂದು ಔನ್ಸ್ ಉಲ್ಲನ್ ತಂದುಕೊಟ್ಟುಬಿಡಿ. ಮಗೂಗೆ ಒಂದುಜೊತೆ ಕಾಲುಚೀಲ ಒಂದು ಕುಲಾವಿ ಹಾಕ್ಬಿಡ್ತೀನಿ ಈಗಲೇ"

"ಮಗು ಅಲ್ಲ ಮಗಾ ಅನ್ನೇ, ಮಗ."

"ಅಲ್ಲ ನನ್ನ ಮಗಳು.... .... ನನ್ನ ಕರ್ಪೂರದ ಬೊಂಬೆ ಇದೆಯಲ್ಲ. ಹಾಗೇ ಅಲಂಕಾರಮಾಡ್ಬೇಕೊಂದ್ರೆ."

"ನೋಡ್ತೀಯ ಪಟ, ಮಗನೇ ಆಗೋದು."

"ಇಲ್ಲ ಮಗಳು, ನನಗೆ ಗೊತ್ತು."

"ಮಗ ಆದ್ರೆ ಏನು ಕೊಡ್ತೀ?"

"ಮಗಳಾದರೆ ಏನು ಕೊಡ್ತೀರಿ."

"ನಿನಗೊಂದು ಜರತಾರಿ ಲಂಗ ಹಾಕಿದ ದೊಡ್ಡ ಕರ್ಪೂರದ ಬೊಂಬೆ"

ರಾಮಚಂದ್ರಯ್ಯ ನಕ್ಕು ಮೀನಾಕ್ಷಿಯ ಮುಖವನ್ನು ನೋಡಿ

ದನು. ಮೀನಾಕ್ಷಿಯ ಮುಖ ನಾಚಿಕೆಯಿಂದ ಕೆಂಪಾಗಿತ್ತು. ಮುಗಿ ನಗುತ್ತ ಕೇಳಿದಳು.

" ನನ್ನ ಕರ್ಪೂರದ ಬೊಂಬೇನ ಹಾಸ್ಯಮಾಡ್ತೀರಾ ? "

" ಹಾಸ್ಯ ಮಾಡಬೇ. ಜೀವ ತುಂಬಿದ ಕರ್ಪೂರದ ಬೊಂಬೇನೇ ಮನೇಗೆ ಬರುತ್ತೆ. ಇನ್ನು ಆ ನಿರ್ಜೀವ ಬೊಂಬೆ ಏಕೆ ಅಂತ ? "

" ಹಾಗಾದರೆ ಸರಿ.... .... ಉಲ್ಲನ್ ತಂದ್ಕೊಡ್ತೀರಿ ತಾನೆ "

" ನಾಳೆ ತಪ್ದೆ "

ಮೀನಾಕ್ಷಿಗೆ ಮೂರು ತಿಂಗಳು ಕಳೆಯುತ್ತ ಬಂದಿತು. ಕಾಲು ಚೀಲವೂ ಮುಗಿದಿತ್ತು. ಕುಲಾವಿ ಅರ್ಧ ಮುಗಿಯುತ್ತ ಬಂದಿತ್ತು. ಆದರೆ ಅವಳ ಒಂದು ವರ್ಷದ ಸುಖ ಜೀವನಕ್ಕೆ ಮೂರನೆಯ ದಿನವೇ ಸಾವುಬಂದಿತು. ಮತ್ತೆ ಮೀನಾಕ್ಷಿ ಅಂತಹ ಸುಖದ ದಿನಗಳನ್ನು ನೋಡಲಿಲ್ಲ. ಇದ್ದಕ್ಕಿದಂತೆ ಮೀನಾಕ್ಷಿಯ ಪ್ಯೆ ಇಳಿದು ಹೋಯಿತು. ಎಲ್ಲರಿಗೂ ಸಿಡಿಲು ಹೊಡೆದ ಹಾಗಾಯಿತು. ತಿಂಗಳಿಂದ ಎಲ್ಲರ ಹೃದಯದಲ್ಲಿ ನಾಟ್ಯವಾಡುತ್ತಿದ್ದ ಸಂತೋಷದ ಸಮಾಧಿಯಾಯಿತು. ಎಲ್ಲರಿಗಿಂತಲೂ ಅದು ರಾಮಚಂದ್ರಯ್ಯನ ಮನಸ್ಸಿನ ಮೇಲೆ ದೊಡ್ಡ ಆಘಾತ ಮಾಡಿತ್ತು. ಅವನ ಉತ್ಸಾಹವೆಲ್ಲ ಉಡುಗಿಹೋಯಿತು. ಅವನಲ್ಲಿ, ಅವನ ಪುರುಷತ್ವದಲ್ಲಿ ಅವನಿಗೆ ಹುಟ್ಟಿದ್ದ ಹೆಮ್ಮೆ, ಭರವಸೆಗಳು ಬಾಡಿದ್ದವು. ಅವನ ತೇಜೋಭಂಗವಾದಂತಾಯಿತು.

ಮೀನಾಕ್ಷಿ ಸತ್ತು ಬದುಕಿಕೊಂಡಳು. ಮತ್ತೆ ಅವರ ದಾಂಪತ್ಯ ದಲ್ಲಿ ಕಾರ್ಮೋಡ ಕವಿದುಕೊಂಡಿತು. ಮೀನಾಕ್ಷಿಯ ಕರುಳು ಆ ಕಾಣದ, ರೂಪುಗೊಳ್ಳದ ಮಗುವನ್ನು ನೆನೆದುಕೊಂಡು ಅತ್ತಿತು, ಹಂಬಲಿಸಿತು. ಮೀನಾಕ್ಷಿಯ ತಾಯ ಹೃದಯಕ್ಕೆ ಅಪಾರವಾದ ಯಾತನೆಯಾಯಿತು. ಅವಳ ಕರುಳಿನ ಒಂದು ಭಾಗವನ್ನು ಕತ್ತರಿಸಿ ಹಾಕಿದಂತಾಯಿತು. ಆದರೆ ಮೀನಾಕ್ಷಿಯಲ್ಲಿ ಭರವಸೆ ಅಳಿಯಲಿಲ್ಲ. ಆ ಭರವಸೆಯ ಬಲದಿಂದ ಮೀನಾಕ್ಷಿ ಚೇತರಿಸಿಕೊಂಡಳು.

ವಸಂತಮಾಸದ ವೃಕ್ಷದಂತೆ ಅರಳಿ ನಗುನಗುತ್ತಿದ್ದ ನಾಗವೇಣಮ್ಮ ನವರ ಮನಸ್ಸಿಗೆ ಹಿಮಗಾಲದ ಮಂಜು ಮುಸುಕಿತು. ಅದರಲ್ಲಿದ್ದ ಪ್ರೀತಿ

ವಿಶ್ವಾಸಗಳೆಂಬ ಹೂವುಚಿಗುರುಗಳು ಉದುರಿಬಿದ್ದವು. ಆಕೆ ಬರಿದಾದ ಕೊಂಬೆಯಾಗಿಬಿಟ್ಟರು. ಮೀನಾಕ್ಷಿ ಚೇತರಿಸಿಕೊಳ್ಳಲು ಒಂದು ತಿಂಗಳು ಹಿಡಿಯಿತು. ಮೊದಲಿನ ಉಪಚಾರ, ಆದರಗಳು ಮಾಯವಾಗಿದ್ದುವು ಕೆಲಸ ಮಾಡುವುದಿಲ್ಲವೆಂದು ಗೊಣಗಾಟ ಪ್ರಾರಂಭವಾಯಿತು. ಮೀನಾಕ್ಷಿಯ ಅದೃಷ್ಟಹೀನ ಮುಖವನ್ನು ಕಂಡರೆ ಸಿಡಿದುಬೀಳುತ್ತಿದ್ದರು. ಅವಳು ಕೂತರೆ ತಪ್ಪು, ನಿಂತರೆ ತಪ್ಪು. ಮೀನಾಕ್ಷಿಯ ಬಾಳಿಗೆ ಅಂಧಕಾರ ಕವಿಯತೊಡಗಿತು. ನಾಗವೇಣಮ್ಮ ಜಗಜ್ಜನಿತವಾದ ನಿಜವಾದ 'ಅತ್ತೆ' ಆಗಿಬಿಟ್ಟರು

ಈಗ ರಾಮಚಂದ್ರಯ್ಯನ ಡ್ಯೂಟಿ ಬದಲಾಯಿಸಿದ್ದಿತು. ರಾತ್ರಿ ಕೆಲಸ ಬಿದ್ದಿದ್ದಿತು. ಒಂದು ದಿನ ಮಧ್ಯಾಹ್ನ ರಾಮಚಂದ್ರಯ್ಯ ಹೂವು ಹಣ್ಣುಗಳನ್ನು ತೆಗೆದುಕೊಂಡು ಮನೆಗೆ ಬಂದನು. ತಾಯಿ, ಹಜಾರದಲ್ಲೇ ಅಕ್ಕಿ ಆರಿಸುತ್ತ ಕುಳಿತಿದ್ದರು. ಅವನು ಸೀದಾ ಮೀನಾಕ್ಷಿ ಮಲಗಿದ್ದ ರೂಮಿಗೆ ಹೋದನು. ಹೊರಗಡೆ ನಾಗವೇಣಮ್ಮನವರ ಕೂಗಾಟ ಪ್ರಾರಂಭವಾಯಿತು.

"ಎಲ್ಲಾ ನಾನೇ ಮಾಡ್ಕೋಬೇಕು. ಈ ಮನೇಲಿ ಅಕ್ಕಿ ಆರಿಸೋರೂ ದಿಕ್ಕಿಲ್ಲ. ಮುದಿವಯಂಡೆ, ಕಣ್ಣು ಇಂಗ್ಹೋಗಿದ್ರೂ ನಾನೇ ಕಲ್ಲು ಆರಿಸಬೇಕು. ಮನೇಲಿರೋರೆಲ್ಲ ತಿಂಡ್ಕೊಂಡು ಹಾಯಾಗಿ ಬಿದ್ದಿರ್ಲಿ. ಏನೋ ಅತಿಶಯವಾಗಿದೆಯಲ್ಲಾ. ವರ್ಷವೆಲ್ಲಾ ಕೂಡಿಸಿ ತಿನ್ನಿಸಿದ್ದಕ್ಕೆ ಚೆನ್ನಾಗಿ ಮಾಡಿದಳು. ಸಿಕ್ಕಿದ್ದು ತಿಂದು ಹೊಟ್ಟೇಲಿ ಮಗೂನ ಕರಗಿಸಿಕೊಂಡಳು. ಮಾರಿ. ತಿಂದದ್ದನ್ನ ಇನ್ನೂ ಅರಗಿಸ್ಕೋತಾ ಇದ್ದಾಳೆ, ದಿಮಾಕು ಮಾಡಿಕೊಂಡು. ಹಣ್ಣು ಬೇರೆ ದಂಡ. ದಿವಾನ್ತನ ಕೊಳ್ಳೇಹೋಗ್ತಿದೆ ಇವನ್ಗೆ" ಎಂದು ವಟಗುಟ್ಟಿದರು.

ಪಕ್ಕದಲ್ಲೇ ಇದ್ದ ರೂಮಿಗೆಲ್ಲಾ ಚೆನ್ನಾಗಿ ಕೇಳಿಸುತ್ತಿದ್ದಿತು. ರಾಮಚಂದ್ರಯ್ಯ ಕಿತ್ತಳೆಹಣ್ಣು ಸುಲಿದು ಮೀನಾಕ್ಷಿಯ ಕೈಯಲ್ಲಿಟ್ಟಿದ್ದನು. ಅವಳಿಗೆ ಕಣ್ಣಲ್ಲಿ ನೀರು ತುಂಬಿಕೊಂಡಿತು. ಅದನ್ನು ಕೆಳಗಡೆ ಹಾಗೆಯೇ ಇಟ್ಟುಬಿಟ್ಟಳು ತಕ್ಷಣ ಎದ್ದು ಕುಳಿತುಕೊಂಡಳು. ರಾಮಚಂದ್ರಯ್ಯ ಅವಳ ಕೈಹಿಡಿದುಕೊಂಡು, "ಬೇಡ ಮೀನಾಕ್ಷಿ,

ಇನ್ನೊಂದು ಹದಿನೈದು ದಿನ ಸುಧಾರಿಸಿಕೋ. ಅವರು ಏನಾದರೂ ಅಂದುಕೊಳ್ಳಲಿ. ಬಹಳ ತೆಗೆದುಹೋಗಿದ್ದೀಯ" ಎಂದು ದೈನ್ಯದಿಂದ ಕೇಳಿಕೊಂಡನು. ಮೀನಾಕ್ಷಿ,

" ನನಗೇನೂ ಆಗಿಲ್ಲ. ನೀವು ಸುಮ್ಮನಿರಿ. ಪಾಪ, ಅವರೂ ಮುದುಕಿ ಆಗ್ತಾ ಇದಾರೆ. ಅವರೊಬ್ಬರ ಕೈಲೇ ಹೇಗೆ ಈಪಾಟಿ ಕೆಲಸ ಮಾಡೋಕೆ ಆಗುತ್ತೆ ಹೇಳಿ ಅಲ್ಲಿ ಮಾವನವರನ್ನೂ ಸುಧಾರಿಸಬೇಕು. ಇಲ್ಲಿ ಮನೆ ಕೆಲಸವನ್ನೂ ಮಾಡಬೇಕು." ಎಂದು, ಹೊರಗೆ ಬಂದಳು. ಅವಳಿಗೆ ಸರಿಯಾಗಿ ನಡೆಯುವುದಕ್ಕೂ ತ್ರಾಣವಿರಲಿಲ್ಲ. ಬಹಳ ನಿಶ್ಶಕ್ತಳಾಗಿಬಿಟ್ಟಿದ್ದಳು. ತೂರಾಡಿಕೊಂಡು ಬಂದು ಅತ್ತೆಯವರ ಹತ್ತಿರ ಕುಳಿತುಕೊಂಡಳು.

" ಬಿಡಿ ಅತ್ತೆ. ನಾನು ಮಾಡ್ತೀನಿ. ನೀವು ಕರೆದಿದ್ರೆ ಬಂದು ಬಿಡ್ತಿದ್ದೆ "

" ಬೇಡವ್ಮಾ ಬೇಡ, ಸಧ್ಯ. ನಿನ್ನ ಯಾರು ಕರೆದರು. ಏನೋ ನನಗೆ ಕೈಯ್ಯಲ್ಲಿ ಆಗಲಿಲ್ಲ. ಅದಕ್ಕೆ ಒಂದಿಷ್ಟು ಗೊಣಕ್ಕೋಬಾರದೆ ? ಅದಕ್ಕೂ ಇಷ್ಟು ರಂಪ ಮಾಡ್ತಿದ್ದೀಯಲ್ಲ. ನೀ, ಏನೂ ಮಾಡ್ಬೇಕಾಗಿಲ್ಲ. ಹೋಗಿ ಮಲಕ್ಕೋ. ಸಧ್ಯ ಹಣ್ಣುಗಿಣ್ಣು ತಿಂದು ಸುಧಾರಿಸ್ಕೊ"

" ಬಿಡಿ ಅತ್ತೆ. ನನಗೇನೂ ಇಲ್ಲ ಈವಾಗ."

ಮೀನಾಕ್ಷಿ ಬಲವಂತ ಮಾಡಿ ಮೊರ ಕಿತ್ತುಕೊಂಡು ಅಕ್ಕಿಯನ್ನು ಕೇರಲು ಆರಂಭಿಸಿದಳು. ರಾಮಚಂದ್ರಯ್ಯ ರೂಮಿನಿಂದ ಹೊರಗೆ ಬಂದನು. ನಾಗವೇಣಮ್ಮನವರು ಮಗನಿಗೆ,

" ನೋಡಪ್ಪಾ, ನೋಡು. ನಿನ್ನ ಹೆಂಡತೀ ಆರ್ಭಟಾನ ಇವಳ್ನ ಕೆಲಸ ಮಾಡು ಅಂತ ಹೇಳಿದವಳು ಯಾರು. ತಾನೇ ಬಂದು ಮಾಡ್ತಿದಾಳೆ. ನಾಳೆ ಏನಾದ್ರೂ ಆದ್ರೆ ನನ್ನ ಮೇಲೆ ತಪ್ಪಿಲ್ಲ. ಒಂದು ವರ್ಷದಿಂದ ಇವಳೇ ಮಾಡಿದಳೇ. ನಾನೇ ಮೈ ಮುರಿದು ದುಡೀ ಲಿಲ್ಲವೇ." ಎಂದು ಹೇಳಿಕೊಂಡರು.

" ನಾನು ಎಲ್ಲಾ ಕೇಳಿದೆ ಅಮ್ಮಾ. ಮಾಡಲಿ ಸುಮ್ನಿರು " ಎಂದು ಹೇಳಿ ರಾಮಚಂದ್ರಯ್ಯ ಬಚ್ಚಲು ಮನೆಗೆ ಹೋದನು.

ಆ ಹೊತ್ತು ಮೀನಾಕ್ಷಿಯೇ ಗಂಡನಿಗೆ ಬಡಿಸಿದಳು. ಎಂಜಲು ಗೋಮೆ, ಕಸಮುಸುರೆ ಮಾಡುವಾಗ ರಾದ್ಧಾಂತ ನಡೆದು ಹೋಯಿತು ನಾಗವೇಣಮ್ಮ ತಲೆ ಚಚ್ಚಿಕೊಂಡು "ನೋಡಪ್ಪೇನೋ ರಾಮು ಇವಳ ಆರ್ಭಟಾನ. ನಾನು ಇಷ್ಟು ಮಾತಾಡಿದ್ರೆ ಸಹಿಸ್ದೆ ಅವಾಂತರ ಮಾಡ್ತಿದಾಳೆ. ಹೋಗೇ ಆಚೆಗೆ" ಎಂದು ಆರ್ಭಟಿಸಿದರು.

ಮೀನಾಕ್ಷಿ ಅತ್ತೆಯ ರುದ್ರಾವತಾರಕ್ಕೆ ಹೆದರಿ ಹೊರಗೆ ಬಂದಳು. ಅವಳಿಗೆ ಅತ್ತೆಯ ಯಾವ ಮಾತುಗಳೂ ಅರ್ಥವಾಗುತ್ತಿರಲಿಲ್ಲ. ಅಷ್ಟು ಪ್ರೀತಿ ತೋರಿಸುತ್ತಿದ್ದ ಅತ್ತೆ ಹೀಗೇಕೆ ಆಗಿ ಹೋದರು? ಕೇವಲ ನನಗೆ ವೈ ಇಳಿದು ಹೋಯಿತೆಂದೇ. ಅದು ನನ್ನ ತಪ್ಪೇ? ನಾನೇನು ಬಂಜೆ ಆಗಿ ಹೋಗಿದ್ದೇನೆಯೇ? ನನಗಿನ್ನು ಮಕ್ಕಳೇ ಆಗುವುದಿಲ್ಲವೇ? ಆಗದೇ ಹೋದರೆ........ಎಂದು ಮೀನಾಕ್ಷಿ ಯೋಚನಾ ಸಾಮ್ರಾಜ್ಯ ದಲ್ಲಿ ಮುಳುಗುತ್ತಿದ್ದಳು.

ನಾಗವೇಣಮ್ಮನವರ ಕಿರುಕುಳ ಅವ್ಯಾಹತವಾಗಿ ನಡೆದಿತ್ತು. ಮೀನಾಕ್ಷಿಗೆ ಸುಬ್ಬಮ್ಮನವರ ನೆನಪಾಗುತ್ತಿದ್ದಿತು ಎಷ್ಟೇ ಆಗಲಿ ಅವರೇ ಒಂದು ತರಹ. ನನ್ನನ್ನು ಒಂಭತ್ತು ವರ್ಷಗಳವರೆವಿಗೆ ಎಷ್ಟು ಪ್ರೀತಿಯಿಂದ ಬೆಳೆಸಿದರು. ಎಂದು ಕಣ್ಣೀರಿಡುತ್ತಿದ್ದಳು. ಆದರೆ ಬಾ ಎನ್ನದೆ ಅವರ ಮನೆಗೆ ಹೇಗೆ ಹೋಗುವುದು ಮೀನಾಕ್ಷಿಗೆ ಎಲ್ಲ ರೀತಿಯಲ್ಲೂ ಸಂಕಟ ಸುತ್ತಿಕೊಂಡಿದ್ದಿತು. ಕಾಮಾಕ್ಷಿಗೆ ತನಗಾದ ಶಿಕ್ಷೆಯನ್ನು ಕರುಳು ಮಿಡಿಯುವಂತೆ ಬಣ್ಣಿಸಿ ಬರೆದು ಹಾಕಿದಳು. ಆದರೆ ಕಾಮಾಕ್ಷಿಯಿಂದಾಗಲೀ, ಸುಬ್ಬಮ್ಮನವರಿಂದಾಗಲೀ ಮತ್ತೆ ಉತ್ತರ ಬರಲಿಲ್ಲ. ಮೀನಾಕ್ಷಿ ಅತ್ತೆಯ ಮನೆಯಲ್ಲಿ ವೈ ಮುರಿದು ದುಡಿಯತೊಡಗಿದಳು. ಜೊತೆಗೆ ತಲೆ ತಿನ್ನುವ ಯೋಚನೆ· ತನಗೆ ಮಕ್ಕಳೇ ಆಗದೆ ಹೋದರೆ ಏನು ಗತಿ? ಇನ್ನು ತಾನು ಆ ಮನೆಯಲ್ಲಿ ಅತ್ತೆಯ ಎದುರಿಗೆ ಬದುಕಿರಬಹುದೇ. 'ದೇವರೇ ನನಗೊಂದು ಮಗು ವನ್ನು ಕೊಟ್ಟು ಈ ಸಂಕಟದಿಂದ ಪಾರುಮಾಡು' ಎಂದು ಮೀನಾಕ್ಷಿ ದೇವರನ್ನು ಪ್ರಾರ್ಥಿಸಿಕೊಳ್ಳುತ್ತಿದ್ದಳು. 'ಮೊಮ್ಮಕ್ಕಳನ್ನು ಬಯಸು ವುದು ಅತ್ತೆಯವರತಪ್ಪೇ? ಅಲ್ಲ. ಮಕ್ಕಳಿಲ್ಲದ ಮನೆಗೆ ಮೊಮ್ಮಕ್ಕಳನ್ನು

ಬಯಸುವುದು ಅವರ ತಪ್ಪಲ್ಲ' ಎನ್ನುತಿತ್ತು ಮನಸ್ಸು. ಮತ್ತೆ ಅದೇ ಮನಸ್ಸು ಕೇಳುತ್ತಿತ್ತು 'ಅದಕ್ಕೆ ನಾನು ಹೊಣೆಯೇ? ಅವರ ಮಗನೇ ಕಾರಣವಲ್ಲವೆ? ಮಗನ ಮೇಲೇಕೆ ಅವರಿಗೆ ಕೋಪವಿಲ್ಲ?' ಮೀನಾಕ್ಷಿಗೆ ಅವರ ಮಗನ ತಪ್ಪೇನೆಂದು ತಿಳಿದಿದ್ದಿತು. ಅವಳ ದೇಹ ತೃಪ್ತಿಗಾಗಿ ಹಾತೊರೆಯುತ್ತಿದ್ದಿತು. ಆದರೆ ಅವರ ಮಗ ಅದನ್ನು ಅವಳಿಗ ಕೊಡ ಲಾರದವನಾಗಿದ್ದನು. ಅದು ಅವನ ಶಕ್ತಿಯನ್ನು ಮೀರಿದ್ದಿತು. ಅದನ್ನು ಅವರಿಗೆ ಹೇಗೆ ಹೇಳುವುದು. ನಾಚಿಕೆಬಿಟ್ಟು ಅವನ್ನು ಅವರೊಡನೆ ಹೇಳಬಹುದೇ? ಅವನಲ್ಲಿ ಕಾಣಬರುವ ಕುಂದನ್ನು ನಾನು ಅವರಿಗೆ ಹೇಗೆ ತಿಳಿಸಲಿ? ಅಸಾಧ್ಯ. ನಾನು ಹೀಗೆಯೇ ಅನುಭವಿಸಬೇಕು. ಅದು ನನ್ನ ಕರ್ಮ, ಎಂದು ಮೀನಾಕ್ಷಿ ಸಂಕಟ ಪಟ್ಟುಕೊಳ್ಳುತ್ತಿದ್ದಳು.

ಮೀನಳ ಕಷ್ಟ ಅಲ್ಲಿಗೇ ನಿಲ್ಲಲಿಲ್ಲ. ಅವಳ ಹೃದಯವನ್ನು ಝುರ್ಝುರಿತಮಾಡಲು ಮತ್ತೊಂದು ಸಿಡಿಲಿನಂತಹ ಕಾಗದ ಕಾದಿತ್ತು. ಮೀನಾಕ್ಷಿಯು ಮೈ ಇಳಿದು ಎರಡು ತಿಂಗಳಾಗಿತ್ತು. ಅತ್ತೆಗೆ ಸಹಾಯ ಮಾಡುವುದಕ್ಕಾಗಿ ಮೀನಾಕ್ಷಿ ಹಾಗೆಯೇ ಸಾವರಿಸಿಕೊಂಡು ತನ್ನ ಶಕ್ತಿ ಮೀರಿ ದುಡಿಯುತ್ತಿದ್ದಳು. ನಾಗವೇಣಮ್ಮನವರ ಕಿರುಕುಳ ಹೆಚ್ಚಾಗ ತೊಡಗಿತ್ತು. ಮೀನಾಕ್ಷಿ ಅವರ ಮಾತುಗಳಿಗೆ ಕಿವುಡಿಯಂತಾದಳು. ಬೈಗಳುತಿಂದರೂ ಅತ್ತೆಗ ಮನೆಕೆಲಸದಲ್ಲಿ ನೆರವಾದರೆ ಆಕೆಯ ಮನಸ್ಸಿಗೆ ಸಮಾಧಾನವಾಗುತ್ತದೆಂದು ಅರಿತಿದ್ದಳು. ನಾಗವೇಣಮ್ಮನವರಿಗೆ ಮೀನಾಕ್ಷಿ ಕೆಲಸಮಾಡಿಕೊಡಬೇಕೆಂದು ಆಶೆಯಿದ್ದಿತು. ಆದರೂ ಅಡಿಗಡಿಗ "ಸಾಕಮ್ಮಾ. ನಿನ್ನ ಕೆಲಸ. ಏನಾದ್ರೂ ಆಗ್ಬಿಟ್ರೆ ಕಷ್ಟ. ಬಣ್ಣದ ಬೊಂಬೆ ಕೂಡಿಸೋ ಹಾಗೆ ನಿನ್ನ ಕೂಡ್ಸಿ ಸಾಕ್ಲಿ. ಹಣುಗಿಣ್ಣು ತಿಂದು ಸುಧಾರಿಷ್ಕೋ. ಮತ್ತೆ ಹೆರಬೇಡ್ವೆ ಸುಪುತ್ರನನ್ನ ಈಗ ಹೆತ್ತಾಗೆ!" ಎಂದು ಹಂಗಿಸಿ ಮೀನಾಕ್ಷಿಯ ಹೊಟ್ಟೆ ಉರಿಸುತ್ತಿದ್ದರು. ಮೀನಾಕ್ಷಿ ಎಲ್ಲ ಸಹಿಸಿಕೊಂಡು ಮೂಗೆತ್ತಿನಂತೆ ತನ್ನ ಕೆಲಸವನ್ನು ತಾನು ಮಾಡಿ ಕೊಂಡು ಹೋಗುತ್ತಿದ್ದಳು.

ಆ ದಿನ ಮೀನಾಕ್ಷಿ ನಡುಮನೆ, ಹಜಾರ ಎರಡನ್ನೂ ಗೂಡಿಸಿ ಸಾರಿಸಿದಳು. ಮಾರನೆಯ ದಿನ ಅವಳ ದೊಡ್ಡತ್ತೆಯವರ ವರ್ಷಾಬ್ಧಿಕ

ವಾಗಿದ್ದಿತು. ಮೀನಳಿಗೆ ಸಾರಿಸಿ ಸುಸ್ತಾಯಿತು. ಹಾಗೆಯೇ ಹಜಾರದ ಕಂಬಕ್ಕೊರಗಿ ನಿಂತುಕೊಂಡಳು. ಏಕೋ ಎರಡು ದಿವಸ ಗಳಿಂದ ಹೊಟ್ಟೆಯಲ್ಲಿ ಒಂದು ಬಗೆಯ ಸಂಕಟವಾಗುತ್ತಿದ್ದಿತು. ಕರುಳು ಮಿಡಿಯುತ್ತಿದ್ದಿತು. ತನ್ನ ಕಷ್ಟದ ಸಮಯದಲ್ಲಿ ತನ್ನವರಾರೂ ಇಲ್ಲವೇಹೋದರಲ್ಲಾ ಎನ್ನಿಸಿದ್ದಿತು. ಶೀನುವನ್ನು ನೋಡಬೇಕೆಂದು ಹೃದಯ ಮಿಡಿಯುತ್ತಿದ್ದಿತು. ಎಂದೂ ಇಲ್ಲದಷ್ಟು ಗೀಳು ಹಿಡಿದಿತ್ತು. ಆಗಲೂ ಅವಳ ಹೃದಯ ಶೀನುವನ್ನು ನೆನೆಸಿಕೊಂಡಿತು. ಅವನ ನೆನಪಿನಿಂದ ಹೃದಯ ಹಿಂಡಿದಂತಾಯಿತು. 'ಅವನಿಗೆ ಏನಾಗಿದೆಯೋ ಏನೋ? ದೇವರೇ ಅವನಿಗೆ ಏನೂ ಆಗದಿರಲಿ' ಎಂದು ಪ್ರಾರ್ಥಿಸಿ ಕೊಂಡಳು. ಅಷ್ಟರಲ್ಲಿ ಅಂಚೆಯವನು 'ಪೋಸ್ಟ್' ಎಂದು ಕೂಗಿ ಕಾಗದ ಒಂದನ್ನು ಒಳಗೆ ತೂರಿ ಹೊರಟುಹೋದನು. ಕಿಟಕಿಯಿಂದ ಒಳಗೆ ಬಿದ್ದ ಕಾಗದಕ್ಕೆ ಸಗಣಿಯ ನೀರು ಮೆತ್ತಿಕೊಂಡಿತು. ಮೀನಾ ಹದ್ದಿನಂತೆ ಆ ಕಾಗದಕ್ಕೆರಗಿದಳು. ಅವಳ ಹೃದಯ ನಡುಗುತ್ತಿದ್ದಿತು. ಏನೇನೋ ಕೆಟ್ಟ ಯೋಚನೆಗಳು ಅವಳ ಮನಸ್ಸಿನಲ್ಲಿ ಹಾದು ಹೋದುವು. ಕಾಗದ ಅವಳಿಗಾಗಿತ್ತು. ಎತ್ತಿಕೊಳ್ಳುವಾಗಲೇ,ಹಿಂದಲ ಕಾಮಾಕ್ಷಿಯ ಕಾಗದವನ್ನು ನೆನೆಸಿಕೊಂಡು ಅವಳ ಮೈ ನಡುಗಿತು. ಶ್ರೀರಂಗಪಟ್ಟಣದಿಂದ ಅವಳಿಗೆ ಕಾಗದ ಬಂದಿತ್ತು. ಎಂತಹ ಆಶ್ಚರ್ಯ! ಮೀನಾ ಅದನ್ನು ಒಡೆದು ಸರಸರನೆ ಬಿಚ್ಚಿ ಕಾಗದ ಓದಿದಳು.

ಪಿಶಾಚಿ,

"ಈ ಕಾಗದ ಓದಿದ ಮೇಲೂ ನೀನು ಬದುಕಿರುತ್ತೀಯ? ನಿನ್ನಿಂದ ನಮಗೆ ಇನ್ನೂ ಎಂತೆಂತಹ ಕಷ್ಟ ಬರಬೇಕೋ. ಸಂಕಟವಾಗುತ್ತಲ್ಲೇ ಬರೆಯುವುದಕ್ಕೆ. ನೀನು ಅತ್ತೆಯ ಮನೆಗೆ ಹೋದ ಘಳಿಗೆಯ ಫಲ. ನಮ್ಮ ಮನೆ ತೊಡೆದುಹೋಯಿತಲ್ಲೇ, ರಾಕ್ಷಸಿ. ನನಗಿದ್ದ ಒಬ್ಬನೇ ತಮ್ಮ ಶೀನಿ ಕಾವೇರಿಯಲ್ಲಿ ಮುಳುಗಿ ಸತ್ತನಲ್ಲೇ. ನಿನಗೆ ಯಾವ ನರಕ ಕಾದಿದೆಯೋ, ಅವನಿಗೆ ಏನು ಮಾಡಿ ಹೋಗಿದ್ದೆಯೇ? ಬೆನ್ನಲ್ಲಿ ಹಾಕಿಕೊಂಡ ಅಕ್ಕನನ್ನು

ಕಂಡರೂ ಆಗುತ್ತಿರಲಿಲ್ಲ. ಅವನಿಗೆ ಮಂಕುಬೂದಿ ಎರಚಿ ಹೋಗಿದ್ದೆಯೇನೇ? ಯಾವಾಗಲೂ 'ಮೀನಾಕ್ಷಿ, ಮೀನಾಕ್ಷಿ' ಎಂದು ಬಡಿದುಕೊಂಡು ಸತ್ತನಲ್ಲೇ. ಸತ್ತ ಹೆಣದ ಜೇಬಿನಲ್ಲಿ ಏನಿತ್ತು ಗೊತ್ತೇ? ನಿನ್ನ ಫೋಟೋ! ಅವರು ನಿನ್ನ ಮದುವೆಯಲ್ಲಿ ಯಾವಾಗಲೋ ನಿನ್ನ ಸುಟ್ಟಮುಖವನ್ನು, ತೆಗೆದಿದ್ದರಂತಲ್ಲ. ಅದನ್ನು ಅವರು ಅವನಿಗೆ ಕೊಟ್ಟಿದ್ದರಂತೆ. ನೀನು ಸುಡುಗಾಡು, ಆ ಮಾಟಮಾಡಿದ ಐದು ರೂಪಾಯಿ ಕೊಟ್ಟು ಹೋಗಿದ್ದೆಯಲ್ಲಾ ಅದರಲ್ಲೇ ನಿಕ್ಕರು ಬನೀನನ್ನು ಹೊಲಿಸಿಕೊಂಡಿದ್ದನು. ಅದನ್ನೇ ಹಾಕಿಕೊಂಡು ಈಜುವುದಕ್ಕೆ ಹೋಗಿದ್ದ. ಅದೇ ಅವನಿಗೆ ಮೃತ್ಯುವಾಯಿತಲ್ಲೇ? ನಿನ್ನ ಮುಖವನ್ನು ನಮಗೆ ತೋರಿಸಿದರೆ ದೇವರಾಣೆ. ನಿನ್ನ ಗಂಡನ ಮೇಲಿನ ಆಣೆ. ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನೂ ತಿಂದುಕೊಂಡೆ. ನನ್ನ ಮಗುವನ್ನೂ ಸಾಯಿಸಿದೆ. ನೀನು ಹೀಗೆ ಎಲ್ಲರ ಪಾಲಿಗೂ ಪಿಶಾಚಿಯಾಗಿ ಬದುಕಿರುವುದಕ್ಕಿಂತ ಸಾಯುವುದೇ ಮೇಲು. ಇದನ್ನು ನಿಮ್ಮ ಮನೆಯಲ್ಲಿ ಎಲ್ಲರಿಗೂ ತೋರಿಸು. ನಿನ್ನ ಸೌಭಾಗ್ಯವನ್ನು ನೋಡಿ ಸಂತೋಷಪಡಲಿ. ಇನ್ನು ನಮ್ಮಮ್ಮನ ಸಂಕಟ ನೋಡಲಾರೆ. ಅವಳೂ ಸತ್ತುಹೋದಮೇಲೆ ಕಾಗದ ಬರೆದುಬಿಡುತ್ತೇನೆ. ಒಂದೇ ಸಾರಿ ಎಲ್ಲರ ಸೂತಕಸ್ನಾನ ಮಾಡಿ, ಹಾಲುಹಣ್ಣು ತಿಂದುಕೊಂಡು ಹಾಯಾಗಿರು. ಶೀನಿ ಸತ್ತನೆಂದು ಸ್ನಾನ ಮಾಡಬೇಡ. ಅವನು ನಿನಗೆ ಏನೂ ಆಗಬೇಕಾಗಿಲ್ಲ. ಅದರ ಬದಲು ನನ್ನಿಂದ ಹೀಗಾಯಿತಲ್ಲಾ ಎಂದು ನೇಣು ಹಾಕಿಕೋ. ಅದೇ ನಿನಗೆ ಶಿಕ್ಷೆ."

ಕಾಮಾಕ್ಷಿ.

ಮೀನಾಕ್ಷಿ ಕಾಗದ ಓದಿ, "ಅಯ್ಯೋ, ಶೀನಿ....ಹೋಗಿಬಿಟ್ಟೆಯಾಪ್ಪಾ" ಎಂದು ದೊಡ್ಡ ಧ್ವನಿಯಲ್ಲಿ ಅತ್ತು, ಮೈ ನಡುಕ ಬಂದು, ಜ್ಞಾನತಪ್ಪಿ ಕೆಳಗೆ ಬಿದ್ದುಬಿಟ್ಟಳು. ಅಡುಗೆಮನೆಯಲ್ಲಿದ್ದ ನಾಗವೇಣಮ್ಮ

ನವರು ಗಾಬರಿಯಿಂದ ಓಡಿಬಂದು ಅವಳ ತಲೆಗೆ ನೀರು ತಟ್ಟಿದರು. ಮೀನಾ ಚೇತರಿಸಿಕೊಂಡು ಮೆಲ್ಲನೆದ್ದು ಕುಳಿತಳು. ನಾಗವೇಣಮ್ಮ ಗಾಬರಿಯಿಂದ ಕೇಳಿದರು,

"ಏನೇ, ಏನಾಯಿತೇ. ಆರ್ಭಟ ಮಾಡಿಬಿಟ್ಟೆಯಲ್ಲಾ. ಯಾರು ಸತ್ಹೋದ್ರೆ ? ಏನೋ ಎಂತೋ ಅಂತ ಗಾಬರಿಯಾಗಿ ಹೋಯಿತು."

"ಅತ್ತೆ, ನನ್ನ ತಮ್ಮ ಶೀನಿ ಸತ್ತು ಹೋದನಂತೆ, ಅತ್ತೆ. ಅಯ್ಯೋ............ನನ್ನ ಕಂಡರೆ ಅವನಿಗೆಷ್ಟು ಪ್ರೀತಿ ಅತ್ತೆ. ನೀರಿನಲ್ಲಿ ಮುಳುಗಿ ಸತ್ತನಂತೆ. ಕುಲಕ್ಕೆ ಇದ್ದವನೊಬ್ಬ ಮಗ ಅತ್ತೆ. ಅವನೂ ಹೋಗಿಬಿಟ್ಟನಂತೆ."

ಮೀನ ಬಿಕ್ಕಿಬಿಕ್ಕಿ ಅತ್ತಳು. ನಾಗವೇಣಮ್ಮನವರ ದೃಷ್ಟಿಗೆ ಆ ಕ್ಷಣ ಕಂಬದ ಪಕ್ಕದಲ್ಲಿ ಬಿದ್ದಿದ್ದ ಕಾಗದ ಕಂಡಿತು ಅದನ್ನು ಎತ್ತಿಕೊಂಡು ಅಡುಗೆ ಮನೆಗೆ ಹೋಗುತ್ತ ಪಟಪಟನೆ ಓದಿಬಿಟ್ಟರು.

"ಹಾಳು ರಂಡೆ. ಆರ್ಭಟ ಮಾಡಿಬಿಟ್ಟಳು. ಮೊದಲೇ ಹೇಳಬಾರದೇ. ಸೂತಕಸ್ನಾನ ಮಾಡದೆ ನನ್ನಿಂದ ಮುಟ್ಟಿಸಿಕೊಂಡು ಬಿಟ್ಟಳಲ್ಲಾ. ಮುದಿಮುಂಡೆ, ಈ ಛಳೀಲಿ ಮತ್ತೆ ತಣ್ಣೀರು ಸುರ್ಕೋಬೇಕು. ಅನಿಷ್ಟ, ಶುದ್ಧ ಅನಿಷ್ಟ. ಯಾರೋ ಸತ್ತರೆ ನನಗೆ ಶಿಕ್ಷೆ. ಸಾಯಲಿ. ಇವಳನ್ನು ಸೇರಿಸಿಕೊಂಡ ಮನೆ, ಸಾಕಿದವರ ಮನೆ ಎಲ್ಲಾ ತೊಡೆದು ಹೋಗುತ್ತೆ."

ಮೀನಾಕ್ಷಿ ಮೆಲ್ಲನೆ ಎದ್ದು, ತೂರಾಡುತ್ತ ತನ್ನ ಕೊಠಡಿಗೆ ಹೋಗಿ ಬಿದ್ದುಕೊಂಡಳು. ನಾಗವೇಣಮ್ಮನವರು ಬಂದು ಆರ್ಭಟಿಸಿದಾಗ ಎದ್ದುಹೋಗಿ ತಣ್ಣೀರು ಸ್ನಾನ ಮಾಡಿಬಂದಳು.

ಸಾಯಂಕಾಲ ರಾಮಚಂದ್ರಯ್ಯ ಬಂದೊಡನೆ ಸುದ್ದಿ ತಿಳಿಯಿತು. ಮೀನಳ ಕಣ್ಣು ಅತ್ತು ಅತ್ತು ಕೆಂಡವಾಗಿತ್ತು. ನಾಗವೇಣಮ್ಮನವರು ಕಾಗದ ತಂದುಕೊಟ್ಟರು. ರಾಮಚಂದ್ರಯ್ಯನಿಗೆ ಅದನ್ನು ಓದಿ ಮೈ ಕೆಂಡವಾಯಿತು. ರೋಷದಿಂದ ಸಿಡಗುಟ್ಟಿದನು.

"ಇವಳೇನು ಪಿಶಾಚಿಯೋ, ಹೆಣ್ಣೋ ಮೀನಾಕ್ಷಿ? ನಿನ್ನಿಂದ ಅವನು ಸತ್ತು ಹೋದನಂತೋ. ನೀನಲ್ಲ ರಾಕ್ಷಸಿ, ಮೀನಾ. ಇವಳು

ರಾಕ್ಷಸಿ. ಇವರಮ್ಮ, ಇವರಪ್ಪ ಎಲ್ಲರೂ ರಾಕ್ಷಸರು. ಸಧ್ಯ ನಿನ್ನನ್ನು ಅವರ ಮನೆಯಿಂದ ಬಿಡಿಸಿಕೊಂಡು ಬಂದೆನಲ್ಲಾ. ಎಲ್ಲಾ ತೊಡೆದು ಹೋಯಿತು ಅಂದುಕೋ ಮೀನ. ಇದೇನು ನಿನಗೆ ಹೊಸದೇ? ಸಹನೆ ತಂದುಕೋ ಮೀನ. ಪಾಪ! ಒಳ್ಳೆಯ ಹುಡುಗ. ನಿನ್ನ ಮೇಲೆ ಎಷ್ಟು ಪ್ರೀತಿ ಇಟ್ಟಿದ್ದನು. ಹೋಗಲಿ ತೌರಿನ ಕಡೆ ಇದ್ದ ಒಂದು ಸಂಬಂಧವೂ ಮುರಿದುಹೋಯಿತೆಂದುಕೋ. ಅಳಬೇಡ ಮೀನಾ. ನೋಡು ನಿನ್ನ ಪ್ಯೈ ಹೇಗೆ ನಡಗುತ್ತಿದೆ. ನಿನಗೆ ಬಹಳ ನಿಶ್ಶಕ್ತಿ ನಾಳೆ ನಿನಗೇನಾದರೂ ಆದರೆ ನನ್ನ ಗತಿಯೇನು?"

ರಾಮಚಂದ್ರಯ್ಯ ತಾಯಿಯಂತೆ ಮೀನಾಕ್ಷಿಯನ್ನು ಸಮಾಧಾನ ಪಡಿಸಿದನು. ರಾಮಚಂದ್ರಯ್ಯನ ದೃಷ್ಟಿ ತಕ್ಷಣ ಟೇಬಲ್ಲಿನ ಮೇಲಿದ್ದ ಕಾಮಾಕ್ಷಿ, ಚಂದ್ರರ ಭಾವಚಿತ್ರದ ಕಡೆಗೆ ಹರಿಯಿತು. ಅವನ ಪ್ಯೈ ಕುದಿಯಿತು ಎದ್ದುಹೋಗಿ "ಈ ರಾಕ್ಷಸಿಯ ಚಿತ್ರ ಇಲ್ಲೇಕೆ ಮೀನ? ಇವಳಿಗೆ ನಿನ್ನ ಮನೆಯಲ್ಲಿರಲು ಯೋಗ್ಯತೆ ಇಲ್ಲ. ಅಕ್ಕನಂತೆ ಅಕ್ಕ" ಎಂದು ಸರಸರನೆ ಕಟ್ಟಿನ ಹಿಂದೆ ಇದ್ದ ಬಿರಡೆಗಳನ್ನು ಸರಿಸಿ ಒಂದೇ ಕ್ಷಣದಲ್ಲಿ ಚಂದ್ರುಕಾಮಾಕ್ಷಿಯರ ಭಾವಚಿತ್ರವನ್ನು ಹರಿದು ಚೂರುಚೂರು ಮಾಡಿದನು. ಮೀನಾಕ್ಷಿ ಝುಗ್ಗನೆದ್ದುಹೋಗಿ "ಬೇಡಿ, ಬೇಡೀಂದ್ರೆ ...ಆ ಫೋಟೋ ಏನು ಮಾಡ್ತು? ಅವಳ ಬುದ್ಧಿಯೇ ಹಾಗೆ" ಎಂದು ರಾಮಚಂದ್ರಯ್ಯನನ್ನು ತಡೆಯುವಷ್ಟರಲ್ಲೇ ಚಂದ್ರು, ಕಾಮಾಕ್ಷಿಯರ ಭಾವಚಿತ್ರ ಚೂರುಚೂರಾಗಿದ್ದಿತು. ಮೀನಾಕ್ಷಿಯ ಹೃದಯಕ್ಕೆ ಬಾಣನೆಟ್ಟಂತಾಯಿತು. ತನ್ನ ಹೃದಯದ ರಾಜ ಚಂದ್ರುವಿನ ಏಕಮಾತ್ರ ಸುಂದರ ಚಿತ್ರ ಅವಳ ಪಾಲಿಗಿಂದು ನಾಶ ವಾಯಿತು. ಮೀನಾಕ್ಷಿ, ಯಾರಿಗೂ ಸಂಶಯ ಬರದ ರೀತಿಯಲ್ಲಿ "ಅಕ್ಕಭಾವ" ಎಂದು ಪರಿಗಣಿಸಲ್ಪಟ್ಟ ಕಾಮಾಕ್ಷಿ, ಚಂದ್ರರ ಭಾವ ಚಿತ್ರದಲ್ಲಿ, ಸೂಟು ಹಾಕಿಕೊಂಡು ರಾಜಕುಮಾರನಂತೆ ಕಾಣುತ್ತಿದ್ದ ಚಂದ್ರುವಿನ ಚಿತ್ರವನ್ನು ನೋಡಿ ನೋಡಿ ಆತ್ಮಾನಂದವನ್ನು ಅನುಭವಿ ಸುತ್ತಿದ್ದಳು. ಈಗ ಆ ಅವಕಾಶವೂ ತಪ್ಪಿ ಹೋಯಿತು. ಮೀನಾಕ್ಷಿಯ ಕಣ್ಣಲ್ಲಿ ಕಣ್ಣೀರು ತುಂಬಿಕೊಂಡಿತು. ರೋಷದಿಂದ ರಾಮಚಂದ್ರ

ಯ್ಯನನ್ನು ದಿಟ್ಟಿಸಿ ನೋಡಿದಳು. ಆದರೆ ಅವನು ತನ್ನ ಪತಿ ! ಅದರ ನೆನಪಾದೊಡನೆ ಮೀನಾಕ್ಷಿಯ ಕೋಪ ಕರುಣೆಗೆ ತಿರುಗಿತು. ಆ ಸುಂದರವಾದ ಮುಖ ಬಿಳುಚಿಕೊಂಡಂತಾಯಿತು. ಮೀನಾಕ್ಷಿ ದೈನ್ಯದಿಂದ ತನ್ನ ದುಃಖವನ್ನೆಲ್ಲ ಹೊರಗೆ ಹಾಕಿ ಕೇಳಿದಳು “ ಆ ಚಿತ್ರ ಏನು ಮಾಡಿತು ನಿಮಗೆ. ಮದುವೆಯ ಚಿತ್ರ ಹಾಗೆ ಹರಿಯ ಬಹುದೇ?” ಮೀನಾಕ್ಷಿಯ ದುಃಖಭರಿತ ಮುಖವನ್ನು ರಾಮಚಂದ್ರಯ್ಯ ನೋಡಲಾರದೇ ಹೋದನು. ಅವಳ ಹೃದಯದಲ್ಲಾಗಿದ್ದ ನೋವಿನ ದಾರುಣ ಯಾತನೆ ಮೀನಾಕ್ಷಿಯ ಮುಖದ ಮೇಲೆ ಮೂಡಿದ್ದಿತು. ಆ ನೋವು, ಆ ಸಂಕಟ ಕೇವಲ ಕೆಲವು ಮಾತುಗಳಲ್ಲಿ ಹೊರಬಿದ್ದಿದ್ದಿತು. ರಾಮಚಂದ್ರಯ್ಯ ಅಷ್ಟು ದೈನ್ಯದಿಂದ. “ ಇಲ್ಲ, ಮೀನಾಕ್ಷಿ. ನನಗೆ ಗೊತ್ತಾಗಲಿಲ್ಲ. ತಪ್ಪಾಯ್ತು.” ಎಂದು ಹೇಳಿ ಹೊರಗೆ ಹೊರಟು ಹೋದನು. ಅವನಿಗೆ ಬಹಳ ದುಃಖವಾಗಿದ್ದಿತು.

ರಾಮಚಂದ್ರಯ್ಯ ಹೊರಟುಹೋದೊಡನೆ ಮೀನಾಕ್ಷಿ ಕೆಳಗೆ ಬಿದ್ದಿದ್ದ ಫೋಟೋ ಚೂರುಗಳನ್ನು ಆರಿಸಿ ಕುತೂಹಲದಿಂದ, ಆಸೆ ಯಿಂದ ತಿರುಗಿಸಿ, ತಿರುಗಿಸಿ ನೋಡಿದಳು. ಚಂದ್ರುವಿನ ಮುಖ ಮಟ್ಟಿಗೆ ಗಲ್ಲದವರೆವಿಗೆ ಹರಿದುಹೋಗಿ ಒಂದು ಚೂರಾಗಿ ಅವಳ ಕೈಗೆ ಸಿಕ್ಕಿತು. ಮೀನಳ ನಂದಿಹೋದ ಆಶೆಯ ಬತ್ತಿ ಮತ್ತೆ ಹತ್ತಿಕೊಂಡಿತು. ಹೃದಯ ಆನಂದದಿಂದ ಬೆಳಗಿತು. ಮೀನಾಕ್ಷಿ ಆ ಚೂರನ್ನು ಕಣ್ಣು ತುಂಬ ನೋಡಿ ಕಂಬನಿ ತುಂಬಿ ತನ್ನ ಕುಪ್ಪುಸದಲ್ಲಿ ಬಚ್ಚಿಟ್ಟು ಕೊಂಡಳು.

ಮೀನಾಕ್ಷಿಯ ಹೃದಯದ ಮೇಲೆ ಎಂದೂ ಮಾಯಲಾರದ ವಾಕ್ಪ್ರಹಾರವಾಗಿದ್ದಿತು. ಹೃದಯದಲ್ಲಿ ದುಃಖವನ್ನು ಅಡಗಿಸಿ ಅಡಗಿಸಿ ಮೀನಾ ದುರ್ಬಲಳಾಗಿ ಹೋದಳು. ನಾಗವೇಣಮ್ಮನವರು ಪಕ್ಕದ ಮನೆಯವರ ಕೈಲಿ ಕಾಗದ ಓದಿಸಿಕೊಂಡು ಬಂದಿದ್ದರು. ಆ ಕಾಗದ ಅವರ ನಾಲಗೆಯನ್ನು ಉದ್ದ ಮಾಡಿದ್ದಿತು. ಹಗಲಿರುಳು “ ತಮ್ಮನನ್ನು ತಿಂದುಕೊಂಡೆ. ಅಕ್ಕನ ಮಗುವನ್ನು ತಿಂದುಕೊಂಡೆ ” ಎಂದು ಹಂಗಿಸಿ ಹಂಗಿಸಿ ಅವಳ ಮಾಯಲಾರದ ಹುಣ್ಣಿನ ಮೇಲೆ

ಬರೆಕೊಟ್ಟರು. ಇನ್ನೂ ಕೋಪ ಬಂದಾಗ "ಲೇ, ಮಾಟಗಾತಿ, ನಿನ್ನ ಚಾಲೋಕೆಲ್ಲ ನನ್ನ ಹತ್ತಿರ ನಡೆಯೊಲ್ಲ. ನಿನ್ನ ಕತ್ತು ಮುರಿಸಿ ಬಿಟ್ಟೇನು. ಮಾಟ ಬೇರೆ ಕಲ್ತಿದ್ದೀಯೋ ?" ಎಂದು ಮೂತಿ ತಿವಿಯುತ್ತಿದ್ದರು.

ರಾಮಚಂದ್ರಯ್ಯ ಅವಳನ್ನು ಪ್ರೀತಿಸುವುದನ್ನು ನೋಡಿ ಅವರ ಮೈ ಉರಿಯುತ್ತಿದ್ದಿತು. ಆ ಕೋಪದಲ್ಲಿ ತಾರತಮ್ಯಜ್ಞಾನವಿಲ್ಲದೆ ಬೈದುಬಿಡುತ್ತಿದ್ದರು. ಮನೆಯ ಶೂದ್ರಗಿತ್ತಿಯೊಡನೆ, ನೆರಮನೆಯವರೊಡನೆ ಹೇಳಿಕೊಂಡು ರಾಗ ತೆಗೆದು ಅಳುತ್ತಿದ್ದರು.

" ಪಾಳು ರಂಡೆ, ಎಲ್ಲಿ ಬಂದು ಸೇರಿದಳೋ ನಮ್ಮನೇಗೆ. ಮಾಟ ಬೇರೆ ಮಾಡಸ್ತಾಳಂತಮ್ಮಾ. ಮಾಟ ಮಾಡಿಸಿ ಸಾಕಿದವರ ಮಗನ್ನ ತಿಂದುಕೊಂಡಳಂತೆ. ಅವರೇ ಬರ್ದಿದಾರೆ. ಅಷ್ಟಲ್ದೇ ಇನ್ನೇನು. ನನಗೆ ಗೊತ್ತಾಗ್ಲೇ ಇಲ್ಲ. ಇವಳು ಮನೆಗೆ ಕಾಲಿಟ್ಟದ್ದೇ ತಡ. ಅವರ ಕೈಕಾಲು ಪೂರ್ತಿ ಬಿದ್ಹೋಯ್ತು. ಅವನಿಗೂ ಏನೋ ಮಾಡಿಸಿ ಬಿಟ್ಟಿದ್ದಾಳೆ. ಅದೇನು ಒದ್ಕೊಂತಾನಮ್ಮ, ಹೆಂಡ್ತೀ, ಹೆಂಡ್ತೀ ಅಂತ. ಏನು ಗತಿಯೋ ಏನೋ. ಎಲ್ಲಾ ಆ ಶ್ರೀರಾಮಚಂದ್ರ ಕಾಪಾಡ್ಬೇಕು "

ಮೀನಾಕ್ಷಿಯು ನಿತ್ಯ, ಕಣ್ಣೀರಿನಲ್ಲಿ ಕೈ ತೊಳೆಯುವುದು ವಾಡಿಕೆಯಾಗಿ ಹೋಯಿತು. ಕೈ ಹಿಡಿದ ಗಂಡನ ಪ್ರೇಮ ಒಂದಿಲ್ಲದೇ ಹೋಗಿದ್ದರೆ ಮೀನಳ ಕಥೆ ಇಲ್ಲಿಗೇ ಸಮಾಪ್ತಿಯಾಗುತ್ತಿದ್ದಿತು.

ಮೀನಾಕ್ಷಿಗೆ ಮೈ ಇಳಿದುಹೋದನಂತರ ರಾಮಚಂದ್ರಯ್ಯನಿಗೆ ದೊಡ್ಡ ಸೋಲಾದಂತಾಗಿದ್ದಿತು. ಅವನಿಗೆ ಒಮ್ಮೊಮ್ಮೆ ಜೀವನವೇ ಬೇಸರ ಬಂದುಬಿಡುತ್ತಿದ್ದಿತು. ಮನಸ್ಸು ಮತ್ತೆ ತನ್ನ ಹಿಂದಲ ಹೊಲಸು ಬಾಳಿಗೆ ಎಳೆಯುತ್ತಿತ್ತು. ಮೀನಳೊಡನೆ ಅವನು ಕೂಡ ದಾದನು. ಅವಳೊಡನೆ ಬಾಳನ್ನು ನೂಕಲಾರದೇ ಹೋದನು. ಅವನ ಮನಸ್ಸಿನಲ್ಲಿ ಯಾವುದೋ ಅಳುಕು, ಜೀರುಡುಂಬಿಯಂತೆ ಕೊರೆಯುತ್ತಿದ್ದಿತು. ಆವನ ಅಬಲತೆ ಅವನನ್ನು ಅಣಕಿಸುತ್ತಿದ್ದಿತು.

ರಾಮಚಂದ್ರಯ್ಯ ಮೆಲ್ಲಮೆಲ್ಲನೆ ಇಸ್ಪೀಟು ಆಟ ಪ್ರಾರಂಭಿಸಿ

ದ್ದನು. ಸಿಗರೇಟಿನ ಚಟ ಹೆಚ್ಚಿಹೋಯಿತು. ಇಸ್ಪೀಟು ಆಟ ಆಡಿ ರಾತ್ರಿ ಹನ್ನೊಂದು, ಹನ್ನೆರಡು ಘಂಟೆಗೆ ಮನೆಗೆ ಬರುತ್ತಿದ್ದನು.

ಮೀನಾಕ್ಷಿ ಗಂಡ ಬರುವವರೆವಿಗೆ ಊಟವನ್ನೂ ಮಾಡದೆ ಕಾಯ್ದು ಕೊಂಡಿರುತ್ತಿದ್ದಳು. ಯಾವುದೋ ಬಗೆಹರಿಯದ ಯೋಚನೆಯಲ್ಲಿ ತಲ್ಲೀನಳಾಗುತ್ತಿದ್ದಳು. ಗಂಡ ಬಂದ ತಕ್ಷಣ ಅವನಿಗೆ ಬಡಿಸಿ ತಾನು ಊಟ ಮಾಡುತ್ತಿದ್ದಳು. ಊಟ ಮಾಡುವಾಗ ರಾಮಚಂದ್ರಯ್ಯ ಎವೆಹಾಕದೆ ಮೀನಾಕ್ಷಿಯನ್ನು ನೋಡುತ್ತಿದ್ದನು. ಮೀನಾಕ್ಷಿಯ ಮುಖ ಬಾಡಿ ಹೋಗಿರುತ್ತಿದ್ದಿತು. ರಾಮಚಂದ್ರಯ್ಯನಿಗೆ ಸೊಗಸಿನ ರಾಣಿಯಾಗಿದ್ದ ತನ್ನ ಹೆಂಡತಿಯನ್ನು ಇಂತಹ ಸ್ಥಿತಿಯಲ್ಲಿ ನೋಡಲು ಆಗುತ್ತಿರಲಿಲ್ಲ. ಅವನ ಕರುಳು ಕತ್ತರಿಸಿದಂತಾಗುತ್ತಿದ್ದಿತು. ದಿನವೂ ಪ್ರೀತಿಯಿಂದ ಹೇಳುತ್ತಿದ್ದನು.

"ನೀನು ಇಷ್ಟುಹೊತ್ತಿನವರೆಗೆ ನನಗೆ ಕಾಯಬೇಕೇ ಮೀನ. ಊಟಮಾಡಿಬಿಡು. ನನಗಾಗಿ ಕಾಯಬೇಡ. ಸರಿಯಾದ ಹೊತ್ತಿಗೆ ಊಟಮಾಡದೆ ಆರೋಗ್ಯ ಕೆಡಿಸಿಕೊಳ್ಳಬೇಡ."

"ನೀವು ಹಸಿದಿದ್ದರೆ ನಾನು ಹೇಗೆ ಊಟಮಾಡಲಿ. ನನಗೆ ಅನ್ನ ಸೇರುವುದಿಲ್ಲ." ಎಂದು ಮೀನಾಕ್ಷಿ ಉತ್ತರಕೊಡುತ್ತಿದ್ದಳು. ರಾಮಚಂದ್ರಯ್ಯ ನಿರುತ್ತರನಾಗುತ್ತಿದ್ದನು.

ಮಾರನೆಯ ದಿನದಿಂದ ಪ್ರಯತ್ನಪಟ್ಟು ಬೇಗ ಬರುತ್ತಿದ್ದನು. ಆದರೂ ಹತ್ತು ಘಂಟೆಯಾಗಿಬಿಡುತ್ತಿದ್ದಿತು. ಮೀನಾಕ್ಷಿಗೆ ಅವನು ಏಕೆ ಹೊತ್ತಾಗಿ ಬರುತ್ತಾನೆಂದು ಯೋಚಿಸಿ ಯೋಚಿಸಿ ಏನೂ ಬಗೆಹರಿ ದಿರಲಿಲ್ಲ. ಬಗೆಹರಿಯುವ ಬದಲು ಸಮಸ್ಯೆ ಜಟಿಲವಾಗುತ್ತಿದ್ದಿತು. ಒಂದು ದಿನ ಊಟಮಾಡುವಾಗ ಧೈರ್ಯವಾಗಿ ಕೇಳಿಯೇ ಬಿಟ್ಟಳು.

"ನೀವು ಈ ನಡುವೆ ಏಕೆ ಇಷ್ಟು ಹೊತ್ತಾಗಿ ಬರುತ್ತೀರಿ"

"ಆಂ! ........ ಏನೂ ಇಲ್ಲ ಮೀನ. ಸ್ನೇಹಿತರು ಸಿಕ್ಕಿಬಿಡ್ತಾರೆ. ಆಫೀಸಿನಲ್ಲೂ ಕೆಲಸ ಜಾಸ್ತಿ."

"ಇಲ್ಲ, ನೀವು ಸುಳ್ಳುಹೇಳ್ತೀರಿ. ಕನ್ನಡಿ ನೋಡಿಕೊಳ್ಳಿ ನೀವೆಷ್ಟು ತೆಗೆದುಹೋಗಿದ್ದೀರಿ ಅಂತ. ರಾತ್ರಿಯೆಲ್ಲಾ ನಿದ್ದೆಯನ್ನೇ

ಮಾಡುವುದಿಲ್ಲ. ಏನನ್ನೋ ಯೋಚಿಸುತ್ತ ಮಲಗಿರುತ್ತೀರಿ."

"ಏನಿಲ್ಲ ಮೀನಾ. ಎಲ್ಲಾ ನಿನ್ನ ಊಹೆ ಅಷ್ಟೆ. ನನಗೇನೂ ಆಗಿಲ್ಲವಲ್ಲ. ನಾನು ಒಂದು ದಿನವೂ ನಿದ್ದೆಗೆಟ್ಟಿಲ್ಲ. ಇನ್ನು ಯೋಚಿಸುವುದಕ್ಕೆ ಏನಿದೆ ಮಣ್ಣು." ಊಟ ಮುಗಿಸಿ ಮೀನಾಕ್ಷಿ ಎಲೆ ಅಡಿಕೆ ತೆಗೆದುಕೊಂಡು ರೂಮಿಗೆ ಹೋದಳು. ರಾಮಚಂದ್ರಯ್ಯ ಗಾಢವಾಗಿ ಆಲೋಚಿಸುತ್ತ ಮಲಗಿದ್ದನು. ಮೀನಾಕ್ಷಿ ಹತ್ತಿರ ಹೋಗಿ ಕುಳಿತು ದೀಪದ ಬೆಳಕಿನಲ್ಲಿ ಒಂದು ಸಾರಿ ಗಂಡನ ಮುಖವನ್ನು ದಿಟ್ಟಿಸಿ ನೋಡಿದಳು. ಅವಳಿಗೆ ತನ್ನ ಗಂಡನು ನಿಜವಾಗಿಯೂ ಮುದುಕನಾದ ಹಾಗೆ ಕಂಡಿತು. ತಲೆಕೂದಲೆಲ್ಲಾ ನರೆತುಹೋಗಿತ್ತು. ಮುಖದ ಮೇಲೂ ನರೆತಕೂದಲು ಕಾಣಿಸಿತು. ಕಣ್ಣುಗಳಂತೂ ಪಾತಾಳಕ್ಕೆ ಇಳಿದಿದ್ದವು. ಕೆನ್ನೆಗಳು ಬತ್ತಿಹೋಗಿದ್ದವು. ಮೀನಾಕ್ಷಿಗೆ ಏನೋ ನೆನಪಾಯಿತು ಕಣ್ಣೀರು ಬಂದಿತು. ಅವನ ತಲೆ ನೇವರಿಸುತ್ತ ಕೇಳಿದಳು.

"ನೀವು ಅದನ್ನು ಬಹಳ ಮನಸ್ಸಿಗೆ ಹಚ್ಚಿಕೊಂಡಂತೆ ಕಾಣುತ್ತೆ."

"ಏನು?........ಏನಿಲ್ಲವಲ್ಲ. ಎಲ್ಲ ಅನುಭವಿಸಿದವಳು ನೀನೇ. ನಿಶ್ಚಿಂತೆಯಾಗಿದ್ದೀಯು. ನನಗೇನು ಯೋಚನೆ?"

"ಮತ್ತೆ ಏಕೆ ಹೀಗಾಗಿದ್ದೀರಿ. ನೀವು ನಾಳೆಯಿಂದ ವಾರಕ್ಕೊಂದು ಸಾರಿ ನೀರು ಹಾಕಿಕೊಳ್ಳಬೇಕು."

"ಹ್ಞ................"

"ನಾಳೆಯಿಂದ ಬೇಗ ಮನೆಗೆ ಬಂದುಬಿಡಿ. ನನಗೆ ಗೊತ್ತು ನೀವು ಇಸ್ಪೀಟು ಆಡುವುದಕ್ಕೆ ಹೋಗುತ್ತೀರಿ. ಮನೆಯಲ್ಲೇ ಪಗಡೆ ಯಾಟವಾಡೋಣ."

"ಇಲ್ಲ........ಖಂಡಿತ ಹೋಗುವುದಿಲ್ಲ"

"ಇಲ್ಲದಿದ್ದರೆ. ನನಗೇ ಇಸ್ಪೀಟು ಹೇಳಿಕೊಟ್ಟುಬಿಡಿ. ಮನೆಯಲ್ಲೇ ಆಡೋಣ."

"ನಿನಗೆ ಇಸ್ಪೀಟು! ........ಆಗಲಿ....ಹಾಗೇ ಆಗಲಿ....ಹುಕುಂ ರಾಣೀಸಾಹೇಬ್"

"ಸಿಗರೇಟು ಹೆಚ್ಚಾಗಿ ಸೇದಕೂಡದು"

" ಸತ್ಯವಾಗಿ ಸೇದುವುದಿಲ್ಲ "

" ಅತ್ತೆಗೆ ಹೇಳಿ ನಾಳೆಯಿಂದ ಒಂದು ಪಾವು ಹಾಲು ಹೆಚ್ಚಾಗಿ ತೆಗೆದುಕೊಳ್ಳುತ್ತೇನೆ. ನನಗೆ ಹಾಲು ಸೇರುವುದಿಲ್ಲ ಅನ್ನಕೂಡದು. ನಿತ್ಯ ಕುಡಿಯಬೇಕು."

" ಖಂಡಿತ ಕುಡಿಯುತ್ತೇನೆ "

ಆ ಮಾತಿಗೆ ಇಬ್ಬರೂ ನಕ್ಕುಬಿಟ್ಟರು. ಮೀನಾಕ್ಷಿಗೆ ಆನಂದ ವಾಯಿತು. ಎಲೆಯೊಂದನ್ನು ಮಡಿಸಿ ಮೀನಾಕ್ಷಿ ಅವನ ಬಾಯ ಲ್ಲಿಟ್ಟಳು. ರಾಮಚಂದ್ರಯ್ಯ ತಕ್ಷಣ ಕೇಳಿದನು

" ಮೀನಾ, ನಾನೊಂದು ಮಾತು ಕೇಳ್ತೀನಿ, ನಿಜವಾಗಿ ಹೇಳುತ್ತೀಯಾ? "

" ಹ್ಞ........ಕೇಳಿ "

" ನಿನಗೆ ನನ್ನನ್ನು ನೋಡಿದರೆ ಏನನ್ನಿಸುತ್ತದೆ ? "

" ಚೆನ್ನಾಗಿದೆ ನಿಮ್ಮ ಮಾತು ! ನನಗೆ ಅದೆಲ್ಲ ಗೊತ್ತಾಗೊಲ್ಲ "

" ನಾನು ನಿನ್ನ ವಯಸ್ಸಿಗೆ ಸರಿಯಾದ ಗಂಡನಲ್ಲ ಅನ್ನಿಸು ವುದಿಲ್ಲವೇ ? "

" ಉಹ್ಞು, ನನಗೆ ಹಾಗೆಲ್ಲ ಅನ್ನಿಸುವುದಿಲ್ಲ. ನೀವು ಸುಮ್ಮನೆ ಅದೇ ಪ್ರಶ್ನೆಯನ್ನು ಕೇಳುತ್ತೀರಿ. ನಾನು ಅವತ್ತೇ ಅದಕ್ಕೆ ಉತ್ತರ ಹೇಳಿದೆನಲ್ಲ "

" ನನ್ನ ರೂಪನ್ನು ನೋಡಿದರೆ ನಿನಗೆ ಅಸಹ್ಯವಾಗುವುದಿಲ್ಲವೇ?"

" ಛೀ........ಹಾಗೆಲ್ಲಾ ಮಾತನಾಡಬೇಡಿ; ನನಗೆ ನಿಮ್ಮ ರೂಪ ಬೇಡ; ನಿಮ್ಮ ಗುಣ ಬೇಕು. ನಿಮ್ಮಂತಹ ಗುಣ ಇರು ವವರಿಗೆ ರೂಪವೇಕೆ ? "

" ಮೀನಾ........ನನ್ನ ವಯಸ್ಸೆಷ್ಟು ತಿಳಿದಿದೆಯಾ ! "

" ಹಾಗೆಲ್ಲಾ ನಾವು ತಿಳಿದುಕೊಳ್ಳಬಾರದು. ಆಯುಸ್ಸು ಕಡಿಮೆಯಾಗುತ್ತಂತೆ."

" ಹುಚ್ಚಿ........ಅಮ್ಮ ನಿಮಗೆ ಸುಳ್ಳು ಹೇಳಿದರು. ನನಗೆ ನಲವತ್ತು ವರ್ಷ ಆಗಿಹೋಯಿತು; ಮೀನಾ, ಇದು ಮೂರನೆಯ

ಮದುವೆ "

" ಹೌದೇ !....ನನಗೆ ಹಾಗೆ ಕಾಣುವುದೇ ಇಲ್ಲ."

" ನಿನಗೆಷ್ಟು ವಯಸ್ಸು ಗೊತ್ತಿದೆಯೋ ಮೀನ "

" ಹದಿನಾಗು "

" ನನಗೆ ಸರಿಯಾದ ವಯಸ್ಸಿನಲ್ಲಿ ಮಗುವಾಗಿದ್ದರೆ ನಿನ್ನ ವಯಸ್ಸಿನ ಮಗಳಿರಬಹುದಾಗಿದ್ದಿತು ಅಲ್ಲವೇ ಮೀನಾ ? "

ಆ ಮಾತುಗಳು ಮಾತ್ರ ಮೀನಾಕ್ಷಿಯ ಹೃದಯಕ್ಕೆ ತಟ್ಟಿತು. ಅವನ ಮಾತುಗಳು ನಿಜ ಎನ್ನಿಸಿತು. ತಕ್ಷಣ ಮಾತು ಹಾರಿಸಿಬಿಟ್ಟಳು.

" ಈಗ ಆ ಮಾತೆಲ್ಲಾ ಏಕೆ ಬಿಡಿ. ನೀವು ಯಾವಾಗಲೂ ಹೀಗೆಯೇ ಯೋಚಿಸುತ್ತಿರುತ್ತೀರಿ. ನನಗೆ ಗೊತ್ತು. ಅದಕ್ಕೇ ನೀವು ಇಳಿದು ಹೋಗುತ್ತಿರುವುದು ; ನನಗೇನೂ ನೀವು ಮುದುಕರೆಂದು ತೋರುವುದಿಲ್ಲ "

" ಎಂತಹ ಸುಳ್ಳು " ಎಂದಿತು ಮನಸ್ಸು. ಮೀನಾಕ್ಷಿ ತಕ್ಷಣ ಎದುರಿಗಿದ್ದ ದಶರಥ ಕೈಕೇಯಿಯರ ಚಿತ್ರ ನೋಡಿದಳು. ಅರೆಕ್ಷಣ ಅವಳ, ಅವನ ವಯಸ್ಸಿನ ಅಂತರ ನೆನಸಿಕೊಂಡು ಸಂಕಟವಾಯಿತು. ಅದು ಅವಳಿಗೆ ಹೊಸ ಸುದ್ದಿಯಾಗಿದ್ದಿತು. ಆದರೆ ಏನೀಗ....? 'ಎಲ್ಲಾ ಒಂದೇ....'ಎಂದು ಸಮಾಧಾನ ಮಾಡಿಕೊಂಡಳು. 'ಸುಬ್ಬಮ್ಮ ನವರು ಮನಸ್ಸು ಮಾಡಿದ್ದರೆ ಈ ಮದುವೆಯನ್ನು ತಪ್ಪಿಸುವುದಕ್ಕೆ ಆಗುತ್ತಿರಲಿಲ್ಲವೇ ? ಆದರೆ, ಇಂತಹ ಒಳ್ಳೆಯವರ ಕೈ ಹಿಡಿಯು ತ್ತಿದ್ದೆನೋ ಇಲ್ಲವೋ ?' ಎಂದು ಸಮಾಧಾನ ತಂದುಕೊಂಡಳು. ಅದು ಕೇವಲ ಕ್ಷಣಕಾಲದ ಸಮಾಧಾನ ತನ್ನ ಬಗೆಗೆಟ್ಟ ಮನಸ್ಸನ್ನು ಯಾವ ಪ್ರಿಯವಸ್ತುವಿನ ಮೇಲೂ ಹರಿಸಲಾರದೆ ಆ ಮನಸ್ಸನ್ನು ಮತ್ತೆ ಮತ್ತೆ ತನಗೆ ಆ ಕ್ಷಣದಲ್ಲಾದರೂ ಆತ್ಮೀಯನಾಗಿ ತೋರುತ್ತಿದ್ದ ಕೈ ಹಿಡಿದ ಗಂಡನ ಮೇಲೆ ಹರಿಸುತ್ತಿದ್ದಳು.

ದಿನ ಕಳೆದಂತೆ ಅವಳ ಜೀವನದಲ್ಲಿ ಏನೂ ಬದಲಾವಣೆಯಾಗ ಲಿಲ್ಲ. ನಗುವಿನ ದಿವಸಗಳಂತೂ ಸಮಾಧಿಯಾಗಿದ್ದುವು. ತೌರುಮನೆ ಯಿಂದ ಸಮಾಚಾರವೇ ಬಂದಿರರಲಿಲ್ಲ. ರಾಮಚಂದ್ರಯ್ಯನೂ ಹಟ

ಹಿಡಿದು ಅವಳು ಊರಿಗೆ ಕಾಗದ ಬರೆಯ ಕೂಡದೆಂದು ಹೇಳಿ ಬಿಟ್ಟಿದ್ದನು. 'ನಿರಪರಾಧಿಯಾದ ತನ್ನನ್ನು ಈ ರೀತಿ ಬೈದು ಮನಸ್ಸಿಗೆ ಮಾಯಲಾರದ ಘಾಯಮಾಡಿದರಲ್ಲಾ' ಎಂದು ಈಗೀಗ ಮೀನಳ ಮನಸ್ಸು ತ್ವೇಷಗೊಳ್ಳುತ್ತಿದ್ದಿತು. ಅದಕ್ಕೆ ಸರಿಯಾಗಿ ಊರಿನಿಂದ ಅವಳು ಬದುಕಿರುವಳೇ, ಸತ್ತಳೇ ? ಎಂದು ಕೇಳಿ ಯಾರೂ ಕಾಗದ ಬರೆಯದಿದ್ದುದನ್ನು ನೋಡಿ ಅವಳ ಮನಸ್ಸು ರೋಸಿ ಹೋಗಿದ್ದಿತು. ಅವರ ರಾಕ್ಷಸವೃತ್ತಿ ಧೋರಣೆಗಳು ಅವಳ ಸಹನೆಯನ್ನು ಕೊಂದಿದ್ದುವು.

ದಿನಗಳು ಕಳೆದಂತೆ ನಾಗವೇಣಮ್ಮನವರ ಕಿರುಕುಳ ಹೆಚ್ಚಾಯಿತು. ಮೀನಾಕ್ಷಿಯನ್ನು ದಿನಕ್ಕೆ ಹತ್ತು ಸಾರಿ "ಬಂಜೆ" ಎನ್ನುತ್ತಿದ್ದರು. ಅವರಿಗೂ ಐವತ್ತಾರು ವರ್ಷ ಸಮೀಪಿಸಿದ್ದಿತು. ಆಕೆಯ ಗಂಡನಿಗಂತೂ ಅರವತ್ತೈದು ವರ್ಷ ವಯಸ್ಸಾಗಿದ್ದಿತು. ಹತ್ತುವರ್ಷಗಳಿಂದ ಒಂದೇ ಸಮನೆ ವಾತರೋಗದಿಂದ ನರಳುತ್ತ ಹಾಸಿಗೆ ಹಿಡಿದಿದ್ದರು. ಅವರಿಗೂ ಮೊಮ್ಮಗನನ್ನು ನೋಡುವ ಹಂಬಲವಾಗಿದ್ದಿತು. ಹಾಸಿಗೆಯಲ್ಲಿ ಮಲಗಿಕೊಂಡೇ ಸೊಸೆಯ ಬಂಜೆತನವನ್ನು ಬೈಯ್ಯುತ್ತಿದ್ದರು. ಮಗನ ದುರ್ನಡತೆಯು ಕಡೆಗೆ ಒಬ್ಬರಿಗಾದರೂ, ಒಂದು ದಿನವೂ ಗಮನ ಹೋಗುತ್ತಿರಲಿಲ್ಲ ! ಹೋಗುವಂತೆಯೂ ಇರಲಿಲ್ಲ ! ಮೀನಾಕ್ಷಿಗೂ ಅದೇ ಯೋಚನೆಯಾಗಿದ್ದಿತು. 'ಯಾರ ತಪ್ಪಿಗೆ ಯಾರು ಹೊಣೆ ? ನಾನು ಬಂಜೆಯೇ ?' ಎಂದು ಮೀನಾ ಹೊಟ್ಟೆ ಗುದ್ದಿಕೊಂಡು ರೋಧಿಸುತ್ತಿದ್ದಳು. ಅವಳ ಅಂತರಾತ್ಮ 'ಅಲ್ಲ, ಅಲ್ಲ ಮೀನಾ. ನೀನು ಬಂಜೆಯಲ್ಲ' ಎಂದು ಸಮಾಧಾನ ಹೇಳುತ್ತಿದ್ದಿತು.

ನಾಗವೇಣಮ್ಮನವರಲ್ಲಿ ಮೊದಲಿದ್ದ ಆದರ, ಪ್ರೀತಿ, ಮಮತೆಗಳ ಸಮಾಧಿಯಾಗಿದ್ದುವು. ಅವುಗಳ ಬದಲು ಅವಳನ್ನು ಕಂಡರೆ ದ್ವೇಷ, ತಾಪ, ಅಸೂಯೆಗಳು ಆವಿರ್ಭೂತವಾದುವು. ಸೊಸೆನಡೆದರೆ ಸವೆದು ಹೋಗುತ್ತಾಳೆ ಎನ್ನುತ್ತಿದ್ದವರು, ಗಾಣದ ಎತ್ತಿನಂತೆ ದುಡಿದರೂ 'ಇವಳಿಗೇನಮ್ಮ ಬಂತು ಕೇಡು. ಹೊಟ್ಟೆ ಕರಗಿಸಿಕೊಂಡು ವರ್ಷಾನವರೆ ಆಯ್ತು. ಇನ್ನೂ ಸುಸ್ತು, ಸುಸ್ತು ಅಂತ ಕೆಲಸಕ್ಕೆ ಹಿಂದೇಟು ಹಾಕ್ತಾಳೆ. ಮೈಗಳ್ಳತನಕ್ಕೆ ಇದೊಂದು ನೆವ' ಎಂದು

ಪಟಗುಟ್ಟುತ್ತಿದ್ದರು. ಮೀನ ಎಲ್ಲ ಶಾಂತವಾಗಿ ಕೇಳಿಕೊಳ್ಳುತ್ತಿದ್ದಳು. ತೀರ ಸಂಕಟವಾದಾಗ ಅತ್ತೆಗೆ ಕಾಣದಂತೆ ಕಣ್ಣೀರು ಹರಿಸುತ್ತಿದ್ದಳು. ನಾಗವೇಣಮ್ಮನವರಿಗೆ ಅವಳ ದುಃಖಭರಿತ ಮುಖವನ್ನು ನೋಡಿದಷ್ಟೂ ಸಿಟ್ಟೇರುತ್ತಿದ್ದಿತು. ಅವರ ಕ್ರೋಧ ಇಮ್ಮಡಿಸುತ್ತಿದ್ದಿತು. ಅವಳ ನಡಿಗೆಯಲ್ಲಿ, ಉಡುಗೆಯಲ್ಲಿ, ಪ್ರತಿ ಒಂದು ಕೆಲಸದಲ್ಲಿಯೂ ಅವರು ತಪ್ಪು ಹುಡುಕುತ್ತಿದ್ದರು. ಆ ಕಾಣದ ತಪ್ಪನ್ನು ರಾದ್ಧಾಂತ ಮಾಡಿ ಬೈದಾಡಿ, ಕಿರುಚಾಡಿ, ದೊಡ್ಡ ಗಲಾಟೆ ಎಬ್ಬಿಸುತ್ತಿದ್ದರು. ಮೀನಳಿಗೆ ಆಗ ಏನು ಮಾಡಲೂ ತೋರುತ್ತಿರಲಿಲ್ಲ.

ಕಕ್ಕಾಬಿಕ್ಕಿಯಾಗಿ, "ಅತ್ತೇ, ನಂದೇನು ತಪ್ಪಾಯ್ತು. ತಿಳೀ ಲಿಲ್ಲ, ಹೇಳಿಕೊಡಿ ಅತ್ತೆ" ಎಂದು ದೈನ್ಯದಿಂದ ಕೇಳಿಕೊಂಡರೆ

"ಹ್ಞು ಕಣೆ ಹೇಳಿಕೊಡ್ತೀನಿ, ಎಳೇ ಮಗು ಪಾಪ ಮಹಾರಾಣಿ ಮನೇಲಿ ಬೆಳದ್ಳು. ನೈಸವಾಗಿ ಗುಡ್ಸೋದು, ಸಾರ್ಸೋದು, ರಂಗೋಲಿ ಇಡೋದು, ಬೆಳ್ಗೆ ಪಾತ್ರೆ ತೊಳೆಯೋದು ಒಂದೂ ಬರೊಲ್ಲ. ಕೊಳ್ಬೇ ಹೊಗ್ತಿದೆ ಇವಳ್ಗೆ ರಾಣಿಗಿರಿ. ಲೇ ನಡ್ಯೇ ಆಚೆ; ಬಣ್ಣದ ಬೊಂಬೆ. ನಿಂಗೆ ಕೆಲ್ಸ ಕಲ್ಸಿ, ಪಾಠ ಹೇಳ್ಕೊಡೋಕಲ್ಲ ನಮ್ಮನೇಗೆ ನಿನ್ನ ತಂದ್ಕೊಂಡಿದ್ದು. ಏನೇ ಮಾಡ್ತಿದ್ಲು ನಿನ್ನ ಸಾಕ್ದೋಳು? ಆ ಸುಬ್ಬಿಯೋ, ಗುಬ್ಬಿಯೋ. ಇದೇ ಏನೇ ನಿಂಗೆ ಕಲ್ಸಿರೋದು ಕೆಲ್ಸ 'ಮಳ್ಳೀ ಮಳ್ಳೀ ಮಂಚಕ್ಕೆಷ್ಟು ಕಾಲು ಅಂದರೆ ಮೂರು, ಮತ್ತೊಂದು ಅಂದ್ಲಂತೆ' ಏನೂ ಅರೀದವಳು. ಕೆಲ್ಸ ಕಲ್ಸಿ ಅತ್ತೆ ........ ಹ್ಞುಹ್ಞುಹ್ಞು ಸುರೂಪ ನೋಡು ಇವಳ್ದು" ಎಂದು ಮೂತಿ ತಿವಿಯುತ್ತಿದ್ದರು.

ಮೀನಾ ಅಪಮಾನದಿಂದ ಕುಗ್ಗಿ ಬಾಡಿ ಹೋಗುತ್ತಿದ್ದಳು. ಉಮ್ಮಳಿಸಿಕೊಂಡು ಬಂದ ದುಃಖವನ್ನು ತಡೆಗಟ್ಟುತ್ತಿದ್ದಳು. ಮೀನಾಕ್ಷಿ ಒಂದು ದಿನವಾದರೂ ಗಂಡನ ಹತ್ತಿರ ತನ್ನ ಸಂಕಟವನ್ನು ಹೇಳಿ ಕೊಳ್ಳಲಿಲ್ಲ. ಅವನೆದುರಿಗಿದ್ದಾಗ ನಗುನಗುತ್ತ ಇದ್ದುಬಿಡುತ್ತಿದ್ದಳು. ಇಂದಿಗೆ ಸರಿಹೋದೀತು, ನಾಳೆಗೆ ಸರಿಹೋದೀತು ಎಂದು ತಾಳ್ಮೆ ಯಿಂದ ಕಾದುನೋಡಿದಳು. ಆದರೆ ದಿನದಿನಕ್ಕೆ ಕಾಟ ಹೆಚ್ಚುತ್ತಲೇ ಹೋಯಿತು.

ಒಂದು ದಿನ ಮೀನಾಕ್ಷಿ ತುಳಸೀ ಪೂಜೆಯನ್ನು ಮಾಡಿಕೊಂಡು ಹಾಗೆಯೇ ಹಿತ್ತಲಿನಲ್ಲಿ ಬಾಡಿ ಹೋಗುತ್ತಿದ್ದ ಮರುಗ, ಪಚ್ಚೆತೆನೆ ಗಿಡಗಳಿಗೆ ನೀರು ಹಾಕಲು ಹೋದಳು. ಪತ್ರಿಯ ಗಿಡದ ಪಕ್ಕದಲ್ಲಿ ಮೀನಾ ಆರು ತಿಂಗಳ ಹಿಂದೆ ನೆಟ್ಟಿದ್ದ ರೋಜಾ ಕಡ್ಡಿ ಚಿಗುರಿ ಹೂ ಬಿಟ್ಟಿತ್ತು. ಮೀನಳಿಗೆ ಆ ಹೂವನ್ನು ನೋಡಿ ಹೃದಯ ಅರಳಿತು. ನಾಲ್ಕು ದಿವಸಗಳ ಹಿಂದೆ ನೋಡಿದ್ದ ಮೊಗ್ಗು ಅರಳಿ ಹೂವಾಗಿತ್ತು. ಮೀನ, ಕೊಡದಲ್ಲಿದ್ದ ನೀರನ್ನೆಲ್ಲ ಆ ಗಿಡಕ್ಕೆ ಹಾಕಿ, ನೀರಿನಲ್ಲಿ ನೆನೆದು ನಲಿಯುತ್ತಿದ್ದ ಹೂವನ್ನು ಕಿತ್ತು ಕಣ್ಣು ತುಂಬ ನೋಡಿ ತುರುಬಿನಲ್ಲಿ ಮುಡಿದುಕೊಂಡಳು. ಗಿಡದಲ್ಲಿ ಅರೆಬಿರಿದ ಮತ್ತೊಂದು ಮೊಗ್ಗನ್ನು ಕಣ್ಣು ತುಂಬ ನೋಡಿ ಮತ್ತೆ ಬಿಂದಿಗೆಯಲ್ಲಿ ನೀರು ತರಲು ಬಚ್ಚಲು ಮನೆಗೆ ಹೋದಳು. ಅವಳು ನೀರು ತುಂಬಿಕೊಂಡು ಹೊರಗೆ ಬರುತ್ತಿದ್ದಂತೆ ನಾಗವೇಣಮ್ಮ ಎದುರಿಗೆ ಪ್ರತ್ಯಕ್ಷವಾದರು. ತಕ್ಷಣ ಅವರ ಹುಡುಕುವ ಕಣ್ಣಿಗೆ ಮೀನಾಕ್ಷಿಯ ತಲೆಯಲ್ಲಿ ಕೊಂಚ ಓರೆಯಾಗಿ ಮುಡಿದುಕೊಂಡಿದ್ದ ರೋಜಾ ಹೂವು ಕಂಡಿತು. ನಾಗವೇಣಮ್ಮ ಕಣ್ಣು ಮಿಟುಕಿಸಿ "ಅಯ್ಯೋ ರಂಡೆ, ಕಿತ್ಬಿಟ್ಯೇನೇ ರೋಜಾ ಹೂವ್ನ. ರಥಸಪ್ತಮೀಗೇಂತ ಬಿಟ್ಟಿದ್ನಲ್ಲೇ ಗಿಡದಲ್ಲಿ....ಏನೇ ಏನ್ಹಂದಿತ್ತೆ ಕೇಡು ನಿಂಗೆ. ಅದ್ಯಾಕೆ ಕಿತ್ತೆ........ ಅಹ್ಹಹ್ಹಹ್ಹ ಮುಡ್ಕೊಂಡಿರೋದು ನೋಡು ನಾಯಕ್ಸಾನಿಹಾಗೆ, ಸಿಕ್ಕಿಸ್ಕೊಂಡಿದಾಳೆ. ರತೀದೇವಿ ರೂಪು ಕೊಳ್ಳೇ ಹೋಗ್ತಿದೆ, ದೇವ್ರಿಲ್ಲ ದಿಂಡ್ರಿಲ್ಲ! ಮಕ್ಕಂತೂ ಮೊದ್ಲೇ ಇಲ್ಲ. ನಾಚ್ಕೆ ಆಗ್ಬೇಡವ ಜನ್ಮಕ್ಕೆ. ರಥಸಪ್ತಮೀ ದಿನ ಮಗೂಗೆ ಹೂಮುಡ್ಸಿ ಅಲಂಕಾರ ಮಾಡ್ಕೊಂಡು ಎಳ್ಳು ಬೀರೋಕೆ ಹೋಗೋ ಪುಣ್ಯಾನಂತೂ ಪಡ್ಕೊಂಡು ಬರ್ಲಿಲ್ಲ. ನಾಯಕ್ಸಾನಿ ಹಾಗೆ ಕುಣೀತಾಳೆ ಇನ್ನೂ...........ತೆಗ್ದಾಕೆ ನೋಡ್ತಾರೆ ನಿನ್ನವತಾರಾನ." ಎಂದು ಮೀನಾಕ್ಷಿಯ ಬೆನ್ನಿನ ಮೇಲೆ ಗುದ್ದಿ, ಮೂತಿ ತಿವಿದು ತಲೆಯಲ್ಲಿದ್ದ ಹೂವನ್ನು ಕಿತ್ತುಹಾಕಿದರು. ಅವರು ಗುದ್ದಿದಾಗ ಆಯತಪ್ಪಿ ಮೀನಾಕ್ಷಿಯ ಕೈಯ್ಯಲಿದ್ದ ಕೊಡ ನೆಲಕ್ಕೆ ಧೊಪ್ಪನೆ ಬಿದ್ದು ಹೋಯಿತು. ಅಪಮಾನ, ದುಃಖದಿಂದ ನೊರಗಿದ್ದ ಮೀನ ಕೊಡ

ಬಿದ್ದುಹೋದೊಡನೆ ಏನಾಗುವುದೋ, ಎಂದು ಹೆದರಿಕೆಯಿಂದ ಗಡಗಡನೆ ನಡುಗುತ್ತ ನಿಂತುಬಿಟ್ಟಳು. ನಾಗವೇಣಮ್ಮ ಕೆಣಕಿದ ಸಿಂಹಿಣಿಯಂತಾಗಿಬಿಟ್ಟರು. ಅದು ಅವರ ತಾಯಿಯ ಕಾಲದ ಕೊಡ. ಅದು ಕೆಳಗೆ ಬಿದ್ದು ನಗ್ಗಿಹೋಗಿ ಬೆಸೆದಿದ್ದ ತಳದ ಅಂಚಿನಿಂದ ನೀರು ಸೋರಿತು. ತಾವು ಏನು ಮಾಡುತ್ತಿದ್ದೇವೆಂಬ ಜ್ಞಾನವಿಲ್ಲದೆ ಅವಳ ಮೈ ಮೇಲೆ ಹಾದು "ಅಯ್ಯೋ, ಹಾಳು ಮುಂಡೆ........ನನ್ನ ಕೊಡ ಹೋಯ್ತಲ್ಲೇ. ನಿನಗೇನು ಬಂತೇ ರೋಗ. ಮೂರ್ಛೆ ಬರುತ್ತೇನು ನಿಂಗೆ. ಅಯ್ಯೋ ನೋಡೀಂದ್ರೆ ಈ ಮುಂಡೇನಾ....ಕೊಡಾ ಎತ್ತಿ ಹಾಕ್ಬಿಟ್ಳು. ಇವರಪ್ಪನ ಮನೆಯಿಂದ ತಂದಿದ್ರೆ ಇವಳ್ಗೆ ಗೊತ್ತಾಗ್ತಿತ್ತು." ಎಂದು ಹೀನಾಮಾನವಾಗಿ ಬೈಯ್ಯುತ್ತ ಅವಳ ಮುಂದಲೆ ಹಿಡಿದು ಜಗ್ಗಿ ಧೊಪ್ಪನೆ ಅವಳ ಬೆನ್ನಿನ ಮೇಲೆ ಗುದ್ದಿ, ಆರ್ಭಟಿ ಮಾಡುತ್ತ ಒಳಗೆ ಹೊರಟುಹೋದರು.

ಮೀನಾಕ್ಷಿ ಎಷ್ಟೋ ಹೊತ್ತಿನವರೆವಿಗೆ ಹಾಗೆಯೇ ಕುಳಿತು ಬಿಟ್ಟಳು. ಅವಳ ಯತ್ನಮೀರಿ ಕಣ್ಣುಗಳಿಂದ ನೀರು ಹರಿದು ಬಂದಿತು. ಮೈಯ್ಯನೋವು ಅಪಮಾನದ ನೋವಿನೊಡನೆ ಬೆರತು ಅವಳ ಸಂಯಮ ಶಕ್ತಿಯನ್ನು ತುಳಿದುಹಾಕಿತು. ಮೀನಾ ಮುಖ ಮುಚ್ಚಿಕೊಂಡು ಬಿಕ್ಕಿಬಿಕ್ಕಿ ಅತ್ತಳು. 'ಈ ದಿನ ತಾನೇನು ತಪ್ಪು ಮಾಡಿದೆನೆಂದು ತನ್ನನ್ನು ಅಷ್ಟು ಹೊಡೆಯಬೇಕಾಗಿದ್ದಿತು. ಹೂವನ್ನು ಮುಡಿದುಕೊಂಡಿದ್ದು ತಪ್ಪೇ ? ರಥಸಪ್ತಮೀ ಹಬ್ಬ ಇನ್ನೂ ಆರು ದಿವಸ ಗಳಿದೆ. ಅಲ್ಲಿಯವರೆವಿಗೆ ಆ ಹೂವು ಬಾಡದೆ ಇರುತ್ತದೆಯೇ ? ಅದು ನಾನು ಹಾಕಿದ ಗಿಡ. ನನಗೆ ಅದರ ಹೂವಿನ ಮೇಲೆ ಅಧಿಕಾರವಿಲ್ಲವೇ?' ಎಂದಿತು ಮನಸ್ಸು. ಯಾವಾಗಲೂ ತಾನು ರೋಜಾ ಹೂವನ್ನು ಮುಡಿಯುತ್ತಿದ್ದ ರೀತಿಯೇ ಅದು. ಹಿಂದೆಲ್ಲ ಚೆನ್ನಾಗಿದೆಯೆಂದು ಮೆಚ್ಚಿಕೊಳ್ಳುತ್ತಿದ್ದವರು ಇಂದು ಈ ರೀತಿ ಬೈದು ಹೊಡೆಯಬೇಕೇ ? ಮೀನಳಿಗೆ ತಕ್ಷಣ ಸುಬ್ಬಮ್ಮನವರ ನೆನಪಾಯಿತು. ಒಂದು ದಿನ ಸುಬ್ಬಮ್ಮನವರು ರೋಜಾ ಹೂವನ್ನು ಇದೇರೀತಿ ಮುಡಿದುಕೊಂಡೆ ನೆಂದು ಕೆನ್ನೆಗೆ ಹೊಡೆದಿದ್ದರು. ಆದರೆ ಈರೀತಿ ಅವರೂ ಸಾಯ ಹೊಡೆ

ದಿದ್ದರೇ? ಇಲ್ಲ........ಸುಬ್ಬಮ್ಮನವರು ಎಂದಿಗೂ ಈ ರೀತಿ ದ್ವೇಷವನ್ನು ತೋರಿಸಲಿಲ್ಲ. ಅವರೇ ಒಂದು ತರಹ. ಆ ರೀತಿ ಮುಡಿದುಕೊಳ್ಳ ಬೇಡವೆಂದು ಸಮಾಧಾನವಾಗಿ ಹೇಳಬಾರದೇ ? ಮತ್ತೆ........ಚಂದ್ರು ಏಕೆ ಆ ರೀತಿ ಹೇಳಿದ್ದ ? ನನಗೆ ಅದೇ ಅಭ್ಯಾಸವಾಗಿ ಹೋಗಿದೆ. ಮೀನಳ ಮುಖ ಆ ದುಃಖದಲ್ಲೂ ಚಂದ್ರುವಿನ ನೆನಪಿನಿಂದ ಪ್ರಫುಲ್ಲ ವಾಯಿತು ! ನೆನಪು, ಚಂದ್ರುವಿನೊಡನೆ ಕಳೆದ ಸವಿದಿನಗಳೆರಡು ಹಾರಿತು. ಚಂದ್ರು........ಹೌದು ಚಂದ್ರು ಎಷ್ಟು ಒಳ್ಳೆಯವನು. ಚಂದ್ರು ಈಗ ಹೇಗಿರಬಹುದು. ಚಂದ್ರು ಇನ್ನೂ ನನ್ನನ್ನು ನೆನೆಸಿ ಕೊಳ್ಳುವನೇ? ಕಾಮಾಕ್ಷಿಯ ಸಹವಾಸದಲ್ಲಿ ಚಂದ್ರು ನನ್ನನ್ನು ಮರೆತು ಬಿಟ್ಟಿದ್ದರೆ; ಇಲ್ಲ ಚಂದ್ರು ನನ್ನನ್ನು ಮರೆತಿಲ್ಲ. ಚಂದ್ರು ನನ್ನನ್ನು.... ........, ಮೀನಾಕ್ಷಿ ತನ್ನ ಮನಸ್ಸಿನಲ್ಲಿ 'ಪ್ರೀತಿಸುತ್ತಾನೆ' ಎನ್ನುವ ಪದವನ್ನು ಸೇರಿಸಲಾರದೇ ಹೋದಳು. ಸಂಶಯ ಅವಳನ್ನು ಕಾಡಿತು. ಚಂದ್ರು ನನ್ನನ್ನು ನೋಡಿ, ನನ್ನ ಸ್ಥಿತಿಯನ್ನು ಯೋಚಿಸಿ ಮರುಕ ಪಡಬಹುದು. ಆದರೆ ಮನಸ್ಸು ಪ್ರೀತಿಸಬಹುದೇ ? ತಕ್ಷಣ ಮನಸ್ಸು 'ನೀನು' ಎಂದಿತು. ನಾನು........ನಾನು........ಚಂದ್ರುವನ್ನು........ ? ಮೀನಳ ಮುಖದ ಮೇಲೆ ನಗು ಮೂಡಿತು. ಉರಿಯುತ್ತಿದ್ದ ಎದೆಗೆ ಭರವಸೆಯ ಜಲಸೇಚನ ಮಾಡಿದಂತಾಯಿತು. ಮೀನಳ ಮೈಯ್ಯ ನೋವು ಮಾಯವಾಯಿತು. ಹೃದಯ ಹಗುರವಾಯಿತು. ಮೀನ ಸರ್ರನೆ ಎದ್ದುನಿಂತಳು. ಚಂದ್ರುವಿನ ನೆನಪು ಅವಳ ದುಃಖವನ್ನು ಮರೆಸಿತು ಅವನ ನೆನಪಿನೊಡನೆ ಅವಳ ಮನಸ್ಸು ವಿಹಂಗಮ ದಂತೆ ಸರ್ವಸ್ವತಂತ್ರವಾಗಿ ಆನಂದಮಯ ಭಾವನಾಜಗತ್ತಿನಲ್ಲಿ ವಿಹರಿಸಿತು. ಅವಳ ದುಃಖಭರಿತ ಜೀವನದಲ್ಲಿ ಚಂದ್ರುವಿನ ನೆನಪು ಆಗಾಗ ಆಸೆಯ ದೀಪವನ್ನು ಹಚ್ಚಿಡುತ್ತಿದ್ದಿತು. ಅವನ ನೆನಪು ಕಾರಿರುಳಿನ ಸುಳಿಮಿಂಚಿನಂತ ಕಾರ್ಗತ್ತಲೆಯ ಭೀತಿಯನ್ನು ತೊಲಗಿಸು ತ್ತಿದ್ದಿತು. ಮೀನಳ ದುಃಖಕ್ಕೆ ಚಂದ್ರುವಿನ ನೆನಪು ದಿವ್ಯೌಷಧಿ ಯಾಯಿತು. ಆದರೆ ಸಮಾಜ, ಧರ್ಮ; ಆ ಯೋಚನೆ ಬಂದೊಡನೆ ತನ್ನ ಕೈಹಿಡಿದ ಗಂಡನ ನೆನಪಾಗುತ್ತಿದ್ದಿತು. 'ಬಾಳಬೇಕು, ನಾನು

ಅವನೊಡನೇ ಬಾಳಬೇಕು, ಅದು ನನಗೊಂದು ಶಾಪ. ನಾನು ಸಮಾಜದ ದೃಷ್ಟಿಯಲ್ಲಿ ಇಂದು ಚಂದ್ರುವಿಗೆ ಪರನಾರಿ. ಆದರೆ ಚಂದ್ರುವಿಗೆ ನಾನು........? ನನಗೆ ಚಂದ್ರು........?' ಛೇ, ಮೀನ ಹಾಗೆ ಹೇಳಬಾರದು ಎನ್ನುತ್ತಿದ್ದಿತು ಹಿಂದೂ ಹುಡುಗಿಯ ರಕ್ತದಲ್ಲಿ ಬೆರೆತು ಬಂದ ಧರ್ಮನಿಷ್ಠೆ! ಪತಿ ಹೇಗಿರಲಿ, ಅವಳು ಸತಿಗೆ ದೈವವೆಂದು ಅಂಧಶ್ರದ್ಧೆಯ ಶಿಕ್ಷಣದ ಹೊನಲು ಅವಳ ಕಣಕಣಗಳಲ್ಲೂ ಹರಿಯು ತ್ತಿದ್ದಿತು. ಆದರೆ ಯಾರು ಕೈಹಿಡಿದವರು? ರಾಮಚಂದ್ರಯ್ಯ ಇರಬಹುದು. ಆದರೆ ತಾನು ಬಯಸಿದ ಸುಖವನ್ನು ಕೊಟ್ಟರೇ? ಇಲ್ಲ, ಇಲ್ಲ ಎಂದು ಮೀನ ರೋಧಿಸುತ್ತಿದ್ದಳು.

ಆ ದಿನ ರಾಮಚಂದ್ರಯ್ಯ ತನಗೆ ಗೇರುಸೊಪ್ಪೆಗೆ ವರ್ಗವಾಯಿ ತೆಂದೂ, ಸಂಬಳ ಐವತ್ತು ರೂಪಾಯಿಗಳಿಗೆ ಬಡ್ತಿಯಾಯಿತೆಂದೂ ಸುದ್ದಿ ತಿಳಿಸಿದನು. ನಾಗವೇಣಮ್ಮನವರಿಗೆ ಆಗಲೂ ಕೊಂಕುಮಾತ ನಾಡಬೇಕೆನ್ನಿಸಿತು.

"ಯಾರಿಗೆ ಬೇಕಪ್ಪಾ, ನಿನ್ನ ಹೆಚ್ಚು ಸಂಬಳ. ಮನೆಯಲ್ಲಿ ನಿನ್ನ ಸಂಬಳವಿಲ್ಲ ಅಂತ ಯಾರು ಅಳ್ತಾ ಇದಾರೆ. ನಿನ್ನ ದುಡ್ಡು ಅನುಭವಿಸೋಕೆ ಯಾರಿದಾರೆ? ಒಂದು ಮಗು ಕೂಡಾ ಹುಟ್ಟೇ ಹೋಯ್ತು, ಈ ಹೆಣ್ಣಿನ ಹೊಟ್ಟೇಲಿ. ಅದೇನು ಪಾಪ ಮಾಡಿದ್ದಾಳೋ ಅದೆಷ್ಟು ಮಕ್ಕಳನ್ನ ಸಾಯಿಸಿದ್ದೋ ಹಿಂದಿನ ಜನ್ಮದಲ್ಲಿ, ನರರಾಕ್ಷಸಿ"

ಮೀನಾಕ್ಷಿಗೆ ತಟ್ಟನೆ ಅಳು ಬಂದುಬಿಟ್ಟಿತು. ರಾಮಚಂದ್ರಯ್ಯ ಹೆಂಡತಿಯ ಮುಖವನ್ನು ದೈನ್ಯದಿಂದ ದಿಟ್ಟಿಸಿ ನೋಡಿದನು. ಅವನಿಗೆ ತನ್ನ ತಾಯಿ ಅವಳನ್ನು ಬಯ್ಯುವ ವಿಚಾರವೆಲ್ಲ ತಿಳಿದಿದ್ದಿತು. ಕಿವಿಯಾರ ಕೇಳಿದ್ದನು. ಆ ದಿನ ಆ ಸಂತೋಷ ಸಮಯದಲ್ಲಿ ಅಂತಹ ಮಾತು ಕೇಳಿ ಅವನ ಸೈರಣೆ ಮೇರೆ ಮೀರಿತು.

"ಅಮ್ಮಾ, ಮಕ್ಕಳಾಗದಿದ್ದರೆ ಅವಳ ತಪ್ಪೇನು? ಅವಳೇನು ಮಾಡಿದಳು? ಅವಳು ಕೊರಗಿ ಕೊರಗಿ ಸತ್ತುಹೋಗಲಿ. ಆಗ ನಿನಗೆ ಮೊಮ್ಮಕ್ಕಳು ಹುಟ್ಟುತ್ತಾರೆ. ಇಲ್ಲ ನನಗೆ ಇನ್ನೊಂದು ಮದುವೆ ಮಾಡಿಬಿಡು. ಅಲ್ಲಿಗೆ ಎಲ್ಲಾ ಮುಕ್ತಾಯವಾಗುತ್ತದೆ."

ಎಂದು ರೇಗಿ ರೂಮಿಗೆ ಹೊರಟುಹೋದನು. ಮೀನಾಕ್ಷಿ ಸಂದರ್ಭವನ್ನು ಊಹಿಸಿ ಮೆಲ್ಲನೆ ಜಾರಿಕೊಂಡಳು. ರಾಮಚಂದ್ರಯ್ಯ ಎಂದೂ ಆ ರೀತಿ ತಾಯಿಯನ್ನು ಗದರಿಸಿಕೊಂಡಿರಲಿಲ್ಲ. ಆ ದಿನ ಅವನ ಹೃದಯ ತಡೆಯದೇ ಹೋಯಿತು. ಜೊತೆಗೆ ಅವನ ಮನಸ್ಸಿನಲ್ಲಿ ತನ್ನ ವಿಷಯವಾಗಿ ಬಹಳ ಪಶ್ಚಾತ್ತಾಪವಿತ್ತು. ತಾನಲ್ಲವೇ ಆ ದುರ್ವಿಧಿಗೆ ಕಾರಣ. ಆ ಪಶ್ಚಾತ್ತಾಪ ಕೋಪದಲ್ಲಿ ಪರ್ಯವಸಾನ ಹೊಂದಿತು. ಮುಂದೆ ಏನು ನಡೆಯುವುದೆಂದೂ ಊಹಿಸಿದ್ದನು. ನಾಗವೇಣಮ್ಮ ತಲೆ ಚೆಚ್ಚಿಕೊಂಡರು.

"ನೀನೂ ನನ್ನ ಅನ್ನೋಕೆ ಶುರುಮಾಡ್ಬಿಟ್ಯೇನೋ ರಾಮು? ಅದೊಂದು ಬಾಕಿ ಇತ್ತು; ನಿನಗೆ ಮಕ್ಕಳಿಲ್ಲಾಂತ ಪೇಚಾಡಿಕೊಳ್ಳೋದೂ ತಪ್ಪೇನೋ? ಎಲ್ಲಾ ಹೇಳಿಕೊಟ್ಟಿದ್ದಾಳೆ ಅಂತ ಕಾಣುತ್ತೆ ಈ ಮಾಯಾಂಗನೆ? ನಿನಗೂ ಏನೋ ಮಾಡ್ಬಿಟ್ಟಿದ್ದಾಳೇ ಕಣೋ. ತಾಯಿ ಮಗನ್ನ ತೊರಸಬೇಕೂ ಅಂತ ಕಾದಿದ್ದಾಳೆ ಚಿನಾಲಿ" ಎಂದು ರಾಗ ತೆಗೆದು ಅತ್ತರು.

ತನ್ನ ಹೆಂಡತಿಯನ್ನು ಮಾಯಾಂಗನೆ, ಚಿನಾಲಿ ಎಂದು ಹೀನವಾಗಿ ಬೈದಿದ್ದನ್ನು ಕೇಳಿ ರಾಮಚಂದ್ರಯ್ಯನಿಗೆ ರೋಷವೇರಿತು. ಆದರೆ ತಾನು ಮತ್ತೆ ಮಾತನಾಡಿದರೆ ವಿಷಯ ವಿಕೋಪಕ್ಕೆ ಹೋಗುವುದೆಂದು ಸಹನೆ ತೆಗೆದುಕೊಂಡು ಹೊರಗೆ ಹೊರಟುಹೋದನು. ಮಗ ಹೊರಗೆ ಹೋದಮೇಲೆ ಆರ್ಭಟ ಮಾಡಿಕೊಂಡು ಸೊಸೆಯ ಮೇಲೆ ಉರಿದು ಬಿದ್ದರು.

"ಏನೇ, ಮನೇಲಿ ಕಲ್ತು ಬಂದ ಚಾಳೋಕೆಲ್ಲ ಇಲ್ಲಿ ಬಿಚ್ತಿದ್ದೀಯೇನೇ? ನಿನ್ನ ಚಾಲೋಕೆಲ್ಲ ನನ್ನ ಹತ್ತಿರ ನಡ್ಯೋದಿಲ್ಲ ಕಣೇ ಮೂದೇವಿ. ಏನು ಅವನಿಗೂ ಹೇಳಿಕೊಟ್ಟು ತಾಯಿಮಕ್ಕಳ್ನ ತೊರೆಸಬೇಕೆಂದು ನೋಡ್ತಿದೀಯೇನೇ? ಹಹ್ಹಹ್ಹ........ರೂಪು ನೋಡು, ರೂಪಾ. ಹುಟ್ದಾಗ್ಲೇ ತಾಯೀನ ಕಳ್ಕೊಂಡೆ. ತಂದೇನ ದೇಶಾಂತರ ಕಳಿಸ್ದೆ. ತಂದೆತಾಯಿಯ ಅಂಕೆಸಂಕೆ ಇಲ್ಲ. ನಿನಗೆ ಇನ್ನೇನು ಗುಣ ಬರುತ್ತೆ ಹೇಳು. ಸಧ್ಯ, ದೇವ್ರು ನಿನ್ನ ಹೊಟ್ಟೇಲಿ ಮಗೂಹಾಕಿದ್ರೆ

ಅದನ್ನ ಇನ್ನೆಷ್ಟು ಚೆನ್ನಾಗಿ ಬಾಳಿಸ್ಕೋತಾ ಇದ್ಯೋ? ಅದಕ್ಕೇ ಕೊಟ್ಟಿದ್ದನ್ನೂ ಕಿತ್ತುಕೊಂಡ. ಅದೇನು ಪಾಪ ಮಾಡಿ ಹುಟ್ಟಿದ್ಯೋ, ಅದೆಂಥಾ ಕಣ್ಣೋ ನಿಂದು? ದೃಷ್ಟಿಬಿದ್ದ ಮಕ್ಕಳೆಲ್ಲಾ ಸಾಯುತ್ತಲ್ಲೇ? ಸಾಕಿದವರ ಮನೆಗೆ ವಿಷಯಾಗಿ ಅವರ ಮನೆ ತೊಳೆದುಬಿಟ್ಟೆ. ಇನ್ನು ನಮ್ಮ ಮನೆ ತೊಳೆದು ಹಾಕೋಕೆ ಬಂದಿದ್ದೀಯ ಅನಿಷ್ಟ:..........." ಎಂದು ಪಟಪಟನೆ ಬೈದುಬಿಟ್ಟರು.

ಮೀನಾಕ್ಷಿಗೆ ಸಹನೆ ಹುಟ್ಟುಗುಣವಾಗಿದ್ದಿತು ಆದರೆ ತನ್ನನ್ನು ಬಂಜೆ ಎಂದಾಗ, ಅವಳಿಗೆ ಸಹಿಸಲಾರದ ಯಾತನೆ ಆಗುತ್ತಿದ್ದಿತು. "ದೇವರೇ ನಾನು ಮೊದಲಿನಿಂದಲೂ ಮಕ್ಕಳು, ಮಕ್ಕಳು ಎಂದು ಆಶೆಪಟ್ಟದ್ದಕ್ಕೆ ಈ ಶಿಕ್ಷೆ ಕೊಟ್ಟೆಯಾ? ಏನು ನಾನು ಅಷ್ಟು ಪಾಪ ಮಾಡಿ ಹುಟ್ಟಿದ್ದೇನೆಯೋ? ನನ್ನ ಕಣ್ಣು ತಗಲಿ ಮಕ್ಕಳೆಲ್ಲಾ ಸಾಯುವುದೇ?" ಎಂದು ಅತ್ತುಕೊಂಡಳು.

ಎಷ್ಟೋ ದಿನ ತಾನು ಹಾಕಿದ ಸ್ವೆಟ್ಟರನ್ನು ಎದೆಗಪ್ಪಿಕೊಂಡು, ಅರೆಕ್ಷಣ ಹುಟ್ಟಿ ಸತ್ತುಹೋದ ತನ್ನ ಹೊಟ್ಟೆಯ ಮಗುವಿಗಾಗಿ ಕಣ್ಣೀರಿಡುತ್ತಿದ್ದಳು 'ನನಗೊಂದು ಮಗುವಾದರೆ, ಇವರಿಗೆಲ್ಲ ಎಷ್ಟು ಆನಂದವಾಗುವುದು. ನಮ್ಮ ಅತ್ತೆ ಪುನಃ ನನ್ನನ್ನು ಆದರಿಸುವರು. ನನ್ನ ತಾಯಿ ನನ್ನನ್ನು ಊರಿಗೆ ಕರೆಸಿಕೊಳ್ಳುವರು. ಕಾಮಾಕ್ಷಿ ಓಡಿ ಬರುವಳು. ಚಂದ್ರು.........ಚಂದ್ರು..........ಏನು?........ ಹೇಗೋ?....ಛೆ......ನಮ್ಮ ಅತ್ತೆ ಮೊದಲಿನಂತೆ ನನ್ನನ್ನು ಪ್ರೀತಿಯಿಂದ ನೋಡಿಕೊಳ್ಳುವರು. ಅವರಿಗೆಲ್ಲ ಎಷ್ಟು ಸಂತೋಷ. ನನಗೆ ಮಕ್ಕಳು ಆಗುವುದೇ, .....ಆಗುವುದೇ?'

ಮೀನಳ ಮನಸ್ಸು ಹಗಲಿರುಳು ತಾಯಿಯ ಮನೆಯ ಕಡೆ ಹರಿಯುತ್ತಿದ್ದಿತು ಎಂದೋ ಸತ್ತ, ತಾನು ನೋಡದ ಕಾಮಾಕ್ಷಿಯ ಮಗುವಿಗಾಗಿ ಹೃದಯ ಗೋಳಿಡುತ್ತಿದ್ದಿತು. ಆ ಮಗುವಿನಲ್ಲಿ ಕಾಮಾಕ್ಷಿಯ ಮಗುವಿಗಿಂತ ಹೆಚ್ಚು ಪ್ರಿಯವಾಗಿ ಚಂದ್ರುವಿನ ಮಗುವನ್ನು ನೋಡುತ್ತಿದ್ದಳು. ಆ ಮಗುವಿನಲ್ಲಿ ಚಂದ್ರುವಿನ ಪ್ರತಿರೂಪವನ್ನು ಕಾಣುತ್ತಿದ್ದಳು. ........ ಚಂದ್ರು....ಚಂದ್ರುವಿನ ಮಗು.....ರಾಕ್ಷಸಿ

ಕಾಮಾಕ್ಷಿ....ಅವಳ ಹೊಟ್ಟೆಯಲ್ಲಿ ಚಂದ್ರುವಿನ ಮಗು....ಅಯ್ಯೋ ದೇವರೇ; ಎಂತಹ ಅನ್ಯಾಯ ? ಮೋಸ, ಶುದ್ಧ ಮೋಸ.........

ಮತ್ತೊಮ್ಮೆ ಹೃದಯ ಶೀನಿಯನ್ನು ನೆನೆಸಿಕೊಳ್ಳುತ್ತಿದ್ದಿತು. ತನ್ನ ಒಬ್ಬನೇ ತಮ್ಮ. ನಾನು ಪ್ರೀತಿಯಿಂದ ಎತ್ತಿಕೊಂಡು ಆಡಿಸಿದ 'ಶೀನಿ'ಯ ಅಕಾಲ ಸಾವನ್ನು ನೆನೆಸಿಕೊಂಡು ಬಿಕ್ಕಿಬಿಕ್ಕಿ ಅಳುತ್ತಿದ್ದಳು. 'ಶೀನಿಯು ಸತ್ತಿದ್ದಕ್ಕೆ ನಾನು ಕಾರಣವೇ ? ನನ್ನ ಕೆಟ್ಟ ನಕ್ಷತ್ರ ಅವನಿಗೆ ಸಾವು ತಂದಿತೇ ? ಅಯ್ಯೋ........ ಇದು ನಿಜವೇ ? ಇರಬಹುದು.... ನನ್ನ ಜನ್ಮ ಫಲ ಕೆಟ್ಟದ್ದೇ ಇರಬಹುದು. ಇಲ್ಲದಿದ್ದರೆ ನನ್ನ ಮಗುವೇ ಸಾಯುತ್ತಿತ್ತೇ ?' ಎಂದು ಮೀನಾಕ್ಷಿ ಕಣ್ಣೀರಿಡುತ್ತಿದ್ದಳು.

ಹದಿನೈದು ದಿವಸಗಳಲ್ಲೇ ರಾಮಚಂದ್ರಯ್ಯ ಗೇರುಸೊಪ್ಪೆಗೆ ಹೋಗಬೇಕಾಯಿತು. ಮೀನಾಕ್ಷಿಗೆ ಧೈರ್ಯಹೇಳಿ, ಅಲ್ಲಿಗೆ ಹೋಗಿ, ಒಂದೆರಡು ತಿಂಗಳಾದಮೇಲೆ ಮನೆಮಾಡಿ ಅವಳನ್ನು ಕರೆಸಿಕೊಳ್ಳುವುದಾಗಿ ಸಮಾಧಾನಮಾಡಿ ಹೊರಟುಹೋದನು.

ಮೀನಾಕ್ಷಿಗೆ ಆ ಎರಡು ತಿಂಗಳೂ ಮನೆ ನರಕವಾಯಿತು. ನಾಗವೇಣಮ್ಮ ಅವಳು ಹೊರಟುಹೋಗುವಳೆಂದು ಕೈಗೆ ಸಿಕ್ಕಿದಾಗಲೇ ಅವಳ ಮೇಲಿನ ಕಿಚ್ಚನ್ನು ತೀರಿಸಿಕೊಳ್ಳಬೇಕೆಂದು ನಿರ್ಧರಿಸಿದ್ದರು. ಒಂದು ದಿನ ರಾಮಚಂದ್ರಯ್ಯನಿಗೆ, ಅವರಿಗೆ ಹೇಳದೆ ಕಾಗದ ಬರೆದು ಹಾಕಿದ್ದಕ್ಕೆ ತಮ್ಮ ಮೇಲೆ ಇಲ್ಲಸಲ್ಲದ ಚಾಡಿ ಹೇಳಿ ಮಗನ ಮನಸ್ಸನ್ನು ಕೆಡಿಸಿ ಅವನು ತಮಗೆ ಕಾಗದ ಬರೆಯದಂತೆ ಮಾಡುತ್ತಿದ್ದಾಳೆಂದು ಕೈಗೆ ಸಿಕ್ಕಿದ ಕಸಪರಿಕೆಯನ್ನು ತಿರಿಗಿಸಿಕೊಂಡು ಹೆಣ್ಣುಮಗಳೆಂದೂ ನೋಡದೆ ರಪರಪನೆ ಹೊಡೆದು ಬಿಟ್ಟರು. ಮೀನಾ ಅಳಲಿಲ್ಲ ಕಿರಿಚಿಕೊಳ್ಳಲಿಲ್ಲ. ನಗುತ ನಗುತ ಎಲ್ಲ ಅನುಭವಿಸಿದಳು. ಕಡೆಗೊಂದು ದಿನ ಮೀನಾಕ್ಷಿಗೆ ಆ ನರಕದಿಂದ ಮುಕ್ತಿ ಸಿಕ್ಕಿತು. ರಾಕ್ಷಸಿ ಅತ್ತೆಯ ಕೈಯಿಂದ ತಪ್ಪಿಸಿಕೊಳ್ಳುವ ಸಂಯೋಗ ಒದಗಿತು. ರಾಮಚಂದ್ರಯ್ಯ ಗೇರುಸೊಪ್ಪೆಯಲ್ಲಿ ಮನೆಮಾಡಿ, ರಜ ತೆಗೆದುಕೊಂಡು ಬಂದು, ಮೀನಾಕ್ಷಿಯನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋದನು. ಮೀನಾಕ್ಷಿಯ ಸುಖಕ್ಕಾಗಿ ರಾಮಚಂದ್ರಯ್ಯ ತಾಯಿಯನ್ನು ತೊರೆದನು.

೬

ಗೇರಸೊಪ್ಪೆ ಸುಂದರವಾದ ಹಳ್ಳಿ. ನಿಸರ್ಗದ ಮಡಲಿನಲ್ಲಿ ಮಗುವಿನಂತೆ ಮಲಗಿದ್ದಿತು. ಎಲ್ಲಿಲ್ಲಿ ನೋಡಿದರೂ ಹಚ್ಚಹಸುರಿನ ಗಿಡ ಮರಗಳು ಬೆಟ್ಟಗಳ ಮೇಲೆ ಹಸುರು ಹೊದ್ದಿಕೆಯನ್ನು ಹಾಕಿದಂತೆ ಕಾಣುತ್ತಿದ್ದಿತು. ದೃಷ್ಟಿ ತಾಗುವವರೆವಿಗೆ ಕಾಣುವ ಬೆಟ್ಟದ ಸಾಲು. ಬೆಳ್ಮುಂಜುಮುಸುಕಿದ ಗಿರಿಶೃಂಗ. ಚೆಲ್ಮೋಡಮುಸುಕಿದ ಆಗಸ. ಎಲ್ಲ ಸುಂದರ ದೃಶ್ಯಗಳನ್ನೂ ತನ್ನ ಮಡಲಿನಲ್ಲಿ ಅಡಗಿಸಿಕೊಂಡಿದ್ದಿತು. ನಲಿದು, ಜಿಗಿದು, ಕುಣಿದು, ಕುಲಿಕಿ, ಒಲಿದು ಹರಿದುಬರುತ್ತಿದ್ದಳು, ಶರಾವತಿ. ಡಾಕ್ ಬಂಗಲೆಯ ಬಳಿ ನಿಂತರೆ ಶರಾವತಿಯು ಹಾಲಿನಂತಹ ಸೀರೆಯುಟ್ಟು, ಘನಗಂಭೀರವಾಗಿ, ರಾಣಿಯಠೀವಿಯಲ್ಲಿ, ಒಂಭೈನೂರು ಅಡಿಗಳ ಗಿರಿಶೃಂಗದಿಂದ ಜಿಗಿದು ಬೀಳುತ್ತಿದ್ದಳು. ಅವಳಿಗೆ ರಾಜಗಾಂಭೀರ್ಯ, ಘನತೆಗೌರವಗಳು ಲಭಿಸಿದ್ದುವು. ಒಂದು ಕಡೆ ಭುವನ ಮೋಹಿನಿ, ಧೀರವೀರಾಂಗನೆ ರಾಣಿಯು ಮೈವೆತ್ತಿ ಇಳಿದು ಬರುತ್ತಿದ್ದಳು. ಮತ್ತೊಂದು ಕಡೆ ಸುಲಲಿತ, ಲತಾಂಗಿಸುಕೋಮಲೆ ಹೆಣ್ಣಾಗಿ ನಲಿದು ಇಳಿಯುತ್ತಿದ್ದಳು. ಪಕ್ಕದಲ್ಲಿ ಘರ್ಜಿಸಿ ದುಷ್ಟದಮನಮಾಡುವ ಹೆಣ್ಣಿನಂತೆ ರಾಕ್ಷಸೀ ರೂಪವನ್ನು ಹೊತ್ತು, ಅಂಜುಕುಳಿಗಳನ್ನು ಹೆದರಿಸಿ, ವೀರರನ್ನು ಹುರಿದುಂಬಿಸಿ ಭೋರೆಂದು ಮೊರೆಯುತ್ತ ಭೂಮಿಗಿಳಿದು ಬರುತ್ತಿದ್ದಳು. ಅದರ ಪಕ್ಕದಲ್ಲಿ ಹೀಗೆಯೇ ನಾಲ್ಕು ರೂಪ ಹೊತ್ತ ಶರಾವತಿ, ಕನ್ನಡ ನಾಡಿಗೆ ವರದಾಯಿನಿಯಾಗಿ, ಕನ್ನಡ ತಾಯಿಯ ಕುವರಿಯಾಗಿ, ನಾಡಿಗೂ, ಜನರಿಗೂ, ಪ್ರೇಮಮಯೀ, ವಾತ್ಸಲ್ಯಮಯೀ, ತಾಯಿಯಾಗಿದ್ದಳು. ದಣಿದ ಹೃದಯಗಳಿಗೆ ಶಾಂತಿ ನೀಡುತ್ತಿದ್ದಳು. ಸೋತ ಕಣ್ಣುಗಳಿಗೆ ದೃಷ್ಟಿ ಇಡುತ್ತಿದ್ದಳು

ಎರಡು ವರ್ಷಗಳ ಹಿಂದೆ ಅಲ್ಲೊಂದು ವಿದ್ಯುಚ್ಛಕ್ತಿಯ ಕೇಂದ್ರವನ್ನು ಸ್ಥಾಪಿಸುವ ಕೆಲಸ ನಡೆದಿತ್ತು. ಸಾವಿರಾರು ಜನ ಆ ಕಾರ್ಯದಲ್ಲಿ ನೆರವಾದರು. ಆ ಸುಂದರ ನಾಡಿಗೆ ಮೀನಾಕ್ಷಿ ಹೋಗಿ ಸೇರಿಕೊಂಡಳು.

ರಾಮಚಂದ್ರಯ್ಯ ಬಾಡಿಗೆಗೆ ಹಿಡಿದಿದ್ದ ಮನೆ ಅಚ್ಚುಕಟ್ಟಾಗಿ ಸುಂದರವಾಗಿದ್ದಿತು. ಊರಿಗೆ ಸೇರಿದಂತೆ ಕೊಂಚ ದೂರದಲ್ಲಿ ನಾಲ್ಕೈದು ಮನೆಗಳಿದ್ದುವು. ಆ ಮನೆಗಳೂ ಒತ್ತೊತ್ತಾಗಿರದೆ ದೂರ ದೂರ ಕಟ್ಟಲ್ಪಟ್ಟಿದ್ದುವು. ಆ ಮನೆಗಳಲ್ಲಿ ಒಂದು ಅವರಿಗೆ ಸಿಕ್ಕಿದ್ದಿತು. ಮೀನಾಕ್ಷಿಯಂತಹ ಒಡತಿ ಬಂದ ಮೇಲೆ, ಹೊಸ ರೂಪ ಹೊತ್ತು ಮೆರೆಯಿತು.

ಮೀನಾಕ್ಷಿಗೆ ಮೊದಲು ಕೆಲವು ದಿವಸಗಳು ಬಹಳ ಉತ್ಸಾಹ ಭರಿತವಾಗಿ ಕಂಡವು. ಆದರೆ ರಾಮಚಂದ್ರಯ್ಯ ಹೊರಟುಹೋದ ಮೇಲೆ ಮನೆಯಲ್ಲಿ ಅವಳೊಬ್ಬಳೇ. ಅವಳೊಡನೆ ನಕ್ಕು ನಗಿಸಲು, ಹರಟೆ ಹೊಡೆಯಲು, ಸುಖದುಃಖಗಳಲ್ಲಿ ಭಾಗಿಯಾಗಲು ಮತ್ತೊಂದು ಜೀವಿ ಇಲ್ಲದೇ ಹೋದುದು ಮೀನಾಕ್ಷಿಯ ಬಾಳಿನಲ್ಲಿ ದೊಡ್ಡ ಕೊರತೆ ಯಾಯಿತು. ಆ ಮನೆ ಬಿಕೋ ಎನ್ನಿಸುತ್ತಿದ್ದಿತು. ಬಂದ ಒಂದು ತಿಂಗಳಲ್ಲೇ ಬೇಸರವಾಯಿತು. ಹಗಲೆಲ್ಲ ಒಂಟಿಯಾಗಿಯೇ ಕಾಲ ತಳ್ಳಬೇಕಾಗಿದ್ದಿತು. ನೆರೆಹೊರೆಯವರಲ್ಲಿ ಒಬ್ಬರು ಅಯ್ಯಂಗಾರರು ಮತ್ತಿಬ್ಬರು ಮೊದಲಿಯಾರರು. ವಿದ್ಯುಚ್ಛಕ್ತಿಯ ಕೇಂದ್ರ ಮೈಸೂರಿನ ಕೆಲಸಗಾರರನ್ನೆಲ್ಲ ಆ ಊರಿಗೆ ಆಕರ್ಷಿಸಿದ್ದಿತು. ಊರು ಆಗಲೇ ತುಂಬುತ್ತ ಬಂದಿದ್ದಿತು. ಬೇರೆ ಮನೆ ಎಲ್ಲಿಯೂ ಸುಲಭವಾದ ಬಾಡಿ ಗೆಗೆ ಸಿಕ್ಕುತ್ತಿರಲಿಲ್ಲ. ಮೀನಾಕ್ಷಿ ಮೊದಲಿನ ಮೀನಾಕ್ಷಿಯಾಗಿದ್ದರೆ ತಾನೇ ಮೇಲೆ ಬಿದ್ದು ನೆರೆಹೊರೆಯವರ ಸ್ನೇಹವನ್ನು ಸಂಪಾದಿಸಿ ಕೊಳ್ಳುತ್ತಿದ್ದಳು. ಆದರೆ ಎರಡು ವರ್ಷಗಳಿಂದೀಚಿನ ಮೀನಾಕ್ಷಿ ದುಃಖ ಜೀವಿ, ಏಕಾಂತ ಪ್ರಿಯೆಯಾಗಿ ಹೋಗಿದ್ದಳು.

ಸುಖವು ಶಾಶ್ವತವಲ್ಲ ಎಂದು ಸಾರಿ ಹೇಳುವಂತೆ ಆ ನಿಸರ್ಗ ಸೌಂದರ್ಯದ ಬೀಡಿಗೂ ದೈವ ಮಲೇರಿಯಾ ಕ್ರಿಮಿಗಳನ್ನು ತಂದಿದ್ದಿತು. ಅಲ್ಲಿ ನೆಲಸಿ ಆ ಸೌಂದರ್ಯವನ್ನು ಸವಿಯಬೇಕಾಗಿದ್ದರೆ, ಆ ಕ್ರಿಮಿಗಳನ್ನು ಎದುರಿಸಿ, ಗೆದ್ದು ಒಗ್ಗಿಸಿಕೊಳ್ಳಬೇಕಾಗಿದ್ದಿತು. ಅದರ ಧಾಳಿಗೆ ಮೈ ಬಗ್ಗಿಸಬೇಕಾಗಿದ್ದಿತು. ಬಂದ ಆರು ತಿಂಗಳಲ್ಲೇ ಮೀನಾಕ್ಷಿಗೆ ಮಲೇರಿಯಾ ಜ್ವರ ಅಂಟಿಕೊಂಡಿತು. ರಾಮಚಂದ್ರಯ್ಯ ತಾಯಿ

ಯನ್ನು ಕರೆಸುವ ಪುಣ್ಯ ಕೆಲಸ ಮಾಡಲಿಲ್ಲ. ತಾನೇ ಹೆಂಡತಿಯನ್ನು ತಾಯಿಯಂತೆ ನೋಡಿಕೊಂಡನು. ಮೀನಾಕ್ಷಿ ಸರ್ವಸ್ವತಂತ್ರಳಾಗಿ ಅತ್ತೆಯ ಹಂಗಿಲ್ಲದೆ ಅಲ್ಲಿ ಸ್ವರ್ಗಸುಖವನ್ನು ಕಂಡಳು. ಗಂಡನ ಸಾಮೀಪ್ಯದಲ್ಲಿ ಎಲ್ಲ ದುಃಖವನ್ನೂ ಮರೆಯತೊಡಗಿರುವೆನು ಎಂದು ಕೊಂಡಳು. ಆದರೂ ಬಹಳ ದಿವಸಗಳ ಕಾಲ ಅವಳ ಕೈಲಿ ಬೇಸರ ತಡೆಯಲಾಗಲಿಲ್ಲ. ಅವಳ ಮನಸ್ಸು ಹಿರಿಯರಿಗಿಂತ ಕಿರಿಯರ ಕಡೆ ಹರಿದು ಹೋಗುತ್ತಿದ್ದಿತು. ಪೆಪ್ಪರುಮೆಂಟು ಬಿಸ್ಕತ್ತುಗಳ ಆಶೆ ತೋರಿಸಿ ಮೀನಾಕ್ಷಿ ಮಕ್ಕಳನ್ನು ಅಯಸ್ಕಾಂತದಂತೆ ಸೆಳೆದುಕೊಂಡಳು. ಮೀನಾಕ್ಷಿ ಊರಿನ ಮಕ್ಕಳನ್ನೆಲ್ಲ ಒಗ್ಗಿಸಿಕೊಂಡಳು. ಒಂಟಿಬಾಳಿನ ದಾರುಣವಾದ ಯಾತನೆ, ಬೇಸರ ಅವಳಿಗೆ ಅಲ್ಲಿ ತೋರಿದ್ದಿತು. ಜಗಳವಾಗಲಿ, ಹೊಡೆಯಲಿ, ಬಡಿಯಲಿ, ಆ ಮನೆಯಲ್ಲಿ ಅತ್ತೆ ಎನ್ನುವ ಮತ್ತೊಂದು ಜೀವ ಜೊತೆಯಾಗಿತ್ತು ಆ ಹೊಡೆತ ತಿಂದೇ ಅವಳ ಬೇಸರ ಕಳೆಯುತ್ತಿತ್ತು. ಜೊತೆಗೆ ಗಾಣದ ಎತ್ತಿನ ದುಡಿತ.

ದಿನ ಕಳೆದಂತೆ ಮೀನಾಕ್ಷಿಗೆ ಮಕ್ಕಳ ಹುಚ್ಚು ಹೆಚ್ಚಾಯಿತು. ಅದಕ್ಕೆ ಸರಿಯಾಗಿ ರಾಮಚಂದ್ರಯ್ಯನೂ, ಯಾವಾಗಲೂ ಅವಳ ಬಾಳನ್ನು ಹಾಳುಮಾಡಿದೆನೆಂದು ಸಂಕಟಪಟ್ಟುಕೊಳ್ಳುತ್ತಿದ್ದನು. ಅವನ ಪಶ್ಚಾತ್ತಾಪ ಅವಳ ದುಃಖವನ್ನು ಶಮನ ಮಾಡದೆ, ದುಃಖದ ಉರಿಗೆ ತುಪ್ಪದ ಹೋಮ ಮಾಡಿದಂತಾಯಿತು. ಶಮನವಾಗಿದ್ದ ದುಃಖ ಭುಗಿಲ್ ಎಂದು ಹತ್ತಿಕೊಂಡು ಉರಿಯುತ್ತಿದ್ದಿತು. ಅದನ್ನು ಸಂಪೂರ್ಣವಾಗಿ ಶಮನ ಮಾಡಿಕೊಳ್ಳಲು ಮೀನಾಕ್ಷಿ ತನ್ನ ಏಕಾಂತ ವನ್ನು ಬದಿಗೊತ್ತಿ ಜನರ ಸ್ನೇಹವನ್ನು ಮಾಡಿಕೊಳ್ಳಲು ಬಯಸಿದಳು.

ಮೀನಾಕ್ಷಿ ಕೆಲವೇ ದಿವಸಗಳಲ್ಲಿ ಅದನ್ನು ಸಾಧಿಸಿಕೊಂಡಳು. ಅವಳು ದುಃಖ ಮರೆಯಲು ಮನೆಯಲ್ಲಿ ಇರುತ್ತಲೇ ಇರಲಿಲ್ಲ. ಅಕ್ಕ ಪಕ್ಕದವರ ಸ್ನೇಹ ಮಾಡಿಕೊಂಡು ಅವರ ಮನೆಗೆ ಹೋಗಿ ಅವರ ಮಕ್ಕಳನ್ನು ಆಡಿಸುತ್ತ ಕುಳಿತುಬಿಡುತ್ತಿದ್ದಳು. ಬೀದಿಯ ಮಕ್ಕಳಿಗೆಲ್ಲ ಮನೆಯಲ್ಲಿ ತಿಂಡಿ ಮಾಡಿಟ್ಟು, ದಿನವೂ ಹಂಚುತ್ತಿದ್ದಳು. ಆ ಹಸುಳೆ ಗಳೆಲ್ಲ 'ಅಮ್ಮ, ಅಮ್ಮ' ಎಂದುಕೊಂಡು ಅವರ ತಾಯಂದಿರ

ಮಾತಿಗೂ ಲಕ್ಷ್ಯ ಕೊಡದೆ ಇವಳ ಬಳಿ ಓಡಿ ಬರುತ್ತಿದ್ದುವು. ಮೀನಾಕ್ಷಿ ಅವರ ಹಿಗ್ಗಿನಲ್ಲಿ ಬೆರೆತು ಅರೆಕ್ಷಣ ಪ್ರಪಂಚ ಮರೆಯುತ್ತಿದ್ದಳು.

ಅಯ್ಯಂಗಾರರ ಮನೆಯಲ್ಲಿ ಎರಡು ಮಕ್ಕಳಿದ್ದರು. ಒಂದು ನಾಲ್ಕು ವರ್ಷದ ಗಂಡು ಮಗು ಮತ್ತೊಂದು ಮೂರು ವರ್ಷದ ಹೆಣ್ಣು ಮಗು. ಆ ಮಕ್ಕಳು ಮೀನಾಕ್ಷಿಯ ಬಳಿಗೆ ಓಡಿ ಬಂದುಬಿಡುತ್ತಿದ್ದುವು. ಅಯ್ಯಂಗಾರರ ತಾಯಿಯ ಮಡಿಯ ಪ್ರಭಾವ ಆ ಮಕ್ಕಳಿಗೂ ಬೀರಿ ಅವು ಯಾವಾಗಲೂ ಬೆತ್ತಲೆಯಾಗಿ ತಿರುಗಬೇಕಾದ ಪ್ರಸಂಗ ಬಂದಿದ್ದಿತು. ಮೀನಾಕ್ಷಿಗೆ ಆ ಬೆತ್ತಲೆಯ ಮಕ್ಕಳನ್ನು ನೋಡಿ ಕನಿಕರ ಉಂಟಾಗುತ್ತಿದ್ದಿತು. ನಾನಾಗಿದ್ದರೆ ಈ ಮಕ್ಕಳಿಗೆ ಬಣ್ಣಬಣ್ಣದ ಸಿಲ್ಕು, ಸ್ಯಾಟಿನ್ ಬಟ್ಟೆಗಳನ್ನು ಹೊಲಿಸುತ್ತಿದ್ದೆ. ಈ ವಯಸ್ಸಿನಲ್ಲಿ ಆ ಬಟ್ಟೆಗಳನ್ನೆಲ್ಲ ಹಾಕದೆ ಇನ್ನು ಯಾವಾಗ ಹಾಕಬೇಕು; ಪಾಪ, ಆ ಮಕ್ಕಳಿಗೆ ಒಂದು ಅಂಗಿ, ಒಂದು ಲಂಗದ ಹೊರತು ಬೇರೆ ಬಟ್ಟೆಗಳೇ ಇಲ್ಲವೆಂದು ಮರುಕಪಡುತ್ತಿದ್ದಳು. ಮೀನಾಕ್ಷಿ ಆ ಮಕ್ಕಳನ್ನು ಯಾವಾಗಲೂ ತನ್ನ ಮನೆಯೊಳಗೇ ಇಟ್ಟುಕೊಳ್ಳುತ್ತಿದ್ದಳು. ಎಷ್ಟೋ ಸಾರಿ ಅವಳ ಮನೆಯಲ್ಲೇ ಊಟವನ್ನೂ ಮಾಡಿಸಿ ಬಿಡುತ್ತಿದ್ದಳು. ಒಂದು ದಿನ ಮೀನಾಕ್ಷಿಯ ಆ ಸುಖಕ್ಕೂ ಕಲ್ಲುಬಿದ್ದಿತು.

ಮೊದಲಿಯಾರರ ಮನೆಯ ಮುದ್ದು ಮಗು ಒಂದು, ಮೀನಾಕ್ಷಿಯ ಮಮತೆಯನ್ನು ಸಂಪಾದಿಸಿಕೊಂಡಿದ್ದಿತು. ಆ ಮಗುವಿನ ತಿಳಿಬಾನಿನಂತಹ ನೀಲಿಯ ನೇತ್ರಗಳು, ಮಲ್ಲಿಗೆ ಮೊಗ್ಗಿನಂತಹ ಬಿಳಿಯ ಪಲ್ಲುಗಳು ಮೀನಾಕ್ಷಿಯ ಹೃದಯವನ್ನು ಸೆಳೆದುಕೊಂಡಿದ್ದವು. ಮೀನಾಕ್ಷಿಯ ಮಕ್ಕಳಿಲ್ಲದ ಹೃದಯಕ್ಕೆ ಎಲ್ಲ ಜಾತಿಯ ಮಕ್ಕಳೂ ಒಂದೇ ರೀತಿಯಾಗಿ ಕಾಣುತ್ತಿದ್ದುವು ! ಅವಳಿಗೆ ಕಾಣುತ್ತಿದ್ದುದು ಆ ಮಕ್ಕಳ ಮಂದಹಾಸ, ನಿಷ್ಕಪಟತ್ವ, ಅವರ ಹೃದಯದಲ್ಲಿ ಅಡಗಿಕೊಂಡಿದ್ದ ದೈವತ್ವ.! ಮೀನಾಕ್ಷಿ ಆ ಮಗುವನ್ನೂ ಅಯ್ಯಂಗಾರರ ಮನೆಯ ಮಕ್ಕಳಂತೆ ಆದರಿಸುತ್ತಿದ್ದಳು. ಯಾರಿಗೂ ಕಾಣದಂತೆ ಆ ಮಗುವಿಗೂ ಊಟ ಮಾಡಿಸಿಬಿಡುತ್ತಿದ್ದಳು.

ಒಂದು ದಿನ ಮಧ್ಯಾಹ್ನ ಅಯ್ಯಂಗಾರರ ತಾಯಿ ತಮ್ಮ

ಮೊಮ್ಮಗುವನ್ನು ಕರೆದುಕೊಂಡುಹೋಗಲು ನೇರವಾಗಿ ಮೀನಾಕ್ಷಿಯ ಮನೆ ಒಳಗಡೆ ಬಂದುಬಿಟ್ಟರು. ಅಡಿಗೆ ಮನೆಯ ಕಡೆ "ಏನೇ ಮೀನಾಕ್ಷಿ, ಊಟ ಆಯ್ತೇನೇ?" ಎಂದುಕೊಂಡು ಹೋದರು. ಮೀನಾಕ್ಷಿ ಅಲ್ಲಿರಲಿಲ್ಲ. ಹಿತ್ತಲ ಕಡೆ ಹೋಗಿದ್ದಳು. ಅಡಿಗೆಮನೆಯಲ್ಲಿ ಕಂಡ ದೃಶ್ಯದಿಂದ ಅಯ್ಯಂಗಾರರ ತಾಯಿ ಬೆಚ್ಚಿಬಿದ್ದರು. ಅವರ ಮೈ ಕೆಂಡದಂತಾಯಿತು. ಒಂದೇ ತಟ್ಟೆಯಲ್ಲಿ ಜಗಳವಾಡುತ್ತ ಊಟ ಮಾಡುತ್ತಿದ್ದು, ಸಲ್ಯಕ್ಕಾಗಿ ಕಾದಾಡುತ್ತಿದ್ದ ತಮ್ಮ ಮೊಮ್ಮಗುವನ್ನೂ ಮೊದಲಿಯಾರರ ಮನೆಯ ಮಗುವನ್ನೂ ನೋಡಿ ಆಕೆಗೆ ಸಿಟ್ಟು ನೆತ್ತಿಗೇರಿತು. "ಅಯ್ಯೋ! ಇದೇನು ಅನ್ಯಾಯವಾನೇ; ಮೀನಾಕ್ಷಿ ಎಲ್ಲಿ ಹೋದ್ಯೇ. ನಿಂಗೇನು ಬಂತೇ ಕೇಡು........ಅಯ್ಯೋ ಮಡಿ ಇಲ್ಲ ಮೈಲಿಗೆಯಿಲ್ಲ. ಮೊದಲಿಯಾರ್ರಮನೆ ಮಕ್ಕಳ್ನೆಲ್ಲ ಒಳಗೆ ಸೇರಿಸಿಕೊಳ್ತಾಳೆ........ಎಲ್ಲಿ ಹೋದ್ಯೇ?" ಎಂದು ಅಧಿಕಾರವಾಣಿಯಿಂದ ಆರ್ಭಟಿಸಿದರು. ಮೀನಾಕ್ಷಿ ಅವರ ಕೂಗಾಟ ಕೇಳಿ ಓಡಿಬಂದಳು. ಅವಳನ್ನು ನೋಡಿದಕೂಡಲೇ ಆಕೆಯ ಕೋಪ ಉದ್ರೇಕಗೊಂಡಿತು. "ನೋಡೇ....ಅಲ್ನೋಡೇ. ನನ್ನ ಮೊಮ್ಮಗನ ಜಾತಿ ಕಡಿಸಿದೆಯಲ್ಲೇ. ಮೊದಲಿಯಾರ್ರಮನೆ ಮಗೂಜೊತೆ ಅನ್ನ ತಿಂದಿದಾನಲ್ಲೇ....ಎಂಜಲ್ ತಟ್ಟೇಲಿ. ಮಡಿ ಇಲ್ಲ ಮೈಲಿಗೆ ಇಲ್ಲ. ಅಯ್ಯೋ....ಇದೇನೇ ಅನ್ಯಾಯ ....ನಿನಗೇನ್ ಬಂತೇ ಕೇಡು....ಶೂದ್ರ ಹೊಲೇರ್ನ, ಎಲ್ಲಾನೂರ್ ಮನೇಗೆ ಸೇರಿಸ್ತೀಯಲ್ಲೇ....ನೀನು ಬ್ರಾಂಬ್ರವಳಾಗಿ ಹಾಳಾದೆ" ಎಂದು ಒಳಗೆ ನುಗ್ಗಿ ತಮ್ಮ ಮೊಮ್ಮಗನ ಬೆನ್ನಿನ ಮೇಲೆ ಗುದ್ದಿ ಆ ಮೊದಲಿಯಾರರ ಮಗುವನ್ನು ದರದರನೆ ಎಳೆದುಕೊಂಡು ಬಂದು ಹೊರಗೆ ಹಾಕಿ, ತಮ್ಮ ಮೊಮ್ಮಗನ್ನ ಎತ್ತಿಕೊಂಡು ಮೀನಾಕ್ಷಿಯ ಕಡೆ ತಿರುಗಿ,

"ಇನ್ನೊಂದು ಸಾರಿ ನಿನ್ನ ಮನೇಗೆ ಕಾಲಿಡೊಲ್ಲ. ನನ್ನ ಮೊಮ್ಮಕ್ಕಳ್ನ ಏನಾದ್ರು ಕರೆದ್ಯೋ ನಿನ್ನ ಗ್ರಹಚಾರ ಬಿಡಿಸಿಬಿಡ್ತೀನಿ. ನಿನ್ನ ಬ್ರಾಹ್ಮಣ್ಯ ಹಾಳಾಗ ....ಇನ್ನೊಂದಿನ ಆ ಮೊದ್ಲಿಯಾರರ ಮನೆ ಮಗೂನ ಮನೆಗೆ ಸೇರಿಸಿದ್ದು ನೋಡ್ದೆ, ನಿನ್ನ ಗತಿ ಏನಾಗುತ್ತೋ ನೋಡು. ಕೇರಿಗೆಲ್ಲಾ ಹೇಳ್ಕೊಂಡು ಬರ್ತೀನಿ ನಿನ್ನ ಅನಾಚಾರಾನ.

ಮಾಂಸಾತಿನ್ನೋ ಜಾತೀ ಮಕ್ಕಳ್ನೆಲ್ಲ ಮುಟ್ಕೋತಾಳೆ. ನೆರಮನೇಲಿ ಒಂದು ತಂಬಿಗೆ ನೀರು ಸಿಕ್ಕದ ಹಾಗೆ ಮಾಡ್ತೀನಿ....ಮೊದ್ಲು. ಆ ಎಂಜ್ಲೆಲ್ಲ ಎತ್ತಿಹಾಕಿ ಗೋಮಯಮಾಡಿ ಸ್ನಾನಮಾಡು. ಇನ್ನು ನನ್ನ ಮಗೂಗೆ ಪಂಚಗವ್ಯ ಕುಡಿಸಬೇಕು . ಹಾಳ್ಜಾತಿ....ಹಾಳ್ಜನ....ಇವ್ರ ಅನಾಚಾರಕ್ಕೆ ಪಂಕ್ತಿ ಬಿದ್ಹೋಗ" ಎಂದು ಆರ್ಭಟಿಸುತ್ತ ಹೊರಟು ಹೋದರು. ಮೀನಾಕ್ಷಿಗೆ ಏನೇನೋ ಹೇಳಬೇಕನ್ನಿಸಿತು. ಆದರೆ ಆಕೆಯ ರುದ್ರಾವತಾರ ನೋಡಿ ಅವಳಿಗೆ ಹೆದರಿಕೆಯಾಯಿತು. ಅವಳಿಗೆ ಆಕೆಯ ಬಾಯಿಹಾಳಿತನ ಕಂಡು, ಕೇಳಿ ಪರಿಚಯವಾಗಿದ್ದಿತು. ಮೀನಾಕ್ಷಿ ಸುಮ್ಮನಾಗಿಬಿಟ್ಟಳು. ಮೊದಲಿಯಾರರ ಮಗು ಅರಚಿಕೊಂಡು ಅಳುತ್ತಾ ಬೀದಿಗೆ ಓಡಿತು. ಮೀನಾಕ್ಷಿಯ ಕರಳು ಮಿಡಿಯಿತು. ಆ ಮಗುವಿನ ಹಿಂದೆ ಹೋಗಿ ಅದನ್ನು ಸಮಾಧಾನ ಪಡಿಸುವಷ್ಟು ಧೈರ್ಯವೂ ಇಲ್ಲದೇ ಹೋಯಿತು, ಅವಳಿಗೆ. ಅವಳಿಗೆ ಅತಿಯಾದ ದುಃಖವಾಯಿತು ತನ್ನನ್ನು ಬೈದರೆಂಬ ದುಃಖಕ್ಕಿಂತ ಇನ್ನು ಆ ಮಕ್ಕಳು ತನ್ನ ಮನೆಗೆ ಬರುವಂತಿಲ್ಲವೆಂಬ ದುಃಖ ಹೆಚ್ಚಾಯಿತು. ಮೀನ ಅತ್ತುಕೊಂಡಳು. ಅವಳು ಎಣಿಸಿದ್ದಂತೆ ಮಾರನೆಯ ದಿನದಿಂದ ಆ ಮಕ್ಕಳು ಒಬ್ಬರೂ ಅವಳ ಮನೆಗೆ ಬರಲಿಲ್ಲ. ಮೀನಾಕ್ಷಿಗೂ ಆ ಮೊದಲಿಯಾರರ ಮನೆಯ ಮಗುವನ್ನು ಮತ್ತೆ ಕರೆಯುವ ಧೈರ್ಯವಾಗಲಿಲ್ಲ.

ಹೀಗೇ ಒಂದೂವರೆವರ್ಷ ಕಳೆದು ಹೋಯಿತು. ರಾಮಚಂದ್ರಯ್ಯ ತಾಯಿಯನ್ನು ಮನೆಗೆ ಕರೆಸಿಕೊಳ್ಳುವ ಸಾಹಸಕ್ಕೆ ಹೋಗಲಿಲ್ಲ. ತಾನೇ ಒಂದೆರಡು ಸಾರಿ ಊರಿಗೆ ಹೋಗಿ ನೋಡಿಕೊಂಡು ಬಂದನು. ಮೀನಾಕ್ಷಿಯ ಮನಸ್ಸು ತೀರ ರೋಸಿಹೋಗಿದ್ದಿತು. ಅವಳು ತನ್ನ ಅತ್ತೆಯನ್ನು ಆದಷ್ಟು ನೋಡಕೂಡದೆಂದು ನಿರ್ಧರಿಸಿಬಿಟ್ಟಿದ್ದಳು. ಒಂದು ವೇಳೆ ಅವಳು ಸೇಡನ್ನು ಬಯಸದೆ ಅತ್ತೆಯನ್ನು ನೋಡಬೇಕೆಂದು ಬಯಸಿದ್ದರೂ ರಾಮಚಂದ್ರಯ್ಯ ಆ ಸಲಹೆಗೆ ಎಂದೂ ಒಪ್ಪುತ್ತಿರಲಿಲ್ಲ.

ರಾಮಚಂದ್ರಯ್ಯ ಕ್ಲಬ್ಬಿನ ವಿನೋದದಲ್ಲಿ, ಕಾಡುಹರಟೆಯಲ್ಲಿ, ಇಸ್ಪೀಟಿನಲ್ಲಿ ಮೈಮರೆಯುತ್ತಿದ್ದನು. ಆದರೂ ಮನಸ್ಸು ಮೀನಾಕ್ಷಿಯ

ನೆನಪಿನಿಂದ ಅವನನ್ನು ಎಚ್ಚರಿಸುತ್ತಿದ್ದಿತು. ಮೀನಾಕ್ಷಿ ಮನೆಯಲ್ಲಿ ಒಬ್ಬಳೇ ಎಂದು ಎಂಟು ಘಂಟೆಗೆಲ್ಲಾ ಮನೆಗೆ ಬರುತ್ತಿದ್ದನು. ಬಂದ ಮೇಲೆಕೊಂಚ ಹೊತ್ತು ಹರಟೆ ಹೊಡೆದು ಸುಸ್ತಾಗಿ ಮಲಗಿಬಿಡು ತ್ತಿದ್ದನು. ಮತ್ತೆ ಬೆಳಗ್ಗೆ ಎಂಟು ಘಂಟೆಗೆ ತಲೆತಿನ್ನುವ ಕೆಲಸ. ಅಷ್ಟು ಹೊತ್ತಿಗೇ ಎದ್ದು ಆಫೀಸಿಗೆ ಹೊರಟುಹೋಗುತ್ತಿದ್ದನು. ಮತ್ತೆ ಮೀನಾಕ್ಷಿ ಒಂಟಿ ಬಾಳು ಪ್ರಾರಂಭವಾಗುತ್ತಿದ್ದಿತು.

ಮೀನಾಕ್ಷಿಗೆ ಈಗ ಆ ಮಕ್ಕಳ ಸುಖವೂ ಇರಲಿಲ್ಲ. ಆ ಮಕ್ಕಳ ತಾಯಂದಿರು, ತಮ್ಮ ಮಕ್ಕಳಿಗೆ ಒಂದು ನೆಗಡಿ ಬರಲಿ, ಕೆಮ್ಮುಬರಲಿ, ಅಜೀರ್ಣವಾಗಲಿ, "ಆ ಹಾಳಾದವಳ ಮನೆಗೆ ಹೋಗಬೇಡ ಅಂದ್ರೆ ಕೇಳೊಲ್ಲ. ಅದೇನು ಸಾಯ್ತಾಳಮ್ಮ ಮಕ್ಳು ಮಕ್ಳು ಅಂತ. ಅವರಿಗೆ ಏನೇನು ಕೊಟ್ಟಿಡ್ತಾಳೋ. ಅವಳ ಕಣ್ಣುತಗಲಿ ನನ್ನ ಮಗೂಗೆ ಹೀಗಾಯ್ತು. ಇವಳಿಗೆ ಮಕ್ಕಳಿಲ್ಲದ ಸಂಕಟ ನಾವು ಅನುಭವಿಸಬೇಕು. ಇವಳ ಕಣ್ಣು ಇಂಗ್ಹೋಗ" ಎಂದು ಶಾಪ ಹಾಕುತ್ತಿದ್ದರು. ಮೀನಾಕ್ಷಿಗೆ ಬೇಕಾದವರು, ಅವಳ ಗುಣ ತಿಳಿದುಕೊಂಡಿದ್ದವರು ಎರಡು ನೂರು ಸಾರಿ ಈ ವಿಚಾರವನ್ನು ಮೀನಾಕ್ಷಿಗೆ ತಿಳಿಸಿದರು. ಮಕ್ಕಳೂ ತಾಯಂದಿರಿಗೆ ಹೆದರಿಕೊಂಡು ಅಲ್ಲಿಗೆ ಬರುತ್ತಿರಲಿಲ್ಲ. ಈ ರೀತಿಯಲ್ಲಿ ಮತ್ತೊಂದು ಬೀದಿಯ ಮಕ್ಕಳ ಸಹವಾಸವೂ ಅವಳಿಗೆ ತಪ್ಪಿ ಹೋಯಿತು. ಮೀನಾಕ್ಷಿ ಜನಗಳ ಹುಚ್ಚಿಗೆ ನಕ್ಕು ಸುಮ್ಮನಾದಳು.

ಮೀನಾಕ್ಷಿಯ ಸಂಸಾರ ಕುಂಟುತ್ತ ಸಾಗಿತ್ತು. ತಿಂಗಳಾದ ಮೇಲೊಂದು ತಿಂಗಳು ಉರುಳಿಹೋಗುತ್ತಿದ್ದಿತು. ರಾಮಚಂದ್ರಯ್ಯನ ಮತ್ತು ಅವಳ ಸಂಬಂಧ ಕೇವಲ ವ್ಯವಹಾರಿಕವಾಗಿ ನಡೆದುಬಂದಿದ್ದಿತು. ಮೀನಾಕ್ಷಿಗೆ ಆ ಒಂಟಿಬಾಳು ಬೇಸರವಾಗುತ್ತ ಬಂದಿದ್ದಿತು. ಅವಳು ಕೈಹಿಡಿದ ಗಂಡ ಅವಳು ಬಯಸಿದ ಸುಖವನ್ನು ಕೊಡಲಾರದೇ ಹೋದನು. ಅವಳ ವೈವಾಹಿಕ ಜೀವನ ನೀರಸವಾಯಿತು. ಅವಳಲ್ಲಿ ಅತೃಪ್ತಿ, ಅಸಹನೆಗಳು ಹುಟ್ಟಿಕೊಂಡವು. ರಾಮಚಂದ್ರಯ್ಯನ ಮುಖ ಕಂಡರೆ ಮೀನಾಕ್ಷಿಗೆ ಅಸಹ್ಯವಾಗತೊಡಗಿದ್ದಿತು. ಅವನ ಸಾಮೀಪ್ಯ, ಸಂಪರ್ಕ ಮುಳ್ಳಿನಿಂದ ಚುಚ್ಚಿದಂತಾಗುತ್ತಿದ್ದಿತು.

ಅವಳ ಹೃದಯದಲ್ಲಿ ಸೇಡಿನ ಜ್ವಾಲೆ ಏಳುತ್ತಿದ್ದಿತು. ಷಂಡನಾದ, ನಿರ್ವೀರ್ಯನಾದ ಗಂಡನನ್ನು ನೋಡಿ ಮೀನಾಕ್ಷಿಯ ಸ್ತ್ರೀತ್ವ ಕೆರಳುತ್ತಿದ್ದಿತು. ಆದರೆ....ಸಮಾಜಬಂಧನ....ಹಿಂದೂ ಹುಡುಗಿಯ ರಕ್ತ.... ಅಂಧಶ್ರದ್ಧೆ....ಕುರುಡು ಧರ್ಮ ಅವಳನ್ನು ಮತ್ತೆ ಮುಳ್ಳುಗಳ ಬಿಗಿತದಿಂದ ಬಿಗಿಯುತ್ತಿದ್ದಿತು. ಮೀನಾಕ್ಷಿ ಆ ನೋವಿಗೆ, ಆ ಬಂಧನಕ್ಕೆ ಶರಣುಹೋಗುತ್ತಿದ್ದಳು.

ರಾಮಚಂದ್ರಯ್ಯ ತನ್ನ ಗತಿಸಿದ ಪುರುಷತ್ವವನ್ನು ಮತ್ತೆ ಪಡೆದುಕೊಳ್ಳಲು ವಿಶ್ವಪ್ರಯತ್ನ ಮಾಡುತ್ತಿದ್ದನು. ಆದರೆ ರಾಮಚಂದ್ರಯ್ಯನ ಸಾಮೀಪ್ಯದಲ್ಲಿ ಮೀನಾಕ್ಷಿ ಕಲ್ಲೆದೆಯವಳಾಗುತ್ತಿದ್ದಳು. ಅವಳ ಸೌಂದರ್ಯದರ್ಶನದಿಂದ, ಆ ಕರುಣಾಪೂರಿತ ಕಣ್ದೃಷ್ಟಿಯ ಮಡಿಲಲ್ಲಿ ರಾಮಚಂದ್ರಯ್ಯ ಸೋತುಹೋಗುತ್ತಿದ್ದನು. ಅವನಲ್ಲಿ ಏಳುತ್ತಿದ್ದ ಕಿಚ್ಚು, ಕ್ರೋಧ, ಅತೃಪ್ತಿ, ಆ ನಿಶ್ಕಪಟ ಕರುಣಾಪೂರಿತ ಸುಂದರ ಮುಖವನ್ನು ನೋಡಿ ತಣ್ಣಗಾಗುತ್ತಿದ್ದಿತು. ಹೊಡೆಯಬೇಕೆಂದು ಅವಳ ಮೈಯನ್ನು ಜಜ್ಜಬೇಕೆಂದು ಎತ್ತಿದ ಕೈ ಬಿದ್ದುಹೋಗುತ್ತಿದ್ದಿತು. ರಾಮಚಂದ್ರಯ್ಯ ನಾಚಿಕೆಯಿಂದ, ಪಶ್ಚಾತ್ತಾಪದಿಂದ ಹಿಂದೆ ಸರಿಯುತ್ತಿದ್ದನು. ಮೀನಾಕ್ಷಿ ಆ ವಿಷಮಯ ರಾತ್ರಿಗಳಲ್ಲಿ ಅತೃಪ್ತಿಯ ನಿಟ್ಟುಸಿರನ್ನು ಬಿಡುತ್ತಿದ್ದಳು. ಆದರೆ ರಾಮಚಂದ್ರಯ್ಯ ಮತ್ತೆ ಹೊಸ ಮನುಷ್ಯನಾಗುತ್ತಿದ್ದನು. ಅಳಿದು ಉಳಿದಿದ್ದ ತನ್ನ ಪ್ರೇಮದಾಟಗಳಿಂದ ಮೀನಾಕ್ಷಿಯ ಮನಸ್ಸನ್ನು ರಮಿಸಲು ಯತ್ನಿಸುತ್ತಿದ್ದನು. ಅವಳಲ್ಲಿಅತಿಯಾದ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದನು.

ಮೀನಾಕ್ಷಿಯ ಇಂತಹ ಅಶಾಂತ, ಅತೃಪ್ತ ಬಾಳಿನಲ್ಲಿ ಮತ್ತೆ ಒಂದು ಕಾಮಪೀಡೆ ಕವಿಯಿತು. ಆ ಪ್ರಸಂಗದಿಂದ ಅವಳು ಮನುಷ್ಯ ಕುಲವನ್ನೇ ದ್ವೇಷಿಸುವಷ್ಟು ಪರಿಣಾಮವಾಯಿತು. ಸಮಾಜ ಅವಳ ಕಣ್ಣಿಗೆ ಅತಿ ಕ್ರೂರವಾಗಿ ಕಂಡಿತು. ಅದರ ರೀತಿನೀತಿಗಳ ಅನುಭವ ಯಮಯಾತನೆಯ ಅನುಭವವಾಗಿ ಕಂಡಿತು.

ಆ ಬೀದಿಯಲ್ಲೇ ನಾಲ್ಕನೆಯ ಮನೆಯಲ್ಲಿ ವಾಟರ್ ವರ್ಕ್ಸಿನ ಒಬ್ಬ ಗುಮಾಸ್ತರು ವಾಸವಾಗಿದ್ದರು. ಅವರಿಗೆ ಮುತ್ತಿನಂತಹ ಮೂರು

ಮಕ್ಕಳು. ಒಂದು ದಿನ ಆಡುವುದಕ್ಕೆ ಹೋಗಿದ್ದ ಅವರ ಕಡೆಯ ಮಗುವಿನ ಬೆನ್ನಿಗೆ ಯಾರೋ ಗೇರುಬೀಜ ಸುಟ್ಟಿದ್ದರು! ಮಗು ಅರಚುತ್ತಾ ಮನೆಗೆ ಓಡಿ, ನೋವಿನಿಂದ ಕಿರುಚಿ ಹೊರಳಾಡಿತು. ಅದರ ತಾಯಿಗೆ ಕರುಳಿನ ಸಂಕಟ ತಡೆಯಲಾಗಲಿಲ್ಲ. ತಕ್ಷಣ ಆಕೆಯ ಸಂಶಯ 'ಬಂಜೆ' ಮೀನಾಕ್ಷಿಯ ಮೇಲೆ ಹರಿಯಿತು. ಆ ವಿಚಾರದಲ್ಲಿ ಸಂಶಯವೇ ಉಳಿಯಲಿಲ್ಲ. ಆ ಮಗುವನ್ನು ಎತ್ತಿಕೊಂಡು ಮೀನಾಕ್ಷಿಯ ಮನೆಗೆ ಬಂದು ಅವಳಿಗೆ ಹಿಡಿಶಾಪಹಾಕಿ ಜನ್ಮ ಜಾಲಾಡಿಸಿಬಿಟ್ಟರು. ಆ ದಿನ ಗ್ರಹಚಾರ! ಅವರ ಮನೆಯ ಹಜಾರದ ಟೇಬಲ್ಲಿನ ಮೇಲೆ ತಟ್ಟೆಯಲ್ಲಿ ರಾಮಚಂದ್ರಯ್ಯ ಮೀನಾಕ್ಷಿಗೆಂದು ತಂದುಕೊಟ್ಟಿದ್ದ ಗೇರು ಹಣ್ಣುಗಳು ಆಕೆಯ ಕಣ್ಣಿಗೆ ಬಿದ್ದಿತು! ಮನೆ ಮನೆಗೂ ಹೋಗಿ ಅವಳ ಕುಲದ ಅವಹೇಳನ ಮಾಡಿ ಬಂದರು. ಈ ಪ್ರಸಂಗ ಅಯ್ಯಂಗಾರರ ತಾಯಿಯ ನಾಲಿಗೆ ಉದ್ದಮಾಡಿತು ಮೀನಾಕ್ಷಿಗೆ ಅಪಾರವಾದ ಯಾತನೆಯಾಯಿತು. ಅವಳ ಮನಸ್ಸಿನ ಮೇಲೆ ಅದೊಂದು ಮಾಯಲಾರದ ಘಾಯವಾಯಿತು. ಮೀನಾ ಈ ಅಪವಾದದಿಂದ ತಲ್ಲಣಿಸಿಹೋದಳು. ಆ ರಾತ್ರಿ ರಾಮಚಂದ್ರಯ್ಯ ಬಂದ ಮೇಲೆ ಮೀನಾಕ್ಷಿ ತನ್ನ ದುಃಖವನ್ನು ತೋಡಿಕೊಂಡು ಎಳೆಯ ಮಗುವಿನಂತೆ ಅತ್ತುಬಿಟ್ಟಳು.

"ನನಗೆ ಮನಸ್ಸೇ ಕೆಟ್ಟುಹೋಗಿದೆ. ನಾವು ಈ ಊರನ್ನು ಬಿಟ್ಟು ಹೊರಟುಹೋಗೋಣ. ನನಗೆ ತುಂಬ ಸಂಕಟವಾಗುತ್ತಿದೆ."

"ಎಲ್ಲೀಗೆ ಹೊಗೋದು ಮೀನ. ಎಲ್ಲೀಗೆ ಹೋದರೆ ತಾನೆ ಇಂತಹ ಕೆಲಸಸಿಕ್ಕುತ್ತೆ. ನನಗೆ ಇಲ್ಲಿ ಒಳ್ಳೇ ಛಾನ್ಸ್ ಸಿಕ್ಕುವಹಾಗಿದೆ. ಏನು ಮಾಡೋದು ಮೀನ. ಕೊಂಚ ತಡೆದುಕೊಳ್ಳಬೇಕು. ನಿನ ಗೋಸ್ಕರ ಅಮ್ಮನನ್ನು ಬಿಟ್ಟು ಇಲ್ಲಿಗೆ ಬಂದೆ. ಇಲ್ಲಿ ಈ ಗೋಳು. ಅವರು ಆಡಿದರೆ ಆಡಿಕೊಳ್ಳಲಿ. ನೀನು ಒಬ್ಬರನ್ನೂ ಮಾತನಾಡಿಸ ಬೇಡ"

"ಹ್ಞ...... ಮಾತನಾಡಿಸಬೇಡ. ನಿಮಗೇನು ಹೇಗೊ ಹೊತ್ತು ಕಳೆದು ಹೋಗುತ್ತದೆ. ನನಗೆ ತಾನೇ. ಮನೆಯಲ್ಲಿ ಒಬ್ಬಳೇ ಗೋಡೆಯ

ಜೊತೆಯಲ್ಲಿ ಮಾತನಾಡಬೇಕು. ಮನೆಯಲ್ಲಿ ಏನು ಎಂದು ಕೇಳುವವರು ದಿಕ್ಕಿಲ್ಲ........" ಮೀನಾಕ್ಷಿಗೆ ಹೇಳುತ್ತ ಹೇಳುತ್ತ ಕಣ್ಣೀರು ತುಂಬಿತು. ಕಂಠ ಗದ್ಗದವಾಯಿತು. 'ಏನು' ಎಂದು ಕೇಳುವವರು ದಿಕ್ಕಿಲ್ಲ ಎಂದು ನೊಂದುಕೊಳ್ಳುವುದಕ್ಕಿಂತ 'ಅಮ್ಮಾ' ಎನ್ನುವ ಒಂದು ಮಗು ಇಲ್ಲದೆ ಹೋಯಿತಲ್ಲಾ ಎಂದು ಅವಳಿಗೆ ದುಃಖ ವಾಗಿದ್ದಿತು. ಆ ಭಾವ ರಾಮಚಂದ್ರಯ್ಯನಿಗೆ ಅರ್ಥವಾಯಿತು. ಅವನ ಮುಖ ಕಪ್ಪಿಟ್ಟಿತು. ಅವನ ಉತ್ಸಾಹಭಂಗವಾಯಿತು.

"ಏನು ಮಾಡಲಿ ಮೀನ....ಎಲ್ಲ ನನ್ನ ತಪ್ಪು. ನಿನ್ನ ಕೈ ಹಿಡಿದು ನಿನ್ನನ್ನು ಹಾಳುಮಾಡಿದೆ. ನನ್ನ ಕರ್ಮ. ನನ್ನ ಗ್ರಹಚಾರ ನನ್ನನ್ನು ಕಾಡಿಸುತ್ತಿದೆ. ನನ್ನಿಂದ ನಿನ್ನ ಬಾಳು ಹಾಳಾಯಿತು. ನಿನಗೊಂದು ........"

ಮೀನಾಕ್ಷಿ ದುರುಗುಟ್ಟಿಕೊಂಡು ಗಂಡನ ಮುಖ ನೋಡಿದಳು. ರಾಮಚಂದ್ರಯ್ಯ ಹೊರಗೆ ಹೊರಟುಹೋದನು. ಅವಳ ಹೃದಯದ ಸಂಕಟ ಅವನಿಗೆ ಅರಿವಾಗಿದ್ದಿತು.

ಎರಡು ಮೂರು ದಿವಸಗಳು ಕಳೆಯಿತು. ರಾಮಚಂದ್ರಯ್ಯ ಸಾಯಂಕಾಲದ ಹೊತ್ತು ಆರು ಘಂಟೆಗೆಲ್ಲಾ ಮನೆಗೆ ಬಂದು ಬಿಡು ತ್ತಿದ್ದನು. ಮೀನಾಕ್ಷಿಯೊಡನೆ ಸಂತೋಷದಿಂದ ಮಾತನಾಡಲು ಹವಣಿಸುತ್ತಿದ್ದನು. ಮೀನಾಕ್ಷಿ ಯಾಂತ್ರಿಕವಾಗಿ ತನ್ನ ಕೆಲಸ ನಡೆಸಿ ಕೊಂಡು ಹೋಗುತ್ತಿದ್ದಳು. ಗಂಡನಿಗೆ ಬಿಸಿಬಿಸಿಯಾದ ರುಚಿಯಾದ ತಿಂಡಿಯನ್ನು ಮಾಡಿಕೊಡುತ್ತಿದ್ದಳು. ಕಾಫಿ ತಂದುಕೊಡುತ್ತಿದ್ದಳು. ಆದರೆ ಅವಳ ಮುಖದ ಮೇಲೆ ನಗು ಕಾಣುತ್ತಿರಲಿಲ್ಲ. ಒಂದು ದಿನ ರಾಮಚಂದ್ರಯ್ಯ ಧೈರ್ಯ ಮಾಡಿ ಕೇಳಿದನು.

"ಮೀನಾ, ಸಾಯಂಕಾಲದ ಹೊತ್ತು ಹೊರಗಡೆ ತಿರುಗಾಡಿ ಕೊಂಡು ಬರೋಣ. ಮನೆಯಲ್ಲೇ ಕೂತು ಬೇಸರವಾಗುತ್ತದೆ. ಅಲ್ಲವೇ ?"

ಮೀನಳಿಗೆ ಹೆದರಿಕೆಯಾಯಿತು. ಅವಳು ಏನೂ ಹೇಳದಾದಳು. ಅವನೊಡನೆ ಅವಳು ಎಂದೂ ಹೆಚ್ಚಾಗಿ ಹೊರಗಡೆ ತಿರುಗಾಡಲು

ಹೋಗಿರಲಿಲ್ಲ. ಅಕ್ಕಪಕ್ಕದ ಜನ ಏನೆಂದುಕೊಂಡಾರು ? ತಮ್ಮಿಬ್ಬರ ಸರಿಯಲ್ಲದ, ಆಭಾಸದ ಜೋಡಿಯನ್ನು ನೋಡಿ ಅವರೆಲ್ಲ ನಗುವುದಿಲ್ಲವೇ ? ಮೀನಾಕ್ಷಿಯ ಹೃದಯ ತಪ್ಪನ್ನು ನೆರೆಹೊರೆಯವರ ಮೇಲೆ ಹಾಕಿತು. ಆದರೆ ಆ ಯೋಚನೆಯನ್ನು ತೀವ್ರವಾಗಿ ಆ ಹೃದಯವೇ ಪ್ರತಿಭಟಿಸುತ್ತಿದ್ದಿತು ! ರಾಮುಚಂದ್ರಯ್ಯನೊಡನೆ ಹೊರಗಡೆ ತಿರುಗಾಡಿಕೊಂಡು ಸಂತೋಷದಿಂದಿರಲು ಸಾಧ್ಯವೇ? ಎಂದಿತು ಆ ಹೃದಯ. ಆ ಮಾತು ತೀರ ಅಪಹಾಸ್ಯವಾಗಿ ಕಂಡಿತು. ಮೀನಾಕ್ಷಿ ತಟ್ಟನೆ ಉತ್ತರ ಹೇಳದಿದ್ದುದನ್ನು ನೋಡಿ ರಾಮುಚಂದ್ರಯ್ಯನ ಮನಸ್ಸು ನೊಂದಿತು. ನೋವಿನಿಂದ ಅರೆಕೋಪದಿಂದ ಕೇಳಿದನು

"ಏಕೆ ಮೀನಾ, ನನ್ನ ಜೊತೆ ಹೊರಗೆ ಬರಲು ಇಷ್ಟವಿಲ್ಲವೇ ?"

"ನಿಮ್ಮ ಜೊತೆ....ಇಲ್ಲ....ಹಾಗೇನಿಲ್ಲ. ಅದೇಕೆ....ಇಷ್ಟವಿಲ್ಲ, ಆದರೆ ಪಾಪ ನಿಮಗೆ ನನ್ನ ಜೊತೆ ಹೊತ್ತು ಹೋಗುವುದೇ ಅಂತ. ನೀವು ನನಗೋಸ್ಕರ ನಿಮ್ಮ ಕ್ಲಬ್ಬಿನ ವಿನೋದ ಕೂಟವನ್ನು ತಪ್ಪಿಸಿಕೊಳ್ಳಬೇಕೇ."

"ಹಾಗಂದರೆ....ಏನು ಮೀನಾ. ನಿನಗೋಸ್ಕರ ನಾನು ಅಷ್ಟು ತ್ಯಾಗವನ್ನು ಸಹಾ ಮಾಡಲು ಅಶಕ್ತನೆಂದುಕೊಂಡೆಯಾ. ನೀನು ಸುಖವಾಗಿರಲು, ಸಂತೋಷವಾಗಿರಲು ಏನು ಬೇಕಾದರೂ ಮಾಡುತ್ತೇನೆ ಮೀನಾ. ಆದರೆ ಒಂದು ವಿಷಯದಲ್ಲಿ ಮಾತ್ರ.........."

ಮೀನಾಕ್ಷಿಗೆ ಅವನು ಏನು ಹೇಳುವನೆಂದು ತಿಳಿದಿದ್ದಿತು. ಆ ಮಾತುಗಳನ್ನು ಕೇಳಿಕೇಳಿ ಅವಳಿಗೆ ಬೇಸರವಾಗಿದ್ದಿತು. ಆ ವ್ಯಥೆ, ಆ ಅನುಕಂಪ ಮಾಯಲಾರದ ಹುಣ್ಣಿನ ಮೇಲೆ ಬರೆಕೊಟ್ಟಂತಾಗುತ್ತಿದ್ದಿತು. ಅವಳು ಸರ್ರನೆ ಆ ಮಾತುಗಳನ್ನು ಅಷ್ಟಕ್ಕೇ ನಿಲ್ಲಿಸಲು "ಬಂದೆ........ನೀವು ಬಟ್ಟೆ ಹಾಕಿಕೊಳ್ಳಿ. ನಾನು ಸೀರೆ ಉಟ್ಟುಕೊಂಡು ಬಂದು ಬಿಡುತ್ತೇನೆ. ಹೊರಗೆ ಹೋಗಿ ಬರೋಣ" ಎಂದು ಬಚ್ಚಲು ಮನೆಗೆ ಹೊರಟು ಹೋದಳು. ರಾಮುಚಂದ್ರಯ್ಯನಿಗೆ ಆನಂದವಾಯಿತು. ಉತ್ಸಾಹದಿಂದ ಬಟ್ಟೆ ಬದಲಾಯಿಸಲು ತನ್ನ ಕೊಠಡಿಗೆ ಹೋದನು. ಕೊಂಚ ಹೊತ್ತಿನಲ್ಲಿಯೇ ಮೀನಾಕ್ಷಿ ಅಲಂಕರಿಸಿ

ಕೊಂಡು ಸಿದ್ಧಳಾದಳು. ರಾಮಚಂದ್ರಯ್ಯ ಅವಳ ಸೌಂದರ್ಯ ದರ್ಶನದಿಂದ ಉತ್ಸಾಹಿತ ಯುವಕನಂತಾದನು. ಇಬ್ಬರೂ ಬಾಗಿಲಿಗೆ ಬೀಗ ಹಾಕಿಕೊಂಡು ಹೊರಗೆ ಹೋದರು. ಆ ದೃಶ್ಯ ಆ ಬೀದಿಗೆಲ್ಲಾ ಹೊಸತಾಗಿ, ಹಾಸ್ಯಾಸ್ಪದವಾಗಿ ಕಂಡಿತು. ಆ ಮನೆಗಳ ಗೃಹಿಣಿಯರೆಲ್ಲ ಕಿಟಿಕಿಗಳಲ್ಲಿ ಇಣುಕಿ, ಬಾಗಿಲಲ್ಲಿ ಮರೆಯಾಗಿ ನಿಂತು ಅವರಿಬ್ಬರೂ ಹೋಗುವುದನ್ನು ನೋಡಿದರು ಮೀನಾಕ್ಷಿಗೆ ಅದರ ಅರಿವಾಯಿತು. ಬಹುಶಃ ಅವರು ಅಪಹಾಸ್ಯ ಮಾಡಿಕೊಂಡು ನಗುತ್ತಿರಬಹುದೇ ? ಈ ಯೋಚನೆ ಬಂದೊಡನೆ ಅವಳ ಎದೆಯ ಮೇಲೆ ಭಾರ ಹೇರಿದಂತಾಯಿತು. ಮೀನಾಕ್ಷಿ ಕಟುಕರವನನ್ನು ಹಿಂಬಾಲಿಸಿ ಹೋಗುವ ಕುರಿಯಂತೆ ತಲೆ ತಗ್ಗಿಸಿಕೊಂಡು ರಾಮಚಂದ್ರಯ್ಯನ ಹಿಂದೆ ಹೋದಳು. ಅವಿವಾಹಿತ ಹುಡುಗಿಯರು, ಯುವತಿಯರು ಆ ಇಜ್ಜೋಡಿಯನ್ನು ನೋಡಿ 'ಪಾಪ! ಮೀನಾ ಎಷ್ಟು ಚೆಲುವೆ. ಆತ ಎಷ್ಟು ಅಸಹ್ಯವಾಗಿ, ಮುದಿಯನಾಗಿ ಕಾಣುತ್ತಾನೆ. ಬೆನ್ನು ಬಗ್ಗಿ ಹೋದಂತಿದೆ. ತಲೆ ಕೂದಲೆಲ್ಲಾ ಬೆಳ್ಳಗಾಗುತ್ತಿದೆ. ಏನೋ ಖಾಹಿಲೆ ಬಂದವನ ಹಾಗೆ ಕಾಣುತ್ತಾನೆ. ಬಹಳ ಅನ್ಯಾಯ.' ಎಂದು ಮರುಕ ಪಟ್ಟರು. ಮೀನಾಕ್ಷಿಯ ಹೃದಯಕ್ಕೆ ಆ ಭಾವನೆಗಳೆಲ್ಲ ಅರಿವಾಯಿತು ಆ ಮನೆಗಳನ್ನೆಲ್ಲ ಹಾದು ಜಲಪಾತದೆಡೆಗೆ ಹೋಗುವ ದಾರಿಯನ್ನು ಹಿಡಿದು ಅಂಗಡಿ ಬೀದಿಯನ್ನು ದಾಟಿ ಹಸಿರು ಹೊಲಗಳ ಮೈದಾನವನ್ನು ಸೇರಿದ ಮೇಲೆ ತಲೆ ಎತ್ತಿ ಸುತ್ತಲ ನಿಸರ್ಗ ಸೌಂದರ್ಯವನ್ನು ನೋಡಿ ನಿಟ್ಟುಸಿರಿಟ್ಟಳು ಆ ಸೌಂದರ್ಯ ಅವಳ ಕಣ್ಣುಗಳನ್ನು ತುಂಬಿತು. ನಿರ್ಮಲ ಶೀತಲ ತಂಗಾಳಿ ಅವಳ ಎದೆಗೆ ತಂಪನ್ನೆರೆಯಿತು. ಮೀನಾಕ್ಷಿ ಆ ಮುಸ್ಸಂಜೆಯ ಮನೋಹರತೆಗೆ ಮಾರು ಹೋದಳು.

ಅಂದಿನಿಂದ ಮೀನಾಕ್ಷಿ ರಾಮಚಂದ್ರಯ್ಯ ಮನೆಗೆ ಬರದೇ ಹೋದರೂ ತನ್ನ ವಾಯುಸಂಚಾರವನ್ನು ನಿಲ್ಲಿಸುತ್ತಿರಲಿಲ್ಲ. ಕೆಲಸಕ್ಕೆ ಬರುತ್ತಿದ್ದ ಶೂದ್ರಗಿತ್ತಿಯೊಡನೆ, ಒಮ್ಮೊಮ್ಮೆ ಇನ್ನೂ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದ ಮನೆಯವರ ಮಕ್ಕಳೊಡನೆ ಡಾಕ್

ಬಂಗಲೆಯ ಹತ್ತಿರ ಹೋಗಿ, ಶರಾವತಿಯ ಸ್ನಿಗ್ಧ ಸೌಂದರ್ಯ, ಘನ ಗಂಭೀರವಾದ ನಡಿಗೆಯನ್ನು ನೋಡುತ್ತ ಮೈಮರೆಯುತ್ತಿದ್ದಳು. ಅದೊಂದು ಆವಳ ಬಾಳಿನ ರಸಾನುಭವವಾಗಿದ್ದಿತು. ಅಲ್ಲಿ ಒಬ್ಬಳೇ ಕಲ್ಲುಬೆಂಚಿನಮೇಲೆ ಕುಳಿತುಕೊಂಡು ಅಂತರಿಕ್ಷದಿಂದ ಪಾತಾಳಕ್ಕೆ ಧುಮುಕುವ ಶರಾವತಿಯ ಭೈರವೀರೂಪವನ್ನು, ಶಾಂತಿಸ್ವರೂಪವನ್ನು, ರಾಜಗಾಂಭೀರ್ಯವನ್ನು, ಸ್ತ್ರೀ ಸುಕೋಮಲತೆಯನ್ನು ಕಣ್ಣಾರೆ ಕಂಡು ಆನಂದಿಸುತ್ತಿದ್ದಳು. ತನ್ನ ಮುಂದಲ ಬಾಳಿನ ಸವಿಗನಸನ್ನು ಕಾಣುತ್ತಿದ್ದಳು. ಅವಳ ಹೃದಯದ ಅಂತರಾಳದಲ್ಲಿ ಅಡಗಿದ್ದ ಸುಪ್ತಚೈತನ್ಯ ಹೊರಚಿಮ್ಮಿ ಬರುತ್ತಿದ್ದಿತು. ಮೀನಾ ಹಗಲುಗನಸುಗಳನ್ನು ಕಾಣುತ್ತಿದ್ದಳು. ಆ ಸವಿಗನಸುಗಳ ನಾಯಕ ಅವಳ ಬಾಲ್ಯದ ಸಂಗಾತಿ ಚಂದ್ರು. ತನ್ನ ಕುಡಿಯೌವ್ವನದ ಹೊಸತರಲ್ಲಿ ತನ್ನ ಹೃದಯವನ್ನೇ ಸೂರೆಗೊಂಡಿದ್ದ ತರುಣ ಚಂದ್ರು. ಚಂದ್ರುವಿನೊಡನೆ ಚಂದ್ರಿಕೆಯಾಗಿ ಮೀನಾ ಭಾವನಾಪ್ರಪಂಚದಲ್ಲಿ ವಿಹರಿಸಿ ಸುಖ ಸವಿಯುತ್ತಿದ್ದಳು. ಹೊತ್ತಾಯಿತೆಂದು ದಾಸಿ ಎಚ್ಚರಿಸಿದಮೇಲೆ ಮನೆಗೆ ಹಿಂತಿರುಗುತ್ತಿದ್ದಳು.

ಮನೆಗೆ ಬಂದೊಡನೆ ಮೀನಾಕ್ಷಿಯ ಮನಸ್ಸಿಗೆ ಕಾರ್ಮೋಡ ಕವಿಯುತ್ತಿದ್ದಿತು. ಆ ಮನೆ ಸೆರೆಮನೆಯಂತೆ ಕಾಣುತ್ತಿದ್ದಿತು. ಪೆಟ್ಟಿಗೆ ತೆಗೆದು ಕಾಮಾಕ್ಷಿ ಚಂದ್ರರು ಹಸೆಯಮೇಲೆ ಕುಳಿತಿದ್ದ ಮದುವೆಯ ಭಾವಚಿತ್ರವನ್ನು ನೋಡಿ ಕಣ್ಣೀರು ಕರೆಯುತ್ತಿದ್ದಳು ಕಾಮಾಕ್ಷಿಯ ಭಾಗ್ಯವನ್ನು ನೆನೆದುಕೊಂಡು ಕರುಬುತ್ತಿದ್ದಳು. ಕಾಮಾಕ್ಷಿಯ ಮೇಲಿನ ಮಾತ್ಸರ್ಯ ಹೊಗೆಯಾಡುತ್ತಿದ್ದಿತು. ಆ ಅನುಭವ ಅವಳನ್ನು ದುಃಖದ ಉರಿಗೆ ತಳ್ಳುತ್ತಿದ್ದಿತು. ಮನಸ್ಸು ಅಸ್ಥಿರಗೊಳ್ಳುತ್ತಿದ್ದಿತು. ಮತ್ತೆ ಅದನ್ನು ನೋಡಬಾರದೆಂದು ಬಹಳ ದಿವಸಗಳವರೆವಿಗೆ ಮುಚ್ಚಿಡುತ್ತಿದ್ದಳು. ಆದರೆ ಆ ಯತ್ನ ಕೆಲವೇ ದಿವಸಗಳಲ್ಲಿ ಮಣ್ಣುಗೂಡಿಹೋಗುತ್ತಿದ್ದಿತು. ಮೀನಾಕ್ಷಿ ಒಂದು ದಿನ ತನ್ನ ಏಕಾಂತ ವಿಹಾರವನ್ನು ಮುಗಿಸಿಕೊಂಡು ಮನೆಗೆ ಬಂದಳು. ಅವಳಿಗೆ ಬಹಳ ಆಯಾಸವಾಗಿದ್ದಿತು. ಬಂದವಳೇ ಶೂದ್ರಗಿತ್ತಿಯನ್ನು ಮನೆಗೆ ಕಳುಹಿಸಿ

ಬಾಗಿಲು ಹಾಕಿಕೊಂಡು ತನ್ನ ಕೊಠಡಿಗೆ ಹೋಗಿ ಮಲಗಿಕೊಂಡಳು. ಅವಳ ಮನಸ್ಸು ಶರಾವತಿಯ ಮಡಿಲ ಸೌಂದರ್ಯವನ್ನು ಸವಿದು ಸವಿ ನೆನಪಿನಿಂದ ಅಲ್ಲಕಲ್ಲೋಲವಾಗಿದ್ದಿತು. ತನ್ನ ಬಾಲ್ಯದ ಗೆಳೆಯ ಅಡಿಗಡಿಗೆ ಅವಳ ನೆನಪಿನಲ್ಲಿ ಹಾರಿಬಂದು ಕುಳಿತುಕೊಳ್ಳುತ್ತಿದ್ದನು. ಚಂದ್ರುವನ್ನು ನೋಡಬೇಕೆಂದು, ಅವಳ ಹೃದಯದಲ್ಲಿ ಅಡಗಿದ್ದ ಯಾವುದೋ ಒಂದು ಆಸೆ ಅಡಿಗಡಿಗೆ ಹೊರಹೊಮ್ಮಿಬರುತ್ತಿದ್ದಿತು. ಆದರೆ ಏಕೆ ನೋಡಬೇಕೆಂಬ ಪ್ರಶ್ನೆಗೆ ಮಾತ್ರ ಅವಳು ಎಷ್ಟು ಹುಡುಕಿದರೂ ಉತ್ತರ ಸಿಕ್ಕದೇಹೋಯಿತು. ಆಯಾಸದಿಂದ ಮಲಗಿದೊಡನೆ ಮೀನಾಕ್ಷಿಯ ಸುಪ್ತಚೇತನ ಹೊರಚಿಮ್ಮಿ ಅವಳಿಗೊಂದು ಅತಿ ವಿಚಿತ್ರವಾದ ಕನಸನ್ನು ತಂದಿತು.

ಶರಾವತಿ ಪ್ರವಾಹದ ನೀರಿನಿಂದ! ತುಂಬಿ ತುಳುಕುತ್ತಿದೆ. ಆಚೀಚೆ ಹಚ್ಚಹಸುರಿನ ಗದ್ದೆಗಳು ಕಂಗೊಳಿಸುತ್ತಿವೆ ದಡದಲ್ಲಿ ಬಿಳಿಯ ಬಣ್ಣ ಬಳಿದ ದೋಣಿಗಳು ಸಾಲುಸಾಲಾಗಿ ನಿಲ್ಲಿಸಲ್ಪಟ್ಟಿವೆ. ಬಿಳಿಯ ಮರಳು ರಾಶಿಯ ಮೇಲೆ ಬಣ್ಣಬಣ್ಣದ ಚಿತ್ರ ವಿಚಿತ್ರ ಬಟ್ಟೆಗಳನ್ನುಟ್ಟ ನವದಂಪತಿಗಳು ವಿಹಾರ ಮಾಡುತ್ತಾ ಯಾರಿಗೋ ಕಾಯುತ್ತ ಎದುರು ನೋಡುತ್ತಿದ್ದಾರೆ. ಕೊಂಚ ಹೊತ್ತಿನಲ್ಲೇ ಮೀನ, ಬಣ್ಣದ ಸೀರೆ ಉಟ್ಟು, ಅದೇ ಬಣ್ಣದ ರವಿಕೆ ತೊಟ್ಟು, ಮುಡಿಯ ಸುತ್ತಿಗೆ, ಕನಕಾಂಬರದ ಹೂವಿನ ದಂಡೆಯನ್ನು ಸುತ್ತಿ ರಾಮಚಂದ್ರಯ್ಯನ ಜೊತೆ ಬಂದಳು. ವಿಹಾರ ಮಾಡುತ್ತಿದ್ದ ದಂಪತಿಗಳ ಮುಖ ಬೆಳಕಾಯಿತು. ತಾವು ಯಾರಿಗಾಗಿ ಎದುರು ನೋಡುತ್ತಿದ್ದರೋ ಅಂದಿನ ಹಬ್ಬದ ಆ ‘ಜಲದೇವತೆ’ ರೂಪರಾಶಿಯಾಗಿ ಅವರ ಎದುರಿಗೆ ಬಂದು ನಿಂತ ಕೂಡಲೇ ಎಲ್ಲರೂ ಆ ಸುಂದರಿಯ ಕಡೆ ಧಾವಿಸಿ ಅವಳ ಸುತ್ತ ಸೇರಿದರು. ಆದರೆ ಅವರ ಮುಖಗಳೆಲ್ಲ ಆ ಸುಂದರಿಯ ಜೊತೆಯಿದ್ದ ರಾಮಚಂದ್ರಯ್ಯನನ್ನು ನೋಡಿದೊಡನೆ ಕಳೆಗುಂದಿದುವು. ಆ ಮುಪ್ಪಿನ, ಸುಕ್ಕು ಚರ್ಮದ, ಬಡಕಲು ದೇಹದ ಪುರುಷ ಈ ಸುಂದರಿಯ ಪತಿಯೇ? ಛೇ! ಇರಲಾರದು, ಅದು ಹೇಗೆ ಸಾಧ್ಯ. ಅಗ್ನಿ ಸಾಕ್ಷಿಯಾಗಿ ಅವರಿಬ್ಬರೂ ಮದುವೆಯಾಗಿ

ಸಂಸಾರ ನಡೆಸುತ್ತಿಲ್ಲವೇ ? ಎಂತಹ ವಿಚಿತ್ರ ! ಯುವತಿಯರೆಲ್ಲ ಇದು ತೀರ ಸಹಿಸಲಾರದ ಶಿಕ್ಷೆಯೆಂದು ಮೀನಾಕ್ಷಿಯ ದುರದೃಷ್ಟಕ್ಕಾಗಿ ಕಣ್ಣೀರು ತಂದುಕೊಂಡರು. ಪುರುಷರೆಲ್ಲ ರಾಮಚಂದ್ರಯ್ಯನಂತಹ ಅಪಾತ್ರ ಪುರುಷನ ಅದೃಷ್ಟಕ್ಕಾಗಿ ಕರುಬಿದರು. ರಾಮಚಂದ್ರಯ್ಯನ ಸ್ಥಾನ ತಮಗೆ ಸಿಕ್ಕಬಾರದಾಗಿತ್ತೇ ? ಎಂದು ಬಯಸಿ ತಮ್ಮ ದುರಾದೃಷ್ಟವನ್ನು ಹಳಿದುಕೊಂಡರು. ಕನ್ಯೆಯೊಬ್ಬಳು ಮುಂದೆ ಬಂದು ಮೀನಾಕ್ಷಿಯನ್ನು ಬಿಳಿಯ ಹೂಮಾಲೆಗಳಿಂದ ಅಲಂಕರಿಸಿದಳು. ಎಲ್ಲರೂ ಮೀನಾಕ್ಷಿಯನ್ನು ಅಂದಿನ ಗಂಗಾ ಪೂಜೆಯನ್ನು ಪ್ರಾರಂಭಿಸಲು ಆಹ್ವಾನಿಸಿದರು. ಜಲದೇವತೆ ಅವರೆಲ್ಲರ ಪ್ರೀತಿ ಆದರಗಳಿಗೆ ಮಾರುಹೋಗಿ, ಸಂತೋಷದಿಂದ ನಗುತ್ತ, ಗೆಳತಿಯೊಬ್ಬಳು ಮುಂದೆ ನೀಡಿದ ಪಂಚಪಾಳದಿಂದ ಮಂಗಳ ದ್ರವ್ಯಗಳನ್ನು ತೆಗೆದುಕೊಂಡು ಶರಾವತಿಯನ್ನು ಭಕ್ತಿಯಿಂದ ಪೂಜಿಸಿದಳು. ದಡದಲ್ಲಿ ಕಟ್ಟಲ್ಪಟ್ಟಿದ್ದ ದೋಣಿಗಳ ಪೂಜೆಯಾದ ಮೇಲೆ ಎಲ್ಲರೂ ಒಂದು ವಿಶಾಲವಾದ, ಅಲಂಕಾರಯುಕ್ತವಾದ ದೋಣಿಯಲ್ಲಿ ಜಲದೇವತೆಯನ್ನು ಹತ್ತುವಂತೆ ವಿನಂತಿ ಮಾಡಿಕೊಂಡರು. ಮೀನಾಕ್ಷಿ ರಾಮಚಂದ್ರಯ್ಯನೊಡನೆ ಆ ದೋಣಿಯಲ್ಲಿ ಹತ್ತಿ ಕುಳಿತಳು. ದಡದಲ್ಲಿದ್ದವರು ಹಗ್ಗ ಬಿಚ್ಚಿದರು. ಎಲ್ಲರೂ 'ಜಲಕನ್ಯೆಗೆ ಜಯವಾಗಲೀ' ಎಂದು ಘೋಷಿಸಿ ತಮ್ಮ ತಮ್ಮ ಪ್ರೇಯಸಿಯರೊಡನೆ ಉಳಿದಿದ್ದ ದೋಣಿಗಳಲ್ಲಿ ಹತ್ತಿ ಕುಳಿತು, ರಭಸದಿಂದ ಹುಟ್ಟು ಹಾಕಿದರು. ಆಗ ಅವರ ದೋಣಿಯ ಪಂದ್ಯ ಪ್ರಾರಂಭವಾಯಿತು. ಎಲ್ಲ ದೋಣಿಗಳೂ ತುಂಬಿದ ಪ್ರವಾಹದಲ್ಲಿ ಎಲೆಗಳಂತೆ ಸರಾಗವಾಗಿ ತೇಲಿ ಹೋಯಿತು. ರಾಮಚಂದ್ರಯ್ಯ ಶಕ್ತಿ ಮೀರಿ ಹುಟ್ಟುಹಾಕುತ್ತಿದ್ದನು. ಎಲ್ಲ ಪುರುಷರೂ ಉತ್ಸಾಹದಿಂದ ಕೇಕೆ ಹಾಕುತ್ತ, ಸಂತೋಷದಿಂದ ಉತ್ಸಾಹದ ತುಂಬುವ ಹಾಡುಗಳನ್ನು ಹಾಡುತ್ತ, ವಿಜಯಘೋಷಗಳನ್ನು ಮಾಡುತ್ತಾ ಶಕ್ತಿಮೀರಿ ಹುಟ್ಟುಹಾಕಿದರು. ರಾಮಚಂದ್ರಯ್ಯನ ದೋಣಿ ಮುಂದೆ ಮುಂದೆ ಹೋಗುತ್ತಿದ್ದಿತು. ಮೀನಾಕ್ಷಿ 'ಭೇಷ್, ಭಲೆ, ಭಲೆ' ಎಂದು ವಿಜಯೋತ್ಸಾಹದಲ್ಲಿ ತನ್ನ ಪತಿಯನ್ನು ಹುರಿದುಂಬಿಸುತ್ತಿದ್ದಳು.

ಇದ್ದಕ್ಕಿದ್ದಂತೆ ರಾಮಚಂದ್ರಯ್ಯನ ಶಕ್ತಿ ಕುಂದಿಹೋಯಿತು. ಅವನ ಹಣೆಯ ಮೇಲೆ ಬೆವರಿನ ಹನಿಗಳು ಮೂಡಿ ಅವನ ಮೈ ಮೇಲೆ ಹರಿದುಬಂದಿತು. ಉಳಿದ ದೋಣಿಗಳೆಲ್ಲ ಹತ್ತಿರ ಬಂದು ಬಿಟ್ಟವು. ತನ್ನ ದೋಣಿ ಸೋತುಹೋಗುವುದೆಂದು ಹೆದರಿ "ಬೇಗ ಹುಟ್ಟು ಹಾಕಿರಿ. ಅಗೋ ಅಲ್ಲಿ ನೋಡಿರಿ. ಆ ದೋಣಿಗಳು ಹತ್ತಿರ ಬಂದು ಬಿಟ್ಟವು" ಎಂದು ಅವಳು ಕೂಗಿಕೊಂಡಳು. ಆದರೆ ರಾಮಚಂದ್ರಯ್ಯನ ಮುಖ ವಿವರ್ಣವಾಗಿದ್ದಿತು. ಅವನ ಕೈಗಳು ಸೋತುಹೋಗಿದ್ದವು. ಅವುಗಳು ಚಲಿಸುತ್ತಿರುವಂತೆಯೇ ಕಂಡು ಬರಲಿಲ್ಲ. ಕಣ್ಣವೆ ಹಾಕದೆ ನಿಸ್ತೇಜವಾಗಿ ಅವನು ಆಗಸವನ್ನೇ ದಿಟ್ಟಿಸುತ್ತ ಕುಳಿತುಬಿಟ್ಟನು. ಅರ್ಧ ನಿಮಿಷದಲ್ಲೇ ಒಂದು ದೋಣಿ ಅದರ ಪುರುಷನ ಉತ್ಸಾಹದ ಕೂಗಿನೊಡನೆ, ಅದರ ಸ್ತ್ರೀಯ ಸಂತೋಷಭರಿತ ಘೋಷಣೆಯೊಡನೆ ಇವರ ದೋಣಿಯನ್ನು ಹಾದು ಮುಂದೆ ಹೊರಟು ಹೋಯಿತು. ಮೀನಳ ಮೈ ರೋಷದಿಂದ ಕುದಿಯಿತು. ಅವನನ್ನು ಹಿಡಿದು ಅಲುಗಿಸಿ ಆರ್ಭಟಿಸಿದಳು. "ಬೇಗ ಹುಟ್ಟುಹಾಕಿರಿ.... ಹೇಡಿಯಂತೆ ಸುಮ್ಮನೆ ಕುಳಿತುಬಿಟ್ಟಿರಾ?.... ಬೇಗ ಹುಟ್ಟುಹಾಕಿ ಆ ದೋಣಿಯನ್ನು ಸೋಲಿಸಿ." ರಾಮಚಂದ್ರಯ್ಯ ಅಲುಗಾಡಲಿಲ್ಲ. ಮೀನಾ ಮತ್ತೆ ಕೋಪದಿಂದ ಬೈದಳು, "ಹೇಡಿ.... ಕೈಲಾಗದ ಗಂಡಸು.... ನನ್ನ ಕೈ ಏಕೆ ಹಿಡಿದೆ?" ಇದ್ದಕ್ಕಿದಂತೆ ಆ ವಿಜಯೋತ್ಸಾಹಿಗಳ ಕೂಗನ್ನು ಮೀರಿಸಿ ಒಂದು ಕೂಗು ಕೇಳಿಬಂದಿತು. "ಮೀನಾಕ್ಷೀ.... .... ಮೀನಾಾ" ಮೀನಳ ಮೈ ಆ ಚಿರಪರಿಚಿತ ಸ್ವರ ಮಾಧುರ್ಯಕ್ಕೆ ಕಂಪಿಸಿತು. "ಯಾರು?" ಮೀನಾಕ್ಷಿ ಹಿಂದೆ ತಿರುಗಿ ನೋಡಿದಳು. ದೋಣಿಗಳ ಮಧ್ಯೆ ಅತಿ ವೇಗವಾಗಿ ಒಂದು ದೋಣಿ ಬಾಣದಂತೆ ಧಾವಿಸಿ ಬರುತ್ತಿದ್ದಿತು. ಅದರಲ್ಲಿ ಒಂದೇ ಪುರುಷ ವ್ಯಕ್ತಿ ಯಾರು.... ಚಂದ್ರು ! .... ಚಂದ್ರು ಮೀನಾಕ್ಷಿಯ ಕಡೆ ಕೈ ಬೀಸಿ ಕೂಗಿಕೊಳ್ಳುತ್ತಿದ್ದನು. "ಮೀನಾ........ ಹೆದರಬೇಡ. ನಾನು ಬರುತ್ತೇನೆ." ಮೀನಾಕ್ಷಿ ಆನಂದದಿದವ ಕುಣಿದಾಡಿದಳು. "ಚಂದ್ರೂ.... ಬಾ ಚಂದ್ರೂ.... ಬೇಗ ಬಾ.... ನಾನು ಸೋತು ಹೋಗುತ್ತಿದ್ದೇನೆ. ಈ ದಿನ ಸೋತರೆ ಎಂದೆಂದಿಗೂ ಬಂಜೆಯಾಗಿ

ಸಾಯುತ್ತೇನೆಂದು "ನನಗೆ ಕನಸ್ಸಿನಲ್ಲಿ ದೇವತೆ ಹೇಳಿರುವಳು..... ಬಾ ಚಂದ್ರು. ನನ್ನನ್ನು ಗೆಲ್ಲಿಸು." ಚಂದ್ರು ಒಂದೇ ನಿಮಿಷದಲ್ಲಿ ದೋಣಿಯನ್ನು ಮುಂದೆ ನುಗ್ಗಿಸಿಕೊಂಡು ಬಂದನು. ಅವನ ದೋಣಿ ಪಕ್ಕದಲ್ಲಿ ಬರುತ್ತಿದ್ದಂತೆಯೇ ಮೀನಾ ಅವನ ನೀಡಿದ ಕೈಹಿಡಿದು ಹಾರಿಕೊಂಡಳು. ರಾಮಚಂದ್ರಯ್ಯನ ದೋಣಿ ಆಯತಪ್ಪಿ ಮುಳಿಗಿ ಹೋಗುವಂತೆ ಅಲ್ಲಾಡಿತು. ಅವಳಿಗೆ ಹಿಂತಿರುಗಿ ನೋಡಲು ಆಗಲಿಲ್ಲ. ಚಂದ್ರುವಿನ ದೋಣಿ ಅಷ್ಟು ರಭಸವಾಗಿ ಹೋಗುತ್ತಿದ್ದಿತು. ಮೀನಾಕ್ಷಿ ಚಂದ್ರುವನ್ನು ಅಪ್ಪಿಕೊಂಡು ಕುಳಿತಿದ್ದಳು. ಕೊಂಚ ಹೊತ್ತಿನಲ್ಲೇ ಅವರ ದೋಣಿ ಮುಂದೆ ಹೋಗುತ್ತಿದ್ದ ದೋಣಿಯನ್ನು ತಟಾಯಿಸಿಕೊಂಡು ಬಹಳ ದೂರ ಹೊರಟುಹೋಯಿತು. ಮೀನಾ ಗೆದ್ದುಬಿಟ್ಟಳು! ಆದರೆ ಎದುರಿಗೆ ಪ್ರವಾಹ ಜಲಪಾತವಾಗಿ ಕೆಳಗೆ ಧುಮುಕುವ ಮೊರೆತ ಭೋರ್ಗರೆಯುವಂತೆ ಕೇಳಿತು. ಮೀನಾ ಪ್ರಾಣ ಭಯದಿಂದ ಅರಚಿದಳು. ಚಂದ್ರು ಎಚ್ಚೆತ್ತು ಸರ್ರನೆ ದೋಣಿಯನ್ನು ಪಕ್ಕಕ್ಕೆ ತಿರುಗಿಸಿದನು. ಅವನ ದೋಣಿ ಒಮ್ಮೆ ಸರ್ರನೆ ಬುಗುರಿಯಂತೆ ತಿರುಗಿ ಎರಡು ಬಂಡೆಗಳ ಮಧ್ಯೆ ಹೋಗಿ ನಿಂತಿತು. ಜಲಪಾತ ಪ್ರಪಾತಗಳ ಘರ್ಷಣೆಯು ಮೊರತ ಕಿವಿ ಸಿಡಿದುಹೋಗುವಂತೆ ಕೇಳಿಸುತ್ತಿದ್ದಿತು. ಮೀನಾಕ್ಷಿಗೆ ಜೀವ ಬಂದಂತಾಯಿತು. ಕಣ್ಣು ಅರಳಿಸಿ ಧುಮುಕಲು ಧಾವಿಸುತ್ತಿರುವ ಶರಾವತಿಯನ್ನು ನೋಡುತ್ತಿರುವಂತೆ ಅವಳ ಕಣ್ಣೆದುರಿಗೆ ಒಂದೇ ಒಂದು ದೋಣಿ ನೀರಿನ ಸುಳಿಗೆ ಸಿಕ್ಕಿ, ಗರಗರನೆ ತಿರಗುತ್ತ, ಪ್ರವಾಹದೊಡನೆ ರಭಸದಿಂದ ತೇಲಿಹೋಯಿತು. ಅದು ಯಾರ ದೋಣಿ ? ತನ್ನ ದೋಣಿ....ಅಂದಿನ ಜಲದೇವತೆಯ ಶೃಂಗಾರಮಯವಾದ ದೋಣಿ. ಆದರಲ್ಲಿ ರಾಮಚಂದ್ರಯ್ಯ ಅಚಲನಾಗಿ ಭೂತ ಹಿಡಿದವನಂತೆ ಕಣ್ಣರಳಿಸಿ ನೋಡುತ್ತ ಕುಳಿತಿದ್ದನು. ಸಾವಿನ ಮಡಿಲಲ್ಲಿ ಹೋಗಿ ಬೀಳುತ್ತಿರುವ ಕೈಹಿಡಿದ ಪತಿಯನ್ನು, ನೋಡಲಾರದೇ ಮೀನಾಕ್ಷಿಯ ಮೈ ಥರಥರನೆ ಕಂಪಿಸಿತು. ರಾಮಚಂದ್ರಯ್ಯ ಕೈಬೀಸಿ ಕರೆಯುತ್ತಿರುವಂತೆ ತೋರಿತು. ಮೀನಾ ನೀರಿನಲ್ಲಿ ಧುಮುಕಲು ಸರ್ರನೆ ಎದ್ದು ನಿಂತಳು ಚಂದ್ರುವಿನ ತೋಳುಗಳು ಅವಳನ್ನು

ಅಪ್ಪಿಹಿಡಿದುಕೊಂಡುವು. ಚಂದ್ರು ಅತಿ ದೀನನಾಗಿ ಪ್ರಾರ್ಥಿಸಿಕೊಂಡನು, "ಬೇಡ ಮೀನಾ....ನನ್ನನ್ನು ಬಿಟ್ಟು ಹೋಗಬೇಡ. ನಾನು ಬದುಕಿರುವುದು ನಿನಗಾಗಿ.....ನಿನ್ನನ್ನು ನಾನು ಬಿಡಲಾರೆ." ಅರೆಕ್ಷಣದಲ್ಲಿ ಬಲವಾಗಿ ಬಿರುಗಾಳಿ ಬೀಸಿತು. ರಾಮಚಂದ್ರಯ್ಯನ ದೋಣಿ ಬುಗುರಿಯಂತೆ ಗರಗರನೆ ತಿರುಗಿ ಪ್ರವಾಹದ ನೀರಿನೊಡನೆ ಮೇಲಕ್ಕೆ ಹಾರಿ ಆ ಮಹಾಪೂರದೊಡನೆ ಅಗಾಧವಾದ ಪ್ರಪಾತಕ್ಕೆ ಬಿದ್ದುಹೋಯಿತು. ಸಾವಿನ ಮಡಲಿಗೆ ಬಿದ್ದ ರಾಮಚಂದ್ರಯ್ಯ ಭಯಂಕರವಾಗಿ "ಮೀನಾಕ್ಷೀೀ ಮೀನಾ" ಎಂದು ಕಿರುಚಿದಂತಾಯಿತು. "ಅಯ್ಯೋ...." ಎಂದರಚಿ ಅಳುತ್ತಿದ್ದವಳು ಸರ್‍ರನೆ ಕಣ್ಣು ಬಿಟ್ಟು ಸುತ್ತಲೂ ನೋಡಿದಳು. ತಾನು ಇನ್ನೂ ದುಃಖಿಸಿಕೊಂಡು ಅಳುತ್ತಿರುವುದು ಅವಳಿಗೆ ತಿಳಿಯಿತು. ಎಲ್ಲ ಕನಸೆಂದು ತಿಳಿದು ಅವಳಿಗೆ ಸಮಾಧಾನವಾಯಿತು. 'ಆದರೆ ಎಂತಹ ಭಯಂಕರ ಕನಸು!' ಎಂದುಕೊಂಡಳು. ಹೊರಗಡೆ ಚಿಲಕ ಬಡಿದು ರಾಮಚಂದ್ರಯ್ಯ 'ಮೀನಾಕ್ಷೀ....ಮೀನಾ....' ಎಂದು ಕೂಗಿಕೊಳ್ಳುತ್ತಿದ್ದನು. ಅವನ ಕೂಗೇ ಅವಳಿಗೆ ನಿದ್ದೆಯಲ್ಲಿ ಭಯಂಕರವಾಗಿ ಕೇಳಿಸಿದ್ದಿತು. ಮೀನಾ ಎದ್ದು ಹೊರಗೆ ಬಂದು ಬಾಗಿಲು ತೆಗೆಯುತ್ತ ಕೇಳಿದಳು.

"ಏನು, ಬಂದು ಬಹಳ ಹೊತ್ತಾಯಿತೇ. ಏನೋ ನಿದ್ದೆ ಬಂದುಬಿಟ್ಟಿತು. ಮಲಗಿಕೊಂಡುಬಿಟ್ಟೆ."

ರಾಮಚಂದ್ರಯ್ಯ ಒಳಗೆ ಬರುತ್ತಾ

"ಇನ್ನೇನು ಮತ್ತೆ. ರಾತ್ರಿಯೆಲ್ಲಾ ನಿದ್ದೆ ಮಾಡದೆ ಏನೋ ಯೋಚಿಸುತ್ತ ಕುಳಿತುಬಿಡುತ್ತೀಯೆ. ಬೆಳಿಗ್ಗೆ ಐದು ಘಂಟೆಗೆಲ್ಲಾ ಎದ್ದುಬಿಡುತ್ತೀಯೆ. ನಿದ್ದೆ ಬರದೆ ಇರುತ್ತದೆಯೇ. ಮಧ್ಯಾಹ್ನವೂ ಮಲಗಿಕೊಳ್ಳುತ್ತೀಯೋ ಇಲ್ಲವೋ?"

"ಏನಿಲ್ಲ ನಿದ್ದೆ ಮಾಡದೆ ಏನು. ನನಗೆ ಇನ್ನೇನು ಕೆಲಸ ಹೇಳಿ" ಎಂದುಕೊಂಡು ಗಂಡನಿಗೆ ಕಾಫಿ ತಿಂಡಿ ತಂದುಕೊಡಲು ಒಳಗೆ ಹೋದಳು.

ಅಂದಿನಿಂದ ಮೀನಾಕ್ಷಿಗೆ ಆ ಕನಸಿನ ಯೋಚನೆಯೇ ಆಯಿತು.

ತನ್ನ ಬಾಲ್ಯದ ಗೆಳೆಯ, ತನ್ನ ಮನಸ್ಸಿನಲ್ಲಿ ಐದು ವರ್ಷಗಳಿಂದ ಅಚ್ಚಳಿಯದೇ ನಿಂತಿರುವ ಸುಂದರ ಯುವಕ ಚಂದ್ರುವನ್ನು ನೋಡ ಬೇಕೆಂದು ಅವಳ ಹೃದಯು ಹಾತೊರೆಯಿತು. ಚಂದ್ರು ಹೇಗಿರು ವನೋ? ಚಂದ್ರುವಿಗೆ ಇಪ್ಪತ್ತಾರು ವರ್ಷವಿರಬಹುದು. ಚಂದ್ರುವಿಗೆ ಎಷ್ಟು ಮಕ್ಕಳೋ? ನನ್ನನ್ನು ಮರೆತುಬಿಟ್ಟಿದ್ದರೆ....ಇಲ್ಲ ಇಲ್ಲಿ ನನ್ನನ್ನು ಮರೆತಿರಲಾರ. ಹ್ನು! ಎಲ್ಲಿಯ ಚಂದ್ರು, ನಾನೆಲ್ಲಿ, ಅವನೆಲ್ಲಿ. ತಾಯಿಯ ಮನೆಯಿಂದ ಅವನೂ ತೊರದುಹೋದಂತಾಯಿತು.. ಇಲ್ಲದಿದ್ದರೆ ವರ್ಷಕ್ಕೊಂದು ಸಾರಿಯಾದರೂ ನೋಡಬಹುದಾಗಿತ್ತು. ನನಗೆ ಆ ಅದೃಷ್ಟವೂ ಇಲ್ಲ ನನ್ನಂತಹ ದುರಾದೃಷ್ಟವಂತಳು ಯಾರೂ ಇಲ್ಲ. ನನಗೆ ಏನೂ ಇಲ್ಲದೆ ಹೋಯಿತು ಎಂದು ಮೀನಾ ನಾನಾ ಬಗೆಯಾಗಿ ಯೋಚಿಸಿಕೊಂಡು ಸಂಕಟಪಡುತ್ತಿದ್ದಳು.

ರಾಮಚಂದ್ರಯ್ಯನಿಗೆ ದಿನ ದಿನಕ್ಕೆ ಇಳಿದುಹೋಗುತ್ತಿದ್ದ ಮೀನಾಕ್ಷಿಯನ್ನು ನೋಡಿ, ಅಪಾರವಾದ ಯಾತನೆಯಾಗುತ್ತಿದ್ದಿತು. ಅವನ ಮನಸ್ಸು ಬೆಂದು ಬೆಂದು ಕುದಿಯುತ್ತಿದ್ದಿತು. ಅವನಿಗೆ ಜೀವನದ ಮೇಲಿನ ವ್ಯಾಮೋಹ ಎಂದೋ ಹಾರಿಹೋಗಿದ್ದಿತು. ಅವನು ಬದುಕಿದ್ದುದು ಮೀನಾಕ್ಷಿಗಾಗಿ. ಆವಳ ಬಾಳಿನ ನಿತ್ಯದ ಒಂದು ನಗುವಿಗಾಗಿ! ಆದರೆ ಆ ನಗು ಅವಳ ಬಾಳಿನಲ್ಲಿ ಮತ್ತೆ ಒಂದು ವರ್ಷ ಕಳೆಯುವವರೆಗೆ ಬರಲಿಲ್ಲ.

೮

ಮೀನಾಕ್ಷಿಯ ಮುಖದಲ್ಲಿ ಆ ನಗು ಕಾಣಿಸಿಕೊಂಡಿದ್ದು, ಮತ್ತೆ ಅವಳ ತಾಯಿತಂದೆಗಳ ದರ್ಶನವಾದಾಗ. ಅದೊಂದು ಅವಳ ಬಾಳಿನಲ್ಲಿ ತೀರ ಆಶ್ಚರ್ಯಕರ ಸಂಗತಿಯಾಯಿತು. ಐದು ವರ್ಷ ಕಳೆದ ಮೇಲೆ ಸುಬ್ಬಮ್ಮನವರೂ, ಶಾಮಣ್ಣನವರೂ ಅವಳ ಮನೆಗೆ

ಬಂದಿಳಿದರು. ಮೀನಾ ಅವರನ್ನು ಆದರದಿಂದ ಒಳಗೆ ಬರಮಾಡಿ ಕೊಳ್ಳುತ್ತಾ ಕೇಳಿದಳು, "ಏನಮ್ಮಾ, ನಾನಿಲ್ಲಿರುವುದು ನಿನಗೆ ಹೇಗೆ ತಿಳಿಯಿತು. ಒಂದು ಕಾಗದವನ್ನಾದರೂ ಹಾಕಬಾರದಾಗಿತ್ತೇ ?"

"ಸಾಗರಕ್ಕೆ ನಿನ್ನ ಅತ್ತೆಯ ಮನೆಗೆ ಹೋಗಿದ್ದೆವಮ್ಮಾ. ನೆನ್ನೆ ಹೋದೆವು. ನೀನು ಇಲ್ಲಿಗೆ ಬಂದಿರುವ ಸಮಾಚಾರ ಅವರೇ ಹೇಳಿದರು. ನಾವು ಇಲ್ಲಿಗೆ ಬರುವ ಆತುರ ತೋರಿಸಿದೆವು. ಆಕೆ ಇರು ಎಂದು ಹೇಳಲಿಲ್ಲ. ಇಷ್ಟಾಗಿ ನಮಗೆ ಅಲ್ಲೇನು ಕೆಲಸ. ಬೇಸರವಾಯಿತು. ಹೊರಟು ಬಂದುಬಿಟ್ಟೆವು."

ಮೀನಾಕ್ಷಿಗೆ ಐದು ವರ್ಷದಿಂದ ಅನುಭವಿಸಿದ ದುಃಖವೆಲ್ಲ ನೆನಪಾಯಿತು. ಯಾವ ವ್ಯಕ್ತಿ ತನ್ನ ತಪ್ಪು ಏನೂ ಇಲ್ಲದೆ ತನ್ನನ್ನು ಐದು ವರ್ಷಗಳಿಂದ ದೂರವಾಡಿದ್ದಿತೋ ಆ ವ್ಯಕ್ತಿಯ ಅನಿರೀಕ್ಷಿತ ದರ್ಶನದಿಂದ ಹೃದಯದಲ್ಲಿ ಅಡಗಿಸಿಟ್ಟುಕೊಂಡಿದ್ದ ದುಃಖವೆಲ್ಲ ಉಮ್ಮಳಿಸಿ ಬಂದಿತು.

"ಏನಮ್ಮಾ, ನನ್ನನ್ನು ಇಷ್ಟು ವರ್ಷಗಳಿಂದ ಮರೆತು ದೂರ ಮಾಡಿಬಿಟ್ಟಿದ್ದೆಯಲ್ಲಾ?" ಎಂದು ಬಿಕ್ಕಿಬಿಕ್ಕಿ ಅತ್ತುಬಿಟ್ಟಳು. ಸುಬ್ಬಮ್ಮ ನವರಿಗೆ ಕರುಳು ಕಿತ್ತುಬಂದಿತು.

"ನನ್ನಮ್ಮಾ, ಹೇಗಾಗಿಬಿಟ್ಟಿದ್ದೀಯೋ" ಎಂದು ಅವಳನ್ನು ಅಪ್ಪಿಕೊಂಡುಬಿಟ್ಟರು. ಶಾಮಣ್ಣನವರು ತೀರ ಮುದುಕರಾಗಿಬಿಟ್ಟಿದ್ದರು. ಮೀನಾಕ್ಷಿಯು ತಲೆ ನೇವರಿಸಿ,

"ಏನೇ ಮೀನಾ, ಏಕೆ ಹೀಗಾಗಿಬಿಟ್ಟಿದ್ದೀಯೆ. ಒಂದು ಕಾಗದ ಬರೀಬಾರದೆ ?" ಎಂದು ಕಣ್ಣೀರು ತಂದುಕೊಂಡರು. ಅವರಿಗೆ ಹೇಳುವುದಕ್ಕಿಲ್ಲ. ಅನುಭವಿಸುವುದಕ್ಕಿಲ್ಲ. ಇದಕ್ಕೆಲ್ಲಾ ಕಾರಣ ತಮ್ಮ ಸ್ತ್ರೀ ವ್ಯಾಮೋಹವೆಂದು ಅವರು ಹೇಗೆ ತಾನೆ ಹೇಳಿಯಾರು ?

ಕಾಮಾಕ್ಷಿಯ ಬಾಳಿನ ಭವಣೆಯನ್ನು ಕೇಳಿ ಸುಬ್ಬಮ್ಮನವರು ಅರ್ಧ ಇಳಿದುಹೋಗಿದ್ದರು. ಅವರಿಗೆ ಮಗಳ ಕಂಗೆಟ್ಟ ಸಂಸಾರ ನೋಡಿ ಮನಸ್ಸು ರೋಸಿಹೋಗಿದ್ದಿತು. ಆಗ ಅವರಿಗೆ ತೋರಿದ್ದು ಮೀನಾಕ್ಷಿ. ಪಶ್ಚಾತ್ತಾಪಪಟ್ಟು ಮೀನಾಕ್ಷಿಯನ್ನು ನೋಡಲು ಬಂದರೆ

ಅವಳು ಹೀಗಾಗಿದ್ದಳು. ಅವಳನ್ನು ಮತ್ತೆ ಮತ್ತೆ ಅಪ್ಪಿಕೊಂಡು ಅತ್ತರು.

"ಏನೇ ಮೀನಾಕ್ಷಿ, ಹೀಗಾಗಿಬಿಟ್ಟಿದ್ದೀಯೆ. ನಿನ್ನ ಅತ್ತೆ ನಿನ್ನನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲವೇ ?"

"ಏನಾಗಿದ್ದೀನಿ ಅಮ್ಮ. ಅಂತಹ ಅತ್ತೆ ಎಲ್ಲಾರಿಗೂ ಸಿಕ್ತಾರ್ಯೇ. ನಡೆದರೆ ಸವೆದುಹೋಗುವೆನೆಂದು ಆದರಿಸಿ, ಉಪಚಾರ ಮಾಡಿದರು."

"ನಿನ್ನ ಗಂಡ....ಸರಿಯಾಗಿದ್ದಾನೆ ತಾನೆ."

"ಅಮ್ಮಾ....ಅದು ನನ್ನ ಅದೃಷ್ಟ ....ದೇವರಂತಹ ಮನುಷ್ಯರು."

"ಮತ್ತೆ ನೀನೇಕೆ ಇಷ್ಟು ಕಂಗೆಟ್ಟುಹೋಗಿದ್ದೀ. ನೀನೇಕೆ ಒಂದು ಕಾಗದ ಬರೀಬಾರದಾಗಿತ್ತು. ನಾನು ಅಷ್ಟು ದೂರವಾಗಿ ಹೋದ್ನೇ. ಹೌದು, ನಂದೇ ಅಪರಾಧ. ಏನೋ ನನಗೂ ಮಂಕು ಮುಚ್ಚಿ ಹೋಗಿತ್ತು. ನಿನಗೆ ಕಾಗದ ಬರೆಯದೆ, ಹೆತ್ತ ಮಗಳು, ಸಾಕಿದ ಮಗಳು ಎಂದು ಬೇಧ ಮಾಡಿ ನಾನು ಕೆಟ್ಟೆ" ಎಂದು ಸುಬ್ಬಮ್ಮನವರು ಗಳಗಳನೆ ಅತ್ತುಬಿಟ್ಟರು.

ಮೀನಾಕ್ಷಿ ಆ ಮಾತಿಗೆ ಉತ್ತರ ಹೇಳದಾದಳು.

ಸಾಯಂಕಾಲ ರಾಮಚಂದ್ರಯ್ಯ ಮನೆಗೆ ಬಂದು ಅವರನ್ನು ನೋಡಿ ತಿರಸ್ಕಾರದಿಂದ ಒಳಗೆ ಹೊರಟುಹೋದನು. ರೂಮಿನಲ್ಲಿ ಬಟ್ಟೆಬಿಚ್ಚುತ್ತಾ ಘಟ್ಟಿಯಾಗಿ, "ಏನಂತೆ........ಇವರೇಕೆ ಬಂದರಂತೆ ಮೀನಾಕ್ಷಿ. ನಿನ್ನ ಹೊಟ್ಟೆ ಉರಿಸಿದ್ದು ಸಾಲದು ಅಂತ ಮತ್ತೆ ಇಲ್ಲಿಗೂ ಬಂದರೇನೋ, ನೀನು ಸತ್ತುಹೋದೆ ಎಂದು ಸ್ನಾನ ಮಾಡಿದ್ದವರು. ಈಗ ಏಕೆ ಬಂದರಂತೆ ಇಲ್ಲಿಗೆ...." ಎಂದು ಕೂಗಾಡಿದನು. ಮೀನಾಕ್ಷಿ ಅವನ ಬಾಯಿಮುಚ್ಚಿ ಸುಮ್ಮನಿರುವಂತೆ ಬೇಡಿಕೊಂಡಳು. ಅತ್ತು ಕರೆದಳು.

"ನಾನು ಸುಖವಾಗಿರುವುದು ನಿಮಗೆ ಬೇಕಿಲ್ಲವೇನೋ. ಎಷ್ಟಾದರೂ ಅವರು ನನ್ನ ಸಾಕಿದ ತಾಯಿ. ಕಳೆದು ಹೋಗಿದ್ದ ಭಾಗ್ಯ ಸಿಕ್ಕಿದ ಹಾಗಾಗಿದೆ. ನಾನು ಒಬ್ಬಂಟಿಗಳಾಗಿ ನರಳಿ ನರಳಿ ಸಾಯಬೇಕಾಗಿದ್ದಿತು....ಸಧ್ಯ ಸುಮ್ಮನಿರಿ. ಅವರ ಮುಖ ನೋಡಿ

ನನಗೆ ಜೀವಬಂದಂತಾಗಿದೆ. ನೀವು ಏನೂ ಅನ್ನಬೇಡಿ. ಅವರು ಬಹಳ ನೊಂದುಕೊಂಡಿದ್ದಾರೆ. ಹೋಗಿ ಮಾತನಾಡಿಸಿ"

ರಾಮಚಂದ್ರಯ್ಯ ಹೆಂಡತಿಯ ಕಣ್ಣೀರಿನೆದುರಿಗೆ ಸೋತು ಹೋದನು. ಅವನು ಸಮಾಧಾನಮಾಡಿಕೊಂಡನು. ಶಾಮಣ್ಣನವರೂ ಸುಬ್ಬಮ್ಮನವರೂ ಅವನ ಹೊಟ್ಟೆಯುರಿದ ಮಾತುಗಳನ್ನು ಕೇಳಿದ್ದರು. ಅದು ಅವರು ಮಾಡಿದ ತಪ್ಪಿಗೆ ಶಿಕ್ಷೆಯೆಂದು ಸಮಾಧಾನದಿಂದ ಅನುಭವಿಸಿದರು. ಕೊಂಚ ಹೊತ್ತಿನ ಮೇಲೆ ರಾಮಚಂದ್ರಯ್ಯ ಹೊರಗೆ ಬಂದು

"ಕ್ಷೇಮವೇ........" ಎಂದು ವಿಚಾರಿಸಿದನು.

"ಏನೋಪ್ಪ ಹೀಗೆ........ಏನೋ ಅಪರಾದವಾಯಿತು. ಸಾಕಿದ ಮಗು. ನೋಡಬೇಕೆನ್ನಿಸಿತು. ನಾಚಿಗೆ ಬಿಟ್ಟು ಬಂದಿದ್ದೀವಿ" ಎಂದು ಸುಬ್ಬಮ್ಮನವರು ಕಣ್ಣೀರು ತಂದುಕೊಂಡರು. ರಾಮಚಂದ್ರಯ್ಯನಿಗೆ ಸಮಾಧಾನವಾಯಿತು. ಕೆಲಸವಿದೆಯೆಂದು ಮಾವನಿಗೆ ಹೇಳಿ ಹೊರಗೆಹೋದನು. ಮೀನಾಕ್ಷಿಗೆ ದೊಡ್ಡ ಹೊರೆ ಇಳಿಸಿದಂತಾಯಿತು. ತಾಯಿ ತಂದೆಗಳನ್ನು ಸಮಾಧಾನ ಪಡಿಸಿದಳು. ಆ ರಾತ್ರಿ ರಾಮಚಂದ್ರಯ್ಯ ಮನೆಗೆ ಬರುವಾಗ ಕೈಚೀಲದ ತುಂಬ ತರಕಾರಿ, ತುಪ್ಪ, ಬೆಣ್ಣೆಗಳನ್ನು ತಂದು ಮೀನಾಕ್ಷಿಯ ಕೈಗೆ ಕೊಟ್ಟನು. ಮೀನಾಕ್ಷಿಯ ಹೃದಯ ಅರೆಕ್ಷಣ ಅಭಿಮಾನದಿಂದ ಮೂಕವಾಯಿತು.

ಮಾರನೆಯ ದಿನದಿಂದ ಮೀನಾಕ್ಷಿ ಉತ್ಸಾಹದಿಂದ ಅವರಿಗೆ ಅಲ್ಲಿನ ಸುಂದರ ದೃಶ್ಯಗಳನ್ನೆಲ್ಲ ತೋರಿಸಿಕೊಂಡು ಬಂದಳು. ಜಲಪಾತದ ಹತ್ತಿರ ತಿಂಗಳ ಬೆಳಕಿನಲ್ಲಿ ಊಟ ಮಾಡಿ ಬಂದರು. ಮೀನಾಕ್ಷಿ ಸುಬ್ಬಮ್ಮನವರನ್ನು ಕೂಡಿಸಿ ದಿನಕ್ಕೆ ಒಂದೊಂದು ಬಗೆ ಊಟ ಮಾಡಿ ಹಾಕಿದಳು. ದಿನಕ್ಕೆ ಒಂದೊಂದು ಬಗೆಯ ತಿಂಡಿ ಮಾಡಿ ಕೊಟ್ಟಳು. ಸುಬ್ಬಮ್ಮನವರ ಹೃದಯ ಸಂತೋಷದಿಂದ ಅರಳಿಹೋಯಿತು. ಅವರಿಗೆ ನಾಚಿಕೆಯಿಂದ ತಲೆತಗ್ಗಿಸುವಂತಾಯಿತು. ತಮ್ಮ ಮಗಳ ಮನೆಯಲ್ಲಿ ಒಂದು ದಿನವೂ ಆ ರೀತಿ ಊಟ ಮಾಡಿರಲಿಲ್ಲ. ಮಗಳಂತೂ ಒಂದು ದಿನವೂ ತಾಯಿಯನ್ನು ಮನೆಗೆ ಬರುವಂತೆ ಕರೆದಿರಲಿಲ್ಲ. ಅಳಿಯ ಬೆಂಕಿಯ ಕಿಡಿ. ಅವನು ಅವರ

ಊರಿಗೆ ಬರುವುದಂತೂ ಕನಸಾಯಿತು. ಅವನೀಗ ಒಂದೆರಡು ವರ್ಷ ಪಡಬಾರದ ಭವಣೆಪಟ್ಟು, ಮೂರು ವರ್ಷಗಳ ಕೆಳಗೆ ಬೆಂಗಳೂರಿನಲ್ಲಿ ಒಂದು ಫೋಟೋ ಸ್ಟುಡಿಯೋವನ್ನು ತೆಗೆದಿದ್ದನು. ಅವನ ಶ್ಯೋರು ಅವರನ್ನು ಮೆತ್ತಗೆ ಮಾಡಿದ್ದಿತು. ಹೊಲ ಮಾರಿ ಅಳಿಯನಿಗೆ ಸ್ಟುಡಿಯೋ ತೆಗೆಯಲು ದುಡ್ಡು ಕೊಟ್ಟಿದ್ದರು. ಮಗಳು ಅವರ ಮನೆಗೆ ಬಂದು ನಾಲ್ಕು ವರ್ಷಗಳಾಗಿದ್ದಿತು. ಮಗಳಿಂದ ಬಂದಿದ್ದ ಕಾಗದಗಳು ಹೃದಯ ವಿದ್ರಾವಕವಾಗಿದ್ದುವು! ಆ ಸಂಕಟ ಅವರನ್ನು ಎಚ್ಚರಿಸಿತು. ಕೈಗೆ ನಿಲುಕುವ ಸಾಕಿದ ಮಗಳನ್ನಾದರೂ ಕಣ್ಣು ತುಂಬ ನೋಡೋಣವೆಂದು ಮೀನಾಕ್ಷಿಯನ್ನು ಹುಡುಕಿಕೊಂಡು ಬಂದಿದ್ದರು. ಮೀನಾಕ್ಷಿ ಎರಡು ದಿವಸಗಳ ಮೇಲೆ ಹೆದರುತ್ತ ಹೆದರುತ್ತ ಕೇಳಿದಳು,

"ಅಮ್ಮಾ, ಈವಾಗ ಕಾಮಾಕ್ಷಿ ಎಲ್ಲಿದಾಳೆ. ಚೆನ್ನಾಗಿದಾಳಾ. ಎಷ್ಟು ಮಕ್ಕಳು?"

"ಮಕ್ಕಳಿಗೇನಮ್ಮ, ವರ್ಷಕ್ಕೊಂದು. ನಾಲ್ಕು ಮಕ್ಕಳಿದ್ದಾರೆ. ....ಬೆಂಗಳೂರಿನಲ್ಲಿ" ಎಂದು ಮಾತು ಹಾರಿಸಿಬಿಟ್ಟರು.

"ನಾಲ್ಕು ಮಕ್ಕಳೇ........ಪುಣ್ಯವಂತೆ" ಎಂದು ಮನಸ್ಸಿನಲ್ಲೇ ಅಂದುಕೊಂಡಳು. ಹಿಂದೆ ಗಟ್ಟಿಯಾಗಿ ಆಡಿ ಅನುಭವಿಸಿದ್ದಳು. ಅದನ್ನು ಗಟ್ಟಿಯಾಗಿ ಹೇಳುವುದಕ್ಕೂ ಅವಳಿಗೆ ಹೆದರಿಕೆಯಾಯಿತು. ಅದರ ಹಿಂದೆಯೇ ಅವಳ ಮನಸ್ಸಿನಲ್ಲಿ ಈ ಆರುವರ್ಷಗಳಿಂದ ಕಾಣದ, ತನ್ನ ಮನಸ್ಸಿನಿಂದ ಮಾಯವಾಗದ ಚಂದ್ರಶೇಖರನ ಅಂದಿನ ರೂಪು ಜೀವಹೊತ್ತು ಬಂದು ನಿಂತಿತು. ಅಂದಿನ ಚಂದ್ರು ಇಪ್ಪತ್ತು ವರ್ಷದ ತರುಣ. ಈ ದಿನ ಚಂದ್ರು ಹೇಗಿರುತ್ತಾನೋ? ನಾಲ್ಕು ಮಕ್ಕಳ ತಂದೆ. ಚಂದ್ರು ಕಾಮಾಕ್ಷಿಯನ್ನು ಅಷ್ಟು ಪ್ರೀತಿಸುತ್ತಾನೆಯೋ? ನನ್ನನ್ನು............ಛೀ! ಏಂತಹ ಯೋಚನೆ. ನಾನೇನಾಗಬೇಕು ಚಂದ್ರುವಿಗೆ........ಎಂದು ಮೀನಾಕ್ಷಿ ಆ ಯೋಚನೆಯನ್ನು ಪ್ರಯತ್ನ ಪೂರ್ವಕವಾಗಿ ತಳ್ಳಿಹಾಕಿದಳು. ಆದರೆ ಈ ಯೋಚನೆಯಿಂದ ಅವಳಿಗೆ ಕೊಂಚವೂ ಸಮಾಧಾನವಾಗಲಿಲ್ಲ.

ರಾಮಚಂದ್ರಯ್ಯ ಒಂದೆರಡು ದಿನ ರಜ ತೆಗೆದುಕೊಂಡು ಎಲ್ಲ

ರನ್ನೂ ಆಗುಂಬೆಗೆ ಕರೆದುಕೊಂಡು ಹೋದನು. ಮೀನಾಕ್ಷಿ ಆಗುಂಬೆಯ ಸೂರ್ಯಾಸ್ತದ ಸೌಂದರ್ಯವನ್ನು ಕಣ್ಣಾರೆ ಕಂಡು ಆನಂದಿಸಿದಳು. ರಾಮಚಂದ್ರಯ್ಯ ಅತ್ತೆ ಮಾವಂದಿರು ಸಂತೋಷ ಪಡಬೇಕೆಂದು ಕೈ ಬಿಟ್ಟು ಹಣ ವೆಚ್ಚಮಾಡಿದನು. ಸುಬ್ಬಮ್ಮನವರಿಗೆ ಮನಸ್ಸು ಹುಳಿಹುಳಿಯಾಯಿತು. ಒಮ್ಮೊಮ್ಮೆ ಪಶ್ಚಾತ್ತಾಪದಿಂದ ಭೂಮಿಗಿಳಿದು ಹೋಗುತ್ತಿದ್ದರು. ಕಾಮಾಕ್ಷಿ ಒಂದು ದಿನವಾದರೂ ಬೆಂಗಳೂರನ್ನು ತೋರಿಸಿದ್ದಳೇ ? ಎಲ್ಲೋ ಚಿಕ್ಕವರಾಗಿದ್ದಾಗ ಸುಬ್ಬಮ್ಮನವರು ಬೆಂಗಳೂರಿಗೆ ಹೋಗಿದ್ದರು. ಅದರ ನೆನಪು ಮಸಕು ಮಸಕಾಗಿ ಅವರ ತಲೆಯಲ್ಲಿ ಉಳಿದಿತ್ತು.

ಶಾಮಣ್ಣನವರೂ ಸುಬ್ಬಮ್ಮನವರೂ ನಾಲ್ಕು ದಿವಸಗಳು ಇರಬೇಕೆಂದು ಬಂದವರು ಮೀನಾಕ್ಷಿಯ ಮಮತೆಯ ಬಲವಂತಕ್ಕೆ ಕಟ್ಟುಬಿದ್ದು ಒಂದು ತಿಂಗಳು ಹಾಯಾಗಿದ್ದುಬಿಟ್ಟರು. ಹೊರಡುವ ದಿನ ಸಮೀಪಿಸುತ್ತಿದ್ದಂತೆ ಸುಬ್ಬಮ್ಮನವರು ಒಂದೇ ಪಟ್ಟುಹಿಡಿದು ಕುಳಿತುಬಿಟ್ಟರು.

"ಮೀನಾಕ್ಷಿ, ನಿನ್ನ ಮದುವೆಯಾಗಿ ಐದು ವರ್ಷವಾಯಿತು. ಒಂದು ದಿನವಾದರೂ ಮನೆಗೆ ಕರೆಸಿ ನಿನಗೆ ಅರಶಿನ ಕುಂಕುಮ ಕೊಡಲಿಲ್ಲ. ಯಾರೋ ಹುಚ್ಚುಮುಂಡೇ ಮಗ ಜ್ಯೋತಿಷ್ಕ ಹೇಳಿದನೆಂದು ನಿನ್ನನ್ನು ದೂರಮಾಡಿದ್ದೆ. ಅವನು ಹೇಳಿದ್ದ ಹಾಗೆ ಕಾಮಾಕ್ಷಿ ಚೊಚ್ಚಲು ಮಗು, ಗಂಡು, ಸವೆದು ಸಣ್ಣಗಾಗಿ ಸತ್ತು ಹೋಯಿತು. ದೃಷ್ಟಿಯಾಗಿ ಮಗು ಸತ್ತುಹೋಯಿತು ಎಂದ. ಏನೋ ನಮಗೂ ಮಂಕುಮುಚ್ಚಿಹೋಗಿದ್ದಿತು. ನೀನೇ ಅದಕ್ಕೂ ಕಾರಣ, ನಿನ್ನ ನಕ್ಷತ್ರಬಲ ಅನಿಷ್ಟ ಸಿದ್ಧಿ ಎಂದುಕೊಂಡು ನಿನ್ನ ಮೇಲೆ ಕೋಪ ಬಂದಿತು. ಆ ಹಾಳಾದವ ಜ್ಯೋತಿಷ್ಕ ಮದುವೆಗೆ ಮೊದಲು ನಿನ್ನನ್ನು ಸಾಕಿದವರಿಗೂ ಅಕಾಲ ಮೃತ್ಯುಭಯವಿದೆಯೆಂದು ಹೇಳಿದ್ದ. ನಿನ್ನ ಜಾತಕವನ್ನೇ ಕೋಪದಿಂದ ಸುಟ್ಟುಬಿಟ್ಟೆ. ಮನೆಯಲ್ಲಿ, ನೀನು ಮನೆಬಿಟ್ಟು ಹೋದ ಪೀಡೆ ಕಳೆಯಲೆಂದು ಗೃಹ ಶಾಂತಿ, ಆಯುಷ್ಯ ಹೋಮ ಎಲ್ಲಾ ಮಾಡಿಸಿದೆ ಮೀನಾಕ್ಷಿ. ಈಗ

ತಿಳಿಯಿತು ತಾಯಿ. ನೀನಲ್ಲ ನಮ್ಮ ಪಾಲಿಗೆ ಪೀಡೆ. ನಾವೇ ನಿಮಗೆ ಪೀಡೆಗಳಾದೆವು. ಕಾಮಾಕ್ಷಿಯ ಬಾಳು ಆ ರೀತಿಯಾಯಿತು. ಇರುವವಳು ಒಬ್ಬಳು ಮಗಳು. ಅವಳ ಮುಖ ನೋಡಿ ಮೂರು ವರ್ಷಗಳಾಯಿತು. ಸಾಕಿದ ಮಗಳು ನೀನು. ನಿನ್ನನ್ನು ಕರೆಸದೆ ನಾವು ಸಂಕಟ ಅನುಭವಿಸಿದೆವು."

"ಈಗೇನಾಯ್ತು ಅಮ್ಮ, ನೀವು ಕರೆಸಿಕೊಳ್ಳಲಿಲ್ಲ ಅಂತ ನಿಮ್ಮ ಮಮತೆಯೇನು ಕಮ್ಮಿಯಾಯ್ತೆ. ಇಲ್ಲಿ ಅವರೊಬ್ಬರನ್ನೇ ಬಿಟ್ಟು ಹೇಗೆ ಬರುವುದು. ನಿಮ್ಮ ಊರೇನು ಹತ್ತಿರ ಇರುವುದೇ, ವರ್ಷ ವರ್ಷವೂ, ಬರುವುದಕ್ಕೆ. ಅತ್ತೆಯವರು ಏನಂತಾರೋ. ಅವರಿ ಗಂತೂ ನಿಮ್ಮ ನೆರಳು ಕಂಡರೆ ಆಗುವುದಿಲ್ಲ."

"ನೀನು ಬರದೆ ಹೋದರೆ ನನಗೆ ಬಹಳ ದುಃಖವಾಗುತ್ತದೆ, ಮೀನಾಕ್ಷಿ ಏನೋ ಎಲ್ಲಾ ಮರೆತುಬಿಡು. ನನಗೂ ಕೆಟ್ಟಕಾಲ ವಾಗಿತ್ತು. ಬರುವುದಿಲ್ಲ ಅನ್ನಬೇಡ. ನಿಮ್ಮ ಯಜಮಾನರನ್ನು ಒಪ್ಪಿಸುವುದು ನಿನ್ನ ಭಾರ" ಎಂದು ಸುಬ್ಬಮ್ಮನವರು ದೈನ್ಯದಿಂದ ಕೇಳಿಕೊಂಡರು ಎಷ್ಟೇ ಆಗಲಿ ಮೀನಾಕ್ಷಿ, ಅವರ ಒಬ್ಬನೇ ಅಣ್ಣನ ಒಬ್ಬಳೇ ಮಗಳು. ಸುಬ್ಬಮ್ಮನವರು ಕಣ್ಣೀರು ಕರೆದು ಗೋಗರೆದರು. "ಈ ದಿನ ಖಂಡಿತ ಕೇಳಿ ನೋಡುತ್ತೇನಮ್ಮಾ. ನನಗಂತೂ ಬರ ಬೇಕೆಂದೇ ಆಸೆ" ಎಂದು ಮೀನಾಕ್ಷಿ ಸಮಾಧಾನ ಹೇಳಿದಳು. ಮೀನಾಕ್ಷಿಯ ಚಿತ್ತಫಲಕದಲ್ಲಿ ಸುಬ್ಬಮ್ಮನವರು, ಅವಳ ಅಮ್ಮನ ಚಿತ್ರ ಒತ್ತಿದರು. ಅವಳ ಹೃದಯ ಹಕ್ಕಿಯ ಗರಿಯಂತೆ ಹಗುರ ವಾಯಿತು. ಅವರ ಮನನೊಂದ ಮಾತುಗಳು ಅವಳ ನಿರ್ಧಾರವನ್ನು ಕರಗಿಸಿಬಿಟ್ಟಿದ್ದಿತು. ಅವರು ತನ್ನ ಮೇಲೆ ಏಕೆ ಅಷ್ಟು ವಿಷಕಾರಿದ ರೆಂದು ಅವರ ಬಾಯಿಂದಲೇ ಕೇಳಿ ಅವಳಿಗೆ ದುಃಖಕ್ಕಿಂತ ಹೆಚ್ಚು ಸಮಾಧಾನವಾಯಿತು. ಅಲ್ಲಿ ಅವರ ತಪ್ಪಿಗಿಂತ ಅವರ ಮೂಢ ನಂಬಿಕೆಯೇ ಹೆಚ್ಚು ಪರಿಣಾಮಕಾರಿಯೆಂದು ಅವಳ ಸುತರ್ಕಕ್ಕೆ ತೋರಿತು

ಆ ದಿನ ಸಾಯಂಕಾಲ ಮೂರು ಜನರೂ ಮಾತನಾಡುತ್ತ

ಮನೆಯ ಜಗುಲಿಯ ಮೇಲೆ ಕುಳಿತಿದ್ದಾಗ ಶಾಮಣ್ಣನವರು "ಮೀನಾ. ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳಂತೂ ಹಾಗಾಗಿಬಿಟ್ಟಳು. ನಿನ್ನನ್ನು ನೋಡಿದರೆ ಸಂಕಟವಾಗುತ್ತದೆ. ನಾವು ನಿನ್ನನ್ನು ಸಂಕಟಪಡಿಸಿದ್ದನ್ನು ನೆನೆಸಿಕೊಂಡರೆ ನಮಗೇ ನಾಚಿಕೆಯಿಂದ, ಪಶ್ಚಾತ್ತಾಪದಿಂದ ತಲೆ ತಗ್ಗಿಸುವಂತಾಗುತ್ತದೆ. ನಮಗೆ ನಿನ್ನನ್ನು ಬರಹೇಳಲು ಬಾಯೇ ಇಲ್ಲ ಮೀನ. ಅಲ್ಲೀಗೆ ಬಂದು ಒಂದೆರಡು ತಿಂಗಳು ಇದ್ದು ಸುಧಾರಿಸಿ ಕೋಮ್ಮ. ನಿನ್ನನ್ನು ನಾವೂ ಪ್ರೀತಿಯಿಂದ ಸಾಕಿದ್ದೇವೆ. ಏನೋ ಗ್ರಹಚಾರ ಮುಚ್ಚಿಕೊಂಡಿತ್ತು. ತಾತ್ಸಾರ ಮಾಡಬೇಡ. ಮುದಿ ತಂದೆ ಅನ್ನೋ ಪ್ರೀತಿಗಾದರೂ ಬಂದು ಒಂದು ಹದಿನೈದು ದಿವಸ ಇದ್ದು ಹೋಗು.

ನಿರಪರಾಧಿ ತಂದೆಯ ಮನನೊಂದ ಮಾತು ಕೇಳಿ ಮೀನಳ ನಿರ್ಧಾರ ಒಡೆದು ಹೋಯಿತು. ಅವರು ತನ್ನನ್ನು ಎಷ್ಟು ಪ್ರೀತಿ ಸುತ್ತಿದ್ದರೆಂಬ ಚಿತ್ರಗಳ ಸರ ಅವಳ ಕಣ್ಣು ಮುಂದೆ ಹರಿದುಹೋಯಿತು. ಮೀನಾಕ್ಷಿ ಅವರ ಜೊತೆ ಹೋಗಲು ನಿಶ್ಚಯಿಸಿಕೊಂಡು ಅವರಿಗೆ ಭರವಸೆಯಿತ್ತಳು

"ನೀನು ನೊಂದುಕೊಳ್ಳಬೇಡಾಪ್ಪ. ನಾನು ಅವರನ್ನು ಕೇಳುತ್ತೇನೆ. ಅವರು ಬೇಡ ಅನ್ನೊಲ್ಲ. ನನಗೆ ಅಲ್ಲಿಗೆ ಬರಬೇಕು ಅನ್ನಿಸುತ್ತೆ. ಆದರೆ ಅಲ್ಲಿ ಯಾರಿದ್ದಾರೆ. ಶೀನಿ ಇದ್ದಿದ್ದರೆ........"

ಮೀನಾಕ್ಷಿಯ ಕಣ್ಣುಗಳಲ್ಲಿ ನೀರೂರಿತು. ಕಂಠ ಗದ್ಗದವಾಯಿತು. ಆ ಸಂಕಟ ಆ ಸವಿನೆನಪು ಸುಬ್ಬಮ್ಮನವರ ತಾಯ ಕರುಳನ್ನು ಕತ್ತರಿ ಸಿತು. ಆಕೆ ಶೀನಿಯ ನೆನಪಿನಿಂದ ತಲ್ಲಣಿಸಿ ಹೋದರು. ಹೃದಯದ ಅಂತರಾಳದಲ್ಲಿ ಅಡಗಿದ್ದ ಶೋಕ ಬುಗ್ಗೆಯಂತೆ ಮೇಲಕ್ಕೆ ಚಿಮ್ಮಿ ಸುರಿಯಿತು.

"ಇನ್ನೆಲ್ಲಿ ಶೀನಿ ಮೀನಾ. ಅವನು ಹೋಗಿ ನಾಲ್ಕು ವರ್ಷ ಆಯ್ತಲ್ಲೇ. ಯಾವಾಗಲೂ ನಿನ್ನನ್ನೇ ನೆನೆಸಿಕೊಳ್ಳುತ್ತಿದ್ದ. ಎರಡು ಸಾರಿ ಮೆಣಸಿನಪುಡಿ ಡಬ್ಬದಲ್ಲಿ ದುಡ್ಡು ಕದ್ದುಬಿಟ್ಟ. ಯಾಕೋ ಎಂದು ಹಿಡಿದುಕೊಂಡು ಈ ಸುಟ್ಟ ಕೈಗಳಿಂದ ಎರಡು ಬಿಗಿದೆ. 'ಮೀನಕ್ಕನಿಗೆ

ಕಾಗದ ಬರಿಯಬೇಕು. ಅದಕ್ಕೆ ಕದ್ದೆ. ನಾನು ಕವರ್ ತಂದಿದ್ದೇನಮ್ಮಾ, ನಾನೇನೂ ತಿಂಡಿ ತಿನ್ನಲಿಲ್ಲ ' ಎಂದ. ನಿನ್ನ ಹೆಸರು ಕೇಳಿ ನನಗಿನ್ನೂ ರೋಷವೇರಿತು. ಹಾಳಾದವನೆ, ಅವಳಿಗೇಕೋ ಇಷ್ಟು ಸಾಯ್ತೀಯಾ ಎಂದು ಚೆನ್ನಾಗಿ ಹೊಡೆದುಬಿಟ್ಟೆ. ಆ ದಿನವೆಲ್ಲಾ ಕೋಪಿಸಿಕೊಂಡು ಊಟವನ್ನೂ ಸರಿಯಾಗಿ ಮಾಡದೆ, ನನ್ನ ಹತ್ತಿರ ಮಾತನಾಡದೆ ಕುಳಿತುಕೊಂಡುಬಿಟ್ಟಿದ್ದ. ಅದಾದ ಮಾರನೆಯ ದಿವಸ ಬೆಳಿಗ್ಗೆಯೇ ಈಜೋಕೆ ಹೋದವನು ನೀರಿನಲ್ಲಿ ಮುಳುಗಿ ಸತ್ತನಲ್ಲೇ. ನನ್ನ ಕಂದ. ಎಂತಹ ಬುದ್ಧಿ, ಎಷ್ಟು ವಿನಯ. ಅಯ್ಯೋ, ಹೋಗಿಯೇ ಬಿಟ್ಟನಲ್ಲೇ ಮೀನಾಕ್ಷೀ. ಅವನು ಹೋಗಿ ನಾನು ಬದುಕಿದ್ದೀನಲ್ಲೇ. ಯಾವ ಜನ್ಮದಲ್ಲಿ ಯಾವ ತಾಯಿ ಮಗನ್ನ ತೊರೆಸಿದ್ನೋ. ಯಾವ ಮಗು ಕತ್ತು ಹಿಚುಕಿ ಕೊಂದಿದ್ನೋ" ಎಂದು ಸುಬ್ಬಮ್ಮನವರು ಎದೆ ಬಡಿದುಕೊಂಡು ಅತ್ತರು. ಮೀನಾ ಶೀನುವನ್ನು ನೆನೆಸಿಕೊಂಡು ಅತ್ತಳು. ಶಾಮಣ್ಣನವರು ಸಣ್ಣ ಧ್ವನಿಯಲ್ಲಿ ಅತ್ತರು. ರಾಮಚಂದ್ರಯ್ಯ ಮನೆಗೆ ಬರುವವರೆವಿಗೆ ಎಲ್ಲರ ಊಟ ಆಗುವವರೆವಿಗೆ ಶೀನುವಿನ ಮರಣದ ದುಃಖ ಪ್ರದರ್ಶನದ ಪುನರಾವರ್ತನೆ ಆಗಿದ್ದಿತು.

ಆ ರಾತ್ರಿ ಮೀನಾಕ್ಷಿ ವಿಷಯವನ್ನು ಗಂಡನ ಕಿವಿಗೆ ಹಾಕಿದಳು. ರಾಮಚಂದ್ರಯ್ಯ ತಕ್ಷಣ ಒಪ್ಪಿಗೆ ಕೊಟ್ಟುಬಿಟ್ಟನು.

"ಹೋಗು ಮೀನಾ, ಅವರು ಅಷ್ಟು ಮಮತೆಯಿಂದ ಕರೆಯುವಾಗ ಬೇಡ ಅನ್ನೋದೇ"

"ಹೋಗಬಹುದು............ಆದರೆ ನೀವು ?"

"ಏನು ನಾನು ಎಲ್ಲಿಗಾದರೂ ಓಡಿಹೋಗ್ತೇನ್ಯೇ ?"

"ಹಾಗಲ್ಲ....ನಾನಿದ್ದಾಗಲೇ ನೀವು ಯೋಚಿಸಿ ಯೋಚಿಸಿ ಸಣ್ಣಗಾಗಿ ಹೋಗಿದ್ದೀರಿ. ಇನ್ನು ನಾನು ಹೊರಟು ಹೋದರೆ ಅಂತ."

"ನನ್ನ ವಿಷಯ ಇನ್ನೂ ಅಷ್ಟು ಮನಸ್ಸಿಗೆ ಹಚ್ಚಿಕೊಂಡಿದ್ದೀಯಾ, ಮೀನ"

"ಹಾಗಂದರೆ................?"

"ನಿನಗೆ ಏನು ಸುಖ ಕೊಟ್ಟೆ ಎಂದು ನನ್ನ ಮೇಲೆ ಅಷ್ಟು ಪ್ರೀತಿ ಇಟ್ಟುಕೊಂಡಿದ್ದೀಯ?"

"ಚೆನ್ನಾಗಿದೆ ನಿಮ್ಮ ಬೋಧನೆ. ಕೈ ಹಿಡಿದ ಹೆಂಡತಿ ಸುಖ ಕೊಟ್ಟರೇ ಪ್ರೀತಿಸಬೇಕೆ................ನೀವೇನೂ ನನಗೆ ಕಷ್ಟ ಕೊಟ್ಟಿಲ್ಲವಲ್ಲ!"

"ಮೀನಾ, ನೀನು ದೇವತೆ........ಅದಕ್ಕೇ ನಿನ್ನ ಬಾಯಲ್ಲಿ ಇಂತಹ ಮಾತುಗಳು"

"ನಾನು ದೇವತೆಯಾದರೆ, ನೀವು ದೇವರು"

ರಾಮಚಂದ್ರಯ್ಯನಿಗೆ ಆನಂದದಿಂದ ಕಣ್ಣಲ್ಲಿ ನೀರು ಬಂದಿತು.

"ನೀನು ಯೋಚಿಸಬೇಡ ಮೀನಾ. ನೀನು ಸಂತೋಷವಾಗಿರಬೇಕೆಂದೇ ನನ್ನ ಇಷ್ಟ. ನಿನ್ನ ಮನಸ್ಸಿಗೆ ಸಂತೋಷವಾಗುವ ಹಾಗಿದ್ದರೆ ಸರಿ ನೀನು ಏನು ಮಾಡಿದರೂ ನನ್ನ ಅಭ್ಯಂತರವಿಲ್ಲ. ಅದೇ ನನಗೆ ಸಂತೋಷವಾಗುತ್ತದೆ. ನಾನು ಅಮ್ಮನಿಗೆ ಹೇಳುತ್ತೇನೆ. ಹೋಗಿಬಿಟ್ಟು ಬಾ. ಒಂದು ತಿಂಗಳು ಅನ್ನುವುದು ಏನು ಒಂದು ನಿಮಿಷದಂತೆ ಕಳೆದು ಹೋಗುತ್ತದೆ."

ಮೀನಾಕ್ಷಿಗೆ ಅವನ ಒಪ್ಪಿಗೆಯಿಂದ ಸಮಾಧಾನವಾಯಿತು. ತನ್ನ ಗಂಡನ ವಿಷಯವಾಗಿ ಅಭಿಮಾನ ಮೂಡಿತು. ನಾನು ಈ ವ್ಯಕ್ತಿಯನ್ನು ಎಷ್ಟು ದ್ವೇಷಿಸುತ್ತೇನೋ ಅಷ್ಟೇ ಪ್ರೀತಿಸುತ್ತೇನೆ; ಎಂದುಕೊಂಡಳು.

ರಾಮಚಂದ್ರಯ್ಯ ನಾಲ್ಕು ದಿವಸಗಳು ರಜ ತೆಗೆದುಕೊಂಡು ಎಲ್ಲರನ್ನೂ ಸಾಗರಕ್ಕೆ ಕರೆದುಕೊಂಡು ಹೋದನು.

ಮೀನಾಕ್ಷಿ ಮೂರು ವರ್ಷಗಳಿಂದ ಬರದೆ ಬರದೆ ಕಡೆಗೆ ತಮ್ಮ ಎಣಿಕೆಗೂ ಮೀರಿ ತನ್ನ ತಾಯಿತಂದೆಗಳೊಡನೆ ತಮ್ಮ ಊರಿಗೆ ಬಂದಿದ್ದು ನಾಗವೇಣಮ್ಮನವರ ಹೊಟ್ಟೆ ಉರಿಸಿತು. ಅದಕ್ಕಿಂತ ಹೆಚ್ಚಾಗಿ ಮೀನಾಕ್ಷಿಯನ್ನು ಮಾಟಗಾತಿ, ಮಂತ್ರಗಾತಿ, ಗಯ್ಯಾಳಿ, ರಾಕ್ಷಸಿ ಎಂದು ಬಯ್ಯುವುದಕ್ಕೆ ಇಲ್ಲದೇ ಹೋಯಿತಲ್ಲಾ ಎಂದು ಆಕೆಗೆ ಹೆಚ್ಚು ಸಂಕಟವಾಗಿದ್ದಿತು. ಆಕೆ ಮೀನಾಕ್ಷಿಯನ್ನು ಮಾತನಾಡಿಸಲೇ

ಇಲ್ಲ. ಜೊತೆಗೆ ರಾಮಚಂದ್ರಯ್ಯನ ತಾಯಿ ಅವಳನ್ನು ಏನಾದರೂ ಬೈದು ರಂಪ ಮಾಡುತ್ತಾಳೆಂದು ಇದ್ದ ಒಂದೂವರೆ ದಿವಸವೂ ನೆರಳಿನಂತೆ ಬೆನ್ನುಕಾಯ್ದನು. ಮೀನಾಕ್ಷಿಯೇ ಒಂದು ಸಾರಿ ಗಂಡನ ಕಣ್ಣು ತಪ್ಪಿಸಿ ತನ್ನ ಆಶೆಯನ್ನು ಅತ್ತೆಯ ಹತ್ತಿರ ಹೇಳಿ. "ಹೋಗಿ ಬರಲೇ ಅತ್ತೆ. ಆರು ವರ್ಷ ಆಯಿತು. ಅಪರೂಪಕ್ಕೆ ತಾವೇ ಬಂದು ಬಾ ಎಂದು ಕರೆಯುತ್ತಿದ್ದಾರೆ" ಎಂದಳು. ನಾಗವೇಣಮ್ಮ ಸಿಟ್ಟಿನಿಂದ ಬೆಂಕಿಯಾದರು. ಕೋಪ ತೋರಿಸದೆ ವ್ಯಂಗ್ಯವಾಗಿ,

"ಕೇಳೋದಕ್ಕೆ ಬಾಯಿ ಹೇಗೆ ಬಂತು ನಿಂಗೆ ನಾಚಿಕ್ಕೆಟ್ಟೋಳೆ. ರಾಕ್ಷಸಿ, ಮಾಟಮಾಡೋಳು ಎಂದು ಹಂಗಿಸಿ, ಆಡಬಾರದ ಮಾತನ್ನು ಆಡಿ ಹೆಣ್ಮಗು ಹೊಟ್ಟೆ ಉರಿಸಿದವರಿಗೆ ಈಗ ಬಂದ್ಬಿಡ್ತೇನೋ ಪಿರೀತಿ ....ಕೊಳ್ಳೇ ಹೋಗ್ತಿದೆ. ಅವ್ರು ಕರ್ಯೋರು. ನಾಚಿಕ್ಕೆಟ್ಟೋಳು ಬಂದು ನನ್ನ ಕೇಳೋದು. ಏನೋ ಎಲ್ಲಾ ನನ್ನ ಕೇಳೇ ಮಾಡಿದ್ಲು ಈ ಮೂರು ವರ್ಷದಿಂದ. ಚಿತಾವ್ಣೆ ಮಾಡಿ ಗಂಡನ ಎಗರಿಸಿಕೊಂಡು ಹೋದ್ಳು. ಈಗ ಬಂದ್ಬಿಡ್ತೇನೋ ಮರ್ಯಾದೆ. ನನ್ನೇನ್ಕೇಳ್ತೀಯೆ, ಹೋಗೇ ಆಚ್ಗೆ. ನೀನುಂಟು ನಿನ್ನ ಗಂಡ ಉಂಟು. ಇದಾನಲ್ಲಾ ನಿನ್ನ ಕೈಗೊಂಬೆ. ಕೀಲ್ಕೊಟ್ರೆ ತಿರ್ಗೋ ಕಪೂರ್ರದ ಬೊಂಬೆ. ಕೇಳ್ಹೋಗು ಅವನ್ನೇ" ಎಂದು ಎಲ್ಲರನ್ನೂ ಬೈದು ಕೂಗಾಡಿಬಿಟ್ಟರು. ಮೀನಾ ಹೊರಗೆ ಬಂದು ಬಿಟ್ಟಳು. ಸುಬ್ಬಮ್ಮನವರು ಅವಳ ಮುಖ ಮಿಕಮಿಕನೆ ನೋಡಿದರು. "ಅಂಥಾ ಅತ್ತೆ ಎಲ್ಲಿಗೂ ಸಿಕ್ಕಾರ್ಯೆ" ಅನ್ನುವ ತನ್ನ ಮಾತನ್ನು ಅವರು ಹಂಗಿಸುತ್ತಿರುವಂತೆ ತೋರಿತು. ರಾಮಚಂದ್ರಯ್ಯನೊಡನೆ ಮಾತನಾಡಿ ಅವನಿಗೆ ಎಲ್ಲ ಹೇಳಿ ಹೋಗುವುದೇ ಸರಿ ಎಂದು ನಿರ್ಧರಿಸಿಕೊಂಡಳು.

ಮಾರನೆಯ ದಿನ ರಾಮಚಂದ್ರಯ್ಯ ಎಲ್ಲರನ್ನೂ ಕರೆದುಕೊಂಡು ಅರಶೀಕೆರೆಯ ರೈಲು ಹತ್ತಿದನು. ಅರಶೀಕೆರೆಯಲ್ಲಿ ಎಲ್ಲರೂ ಇಳಿದರು. ಮೈಸೂರಿನ ರೈಲು ಹತ್ತಲು ಒಂದೆರಡು ಘಂಟೆಗಳ ವಿರಾಮವಿದ್ದುದರಿಂದ ರಾಮಚಂದ್ರಯ್ಯ ಗಾಡಿಮಾಡಿ ಎಲ್ಲರನ್ನೂ ಊರುನೋಡಲು ಕರೆದುಕೊಂಡುಹೋದನು. ಅದು ಒಂದು ನೆವವಾಗಿದ್ದಿತು.

ರಾಮಚಂದ್ರಯ್ಯ ನೇರವಾಗಿ ಗಾಡಿಯನ್ನು ಮಾರ್ಕೆಟ್ಟಿಗೆ ಹೊಡೆಸಿದನು. ಲಕ್ಷ್ಮಯ್ಯಶೆಟ್ಟರ 'ಧನಲಕ್ಷ್ಮೀ ವಿಲಾಸ್' ಜವಳಿ ಅಂಗಡಿಯ ಮುಂದೆ ಗಾಡಿ ನಿಲ್ಲಿಸಿ ತಾನು ಇಳಿದು ಎಲ್ಲರನ್ನೂ ಇಳಿಯುವಂತೆ ಹೇಳಿದನು. ಸುಬ್ಬಮ್ಮನವರು ಗಾಡಿಯಲ್ಲೇ "ಇಲ್ಲಿಗೇಕೆ ಬಂದ್ವಿ ಮೀನಾ" ಎಂದರು. ರಾಮಚಂದ್ರಯ್ಯ ಕಣ್ಣುಮಿಟಕಿಸಿದನು. ಮೀನಾಕ್ಷಿ ನಕ್ಕು, "ನನಗೆ ಸೀರೆ ತೆಗೀಬೇಕು ಅಂತಿದ್ರು. ನೋಡಿಕೊಂಡು ಹೋಗೋಣಾಂತ ಬಂದ್ವಿ. ಬಾಮ್ಮಾ ನೀನೂ ನೋಡು" ಎಂದು ಸುಬ್ಬಮ್ಮನವರನ್ನೂ ಕರೆದುಕೊಂಡು ಹೋದಳು. ರಾಮಚಂದ್ರಯ್ಯ "ನೀವೂ ಬನ್ನಿ ಮಾವಯ್ಯ. ನಾನು ಒಂದು ಜೊತೆ ಪಂಚೆ ತಗೊಳ್ಳಬೇಕೂಂತ ಇದೀನಿ" ಎಂದು ಶಾಮಣ್ಣನವರನ್ನು ಆಹ್ವಾನಿಸಿದನು.

ತನ್ನ ಬದಲು ಮೀನಾಕ್ಷಿ ಆ ಅಂಗಡಿಯಲ್ಲಿ ಸುಬ್ಬಮ್ಮನವರಿಗೆ ಒಂದು ಹಸಿರು ಧರ್ಮಾವರದ ಸೀರೆಯನ್ನು ತೆಗೆಸಿಕೊಟ್ಟಳು. ಸುಬ್ಬಮ್ಮನವರು ತೆಗೆದುಕೊಳ್ಳಲು ಬಹಳ ಗಲಾಟೆ ಮಾಡಿದರು. "ಪರ್ವಾಗಿಲ್ಲ ತೆಗೆದುಕೋಮ್ಮ. ನೀನು ಹಾಗೆಲ್ಲಾ ಮಾಡಿದರೆ ನನಗೆ ಅಸಮಾಧಾನವಾಗುತ್ತೆ. ನಾನು ಊರಿಗೇ ಬರುವುದಿಲ್ಲ" ಎಂದು ಮೀನ ಹಟ ಮಾಡಿದಳು. "ತಗೊಳ್ಳಿ ಅತ್ತೆಮ್ಮ.......ಏನೋ ಅಪರೂಪಕ್ಕೆ ಬಂದಿದ್ದೀರಿ" ಎಂದು ರಾಮಚಂದ್ರಯ್ಯ ಬಲವಂತ ಮಾಡಿದನು. ಸುಬ್ಬಮ್ಮನವರಿಗೆ ಬಹಳ ನಾಚಿಕೆಯಾಯಿತು. ಆಕೆ ಅಪಮಾನದ ನೋವಿನಿಂದ ಕುಗ್ಗಿಹೋದರು. ಅಂಗಡಿಯಲ್ಲಿ ಎಲ್ಲರೆದುರಿಗೆ ತೀವ್ರವಾಗಿ ಪ್ರತಿಭಟಿಸುವುದಕ್ಕಿಲ್ಲ. ಲಕ್ಷ್ಮಯ್ಯಶೆಟ್ಟರೂ ವ್ಯಾಪಾರದ ದೃಷ್ಟಿಯನ್ನು ಹಿಂದೆ ಹಾಕಿ ಲೌಕೀಕವಾಗಿ ತಮ್ಮ ಅನುಮೋದನೆಯನ್ನೂ ಸೇರಿಸಿದರು.

"ತಗೊಳ್ಳಿ ತಾಯಿ....ಅಳಿಯಂದೇವ್ರು ಅಷ್ಟು ಪ್ರೀತಿಯಿಂದ ಕೊಡಿಸುತ್ತಿರುವಾಗ ಬೇಡ ಅನ್ಬಾರ್ದು. ಈವತ್ತು ಅವರು. ನಾಳೆ ನಿಮ್ಮ ಮಗಳ್ಳಿಗೆ ನೀವು. ಇದೇ ಅಂಗಡಿಗೆ ಬನ್ನಿ. ನಿಮಗೆ ಬೇಕಾದ ರಖಂವಾರಿ ಸೀರೆಗಳು ಯಾವಾಗಲೂ ಸಿಕ್ಕುತ್ತದೆ. ನೀವು

ಎಲ್ಲಿದ್ರೂ ಸರಿ. ಆರ್ಡರ್ ಕೊಟ್ಟರೆ ಪೋಸ್ಟಿನಲ್ಲಿ ಕಳುಹಿಸುತ್ತೇವೆ"

ಸುಬ್ಬಮ್ಮನವರು ಆ ಸೀರೆಯನ್ನು ತೆಗೆದುಕೊಳ್ಳಲೇಬೇಕಾಯಿತು.

ಸೀರೆ ವ್ಯಾಪಾರವಾದ ಮೇಲೆ ರಾಮಚಂದ್ರಯ್ಯ ಒಂದು ಜೊತೆ ಪಂಚೆಯನ್ನು ತೆಗೆದುಕೊಂಡು ಹೊತ್ತಾಯಿತೆಂದು ಬೇಗ ಬಿಲ್ಲು ಬರೆಸಿ ಅರವತ್ತೈದು ರೂಪಾಯಿಗಳನ್ನು ಶೆಟ್ಟರ ಕೈಗೆ ಕೊಟ್ಟು ಚಿಲ್ಲರೆ ತೆಗೆದುಕೊಂಡು ಹೊರಗೆ ಬಂದನು. ಮತ್ತೆ ಎಲ್ಲರೂ ಗಾಡಿಯನ್ನು ಹತ್ತಿದರು. ಅವರು ಸ್ಟೇಷನ್ನಿಗೆ ಬರುವ ವೇಳೆಗೆ ಗಾಡಿ ಬರಲು ಇನ್ನೂ ಹದಿನೈದು ನಿಮಿಷಗಳಿದ್ದುವು. ರಾಮಚಂದ್ರಯ್ಯ ಎಲ್ಲರಿಗೂ ಟಿಕೇಟು ತೆಗೆದುಕೊಟ್ಟು ಮೀನಾಕ್ಷಿಯ ಕೈಗೆ ಇಪ್ಪತ್ತು ರೂಪಾಯಿಗಳನ್ನು ಕೊಟ್ಟನು. ರೈಲ್ವೆ ನಿಲ್ದಾಣದಲ್ಲಿ ರಾಮಚಂದ್ರಯ್ಯ ಪಂಚೆಯ ಪೊಟ್ಟಣವನ್ನು ಮಾವನ ಕೈಗೆ ಕೊಟ್ಟು " ತಗೊಳ್ಳಿ ಮಾವ. ಬೇಡ ಎನ್ನಬೇಡಿ" ಅಂದನು. ಶಾಮಣ್ಣನವರು ಬೆಚ್ಚಿಬಿದ್ದರು. ಅವರಿಗೆ ಏನೋ ಒಂದು ಬಗೆಯಾಯಿತು.

" ಬೇಡಬೇಡ.....ನಾವು ನಿನ್ನ ಅತ್ತೆ ಮಾವಂದಿರು, ನಾವು ಕೊಡಬೇಕಾದುದನ್ನು ನೀನೇ ನಮಗೆ ಕೊಡುತ್ತಿದ್ದೀಯಲ್ಲಾ. ಅದೆಲ್ಲಾ ಚೆನ್ನಾಗಿರುವುದಿಲ್ಲಪ್ಪ "

" ಇದನ್ನು ನಾನು ಕೊಡುತ್ತಿರುವುದು ಪ್ರೀತಿಯಿಂದ. ನನ್ನ ಮೀನಾಕ್ಷಿಯನ್ನು ಹದಿನಾಲ್ಕು ವರ್ಷಗಳ ತನಕ ಬೆಳೆಸಿಕೊಂಡು ಬಂದಿರೆಂದು ಕೃತಜ್ಞತೆಯಿಂದ ಕೊಡುತ್ತಿದ್ದೇನೆ. ಒಪ್ಪಿಸಿಕೊಳ್ಳಬೇಕು. ಅವಳ ಕಡೆಯವರು ಅಂತ ಇನ್ನಾರಿದ್ದಾರೆ ಹೇಳಿ. ತಂದೆ ತಾಯಿ ಬಂಧು ಬಳಗ ಎಲ್ಲಾ ನೀವೇ ಅವಳಿಗೆ."

ರಾಮಚಂದ್ರಯ್ಯ ಹೃದಯದಿಂದ ಬಂದ ಮಾತನ್ನಾಡಿದನು. ಅವನ ಪ್ರೀತಿಪೂರ್ವಕವಾದ ಮಾತನ್ನು ಕೇಳಿ ಶಾಮಣ್ಣನವರು ತಮಗೆ ಆ ಗುಣ ಬರದೇಹೋಯಿತಲ್ಲಾ ಎಂದು ಅವಮಾನದಿಂದ ನೊಂದುಕೊಂಡರು. ಶಾಮಣ್ಣನವರು ಮರುಮಾತಿಲ್ಲದೆ ತೆಗೆದುಕೊಂಡರು. ಇಂತಹ ಮಗಳನ್ನೂ ಅಳಿಯನನ್ನೂ ಸಿಶ್ಕಾರಣವಾಗಿ

ದೂರಮಾಡಿದ್ದೆವಲ್ಲಾ ಎಂದು ತಮ್ಮ ಮಂಕು ಬುದ್ಧಿಯನ್ನು ಹಳಿದು ಕೊಂಡರು.

ಕೊಂಚ ಹೊತ್ತಿನಲ್ಲೇ ಶಿಳ್ಳೆ ಹಾಕುತ್ತಾ ರೈಲು ಬಂದು ನಿಂತಿತು. ರಾಮಚಂದ್ರಯ್ಯ ಹೆಚ್ಚು ಗಲಾಟೆಯಿಲ್ಲದ ಒಂದು ಬೋಗಿಯನ್ನು ನೋಡಿ ಎಲ್ಲರನ್ನೂ ಹತ್ತಿಸಿ ಕೂಡಿಸಿದನು. ಕೂಲಿಯವನು ಸಾಮಾನು ಗಳನ್ನು ಅಟ್ಟದ ಮೇಲೆ ಜೋಡಿಸಿಟ್ಟು ಕೂಲಿ ತೆಗೆದುಕೊಂಡು ಹೊರಟುಹೋದನು. ರಾಮಚಂದ್ರಯ್ಯ ಮೀನಾಕ್ಷಿಗೆ ಪತ್ರಿಕೆ ಮಾರುವ ಹುಡುಗನಿಂದ 'ಕಥಾವಳಿ', 'ಕತೆಗಾರ' ಮಾಸ ಪತ್ರಿಕೆ ಗಳನ್ನು ತೆಗೆದುಕೊಟ್ಟನು. ಕದ್ದು ಕದ್ದು ಹೆಂಡತಿಯ ಮುಖವನ್ನು ನೋಡುತ್ತಿದ್ದನು. ಎರಡು ನಿಮಿಷಗಳಲ್ಲೇ ರೈಲು ಕದಲಿತು. ತನ್ನನ್ನು ಐದು ವರ್ಷಗಳ ಹಿಂದೆ ಸಾಗರಕ್ಕೆ ಹೊತ್ತು ತಂದ ರೈಲು, ಐದು ವರ್ಷ ಗಳ ಮೇಲೆ ತೀರ ಆಶ್ಚರ್ಯಕರವಾದ ರೀತಿಯಲ್ಲಿ ಅವಳ ಎಣಿಕೆಗೂ ಮೀರಿ ಮತ್ತೆ ಅವಳನ್ನು, ಅವಳ ತವರೂರಿಗೆ ಕರೆದುಕೊಂಡು ಹೋಗು ತ್ತಿದ್ದಿತು. ರಾಮಚಂದ್ರಯ್ಯ "ಹೋಗಿಬಿಟ್ಟು ಬರುತ್ತೀಯಾ ಮೀನಾಕ್ಷಿ. ಹೋದ ಕೂಡಲೇ ಕಾಗದ ಬರಿ. ಹೋಗಿಬಿಟ್ಟು ಬರುತ್ತೀರಾ ಮಾವಯ್ಯ" ಎಂದು ಸುಬ್ಬಮ್ಮನವರ ಕಡೆ ಮೀನಾಕ್ಷಿಯ ಕಡೆ ನೋಡಿದನು. ಎಲ್ಲರೂ "ಹೋಗಿಬಿಟ್ಟು ಬರುತ್ತೇವೆ" ಎಂದರು. ರಾಮಚಂದ್ರಯ್ಯನ ಕಣ್ಣಲ್ಲಿ ಕಣ್ಣೀರು ಉದುರಿದ್ದು ಮೀನಾಕ್ಷಿಯೊಬ್ಬಳಿಗೆ ಅರಿವಾಯಿತು. ರೈಲು ವೇಗವಾಗಿ ಚಲಿಸಿತು. ಮೀನಾಕ್ಷಿಗೆ ಪಂಜರ ದಿಂದ ತಪ್ಪಿಸಿಕೊಂಡ ಹಕ್ಕಿಯಂತೆ ಸ್ವಾತಂತ್ರ್ಯದ ಅನುಭವವಾಯಿತು. ಹೃದಯ ಆನಂದದಿಂದ ಮಿಡಿಯಿತು. ಅರೆಕ್ಷಣ ಹಿಂದೆ ಬಿಟ್ಟು ಬಂದ ಗಂಡನನ್ನು ನೆನೆಸಿಕೊಂಡಳು. ಗಂಡನಂತಲ್ಲದಿದ್ದರೂ ಆತ್ಮೀಯ ಗೆಳೆಯನಂತಿದ್ದ ಅವನ ಅಗಲಿಕೆಯು ನೆನಪಾಗಿ ಕಣ್ಣೀರು ಬಂದಿತು. ಸುಬ್ಬಮ್ಮನವರಿಗೆ ಅದು ಕಂಡಿತು.

"ಹೋಗಲಿ, ಮಕ್ಕಳಿಲ್ಲದಿದ್ದರೆ ಚಿಂತೆಯಿಲ್ಲ. ಗಂಡ ಹೆಂಡತಿ ಅನ್ಯೋನ್ಯವಾಗಿದ್ದಾರಲ್ಲಾ ಅಷ್ಟೇ ಸಾಕು" ಎಂದುಕೊಂಡರು.

ರೈಲು ವೇಗವಾಗಿ ಹೋಗುತ್ತಿತ್ತು. ಮೀನಾಕ್ಷಿಯ ಮನಸ್ಸು

ಭಾವನೆಗಳ ಮಡುವಾಗಿತ್ತು. ಹಿಂದಿನ ನೆನಪು ರೈಲುಗಾಡಿಯ ಚಕ್ರದಂತೆ ಅವಳ ತಲೆಯಲ್ಲಿ ಗಿರ‍್ರನೆ ಸುತ್ತತೊಡಗಿತು. ಕಿಟಕಿಯಲ್ಲಿ ತಲೆಹಾಕಿ ರೈಲು ಹಾದಿಯ ಪಕ್ಕದಲ್ಲಿ ದಿಗಂತದವರೆಗೆ ಹಾದುಹೋಗಿದ್ದ ಪ್ರಕೃತಿಸೌಂದರ್ಯವನ್ನು ನೋಡುವುದರಲ್ಲಿ ತಲ್ಲೀನಳಾದಳು.

೯

ಚಂದ್ರಶೇಖರ ಬೆಂಗಳೂರಿನಲ್ಲಿ 'ಮೀನಾ ಫೋಟೋ ಸ್ಟುಡಿಯೋ" ಎಂದು ಹೆಸರಿಟ್ಟು ಸಜ್ಜನರಾವ್ ಸರ್ಕಲ್ಲಿನಲ್ಲಿ ಒಂದು ಸ್ಟುಡಿಯೋ ತೆಗೆದಿದ್ದನು. ಬಹಳ ಚೆನ್ನಾಗಿ ವ್ಯಾಪಾರವಾಗುತ್ತಿದ್ದಿತು.

ಕಾಮಾಕ್ಷಿಗೆ ಮೀನಾ ಹೆಸರನ್ನು ಕೇಳಿ ಮೈ ಉರಿದಿತ್ತು. ಆದರೆ ಮಾತನಾಡುವಹಾಗಿರಲಿಲ್ಲ. ಮಾತನಾಡಿದರೆ ಪೆಟ್ಟು. ಅವಳ ಬಾಳಿಗೆ ಎಂದೋ ಕಾರ್ಮೋಡ ಕವಿದಿದ್ದಿತು. ಚಂದ್ರು ಅವರ ತಾಯಿತಂದೆಯರನ್ನು ತೊರೆಸಿದ್ದನು. ಅವಳನ್ನು ನೋಡಿದರೆ ಯಾವಾಗಲೂ ಸಿಡಿಗುಟ್ಟುತ್ತಿದ್ದನು. ಒಂದು ಮಾತಿಲ್ಲ, ಕಥೆಯಿಲ್ಲ. ಕಾಮಾಕ್ಷಿಯ ಕುರೂಪವನ್ನು ಯಾವಾಗಲೂ ಹಳಿಯುತ್ತಿದ್ದನು. ಅವನು ಸುಂದರಿ ಮೀನಾಕ್ಷಿಯನ್ನು ಮರೆಯಲಾರದೇಹೋದನು. ಯಾವಾಗಲೂ ಮೀನಾಕ್ಷಿಯದೇ ನೆನಪು. ಅದೇ ನೆನಪನ್ನು ತನ್ನ ಹೃದಯದಲ್ಲಿ ಎಂದೆಂದಿಗೂ ಹಸುರಾಗಿಡಲು, ಓದಿ ತನ್ನ ಕಣ್ಣುಗಳಿಗೆ ಹಬ್ಬ ಮಾಡಿಕೊಳ್ಳಲು ಸ್ಟುಡಿಯೋವಿಗೆ 'ಮೀನಾ ಫೋಟೋ ಸ್ಟುಡಿಯೋ' ಎಂದು ಹೆಸರಿಟ್ಟಿದ್ದನು. ಸ್ಟುಡಿಯೋವಿಗೆ ಆ ಹೆಸರಿಟ್ಟಿದ್ದನ್ನು ಕೇಳಿ ಕಾಮಾಕ್ಷಿ ಹೃದಯದ ತಳಮಳವನ್ನು ತಡೆಯಲಾರದೆ ಕೇಳಿದಳು.

"ಆ ಹೆಸರೇಕೆ ಇಟ್ಟಿರಿ ? ಅದೇನೂ ಚೆನ್ನಾಗಿ ಕಾಣೊಲ್ಲ. ನಮ್ಮ ವನಿತಾ ಹೆಸರನ್ನಾದರೂ ಇಡಬಾರದಾಗಿತ್ತೇ ? "

"ಬಹಳ ಚೆನ್ನಾಗಿದೆ ಹೆಸರು. ವನಿತಾ ಅಂತೆ. ನಿನ್ನ ಹೆಸರಿಡ

ಬೇಕಾಗಿತ್ತೇನೋ ರಂಭೆ."

"ನಾನೇನು ಹಾಗೆ ಹೇಳಲಿಲ್ಲ. ನಾನು ರಂಭೆ ಎಂದು ನಿಮ್ಮ ಮುಂದೆ ಹೇಳಿಕೊಳ್ಳಲಿಲ್ಲ. ನೀವೇ ವನಿತಾ ಅಂತ ನಿಮ್ಮ ಮಗಳಿಗೆ ಹೆಸರಿಟ್ಟಿದ್ದು. ಅವಳ ಹೆಸರೇ ಇಡಬಾರ್ದಿ ಅಂದೆ. ನಾಳೆ ನಿಮ್ಮ ಅತ್ತೆ ಮಾವ ಏನಂತಾರೆ, ಮೀನಾಕ್ಷಿ ಹೆಸರು ಇಟ್ಟರೆ. ಅವಳು ನಿಮಗೆ ಏನು ಸಂಬಂಧ."

"ನೀವ್ಯಾರೇ ಅದನ್ನ ಕೇಳೋಕೆ ? "

"ಹಾಗಲ್ಲಾಂದ್ರೆ....ಮೀನಾಕ್ಷಿ ನಿಮಗೇನು ಆಗಬೇಕು. ಅವಳ ಹೆಸರು ಏಕೆ ಇಡಬೇಕು ?"

"ಅದು ನನ್ನ ಇಷ್ಟದೇವತೆಯ ಹೆಸರು. ಮಧುರೆಯ ಮೀನಾಕ್ಷಿ. ಅದೊಂದು ಸುಪ್ರಸಿದ್ಧ ಸಿನಿಮಾ ತಾರೆಯ ಹೆಸರು. ಇಟ್ಟರೆ ತಪ್ಪೇನೀಗ ?"

"ನನಗಿಷ್ಟವಿಲ್ಲ............ನನಗೆ ಗೊತ್ತು ಅದು ಮೀನಾಕ್ಷಿಯ ಹೆಸರಿನಲ್ಲೇ ಇಟ್ಟಿರೋದು ನೀವು."

"ಇರಬಹುದು...."

"ಇರಬಹುದೇನು ಬಂತು....ಸತ್ಯವಾಗಿ ಅದೆ."

"ಹೌದು, ಸತ್ಯವಾಗಿ ಅದೆ. ಪ್ರಮಾಣವಾಗಿ ಅದೆ. ನಿನ್ನಾಣೆಗೂ ನಿಜ."

"ಕೈಹಿಡಿದ ಹೆಂಡತೀನ ಬಿಟ್ಟು ಇನ್ನೊಬ್ಬರ ಹೆಂಡತೀನ ಬಯಸೋಕೆ ನಾಚಿಕೆ ಆಗೊಲ್ವೆ?"

"ಎಷ್ಟೇ ತಲೆಹರಟೆ, ರಂಡೇ ಬಾಯಿಮುಚ್ಚಿಕೊಂಡು ನಾಯಿಯ ಹಾಗೆ ಬಿದ್ದಿರು. ಇಲ್ಲ ನಿಮ್ಮಪ್ಪನ ಮನೆಗೆ ಹೋಗು" ಎಂದು ಚಂದ್ರು ಅವಳ ಮೈ ಥಳಿಸಿದನು.

ಅವಳಿಗೆ ಅದೇ ಮನಸ್ಸಿನಲ್ಲಿ ನೆಟ್ಟುಹೋಗಿದ್ದಿತು. ಆದರೆ ಬಾಯಿಬಿಟ್ಟು ಹೇಳಲಾರದಾಗಿದ್ದಳು. ಚಂದ್ರು ಅವಳ ಮದುವೆಯಾದ ಎರಡು ವರ್ಷದಲ್ಲೇ, ಕುಡಿಯುವುದನ್ನು ಕಲಿತುಕೊಂಡಿದ್ದನು. ಅವನ ಓದೂ ಜೂನಿಯರ್ ಇಂಟರ್‌ಗೇ ಮುಗಿದಿತ್ತು. ಆಮೇಲೆ

ಒಂದು ವರ್ಷ ಒಬ್ಬ ನುರಿತ ಛಾಯಾಗ್ರಾಹಕನ ಕೈಕೆಳಗೆ ಕೆಲಸ ಕಲಿತುಕೊಂಡನು.

ಶಾಮಣ್ಣನವರಿಗೆ ಇದೆಲ್ಲಾ ವಿಪರೀತವಾಗಿ ಕಂಡಿತು. ತಮ್ಮ ಅಳಿಯನು ಛಾಯಾಗ್ರಾಹಕನಾಗುವುದೆಂದರೆ ಅವರಿಗೆ ಹಾಸ್ಯಾಸ್ಪದ ವಾಗಿ ತೋರಿತು. ಆದರೆ ಮಗಳಿಗಾಗಿ ಎಲ್ಲ ನುಂಗಿಕೊಂಡರು. ಚಂದ್ರು ಬೆಂಗಳೂರಿನಿಂದ ಎರಡು ಸಾವಿರ ರೂಪಾಯಿಗಳಿಗೆ ಬರೆದು ಹಾಕಿದನು. ಕಾಮಾಕ್ಷಿ ಬಾಣಂತನಕ್ಕೆ ತಾಯಿಯ ಮನೆಗೆ ಬಂದಿದ್ದ ವಳು ನಾಲ್ಕು ತಿಂಗಳಿಂದ ಅಲ್ಲಿಯೇ ಇದ್ದಳು. ಸ್ಟುಡಿಯೋವಿಗೆಂದು ದುಡ್ಡು ಕೇಳಲು ಶಾಮಣ್ಣನವರಿಗೆ ಕೋಪ ಬಂದಿತು. ದುಡ್ಡು ಕಳುಹಿಸಲಿಲ್ಲ. ಚಂದ್ರು ಮೇಲಿಂದ ಮೇಲೆ ಕಾಗದ ಬರೆದನು. ಏನೂ ಪ್ರಯೋಜನವಾಗಲಿಲ್ಲ. ಕಡೆಗೊಂದು ದಿನ ಕಾಮಾಕ್ಷಿಗೆ "ನಾನು ಬೊಂಬಾಯಿಗೆ ಹೊರಟುಹೋಗುತ್ತೇನೆ ; ನೀನು ನಿಮ್ಮ ಅಪ್ಪನ ಮನೆಯಲ್ಲೇ ಬಿದ್ದಿರು" ಎಂದು ಹೆದರಿಸಿ ಟೆಲಿಗ್ರಾಮ್ ಕೊಟ್ಟನು ! ಕಾಮಾಕ್ಷಿ ಭೂಮಿಗೆ ಇಳಿದುಹೋದಳು. ಅಳುತ್ತಾ, "ಅಪ್ಪಾ, ನನ್ನ ಹಣೇಬರಹ. ಇದೆಲ್ಲಾ ನನ್ನದೇ ತಾನೇ. ನಿನ್ನ ಹಟದಿಂದ ಅವರನ್ನು ಕಳೆದುಕೊಳ್ಳಲೆ ? ಅವರಿಗೆ ದುಡ್ಡು ಕಳುಹಿಸಿ ಬಿಡು" ಎಂದು ಬಲವಂತ ಮಾಡಿದಳು. ಸುಬ್ಬಮ್ಮನವರೆದುರಿಗೆ ಅತ್ತು ರಂಪ ಮಾಡಿದಳು. ಸುಬ್ಬಮ್ಮನವರು ಮಗಳ ಪಕ್ಷ ವಹಿಸಿ ಯಜಮಾನ ರಿಗೆ ದುಡ್ಡು ಕಳುಹಿಸುವಂತೆ ದುಂಬಾಲುಬಿದ್ದರು. ಶಾಮಣ್ಣನವರು ನಿರ್ವಾಹವಿಲ್ಲದೆ ತಮ್ಮದೊಂದು ಹೊಲ ಮಾರಿ ಇನ್ನಷ್ಟು ದುಡ್ಡು ಜೊತೆಮಾಡಿ ಎರಡುಸಾವಿರ ರೂಪಾಯಿಗಳನ್ನು ಕಳುಹಿಸಿದರು. ಸ್ಟುಡಿಯೋ ತೆಗೆದ ಮೂರು ತಿಂಗಳ ಮೇಲೆ ಚಂದ್ರು ಕಾಮಾಕ್ಷಿ ಯನ್ನೂ ಇಬ್ಬರು ಮಕ್ಕಳನ್ನೂ ಕರೆದುಕೊಂಡುಹೋದನು. ಅವನ ಮನಸ್ಸಿನಲ್ಲಿ ಅತ್ತೆಮಾವಂದಿರ ಮೇಲೆ ತನಗೆ ದುಡ್ಡು ಕೊಡದೆ ಅಷ್ಟು ಸತಾಯಿಸಿದರಲ್ಲಾ ಎಂದು ಕ್ರೋಧ ತುಂಬಿಕೊಂಡಿದ್ದಿತು. ಆ ಕ್ರೋಧದ ಹೊಗೆ ಆಗೀಗ ಕಾಮಾಕ್ಷಿಯನ್ನು ಆವರಿಸಿಕೊಳ್ಳುತ್ತಿದ್ದಿತು. ಆಗ ಹೋದುದೇ ಮತ್ತೆ ಕಾಮಾಕ್ಷಿ ತೌರುಮನೆಯ ಮುಖ ಕಂಡಿರಲಿಲ್ಲ.

ಚಂದ್ರಶೇಖರ ಚಾಮರಾಜಪೇಟೆಯಲ್ಲಿ ಅನುಕೂಲವಾಗಿದ್ದ ಚಿಕ್ಕದೊಂದು ಮನೆಯನ್ನು ಬಾಡಿಗೆಗೆ ಹಿಡಿದಿದ್ದನು. ಕಾಮಾಕ್ಷಿ ಕಷ್ಟದಿಂದ ಬೆಂಗಳೂರಿನ ಜೀವನ ನಡೆಸಿದ್ದಳು. ಚಂದ್ರುವಿಗೆ ಶುಕ್ರದೆಶೆ ಕೂಡಿದ್ದಿತು. ಕೈತುಂಬ ಹಣ ಸಂಪಾದಿಸುವನೆಂದು ಅಕ್ಕಪಕ್ಕದವರು ಹೇಳುತ್ತಿದ್ದರು. ಆದರೆ ಕಾಮಾಕ್ಷಿ ಮೂರು ವರ್ಷಗಳಿಂದ ಒಂದು ಒಳ್ಳೆಯ ಸೀರೆ, ಒಂದು ಒಡವೆ ಕಂಡಿರಲಿಲ್ಲ. ಮೈಮೇಲಿದ್ದ ಒಡವೆಗಳನ್ನೂ ಆ ಕಷ್ಟ ಈ ಕಷ್ಟ ಎಂದು ನೆಪ ಹೇಳಿ ಕಿತ್ತುಕೊಂಡು ಹೋಗಿದ್ದನು. ಕರೀಮಣಿಯ ಸರ ಒಂದು ಕತ್ತಿನಲ್ಲಿ ಉಳಿದಿದ್ದಿತು. ದುಡ್ಡೆಲ್ಲ ಎಲ್ಲಿ ಹೋಗುತ್ತಿದ್ದಿತೋ, ನಾಲ್ಕು ವರ್ಷಗಳಿಂದ ಪಡಬಾರದ ಕಷ್ಟಪಟ್ಟಳು. ಚಂದ್ರು ಕುಡಿದು ರಾತ್ರಿ ಒಂದು ಘಂಟೆ, ಎರಡು ಘಂಟೆಗೆ ಮನೆಗೆ ಬರುತ್ತಿದ್ದನು. ಬಂದ ತಕ್ಷಣ ಅದರ ಅಮಲಿನಲ್ಲಿ ಹೆಂಡತಿಯನ್ನು ಹೊಡೆಯುವುದು ; ಅದು ನಿತ್ಯ ಅವ್ಯಾಹತವಾಗಿ ನಡೆದೇ ಇದ್ದಿತು. ಕಾಮಾಕ್ಷಿ ಅತ್ತು ಕಣ್ಣೀರು ಬಸಿದಿದ್ದಳು. ಒಂದು ದಿನ ದುಃಖ ತಡೆಯಲಾರದೆ ಸುಬ್ಬಮ್ಮನವರಿಗೆ ಕಾಗದ ಬರೆದು ಹಾಕಿದಳು. ನಾಲ್ಕೈದು ದಿವಸಗಳ ಮೇಲೆ ಅವರಿಂದ ಜವಾಬು ಬಂದಿತು. ಆ ದಿನ ಭಾನುವಾರ. ಚಂದ್ರು ಮನೆಯಲ್ಲೇ ಇದ್ದನು. ಕಾಗದ ಅವನ ಕೈಗೇ ಸಿಕ್ಕಿತು. ಕಾಗದವನ್ನು ಓದಿ ಕಿಡಿಕಿಡಿಯಾದನು. "....ಡೇ, ನಿನಗೆ ಇಷ್ಟು ಧೈರ್ಯ ಬಂದುಬಿಟ್ಟಿತೇ. ಹೋಗು ನಿನ್ನ ಅಪ್ಪನ ಮನೆಗೇ ಹೋಗಿ ಹಾಯಾಗಿರು" ಎಂದು ಬಾಣಂತಿಯೆಂದೂ ನೋಡದೆ ಅವಳನ್ನು ಚೆನ್ನಾಗಿ ಹೊಡೆದು ಹೊರಗೆ ನೂಕಿದನು. ಅವನು ನೂಕಿದ ರಭಸಕ್ಕೆ ಕಾಮಾಕ್ಷಿ ಕೆಳಗೆ ಬಿದ್ದು ತಲೆ ಒಡೆದು ರಕ್ತ ಬಂದಿತು. ಚಂದ್ರುವಿಗೆ ಅಕ್ಕಪಕ್ಕದವರು ನೋಡಿ ಉಗಿಯುವರೆಂಬ ನಾಚಿಕೆಯೂ ಇರಲಿಲ್ಲ. ಪಕ್ಕದ ಮನೆಯಾತ ಬಂದು ಸಮಾಧಾನ ಹೇಳಿದರು. ಕಾಮಾಕ್ಷಿ ಅತ್ತು ಕರೆದು ಒಳಗೆ ಸೇರಿಕೊಂಡಳು. ಕಾಮಾಕ್ಷಿಗೆ ಹದಿನೈದು ದಿವಸಗಳವರೆಗೆ ಜ್ವರಬಂದಿತು. ಮನೆಯಲ್ಲಿ ಒಬ್ಬಳೇ. ಕೇಳುವವರೂ ದಿಕ್ಕಿರಲಿಲ್ಲ. ಮಕ್ಕಳೆಲ್ಲ ಕಿರುಚಿಕೊಂಡು ಅತ್ತರು. ಅವರನ್ನು ಸುಧಾರಿಸುವುದಕ್ಕೂ ಅವಳಿಗೆ ಚೈತನ್ಯವಿರಲಿಲ್ಲ.

ನೆರೆಮನೆಯಾಕೆಯ ಸಹಾಯದಿಂದ ಒಬ್ಬ ಮಡಿಹೆಂಗಸು ದೊರೆತರು. ಆಕೆ ಬಂದು ಚಂದ್ರುವಿಗೆ ತಿಳಿಯದಂತೆ ಅಡುಗೆ ಮಾಡಿಟ್ಟು ಹೋಗು ತ್ತಿದ್ದರು. ಕಾಮಾಕ್ಷಿಗೆ ಜೀವ ಬಿಡಬೇಕೆನ್ನಿಸಿತ್ತು. ಮನೆಯ ಕಾಂಪೌಂಡಿನಲ್ಲಿದ್ದ ಭಾವಿಯ ಕಡೆ ಅವಳ ಬುದ್ಧಿ ಎಳೆಯುತ್ತಿದ್ದಿತು. ಒಂದೊಂದು ದಿನ ಮಧ್ಯರಾತ್ರಿಯಲ್ಲಿ ಎದ್ದು ಆ ಭಾವಿಯಲ್ಲಿ ಬೀಳಲು ಹೋಗುತ್ತಿದ್ದಳು. ಆದರೆ ಮಕ್ಕಳು! ಹೃದಯ ಮಕ್ಕಳಿಗಾಗಿ ಅಳಕುತ್ತಿದ್ದಿತು. ಮಕ್ಕಳೆಲ್ಲ ಎದ್ದು ಬಂದು ಅತ್ತು ತನ್ನನ್ನು ಕರೆಯು ತ್ತಿರುವಂತೆ ಭಾಸವಾಗುತ್ತಿದ್ದಿತು. ಎಳೆಗೂಸು ನಿದ್ರೆಯಿಂದ ಎಚ್ಚೆತ್ತು ರೋದಿಸುತ್ತಿದ್ದಿತು. ಕಾಮಾಕ್ಷಿ ಕರುಳಿನ ಕರೆಯನ್ನು ಕೇಳಿ ಹಿಂದಕ್ಕೆ ಓಡಿಬರುತ್ತಿದ್ದಳು. ಮತ್ತೆ ತನ್ನ ಮುದ್ದುಮಗುವನ್ನು ಎತ್ತಿಕೊಂಡು ಎದೆಗೆ ಅಪ್ಪಿಕೊಳ್ಳುತ್ತಿದ್ದಳು. ತೊಡೆಯಮೇಲೆ ಮಲಗಿಸಿಕೊಂಡು ನಿದ್ದೆಮಾಡಿಸುತ್ತಿದ್ದಳು. ಆಚೀಚೆ ಮಲಗಿದ್ದ ಮಕ್ಕಳನ್ನು ನೋಡಿ ಅವಳ ಹೃದಯ ಸಂತೋಷದಿಂದ ಅರಳುತ್ತಿದ್ದಿತು. ಆ ಕ್ಷಣದಲ್ಲಿ ಕಾಮಾಕ್ಷಿ ದುಃಖವನ್ನು ಮರೆತು ಅತ್ಯಂತ ಸುಖಿಯಾಗುತ್ತಿದ್ದಳು.

ಕಾಮಾಕ್ಷಿಯೊಡನೆ ಎರಡು ವರ್ಷ ನೀರಸಮಯ ಬಾಳ್ವೆಯನ್ನು ಸಾಗಿಸುವುದರಲ್ಲಿ ಚಂದ್ರುವಿಗೆ ಸಾಕಾಗಿಹೋಗಿದ್ದಿತು. ಚಂದ್ರು ಕಾಮಾಕ್ಷಿಯೊಡನೆ ಕೇವಲ ಮೃಗಜೀವನ ನಡೆಸಿದ್ದನು. ಸಮಾಜದ ಸಾಕ್ಷ್ಯದಲ್ಲಿ ಹೆಂಡತಿ ಎಂದು ಕಟ್ಟಿಕೊಂಡ ತಪ್ಪಿಗಾಗಿ ಚಂದ್ರು ಕಾಮಾಕ್ಷಿಯೊಡನೆ ಬಲವಂತದ ಸಂಸಾರವನ್ನು ಸಾಗಿಸಿದ್ದನು. ಕಾಮಾಕ್ಷಿಯಲ್ಲಿ ಅವನಿಗೆ ಅಣುಮಾತ್ರವೂ ಪ್ರೇಮವಿರಲಿಲ್ಲ. ಹಣ ದಾಸೆಯಿಂದ, ಅವಿಕಸಿತ ಮನಸ್ಸಿನ ಅನಿಶ್ಚಿತ ಸುಳಿಗೆ ಸಿಕ್ಕಿ ಚಂದ್ರು ಕಾಮಾಕ್ಷಿಯನ್ನು ಮದುವೆಯಾಗಿದ್ದನು. ಕಾಮಾಕ್ಷಿಯೊಡನೆ ಪಶುವಿ ನಂತೆ ಬೆರೆತಿದ್ದನು. ಕಾಮಾಕ್ಷಿ ಅವನ ಪಶುತ್ವದ ಫಲವಾಗಿ ಅವನಿಗೆ ಮೂರು ಮಕ್ಕಳನ್ನೂ ಕೊಟ್ಟಿದ್ದಳು. ಆದರೆ ಚಂದ್ರುವಿಗೆ ಸಂಸಾರ ಸುಖ ಸಿಕ್ಕಿರಲಿಲ್ಲ. ಅವನ ಬಾಳಿನಲ್ಲಿ ಯಾವುದೋ ಕೊರತೆಯಿದ್ದಿತು. ಮನಸ್ಸು ಏನನ್ನೋ ಬಯಸುತ್ತಿದ್ದಿತು. ಆದರೆ ಆ ವಸ್ತು, ಆ ತನ್ನ ಬಯಕೆ ಏನೆಂದು ಚಂದ್ರುವಿಗೆ ತಿಳಿದಿರಲಿಲ್ಲ. ಮೀನಾಕ್ಷಿ ಅಡಿಗಡಿಗೆ

ನೆನಪಾಗುತ್ತಿದ್ದಳು. ಚಂದ್ರುವಿನ ಹೃದಯ ಅವಳ ನೆನಪಿನಿಂದ ಉಲ್ಲಸಿತವಾಗುತ್ತಿದ್ದಿತು. ಅವಳ ಮಿಲನಕ್ಕಾಗಿ ಹೃದಯ ತುಡಿಯು ತ್ತಿದ್ದಿತು. ಆದರೆ ಆಕ್ರಂದನ ಕ್ಷಣಿಕವಾಗಿ ನಶಿಸಿಹೋಗುತ್ತಿದ್ದಿತು. ಮತ್ತೆ ಚಂದ್ರು ಸಂಸಾರದಲ್ಲಿ ಆಸಕ್ತಿ ವಹಿಸಲು ಯತ್ನಿಸುತ್ತಿದ್ದನು. ಕಾಮಾಕ್ಷಿಯನ್ನು ಪ್ರೇಮಿಸಲು ಯತ್ನಿಸಿ ಬಾರಿಬಾರಿಗೂ ಸೋತು ಹೋಗುತ್ತಿದ್ದನು. ಕಾಮಾಕ್ಷಿ ಅರೆಕ್ಷಣವೂ ಚಂದ್ರುವನ್ನು ಮೆಚ್ಚಿಸ ಲಾರದೇಹೋದಳು. ಅವಳ ದುರಹಂಕಾರ, ತನ್ನ ತಂದೆತಾಯಿಗಳೇ ಚಂದ್ರುವನ್ನು ಓದಿಸಿ, ಮನುಷ್ಯನನ್ನಾಗಿಸಿದರೆಂಬ ಆವಳ ಮನಸ್ಸಿನಲ್ಲಿದ್ದ ತಿರಸ್ಕಾರ ಭಾವನೆ ಅವಳನ್ನು ನೆಲಕ್ಕೆ ತುಳಿಯುತ್ತಿದ್ದಿತು. ಚಂದ್ರುವಿನ ಮನಸ್ಸನ್ನರಿತು, ಅವನನ್ನು ರಮಿಸಿ ಅವನ ಪ್ರೇಮವನ್ನು ಸಂಪಾದಿಸ ಲಾರದೆ ಕಾಮಾಕ್ಷಿ ಪತಿಯ ಪ್ರೇಮವನ್ನು ಕಳೆದುಕೊಂಡ ಪರದೇಶಿ ಯಾಗುತ್ತಿದ್ದಳು.

ಎರಡು ವರ್ಷಗಳ ಮೇಲೆ ಈ ವಿರಸಮಯ ಬಾಳಿನಲ್ಲಿ ಚಂದ್ರು ವಿನ ಮನಸ್ಸು ವಿಕಾಸ ಹೊಂದಿದ್ದಿತು. ತನ್ನ ಮನಸ್ಸಿನ ತುಡಿತ ಯಾವ ವಸ್ತುವಿನ ಸಲುವಾಗೆಂದು ಅವನಿಗೆ ಅರಿವಾಗಿದ್ದಿತು. ತೀರ ಅಮಾನುಷ ರೀತಿಯಲ್ಲಿ ಮೀನಾಕ್ಷಿ ಅವನ ಬಾಳಿನಲ್ಲಿ ಸೇರಿಹೋಗಿದ್ದಳು. ಅವನ ಪ್ರತಿಯೊಂದು ನರನಾಡಿಗಳಲ್ಲೂ ಮೀನಾಕ್ಷಿಯ ನೆನಪು ಆನಂದದ ಹೊನಲನ್ನು ಉಕ್ಕಿ ಹರಿಸುತ್ತಿದ್ದಿತು. ಅವನ ಹೃದಯ ಹಗಲಿರುಳು ಮೀನಾಕ್ಷಿಯ ಮಿಲನಕ್ಕಾಗಿ ಮಿಸುಕಾಡಿತು. ಆದರೆ ಮೀನಾ? 'ಮೀನಾ ಇಂದು ಪರಪುರುಷನ ಹೆಂಡತಿ. ಸಮಾಜದ ದೃಷ್ಟಿಯಲ್ಲಿ ಮೀನಾ ಪರಸ್ತ್ರೀ. ಆದರೆ ಮೀನಾ ನನ್ನ ಮನದ ಹೆಂಡತಿಯೆಂದು ನನಗೆ ಗೊತ್ತಿರಲಿಲ್ಲವೆ. ಮೀನಾಕ್ಷಿಗೂ ಅದು ಗೊತ್ತಿಲ್ಲವೇ? ಗೊತ್ತಿರ ಬಹುದು! ಮೀನಾಕ್ಷಿ ನನ್ನನ್ನು ಇನ್ನೂ ಪ್ರೀತಿಸುತ್ತಾಳೆಯೇ? ಪ್ರೀತಿಸಬಹುದು. ನನ್ನ ಹಾಗೆಯೇ ಅವಳೂ ನನ್ನನ್ನು ನೆನೆಸಿ ಕೊಳ್ಳುತ್ತಿದ್ದಾಳೆಯೇ?' 'ಹೌದು, ಮೀನ ಹಗಲಿರುಳು ನಿನ್ನನ್ನು ನೆನೆಸಿಕೊಳ್ಳುತ್ತಿದ್ದಾಳೆ. ಮೀನಳ ಪ್ರೇಮ ನಿರ್ಮಲವಾದುದು. ಮೀನಾ ನಿನ್ನ ಪ್ರೇಯಸಿ. ಆದರೆ ನೀನು....ದುರ್ಬಲನಾಗಿ, ಹಣದ

ಆಶೆಗೆ ಮನ ಮೆಚ್ಚಿದ ಮೀನಳನ್ನು ಮರೆತೆ. ನೀನು ಮೀನಳಿಗೆ ಮೋಸ ಮಾಡಿದೆ ಚಂದ್ರೂ. ಮೀನ ನಿನ್ನನ್ನು ಮದುವೆಯಾಗಿ ಆದರ್ಶದ ದಾಂಪತ್ಯ ಜೀವನವನ್ನು ನಡೆಸಬೇಕೆಂದು ಆಶೆಯ ಸೌಧವನ್ನು ಕಟ್ಟಿ ಎಷ್ಟು ಆಸೆಯಿಂದ ಆ ಸುದಿನವನ್ನು ಎದುರು ನೋಡುತ್ತಿದ್ದಳು. ಅವಳ ಕೈ ಹಿಡಿದು ಉದ್ಧಾರ ಮಾಡುವೆಯೆಂದು ಎಷ್ಟು ಆನಂದ ಬೆರೆತ ಕುತೂಹಲದಿಂದ ನಿನ್ನ ಕಡೆಗೆ ದೃಷ್ಟಿ ಹರಿಸಿದ್ದಳು. ಆದರೆ ಚಂದ್ರು, ನೀನು ನಿರ್ಬಲನಾಗಿ, ಹಣದಾಸೆಗೆ ಆ ಸ್ವಪ್ನಜೀವಿಯ ಆಶಾಸೌಧವನ್ನು ಹೊಡೆದು ಕೆಡವಿದೆ. ನೀನು ಅಬಲೆ ಒಬ್ಬಳಿಗೆ ಮೋಸಮಾಡಿ ಮೋಸಗಾರನಾದೆ' ಎಂದು ಚಂದ್ರುವಿನ ಅಂತರಾತ್ಮ ಹಳಿಯುತ್ತಿದ್ದಿತು. ಚಂದ್ರು ಪಶ್ಚಾತ್ತಾಪದಿಂದ ಗೋಳಾಡುತ್ತಿದ್ದನು. ತನ್ನನ್ನೇ ತಾನು ಹಳಿದುಕೊಳ್ಳುತ್ತಿದ್ದನು. ವಿಪ್ಲವಗೊಂಡ ಮನಸ್ಸಿಗೆ ನೂರಾರು ಸಮಾಧಾನದ ನುಡಿಗಳನ್ನು ಹೇಳಿಕೊಳ್ಳುತ್ತಿದ್ದನು.

'ನಾನು ಮೋಸ ಮಾಡಲಿಲ್ಲ. ಮೀನಾಕ್ಷಿಯನ್ನು ನಾನು ಇಂದಿಗೂ ಪ್ರೇಮಿಸುತ್ತೇನೆ. ಆದರೆ ಆಗ ನನ್ನ ಮನಸ್ಸು ನಿರ್ಬಲವಾಗಿದ್ದಿತು. ನನ್ನ ಭಾವನೆಗಳು ಅವಿಕಸಿತವಾಗಿದ್ದುವು. ಪ್ರೇಮಿಯಾಗಿ, ಪ್ರೇಮದ ಪರಿಪೂರ್ಣತೆಗಾಗಿ ಸಮಾಜದ ದುಷ್ಟ ಶಕ್ತಿಗಳನ್ನು ಎದುರಿಸಿ ಹೋರಾಡಿ ಗೆಲ್ಲುವನ್ನು ಸಾಹಸ, ಆತ್ಮಬಲ, ಮನೋಸ್ಥೈರ್ಯ ನನ್ನಲ್ಲಿರಲಿಲ್ಲ. ನನಗಿದ್ದ ಭಾವನೆ ಆಗ ಸುಖ ಜೀವನದ ಕಡೆ. ನನ್ನ ಬಾಳು ಸುಖವಾಗಬೇಕು ಎಂಬ ಮಹದಾಶೆಯಿದ್ದಿತು. ಆ ಸುಖ ಹಣದಿಂದ ದೊರೆಯುವುದೆಂದುಕೊಂಡೆ. ಆದರೆ ಈ ದಿನ ಆ ನನ್ನ ಭಾವನೆ ಎಷ್ಟು ಅಸತ್ಯವಾಗಿತ್ತೆಂದು ಅರಿವಾಗಿದೆ. ನಾನೆಷ್ಟು ಮೂಢನಾಗಿದ್ದೆ. ಹಣವೇನೋ ಸಿಕ್ಕಿತು. ಆದರೆ ಆ ಹಣ ನನ್ನ ಸೌಖ್ಯವನ್ನು ನುಂಗಿಹಾಕಿತು. ನನ್ನ ಬಾಳು ಮಸಣವಾಯಿತು. ಸುಖ ಸಂತೋಷಗಳನ್ನು ಅರಸುತ್ತ ಹೋದಂತೆ ಅದು ನನ್ನ ಬಾಳಿನ ಸ್ವಪ್ನಮರೀಚಿಕೆಯಾಯಿತು. ಕಡೆಗೂ ನನಗೆ ಸುಖ ಸಿಕ್ಕಲಿಲ್ಲ. ನನ್ನ ಬಾಳು ಹಾಳಾಯ್ತು. ನನ್ನ ಮೀನಾ....ಎಲ್ಲಿಯ ನನ್ನ ಮೀನಾ' ಎಂದು ಚಂದ್ರು ಕಣ್ಣೀರಿಡುತ್ತಿದ್ದನು. ಚಂದ್ರು ಮೀನಳ ಯೋಚನೆ

ಯಲ್ಲಿ ತೊಳಲಾಡುತ್ತಿದ್ದನು. ಮನಸ್ಸಿಗೆ ಆಗೀಗ ಕಾರ್ಮೋಡ ಕವಿಯು ತ್ತಿದ್ದಿತು. ಬಗೆಗೆಟ್ಟ ಮನಸ್ಸು ದುಃಖದ ಭಾಂಡವಾಗುತ್ತಿದ್ದಿತು. ಚಂದ್ರು ಮನೆಯಲ್ಲಿ ಸಿಕ್ಕದ ಸುಖವನ್ನು, ಕೈ ಹಿಡಿದ ಹೆಂಡತಿ ಕೊಡಲಾರದ ಸುಖವನ್ನು ಬೇರೆ ಹೆಣ್ಣುಗಳಲ್ಲಿ ಸಿಕ್ಕುವುದೇನೋ ಎಂಬ ಆಸೆಯಿಂದ ಕೈ ನೀಡಿದನು. ನೀಡಿದ ಕೈಗೆ ಮದ್ಯ ತುಂಬಿದ ಪಾತ್ರೆ ಸಿಕ್ಕಿತು. ಮದಮುಚ್ಚಿದ ತೋಳುಗಳು ಅವನ ಮೈ ಬಳಸಿದುವು. ಚಂದ್ರು ಆ ಅಗ್ಗದ ಸುಖದಲ್ಲಿ ಮೀನಾಕ್ಷಿಯನ್ನು ಮರೆಯುವೆನೆಂದು ಕೊಂಡನು. ಆದರೆ ಅದು ಬರಿಯ ಭ್ರಾಂತಿಯಾಯಿತು. ಆ ಸುಖ ಮತ್ತೆ ಇಂಗಿಸುವ ಬದಲು ಅವನ ಪ್ರೇಮತೃಷೆಯನ್ನು ಹೆಚ್ಚಿಸಿತು. ಮೀನಳ ಮಿಲನದಾಸೆ ದಾವಾಗ್ನಿಯಂತೆ ಅವನ ಮೈ ಸುಟ್ಟಿತು. ಮತ್ತೆ ಒಂದು ವರ್ಷ ಕಳೆಯುವುದರಲ್ಲಿ ಆ ತೀರದ ಬಯಕೆ ಅವನಲ್ಲಿ ಅಡಿಗಡಿಗೆ ಹುಚ್ಚು ಹತ್ತಿಸುತ್ತಿದ್ದಿತು ಆ ಹುಚ್ಚು, ಆ ಬಯಕೆ ಚಂದ್ರನ ಗತಿ ಅವಗತಿಗಳೊಡನೆ ಬೆರೆತು ಅವನನ್ನು ಹೆಮ್ಮಾರಿಯಂತೆ ಕಾಡಿದುವು. ಹುಣ್ಣಿಮೆ ಹತ್ತಿರ ಬಂದಂತೆ ಚಂದ್ರುವಿಗೆ ಮೀನಳ ಗೀಳು ಹೆಚ್ಚಾಗುತ್ತಿದ್ದಿತು. ಅವಳ ಮಿಲನದಾಸೆಯು ಹೊರಹೊಮ್ಮಿ ಬಂದು ವಿಕೃತ ಅಟ್ಟಹಾಸದಿಂದ ಕುಣಿಯುತ್ತಿದ್ದಿತು.

ಚಂದ್ರು ತಾನು ತೆಗೆದಿದ್ದ ಮೀನಳ ಮದುವೆಯ ಚಿತ್ರ ವೊಂದನ್ನು ದೊಡ್ಡದು ಮಾಡಿ ತನ್ನ ಕೊಠಡಿಯ ಗೋಡೆಗೆ ನೇತು ಹಾಕಿದ್ದನು. ಆ ಚಿತ್ರ ಗೋಡೆಯ ಮೇಲೇರಿ ಕುಳಿತ ದಿನ ಮನೆಯಲ್ಲಿ ದೊಡ್ಡ ರಾದ್ಧಾಂತ ನಡೆದುಹೋಯಿತು. ಮೀನಳ ಸುಂದರ ಚಿತ್ರ ಕಾಮಾಕ್ಷಿಯ ಕಣ್ಣು ಕುಕ್ಕಿತು. ಮೀನಾ ಚಂದ್ರುವಿನ ಹೃದಯದಲ್ಲಿ ಗೆದ್ದುಕೊಂಡಿದ್ದ ಸ್ಥಾನ, ಅವಳ ಸಹನೆಯನ್ನು ಹೊಡೆದೆಬ್ಬಿಸಿತು. ಕಾಮಾಕ್ಷಿಗೆ ಗಂಡನ ನಡತೆ ಅತಿ ವಿಚಿತ್ರವಾಗಿ, ಅತಿ ವಿಪರೀತವಾಗಿ ಕಂಡಿತು. ಉರಿಯುವ ಅಸೂಯೆಯಿಂದ ಗಂಡನನ್ನೆದುರಿಸಿದಳು.

"ಈ ಚಿತ್ರ ಏಕೆ ನಿಮ್ಮ ರೂಮಿನಲ್ಲಿ. ಇದನ್ನು ಏಕೆ ದೊಡ್ಡದು ಮಾಡಿಸಿದಿರಿ ?"

"ಅದು ನನ್ನ ಇಷ್ಟ."

"ಮಾತಿಗೆ ಮುಂಚೆ ನನ್ನ ಇಷ್ಟ ಎನ್ನುತ್ತೀರಿ. ಮದುವೆ ಯಾದವಳ ಚಿತ್ರವನ್ನು ನಿಮ್ಮ ರೂಮಿನಲ್ಲಿ ಹಾಕಿಕೊಳ್ಳಲು ನಿಮಗೇನು ಅಧಿಕಾರ. ಅವಳು ನಿಮಗೆ ಏನು ಆಗಬೇಕು? ನೋಡಿದವರು ಉಗಿಯು ವುದಿಲ್ಲವೇ ?"

"ಬಾಯಿಮುಚ್ಚು, ಅದನ್ನೆಲ್ಲ ಹೇಳುವುದಕ್ಕೆ ನೀನಾರು ? ಅದು ನನ್ನ ಇಷ್ಟ. ಸುಂದರವಾದ ಚಿತ್ರ ಯಾವುದಿರಲಿ ಅದನ್ನು ನಾನು ಹೀಗೆಯೇ ದೊಡ್ಡದು ಮಾಡಿ ಕಟ್ಟು ಹಾಕಿಸಿ ನನ್ನ ರೂಮಿನಲ್ಲಿ ಹಾಕಿಕೊಳ್ಳುತ್ತೇನೆ"

"ಚೆನ್ನಾಗಿದೆ. ಕೈ ಹಿಡಿದ ಹೆಂಡತಿ ಮಕ್ಕಳ ಚಿತ್ರ ಒಂದೂ ಇಲ್ಲ ಮನೆಯಲ್ಲಿ ಬೇರೊಬ್ಬರ ಹೆಂಡತಿಯ ಚಿತ್ರ ತಗುಲಿಹಾಕಿ ಕೊಳ್ಳಲು ನಾಚಿಕೆಯಾಗುವುದಿಲ್ಲವೇ ?"

"ಕಾಮಾಕ್ಷಿ...ತಲೆಹರಟೆ ಮಾತನಾಡಬೇಡ. ಕೊಂಚ ನಾಲಿಗೆ ಬಿಗಿ ಹಿಡಿ"

"ನೀವು ಹೀಗೆಯೇ ಹೆದರಿಸಿ ಬಾಯಿ ಮುಚ್ಚಿಸಿ ಮುಚ್ಚಿಸಿ ನನ್ನನ್ನು ತುಳಿದು ಹಾಕಿ ಬಿಟ್ಟಿದ್ದೀರಿ. ಈ ಸುಖಕ್ಕೆ ನನ್ನನ್ನು ಏಕೆ ಮದುವೆಯಾಗಬೇಕಾಗಿದ್ದಿತು. ನನ್ನಲ್ಲಿ ಹಣ ಇದೆಯೆಂದು ಹಲ್ಲುಗಿಂಜಿ ಮದುವೆಯಾದಿರಿ. ಹಣ ಕೈಗೆ ಬಂದು ಸ್ಟುಡಿಯೋ ತೆರೆದಾಯಿತು. ಈಗ ಮತ್ತೆ ಆ ಮನೆ ಮುರುಕಿ ಹಾಳು ರಂಡೆಯ ನೆನಪಾಯಿತೇನೋ. ಅವಳ ಮನೆ ಹಾಳಾಗ. ಅವಳು ಸತ್ತು ಹೋದರೆ ಹಾಯಾಗಿರುತ್ತೇನೆ."

ಚಂದ್ರುವಿನ ಕೋಪ ಮೇರೆ ಮೀರಿತು. ಅವನು ಯಾವುದ ಕ್ಕಾಗಿ ಪಶ್ಚಾತ್ತಾಪ ಪಡುತ್ತಿದ್ದನೋ, ಆ ಮಾತನ್ನು ಈಗ ಕಾಮಾಕ್ಷಿ ಹಂಗಿಸಿ ಎತ್ತಿ ಆಡಿದ್ದನ್ನು ಕೇಳಿ ಅವನ ಮೈ ಸಿಟ್ಟಿನಿಂದ ಬೆಂಕಿ ಯಾಯಿತು. ತನ್ನ ಮನಮೆಚ್ಚಿದ ಮಡದಿ, ಹೃದಯದ ರಾಣಿ, ಮೀನಾಕ್ಷಿಯನ್ನು ಸಾಯಲೆಂದು ಶಪಿಸಿದ್ದನ್ನು ಕೇಳಿ ಅವನ ಕ್ರೋಧ ಕೆರಳಿತು. ಎದ್ದು ಬಂದವನೇ ಕಾಮಾಕ್ಷಿಯ ಕೆನ್ನೆಗೆ ಹೊಡೆದು

"ಮುಂಡೇ ಅವಳನ್ನು ಸಾಯಿ ಅನ್ನುತ್ತೀಯಾ. ಅವಳ ಬದಲು ನೀನೇ ಸತ್ತುಹೋಗು. ನಾನು ಹಾಯಾಗಿರುತ್ತೇನೆ" ಎಂದು

ಆರ್ಭಟಿಸಿದನು.

ಕಾಮಾಕ್ಷಿ ಅಂದು ತೀರ ಕೋಪಗೊಂಡಿದ್ದಳು. ಅವಳ ಸಹನೆ ಮೇರೆ ಮೀರಿದ್ದಿತು. ಚಂದ್ರುವಿನ ಹೊಡೆತದಿಂದ ಅದು ಮತ್ತೆ ಕೆರಳಿತು. ಕಾಮಾಕ್ಷಿ ಮುಂದೆ ನುಗ್ಗಿ ಗೋಡೆಗೆ ನೇತು ಹಾಕಿದ್ದ ಮೀನಾಕ್ಷಿಯ ಫೋಟೋವನ್ನು ಕಿತ್ತು ನೆಲಕ್ಕೆ ಅಪ್ಪಳಿಸಿದಳು. ಗಾಜು ಫಳ್ಳನೆ ಒಡೆದು ಚೂರುಚೂರಾಯಿತು. ಚಂದ್ರುವಿನ ಸಿಟ್ಟು ನೆತ್ತಿಗೇರಿತು....“ ಮುಂಡೇ........ನಿನಗೆಷ್ಟು ಧೈರ್ಯ. ನಿನ್ನ ಅಹಂಕಾರಕ್ಕೆ ಇದೇ ಶಾಸ್ತಿ ” ಎಂದು ಕಾಮಾಕ್ಷಿಯ ಮುಂದಲೆ ಹಿಡಿದು ಜಗ್ಗಿ ನೆಲಕ್ಕೆ ಬೀಳಿಸಿ ಮೈ ಕೈ ಮೂತಿ ಎಂದು ನೋಡದೆ ಸಾಯಹೊಡೆದನು. ಕಾಮಾಕ್ಷಿಗೆ ಅತೀವ ಯಾತನೆಯಾಯಿತು. ಚಂದ್ರುವಿನ ಒದೆತದಿಂದ ಅವಳ ಮೈ ಝರ್ಝರಿತವಾಯಿತು. ಮೈಗೆ ಗಾಜಿನ ಚೂರುಗಳು ಚುಚ್ಚಿಕೊಂಡು ರಕ್ತ ಬಂದಿತು. ಚಂದ್ರು ಆ ಚಿತ್ರವನ್ನು ತೆಗೆದು ಕೊಂಡು ಗಾಜುಹಾಕಿಸಿಕೊಂಡು ಬರಲು ಮತ್ತೆ ಮಾರ್ಕೆಟ್ಟಿಗೆ ಹೊರಟುಹೋದನು. ಕಾಮಾಕ್ಷಿ ಆ ದಿನವೆಲ್ಲ ಕಣ್ಣೀರಿನಲ್ಲಿ ಕೈ ತೊಳೆದಳು.

ಮಾರನೆಯ ದಿನ ಮೀನಳ ಭಾವಚಿತ್ರ ಮತ್ತೆ ಬೆಲೆಬಾಳುವ ಕಟ್ಟನಿಂದ ಅಲಂಕೃತವಾಗಿ ಚಂದ್ರುವಿನ ಶಯ್ಯಾಗಾರದ ಗೋಡೆಯನ್ನು ಅಪ್ಪಿಕುಳಿತಿತು. ಕಾಮಾಕ್ಷಿಯ ಅಳು, ಸಂಕಟ, ಬೇಡಿಕೆಗಳೊಂದೂ ಚಂದ್ರುವಿನ ಮನಸ್ಸನ್ನು ಕರಗಿಸಲಾರದೇಹೋದುವು. ಕಾಮಾಕ್ಷಿ ಗಂಡನ ಮನಸ್ಸನ್ನು ಪರಿವರ್ತಿಸಲು ಯತ್ನಿಸಿ ಸೋತು ಹೋದಳು. ಆ ಮನೆಯಲ್ಲಿ ದುಃಖ ಪಟ್ಟರೆ, ಅದನ್ನು ತಾನೊಬ್ಬಳೇ ದಾರುಣವಾದ ರೀತಿಯಲ್ಲಿ ಅನುಭವಿಸಬೇಕೆಂದು ಅವಳಿಗೆ ತಿಳಿದುಹೋಯಿತು. ತನ್ನ ದುಃಖದಲ್ಲಿ ಭಾಗಿಗಳಾಗುವವರು, ತನ್ನ ಕಷ್ಟದಲ್ಲಿ ಅನುಕಂಪನೆ ತೋರುವವರು ತನ್ನ ಮಕ್ಕಳೊಬ್ಬರನ್ನು ಬಿಟ್ಟು ಬೇರೆ ಯಾರೂ ಇಲ್ಲವೆಂದು ಕಾಮಾಕ್ಷಿಗೆ ಅರಿವಾಯಿತು. ಕಾಮಾಕ್ಷಿ ಏನಾದರಾಗಲಿ, ಹೇಗಾದರಾಗಲಿ ಚಂದ್ರು ತನ್ನನ್ನು ಸಾಯಹೊಡೆಯದಿದ್ದರೆ ಸಾಕೆಂದು ಕೊಂಡು ನಿರ್ಗಮನಳಾದಳು. ತನ್ನ ಅಸಹನೆಯಿಂದ ತನಗೆ ಚಂದ್ರು

ವಿನಿಂದ ಸಿಕ್ಕುತ್ತಿದ್ದ ಆ ಅಲ್ಪ ಸುಖಕ್ಕೂ ಎಲ್ಲಿ ಅಂತ್ಯ ಬರುವುದೋ, ಚಂದ್ರು ತನ್ನನ್ನು ಎಂದೆಂದಿಗೂ ತೊರೆದು ಹೋಗುವನೇನೋ ಎಂದು ಹೆದರಿ ಕಾಮಾಕ್ಷಿ ಸುಮ್ಮನಾದಳು.

ಹದಿನೈದು ದಿವಸಗಳಲ್ಲೇ ಮೀನಾಕ್ಷಿಯ ಭಾವಚಿತ್ರದ ಪಕ್ಕದಲ್ಲಿ ಕಾಮಾಕ್ಷಿ ಮತ್ತು ಮಕ್ಕಳ ಭಾವಚಿತ್ರ ಒಂದು ಬಂದು ಕುಳಿತು ಕೊಂಡಿತು. ಕಾಮಾಕ್ಷಿಗೆ ಅಣುಮಾತ್ರ ಸಮಾಧಾನವಾಯಿತು. ಆದರೆ ಅದು ತನ್ನ ಕಣ್ಣೊರೆಸುವ ಯುಕ್ತಿ ಎಂದು ಅವಳಿಗೂ ತಿಳಿಯಿತು. ಕಾಮಾಕ್ಷಿ ಮತ್ತೆ ಯಾವ ವಿರೋಧವನ್ನೂ ತೋರಿಸಲಿಲ್ಲ. ದುಃಖ ವನ್ನು ನುಂಗಿಕೊಂಡು ದಿನ ತಳ್ಳುತ್ತಿದ್ದಳು. ಆದರೆ ಚಂದ್ರುವಿನ ಒಲ್ಲದ ಮನಸ್ಸಿಗೆ ಕಾಮಾಕ್ಷಿಯ ಪ್ರತಿ ಒಂದು ಕೆಲಸದಲ್ಲೂ ತಪ್ಪು ಕಂಡಿತು. ಅವಳು ಅಡಿಗೆ ಚೆನ್ನಾಗಿ ಮಾಡಿಲ್ಲವೆಂದು, ತನ್ನ ಬಟ್ಟೆ ಬರೆಗಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲವೆಂದು, ಒಂದು ಗುಂಡಿ ಹಾಳಾಯಿತೆಂದು, ಒಂದು ನೆಕ್‌ಟೈ ಹಾಳಾಯಿತೆಂದು, ಕರವಸ್ತ್ರ ಹಾಳಾಯಿತೆಂದು, ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲವೆಂದು ಯದ್ವಾತದ್ವಾ ಹೊಡೆಯುವುದು ಅವ್ಯಾಹತವಾಗಿ ನಡದೇ ಇದ್ದಿತು. ಕಾಮಾಕ್ಷಿ ದಿನ ಕಳೆದಂತೆ ಬಲವಾದ ಕ್ರೂರಿಯಾದ ಯಜಮಾನನ ಕೈಗೆ ಸಿಕ್ಕಿದ ಮೂಕಪ್ರಾಣಿಯಂತಾಗಿ ಹೋದಳು. ಕಾರಣವಿಲ್ಲದೆ ತಪ್ಪಿಲ್ಲದೆ ಹೊಡೆತ ತಿಂದು ಕಾಮಾಕ್ಷಿಯ ದೇಹ ಹಣ್ಣಾಯಿತು. ಮನಸ್ಸು ಹುಳಿತಿತು. ದೇಹ ಸೊರಗಿತು. ಆ ವಯಸ್ಸಿಗೇ ಯೋಚನೆ ಮಾಡಿ ಮಾಡಿ ತಲೆಕೂದಲು ಉದರಿ ನರೆಯುವುದಕ್ಕೆ ಆರಂಭವಾಯಿತು. ಮುಖದಲ್ಲಿ ಒಂದು ಬಗೆಯ ದುಃಖದ ಮುಪ್ಪು ಕವಿಯಿತು. ಅವಳಿಗೆ ಯಾವುದು ಮಾಡಿದರೆ ಸರಿ, ಯಾವುದು ಮಾಡಿದರೆ ತಪ್ಪು ಎಂದು ತಿಳಿಯದೇ ಬುದ್ಧಿ ಪಲ್ಲಟವಾದಂತಾಗುತ್ತಿದ್ದಿತು. ದುಃಖವನ್ನು ಹೇಳಿ ಕೊಳ್ಳುತ್ತ, ಹೇಳಿಕೊಳ್ಳುತ್ತ ಹುಚ್ಚಿಯಂತೆ ನಕ್ಕುಬಿಡುವಳು. ಸುಖ ವನ್ನು ಹೇಳಿಕೊಳ್ಳುತ್ತ ಗಳಗಳನೆ ಅತ್ತು ಬಿಡುವಳು; ಬಗೆಗೆಟ್ಟ ಕಾಮಾಕ್ಷಿಯ ಮನಸ್ಸು ಮಕ್ಕಳಿಂದ ಸುಖವನ್ನು ಬಯಸಿತು. ಆ ಮಕ್ಕಳ ಪ್ರತಿಯೊಂದು ಮಾತು ಅವರ ಪ್ರತಿಯೊಂದು ಮಂದಹಾಸ.

ಕಾಮಾಕ್ಷಿಯ ಕ್ಷೋಭೆಗೊಂಡ ಹೃದಯಕ್ಕೆ ಅಮೃತ ಸೇಚನ ಮಾಡುತ್ತಿದ್ದಿತು. ಆರೆಕ್ಷಣದ ಶಾಂತಿ ನೀಡುತ್ತಿದ್ದಿತು. ಆ ಸುಖಕ್ಕಾಗಿ ತನ್ನ ಪ್ರೇಮವನ್ನೆಲ್ಲ ಮಕ್ಕಳ ಮೇಲೆ ಕೇಂದ್ರೀಕರಿಸಿ ಸಂಸಾರ ನಡೆಸಿದಳು.

## ೧೦

ಚಂದ್ರುವಿನ ರೀತಿ ಬೇರೆಯಾಗಿದ್ದಿತು. ಚಂದ್ರು ದಿನಕಳೆದಂತೆ ಭ್ರಮಿಷ್ಟನಂತೆ ಆಡತೊಡಗಿದ್ದನು. ತನ್ನ ಸಂಸಾರದ ಗೋಳಾಟದಲ್ಲಿ ಚಂದ್ರು ರೋಸಿಹೋಗಿದ್ದನು. ಅವನಿಗೆ ಕಾಮಾಕ್ಷಿಯೊಡನೆ ಬಾಳು ಬೇಡವಾಗಿದ್ದಿತು. ಆದರೆ ಸಮಾಜ ಚಂದ್ರುವನ್ನು ಬಂಧಿಸಿದ್ದಿತು. ಮೀನಾಕ್ಷಿ ತನಗೆ ನಿಲುಕಲಾರದ ನಕ್ಷತ್ರವೆಂದು ಅವನಿಗೆ ತಿಳಿದಿದ್ದಿತು. ಆದರೆ ಮೀನಳನ್ನು ಪಡೆಯಲೇಬೇಕೆಂಬ ಒಂದು ಆಶೆಯಿಂದ ಚಂದ್ರು ಸಂಸಾರಕ್ಕೆ ಹತ್ತಿಕೊಂಡಿದ್ದನು. ಅವನಲ್ಲಿ ಅಡಗಿದ್ದ ಸಮಾಜ ಸಂಸಾರ ಭಾವನೆಗಳು ಅವನನ್ನು ಓಡಿಹೋಗದಂತೆ ಸಂಸಾರ ಬಂಧನದಲ್ಲಿ ಸಿಲುಕಿಸಿ ನಿರ್ಬಂಧ ಹಾಕಿಟ್ಟಿದ್ದಿತು. ಆದರೆ ಚಂದ್ರುವಿನ ಮನಸ್ಸು ಸರ್ವ ಸ್ವತಂತ್ರವಾಗಿದ್ದಿತು. ಆ ಮನಸ್ಸಿನ ಬಲದಿಂದ ಚಂದ್ರು ಹೃದಯಕ್ಕೆ ಅತಿರೇಕದ ಕಿಡಿಯನ್ನು ಹಚ್ಚಿಡುತ್ತಿದ್ದನು. ನೆಲೆತಪ್ಪಿದ ಹಕ್ಕಿಯಂತೆ ಮನಸ್ಸು ಹರಿದಾಯುತ್ತಿದ್ದಿತು. ತೀರದ ಮನೋಬಯಕೆ ತನ್ನ ಹುಚ್ಚಾಟಗಳಿಂದ ಅವನ ಹೃದಯಕ್ಕೂ ದುಃಖದ ಕಿಡಿಯನ್ನು ಹಚ್ಚಿಡುತ್ತಿದ್ದಿತು. ಮನೋವ್ಯಥೆಯಿಂದ ಬಳಲಿದ್ದ ಚಂದ್ರುವನ್ನು, ನಿಸರ್ಗ ಉನ್ಮತ್ತನಂತೆ ಕುಣಿಸುತ್ತಿದ್ದಿತು. ಕಾಮಪ್ರೇಮಗಳ ಜೀವನ ದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡು ಮಹತ್ಪಾತ್ರವನ್ನು ವಹಿಸುವ ಚಂದ್ರ, ಚಂದ್ರುವಿನ ಹೃದಯದಮೇಲೆ ಮಹತ್ಪರಿಣಾಮವನ್ನುಂಟು ಮಾಡುತ್ತಿದ್ದನು. ಆ ರೀತಿಯ ಹುಣ್ಣಿಮೆಯ ದಿನದ ಉನ್ಮಾದಾವಸ್ಥೆ

ತೀರ ಅಮಾನುಷವಾಗಿ ಚಂದ್ರುವಿನ ಜೀವನದಲ್ಲಿ ಕಾಣಿಸಿಕೊಂಡಿದ್ದಿತು.

ಒಂದು ದಿನ ಚಂದ್ರು ಮದ್ಯದ ಶೀಶೆಗಳನ್ನು ತೆಗೆದುಕೊಂಡು ಮನೆಗೆ ಬಂದನು. ಆ ದಿನ ಹುಣ್ಣಿಮೆ. ಕಂಟೋನ್ಮೆಂಟಿನ ಚೈನೀ ಹೋಟೆಲೊಂದರಲ್ಲಿ ಗೆಳೆಯರೊಡನೆ ಊಟಮಾಡಿ, ಮದ್ಯ ಸೇವಿಸಿ ಚಂದ್ರು ಮನೆಗೂ ಮದ್ಯದ ಸೀಸೆಗಳನ್ನು ಹೊತ್ತುಕೊಂಡು ಬಂದನು. ಹೊರಗೆ ಹಾಲುಬೆಳ್ದಿಂಗಳು ಹರಡಿದ್ದಿತು. ಚಂದ್ರಕಿರಣಗಳ ಶೀತಲ ಸ್ಪರ್ಶದಿಂದ ಚಂದ್ರುವಿನ ಮೈಯಲ್ಲಿ ಅವ್ಯಕ್ತ ಆನಂದ ಹರಿಯಿತು. ಪ್ರಪಂಚ ಬಹು ಸುಂದರವಾಗಿ ತೋರಿತು. ಈ ಜಗತ್ತಿನ ಪ್ರತಿಯೊಂದು ಜೀವವೂ ತನ್ನ ಆತ್ಮೀಯ ಜೀವದೊಡನೆ ಬೆರೆತು ನಿಸರ್ಗದ ಈ ಸರ್ವ ಸುಂದರ, ಸುಮನೋಹರ, ಉಲ್ಲಾಸಕಾರೀ ಬೆಳ್ದಿಂಗಳಿನಲ್ಲಿ ಮೈಮರೆತು ವಿಹರಿಸುತ್ತಿರುವಂತೆ ತೋರಿತು. ಆದರೆ ತಾನು ? ತನ್ನ ಜೀವನದ ಗೆಳತಿ ಎಲ್ಲಿ........? ತನ್ನ ಆತ್ಮೀಯ ಜೀವಂತ ಆತ್ಮವೆಲ್ಲಿ ? ಚಂದ್ರುವಿಗೆ ಮೀನಾಕ್ಷಿಯ ನೆನಪಿನಿಂದ ಅತೀವ ವೇದನೆಯಾಯಿತು. ಮೀನಾ ಎಲ್ಲಿರುವಳೋ ? ಮೀನಾ ನನ್ನ ಬಳಿಗೆ ಬರಲು ಸಾಧ್ಯವಿಲ್ಲವೇ ? 'ಸಾಧ್ಯವಿದೆ' ಎಂದಿತು ಮನಸ್ಸು. ಹೇಗೆ ? ಹೇಗೆ ? ಎಂದು ಆತುರದಿಂದ ಕೇಳಿದನು ಚಂದ್ರು. 'ಶಾಂತಿ ಸಾಮ್ರಾಜ್ಯದ ಸನ್ನಿವೇಶದಲ್ಲಿ ಸರ್ವಸಮ್ಮೋಹನಾಸ್ತ್ರವಾದ ನಿಶೆಯ ಗುಂಗಿನಲ್ಲಿ ನಿನ್ನ ಆತ್ಮವನ್ನು ಮೀನಾಕ್ಷಿಯ ಭಾವಚಿತ್ರದೊಡನೆ ಬೆರಸಿನೋಡು. ಮೀನಾಕ್ಷಿಯ ನೆನಪಿನಲ್ಲಿ ನೀನು ತಲ್ಲೀನನಾಗು. ಆಗ ನಿನಗೆ ಮೀನಳ ದರ್ಶನವಾಗುವುದು' ಎಂದಿತು ಮನಸ್ಸು.

ಚಂದ್ರು ಉಲ್ಲಾಸದಿಂದ ತನ್ನ ಕೊಠಡಿಯನ್ನು ಸೇರಿಕೊಂಡನು. ಕಿಟಕಿಯ ಬಾಗಿಲುಗಳನ್ನೆಲ್ಲ ಹಾಕಿ, ಮೀನಾಕ್ಷಿಯ ಸುಂದರ ಭಾವಚಿತ್ರವನ್ನು ಎರಡು ನಿಮಿಷಗಳ ಕಾಲ ನೆಟ್ಟದೃಷ್ಟಿಯಿಂದ ನೋಡಿ, ಬೆಡ್ ಸ್ವಿಚ್ ಆರಿಸಿ ಮಲಗಿಕೊಂಡನು. ಅವನ ಚಿತ್ತಫಲಕದಲ್ಲಿ ಮೀನಳ ಚಿತ್ರ ನಿಂತುಹೋಯಿತು. ಚಂದ್ರುವಿಗೆ ನಿದ್ದೆ ಬರಲಿಲ್ಲ. ನಿದ್ದೆ ಮಾಡಬೇಕೆಂದು ಅವನು ಪ್ರಯತ್ನಿಸಿ ಸೋತುಹೋಗುತ್ತಿದ್ದನು. ಮೀನಾ ಚಂದ್ರುವಿನ ಮನಸ್ಸಿನಲ್ಲಿ ನಿಂತು ಕಾಡಿದಳು. ಚಂದ್ರು ಅಗಲವಾಗಿ

ಕಣ್ಣು ತೆರೆದು, ಶೂನ್ಯಮಯ ಕಾರ್ಗತ್ತಲೆಯನ್ನೇ ದಿಟ್ಟಿಸಿನೋಡುತ್ತ ಮಲಗಿಕೊಂಡನು. ಏಕಾಂತವನ್ನು ಸಹಿಸಲಾರದೆ ಹಾಸಿಗೆಯ ಮೇಲೆ ಹೊರಳಾಡಿದನು. ವಿರಹದ ಬೇಗೆ ಅವನ ಮೈ ಸುಡುತ್ತಿದ್ದಿತು. ರಾತ್ರಿ ಹನ್ನೆರಡು ಘಂಟೆ ಹೊಡೆದ ಶಬ್ದವಾಯಿತು. ಗಡಿಯಾರದ ಟಿಕ್ ಟಿಕ್ ಶಬ್ದವು ಹೃದಯದ ಟಿಕ್ ಟಿಕ್ ಸದ್ದಿನೊಡನೆ ಮೇಲಾಟ ನಡೆಸುತ್ತಿದ್ದಿತು. ಚಂದ್ರುವಿನ ಎದೆ ಯಾವುದೋ ಅವ್ಯಕ್ತ ಭಯದಿಂದ ಕಂಪಿಸಿತು. ಆ ಕಂಪನೆಯಲ್ಲೇ ಅವನಿಗೆ ಗಡಿಯಾರ ಅರ್ಧರಾತ್ರಿ ಮೀರಿದ ಅರ್ಧಘಂಟೆ ಹೊಡೆದದ್ದೂ ಕೇಳಲಿಲ್ಲ. ಅವನಿಗೆ ಆ ನಿಶೆಯ ಮೌನವನ್ನು ಬೇಧಿಸಿಕೊಂಡು ಕೇಳುತ್ತಿದ್ದ ಶಬ್ದ ಒಂದೇ ''ಟಿಕ್ ಟಿಕ್ ಟಿಕ್ ಟಿಕ್ ಟಿಕ್ ಟಿಕ್........''. ಆ ಶಬ್ದಕ್ಕೆ ಅಂತ್ಯವೇ ಇಲ್ಲವೆಂದು ತೋರುತ್ತಿದ್ದಿತು. ಕೊಂಚ ಹೊತ್ತಿನಲ್ಲೇ ಚಂದ್ರುವಿನ ಹೃದಯ ಆನಂದದಿಂದ ಮಿಡಿಯಿತು. ಚಂದ್ರು ತನ್ನ ದೃಷ್ಟಿಯನ್ನು ಮೀನಾಕ್ಷಿಯ ಭಾವಚಿತ್ರವಿದ್ದೆಡೆಗೆ ಹೊರಳಿಸಿದನು. ಕಾರ್ಗತ್ತಲೆಯೊಡನೆ ಬೆರೆತು ಹೋಗಿದ್ದ ಮೀನಳ ಚಿತ್ರ ಆ ಕಾರ್ಗತ್ತಲೆಯನ್ನೂ ಬೇಧಿಸಿಕೊಂಡು, ಚಂದ್ರುವಿನ ಅಂತಃಚಕ್ಷುಗಳಿಗೆ ವಿರಾಜಮಾನವಾಗಿ ಬೆಳಗಿತು. ಚಂದ್ರು ಆ ಚಿತ್ರದಲ್ಲಿ ಮೀನಾಕ್ಷಿಯನ್ನು ಕಂಡನು. ಹತ್ತು ನಿಮಿಷಗಳಲ್ಲೇ ಚಂದ್ರುವಿನ ಕೊಠಡಿ ಬೆಳಕಾಯಿತು. ಚಂದ್ರು ದಿಗ್ಭ್ರಮೆಯಿಂದ ಬೆಳಕು ಬಂದ ಜಾಡನ್ನೇ ದಿಟ್ಟಿಸಿದನು. ಹೆಂಚಿನಲ್ಲಿ ಆಗಿದ್ದ ವರ್ತುಳಾಕಾರದ ಬಿರುಕಿನಿಂದ ಚಂದ್ರನ ಕಿರಣಗಳು ನುಗ್ಗಿ ಬಂದು ಚಂದ್ರುವಿನ ಕೊಠಡಿಯನ್ನು ಬೆಳಕುಮಾಡಿತು. ಅರೆಕ್ಷಣದಲ್ಲಿ ಆ ಕಿರಣಗಳೆಲ್ಲ ಗೋಡೆಯನ್ನಪ್ಪಿ ಕುಳಿತಿದ್ದ ಮೀನಾಕ್ಷಿಯ ಮುಖದಮೇಲೆ ಪ್ರಸರಿಸಿ ಆ ಮುಖವನ್ನು ಸುಕಾಂತಿಯಿಂದ ಬೆಳಗಿಸಿತು. ಆ ಸುಂದರ ಮುಖ ದರ್ಶನದಿಂದ ಚಂದ್ರುವಿಗೆ ವಿಚಿತ್ರಾನುಭವವಾಯಿತು. ಅವನ ಮನಸ್ಸೆಲ್ಲ ಮೀನಾಕ್ಷಿಯ ಚಿತ್ರದರ್ಶನದಲ್ಲಿ ನೆಟ್ಟುಹೋಯಿತು. ಚಂದ್ರು ಜಗ್ಗನೆದ್ದು ಮಂಚದಮೇಲೆ ಕುಳಿತು ಆ ಚಿತ್ರವನ್ನೇ ಎವೆಹಾಕದೆ ದೃಷ್ಟಿಸಿ ನೋಡತೊಡಗಿದನು. ಮೀನಾಕ್ಷಿ ಕೊಠಡಿಯೊಳಕ್ಕೆ ತೂರಿ ಬಂದಂತೆ ಭಾಸವಾಯಿತು. ಅವನ ಮಂಚದ ಬಳಿ ಸುಳಿದು ಹೋದಂತೆ

ಅರಿವಾಯಿತು. ಅವಳ ಪಾರ್ಥಿವ ಶರೀರ ಅಗೋಚರವಾಗಿದ್ದರೂ, ಚಂದ್ರು ಅವಳ ಇರುವಿಕೆಯ ಅನುಭವವನ್ನು ಅನುಭವಿಸುತ್ತಿದ್ದನು. ಚಂದ್ರು ಸರ್ರನೆದ್ದು ಆ ಚಿತ್ರಪಟದೆದುರು ನಿಧಾನವಾಗಿ ನಡೆದುಬಂದನು. ಅವನ ದೃಷ್ಟಿ, ಚಿತ್ರದಲ್ಲಿ ನೆಟ್ಟುಹೋಗಿದ್ದಿತು. ಮೀನಳ ಮುಖ ಅವನ ಕಣ್ಣುಗಳಲ್ಲಿ ತುಂಬಿತು. ಮೀನಳ ಆಕೃತಿ ಗೋಡೆಗೆ ಆತು ನಿಂತು ಕೊಂಡಂತೆ ಭಾಸವಾಯಿತು. ಚಂದ್ರು ಅಸ್ಪಷ್ಟವಾಗಿ, "ಮೀನಾ........ ಮೀನಾ........ಬಾ ಮೀನಾ" ಎಂದು ಮೀನಳಿಗೆ ಸ್ವಾಗತ ನೀಡಿದನು. ಮೀನಳು ಮುಸಿನಕ್ಕಂತೆ ಭಾಸವಾಯಿತು. ಚಂದ್ರು ಅದೇ ಆವೇಗದಲ್ಲಿ ಮತ್ತೆ ತಾನು ಗಟ್ಟಿಯಾಗಿ ಮಾತನಾಡಿದರೆ, ಶಬ್ದಮಾಡಿದರೆ ಮೀನ ಳೆಲ್ಲಿ ಓಡಿಹೋಗುತ್ತಾಳೋ ಎಂಬ ಭಯದಿಂದ ಪಿಸುಮಾತಿನಲ್ಲಿ, "ಮೀನಾ, ನೀನು ನನ್ನನ್ನು ಪ್ರೀತಿಸುವೆಯಾ ಮೀನಾ ?" ಎಂದು ಕೇಳಿದನು. ಮೀನಾ ತಲೆ ಅಲ್ಲಾಡಿಸಿ ಹೌದೆಂದಳು.

ಚಂದ್ರು ಮುಸಿನಗುತ್ತಿದ್ದನು. ತನ್ನೆದುರಿಗೆ ಮೀನ ನಿಂತಿರು ವಳು. ಆದರೂ ಅದು ಪಾರ್ಥಿವ ಶರೀರವಲ್ಲ ! ಅವನ ಮೂಗಿಗೆ ಮೀನಳು ಮುಡಿದ ಮಲ್ಲಿಗೆಯ ಸುವಾಸನೆ ಗಾಳಿಯೊಡನೆ ಬೆರೆತು ಬರು ತ್ತಿದ್ದಿತು. ಮೀನಳುಟ್ಟ ಹೊಸಸೀರೆಯ ಸಿನಗುವಾಸನೆ ಅವನ ಮೂಗಿಗೆ ಹತ್ತುತ್ತಿದ್ದಿತು. ಅವಳ ಉಸಿರಿನ ಏರಿಳಿತಗಳ ಶಬ್ದ ಅವನ ಕಿವಿಗೆ ಕೇಳಿಸಿತು. ಮೀನಳ ಬೊಗಸೆಗಣ್ಣುಗಳು, ಅವಳ ಮಂದಹಾಸ, ಏರಿಳಿಯುವ ಎದೆ, ದುಂಡಾದ ಕೈಗಳು ಅವನ ಕಣ್ಣಿಗೆ ಗೋಚರ ವಾಯಿತು. ಅವಳ ಮೈಮೇಲಿನಿಂದ ಬೀಸಿ ಬಂದ ತಂಪೆಲರಿನಿಂದ ಅವನ ಮೈ ಕಂಪಿಸಿ ರೋಮಾಂಚಿತವಾಯಿತು. ಆದರೂ ಮೀನಳ ಪಾರ್ಥಿವ ಶರೀರ ಅಲ್ಲಿರಲಿಲ್ಲ. ಮೀನಳ ಇರುವಿಕೆಯನ್ನು ಚಂದ್ರು ಪ್ರತಿಕ್ಷಣದಲ್ಲೂ ಅನುಭವಿಸಿದನು. "ಬಾ ಚಂದ್ರು........ ನನ್ನೆಡೆಗೆ ಬಾ. ನಿನಗಾಗಿ ಕಾದಿದ್ದೇನೆ. ಬಾ ಚಂದ್ರು" ಎಂದು ಮೀನಾ ಇನಿ ಮಾತಿನಲ್ಲಿ ಹೇಳಿದಂತೆ ಕೇಳಿಸಿತು. ಅವಳ ಸುಮಧುರ ಕಂಠ ಅವನ ಕಿವಿಯಲ್ಲಿ ಉಲಿಯಿತು. ಚಂದ್ರು ಕೈಚಾಚಿ, "ಮೀನಾ........ನನ್ನ ಮೀನಾ........ಬಾ ಮೀನಾ" ಎಂದು ಮುಂದಡಿಯಿಟ್ಟು ಆ ಮೀನಳ

ದೇಹವನ್ನು ಅಪ್ಪಿಕೊಂಡನು. ಆದರೆ ಅದು ಮೀನಳ ದೇಹವಾಗಿರಲಿಲ್ಲ. ಅದು ಬರಿಯ ಅಂಧಕಾರವಾಗಿದ್ದಿತು. ಚಂದ್ರುವಿನ ಕೈಗಳು ಮೀನಳ ಮೃದು ದೇಹವನ್ನು ಅಪ್ಪುವ ಬದಲು ಗಟ್ಟಿಯಾದ ಗೋಡೆಗೆ ಟಪ್ಪನೆ ಬಡಿದುಕೊಂಡಿತು. ಮೂಳೆಗಳಿಗೆ ಏಟು ತಗಲಿ ಚಂದ್ರುವಿಗೆ ಮಂಪರು ತಿಳಿಯಿತು. ಅಷ್ಟು ಹೊತ್ತಿಗೆ ಕ್ಷಿತಿಜದಲ್ಲಿ ಚಂದ್ರ ಮೇಲೇರಿಹೋದನು. ಮೀನಳ ಮುಖದಮೇಲೆ ಬೀರಿದ್ದ ಆ ಶೀತಲ ತಿಂಗಳಬೆಳಕು ಮಾಯ ವಾಯಿತು. ಮತ್ತೆ ಕೊಠಡಿಯಲ್ಲಿ ಅಂಧಕಾರ ವ್ಯಾಪಿಸಿತು. ಚಂದ್ರು ಎಚ್ಚೆತ್ತುಕೊಂಡನು. ಮೀನಳ ನೆನಪಿನಿಂದ, ಮೀನಳ ದರ್ಶನದಿಂದ ಚಂದ್ರು ಉನ್ಮತ್ತನಾದನು. ಮೀನಳ ಆಕೃತಿ ಅವನಲ್ಲಿ ಆಶೆಯ ಲಾಲಸೆ ಯನ್ನು ಹಚ್ಚಿ ಮಾಯವಾಯಿತು. ಚಂದ್ರು, ಮೀನಳು ಕೈತಪ್ಪಿಹೋದ ಳೆಂದು ಅತ್ತನು. ಗೋಡೆಗೆ ತಲೆ ಚಚ್ಚಿಕೊಂಡನು. ಅವಳ ನೆನಪಿ ನಿಂದ ಅವನ ಹೃದಯ ಹಿಂಡಿದಂತಾಯಿತು. ಚಂದ್ರುವಿಗೆ ಆ ಅಂಧಕಾರ ಬೇಸರ ಬಂದಿತು. ಕೊಠಡಿಯ ದೀಪವನ್ನು ಹಾಕಿ, ಕಿಟಕಿಯ ಬಾಗಿಲು ಗಳನ್ನು ತೆಗೆದನು. ತಂಗಾಳಿ ಕಿಟಕಿಯೊಳಗೆ ತೂರಿಬಂದಿತು. ಚಂದ್ರು ಮದ್ಯದ ಸೀಸೆಯನ್ನು ಒಡೆದು ಗ್ಲಾಸುಗಳಲ್ಲಿ ಮದ್ಯವನ್ನು ಸುರಿದು ಕೊಂಡು ಲೊಚಲೊಚನೆ ಹೀರಿದನು. ಅವನ ಮೈಯಲ್ಲಿ ಅಸಾಧ್ಯ ಉರಿ ಎದ್ದಂತಾಯಿತು. ಮೀನಳು ಕೈತಪ್ಪಿಹೋದ ಸಂಕಟದಲ್ಲಿ ಚಂದ್ರು ಉನ್ಮತ್ತನಾದನು. ಪ್ರೇಮ ಕಾಮವಾಯಿತು. ಚಂದ್ರು ಪಶುವಾದನು. ಬಾಗಿಲನ್ನು ಧಡಾರನೆ ತೆಗೆದುಕೊಂಡು ಚಂದ್ರು ನಡು ಮನೆಯಲ್ಲಿ ಮಲಗಿದ್ದ ಕಾಮಾಕ್ಷಿಯ ಬಳಿ ನುಗ್ಗಿದನು. ಅರೆಕ್ಷಣದಲ್ಲಿ ಅವನ ಮದೋನ್ಮತ್ತ ತೋಳುಗಳ ಸೆರೆಯಲ್ಲಿ ಸಿಕ್ಕಿ ಕಾಮಾಕ್ಷಿಯ ದೇಹ ಝುರ್ಝುರಿತವಾಯಿತು. ಚಂದ್ರು ಆ ಕ್ಷಣದಲ್ಲಿ ಪಶುವಾಗಿದ್ದನು. ಅವನ ಪಶುವೃತ್ತಿಗೆ ಆ ಕ್ಷಣದಲ್ಲಿ ಕೈಗೆ ಸಿಕ್ಕಿದ, ತನ್ನ ಅಧಿಕಾರಕ್ಕೆ ಒಳ ಪಟ್ಟ ಕಾಮಾಕ್ಷಿಯ ದೇಹ ರುದ್ರಶಾಂತಿಯನ್ನು ನೀಡಿತು. ಅತ್ಯಾಚಾರ ವನ್ನೆಸಗಿದ ವಿಟಪುರುಷನಂತೆ ಚಂದ್ರು ಕಾಮಾಕ್ಷಿಯ ಬಳಿಯಿಂದ ಮೆಲ್ಲನೆ ಜಾರಿಕೊಂಡು ತನ್ನ ಕೊಠಡಿಗೆ ಬಂದು ಬಾಗಿಲು ಹಾಕಿಕೊಂಡನು.

ಇದೇರೀತಿ ಚಂದ್ರುವಿನ ಅತಿರೇಕ ಎರಡು ವರ್ಷಗಳಿಂದ ಆಗಾಗ್ಗೆ ಹುಣ್ಣಿಮೆಯ ದಿನ ಉದ್ರೇಕಗೊಳ್ಳುತ್ತಿದ್ದಿತು. ಕಾಮಾಕ್ಷಿ ಮೂಕಪ್ರಾಣಿಯಂತೆ ಕಟುಕನ ಕೈಗೆ ತನ್ನ ದೇಹವನ್ನು ಒಪ್ಪಿಸಿಕೊಳ್ಳುತ್ತಿದ್ದಳು. ಅವರಿಬ್ಬರ ಸಂಸಾರ ಸಂಬಂಧ ವಿಟವೇಶ್ಯೆಯರ ಸಂಬಂಧದ ರೂಪಾಂತರ ಹೊಂದಿತ್ತು. ಅವರ ದಾಂಪತ್ಯಜೀವನದಲ್ಲಿ ಪರಸ್ಪರ ಪ್ರೇಮಾನುರಾಗ, ಸ್ನೇಹಾದರ, ಸುಖಶಾಂತಿಗಳು ಲಯಹೊಂದಿದ್ದುವು. ಕಾಮಾಕ್ಷಿ ಚಂದ್ರುವಿನ ಅತಿರೇಕಕ್ಕೆ ಸಿಲುಕಿದ ಸಾಧುಪ್ರಾಣಿಯಾಗಿದ್ದಳು. ಅವನಿಗಾಗಿ ಮಕ್ಕಳನ್ನು ಹೆರುವ ಯಂತ್ರವಾದಳು. ಕಾಮಾಕ್ಷಿ ಆ ಕೆಲಸವನ್ನು ಸಂತೋಷದಿಂದ ಮಾಡುತ್ತಿದ್ದಳು. ಕಾರಣ ಅವಳ ಸುಖದ ಆಸೆ ಆ ಮಕ್ಕಳ ಭವಿಷ್ಯದಲ್ಲಿ, ಅವರ ಲಾಲನೆಪಾಲನೆಗಳಲ್ಲಿ ಅಡಗಿದ್ದಿತು. ನಾಳೆ ಆ ಮಕ್ಕಳು ದೊಡ್ಡವರಾಗಿ ತನ್ನನ್ನು ಆ ನರಕದಿಂದ ಬಿಡುಗಡೆ ಮಾಡುವರೆಂದು ಕನಸು ಕಾಣುತ್ತಿದ್ದಳು. ಕಾಮಾಕ್ಷಿ ಆ ಮಕ್ಕಳ ಸುಖಕ್ಕಾಗಿ ಬದುಕಿದ್ದಳು. ಆ ಊರಿನ ಕೆಲವರು ಪರಿಚಿತ ನೆಂಟರು ಯಾವಾಗಲಾದರೊಮ್ಮೆ ಅವಳ ಮನೆಗೆ ಹೋಗುತ್ತಿದ್ದರು. ಕಾಮಾಕ್ಷಿ ಹೃದಯವನ್ನು ಕಲ್ಲುಮಾಡಿಕೊಂಡು ಆಹ್ಲಾದದ ತೆರೆಯನ್ನು ಹಾಕಿಕೊಂಡು ನಗುನಗುತ್ತ ಅವರನ್ನು ಆದರಿಸಿ ಉಪಚರಿಸುತ್ತಿದ್ದಳು. ಆದರೆ ಅವರ ಕಣ್ಣಿಗೆ ಬಣ್ಣಗೆಟ್ಟ ಕಾಮಾಕ್ಷಿಯ ರೂಪ, ಅವಳ ಸುಖವಿಲ್ಲದ ಬಾಳನ್ನು ಕನ್ನಡಿ ಹಿಡಿದಂತೆ ತೋರಿಸುತ್ತಿದ್ದಿತು. ಅವಳ ಕೈಗಳಲ್ಲಿ ಉಳಿದಿದ್ದ ಒಂದೊಂದು ಬೊಂಬಾಯಿ ಬಳೆ, ಕೊರಳಲ್ಲಿ ಎತ್ತಿ ಕಾಣುತ್ತಿದ್ದ ಕರಿಮಣಿಸರ ಅವಳ ಬಡತನದ ಪ್ರತೀಕಗಳಾಗಿ ಕಾಣುತ್ತಿದ್ದವು. ಆ ನೆಂಟರು ಶ್ರೀರಂಗಪಟ್ಟಣಕ್ಕೆ ಬಂದಾಗ ಸುಬ್ಬಮ್ಮನವರಿಗೆ ತಾವು ಕಂಡಿದ್ದನ್ನು ಬಣ್ಣಿಸಿ ಹೇಳುತ್ತಿದ್ದರು. ಅವರಿಂದಲೇ ಆಕೆಗೆ ಕಾಮಾಕ್ಷಿಯ ಬಾಳಿನ ಭವಣೆ ತಿಳಿದಿದ್ದು. ಈ ಮಧ್ಯೆ ವರ್ಷದ ಹಿಂದೆ ಕಾಮಾಕ್ಷಿ ಸುಬ್ಬಮ್ಮನವರಿಗೆ "ಅಮ್ಮಾ, ನೀವು ಯಾರೂ ಪ್ರಮಾಣವಾಗಿ ಊರ ಕಡೆ ಬರಕೂಡದು. ನನ್ನ ಹಣೇಬರಹವನ್ನು ನಾನು ಅನುಭವಿಸಿಕೊಳ್ಳುತ್ತೇನೆ. ನೀವು ಬಂದರೆ ನನ್ನ ಸ್ಥಿತಿ ಇನ್ನೂ ಕೆಡುತ್ತದೆ. ಆದರಿಂದ ಏನೂ ಪ್ರಯೋಜನವಿಲ್ಲ. ಅವರಿಗೆ ಹುಚ್ಚು ಕೋಪ. ನಾನು ಕೈಹಿಡಿದ

ಅವರನ್ನು ನಾನೇ ಸರಿಮಾಡಿಕೊಳ್ಳುತ್ತೇನೆ. ಆ ಭರವಸೆ ನನಗಿದೆ. ಮತ್ತೆ ಅವರೊಡನೆ ನಾನೇ ನಿಮ್ಮನ್ನು ನೋಡಲು ಬರುತ್ತೇನೆ. ಅದುವರೆವಿಗೆ ಸತ್ಯವಾಗಿ ನೀವು ಊರಕಡೆ ಬರಬೇಡಿ" ಎಂದು ಕಾಗದ ಬರೆದು ಹಾಕಿದ್ದಳು. ಸುಬ್ಬಮ್ಮನವರು ಮಗಳ ಮನೋಸ್ಥೈರ್ಯವನ್ನು ಮೆಚ್ಚಿಕೊಂಡರು. ಆದರೆ ಕರುಳಿನ ಸಂಕಟ ತಡೆಯದಾಯಿತು. ಒಂದು ವರ್ಷದಿಂದ ಅವರ ಮನಸ್ಸು ಪಶ್ಚಾತ್ತಾಪ ಪಟ್ಟು ಪಕ್ವವಾಗಿದ್ದಿತು. ನೆನಪು, ಸಾಕಿದ ಮಗಳು ಮೀನಾಕ್ಷಿ ಎಡೆಗೆ ಹರಿದಿತ್ತು. ಮೀನಾಕ್ಷಿ ನಿರಪರಾಧಿಯೆಂದು ಅವರಿಗೆ ಮನದಟ್ಟಾಯಿತು. ಆಗಲೇ ಅವಳನ್ನು ಆದರಿಸಿ ಕರುಳಿನ ಸಂಕಟವನ್ನು ಕಡಿಮೆಮಾಡಿಕೊಳ್ಳಲು ನಿರ್ಧರಿಸಿ ಸುಬ್ಬಮ್ಮನವರು ಯಜಮಾನರೊಡನೆ ಮೀನಾಕ್ಷಿಯ ಸುಖಸಂಸಾರವನ್ನು ಕಣ್ಣಾರೆ ಕಾಣಲು ಸಾಗರಕ್ಕೆ ಹೋದದ್ದು.

## ೧೧

ಶ್ರೀರಂಗಪಟ್ಟಣಕ್ಕೆ ಬಂದಮೇಲೆ ಒಂದು ದಿನ ಸುಬ್ಬಮ್ಮನವರು ಹೊಟ್ಟೆಯ ಸಂಕಟ ತಡೆಯಲಾರದೆ ಮೀನಾಕ್ಷಿಯ ಹತ್ತಿರ ಮಗಳ ಬಾಳಿನ ಭವಣೆಯನ್ನು ಹೇಳಿಕೊಂಡು ಕಣ್ಣೀರು ಕರೆದರು. ಸುಬ್ಬಮ್ಮನವರಿಂದ ಕಾಮಾಕ್ಷಿಯ ಕಷ್ಟಕೇಳಿ ಮೀನಾಕ್ಷಿ ಅತ್ತಳು. ಕಾಮಾಕ್ಷಿಯಿಂದ ಒಂದು ವರ್ಷದಿಂದೀಚೆಗೆ ಕಾಗದವೇ ಬಂದಿಲ್ಲವೆಂದು ಕೇಳಿ ಅವಳಿಗೆ ಅತೀವ ವೇದನೆಯಾಯಿತು. ಚಂದ್ರು ಏಕೆ ಹೀಗಾಗಿಹೋದ? ಕಾಮಾಕ್ಷಿಯನ್ನು ಏಕೆ ಹೀಗೆ ಗೋಳಾಡಿಸುತ್ತಾನೆ ? ಅವಳನ್ನು ಕಂಡರೆ ಅವನಿಗೆ ಪ್ರೀತಿ ಇಲ್ಲವೇ ....? ಇರಬಹುದು........ಹಾಗಾದರೆ.... ನನ್ನನ್ನು.... .... ಛೀ !

ಬಂದಾಗಿನಿಂದ ಮೀನಾಕ್ಷಿಗೆ ಚಂದ್ರುವಿನದೇ ಯೋಚನೆಯಾಯಿತು. ಅವನೊಡನಿದ್ದ ಮನೆ, ಅವನೊಡನೆ ತಾನು ಆಟವಾಡಿದ

ಹಿತ್ತಲು, ಅಲ್ಲಿನ ದಾಳಿಂಬೆ ಗಿಡ, ಮನೆಯ ಅಂಗಳದ ಸೀಬೆಗಿಡ, ಹಳೆಯಹಗ್ಗದಮಂಚ, ತಾವಿಬ್ಬರೂ ಅನನ್ಯ ಭಕ್ತಿಯಿಂದ ಪೂಜೆಮಾಡುತ್ತಿದ್ದ ಶ್ರೀರಾಮದೇವರಪಟ, ಚಂದ್ರು ಓದಿಕೊಳ್ಳುತ್ತಿದ್ದ ಕೋಣೆ ಎಲ್ಲವೂ ಅವಳಿಗೆ ಚಂದ್ರುವಿನ ನೆನಪು ತಂದುಕೊಟ್ಟವು. ಅವೆಲ್ಲ ಚಂದ್ರುವಿನ ಪ್ರೇಮದ ಪ್ರತಿನಿಧಿಗಳಾಗಿ ಅವಳ ಕಣ್ಣಿಗೆ ಕಂಡವು. ಆ ತನ್ನ ಪ್ರೇಮಿಯು ಓಡಾಡಿದ್ದ, ಅವನಿಂದ ಸ್ಪರ್ಶಿತವಾಗಿದ್ದ ಆ ವಸ್ತುಗಳೆಲ್ಲ ಮೀನಾಕ್ಷಿಗೆ ಅತಿಪ್ರಿಯವಾಗಿ ಕಂಡುವು. ಅವುಗಳ ದರ್ಶನದಿಂದ, ಮೀನಾಕ್ಷಿಗೆ ಶ್ರೀರಂಗಪಟ್ಟಣ ಹಿಂದಿನ ದಿನಗಳನ್ನೆಲ್ಲ ನೆನಪುಮಾಡಿಕೊಟ್ಟಿತು. ಎಲ್ಲ ಹಿಂದಿನ ಹಾಗೆಯೇ ಇತ್ತು — ದೇವಸ್ಥಾನ, ಗುಂಬಜ್, ಸಂಗಮ, ದರಿಯಾದೌಲತ್, ಕೋಟೆ, ಎಲ್ಲವೂ. ಆದರೆ ಅವಳ ಗೆಳತಿಯರಿಗೆಲ್ಲ ಮದುವೆಯಾಗಿತ್ತು. ಮನೆಯ ಕರಿಯ ಹಸು ಗಂಗೆ ಮುದಿಯಾಗಿದ್ದರೂ ಹಾಲುಕೊಡುತ್ತಿದ್ದಿತು. ಮೀನಾಕ್ಷಿ ತನ್ನ ಚಂದ್ರುವಿನ ಜೀವನದಲ್ಲಿ ಅಷ್ಟು ಮಹತ್ಪಾತ್ರವಹಿಸಿದ್ದ ಗಂಗೆಯನ್ನು ದಿನವೂ ಅಕ್ಕರೆಯಿಂದ ಮುದ್ದಾಡುತ್ತಿದ್ದಳು. ಅದರ ಸೇವೆಯಲ್ಲಿ ಅವಳಿಗೆ ಅತ್ಯಾನಂದವಾಗುತ್ತಿದ್ದಿತು. ಆ ಸನ್ನಿವೇಶ ಅವಳಿಗೆ ಹಿಂದಲ ಸುಂದರಜೀವನವನ್ನು ನೆನಪುಮಾಡಿಕೊಡುತ್ತಿದ್ದಿತು. ಜನ ಬದಲಾಯಿಸಿರಬಹುದು; ಆದರೆ ಆ ಹಳೆಯ ಪಳಕೆಯ ವಸ್ತುಗಳು ಇದ್ದಂತೆ ಇದ್ದವು. ಗಂಗೆಯ ವರ್ತನೆಯಿಂದ, ಅದು ಕಣ್ಣರಳಿಸಿ ಪ್ರೇಮದಿಂದ ಮೀನಾಕ್ಷಿಯ ಮೈಗೆ ಮುಖತಿಕ್ಕಿ ಪ್ರೇಮದ ನಿಟ್ಟುಸಿರನ್ನು ಬಿಡುತ್ತಿದ್ದುದನ್ನು ನೋಡಿದರೆ ಅದು ಮೀನಾಕ್ಷಿಯನ್ನು ಮರೆತಿಲ್ಲವೆಂದು ತೋರುತ್ತಿದ್ದಿತು. ಮನೆಯಂಗಳದ ಸೀಬೆಯಮರದ ತುಂಬ ದೋರೆ ಹಣ್ಣುಗಳು ಜಿಗಿಯುತ್ತಿದ್ದವು. ಮೀನಾಕ್ಷಿಗೆ ಹಿಂದೆ ಚಂದ್ರು ತನ್ನನ್ನು ಮರಕ್ಕೆ ಏರದಂತೆ ಕೂಗಾಡಿ ತಾನು ಮಾತ್ರ ಮರವನ್ನೇರಿ ಸೀಬೆಹಣ್ಣುಗಳನ್ನು ಕಿತ್ತು ತಿನ್ನುತ್ತಾ ತನಗೆ ಆಶೆ ತೋರಿಸಿ ಅಣಗಿಸುತ್ತಿದ್ದುದು, ಸೀಬೆಯ ಹಣ್ಣಿನ ಆಸೆಗಾಗಿ ಅವನು ಹೇಳಿದಂತೆ ಕೇಳುತ್ತೇನೆಂದು ದಮ್ಮಯ್ಯ ಗುಡ್ಡೆ ಹಾಕಿ ತಾನು ಹಲ್ಲುಕಿರಿಯುತ್ತಿದ್ದುದರ ನೆನಪಾಯಿತು. ಅವಳ ಕಣ್ಣೀರನ್ನು ಕಂಡು ಕರುಣೆಯಿಂದ ಚಂದ್ರು ಅವಳನ್ನು ಮರಕ್ಕೆ

ಹತ್ತಿಸುತ್ತಿದ್ದುದನ್ನೂ, ಸುಬ್ಬಮ್ಮನವರು ಬಂದ ಸದ್ದಾಗಲು ತಾನು ಮರದಿಂದ ಧುಮಿಕಿ ತಡಿಕೆಯ ಹಿಂದೆ ಅವಿತುಕೊಳ್ಳುತ್ತಿದ್ದುದನ್ನೂ ನೆನಸಿಕೊಂಡಳು. ಒಂದು ದಿನ ಮಧ್ಯಾಹ್ನ ಮೀನಾಕ್ಷಿ ಅದೇ ಸವಿನೆನಪಿನಲ್ಲಿ ತಲ್ಲೀನಳಾಗಿ ಆ ಸೀಬೆಯಮರವನ್ನೇ ನೋಡುತ್ತ ನಿಂತಿದ್ದಳು. ಅವಳಿಗೆ ಆ ಮರವನ್ನೇರಿ ತಾನೇ ಹಿಂದೆ ಕುಯ್ಯುತ್ತಿದ್ದಂತೆ ದೋರೆಹಣ್ಣುಗಳನ್ನು ಕಿತ್ತುತಿನ್ನಬೇಕೆಂದು ಆಸೆಯಾಯಿತು. ಮೀನಾಕ್ಷಿ ನಡುವಿಗೆ ಸೆರಗು ಬಿಗಿದು ಪ್ರಯಾಸದಿಂದ ಗಿಡವನ್ನು ಹತ್ತಿ ಮೇಲೇರಿ ಹೋದಳು. ಕೈಗೆ ನಿಲುಕಿದ ದೋರೆಹಣ್ಣುಗಳನ್ನು ಕಿತ್ತು ಮಡಿಲಲ್ಲಿ ತುಂಬಿಕೊಂಡು ಒಂದನ್ನು ಕಚ್ಚಿತಿನ್ನತೊಡಗಿದಳು. ಮೀನಾಕ್ಷಿ ಕೊಂಬೆಯೊಂದರ ಮೇಲೆ ಎಷ್ಟುಹೊತ್ತು ಕುಳಿತಿದ್ದಳೋ! ಒಳಗಿನಿಂದ ಸುಬ್ಬಮ್ಮನವರು "ಮೀನಾಕ್ಷೀ....ಲೇ ಮೀನಾಕ್ಷೀ"ಎಂದು ಕೂಗಿದರು. ಮೀನಾಕ್ಷಿಗೆ ಕಿವಿಯಮೇಲೆ ಹೊಡೆದಹಾಗಾಯಿತು. ಅವರ ಕೂಗನ್ನು ಕೇಳಿ ಹಿಂದೆ ಆಗುತ್ತಿದ್ದಂತೆ ಭಯದಿಂದ ಅವಳ ಮೈ ನಡುಗಿತು. ಅವಳಿಗೇ ಅರಿವಾಗದಂತೆ ಅವಳು ಕೆಳಕ್ಕೆ ಧುಮಿಕಿ ಹಜಾರದಲ್ಲಿ ಮಳೆಗೆ ಅಡ್ಡಲಾಗಿ ಜೋಡಿಸಿಟ್ಟಿದ್ದ ಬಿದಿರಿನ ತಡಿಕೆಯ ಹಿಂದೆ ಓಡಿಹೋಗಲು ಬಯಸಿದಳು! ಸುಬ್ಬಮ್ಮನವರು ಅವಳು ಧುಮಿಕಿದ್ದನ್ನು ನೋಡಿ ಬೆಚ್ಚಿಬಿದ್ದರು. ಆದರೆ ಮೀನಾಕ್ಷಿಯನ್ನು ನೋಡಿ "ಅಯ್ಯೋ..... ಹುಚ್ಚು ಹುಡುಗಿ, ಹೋಗು. ಗಿಡ ಹತ್ತಿದ್ಯೇನೇ. ಹಿಂದಲ ನೆನಪಾಯಿತೇನೇ. ಅದ್ಯಾಕೇ ಹಾಗೆ ಧುಮಿಕಿದೇ" ಎಂದು ನಕ್ಕುಬಿಟ್ಟರು. ಮೀನಾಕ್ಷಿಗೆ ಬಹಳ ನಾಚಿಕೆಯಾಯಿತು. ಅವಳ ಹಿಂಗಾಲಿಗೆ ಕೊಂಚ ಪೆಟ್ಟುತಗಲಿ ಉಳುಕಿದಂತಾಗಿತ್ತು. ಮೀನಾಕ್ಷಿ ಅಲ್ಲೇ ಕಾಲುಹಿಸಿಕಿಕೊಳ್ಳುತ್ತ ಕುಳಿತುಬಿಟ್ಟಳು. ಸುಬ್ಬಮ್ಮನವರು ಗಾಬರಿಯಿಂದ "ಏನೇ ತಾಯೀ.... ಪೆಟ್ಟಾಯಿತೇನೇ" ಎಂದು ಹತ್ತಿರ ಬಂದರು. "ಏನಿಲ್ಲಮ್ಮಾ......." ಎಂದು ಮೀನಾಕ್ಷಿ ಸರ್ರನೇ ಎದ್ದು ನಿಂತುಕೊಂಡಳು. ಸುಬ್ಬಮ್ಮನವರು ಅವಳ ಕಾಲುಮುಟ್ಟಿ ನೋಡಿ "ಅಲ್ಲಾ ಕಣೇ ಹುಚ್ಚು ಹುಡುಗಿ, ಹಾಗೇನೇ ಧೊಪ್ಪನೆ ಕೆಳಗೆ ಧುಮುಕೋದೂ....ಕಾಲುಮುರಿದು ಹೋಗಿದ್ದರೆ ಏನು ಗತಿ. ನನಗೆ ಎಷ್ಟು ಹೆದರಿಕೆಯಾಯಿತೋ" ಎಂದು ಮತ್ತೆಮತ್ತೆ ಅದನ್ನು ನೆನಸಿ

ಕೊಂಡು ನಕ್ಕರು. ಮೀನಾಕ್ಷಿಯೂ ನಕ್ಕಳು. ಆ ದಿನ ರಾತ್ರಿ ಮೀನಾಕ್ಷಿಯ ಕಾಲಿಗೆ ಎಣ್ಣೆಉಜ್ಜಿ ಬಿಸಿನೀರು ಹುಯ್ಯುವ ಕೆಲಸ ಸುಬ್ಬಮ್ಮನವರೇ ಮಾಡಬೇಕಾಯಿತು. ನಾಲ್ಕೈದು ದಿವಸಗಳವರೆಗೆ ಶಾಮಣ್ಣನವರ ಹತ್ತಿರ ಈ ವಿಚಾರವನ್ನು ಹೇಳಿ ಹೇಳಿ ಹೊಟ್ಟೆ ಬಿರಿಯುವಂತೆ ನಕ್ಕರು. ಮೀನಾಕ್ಷಿ ಆ ಸುಂದರ ಸನ್ನಿವೇಶದಲ್ಲಿ ಒಂದಾದಳು. ಮೀನಳ ಆಗಮನಕ್ಕಾಗಿ ಎದರುನೋಡುತ್ತ ಅನೂನುಷ ರೀತಿಯಲ್ಲಿ ಚಂದ್ರುವಿನ ಸವಿನೆನಪಿನ ಸಂದೇಶವನ್ನು ಅರ್ಪಿಸಲು ಕಾದಿರುವಂತೆ ತೋರಿತು ಆ ಸುಂದರ ನಿಸರ್ಗ.

ಸುಬ್ಬಮ್ಮನವರು ಮೀನಾಕ್ಷಿಯನ್ನು ಜೊತೆಯಲ್ಲಿ ಕರೆದುಕೊಂಡು ಒಂದೊಂದು ದಿನ ಒಂದೊಂದು ಸ್ಥಳವನ್ನು ತೋರಿಸಿಕೊಂಡು ಬರುತ್ತಿದ್ದರು. ಮೀನಾಕ್ಷಿಗೆ ಆ ಸುಂದರ ಸ್ಥಳಗಳಲ್ಲೆಲ್ಲ ಚಂದ್ರುವಿನೊಡನೆ ಚಂದ್ರಿಕೆಯಾಗಿ ಸುತ್ತಿದ ನೆನಪಾಗಿ ಮೈಪುಳಕಿತವಾಗಿದ್ದಿತು. ಮೀನಾ ಹೊಸ ಉತ್ಸಾಹದಿಂದ ಅವುಗಳ ಸೌಂದರ್ಯದರ್ಶನ ಮಾಡುತ್ತಿದ್ದಳು.

ಊರಿಗೆಬಂದ ಹದಿನೈದು ದಿವಸಗಳ ಮೇಲೆ ಒಂದು ದಿನ ಹೊಳೆಯ ಪಕ್ಕದಲ್ಲೇ ಒಂದು ಮೈಲಿಯ ತನಕ ನಡೆದುಕೊಂಡು ಹೋದರು. ಸುಬ್ಬಮ್ಮನವರಿಗೆ ಕಾಲುಸೋತುಹೋಯಿತು. ಆದರೂ ಮೀನಾಕ್ಷಿ ಅವರನ್ನು ಹುರಿದುಂಬಿಸಿ ತನ್ನೊಡನೆ ಎಳೆದುಕೊಂಡು ಹೋದಳು.

ಅದೇ ಕಾವೇರಿ ಕಲಕಲ ನಿನಾದದಿಂದ ದಾರಿ ಕ್ರಮಿಸುತ್ತಿದ್ದಳು. ಮೀನಾಕ್ಷಿಗೆ ಪ್ರತಿಯೊಂದು ಕಲ್ಲುಬಂಡೆಯ ಗುರುತೂ ಹತ್ತಿತು. ಅವುಗಳೊಡನೆ ಅವಳೆಷ್ಟು ಆಟವಾಡಿದ್ದಳು. ನದಿಯ ಎರಡು ಪಕ್ಕಗಳಲ್ಲೂ ಅದೇ ಹಚ್ಚಹಸಿರು ಹೊಲ, ಗದ್ದೆಗಳು. ಹಸಿರು ಬೆಳೆದು ನಿಂತ ಆ ಹೊಲಗಳಲ್ಲಿ ತಾನು ತೂರಿ ಓಡಿದಾಗ ಚಂದ್ರು ತನ್ನನ್ನು ಎಷ್ಟು ಸಾರಿ ಅಟ್ಟಿಸಿಕೊಂಡು ಬಂದು ಆಟವಾಡಿಸಿರಲಿಲ್ಲ. ತಾವಿಬ್ಬರೂ ಎಷ್ಟು ಸಾರಿ ಬುಡಗಳ ಮರೆಯಲ್ಲಿ ಕುಳಿತು ಬಲಿತ ಜೋಳದ ತೆನೆಯನ್ನು ಹಾಗೆಯೇ ಬಗ್ಗಿಸಿಕೊಂಡು ಕಾಳು ಕಿತ್ತು ತಿಂದು ಬರಿದು ಮಾಡಿರಲಿಲ್ಲ. ಒಂದು ಸಾರಿ ಮೀನಾ ಚಂದ್ರರು ಮಧ್ಯಾಹ್ನದ ಉರಿಬಿಸಿಲಿನಲ್ಲಿ ಸುಬ್ಬಮ್ಮನವರ ಕಣ್ಣು ತಪ್ಪಿಸಿ ಬಂದವರು ರೈತ

ಬಂದನೆಂದು ಸಾಯಂಕಾಲದವರೆಗೆ, ಆ ರೈತ ಹೊಲಬಿಟ್ಟು ಹೋಗುವ ವರೆಗೆ ಅಲ್ಲಿಯೇ ಕುಳಿತಿದ್ದು, ರೈತನನ್ನು ಶಪಿಸಿದ್ದು ನೆನಪಾಯಿತು. ಮೀನಾ ನಿಟ್ಟುಸಿರಿಟ್ಟಳು. ಹಾಗೆಯೇ ಮುಂದಕ್ಕೆ ಹೆಜ್ಜೆ ಹಾಕಿದಳು. ನದಿಯ ದಂಡೆಯಲ್ಲಿ ಉದ್ದಕ್ಕೂ ಕಣ್ಣೋಟ ಹರಿಯುವವರೆಗೆ ಅದೇ ಬೆಳ್ಳಗಿನ ಮರಳು ರಾಶಿ. ಜೊಂಡು ಗಿಡಗಳ ಗುಂಪು, ಮೀನಿಗಾಗಿ ಬೇಟೆಯಾಡುತ್ತಿದ್ದ ನೀರು ಹಕ್ಕಿಗಳು, ಎಲ್ಲಾ ಹಿಂದಿನಂತೇ. ಮೀನಾಕ್ಷಿ ತಾನು ಚಂದ್ರುವಿನೊಡನೆ ಹಿಂದೆ ಆಗಾಗ ಕದ್ದು ಬರುತ್ತಿದ್ದ ಮರಳಿನ ದ್ವೀಪದ ಹತ್ತಿರ ಬಂದಳು. ದಡದಲ್ಲಿ ನಿಂತು ನದಿಯ ಮಧ್ಯೆ ಇದ್ದ ಆ ಮರಳು ದ್ವೀಪವನ್ನೇ ದಿಟ್ಟಿಸಿ ನೋಡಿದಳು. ಇಂದಿಗೂ ಆ ದ್ವೀಪದಲ್ಲಿ ಅದೇ ಕೋಡುಗಲ್ಲು ನಿಂತಿತ್ತು. ಅದರ ಸುತ್ತ ಅರಳ ರಾಶಿಯಂತೆ ಬಿಳಿಯ ಮರಳು. ಮೀನಾಕ್ಷಿಗೆ ಉತ್ಸಾಹ ಉಕ್ಕಿ ಹರಿಯಿತು. ಅವಳ ದೇಹ ಆ ಮರಳಿನ ಸ್ಪರ್ಶಕ್ಕೆ ಹಾತೊರೆಯಿತು. ಮೀನಳ ದೇಹ ಮರಳಿನ ಮಿಲನವನ್ನು ಬಯಸಿತು. ಸುಬ್ಬಮ್ಮನವರು ಬೇಡ ಬೇಡ ಅನ್ನುತ್ತಿದ್ದರೂ ಬಂಡೆಯಿಂದ ಬಂಡೆಗೆ ಹತ್ತಿ ಇಳಿದು, ಜಿಗಿದು, ನೀರಿನಲ್ಲಿ ನಡೆದುಕೊಂಡು ಆ ದ್ವೀಪಕ್ಕೆ ಓಡಿಹೋಗಿ ಮರಳ ರಾಶಿಯ ಮೇಲೆ ಬಿದ್ದುಕೊಂಡಳು. ಆ ತಂಪಾದ ಮರಳಿನ ಸ್ಪರ್ಶದಿಂದ ಮೀನಳ ದೇಹ ತಣಿಯಿತು. ಮೀನಾ ಹಿಂದಿನ ಸುಖವನ್ನು ಅನುಭವಿಸಿದಳು. ಅಲ್ಲಿ ಬಿದ್ದಿದ್ದ ಕಪ್ಪೆಚಿಪ್ಪುಗಳನ್ನು ಆರಿಸಿ ಗುಡ್ಡೆ ಹಾಕಿ ಕುಳಿತುಕೊಂಡಳು. ಚಂದ್ರು........ಎಲ್ಲಿ ? ಚಂದ್ರು ಇಲ್ಲಿದ್ದಿದ್ದರೆ....ಅವನು ಎಪ್ಪತ್ತಾರು ಮೈಲಿಗಳ ಆಚೆ ತನ್ನದೇ ಆದ ಪ್ರಪಂಚದಲ್ಲಿ ವಿಹರಿಸುತ್ತಿದ್ದನು ! ಮೀನಾಕ್ಷಿ ಸುಬ್ಬಮ್ಮನವರನ್ನೂ ಅಲ್ಲಿಗೆ ಬರುವಂತೆ ಕೂಗಿಕೊಂಡಳು. "ಹೋಗೇ, ಹುಚ್ಚು ಹುಡುಗಿ. ನಿನಗಂತೂ ಚಿಕ್ಕ ವಯಸ್ಸು. ಎಗರಿಕೊಂಡು ಹೋದೆ ಅಂದರೆ, ನನ್ನ ಕೈಲಾಗುವುದಿಲ್ಲಮ್ಮಾ" ಎಂದು ಕೂಗಿ ಹೇಳಿ ಅಲ್ಲೇ ದಡದ ಮರಳಿನ ಮೇಲೆ ಕುಳಿತುಕೊಂಡರು. ಮೀನಾಕ್ಷಿ ಮತ್ತೆ ಭಾವನಾ ಪ್ರಪಂಚದಲ್ಲಿ ಐಕ್ಯಳಾದಳು.

ಶೀತಲ ಮಂದಮಾರುತ ತೀಡಿ ಬಡಿಯುತ್ತಿದ್ದಿತು. ಮೇಲೆ

ಸುಮನೋಹರವಾದ ತಿಳಿನೀಲಿ ಆಗಸ. ಕಾಲಬಳಿ ಹರಿದುಹೋಗು ತ್ತಿದ್ದ ತಿಳಿನೀರಿನ ಕಾವೇರಿ. ಬಾನಿನ ಅಂಚಿಗೆ ಶೀಘ್ರಗತಿಯಿಂದ ಇಳಿಯುತ್ತಿದ್ದ ಭಾಸ್ಕರ. ಮೀನಾಕ್ಷಿ ತಲೆ ಎತ್ತಿ ಮುಳುಗುತ್ತಿದ್ದ ಸೂರ್ಯನನ್ನು ದಿಟ್ಟಿಸಿದಳು. ಹದ್ದುಗಳ ಗುಂಪೊಂದು ಬಹಳ ಎತ್ತರದಲ್ಲಿ ಆನಂದದಿಂದ ಹಾರಾಡುತ್ತಿದ್ದಿತು. ಇದ್ದಕ್ಕಿದ್ದಂತೆ ಕರಿಯ ಮೋಡ ವೊಂದು ಸೂರ್ಯನನ್ನು ಮುಚ್ಚಿಕೊಂಡಿತು. ಮೀನಾಕ್ಷಿಯ ಮನಸ್ಸಿಗೂ ಯೋಚನೆಯ ಕಾರ್ಮೋಡ ಕವಿಯಿತು. ಚಂದ್ರು ಹಿಂದೆ ಆಡಿದ್ದ ಮಾತುಗಳೆಲ್ಲ ನೆನಪಾದುವು. ಆ ದಿನಗಳನೆನಪಿನಲ್ಲಿ ಮೀನಾ ತನ್ಮಯಳಾದಳು. ತನ್ನ ಪಕ್ಕದಲ್ಲಿ ಗುಂಗುರುಕೂದಲಿನ ಸುಂದರ ಚಂದ್ರುವಿನ ಇರವನ್ನು ಅನುಭವಿಸಿದಳು. ಚಂದ್ರು ಅವಳ ಕಣ್ಣಿಗೆ ಗೋಚರನಾಗಿ ಅಂದಿನ ಸಿಹಿಮಾತುಗಳನ್ನು ಮತ್ತೆ ಮತ್ತೆ ಆಡಿದನು.

"ಮೀನಾಕ್ಷಿ, ನಾನು ಕಾಮಾಕ್ಷಿಯನ್ನು ಮದುವೆಯಾದರೆ ನಿನಗೇನನ್ನಿಸುತ್ತದೆ ?"

"ಆ್ಞ ! ಹಾಗಾದ್ರೆ ನೀನು ಕಾಮಾಕ್ಷೀನೇ ಮದ್ವೆ ಮಾಡ್ಕೋ ತೀಯ ?"

"................"

"................"

"ನಿನಗೆ ನನ್ನ ಮದುವೆ ಮಾಡಿಕೊಳ್ಳೋಕೆ ಇಷ್ಟವಿಲ್ಲವೇ ?"

"ಥೂ....ಹೋಗೋ....ನಾನು ಮದ್ವೇನೇ ಮಾಡ್ಕೊಳ್ಳೊಲ್ಲ."

"ಅವಳನ್ನ ಮಾಡಿಕೊಳ್ದೇ ಹೋದ್ರೆ ?"

"ನಂಗೆ ಹೆದರಿಕೆ ಆಗತ್ತಪ್ಪ. ಅಮ್ಮ ಹೊಡೀತಾಳೆ. ಇಷ್ಟು ಬೇಗ ಮದುವೆ !"

ಮೀನಾಕ್ಷಿಗೆ ತಾನಂದು ಆಡಿದ ಮಾತಿಗೆ ಇಂದು ನಗು ಬಂತು. ಸುಬ್ಬಮ್ಮನವರು ಇಂದಿನ ಹಾಗೆಯೇ ಇದ್ದಿದ್ದರೆ ? ನಾನೇ ಕೇಳಿ ಚಂದ್ರುವನ್ನು ಮದುವೆ ಮಾಡಿಕೊಳ್ಳುತ್ತಿದ್ದೆ ಎಂದುಕೊಂಡಳು. ಅಂದಿನ ತನ್ನ ಬಲವಂತದ ಮದುವೆಯ ನೆನಪಾಯಿತು. ತಕ್ಷಣ ಹೇಳಿಕೊಂಡಳು, 'ಎಷ್ಟು ಆಶ್ಚರ್ಯ. ನಮಗೆ ಆಗ ಹೇಗೆ ಈ ವಿಷಯ

ಗಳೆಲ್ಲ ತೋಚುವುದೇ ಇಲ್ಲ. ನಮ್ಮ ಮನಸ್ಸು ಎಂತಹ ಬಾಲ್ಯಾವಸ್ಥೆ ಯಲ್ಲಿ ಇರುತ್ತದೆ! ಅವಿಕಸಿತವಾಗಿರುತ್ತದೆ ! ಬಲವಂತದಿಂದ ಮದುವೆ ಮಾಡಿ ನಮ್ಮ ಬಾಳನ್ನು ಬಂಧಿಸುತ್ತಾರೆ. ನಮ್ಮ ವ್ಯಕ್ತಿಸ್ವಾತಂತ್ರ್ಯವನ್ನು ನಿರ್ಮೂಲ ಮಾಡುತ್ತಾರೆ. ನಮ್ಮ ಅಧಃಪತನ ಮಾಡುತ್ತಾರೆ. ಚಂದ್ರು ....ಚಂದ್ರು ಏಕೆ ಹೀಗಾದ ಚಂದ್ರು ಏಕೆ ಕಾಮಾಕ್ಷಿಯನ್ನು ಮದುವೆ ಯಾದ? ನನಗೆ ಗೊತ್ತು, ಹಣಕ್ಕಾಗಿ. ಹಾಳಾದ ಹಣ. ಅವನು ನನ್ನನ್ನು ಪ್ರೀತಿಸುತ್ತಿರಲಿಲ್ಲವೆ? ಹೌದು. ಆದರೆ ಆಗ ಅವನೂ ಹುಡುಗ. ವಿಕಾಸ ಹೊಂದದ ಮನಸ್ಸು ಹಣದ ಕಡೆ ಹರಿಯಿತು. ಆ ದಿನ ಕಡೆಯ ಸಲ ನನ್ನನ್ನು ನೋಡಿದಾಗ ಎಷ್ಟು ದೈನ್ಯದಿಂದ ತನ್ನನ್ನು ಮರೆಯಬಾರದೆಂದು ಬೇಡಿಕೊಂಡ, ಅವನ ಕಣ್ಣಲ್ಲಿ ಕಣ್ಣೀರು ಬಂದು ಬಿಟ್ಟಿತು. ನನಗೆ ನೆನಪಿಲ್ಲವೇ ಅದು. ಈಗ ಚಂದ್ರು ಏಕೆ ಹೀಗಾಗಿ ಹೋದ ? ಚಂದ್ರು ಇಷ್ಟು ಕೆಟ್ಟವನೇ ? ಚಂದ್ರುವನ್ನು ನಾನು ಮದುವೆ ಮಾಡಿಕೊಂಡಿದ್ದರೆ....ಹೀಗಾಗುತ್ತಿರಲಿಲ್ಲ. ಚಂದ್ರು ನನ್ನನ್ನು ಬಿಟ್ಟು ಖಂಡಿತ ಎಲ್ಲಿಗೂ ಹೋಗುತ್ತಿರಲಿಲ್ಲ....ನಾನು ಅವ ನನ್ನು ಹೋಗಗೊಡುತ್ತಿರಲಿಲ್ಲ.......ಚಂದ್ರು ಕೆಟ್ಟು ಹೋಗುತ್ತಿರಲಿಲ್ಲ ........ಖಂಡಿತಾ ಇಲ್ಲ.

' ಈಗ ನನ್ನ ಯಜಮಾನರು ನನ್ನನ್ನು ಬಿಟ್ಟುಹೋಗಿರುವರೇ ............ಅವರೆಷ್ಟು ಒಳ್ಳೆಯವರು

' ಆದರೆ ನನಗೆ ನಿಜವಾಗಿ ಸಂಸಾರದಲ್ಲಿ ಸಂತೋಷವಿದೆಯೇ ? ಮನಸ್ಸಿಗೆ ಶಾಂತಿ ಇದೆಯೇ. ನನ್ನ ಮನಸ್ಸು ಹಗಲಿರುಳು ಚಂದ್ರುವನ್ನು ಹೇಗೆ ಬಯಸುತ್ತಿದ್ದಿತು. ಅವನನ್ನು ಮರೆತಿರುವೆನೆಂದು ಹೇಳಿಕೊಂಡು ನನ್ನನ್ನೇ ವಂಚಿಸಲು ಪ್ರಯತ್ನಿಸಿದೆ. ಆದರೆ ಸಾಧ್ಯವಾಯಿತೇ. ಚಂದ್ರುವನ್ನು ಮರೆಯುಲು ಸಾಧ್ಯವೇ.

' ಕಾಮಾಕ್ಷಿಗೆ ಚಂದ್ರುವಿನಿಂದ ನಾಲ್ಕು ಮಕ್ಕಳಂತೆ............ ಅಬ್ಬ ! ಎಷ್ಟು ಚೆನ್ನಾಗಿರುತ್ತೆ. ನಾಲ್ಕು ಮಕ್ಕಳು ! ........ ಎಲ್ಲಾ ಚಂದ್ರುವಿನ ಹಾಗೇ ಇರಬೇಕು. ಕಾಮಾಕ್ಷಿ ಎಷ್ಟು ಅದೃಷ್ಟವಂತೆ. ನನಗೆ ದೇವರು ಒಂದು ಮಗುವನ್ನೂ ಕೊಡದೆಹೋದ. ನಾನೇ

ಕಾಮಾಕ್ಷಿಯಾಗಿದ್ದು ಅವರೇ ಚಂದ್ರುವಾಗಿದ್ದರೆ ........ ಚಂದ್ರುವೇ ಅವರಾಗಿದ್ದರೆ ನನ್ನ ಬಾಳೆಷ್ಟು ಮಧುರವಾಗಿರುತ್ತಿತ್ತು, ನಾನೆಷ್ಟು ಸುಖವಾಗಿರುತ್ತಿದ್ದೆ.'

ಮೀನಾಕ್ಷಿ ಅತ್ತಳು. ಸುಬ್ಬಮ್ಮನವರು, "ಮೀನಾಕ್ಷೀ, ಕತ್ತಲಾಗುತ್ತಿದೆ. ಹುಷಾರಾಗಿ ಎದ್ದು ಬಾಮ್ಮಾ. ಕಾಲು ಜಾರೀತು" ಎಂದು ಕೂಗಿದರು. ಅವರ ಕೂಗು ಅವಳನ್ನು ಬೆಚ್ಚಿಸಿ ಭಾವನಾಪ್ರಪಂಚದಿಂದ ಭುವಿಗಿಳಿಸಿತು. ಮೀನಾಕ್ಷಿ ನಿಟ್ಟುಸಿರುಬಿಟ್ಟು ಎದ್ದು ನದಿ ದಾಟಿ ದಡಕ್ಕೆ ಬಂದಳು. ಸುಬ್ಬಮ್ಮನವರು ಅವಳ ಕಳೆಗುಂದಿದ ಮುಖ ದಿಟ್ಟಿಸಿ ಕೇಳಿದರು:

"ಏನೇ ಮೀನಾಕ್ಷಿ, ಏನೋ ಯೋಚಿಸುತ್ತ ಕುಳಿತುಬಿಟ್ಟದ್ದೆ. ಎಷ್ಟು ಕರೆದರೂ ಕೇಳಿಸಲಿಲ್ಲವೇನು ?"

"ಇಲ್ಲಾಮ್ಮ...........ಅವರು ಹೇಗಿದಾರೋ ಅಂತ ಯೋಚನೆ ಮಾಡ್ತಿದ್ದೆ ಅಷ್ಟೆ."

"ನಿನ್ನೆ ತಾನೇ ಕಾಗದ ಬಂತಲ್ಲೇ. ಅಯ್ಯೋ ಹುಚ್ಚು ಹುಡುಗಿ, ಹೋಗು. ಒಂದು ತಿಂಗಳೂ ಬಿಟ್ಟಿರಲಾರೆಯಾ !"

'ಎಷ್ಟು ಮೋಸ' ಎಂದಿತು ಅವಳ ಮನಸ್ಸು. ಮೀನಾಕ್ಷಿ ಮನಸ್ಸಿನ ತುಂಬ ಚಂದ್ರು ತುಂಬಿಕೊಂಡಿದ್ದ. ಏನೋ ಅಸ್ಪಷ್ಟವಾಗಿ ಸುಬ್ಬಮ್ಮನವರ ಮಾತಿಗೆ ಜವಾಬು ಹೇಳುತ್ತಿದ್ದಳು. ಯಾವ ಮಾತಿಗೆ ಏನೋ ಜವಾಬು. ಎಲ್ಲಾ ಅಸಂಬದ್ಧ. ಸುಬ್ಬಮ್ಮನವರಿಗೆ ಕೂಡಲೇ ಅನ್ನಿಸಿತು. 'ಎಲ್ಲೋ ಮಗುವನ್ನು ನೆನೆಸಿಕೊಂಡಿದ್ದಾಳೆ' ಎಂದು ಸಮಾಧಾನ ಮಾಡಿಕೊಂಡರು. ಮೀನಾಕ್ಷಿ ಮೂಕಳಂತೆ ಮನೆಗೆ ಹೊರಟಳು. ಅವಳ ಮನಸ್ಸು ಹುಚ್ಚೆದ್ದು ಕುಣಿಯುತ್ತಿತ್ತು. ಎಲ್ಲರ ಮೇಲೂ ರೇಗಿ ತನ್ನ ರೋಷವನ್ನು ತೀರಿಸಿಕೊಳ್ಳಬೇಕೆನ್ನಿಸಿತು. ಇವರೇ ಅಲ್ಲವೆ ತನ್ನನ್ನು ಸಾಕಿದ ತಾಯಿ, ಸುಬ್ಬಮ್ಮನವರು. ತನಗೆ ಮೋಸ ಮಾಡಿದ್ದು. ತಾನು ಬೇಡವೆಂದರೂ ತನಗೆ ಇಷ್ಟವಿಲ್ಲದವನ ಕೊರಳಿಗೆ ಕಟ್ಟಿದರು. ತನ್ನನ್ನು ಚಂದ್ರು ಪ್ರೀತಿಸುತ್ತಾನೆಂದು ಸಂಶಯಗೊಂಡು ತನ್ನ ಜಾತಕವನ್ನು ಜ್ಯೋತಿಷ್ಕನಿಗೆ ತೋರಿಸಿದ್ದು. ಇವರ ಮರ್ಜಿ

ಯನ್ನು ತಿಳಿದುಕೊಂಡು ಅವನು ದುಡ್ಡು ಕೇಳಲು ಇಲ್ಲಸಲ್ಲದ ಸುಳ್ಳು ಹೇಳಿ ಇವರ ಮನಸ್ಸು ಸಮಾಧಾನಪಡಿಸಿದ್ದ. ಅವನ ಮಾತನ್ನು ಕೇಳಿ ಸಿಟ್ಟಿನಿಂದ ತನ್ನನ್ನು ಹೀನಾವಮಾನವಾಗಿ ಬೈದು ಐದು ವರ್ಷಗಳಿಂದ ದೂರಮಾಡಿದ್ದು. ಚಂದ್ರುವನ್ನು ತನ್ನಿಂದ ಕಿತ್ತುಕೊಂಡು ಮಗಳಿಗೆ ಕೊಟ್ಟರು. ಅವರಿಗೆ ತಿಳಿದಿರಲಿಲ್ಲವೇ, ತಾನೇ ಚಂದ್ರುವಿಗೆ ಸರಿಜೋಡಿಯಾದ ಅಚ್ಚುಮೆಚ್ಚಿನ ಹೆಣ್ಣೆಂದು. ಮೀನಾಕ್ಷಿ ಕೋಪದಿಂದ ಹಲ್ಲುಕಡಿದು ಸುಬ್ಬಮ್ಮನವರ ಕಡೆ ದೃಷ್ಟಿ ಹರಿಸಿದಳು. ಆದರೆ ಸುಬ್ಬಮ್ಮನವರು ಬೇರೆ ಗಮನದಲ್ಲಿದ್ದರು. ಇಬ್ಬರೂ ಕತ್ತಲಾಗುತ್ತಿದ್ದಂತೆಯೇ ಮನೆಯನ್ನು ಸೇರಿದರು. ಆ ದಿನ ರಾತ್ರಿ ಮೀನಾ ಸರಿಯಾಗಿ ಊಟಮಾಡಲಿಲ್ಲ.

ಮೀನಾಕ್ಷಿ ಮತ್ತೊಂದು ದಿನ ಪಕ್ಕದ ಮನೆಯ ಪಾಪಚ್ಚಿಯ ತಂಗಿ ತಮ್ಮಂದಿರೊಡನೆ ಸುತ್ತಾಡಿಕೊಂಡು ಬರುವ ನೆಪದಲ್ಲಿ ಆ ಮರಳು ದ್ವೀಪಕ್ಕೆ ಹೋಗಿ ಬಂದಳು. ಅದೇ ಪಾಪಚ್ಚಿಯ ತಂಗಿಯೊಡನೆ ಬೆಳಿಗ್ಗೆ ದೇವಸ್ಥಾನಕ್ಕೆ ಹೋಗಿಬರುವ ನೆಪದಲ್ಲಿ ಇನ್ನೊಂದು ಸಾರಿ ಆ ಮರಳು ದ್ವೀಪಕ್ಕೆ ಹೋಗಿ ಒಂದು ಘಂಟೆ ಕುಳಿತು ಬಂದಳು. ಅಲ್ಲಿ ಕುಳಿತರೆ ಅವಳ ಮನಸ್ಸಿಗೆ ಸಂತೋಷವಾಗುತ್ತಿತ್ತು. ಹೃದಯ ಆನಂದಾನುಭವದಿಂದ ಮಿಡಿಯುತ್ತಿದ್ದಿತು. ಅಲ್ಲಿಕುಳಿತರೆ ಚಂದ್ರುವಿನೊಡನೆ ಕುಳಿತಿರುವಂತೆ ಭಾಸವಾಗುತ್ತಿದ್ದಿತು. ಅದೇ ಹಳೆಯ ನೆನಪು ಮರುಕಳಿಸುತ್ತಿದ್ದಿತು. ಆ ನೆನಪಿನಲ್ಲಿ ಅವಳಿಗೆ ಅವರ್ಣನೀಯವಾದ ಆನಂದ, ತೃಪ್ತಿಸಮಾಧಾನಗಳು ದೊರೆಯುತ್ತಿದ್ದುವು. ಹೃದಯ ಹತ್ತಿಯಂತೆ ಹಗುರವಾಗುತ್ತಿದ್ದಿತು.

ಶಾಮಣ್ಣನವರಿಗೆ ಇದ್ದಕ್ಕಿದ್ದಂತೆ ಖಾಯಿಲೆ ಮೊದಲಾಯ್ತು. ವಯಸ್ಸಾಗುತ್ತ ಬಂದಂತೆ ಅವರ ಪೂಜೆ ಪುರಸ್ಕಾರ, ಆಚಾರ ವ್ಯವಹಾರಗಳು ಹೆಚ್ಚಾಗತೊಡಗಿದ್ದುವು. ಒಂದು ವಾರದಿಂದ ಕೆಮ್ಮು ನೆಗಡಿ. ಸುಬ್ಬಮ್ಮನವರು ಮೆಣಸಿನ ಕಷಾಯ ಮಾಡಿಕೊಟ್ಟರೂ ತಗ್ಗಲಿಲ್ಲ. ಹಾಲು ಅನ್ನದ ಪಥ್ಯ ಇಟ್ಟರು. ಪಂಡಿತರ ಹತ್ತಿರ ಔಷಧಿ ಕೊಡಿಸಿದರು.

ಹಿಂದಿನ ರಾತ್ರಿಯೆಲ್ಲಾ ಮೈ ಬೆಚ್ಚಗಿದ್ದರೂ ಬೆಳಗಿನ ಜಾವ ಎದ್ದುಹೋಗಿ ನದಿಯಲ್ಲಿ ಸ್ನಾನ ಮಾಡಿ ಬಂದರು. ಪೂಜೆ ಮಾಡುತ್ತಿದ್ದಂತೆ ಛಳಿ ಬಂದು ಮಲಗಿಬಿಟ್ಟರು. ಮಧ್ಯಾಹ್ನದ ಹೊತ್ತಿಗೆ ಮೈ ಸುಡುತ್ತಿದ್ದಿತು. ಸುಬ್ಬಮ್ಮನವರು ತುಪ್ಪದ ದೀಪ ಹಚ್ಚಿಟ್ಟರು. ಓಡಿ ಹೋಗಿ ಪಂಡಿತರನ್ನು ಕರೆದುಕೊಂಡು ಬಂದರು. ಪಂಡಿತರು ಯಾವುದೋ ಪುಡಿ ಕೊಟ್ಟು, ಪಥ್ಯ ಹೇಳಿ ಹೊರಟುಹೋದರು. ಮಧ್ಯಾಹ್ನದ ಹೊತ್ತಿಗೆ ಜ್ವರ ಕೊಂಚ ಕಮ್ಮಿಯಾಯಿತು. ಸುಬ್ಬಮ್ಮನವರಿಗೆ ಸಮಾಧಾನವಾಯಿತು. ಆದರೆ ಆ ಸಮಾಧಾನ ಹೆಚ್ಚು ಹೊತ್ತು ಇರಲಿಲ್ಲ. ಬೆಂಗಳೂರಿನಿಂದ ಕಾಗದ ಬಂದಿತು. ಮೀನಾಕ್ಷಿ ಒಡೆದು ಓದಿಕೊಂಡಳು. "ಅಮ್ಮಾ, ಚಂದ್ರಶೇಖರ ಕಾಗದ ಬರೆದಿದ್ದಾರೆ. ಕಾಮಾಕ್ಷಿಗೆ ಹೆರಿಗೆಯ ದಿನವಂತೆ. ಹದಿನೈದು ದಿವಸಗಳಿಂದ ತುಂಬ ಖಾಯಿಲೆಯಾಗಿದೆಯಂತೆ. ತಕ್ಷಣ ಹೊರಟು ಬರುವುದು ಎಂದು ಬರೆದಿದ್ದಾರೆ" ಎಂದು ಹೇಳಿದಳು. ಸುಬ್ಬಮ್ಮನವರಿಗೆ ಗಾಬರಿಯಾಯಿತು. ತಾಯ ಹೃದಯ ಸಂಕಟದಿಂದ ತುಡಿಯಿತು. ಸುಬ್ಬಮ್ಮನವರು ಮಗಳಿಗೆ ಏನಾಗಿ ಹೋಗಿದೆಯೋ ಎಂದು ಒದ್ದಾಡಿದರು. ಶಾಮಣ್ಣನವರು ಹೇಗಾದರಾಗಲಿ ಮಗಳಿಂದ ಕಡೆಗೊಂದು ಸಾರಿ ಕಾಗದ ಬಂತಲ್ಲಾ ಎಂದು ಸಂತೋಷಪಟ್ಟುಕೊಂಡರು. ಅದರ ಜೊತೆಯಲ್ಲೇ ಅವರಿಗೂ ಗಾಬರಿಯಿಂದ ದುಃಖವಾಯಿತು. ಕಣ್ಣಲ್ಲಿ ನೀರು ತಂದುಕೊಂಡು ಸಂಕಟಪಟ್ಟರು.

ಸುಬ್ಬಮ್ಮನವರಿಗೆ ತಮ್ಮ ಅಳಿಯನೇ ಕಾಗದ ಬರೆದಿರುವುದು ಸಮಾಧಾನವಾಯಿತು. ಮಾರನೆಯ ದಿನ ಹೊರಡೋಣವೆಂದರೆ ಶಾಮಣ್ಣನವರು ಹಾಸಿಗೆ ಹಿಡಿದಿದ್ದರು. ಆ ದಿನ ರಾತ್ರಿ ಜ್ವರ ನಿಂತರೆ ಮಾರನೆಯ ದಿನ ಹೋಗಬೇಕೆಂದುಕೊಂಡರು. ಆದರೆ ಜ್ವರ ನಿಲ್ಲುವ ಸೂಚನೆಯೇ ಕಾಣಲಿಲ್ಲ. ಸುಬ್ಬಮ್ಮನವರು ಗಂಡನ ಹತ್ತಿರವೇ ಕುಳಿತು ದೇವರ ಧ್ಯಾನಮಾಡತೊಡಗಿದರು. ಮೀನಾಕ್ಷಿಯೇ ಉತ್ಸಾಹದಿಂದ ಮನೆಗೆಲಸವನ್ನೆಲ್ಲ ಮಾಡಿದಳು. ಚಂದ್ರುವಿನ ಕಾಗದ ನೋಡಿ ಚಂದ್ರುವನ್ನೇ ನೋಡಿದಷ್ಟು ಆನಂದವಾಗಿದ್ದಿತು ಅವಳಿಗೆ. ಆ ಕಾಗದ

ವನ್ನು ಕುಪ್ಪಸದೊಳಗೆ ಬಚ್ಚಿಟ್ಟುಕೊಂಡು ಬಿಡುವು ಸಿಕ್ಕಿದಾಗಲೆಲ್ಲಾ ತೆಗೆದು ಓದಿ ಆನಂದ ಪಟ್ಟಳು! ಚಂದ್ರುವಿನ ಪತ್ರದ ಸ್ಪರ್ಶದಿಂದ ಅವಳ ಮೈನವಿರೆದ್ದಿತು. ಅವಳ ಪ್ರೇಮಿ ಅವಳಿಗೆ ಬರೆದ ಮೊದಲನೆಯ ಮೃದು ಮಧುರ ಪತ್ರದಂತಿತ್ತು ಆ ಪತ್ರ.

ಮಾರನೆಯ ದಿನವೂ ಶಾಮಣ್ಣನವರಿಗೆ ಜ್ವರ ನಿಲ್ಲುವ ಸೂಚನೆ ಕಾಣಲಿಲ್ಲ. ಸುಬ್ಬಮ್ಮನವರಿಗೆ ಇಲ್ಲಿ ಇರುವುದಕ್ಕೂ ಇಲ್ಲ; ಅಲ್ಲಿಗೆ ಹೋಗುವುದಕ್ಕೂ ಇಲ್ಲ. ಬೆಂಕಿಯಲ್ಲಿ ಬಿದ್ದ ಪತಂಗದಂತೆ ಒದ್ದಾಡಿ ಹೋದರು. ಹೇಗಾದರಾಗಲಿ ಎಂದು ಮಾರನೆಯ ದಿನ ಬರುವುದಾಗಿ ಕಾಗದ ಬರೆಸಿ ಹಾಕಿದರು. ಸ್ಟೇಷನ್ನಿಗೆ ಚಂದ್ರುವನ್ನೇ ಬರುವಂತೆ ಕೇಳಿಕೊಂಡಿದ್ದರು. ಊಟ ಮಾಡುವಾಗ ಸುಬ್ಬಮ್ಮನವರು

"ನೀನು ಅಪರೂಪಕ್ಕೆ ಬಂದು ಎರಡು ದಿವಸಗಳಿದ್ದಾಗಲೇ ಈ ಕಷ್ಟ ಬರಬೇಕೇ ಮೀನಾಕ್ಷಿ? ಈಗ ಏನು ಮಾಡುವುದೊಂತ" ಎಂದರು.

"ನಿನಗೆ ಇದೆಲ್ಲಾ ಬರುತ್ತೇಂತ ಗೊತ್ತಿತ್ತೇನಮ್ಮ. ಸಧ್ಯ ಹೇಗೋ ಅವರಿಂದ ಕಾಗದ ಬಂತಲ್ಲ. ನನಗೇನು ಇನ್ನೊಂದು ಸಾರಿ ಬಂದರೆ ಆಗುತ್ತೆ."

"ನನಗೇನೂ ತೋಚೋಲ್ಲಮ್ಮ. ನಾಳೆಯೂ ಜ್ವರ ನಿಲ್ಲದೆ ಹೋದರೆ ಏನು ಮಾಡೋದು. ನಿನ್ನೊಬ್ಬಳನ್ನೇ ಇಲ್ಲಿ ಬಿಟ್ಟು ಹೋಗಲೇ. ಒಂದು ವೇಳೆ ಹೋದರೆ ಎಷ್ಟು ದಿನ ಇರಬೇಕಾಗುವುದೋ. ಅಲ್ಲಿನ ಸ್ಥಿತಿ ಹೇಗಿದೆಯೋ ತಿಳಿಯದು."

"ಯೋಚಿಸಬೇಡ ಸುಮ್ನಿರಮ್ಮ. ಹೇಗೋ ಆಗುತ್ತೆ. ಜ್ವರ ನಿಂತ್ಹೋಗುತ್ತೆ. ಕೊಂಚ ಪಥ್ಯವಾಗಿದ್ದು ಬಿಟ್ಟರೆ ಸರಿ. ನಾನು ನೋಡಿಕೊಳ್ಳುತ್ತೇನೆ."

ಮೀನಾಕ್ಷಿ ಆ ದಿನ ಸರಿಯಾಗಿ ಊಟ ಮಾಡಲಿಲ್ಲ. ಏನೋ ಯೋಚನೆ. ಏನೋ ಬೇಸರ. ಊಟದ ಶಾಸ್ತ್ರ ಮಾಡಿ ಕೈ ತೊಳೆದುಕೊಳ್ಳಲು ಎದ್ದು ಹೋದಳು. ಕೈ ತೊಳೆಯುತ್ತಿದ್ದಂತೆ ಮೀನಾಕ್ಷಿಗೆ ಒಂದು ಹೊಸ ಯೋಚನೆ ಹೊಳೆಯಿತು.

'ನಾನೇಕೆ ಹೋಗಿ ಕಾಮಾಕ್ಷಿಯನ್ನೂ, ಮಕ್ಕಳನ್ನೂ ನೋಡಿ

ಕೊಂಡು ಬರಬಾರದು? ಹಾಗೇಯೇ ಚಂದ್ರು........ಛೇ! ಎಷ್ಟು ವರ್ಷಗಳಾಗಿ ಹೋಯಿತು. ಅವಳ ಒಂದು ಮಗುವನ್ನೂ ನೋಡಿಲ್ಲ. ಹಾಗೆಯೇ ಚಂದ್ರಶೇಖರನಿಗೆ ಎರಡು ಬುದ್ಧಿಯ ಮಾತು ಹೇಳಬಹುದು. ಕಾಮಾಕ್ಷಿಯ ಸಂಸಾರ ನೆಟ್ಟಗಾದರೆ ನನಗೆಷ್ಟು ಸಂತೋಷ' ಎಂದು ಯೋಚಿಸಿದಳು. ಅವಳ ಮನಸ್ಸು ಲಗಾಮು ಬಿಟ್ಟ ಕುದುರೆಯಂತೆ ಅಂಕೆಶಂಕೆ ಇಲ್ಲದೆ ಸಿಕ್ಕಿದತ್ತ ಹರಿಹಾಯ್ದಿತ್ತು. ಚಂದ್ರುವನ್ನು ನೋಡಬೇಕೆಂದು ಹೃದಯ ಹಂಬಲಿಸಿತು. ಆ ಹೊಸ ಯೋಚನೆಯಿಂದ ಮೀನಾಕ್ಷಿಯ ಹೃದಯದ ಭಾರವನ್ನು ಇಳಿಸಿದಂತಾಯಿತು.

ಶಾಮಣ್ಣನವರಿಗೆ ಆ ರಾತ್ರಿ ಕೂಡ ಜ್ವರ ಬಿಡಲಿಲ್ಲ. ಮಾರನೆಯ ದಿನ ಬೆಳಿಗ್ಗೆ ಜ್ವರ ಹಾಗೆಯೇ ಇದ್ದಿತು. ಸುಬ್ಬಮ್ಮನವರು ಉಭಯ ಸಂಕಟದಿಂದ ಭೂಮಿಗಿಳಿದು ಹೋದರು.

"ಈಗ ಏನು ಮಾಡಲೇ ಮೀನಾಕ್ಷಿ" ಎಂದು ತಲೆತಲೆ ಚಚ್ಚಿಕೊಂಡರು. ಮೀನಾಕ್ಷಿ ಅರ್ಧ ಭಯ, ಅರ್ಧ ಸಂಕೋಚದಿಂದ ಉದ್ವೇಗವನ್ನು ಮುಚ್ಚಿಡಲಾರದೆ ಕೇಳಿದಳು :

"ಅಮ್ಮಾ, ನಾನು ಹೋಗಿ ಬರಲೇನು ?"

"ನೀನು ಹೋಗುತ್ತೀಯಾ? ನಿಜವಾಗಿ !"

"ಅದರಲ್ಲಿ ಆಶ್ಚರ್ಯವೇನು ಬಂತಮ್ಮಾ. ಅಕ್ಕನ ಮನೆಗೆ ಹೋಗುವುದಕ್ಕೆ ? "

"ಹಾಗಲ್ಲ........ ಏನಿಲ್ಲ.... ನಿನಗೆ ಜೊತೆ ಯಾರು ಅಂತ ಮೀನಾಕ್ಷಿ ?"

"ನಾನೊಬ್ಬಳೇ ಹೋಗುತ್ತೇನೆ. ನನಗೇನು ಹೆದರಿಕೆ ? ಚಂದ್ರಶೇಖರ ಸ್ಟೇಷನ್ನಿಗೆ ಬಂದಿರುತ್ತಾರೆ. ಕಾಮಾಕ್ಷೀನೂ, ಮಕ್ಕಳನ್ನೂ ನೋಡಿದ ಹಾಗಾಗುತ್ತದೆ. ಅವಳ ಕಷ್ಟಕ್ಕೂ ಆದ ಹಾಗೆ ಆಗುತ್ತೆ."

"ಬೇಡಮ್ಮಾ, ನೀನೊಬ್ಬಳೇ ಹೋಗುವುದು ಬೇಡ. ಪಂಡಿತರ ಚಿಕ್ಕ ಮಗ ಇದ್ದಾನೆ. ಅವನನ್ನು ಜೊತೆಯಲ್ಲಿ ಕಳಿಸುತ್ತೇನೆ. ಬೆಂಗಳೂರಿನ ತನಕ ಬಿಟ್ಟು ಬರುತ್ತಾನೆ."

ಮೀನಾಕ್ಷಿಯ ಕೇಳಿಕೆಗೆ ಸುಸ್ವಾಗತ ದೊರೆಯಿತು. ಸುಬ್ಬಮ್ಮ

ನವರ ಹೃದಯ ಮೀನಾಕ್ಷಿಯ ಸರಳತೆಗೆ ಮೆಚ್ಚಿ ಮೂಕವಾಯಿತು. ಆಕೆ ಏನನ್ನೂ ಹೇಳದಾದರು. ಅಲ್ಲಿ ಬೇರೆ ಯೋಚನೆ ಮಾಡಲು ಅವಕಾಶವೇ ಇರಲಿಲ್ಲ. ಆದರೆ ಅವರ ಮನಸ್ಸು ಹುಳಿಹುಳಿಯಾಯಿತು. ಕಾಮಾಕ್ಷಿ ಏನು ಅವಳಿಗೆ ಕಮ್ಮಿ ಅವಮಾನ ಮಾಡಿದ್ದಳೇ. ಆದರೂ ಆ ತಾಯಿಯ ಕರುಳು ಅಂತಹ ಸಹಾಯವನ್ನು ತಿರಸ್ಕರಿಸದೇ ಹೋಯಿತು. ಮಾರನೆಯ ದಿನ ಮೀನಾಕ್ಷಿ ಊಟ ಮಾಡಿಕೊಂಡು ಹನ್ನೆರಡು ಘಂಟೆಯ ರೈಲಿಗೆ ಹೊರಡುವುದೆಂದು ನಿಶ್ಚಯವಾಯಿತು. ಸುಬ್ಬಮ್ಮನವರು ಪಂಡಿತರ ಮನೆಗೆ ಹೋಗಿ ಬಂದು ಮಡಿ ಉಟ್ಟು ಕೊಂಡು ಅಡಿಗೆಯ ಕೆಲಸದಲ್ಲಿ ತೊಡಗಿದರು. ಮೀನಾಕ್ಷಿ ಉತ್ಸಾಹ ದಿಂದ ತನ್ನ ಬಟ್ಟೆಗಳನ್ನು ತೆಗೆದಿಟ್ಟುಕೊಂಡಳು. ಪೆಟ್ಟಿಗೆಯ ಬಾಗಿಲನ್ನು ತೆಗೆದಾಗ ಅದರಲ್ಲಿ ಚಂದ್ರುವಿನ ಭಾವಚಿತ್ರವಿರುವುದರ ನೆನಪಾಯಿತು. ಪೆಟ್ಟಿಗೆಯ ತಳದಲ್ಲಿದ್ದ ಆ ಚಿತ್ರವನ್ನು ತೆಗೆದು ದಿಟ್ಟಿಸಿ ನೋಡಿದಳು. ಚಂದ್ರುವಿನ ರೂಪು ಕಣ್ಣಿಗೆ ಕಟ್ಟಿತು. ಅಂದಿನ ಚಂದ್ರು .....ಇಂದಿನ ಚಂದ್ರು ಹೇಗಿರುವನೋ....

## ೧೨

ಮೀನಾಕ್ಷಿ, ಪಂಡಿತರ ಮಗನೊಡನೆ ಬೆಂಗಳೂರಿನ ರೈಲು ಹತ್ತಿದಳು. ಅವಳಿಗೆ ಏನೋ ಒಂದು ಬಗೆಯ ಆನಂದ, ಹೆದರಿಕೆ, ಉತ್ಸಾಹ, ನಿರುತ್ಸಾಹ ಎಲ್ಲ ಬೆರೆತಿದ್ದುವು. ಕಾಮಾಕ್ಷಿ ತನ್ನನ್ನು ಹೇಗೆ ಸ್ವಾಗತಿಸುತ್ತಾಳೋ. ಚಂದ್ರು ತನ್ನನ್ನು ಹೇಗೆ ಸ್ವಾಗತಿ ಸುತ್ತಾನೋ. ಅವನು ತನ್ನನ್ನು ಮರೆತ್ತು ಬಿಟ್ಟಿದ್ದರೆ? 'ಇಲ್ಲ, ನಿನ್ನನ್ನು ಮರೆತಿಲ್ಲ, ನಿನಗಾಗಿ ಕಾಯುತ್ತಿದ್ದಾನೆ', ಎಂದು ಹೃದಯ ದಲ್ಲಿ ಎಲ್ಲೋ ಕೂಗಿದಂತಾಯಿತು. ಹಾಗೇ ಆಗಿ ಹೋಗಲಿ ದೇವರೇ, ಚಂದ್ರು ನನ್ನನ್ನು ಮರೆಯದೇ ಇರಲಿ......ಇಲ್ಲ ಖಂಡಿತ ಮರೆತಿಲ್ಲ.

ನನ್ನ ಚಂದ್ರು ನನ್ನನ್ನು ಮರೆತಿರಲಾರ' ಎಂದು ಹೇಳಿಕೊಳ್ಳುವಾಗ ಅವಳ ಹೃದಯ ತುಂಬಿ ಬಂದಿತು.

ಮೀನಾಕ್ಷಿಗೆ ಬೆಂಗಳೂರು ಹತ್ತಿರ ಬರುತ್ತಬರುತ್ತ ಉತ್ಸಾಹ ಉಕ್ಕಿ ಹರಿಯಿತು. ಏನೋ ಒಂದು ಬಗೆಯ ಆನಂದ. ಒಂದು ಬಗೆಯ ನಾಚಿಕೆ. ಅವಳೇ ಅವನಿಗೆ ಕಾಗದ ಬರೆದಿದ್ದಳು. ತನ್ನ ಅಕ್ಷರವನ್ನು ಅವನು ಗುರುತು ಹಿಡಿಯುತ್ತಾನೆಯೇ? ನಾನೇ ಬರುತ್ತೇನೆಂದು ಅವನಿಗೆ ಗೊತ್ತು. ಸ್ಟೇಷನ್ನಿಗೆ ಬಂದಿರುತ್ತಾನೆಯೇ? ಕಾಗದ ನನ್ನದೆಂದು ತಿಳಿದಿದ್ದರೆ ಬಂದಿರುತ್ತಾನೆ. ಯಾರದೋ ಎಂದು ಬರದಿದ್ದರೆ? ಅಮ್ಮನ ಮೇಲಿನಕೋಪಕ್ಕೆ ಇನ್ನಾರನ್ನಾದರೂ ಕಳುಹಿಸಿದ್ದರೆ? ದಾರಿಯುದ್ದಕ್ಕೂ ಅವಳಿಗೆ ಇದೇ ಯೋಚನೆಯಾಯಿತು. ಮೀನಾಕ್ಷಿಗೆ ರೈಲು ಬಹಳ ನಿಧಾನವಾಗಿ ಹೋಗುತ್ತಿರುವಂತೆ ತೋರಿತು. ಮೀನಾಕ್ಷಿ ತನ್ನ ಆವೇಗವನ್ನು ತಡೆಯಲಾರದೆ ಬೇಸರದಿಂದ ಅಡಿಗಡಿಗೆ ಅಕ್ಕಪಕ್ಕದಲ್ಲಿದ್ದ ಹೆಂಗಸರನ್ನೆಲ್ಲ, "ಬೆಂಗಳೂರು ಬಂತೇ....ಎಷ್ಟು ದೂರ ಇದೆ" ಎಂದು ಕೇಳುತ್ತಿದ್ದಳು. ಕಿಟಕಿಯ ಹೊರಗಡೆ ತಲೆ ಹಾಕಿಕೊಂಡು ನೋಡುತ್ತಿದ್ದಳು. ಕೆಂಗೇರಿ ಕಳೆಯಿತು. ಮೀನಾಕ್ಷಿ ಸರಸರನೆ ಹಾದು ಹೋಗುತ್ತಿದ್ದ ಗಿಡಮರಗಳನ್ನು, ಕಟಾವು ಮಾಡಿ ಮೆದೆ ಹಾಕಿದ ಹೊಲಗಳನ್ನು ಉದ್ವೇಗದಿಂದ ನೋಡುತ್ತಿದ್ದಳು. ಈ ರೀತಿ ಹಾಳಾದ ರೈಲು ಸುತ್ತಿಕೊಂಡು ಕಂಬಿಗಳ ಮೇಲೆ ಜಾರಿಕೊಂಡು ಹೋಗುವುದರ ಬದಲು ಗಾಳಿಯಲ್ಲಿ ಹಾರಿಕೊಂಡು ಹೋಗಬಾರದೇ ಎನ್ನಿಸಿತು, ಅವಳಿಗೆ. ರೈಲು ಬೆಂಗಳೂರು ತಲುಪಿತು. ಕೆಂಪಾಂಬುಧಿ ಕೆರೆ, ಬಿನ್ನಿ ಮಿಲ್ಲು, ಗುಡ್ಸ್‌ಷೆಡ್ಡು ಎಲ್ಲಾ ಒಂದೊಂದಾಗಿ ಹಾದು ಹೋಯಿತು. ಪಕ್ಕದಲ್ಲೇ ಗುಡ್ಸ್‌ಗಾಡಿಗಳು ಮರೆಯಾಗಿ ನಿಂತಿದ್ದುವು. ರೈಲು ಅವುಗಳನ್ನೆಲ್ಲ ಹಿಂದೆ ಹಾಕಿ ನಿಧಾನವಾಗಿ ನಿಲ್ದಾಣದಲ್ಲಿ ಬಂದು ನಿಂತಿತು. ಪಕ್ಕದಲ್ಲಿದ್ದ ಒಬ್ಬ ಮುದುಕಿ ಮೂಗು ಮುರಿಯುವಂತೆ ಲೊಟಗುಟ್ಟಿದಳು: "ಸಧ್ಯ ಇಳಿ ಮಹಾರಾಯ್ತಿ. ಬೆಂಗಳೂರು ಬಂತು. ಅದೇನು ಆತುರವೋ ಈಗಿನ ಕಾಲದ ಹುಡುಗಿಯರಿಗೆ.

ಗಂಡ ಎಂದರೆ ಕುಣಿದಾಡುತ್ತಾರೆ." ಆದರೆ ಮೀನಾಕ್ಷಿಗೆ ಆಕೆಯ ಮಾತಿನ ಮೇಲೆ ಲಕ್ಷ್ಯವೇ ಇರಲಿಲ್ಲ. ಅವಳ ದೃಷ್ಟಿ ಎಲ್ಲ ನಿಲ್ದಾಣದ ಮೇಲಿದ್ದಿತು. ಅಬ್ಬ! ಅದೇನು ಗಲಾಟೆ. ಜನಗಳ ನೂಕು ನುಗ್ಗಲಾಟ. ಚಂದ್ರು ಬಂದಿದ್ದಾನೆಯೋ? ಆ ಗಲಾಟೆಯಲ್ಲಿ ಅವನನ್ನು ಹೇಗೆ ಗುರ್ತಿಸುವುದು? ಅವಳಿಗೆ ಕೆಳಗೆ ಇಳಿಯುವುದಕ್ಕೆ ಹೆದರಿಕೆಯಾಯಿತು. ಬೋಗಿಯಲ್ಲಿದ್ದ ಹೆಂಗಸರೆಲ್ಲ ಒಬ್ಬೊಬ್ಬರಾಗಿ ಕೆಳಗೆ ಇಳಿದರು. ಗಂಡಸರ ಬೋಗಿಯಿಂದ ಅಶ್ವತ್ಥ ಇಳಿದು ಬಂದು ಅವಳ ಪೆಟ್ಟಿಗೆಯನ್ನು ಕೆಳಗೆ ಇಳಿಸಿ "ಇಳಿಯಿರಿ ಮೀನಾಕ್ಷಮ್ಮ" ಎಂದನು. ಮೀನಾಕ್ಷಿ ರೈಲು ಚೆಂಬನ್ನು ತೆಗೆದುಕೊಂಡು ಇಳಿದು ಬರುವಷ್ಟರಲ್ಲಿ ನೇವಿಬ್ಲೂ ಸೂಟನ್ನು ಹಾಕಿಕೊಂಡ, ಕರಿಯ ಕನ್ನಡಕವನ್ನು ಧರಿಸಿದ ಯಾರೋ ಒಬ್ಬ ಯುವಕ ಬೋಗಿಯ ಪಕ್ಕದಲ್ಲೇ ಹಾದು ಹೋದನು. ಹಣೆಯ ಮೇಲೆ ಅದೇ ಸುಂದರ ಮುಂಗುರುಳು ಉರುಳಿಕೊಂಡಿತ್ತು. ಯಾರದು? ಹೌದು ಚಂದ್ರು ........ಅಷ್ಟು ಚೆನ್ನಾಗಿರುವವರು ಇನ್ನು ಯಾರು? ಚಂದ್ರೂ....
ಎಂದು ಮೀನಾಕ್ಷಿ ಕೂಗಿಯೇ ಬಿಟ್ಟಳು! ಚಂದ್ರು ತಕ್ಷಣ ಹಿಂತಿರುಗಿ ನೋಡಿದನು. ಮೀನಾಕ್ಷಿ ಪ್ಲಾಟ್‌ಫಾರಮ್ಮಿನ ಮೇಲೆ ಇಳಿದು ನಿಂತಿದ್ದಳು. ಚಂದ್ರುವಿಗೆ ತಬ್ಬಿಬ್ಬಾಯಿತು. ಮೊದಲು ಅಲುಗಾಡಿದಂತಾಯಿತು. ಚಂದ್ರು ಅರೆಕ್ಷಣ ಅವಳ ಕಡೆ ದಿಟ್ಟಿಸಿ ನೋಡಿ,

"ಅರ್‍ರೇ........ಮೀನಾಕ್ಷಿ! ........" ಎಂದು ಹತ್ತಿರ ಬಂದನು. ಯಾರನ್ನು ತಾನು ಹಗಲಿರುಳು ಧ್ಯಾನಿಸುತ್ತಿದ್ದನೋ ಅವಳು ಎದುರಿಗೆ ನಿಂತಿದ್ದಳು. ಮೀನಾಕ್ಷಿಯ ದರ್ಶನದಿಂದ ಅವನ ಮೈ ಪುಳಕಿತವಾಯಿತು. ಕಳೆದುಹೋದ ಆತ್ಮೀಯವಸ್ತು ದೊರಕಿದಂತಾಯಿತು. ಚಂದ್ರುವಿನ ಕಣ್ಣಲ್ಲಿ ಫಕ್ಕನೆ ನೀರೂರಿತು. ಆದರೆ ಕರಿಯ ಕನ್ನಡಕ ಮೀನಳ ಕಣ್ಣಿಂದ ಅದನ್ನು ಮರೆಮಾಡಿತು. "ಮೀನಾ, ನೀನು ಇಲ್ಲಿಗೆ ಹೇಗೆ ಬಂದೆ? ಏನು ಒಬ್ಬಳೇ ಬಂದೆಯಾ!"

ಮೀನಾಕ್ಷಿ ಚಂದ್ರುವನ್ನೇ ಎವೆಹಾಕದೆ ನೋಡಿ, "ಹ್ಞು, ಒಬ್ಬಳೇ ಬಂದೆ. ಏಕೆ ಬರಬಾರದೇನು" ಎಂದು ನಕ್ಕಳು.

" ಸುಳ್ಳು........ನೀನೊಬ್ಬಳೇ ಬರಲಿಲ್ಲ. ಈ ಹುಡುಗ ಯಾರೋ ಬಂದಿದ್ದಾನೆ."

ಅಶ್ವತ್ಥ, " ನಮಸ್ಕಾರ ಸಾರ್ " ಎಂದನು.

" ನಮಸ್ಕಾರ........ನೀನು ಇಲ್ಲಿಗೆ ಯಾಕೆ ಬಂದೆ ಮೀನಾಕ್ಷಿ ? "

" ನಿಮ್ಮ ಮನೆಗೇ ಬಂದೆ. ನಿಮ್ಮನ್ನು ನೋಡುವುದಕ್ಕೆ."

" ನನ್ನನ್ನು ನೋಡುವುದಕ್ಕೆ .... ನನ್ನನ್ನು ನೋಡುವುದಕ್ಕೇ ? ........ ಸುಳ್ಳು ! "

" ನೀವು ಇಲ್ಲಿಗೇಕೆ ಬಂದಿರಿ ?"

" ನನ್ನ ಅತ್ತೆ ಬರುತ್ತೇನೆಂದು ಬರೆದಿದ್ದರು. ಅದಕ್ಕೆ ಬಂದೆ."

" ಅವರಿಗೆ ಬದಲಾಗಿ ನಾನು ಬಂದಿದ್ದೀನಿ."

" ನೀನು ! ಅವರಿಗೆ ಬದಲು. ನಿನಗೆ ಹೇಗೆ ಗೊತ್ತು ? ನೀನು ಅಲ್ಲಿದ್ದೆಯಾ ? "

" ನಾನು ಅಲ್ಲಿಂದಲೇ ಬರುತ್ತಿದ್ದೇನೆ."

ಚಂದ್ರುವಿನ ತುಟಿಗಳ ಮೇಲೆ ನಗು ಮೂಡಿತು.

" ನಾನು ಕಾಗದವನ್ನು ನೋಡಿದಾಗಲೇ ನಿನ್ನ ಅಕ್ಷರಗಳೇ ಎಂದು ಕೊಂಡೆ. ಆದರೆ ನಂಬಿಕೆ ಬರಲಿಲ್ಲ. ಅದನ್ನು ನಾನು ಎಂದಾದರೂ ನಂಬಬಹುದೇ ? ಆ ರೀತಿ ಯೋಚಿಸುವುದೇ ಬಹಳ ಆಶ್ಚರ್ಯವಾಗಿ ಕಾಣುತ್ತದೆ. ಆದರೆ........ "

ಅವನ ಆ 'ಆದರೆ' ಏನೆಂದು ಕೇಳಬೇಕೆಂಬ ಮೀನಾಕ್ಷಿಯ ಕುತೂಹಲಕ್ಕೆ ಚಂದ್ರುವಿನಿಂದ ಉತ್ತರ ದೊರಿಯಲಿಲ್ಲ.

ಚಂದ್ರುವಿಗೆ ಏನೇನೋ ಮಾತನಾಡಬೇಕೆನ್ನಿಸಿತು. ಅವನ ಹೃದಯ ಉದ್ವೇಗಗೊಂಡಿತ್ತು. ಆ ಹುಡುಗನೆದುರು ಹೇಗೆ ಮಾತ ನಾಡುವುದು ?

" ಈ ಹುಡುಗ ಯಾರು ? "

" ಅವನು ಪಂಡಿತರ ಮಗ. ನನ್ನ ಜೊತೆ ಬಂದ ಅಷ್ಟೆ. "

ಚಂದ್ರು ಕೂಲಿಯವನ ಕೈಯಲ್ಲಿ ಅವಳ ಪೆಟ್ಟಿಗೆ ತೆಗೆಸಿಕೊಂಡು ಹೊರಕ್ಕೆ ಬಂದನು. ಒಂದು ಜಟಕಾ ಗಾಡಿಯನ್ನು ಗೊತ್ತುಮಾಡಿ

ಕೊಂಡು ಎಲ್ಲರೂ ಕುಳಿತುಕೊಂಡರು. ಮೀನಾಕ್ಷಿ ಗಾಡಿಯ ಮಧ್ಯ ದಲ್ಲಿ ಚಂದ್ರುವಿನ ಪಕ್ಕದಲ್ಲೇ ಎದುರಾಗಿ ಕುಳಿತುಕೊಂಡಳು. ದಾರಿ ಯಲ್ಲಿ ಒಬ್ಬರ ಮುಖವನ್ನೊಬ್ಬರು ನೋಡುವುದೇ ಕೆಲಸವಾಯಿತು. ಇಬ್ಬರಿಗೂ ಏನೇನೋ ಹೇಳಿಕೊಳ್ಳಬೇಕೆಂದು ಮಾತುಗಳು ಗಂಟಲಿಗೆ ಬರುತ್ತಿದ್ದುವು. ಆದರೆ ಆ ಗಾಡಿ ಹೊಡೆಯುವವನು, ಅವನ ಪಕ್ಕದಲ್ಲಿ ಕುಳಿತಿದ್ದ ಆ ಹುಡುಗ, ಅವರಲ್ಲಿ ಸಂಕೋಚವನ್ನು ಹುಟ್ಟಿಸಿದ್ದರು. ಚಂದ್ರು ಕಪ್ಪು ಕನ್ನಡಕವನ್ನು ತೆಗೆದುಹಾಕಿದ್ದನು. ಅವರಿಬ್ಬರ ಕಣ್ಣು ಗಳೂ ಅಡಿಗಡಿಗೆ ಸಂಧಿಸಿ, ಬಾಯಿ ಸಂಕೋಚದಿಂದ ನುಡಿಯಲಾರದ ಸಾವಿರಾರು ನುಡಿಗಳನ್ನು ಅರೆಕ್ಷಣದಲ್ಲಿ ಹೇಳಿಕೊಂಡುವು. ಮೀನಾಕ್ಷಿ ಅವನ ದೃಷ್ಟಿಯನ್ನು ಎದುರಿಸಲಾರದೇ ಹೋದಳು. ಅವಳಿಗೆ ಆ ಮೌನ ಸಹಿಸಲಿಲ್ಲ.

"ಈಗ ಕಾಮಾಕ್ಷಿಗೆ ಹೇಗಿದೆ? ಹೆತ್ತಳೇ ?"

"ನೆನ್ನೆಯೇ ಹೆತ್ತಳಂತೆ. ಬಹಳ ಕಷ್ಟವಾಯಿತಂತೆ. ಆಸ್ಪತ್ರೆ ಯಲ್ಲೇ ಇದ್ದಾಳೆ. ಮಗು ಹೊಟ್ಟೆಯಲ್ಲೇ ಸತ್ತುಹೋಗಿತ್ತಂತೆ."

ಮೀನಾಕ್ಷಿಗೆ ಅವನ 'ಅಂತೆಕಂತೆ'ಗಳನ್ನು ಕೇಳಿ ಆಶ್ಚರ್ಯವಾಯಿತು. ಚಂದ್ರು ತನ್ನ ಸ್ವಂತ ಹೆಂಡತಿಯನ್ನೂ ನೋಡಿಕೊಳ್ಳದಿರುವಷ್ಟು ಕೆಟ್ಟು ಹೋಗಿರುವನೇ ಎಂದು ಭೀತಿ ಮೂಡಿತು. ಅದನ್ನು ಹೊರಗೆ ತೋರಿಸಲಿಲ್ಲ.

"ಹಾಗಾದರೆ ಮನೆಯಲ್ಲಿ ನೀವೊಬ್ಬರೆ !"

"ಇಲ್ಲ........ನನ್ನ ಮಕ್ಕಳಿಲ್ಲ ಇವೆ, ಒಬ್ಬರಿಗೆ ನಾಲ್ಕರಷ್ಟು."

"ಛೀ........ಹಾಗನ್ನಬಾರದು."

ಚಂದ್ರುವಿಗೆ ಅವಳು ಮೊದಲಿನ ಮೀನಾಕ್ಷಿಯಾಗಿಯೇ ಕಂಡಳು. ಮೀನಾಕ್ಷಿಯೂ ತಿಂಗಳಿಂದ ತಾಯಿಯ ಮನೆಯಲ್ಲಿ ವಿಶ್ರಾಂತಿ ತೆಗೆದು ಕೊಂಡು ಮೊದಲಿಗಿಂತ ಆರೋಗ್ಯವಾಗಿ ಮೈ ಕೈ ತುಂಬಿಕೊಂಡಿದ್ದರೂ ಅವನ ಕಣ್ಣಿಗೆ ಬಹಳ ಇಳಿದುಹೋದಂತೆ ಕಂಡಳು. ಅಬ್ಬ, ನಾನು ನೋಡಿದಾಗ ಅವಳಿಗೆ ಹದಿನೈದು ವರ್ಷ. ಈಗ ಮೀನಾಕ್ಷಿಯನ್ನು ನೋಡುತ್ತಿರುವುದು ಹಲವು ವರ್ಷಗಳ ಮೇಲೆ — ಯುವತಿಯ ರೂಪ

ದಲ್ಲಿ. ಆಗ ಮೀನಾಕ್ಷಿ ಎಷ್ಟು ದುಂಡು ದುಂಡಾಗಿ ಮೈಕೈ ತುಂಬಿ ಕೊಂಡಿದ್ದಳು ! ಈಗಲೂ ಮೀನಳು ರೂಪವತಿ. ಆದರೆ ಈಗಿನ ರೂಪೇ ಬೇರೆ ರೀತಿಯದು. ಈ ಐದು ವರ್ಷಗಳಿಂದ ಅವಳನ್ನು ನೋಡುವು ದಕ್ಕೆ ತಾನೆಷ್ಟು ಆಸೆಪಟ್ಟಿದ್ದ. ಈ ಎರಡು ವರ್ಷದ ನೆನಪು ! ಆ ಹುಣ್ಣಿಮೆಯ ರಾತ್ರಿಗಳು ! ಅಬ್ಬ! ಎಂತಹ ದಾರುಣವಾದ ರಾತ್ರಿಗಳು. ಚಂದ್ರುವಿನ ಯೋಚನಾಲಹರಿ ಸಿಕ್ಕಿದತ್ತ ಹರಿಹಾಯ್ದಿತ್ತು. ಹಿಂದಿನ ದಿವಸಗಳೆಲ್ಲ ಅವನ ಸ್ಮೃತಿ ಪಟಲದಲ್ಲಿ ತೆರೆತೆರೆಯಾಗಿ ಸರಸರನೆ ಹರಿದು ಹೋಯಿತು. ಚಂದ್ರುವಿನ ಮೈ ಝುಮ್ಮೆಂದಿತು. ದೈನ್ಯ ತುಂಬಿದ ದೃಷ್ಟಿಯಿಂದ ಮೀನಳನ್ನು ದಿಟ್ಟಿಸಿದನು.

ಗಾಡಿ ಮನೆಯ ಮುಂದೆ ನಿಂತಿತು. ಮೀನಾಕ್ಷಿ ಗಾಡಿಯಿಂ ದಿಳಿದು ಮನೆಯೊಳಗೆ ಕಾಲಿಟ್ಟಳು. ಅಶ್ವತ್ಥ ಟ್ರಂಕನ್ನು ಹೊತ್ತು ಕೊಂಡು ಹಿಂದೆ ಬಂದನು. ಕೆಲಸದ ಹುಡುಗಿಯೊಬ್ಬಳು ಚಿಕ್ಕ ಮಗು ವನ್ನೆತ್ತಿಕೊಂಡು ಹಜಾರದಲ್ಲಿ ಕುಳಿತಿದ್ದಳು. ಜಗಳವಾಡುತ್ತಿದ್ದ ಜಗದೀಶ್, ವನಿತಾ ಹೊಸ ಮುಖ ಕಂಡ ತಕ್ಷಣ ಜಗಳ ನಿಲ್ಲಿಸಿದರು. ಹೌದು, ಎಲ್ಲರೂ ಮುದ್ದು ಮಕ್ಕಳು. ಎಲ್ಲಾ ಚಂದ್ರುವಿನ ಹಾಗೆಯೇ. ಮೀನಾಕ್ಷಿ ಸರಿಯಾಗಿ ಊಹಿಸಿದ್ದಳು. ಅಪ್ಪನ ಮುಖ ಕಂಡ ಕೂಡಲೇ ಎಲ್ಲರೂ ಭಯದಿಂದ ಮಂಕರಾಗಿ ಮೂಲೆ ಸೇರಿದರು. ಮೂರು ವರ್ಷದ ಜಗದೀಶ್ ಚಂದ್ರುವಿನ ಮುಖ ಕಂಡಕೂಡಲೇ ಕಿಟ್ಟನೆ ಕಿರುಚಿ ಅಳ ತೊಡಗಿದನು. "ಮುಚ್ಚೋ ಬಾಯಿ.........." ಎಂದು ಕಣ್ಣು ಮೆದಟಿಸಿ ಚಂದ್ರು ರೇಗಿಬಿದ್ದನು. ಅವನು ಇನ್ನೂ ಜೋರಾಗಿ ಅಳತೊಡ ಗಿದನು. ಮೀನಾ ಚಂದ್ರುವನ್ನೊಮ್ಮೆ ನೋಡಿದಳು. ಅವಳಿಗೆ ಬಹಳ ದುಃಖವಾಯಿತು. ಮೀನಾಕ್ಷಿ ಅವನನ್ನು ಎತ್ತಿಕೊಂಡು ಸಮಾಧಾನ ಮಾಡಿದಳು. ಮನೆಯಲ್ಲಿ ಎಲ್ಲಿ ನೋಡಿದರೂ ಕಸ, ಧೂಳು. ಹಾಲಿನಲ್ಲಿ ಹಾಸಿಗೆಗಳೂ, ಬಟ್ಟೆಗಳೂ ಅಸ್ತವ್ಯಸ್ತವಾಗಿ ಬಿದ್ದುಕೊಂಡಿ ದ್ದುವು. ಮೇಲೆಲ್ಲ ಜೇಡನ ಬಲೆ ಹೆಣೆದುಕೊಂಡಿದ್ದಿತು. ಬಾಗಿಲ ಮೇಲಿನ ಇಲ್ಲಣ ಮುಖಕ್ಕೆ ಬಡಿಯುತ್ತಿದ್ದಿತು. ಹೊಗೆ ಬಡಿದು ಗೋಡೆಗಳು ಕಪ್ಪಿಟ್ಟಿದ್ದುವು.

ಹಾಲಿಗೆ ಸೇರಿದಂತೆ ಒಂದು ಅಡಿಗೆ ಮನೆ. ಅದರ ಪಕ್ಕದಲ್ಲೇ ಬಚ್ಚಲುಮನೆ. ಹಾಲಿನಲ್ಲೇ ಒಂದು ಚಿಕ್ಕ ಕೊಠಡಿ. ಅಲ್ಲಿ ದೇವರನ್ನಿಟ್ಟಿದ್ದರು. ಹಜಾರದಲ್ಲಿ ಒಂದು ವಿಶಾಲವಾದ ಕೊಠಡಿ. ಅದೇ ಚಂದ್ರುವಿನ ಆಫೀಸು, ಡ್ರಾಯಿಂಗ್ ರೂಮು, ಬೆಡ್ ರೂಮು ಎಲ್ಲಾ. ಅಡಿಗೆ ಮನೆಯ ಒಲೆ ಹಚ್ಚಿದಂತೆ ಕಾಣಲಿಲ್ಲ. ಬಡುವಿನ ಮೇಲೆ ಎಲ್ಲೋ ನಾಲ್ಕೈದು ಪಾತ್ರೆಗಳಿದ್ದುವು. ಮುನ್ನೂರು ನಾನೂರು ರೂಪಾಯಿಗಳನ್ನು ಸಂಪಾದಿಸುವ ಕಲಾವಿದ ಚಂದ್ರುವಿನ ಮನೆ ಹೀಗೆಯೇ ಇರುವುದು? ಅದೇನು ಕೊಳಕು, ಕಸ. ಎಳೆಮಗು ಸುಜಾತ ಹಾಲಿಗಾಗಿ ಅತ್ತಿತು. ಅದಕ್ಕಿನ್ನೂ ಒಂದು ವರ್ಷ. ಆಗಲೇ ಕಾಮಾಕ್ಷಿ ಮತ್ತೊಂದು ಮಗುವಿನ ತಾಯಿ. ಅಬ್ಬ! ಎನ್ನಿಸಿತು ಮೀನಾಕ್ಷಿಗೆ. ಮೀನಾಕ್ಷಿ ಸುಜಾತೆಗೆ ಹಾಲು ಹಾಕಲು ಅಡಿಗೆ ಮನೆಯನ್ನೆಲ್ಲ ತಡಕಾಡಿದಳು. ಎಲ್ಲೂ ಹಾಲಿನ ಸುಳಿವೇ ಇಲ್ಲ. ಮಗುವನ್ನೆತ್ತಿಕೊಂಡು ಚಂದ್ರುವಿನ ಕೊಠಡಿಗೆ ಹೋದಳು. ಚಂದ್ರು ಸೂಟಿನ ಸಹಿತ ಮಂಚದ ಮೇಲೆ ಮಲಗಿದ್ದನು. ಅವನ ಕೊಠಡಿಯಲ್ಲೂ ಅದೇ ಗೋಳು. ಧೂಳು, ಕಸ, ಕೊಳಕು. ಹೊರಗೆ ನಿಂತು ಬಗ್ಗಿನೋಡಿ ಕೇಳಿದಳು.

"ಮಗು ಅಳುತ್ತಿದೆ. ಹಾಲು ಹಾಕಬೇಕು. ಎಲ್ಲಿದೆ ಹೇಳಿ."

"ಆ್ಞ!....ಹಾಲೇ? ನನಗೆ ಗೊತ್ತಿಲ್ಲ. ಅವಳೆಲ್ಲಿಟ್ಟಿದ್ದಳೋ."

"ಅಂದರೆ, ನೆನ್ನೆ ಬೆಳಿಗ್ಗೆಯಿಂದ ಏನು ಮಾಡಿದಿರಿ? ಮಗುವಿಗೆ ಹಾಲೇ ಇಲ್ಲವೆ?"

"ಏನು ಮೀನಾಕ್ಷಿ, ನೀವು ನೀವು ಎಂದು ಬಹಳ ಮರ್ಯಾದೆ ಮಾಡುತ್ತಿದ್ದೀಯೆ. ನೀನು ಅಂದರೆ ನನಗೇನೂ ಕೋಪ ಬರುವುದಿಲ್ಲ. ಇದು ನಿಮ್ಮ ತಾಯಿಯ ಮನೆಯಲ್ಲ. ಇಲ್ಲಿ ನೀವು ಎನ್ನಬೇಕೆಂದು ಯಾರೂ ನಿರ್ಬಂಧ ಹಾಕುವುದಿಲ್ಲ."

"ಹೋ....ಹಾಗೇ ಆಗಲಿ ಚಂದ್ರು! ಮಕ್ಕಳಿಗೆಲ್ಲ ಊಟಕ್ಕೆ ಏನು ಮಾಡಿದೆ?"

"ಅವಳೇ ವ್ಯವಸ್ಥೆ ಮಾಡಿರಬೇಕು. ನನಗೆ ಅದೆಲ್ಲ ತಿಳಿಯುವುದಿಲ್ಲ."

"ಅವಳು ಅಲ್ಲಿ ಸಾಯುತ್ತ ಬಿದ್ದಿದ್ದಾಳೆ ಅಂದೆ. ಅವಳಿಗೆ ಇದೆಲ್ಲ ಹೇಗೆ ಗೊತ್ತಾಗಬೇಕು? ನೀನು ತಾನೇ ಮನೆಯ ಯಜಮಾನ?"

ಮೀನಳ ಧ್ವನಿಯಲ್ಲಿ ಅನುಕಂಪ ಮಿಶ್ರಿತ ಕಠೋರತೆಯಿತ್ತು. ಚಂದ್ರು ಮಾತನಾಡಲಿಲ್ಲ.

"ನೀನು ಬಹಳ ಬದಲಾಯಿಸಿಹೋಗಿದ್ದೀ ಚಂದ್ರು."

"ಹೌದು ಮೀನಾ, ನಾನು ಬಹಳ ಬದಲಾಯಿಸಿಹೋಗಿದ್ದೀನಿ."

ಚಂದ್ರು ನಿಟ್ಟುಸಿರಿಟ್ಟು ಹೇಳಿದನು. ಮೀನಳಿಗೆ ಅವನ ಬಗ್ಗೆ ತೀರ ಆಶ್ಚರ್ಯವಾಯಿತು.

"ಮತ್ತೆ ಮಕ್ಕಳಿಗೆಲ್ಲ ಈಗ ಏನು ಮಾಡುತ್ತೀಯ? ಬೆಳಿಗ್ಗೆಯಿಂದ ಏನಾದರೂ ತಿಂದಿವೆಯೋ ಇಲ್ಲವೋ?"

"ನನಗೆ ಗೊತ್ತಿಲ್ಲ. ದುಡ್ಡು ಕೊಡುತ್ತೇನೆ. ತರಿಸಿಕೊಡು ಮೀನಾ."

ಚಂದ್ರು ಎದ್ದು ಬಂದು ಅವಳ ಕೈಗೆ ಹತ್ತುರೂಪಾಯಿನ ನೋಟು ಕೊಟ್ಟನು. ಮೀನಾಕ್ಷಿ ಕೆಲಸದ ಹುಡುಗಿಯನ್ನು ಜೊತೆ ಮಾಡಿ ಅಶ್ವತ್ಥನನ್ನು ಹೋಟೆಲಿಗೆ ಕಳುಹಿಸಿದಳು. ಅಶ್ವತ್ಥ ಎಲ್ಲರಿಗೂ ಪೂರಿ ಪಲ್ಯ ತಂದುಕೊಟ್ಟನು. ಮಕ್ಕಳೆಲ್ಲ ಆನಂದದಿಂದ ತಿಂದುವು. ಎಷ್ಟು ಹಸಿದಿದ್ದುವೋ ಆ ಹಸುಗೂಸುಗಳು. ಕೆಲಸದ ಹುಡುಗಿಯಿಂದ ಬೆಳಿಗ್ಗೆ ಆ ಮಕ್ಕಳೆಲ್ಲ ಅದೇ ಬೀದಿಯಲ್ಲಿ ಮೂರನೆಯ ಮನೆಯ ಡಾಕ್ಟರರ ಮನೆಯಲ್ಲಿ ಹತ್ತುಘಂಟೆಗೆ ಊಟ ಮಾಡಿದ್ದವೆಂದು ತಿಳಿಯಿತು. ಮೀನಾಕ್ಷಿಯ ಜೀವಕ್ಕೆ ಕೊಂಚ ಸಮಾಧಾನವಾಯಿತು. ಅಳುತ್ತಿದ್ದ ಸುಜಾತೆಗೆ ಹಾಲು ತರಿಸಿ ಕಾಸಿ ಕುಡಿಸಿದಳು. ಮೀನಾಕ್ಷಿ ತಣ್ಣೀರಿನಲ್ಲೇ ಸ್ನಾನಮಾಡಿ ಅಡಿಗೆಗೆ ಒಲೆ ಹಚ್ಚಿದಳು. ಎಸರಿಗೆ ಬೇಳೆ ಹಾಕಲು ಡಬ್ಬಗಳನ್ನೆಲ್ಲ ತಡಕಾಡಿದಳು. ಒಂದು ಕಾಳು ಬೇಳೆಯೂ ಕಾಣಲಿಲ್ಲ. ಒಂದು ಡಬ್ಬದಲ್ಲಿ ಮಾತ್ರ ಒಂದು ಸೇರು ಅಕ್ಕಿ ಇತ್ತು. ತರಕಾರಿಯ ಸುಳಿವೇ ಇರಲಿಲ್ಲ. ಈರುಳ್ಳಿಯ ಬುಟ್ಟಿಯಲ್ಲಿ ಒಂದೆರಡು ಈರುಳ್ಳಿ ಇದ್ದಿತು. ಇನ್ನು ಅಷ್ಟು ಹೊತ್ತಿನಲ್ಲಿ ಏನು ತರಕಾರಿ ಎಂದು

ಕೊಂಡು ಹೆಣ್ಣಾಳಿನ ಕೈಯಲ್ಲಿ ಒಂದು ರೂಪಾಯಿನ ಬೇಳೆ ತರಿಸಿದಳು. ಎಂಟು ಘಂಟೆಯ ಹೊತ್ತಿಗೆ ಅನ್ನ ಸಾರು ಚಟ್ನಿ ಮಾಡಿ ಎಲ್ಲರಿಗೂ ಬಡಿಸಿದಳು. ಮಕ್ಕಳಿಗೆಲ್ಲ ಅವಳ ಪ್ರೀತಿ ವಿಶ್ವಾಸಗಳನ್ನು ನೋಡಿ ಕಳೆದುಹೋದ ಬೊಂಬೆ ಸಿಕ್ಕಿದಷ್ಟು ಸಂತೋಷವಾಯಿತು. ಜಗದೀಶ್ ಅಡಿಗೆ ಮನೆಗೆ ಬಂದು ಕಣ್ಣರಳಿಸಿ ಕೇಳಿದನು,

"ನೀನು ಯಾರು?"

"ನಾನು ನಿನ್ನ ಚಿಕ್ಕಮ್ಮ."

ಮೀನಾಕ್ಷಿ ಹೆಮ್ಮೆಯಿಂದ ಹೇಳಿಕೊಂಡಳು. ಜಗದೀಶ್, ವನಿತಾ ಇಬ್ಬರೂ ಚಿಕ್ಕಮ್ಮ, ಚಿಕ್ಕಮ್ಮ ಎಂದು ಆನಂದದಿಂದ ಕುಣಿದರು. ತೆಂಗಿನಕಾಯಿ ಬೇಕು, ಬೆಲ್ಲ ಬೇಕು, ಕಳ್ಳೆ ಬೇಕು ಎಂದು ಕೇಳಿ ಕೇಳಿ ಮೀನಾಕ್ಷಿ ಕೊಟ್ಟ ಕೂಡಲೇ ನಗುತ್ತ ನಲಿಯುತ್ತ ತೆಗೆದುಕೊಂಡು ಹಜಾರಕ್ಕೆ ಓಡಿಹೋದರು. ಮೀನಾಕ್ಷಿ ಮಕ್ಕಳಿಗೂ ಅಶ್ವತ್ಥನಿಗೂ ಬಡಿಸಿ ಚಂದ್ರುವಿನ ಕೊಠಡಿಗೆ ಬಂದಳು. ಚಂದ್ರು ಇನ್ನೂ ಹಾಗೆಯೇ ಮಲಗಿದ್ದ. ಬಾಗಿಲಲ್ಲಿ ನಿಂತು ಮೀನಾಕ್ಷಿ

"ಊಟ ಮಾಡುವುದಿಲ್ಲವೇನು?" ಎಂದಳು.

ಚಂದ್ರು ಎದ್ದು ಬಟ್ಟೆ ಬದಲಾಯಿಸಿ ಕೈತೊಳೆದುಕೊಂಡು ಊಟಕ್ಕೆ ಕುಳಿತನು. ಮೀನಾಕ್ಷಿ ಅವನನ್ನೇ ಕದ್ದು ಕದ್ದು ನೋಡುತ್ತಾ, ಬಡಿಸುತ್ತಾ ನಕ್ಕು,

"ಅಲ್ಲಾ ಚಂದ್ರು, ಹೀಗಾದರೆ ಹೇಗೆ? ಮನೆಯಲ್ಲಿ ಏನಿದೆ ಏನಿಲ್ಲ ಅಂತ ನೋಡಿಕೊಳ್ಳಬೇಡವೇ? ಅಮ್ಮ ಬಂದಿದ್ದರೆ ಏನೆಂದು ಕೊಳ್ಳುತ್ತಿದ್ದರು?"

"ಅಂದುಕೊಳ್ಳುವುದೇನು? ಅವರೂ ಮಗಳ ಸಂಸಾರವನ್ನು ನೋಡಿ ಸಂತೋಷಪಡುತ್ತಿದ್ದರು."

ಮೀನಾಕ್ಷಿ ಅವನ ಮಾತು ಕೇಳಿ ಬೆರಗಾಗಿ ನಿಂತಳು. ಚಂದ್ರು ಯಾವುದೋ ಯೋಚನೆಯಲ್ಲಿ ತಲ್ಲೀನನಾಗಿದ್ದನು. ಸರಿಯಾಗಿ ಊಟವನ್ನೇ ಮಾಡಲಿಲ್ಲ. ಮೀನಾಕ್ಷಿ ಅವನಿಗಾಗಿ ಹೋಟೆಲಿನಿಂದ ಆಲೂಗೆಡ್ಡೆ ಪಲ್ಯ ತರಿಸಿದ್ದಳು. ಅದನ್ನೂ ಮುಟ್ಟಿರಲಿಲ್ಲ. ಅವಳಿಗೆ

ಅಸಮಾಧಾನವಾಯಿತು.

"ಏಕೆ ಚಂದ್ರು, ಸರಿಯಾಗಿ ಊಟವನ್ನೇ ಮಾಡುತ್ತಿಲ್ಲ? ಏನೋ ಯೋಚನೆ ಮಾಡುತ್ತಿರುವೆ. ಏಕೆ ಅಡಿಗೆ ಚೆನ್ನಾಗಿಲ್ಲವೇ?"

"ಇಲ್ಲ, ಚೆನ್ನಾಗಿದೆ. ಸರಿಯಾಗಿ ಊಟ ಮಾಡದೆ ಏನು."

"ಮತ್ತೆ ಏನನ್ನೂ ತಿಂದಿಲ್ಲ. ಎಲೆಯಲ್ಲಿ ಎಲ್ಲಾ ಹಾಗೆಯೇ ಇದೆ."

"ನೀನು ಬಂದುಬಿಟ್ಟೆಯೆಂದು ಹೊಟ್ಟೆ ತುಂಬಿಹೋಯಿತು ಅನ್ನಲೇ?"

"ಹಾಗಾದರೆ ನಾನು ಬರಬಾರದಾಗಿತ್ತು. ತಪ್ಪು ಮಾಡಿದೆ ಅನ್ನು."

ಚಂದ್ರು ತಕ್ಷಣ ಕತ್ತೆತ್ತಿ ಅವಳ ಮುಖ ನೋಡಿದನು. ಮೀನಾ ನಕ್ಕಳು.

"ಏಕೆ ಮೀನಾ, ನನ್ನ ಮನೆಗೆ ಬಂದದ್ದು ತಪ್ಪೆ?"

"ಇನ್ನೇನು, ನನ್ನನ್ನು ನೋಡಿದೊಡನೆಯೇ ನಿನಗೆ ಹೊಟ್ಟೆ ತುಂಬಿಹೋದರೆ, ಇನ್ನು ನಮ್ಮನ್ನು ನೆಚ್ಚಿಕೊಂಡಿರುವ ಅನ್ನಪೂರ್ಣೆಯ ಗತಿಯೇನು?"

ಚಂದ್ರು ನಕ್ಕುಬಿಟ್ಟನು. ಸ್ನಾನಮಾಡಿ ಬಾಚದೇ ಹಾಗೇ ಬಿಟ್ಟಿದ್ದ ಮೀನಳ ಕೆದರಿದ ಕೂದಲನ್ನೇ ದಿಟ್ಟಿಸಿನೋಡುತ್ತ ಚಂದ್ರು ಹೇಳಿದನು.

"ನೀನು ಬಂದಮೇಲೆ ಅನ್ನಪೂರ್ಣೆ ನಾಚಿಕೆಪಟ್ಟುಕೊಂಡು ಓಡಿ ಹೋಗುವಳು."

ಚಂದ್ರು ತಟ್ಟೆಯಲ್ಲೇ ಕೈತೊಳೆದು ಒರೆಸಿಕೊಳ್ಳುತ್ತಾ

"ಮತ್ತೊಬ್ಬರ ಸುಖವನ್ನು ನೋಡುವುದರ ಜೊತೆಗೆ ತಮ್ಮ ಸುಖವನ್ನೂ ನೋಡಿಕೊಳ್ಳಬೇಕಾದುದು ಹೆಂಗಸರ ಧರ್ಮ. ಗಂಡಸರು ನೀವು ಎಣಿಸುವಷ್ಟು ಸ್ವಾರ್ಥಿಗಳಲ್ಲ. ನಾಳೆ ನಿನಗೆ ನೆಗಡಿ ಬಂದರೆ ನನ್ನ ಗತಿ ಏನು ಮೀನಾ" ಎಂದು ಮತ್ತೊಮ್ಮೆ ಮೀನಾಕ್ಷಿಯ ಒದ್ದೆಯ ಕೂದಲನ್ನೇ ದಿಟ್ಟಿಸಿ ನೋಡಿ ತನ್ನ ಕೊಠಡಿಗೆ ಹೊರಟುಹೋದನು.

ಮೀನಾಕ್ಷಿ ಅಭಿಮಾನದಿಂದ ಮೂಕಳಾದಳು. ಅವಳ ಮೈಯಲ್ಲಿ ಆನಂದದ ಮಿಂಚು ಮಿಂಚಿತು.

ಮಾರನೆಯ ದಿನ ಬೆಳಿಗ್ಗೆ ಮೀನಾಕ್ಷಿ ಚಂದ್ರುವಿನೊಡನೆ ಕಾಮಾಕ್ಷಿಯನ್ನು ನೋಡಿಕೊಂಡು ಬರಲು ಹೋದಳು. ಕಾಮಾಕ್ಷಿ ಜನರಲ್ ವಾರ್ಡಿನಲ್ಲಿದ್ದಳು. ಮೀನಾಕ್ಷಿಗೆ ಅಲ್ಲಿನ ಕೊಳಕು, ಗೊಂದಲ, ಆ ಮಂಚಗಳ ತಿಕ್ಕಾಟವನ್ನು ನೋಡಿ ಅಸಹ್ಯವಾಯಿತು. ಕಾಮಾಕ್ಷಿಯನ್ನು ನೋಡಿ ಮೀನಾಕ್ಷಿಗೆ ದುಃಖ ಉಕ್ಕಿ ಬಂತು. ಆ ಗುಬ್ಬಚ್ಚಿಯಂತಾಗಿದ್ದ ದೇಹ, ಆ ಕಳೆಗುಂದಿದ ಮುಖ, ಕಾಮಾಕ್ಷಿಯದೇ? ಅನ್ನಿಸಿತು. ಕಾಮಾಕ್ಷಿ ರೂಪವತಿಯಾಗಿರಲಿಲ್ಲ ನಿಜ. ಆದರೆ ಆರೋಗ್ಯವಾಗಿರಲಿಲ್ಲವೆ ? ಆರೋಗ್ಯದ ಚೆಲುವು ಅವಳ ಮುಖದಲ್ಲಿ ಇರಲಿಲ್ಲವೇ ?

ಕಾಮಾಕ್ಷಿಗೆ ಆ ಸಾರಿ ಹೆರಿಗೆಯಲ್ಲಿ ಬಹಳ ಕಷ್ಟವಾಗಿತ್ತು. ಮಗು ಹೊಟ್ಟೆಯಲ್ಲೇ ಸತ್ತುಹೋಗಿತ್ತು. ಶಸ್ತ್ರ ಚಿಕಿತ್ಸೆಮಾಡಿ ಹೊರಕ್ಕೆ ತೆಗೆದಿದ್ದರು. ಅವಳು ಸಾವಿನೊಡನೆ ಹೋರಾಡಿ ಮಕ್ಕಳಿಗಾಗಿ ಬದುಕಿ ಬಂದಿದ್ದಳು. ಮೀನಾಕ್ಷಿಯನ್ನು ನೋಡಿ ಅವಳಿಗೂ ಆಶ್ಚರ್ಯವಾಯಿತು. ಮೀನಾಕ್ಷಿ ಹಾಸಿಗೆಯಹತ್ತಿರ ಕುಳಿತು, "ಅಕ್ಕಾ, ಈಗ ಹೇಗಿದೆ ?" ಎಂದಳು. ಕಾಮಾಕ್ಷಿ ಬಹಳ ಕ್ಷೀಣಸ್ವರದಲ್ಲಿ

"ನೀನು ಯಾವಾಗ ಬಂದೆ ಮೀನಾಕ್ಷಿ.... ಅಮ್ಮ ಬಂದರೆ ?"

"ಇಲ್ಲ, ನಾನೇ ಅಮ್ಮನ ಮನೆಗೆ ಬಂದಿದ್ದೆ. ಅಪ್ಪನಿಗೆ ನಾಲ್ಕೈದು ದಿವಸಗಳಿಂದ ಜ್ವರಬರುತ್ತಿದ್ದಿತು. ನಿನ್ನ ಗಂಡನ ಕಾಗದ ನೋಡಿದ ತಕ್ಷಣ ಹುಳುವಿನಂತೆ ಒದ್ದಾಡಿಹೋದರು. ಅಲ್ಲಿ ಅಪ್ಪನನ್ನು ಬಿಟ್ಟು ಬರುವಂತಿಲ್ಲ. ನನ್ನನ್ನೇ ಕಳುಹಿಸಿದರು."

"ಸಂತೋಷ ಮೀನಾಕ್ಷಿ.... ನೀನು ಬಂದೆಯಲ್ಲಾ.... ನೋಡು ನಿನ್ನ ಹೊಟ್ಟೆ ಉರಿಸಿದುದಕ್ಕೆ ಅನುಭವಿಸುತ್ತಿದ್ದೇನೆ"

ಕಾಮಾಕ್ಷಿಯ ಕಣ್ಣಲ್ಲಿ ನೀರು ತುಂಬಿತು.

"ಅಕ್ಕಾ, ನೀನು ಹಾಗೆಲ್ಲಾ ಅನ್ನಬೇಡ. ನನಗೆ ಅದೆಲ್ಲ ಮನಸ್ಸಿನಲ್ಲಿದ್ದಿದ್ದರೆ ನಾನು ಬರುತ್ತಿದ್ದೆನೆ ?"

"ನಿನ್ನ ಮಕ್ಕಳು ಬಂದಿವೆಯೋ, ಮೀನಾ ?"

"ನನ್ನ ಮಕ್ಕಳು, ನನಗೆ ಮಕ್ಕಳು !.... ನನಗೆ ಮಕ್ಕಳಿಲ್ಲ ಅಕ್ಕ. ದೇವರು ನನಗೆ ಈ ಜನ್ಮದಲ್ಲಿ ಮಕ್ಕಳನ್ನು ಕೊಡುವುದಿಲ್ಲ. ನಾನು ಪಾಪಮಾಡಿ ಹುಟ್ಟಿದ್ದೇನೆ."

ಮೀನಾಕ್ಷಿ ಕಣ್ಣಲ್ಲಿ ನೀರೂರಿತು. ಹೇಗೋ ಸಾವರಿಸಿಕೊಂಡು ತಲೆತಗ್ಗಿಸಿಬಿಟ್ಟಳು. ಔಷಧಿ ಕುಡಿಸಲು ಬಂದ ನರ್ಸು ಹೆಚ್ಚಾಗಿ ಮಾತನಾಡಿಸಬೇಡಿರೆಂದು ಎಚ್ಚರಿಸಿಹೋದಳು.

"ಮೀನಾಕ್ಷಿ, ಇಷ್ಟು ಹೊತ್ತಿಗೆ ನಿನಗೆಲ್ಲಾ ತಿಳಿದಿರಬಹುದು. ನನ್ನ ಮಕ್ಕಳನ್ನು ಚೆನ್ನಾಗಿ ನೋಡಿಕೋ. ಅವರನ್ನೆಲ್ಲ ಕರೆದುಕೊಂಡು ಬಂದಿದ್ದರೆ ?"

"ನಿನ್ನ ಗಂಡ ಬೇಡವೆಂದ. ನಾನೇನು ಮಾಡಲಿ."

"ಎಲ್ಲರೂ ಚೆನ್ನಾಗಿದ್ದಾರೆಯೇ ?"

"ನೀನು ಯೋಚಿಸ ಬೇಡ ಅಕ್ಕ. ನಾನು ನೋಡಿಕೊಳ್ಳುತ್ತೇನೆ. ನಾನು ಬಂದಿರುವುದೇ ಅದಕ್ಕಾಗಿ."

ಕಾಮಾಕ್ಷಿಗೆ ತಾನು ಹಿಂದೆ ಅವಳಿಗೆ ಬರೆದುಹಾಕಿದ್ದ ಕಾಗದದ ನೆನಪಾಯಿತು. ಅವಳನ್ನು ತಾನೆಷ್ಟು ಕಡೆಗಾಣಿಸಿದ್ದಳು. ಈಗ ಅವಳೇ ದೇವತೆಯಂತೆ ತನ್ನ ಸಹಾಯಕ್ಕೆ ಬಂದಿದ್ದಾಳೆ. ಕಾಮಾಕ್ಷಿ ಪಶ್ಚಾತ್ತಾಪದಿಂದ ಅತ್ತಳು.

"ಮೀನಾ, ನಾನು ನಿಜವಾಗಲೂ ಪಾಪಿ. ಆಡಬಾರದ ಮಾತನ್ನು ಆಡಿ, ಬರೆಯಬಾರದ್ದನ್ನು ಬರೆದು ನಿನ್ನ ಹೊಟ್ಟೆ ಉರಿಸಿದೆ. ಅದನ್ನೆಲ್ಲ ಮರೆತುಬಿಡು. ನಾನು ದೊಡ್ಡವಳು. ನಿನ್ನಲ್ಲಿ ಕ್ಷಮಾಪಣೆ ಕೇಳಿಕೊಂಡರೆ ನಿನಗೆ ಶ್ರೇಯಸ್ಕರವಲ್ಲ. ಇಲ್ಲದಿದ್ದರೆ ನಿನ್ನ ಕಾಲಿಗೆ ಬೀಳುತ್ತಿದ್ದೆ."

"ಅಕ್ಕಾ, ನೀನು ಹಾಗೆಲ್ಲಾ ಮಾತನಾಡಿದರೆ ನಾನು ಹೊರಟು ಹೋಗುತ್ತೇನೆ."

ಕಾಮಾಕ್ಷಿ ಉಕ್ಕಿಬರುತ್ತಿದ್ದ ದುಃಖವನ್ನು ನುಂಗಿ ಮಲಗಿದಳು.

"ಅಕ್ಕ ಇಲ್ಲಿ ಬಹಳ ಗಲಾಟೆ ಅಲ್ಲವೇ ?"

"ಹೌದು, ಏನು ಮಾಡುವುದಕ್ಕಾಗುತ್ತದೆ ? ಇವರ ಕಿರುಚಾಟ ಕೇಳಿ ನನಗೆ ತಲೆನೋವು ಬಂದುಬಿಡುತ್ತದೆ. ಅರ್ಧ ಇದೇ ಖಾಯಿಲೆಯಾಗಿದೆ ನನಗೆ."

"ನಾನು ನಿನ್ನ ಗಂಡನಿಗೆ ಸ್ಪೆಷಲ್ ವಾರ್ಡಿನಲ್ಲಿ ಇಡಿಸುವಂತೆ ಹೇಳುತ್ತೇನೆ."

"ಬೇಡ ಮೀನಾಕ್ಷಿ. ಪಾಪ ಅವರಿಗೂ ದುಡ್ಡಿನ ತೊಂದರೆ. ಅವರಿಗೇಕೆ ಸುಮ್ಮನೆ ಖರ್ಚು."

"ನೀನು ಸುಮ್ಮನಿರಕ್ಕ. ನಿನಗೇನು ಕಮ್ಮಿ ? ನಿನ್ನ ತಾಯಿತಂದೆ ನಿನಗೇನೂ ಕಮ್ಮಿಮಾಡಿಲ್ಲ. ನಿನ್ನ ಗಂಡನೂ ಕೈ ತುಂಬ ಸಂಪಾದಿಸುತ್ತಾನೆ. ನಿನಗೆ ಅವರಿಂದ ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲದಿದ್ದರೆ, ನಾನು ನಿನ್ನ ತಾಯಿಗೆ ಬರೆದು ತರಿಸಿಕೊಡುತ್ತೇನೆ."

ಮೀನಾಕ್ಷಿ ಅವಳ ಧೋರಣೆಯನ್ನು ತಿಳಿದವಳಂತೆ ಮಾತನಾಡಿದಳು.

"ಬೇಡ, ಮೀನಾಕ್ಷಿ. ನಿನಗೆ ಗೊತ್ತಿಲ್ಲ. ಅವರಿಗೆ ತಿಳಿದರೆ ನನ್ನನ್ನು ಸಾಯಿಸಿಬಿಡುತ್ತಾರೆ."

"ಅವರಿಗೆ ಎಷ್ಟು ಅಂತ ಹೆದರುವುದು ಅಕ್ಕಾ. ನಿನ್ನ ಮಕ್ಕಳಿಗಾಗಿ ನಿನ್ನ ದೇಹಕ್ಕೆ ಸರಿಯಾಗಿ ಆರೈಕೆ ಮಾಡಿಕೊಂಡು ವಾಸಿಮಾಡಿಕೊಳ್ಳಬೇಕೋ ಬೇಡವೋ. ನಿನ್ನನ್ನೇ ನಂಬಿಕೊಂಡಿವೆ ಆ ಮಕ್ಕಳು. ನಾಳೆ ಅವರಿಗೆ ದಿಕ್ಕಾರು ?"

ಮತ್ತೆ ಮೀನಾಕ್ಷಿ ಅವಳ ಅಂತರ್ಯದ ಮೇಲೆ ಆಟವಾಡಿದಳು.

ಔಷಧಿ ಕುಡಿಸಲು ಬಂದ ನರ್ಸು, "ಅವರನ್ನು ಮಾತನಾಡಿಸಬೇಡೀಮ್ಮ. ಡಾಕ್ಟರಿಗೆ ತಿಳಿದರೆ ನನ್ನ ತಲೆ ಒಡೆಯುತ್ತಾರೆ" ಎಂದು ಗದರಿಸಿಕೊಂಡಳು. ಮೀನಾಕ್ಷಿ ಎದ್ದು ನಿಂತಳು. ಅಕ್ಕರೆಯಿಂದ ಅಕ್ಕನಿಗೆ ಧೈರ್ಯ ಹೇಳಿದಳು.

"ನಾನು ಬರ್ತೀನೆ ಅಕ್ಕ. ಮನೆ ಮಕ್ಕಳ ವಿಚಾರ ಕೊಂಚವೂ ಯೋಚಿಸಬೇಡ. ಸಧ್ಯ ನಿನ್ನ ಮೈ ಹುಷಾರು ಮಾಡಿಕೊಂಡು ಕೆಲವು ದಿನ ಹಾಯಾಗಿ ಸುಧಾರಿಸಿಕೋ."

" ನಾಳೆ ಮಕ್ಕಳನ್ನು ಕರೆದುಕೊಂಡು ಬರುತ್ತೀಯಾ. ನೋಡ ಬೇಕು ಅನ್ನಿಸುತ್ತೆ."

" ಆಗಲಿ.... ನಾನಿನ್ನು ಬರ್ತೇನೆ "

ಮೀನಾಕ್ಷಿ ಹೊರಗೆ ಹೋದಳು. ಚಂದ್ರು ಅಲ್ಲೇ ನಿಂತಿದ್ದನು. ಮೀನಾಕ್ಷಿ, " ಬಹಳ ಚೆನ್ನಾಗಿದೆ ಚಂದ್ರು. ಅವಳು ಸತ್ತುಬದುಕಿದ್ದಾಳೆ. ಕೈಹಿಡಿದ ಹೆಂಡತಿ ನಿನ್ನ ಶತ್ರುವೇ? ನಿನ್ನ ಜೊತೆ ಆರು ವರ್ಷ ಗಳಿಂದ ಸಂಸಾರ ಮಾಡಲಿಲ್ಲವೆ? ಹೋಗಿ ಮಾತನಾಡಿಸಿಕೊಂಡು ಬಾ" ಎಂದು ಅಧಿಕಾರವಾಣಿಯಿಂದ ಹೇಳಿದಳು ಚಂದ್ರು ಒಳಗೆ ಹೋಗಿ ಕಾಮಾಕ್ಷಿಯ ಹತ್ತಿರ ಐದು ನಿಮಿಷ ಕುಳಿತುಕೊಂಡು, ದೇಹಸ್ಥಿತಿ ವಿಚಾರಿಸಿ, ಸಮಾಧಾನಹೇಳಿ, ಮಂಚಕ್ಕೆ ತೂಗುಹಾಕಿದ್ದ ಚಾರ್ಟನ್ನು ನೋಡಿಕೊಂಡು ನರ್ಸ್ ಹತ್ತಿರ ಮಾತನಾಡಿ ಬಂದನು. ನೋವಿನಿಂದ ನೊಂದ ಅವಳ ಹೃದಯಕ್ಕೆ ಚಂದ್ರುವಿನ ಅಕ್ಕರೆಯ ಮಾತುಗಳಿಂದ ಅಮೃತ ಸೇಚನ ಮಾಡಿದಂತಾಯಿತು. ಕುದಿಯುತ್ತಿದ್ದ ಪಾತ್ರೆಯಂತಿದ್ದ ಅವಳ ಹೃದಯಕ್ಕೆ ಚಂದ್ರುವಿನ ಇನಿಮಾತುಗಳು ಜಲಸೇಚನ ಮಾಡಿಸಿತು.

ರಾತ್ರಿ ಊಟಮಾಡುವಾಗ ಮೀನಾಕ್ಷಿ ಮಾತೆತ್ತಿದಳು.

" ಕಾಮಾಕ್ಷಿ ಎಷ್ಟು ಕಂಗೆಟ್ಟು ಹೋಗಿದ್ದಾಳೆ ನೋಡಿದೆಯಾ ?"

" ಅವಳು ಯಾವಾಗ ಚೆನ್ನಾಗಿದ್ದಳು. ಅವಳ ದೇಹಸ್ಥಿತಿಯೇ ಹಾಗೆ "

"ಚಂದ್ರು, . ನಿನಗಿಂತ ಮೊದಲಿನಿಂದ ನಾನು ಕಾಮಾಕ್ಷಿಯನ್ನು ನೋಡುತ್ತಿದ್ದೇನೆ. ನನಗೆ ಅವಳ ದೇಹಸ್ಥಿತಿ ಚೆನ್ನಾಗಿ ಗೊತ್ತು. ಅವಳಿಗೆ ಒಂದು ದಿನವಾದರೂ ಜ್ವರ, ತಲೆನೋವು ಬರುತ್ತಿರಲಿಲ್ಲ. ಅವೆಲ್ಲಾ ನನಗೆ ಮುತ್ತಿಕೊಂಡಿದ್ದವು ಅಷ್ಟೆ."

" ಅವಳ ಮುಖ, ಆ ಸಿಡುಬಿನ ಕಲೆಗಳು, ಅವಳಿಗೆಲ್ಲೋ ವಾಯು ಎಳೆದ್ದಿತೆಂದು ಕಾಣುತ್ತೆ."

"ನೀನು ಸುಮ್ಮನೆ ಹಾಸ್ಯಮಾಡಬೇಡ ಚಂದ್ರು. ಅವಳು ಹೇಗಿದ್ದರೇನು. ನಿನ್ನ ಸಂಸಾರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ

ಕೊಂಡು ಹೋಗುತ್ತಾಳೆ. ಚಿನ್ನದಂತಹ ಮಕ್ಕಳನ್ನು ಕೊಟ್ಟಿದ್ದಾಳೆ. ಸಾಲದೇ ?"

"ಹೌದು ಕೊಟ್ಟಿದ್ದಾಳೆ. ಎಲ್ಲ ನನ್ನ ಅಜ್ಞಾನದ ಫಲ! ಪಶುಪ್ರೇಮ! ಅದೊಂದೇ ಅವಳಿಂದ ನನಗೆ ಸಿಕ್ಕಿದ ಸುಖ. ಮೀನಾಕ್ಷಿ, ನಿನಗೆ ಗೊತ್ತಿಲ್ಲ. ನಾನೆಷ್ಟು ಸಂಕಟ ಅನುಭವಿಸುತ್ತಿದ್ದೇನೆಂದು."

ಚಂದ್ರು ದೈನ್ಯದಿಂದ ಅವಳ ಮುಖ ದಿಟ್ಟಿಸಿದನು.

ಮೀನಾಕ್ಷಿ ಅವನ ಮಾತುಕೇಳಿ ಅಸ್ಥಿರಳಾದಳು. ಇದೇನು ಕಠೋರ ಸತ್ಯವೇ? ಇರಬಹುದು. ಮೀನಾಕ್ಷಿ ತಕ್ಷಣ ಮಾತು ಹೊರಳಿಸಿದಳು.

"ಅವಳಿಗೆ ಆ ಜನರಲ್ ವಾರ್ಡಿನಲ್ಲಿ ಬಹಳ ಗಲಾಟೆ. ಹೇಗಾದರೂ ಅಲ್ಲಿ ಇರುತ್ತಾಳೋ. ಇನ್ನೂ ಹದಿನೈದು ದಿವಸಗಳು ಅಲ್ಲಿ ಹೇಗೆ ಕಾಲ ಕಳೆಯುತ್ತಾಳೆ?"

"ನಿನ್ನ ಕೈಲಿ ಹೇಳಿಕಳುಹಿಸಿದಳೇನೋ?"

"ಅವಳು ಹೇಳಿಕಳಿಸಬೇಕಾಗಿಲ್ಲ. ಕಣ್ಣಿದ್ದವರಿಗೆಲ್ಲ ಕಾಣುತ್ತೆ."

"ಹಾಗಾದರೆ, ನನಗೆ ಕಣ್ಣಿಲ್ಲ ಎನ್ನು."

"ಕಣ್ಣಿದ್ದೂ ಕುರುಡನಾಗಿದ್ದೀಯ"

"ಇಲ್ಲ ಮೀನಾಕ್ಷಿ, ನಾನು ಕುರುಡನಲ್ಲ. ಎದುರಿಗಿರುವ ಸೌಂದರ್ಯವನ್ನು ನೋಡಬಲ್ಲೆ!"

ಮೀನಾಕ್ಷಿಗೆ ತಕ್ಷಣ ಆ ಮಾತಿನ ಅರ್ಥವಾಯಿತು. ಅದು ತೀರ ಅನಿರೀಕ್ಷಿತವಾದ ಉತ್ತರವಾಗಿದ್ದಿತು. ನಾಚಿಕೆಯಿಂದ ಮುಖ ಕೆಂಪಾಯಿತು. ಮತ್ತೆ ಮೀನ ಸಾವರಿಸಿಕೊಂಡು

"ಚಂದ್ರೂ ಅವಳನ್ನು ಸ್ಪೆಷಲ್ ವಾರ್ಡಿನಲ್ಲಿಡು" ಎಂದಳು.

"ಅವಳಿಗೇಕೆ ಸ್ಪೆಷಲ್ ವಾರ್ಡು?"

"ಅವಳೇನು ಮೃಗವೇ ?"

"ಅದಾದರೂ ವಾಸಿ."

"ನೀನು ಹೀಗೆ ಮಾತಾಡಬಾರದು ಚಂದ್ರು. ನಾನು ಬಂದಿದ್ದು ತಪ್ಪಾಯಿತು. ನಾನು ನಾಳೆಯೇ ಊರಿಗೆ ಹೊರಡುತ್ತೇನೆ."

ಬಡಿಸುವುದು ಮುಗಿದಿತ್ತು. ಮೀನಾಕ್ಷಿ ಹೊರಗೆ ಹೋದಳು. ಕೈ ತೊಳೆದುಕೊಂಡು ಚಂದ್ರು ಹಜಾರಕ್ಕೆ ಬಂದನು. ಮೀನಾಕ್ಷಿ ಹಜಾರದಲ್ಲಿ ಚಾಪೆಯ ಮೇಲೆ ಸುಜಾತೆಯನ್ನು ತೊಡೆಯ ಮೇಲೆ ಮಲಗಿಸಿಕೊಂಡು ಕುಳಿತಿದ್ದಳು. ಚಂದ್ರುವನ್ನು ನೋಡಿದರೂ ನೋಡ ದವಳಂತೆ ಮುಖ ತಿರುಗಿಸಿಕೊಂಡು ಸುಮ್ಮನೆ ಕುಳಿತಳು. ಚಂದ್ರು ಅಲ್ಲಿಯೇ ಇದ್ದ ಆರಾಮ ಕುರ್ಚಿಯಮೇಲೆ ಕುಳಿತುಕೊಂಡು ಸಿಗರೇಟು ಹಚ್ಚಿದನು. ಐದು ನಿಮಿಷಗಳಾದರೂ ಮೀನಾಕ್ಷಿ ಮಾತನಾಡಲಿಲ್ಲ.

ಚಂದ್ರು ಒಂದಾದಮೇಲೊಂದು ಸಿಗರೇಟನ್ನು ಹಚ್ಚಿ ಸೇದಿ ಬಿಸಾಡುತ್ತಿದ್ದನು. ಹೊಗೆಯು ಸುರಳಿ ಸುರಳಿಯಾಗಿ ಗಾಳಿಯಲ್ಲಿ ತೇಲಿಕೊಂಡು ಹೋಗುತ್ತಿದ್ದಿತು. ಅದನ್ನೇ ದಿಟ್ಟಿಸಿ ನೋಡುತ್ತಿದ್ದವನು ತಕ್ಷಣ ಕೇಳಿದನು.

"ಮೀನಾ ಕೋಪ ಬಂದಿತೇ ?"

"ನನಗೇಕೆ ಕೋಪ ? ನಿನ್ನ ಸಂಸಾರದಲ್ಲಿ ನಾನೇಕೆ ಪ್ರವೇಶ ಮಾಡಲಿ ?"

"ನೀನು ಮಾಡಬೇಕೆಂದೇ ನನ್ನ ಇಚ್ಛೆ."

"ಈಗ ಹೇಳಿದ್ದಕ್ಕೆ ಸರಿಯಾಗಿ ಮಾಡಿದೆಯಲ್ಲಾ."

"ಇಲ್ಲ ಮೀನಾ. ನಿನ್ನ ಮಾತನ್ನು ತೆಗೆದುಹಾಕಲಾರೆ. ನಾಳೆ ನಾನೇ ಹೋಗಿ ಅವಳನ್ನು ಸ್ಪೆಷಲ್ ವಾರ್ಡಿನಲ್ಲಿಡಿಸುತ್ತೇನೆ, ಸರಿಯೋ."

ಮೀನಾಕ್ಷಿ ಕತ್ತೆತ್ತಿ ಚಂದ್ರುವನ್ನು ದಿಟ್ಟಿಸಿದಳು. ಮೀನಳ ದೃಷ್ಟಿ ಮಿಲನವಾದೊಡನೆ ಚಂದ್ರು ಮುಸಿ ನಕ್ಕನು. ಮೀನಾಕ್ಷಿಯ ಹೃದಯ ತುಂಬಿ ಬಂದಿತು. 'ಎಷ್ಟಾದರೂ ನೀನು ನನ್ನ ಚಂದ್ರು' ಎಂದು ಮನಸ್ಸಿನಲ್ಲಿ ಅಂದುಕೊಂಡು ಮಗುವನ್ನೆತ್ತಿಕೊಂಡು ಒಳಗೆ ಹೋದಳು.

ಮಾರನೆಯ ದಿನ ಮೀನಾಕ್ಷಿ ಮಕ್ಕಳನ್ನೆಲ್ಲ ಕರೆದುಕೊಂಡು ಕಾಮಾಕ್ಷಿಯನ್ನು ನೋಡಲು ಸ್ಪೆಷಲ್ ವಾರ್ಡಿಗೆ ಹೋದಳು. ಕಾಮಾಕ್ಷಿಗೆ ಮತ್ತೆ ಜ್ವರ ಏರತೊಡಗಿದ್ದಿತು. ಜ್ಞಾನವಿಲ್ಲದೆ ಬಿದ್ದು ಕೊಂಡಿದ್ದಳು. ತೀರ ನಿಶ್ಶಕ್ತಿಯಾಗಿದ್ದಿತು. ಮರುದಿನವೂ ಕಾಮಾಕ್ಷಿಗೆ ಜ್ವರ ಇಳಿದಿರಲಿಲ್ಲ. ಚಂದ್ರು ಮೀನಾಕ್ಷಿಯ ಬಲವಂತಕ್ಕೆ

ನಾಲ್ಕೈದು ಸಾರಿ ಹೋಗಿ ನೋಡಿಕೊಂಡು ಬರುತ್ತಿದ್ದನು. ಡಾಕ್ಟರು ಕೇಳಿದ ಇಂಜಕ್ಷನ್ ಟ್ಯೂಬುಗಳನ್ನು ತೆಗೆದುಕೊಂಡು ಹೋಗಿ ಕೊಟ್ಟು ಎಲ್ಲ ವಿಚಾರಿಸಿಕೊಂಡು, ಚೆನ್ನಾಗಿ ನೋಡಿಕೊಳ್ಳುವಂತೆ ದೈನ್ಯದಿಂದ ಬೇಡಿಕೊಂಡು ಬರುತ್ತಿದ್ದನು. ಮನೆಗೆ ಬಂದು ಮೀನಾಕ್ಷಿಗೆ ಎಲ್ಲಾ ವರದಿ ಒಪ್ಪಿಸುತ್ತಿದ್ದನು.

ಮೀನಾಕ್ಷಿ ಆ ದಿನ ಊಟಮಾಡಿ ಅರ್ಧ ಘಂಟೆ ಮಲಗಿದ್ದು ಚಂದ್ರುವಿನ ಕೊಠಡಿಯನ್ನು ಗುಡಿಸಿ, ಓರಣವಾಗಿಡಲು ಕಸಬರಿಕೆ ಯನ್ನು ತೆಗೆದುಕೊಂಡು ಹೋದಳು. ಚಂದ್ರುವಿನ ಕೊಠಡಿಯು ತುಂಬ ಧೂಳು, ತುಂಬಿದ್ದಿತು. ನೆಲದ ಮೇಲೆಲ್ಲ ಕಸ, ಕಾಗದ, ಸಿಗರೇಟಿನ ತುಂಡುಗಳು, ಉರಿದ ಬೆಂಕಿಕಡ್ಡಿಗಳು, ಸ್ಟ್ಯಾಂಡಿನ ಮೇಲೆ ಬಟ್ಟೆಗಳು ಅಸ್ತವ್ಯಸ್ತವಾಗಿದ್ದುವು. ಚಂದ್ರುವಿನ ಉಲ್ಲನ್ ಕೋಟೊಂದು ನೆಲದ ಮೇಲೆ ಧೂಳಿನಲ್ಲಿ ಬಿದ್ದು ಕೊಂಡಿದ್ದಿತು. ಮೇಜಿನ ಮೇಲಿದ್ದ ದೀಪದ ಕಂಬ ಇನ್ನೂ ಉರಿಯುತ್ತಿದ್ದಿತು. ಹಾಸಿಗೆಯೆಲ್ಲಾ ಅಸ್ತವ್ಯಸ್ತವಾಗಿ ದ್ದಿತು. ಹೊದ್ದಿಕೆ ನೆಲದಮೇಲೆ ಬಿದ್ದಿದ್ದಿತು. ಮೀನಾಕ್ಷಿ ದೀಪವಾರಿ ಸಿದಳು. ಕೋಟನ್ನು ಎತ್ತಿಕೊಂಡು ಧೂಳನ್ನು ಕೊಡವಿ ಅದನ್ನು ತಿರುಗಿಸಿ ತಿರುಗಿಸಿ ನೋಡಿದಳು. ಆ ಬಟ್ಟೆಯಿಂದ ಸೆಂಟಿನ ವಾಸನೆ ಬರುತ್ತಿದ್ದಿತು. ಮೀನಾಕ್ಷಿ ಆ ಕೋಟನ್ನು ಎದೆಗಪ್ಪಿಕೊಂಡು ಮೂಸಿ ನೋಡಿ ಆನಂದ ಪಟ್ಟಳು. ಆ ಕೋಟಿನ ಸ್ಪರ್ಶದಿಂದ ಅವಳ ಮೈ ನವಿರೆದ್ದಿತು. ಮೀನಾಕ್ಷಿ ಕೋಟನ್ನು ಗೂಟಕ್ಕೆ ಹಾಕಿ ಚಂದ್ರುವಿನ ಕಾರ್‌ಡ್ರಾಯಿ ಪ್ಯಾಂಟು, ಫ್ಲಾನಲ್ಲು ಪ್ಯಾಂಟು, ಉಲ್ಲನ್ ಮಫ್ಲರುಗಳನ್ನು ಕೊಡವಿ ಸ್ಟ್ಯಾಂಡಿನ ಮೇಲೆ ಅನುವಾಗಿಟ್ಟಳು. ಆ ಬಟ್ಟೆಗಳೊಂದೊಂದರ ಸ್ಪರ್ಶದಿಂದಲೂ ಅವಳಿಗೆ ಒಂದು ಬಗೆಯ ಅವ್ಯಕ್ತ ಆನಂದದ ಅನು ಭವವಾಯಿತು. ಅವುಗಳನ್ನು ಅಪ್ಪಿಕೊಂಡು ಅವುಗಳಲ್ಲಿ ಮುಖ ಹುದುಗಿಸಿ ಮೀನಾಕ್ಷಿ ನಿಟ್ಟುಸಿರು ಬಿಟ್ಟಳು. ಮೀನಾಕ್ಷಿ ಚಂದ್ರುವಿನ ಹಾಸಿಗೆಯನ್ನು ಕೊಡವಿ, ಮಗ್ಗುಲು ಹಾಸಿಗೆಗಳನ್ನು ಹಾಸಿ, ದಿಂಬು ಗಳನ್ನು ಅನುವಾಗಿ ಜೋಡಿಸಿಟ್ಟಳು. ನೆಲದ ಮೇಲೆ ಬಿದ್ದಿದ್ದ ರಗ್ಗಿಗೆ ಇನ್ನೊಂದು ಬೆಡ್‌ಷೀಟನ್ನು ಜೋಡಿಸಿ ಅದನ್ನು ಹಾಸಿಗೆಯ ಮೇಲೆ

ಕಾಲ ಬಳಿ ಅಂದವಾಗಿ ಮಡಿಸಿಟ್ಟಳು. ಅದು ಚಂದ್ರು ಮಲಗುವ ಹಾಸಿಗೆ....ಆ ಹಾಸಿಗೆ ಅವಳನ್ನು ಸೋಡಿ ಹಾಕಿ ಎಳೆಯಿತು. ಮೀನಾ ಆ ಹಾಸಿಗೆಯ ಮೇಲೆ ಉರುಳಿಕೊಂಡಳು. ದಿಂಬಿನ ಸುಖ ಸ್ಪರ್ಶದಿಂದ ಉಲ್ಲಸಿತಳಾಗಿ ಕಣ್ಣು ಮುಚ್ಚಿದಳು. ಎಲ್ಲಿಯೋ ಹಳಸಿದ ಮಲ್ಲಿಗೆಯ ಹೂವಿನ ವಾಸನೆ ಬಂದಂತಾಯಿತು! ಮೀನಾ ಕಣ್ಣು ಬಿಟ್ಟು ಸುತ್ತಲೂ ನೋಡಿದಳು. ತನ್ನ ಮುಡಿ ಮುಟ್ಟಿ ನೋಡಿಕೊಂಡಳು. ಅವಳು ಹೂವು ಮುಡಿದಿರಲಿಲ್ಲ. ಮೀನಾಕ್ಷಿಗೆ ತಕ್ಷಣ ಹೊಳೆಯಿತು. ಕಾಮಾಕ್ಷಿ! ....ಆ ಹಾಸಿಗೆಯ ಮೇಲೆ ಕಾಮಾಕ್ಷಿ ಮಲಗಿದ್ದಳು....ಛೀ! ಎಂತಹ ಅನ್ಯಾಯ! ಕಾಮಾಕ್ಷಿ ಚಂದ್ರುವಿನ ಅರ್ಧಾಂಗಿ. ಮೀನಾಕ್ಷಿಗೆ ಆ ಯೋಚನೆಯಿಂದ ಅತಿಯಾದ ವೇದನೆಯಾಯಿತು. ಸರ್ರನೆ ಎದ್ದು ನಿಂತಳು. ಎದುರಿನ ಗೋಡೆಯನ್ನು ದಿಟ್ಟಿಸಿ ನೋಡಿ ದಂಗುಬಡೆದವ ಳಂತೆ ನಿಂತುಬಿಟ್ಟಳು! ಎದುರಿಗೆ ತನ್ನ ಸುಂದರ ಭಾವ ಚಿತ್ರ! ಆ ಪಟದ ಮೇಲೊಂದು ಬಾಡದ ಗುಲಾಬಿಯ ಹೂವು ನಗುತ್ತ ಕುಳಿತಿತ್ತು. ಮೀನಾಕ್ಷಿಗೆ ಎದೆಯುಬ್ಬಿ ಬಂದಿತು. ಆನಂದದಿಂದ ಅಭಿಮಾನದಿಂದ ಕಣ್ಣೀರು ಮೂಡಿತು ಮೀನಾಕ್ಷಿ ಮೇಜಿನ ಮೇಲಿದ್ದ ಚಂದ್ರುವಿನ ಭಾವಚಿತ್ರದೆಡೆಗೆ ಧಾವಿಸಿದಳು. ಅದರ ಮೇಲಿನ ಧೂಳನ್ನು ಒರೆಸಿ ಆ ಸುಂದರ ಮುಖವನ್ನು ಚುಂಬಿಸಿಬಿಟ್ಟಳು! ಮೀನಾಕ್ಷಿಗೆ ತಕ್ಷಣ ತಾನು ಏನು ಮಾಡಿದೆನೆಂಬ ಅರಿವಾಯಿತು ಅವಳ ಉನ್ಮತ್ತತೆಗಾಗಿ ಅವಳಿಗೇ ನಾಚಿಕೆಯಾಯಿತು.

'ನಾನೆಂತಹ ಭಾಗ್ಯಶಾಲಿ. ಚಂದ್ರು ನನ್ನ ಭಾವಚಿತ್ರಕ್ಕೆ ಹೂವಿಡ ಬೇಕಾದರೆ ಅವನ ಪ್ರೇಮವೆಷ್ಟು ಪರಿಶುದ್ಧ, ಎಷ್ಟು ಪವಿತ್ರ!' ಎಂದು ಮೀನಾಕ್ಷಿ ಮತ್ತೆ ಮತ್ತೆ ತನ್ನ ಭಾವಚಿತ್ರವನ್ನು ಕಣ್ಣು ತುಂಬ ನೋಡಿ ದಳು. ಅವಳಿಗೆ ಆ ಗುಲಾಬಿಯ ಹೂವು ಅವನ ತುಟಿಗಳನ್ನು ಸ್ಪರ್ಶ ಮಾಡಿರಬೇಕೆನ್ನಿಸಿತು. ಸರ್ರನೇ ಆ ಸುಂದರ ಗುಲಾಬಿಯ ಹೂವನ್ನು ತೆಗೆದುಕೊಂಡು ಆಘ್ರಾಣಿಸಿದಳು. ಆ ಹೂವನ್ನು ಚುಂಬಿಸಿ ತನ್ನ ಮುಡಿಗೇರಿಸಿದಳು.

ಮೀನಾಕ್ಷಿ ಮೇಜಿನ ಮೇಲಿದ್ದ ಯಾರಯಾರದೋ ಭಾವಚಿತ್ರ

ಗಳನ್ನೂ, ಕಾಗದ ಪತ್ರಗಳನ್ನೂ, ಹೊಸದಾಗಿ ತರಿಸಿಟ್ಟಿದ್ದ ಕೆಲವು ಗೆವರ್ಟ್ ಫಿಲಂ ಪೆಟ್ಟಿಗೆಗಳನ್ನೂ ಅಂದವಾಗಿ ಜೋಡಿಸಿಟ್ಟು, ಕಸಗುಡಿಸಿದಳು. ಮೀನಾ ತನ್ನ ಕೈಯಿಂದ ಶೋಭೆಗೊಂಡ ಆ ಕೊಠಡಿಯ ಸುತ್ತ ಕಣ್ಣರಳಿಸಿ ನೋಡಿದಳು. ಕೊಠಡಿಗೊಂದು ಜೀವಕಳೆ ಬಂದಂತೆ ತೋರಿತು. ಅವಳ ಕಣ್ಣು, ಬರಿದಾದ ಬಾಗಿಲನ್ನು ನೋಡಿ ಏನನ್ನೋ ನಿರ್ಧರಿಸಿಕೊಂಡಿತು. ಮೀನಾಕ್ಷಿ ಮೇಜಿನ ಮೇಲಿದ್ದ ಗಾಜಿನ ಹೂವಿನ ಪಾತ್ರೆಯನ್ನು ತೆಗೆದುಕೊಂಡುಹೋಗಿ ಸ್ವಚ್ಛವಾಗಿ ತೊಳೆದಳು. ಮನೆಯ ಮುಂದಲ ತೋಟಕ್ಕೆ ಹೋಗಿ ಅಲ್ಲಿದ್ದ ಬೋಗನ್‌ವಿಲ್ಲಾ ಗಿಡದ ಕೆಂಪು ಹೂವುಗಳನ್ನೂ, ನಂದಬಟ್ಟಲ ಹೂವಿನ ಗುತ್ತಿಗಳನ್ನೂ, ಅರಳಿದ್ದ ಹಳದಿಯ ರೋಜಾ ಹೂವನ್ನೂ ಅದರಲ್ಲಿ ಅಂದವಾಗಿ ಜೋಡಿಸಿ ತಂದು ಮೇಜಿನ ಮೇಲಿಟ್ಟಳು ಮತ್ತೊಂದು ಸಾರಿ ಕೊಠಡಿಯ ಸುತ್ತ ಕಣ್ಣುಹರಿಸಿ ತೃಪ್ತಿಯ ನಿಟ್ಟುಸಿರುಬಿಟ್ಟು ಮೀನಾಕ್ಷಿ ಹೊರಗೆ ಬಂದು ಬಾಗಿಲು ಎಳೆದುಕೊಂಡಳು. ಅಷ್ಟು ಹೊತ್ತಿಗೆ ವನಿತಾ, "ಚಿಕ್ಕಮ್ಮ, ಚಿಕ್ಕಮ್ಮ ಹಸಿವು............ ತಿಂಡಿಕೊಡು" ಎಂದು ಕೂಗುತ್ತಾ ಹಾಲಿನೊಳಗೆ ಓಡಿದಳು. ಮೀನಾಕ್ಷಿಗೆ ಘಂಟೆ ನಾಲ್ಕೂವರೆಯಾಗಿ ಹೋಯಿತೆಂದು ತಿಳಿದಿದ್ದು ಆಗಲೇ.

ಮಕ್ಕಳಿಗೆಲ್ಲ ಕಾಫಿ ತಿಂಡಿ ಮಾಡಿಕೊಟ್ಟು ಚಂದ್ರುವಿಗಾಗಿ ಕಾಯುತ್ತ ಕುಳಿತಳು, ಮೀನಾಕ್ಷಿ. ಆರು ಘಂಟೆಯಾದರೂ ಚಂದ್ರು ಬರಲಿಲ್ಲ. ಆಸ್ಪತ್ರೆಗೆ ಹೋಗಲು ಹೊತ್ತಾಯಿತೆಂದು ಮೀನಾಕ್ಷಿ ಮುಖ ತೊಳೆದುಕೊಂಡು ಬರುವ ಹೊತ್ತಿಗೆ ಚಂದ್ರು ಬಂದನು. ಮೀನಾಕ್ಷಿಗೆ ಅವನನ್ನು ನೋಡಿ ಮೈ ಝುಮ್ಮೆಂದಿತು. ತನ್ನ ಕೊಠಡಿಯನ್ನು ನೋಡಿ ಏನನ್ನುವನೋ ? ಅವನಿಗೆ ಎಷ್ಟು ಸಂತೋಷವಾಗಬಹುದು. ಹಾಲಿನಲ್ಲಿ ಕಿಟಕಿಯ ಹತ್ತಿರ ತೂಗುಹಾಕಿದ್ದ ಕನ್ನಡಿಯ ಬಳಿ ಹೋಗಿ ನಿಂತು ಮೀನಾ ಮುಖ ಒರಸಿಕೊಂಡು ಕನ್ನಡಿಯಲ್ಲಿ ನೋಡಿಕೊಂಡಳು. ಮುಂಗುರುಳು ಹಣೆಯಮೇಲೆ ಬಿದ್ದು ಅವಳ ಸೌಂದರ್ಯಕ್ಕೆ ಒಪ್ಪ ಕೊಟ್ಟಿತು. ಮೀನಾಕ್ಷಿ ತನ್ನ ಸುಂದರ ಮುಖವನ್ನು ನೋಡುತ್ತ ಮೈಮರೆತಳು. ಎರಡು ನಿಮಿಷಗಳಲ್ಲೇ ಚಂದ್ರು "ಮೀನಾಕ್ಷಿ........

ಮೀನಾ" ಎಂದು ಕೂಗಿಕೊಂಡು ಒಳಗೆ ಬಂದನು. ಮೀನಾಕ್ಷಿ ಸರ್‍ರನೆ ಹಿಂತಿರುಗಿದಳು. ಅವಳ ಎದೆ ಹಾರಿತು. ತಿರುಗಿದ ರಭಸಕ್ಕೆ ಮುಡಿಯಲ್ಲಿದ್ದ ಗುಲಾಬಿಯ ಹೂವು ಕೆಳಕ್ಕೆ ಬಿದ್ದಿತು. ಚಂದ್ರು ಮುಸಿನಕ್ಕು

"ಓಹೋ ನನ್ನ ಕೊಠಡಿಗೆ ಕಳ್ಳ ಬಂದಿದ್ದನೆಂದುಕೊಂಡೆ. ಈಗ ತಿಳಿಯಿತು ಮೀನಾ. ಕಳ್ಳನಲ್ಲ ಬಂದಿದ್ದು, ಕಳ್ಳಿ ಬಂದಿದ್ದಳೆಂದು" ಎಂದ.

"ಕಳ್ಳತನವಲ್ಲ ಚಂದ್ರು. ಹೂವು ಯಾರಿಗೆ ಸೇರಬೇಕಾಗಿದ್ದಿತೋ ಅವರೇ ಅದನ್ನು ತೆಗೆದುಕೊಂಡರು."

"ಹೌದು ಮೀನಾ. ಅದು ಕಳ್ಳತನ. ಆದರೆ ಇಂದಿನ ಕಳ್ಳತನವಲ್ಲ. ಎಷ್ಟೋ ವರ್ಷಗಳ ಹಿಂದೆ ಆದ ಕಳ್ಳತನ. ಇಂದಿಗೂ...."

ಚಂದ್ರು ತಡೆದನು. ಮೀನಾಕ್ಷಿ ತುಂಬುಗಣ್ಣುಗಳಿಂದ ಅವನನ್ನೇ ದಿಟ್ಟಿಸುತ್ತ ಕೆಳಗೆ ಬಿದ್ದಿದ್ದ ಗುಲಾಬಿಯ ಹೂವನ್ನು ಎತ್ತಿಕೊಂಡಳು.

ಚಂದ್ರು ಹೆಮ್ಮೆಯಿಂದ

"ಮೀನಾಕ್ಷಿ, ನನ್ನ ಕೊಠಡಿಯನ್ನು ಶುದ್ಧಮಾಡಲು ಅಷ್ಟೇಕೆ ಕಷ್ಟ ತೆಗೆದುಕೊಂಡೆ" ಎಂದು ಕೇಳಿದನು.

"ಏಕೆ ಚಂದ್ರು ಅದೊಂದು ಕಷ್ಟವೇ. ಏನೋ ಪುರಸತ್ತು ಸಿಕ್ಕಿತು. ಒಂದಿಷ್ಟು ಕಸಗುಡಿಸಿದೆ.... ನಿನ್ನ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲವೇ?"

"ಹೂ.... ಒಪ್ಪಿಗೆ. ಒಬ್ಬ ಹೆಂಗಸು ಇಷ್ಟರಮಟ್ಟಿಗೆ ಒಂದು ಕೊಠಡಿಯನ್ನು ಶುದ್ಧವಾಗಿ ಇಡಬಲ್ಲಳೇ ಎಂದು ಆಶ್ಚರ್ಯವಾಗಿದೆ. ಸತ್ಯವಾಗಿ ಹೇಳುವುದಾದರೆ ನನ್ನ ಕೊಠಡಿಗೊಂದು ಹೊಸಕಳೆ ಬಂದಿದೆ ಮೀನಾ. ನನಗೆ ಸಂತೋಷವಾಗಿದೆ."

ಅಷ್ಟು ನಿಷ್ಕಪಟವಾದ ಹೊಗಳಿಕೆಯನ್ನು ಕೇಳಿ ಮೀನಾ ಅವಕ್ಕಾದಳು. ಅವಳಿಗೆ ಒಂದು ಬಗೆಯ ನಾಚಿಕೆಯಾಯಿತು. ಆ ಹೊಗಳಿಕೆಯನ್ನು ಹೇಗೆ ಸ್ವಾಗತಿಸಬೇಕೋ ಅವಳಿಗೆ ತಿಳಿಯಲಿಲ್ಲ. ಆ ಕಷ್ಟದಿಂದ ಪಾರಾಗಲು ತಕ್ಷಣ ಕೇಳಿದಳು.

"ಚಂದ್ರೂ ಆಸ್ಪತ್ರೆಗೆ ಹೋಗಬೇಕಲ್ಲವೆ ? ಮುಖ ತೊಳೆದು ಕೊಂಡುಬಿಡು. ಕಾಫಿತರುತ್ತೇನೆ."

ಮೀನಾಕ್ಷಿ ಚಂದ್ರುವಿನ ಕೊಠಡಿಗೆ ಹೋಗಿ ಅರೆಕ್ಷಣದಲ್ಲಿ ಒಂದು ಟವಲನ್ನು ತಂದುಕೊಟ್ಟಳು. ಕೊಡುವಾಗ ಚಂದ್ರುವಿನ ಕೈ ಸ್ಪರ್ಶವಾಯಿತು. ಮೀನಳ ಮೈ ಕಂಪಿಸಿತು. ಆ ಕಂಪನೆಯ ಗುಂಗಿನಲ್ಲೇ ಅವಳು ಅಡುಗೆಯ ಮನೆಗೆ ಹೋದಳು.

ಚಂದ್ರು ಮೇಜಿನ ಮುಂದೆ ಕುಳಿತಿದ್ದನು. ಮೀನಾಕ್ಷಿ ಬೆಳ್ಳಿಯ ತಟ್ಟೆಯಲ್ಲಿ ಕಾಫಿ ಉಪ್ಪಿಟ್ಟುಗಳನ್ನು ಇಟ್ಟುಕೊಂಡು ಹೋಗಿ ಮೇಜಿನ ಮೇಲಿಟ್ಟಳು. ಚಂದ್ರು ಟೇಬಲ್ಲಿನ ಮೇಲಿಟ್ಟಿದ್ದ ಹೂವಿನ ಪೊಟ್ಟಣವನ್ನು ತೆಗೆದು ಅವಳ ಕೈಗೆ ಕೊಟ್ಟನು. ಮೀನಾಕ್ಷಿ ಅದನ್ನು ತೆಗೆದು ಕೊಂಡು "ಇದೇನು, ದಿನವೂ ಈ ಹೂವಿಗೆ ಏಕೆ ಖರ್ಚುಮಾಡುತ್ತೀ ?" ಎಂದಳು.

"ನಿನಗೋಸ್ಕರ ನಾನು ಅಷ್ಟು ಖರ್ಚನ್ನೂ ಮಾಡಬಾರದೆ ಮೀನಾಕ್ಷಿ ?"

"ಹಾಗಲ್ಲ.... ಆದರೆ ನಾನು ಈ ಹೂವನ್ನು ಆಸ್ಪತ್ರೆಗೆ ಮುಡಿದು ಕೊಂಡು ಹೋದರೆ ಚೆನ್ನಾಗಿರುತ್ತದೆಯೇ ?"

"ಏನಾಗಿರುತ್ತೆ.... ನಿನ್ನ ಸೌಂದರ್ಯ ನನ್ನ ಹೂವಿನಿಂದ ಹಾಳಾಗಿ ಹೋಗುತ್ತದೆಯೇ ಮೀನಾಕ್ಷಿ?"

"ಸರಿ, ನಿನಗೆ ಅರ್ಥವೇ ಆಗುವುದಿಲ್ಲ ಚಂದ್ರೂ.... ನೀನಿನ್ನೂ ಶುದ್ಧ ಎಳೆಯ ಮಗು."

ಮೀನಾ ನಕ್ಕು ಹೊರಗೆ ಹೊರಟಳು. ಹೋಗುವಾಗೊಮ್ಮೆ ತನ್ನ ಭಾವಚಿತ್ರದ ಕಡೆ ವಾರೆಗಣ್ಣೋಟ ಹರಿಸಿ ಸ್ಥಬ್ದಳಾಗಿ ನಿಂತು ಬಿಟ್ಟಳು ! ಮೇಜಿನ ಮೇಲಿದ್ದ ಹೂವಿನ ಕುಂಡದ ಕಡೆ ದೃಷ್ಟಿ ಹರಿಸಿದಳು. ಅದರಲ್ಲಿ ಅಂದವಾಗಿ ಜೋಡಿಸಿಟ್ಟಿದ್ದ ರೋಜಾ ಹೂವು, ನಂದಬಟ್ಟಲಹೂವುಗಳು ಮತ್ತೆ ಅವಳ ಭಾವಚಿತ್ರವನ್ನಲಂಕರಿಸಿ ಕುಳಿತಿತ್ತು ! ಮೀನಾ ಬಾಗಿಲಲ್ಲೇ ನಿಂತು ಕೇಳಿದಳು.

"ಆ ಹೂವುಗಳನ್ನು ಏಕೆ ತೆಗೆದು ಅಲ್ಲಿಟ್ಟೆ ? ಅನ್ಯಾಯವಾಯಿ

ತಲ್ಲಾ, ಎಷ್ಟು ಚೆನ್ನಾಗಿದ್ದಿತು ಚಂದ್ರು!"

"ಮೀನಾ ನಿನ್ನ ಕಣ್ಣಿಗೆ ಇದು ಚೆನ್ನ. ನನ್ನ ಕಣ್ಣಿಗೆ ಅದು ಚೆನ್ನ. ಹೂವು ಯಾವಾಗಲೂ ಹೂವಿನಂತಹ ಹೆಣ್ಣಿನೊಡನಿರಬೇಕು ಮೀನಾ. ನನಗೆ ಅದು ಚೆನ್ನಾಗಿ ತಿಳಿಯುತ್ತದೆ."

ಮೀನಾ ನಾಚಿಕೆಯಿಂದ ಚಂದ್ರುವನ್ನೊಮ್ಮೆ ತುಂಬುಗಣ್ಣುಗಳಿಂದ ನೋಡಿ ಒಳಗೆ ಹೊರಟು ಹೋದಳು.

ಕೊಂಚ ಹೊತ್ತಿನಲ್ಲೇ ಮೀನಾ ಸಾಧಾರಣವಾದ ನೂಲಿನ ಸೀರೆಯುನ್ನುಟ್ಟು ಹೆಚ್ಚು ಶೃಂಗಾರವಿಲ್ಲದೆ, ಮುಡಿಯಲ್ಲಿ ಚಂದ್ರುವಿನ ಆ ಗುಲಾಬಿ ಹೂವನ್ನು ಮುಡಿದು ಹೊರಗೆ ಬಂದಳು. ಚಂದ್ರು ಮೀನಾಕ್ಷಿಯರು ಹೊರಗೆ ಹೊರಟರು. ಕೊಂಚ ದೂರ ಹೋಗಿ ಚಂದ್ರು ಪಕ್ಕದಲ್ಲೇ ಹಾದು ಹೋದ ಜಟಕಾ ಗಾಡಿಯನ್ನು ಗೊತ್ತುಮಾಡಿದ. ಮೀನಾಕ್ಷಿ ಗಾಡಿ ಹತ್ತಿದ ಕೂಡಲೇ ಹೇಳಿದಳು,

"ಚಂದ್ರು, ಕೊಂಚ ಮಾರ್ಕೆಟ್ಟಿಗೆ ಹೋಗಬೇಕು. ಬಟ್ಟೆಯ ಅಂಗಡಿಗೆ ಬಿಡುವಂತೆ ಹೇಳು. ಬೆಳಕಿರುವಾಗಲೇ ಒಂದೈದು ನಿಮಿಷ ಹೋಗಿದ್ದು ಆಸ್ಪತ್ರೆಗೆ ಹೊರಟುಹೋಗೋಣ."

ಚಂದ್ರು ಗಾಡಿ ಸಾಬಿಗೆ ಹಾಗೆಯೇ ಆಜ್ಞೆ ಮಾಡಿದನು. ಗಾಡಿ ವೇಗವಾಗಿ ಮಾರ್ಕೆಟ್ಟಿನ ಕಡೆ ಧಾವಿಸಿತು.

ಆದಿನ ಮನೆಗೆ ಬರುವಾಗ ಮೀನಾಕ್ಷಿ ಕಿಟಕಿ ಬಾಗಿಲುಗಳಿಗೆ ತೆರೆಹಾಕಲು ನೀಲಿಯ ಹೂವಿನ ಸುಂದರವಾದ ಜೇನುಗೂಡಿನ ನಮೂನೆಯ ಬಟ್ಟೆಯನ್ನು ತಂದಳು. ಅದನ್ನು ಆ ರಾತ್ರಿಯೇ ಚಂದ್ರುವಿನ ಕೊಠಡಿಯ ಕಿಟಕಿ, ಬಾಗಿಲುಗಳಿಗೆ ಹಾಕಿ, ನೋಡಿ, ಆನಂದಿಸಿದಳು ಚಂದ್ರುವಿನ ಮೆಚ್ಚುಗೆಯಿಂದ ಉಲ್ಲಸಿತಳಾದಳು.

ಎಂದಿನಂತೆ ಆ ದಿನವೂ ರಾತ್ರಿಯಾಗುತ್ತಲೇ ಚಂದ್ರುವಿನ ಪ್ರಪಂಚ ಶುರುವಾಯ್ತು. ಮೀನಾಕ್ಷಿ ಹಾಲಿನಲ್ಲಿ ಸುಜಾತೆಯ ಪಕ್ಕದಲ್ಲಿ ಮಲಗಿಕೊಂಡಿದ್ದಳು. ಅವಳಿಗೆ ನಿದ್ದೆ ಬರಲಿಲ್ಲ. ಚಂದ್ರುವಿನದೇ ಯೋಚನೆಯಾಗಿತ್ತು. ಹನ್ನೊಂದು ಘಂಟೆ ಹೊಡೆಯಿತು. ಮೀನಾಕ್ಷಿ ಎದ್ದು ಚಂದ್ರುವಿನ ಕೊಠಡಿಗೆ ಹೊರಟಳು. ಬಾಗಿಲು ತೆಗೆದಿರಲಿಲ್ಲ. ತಳ್ಳಿದ ತಕ್ಷಣ ತೆರೆದುಕೊಂಡಿತು. ಚಂದ್ರು ಆರಾಮಕುರ್ಚಿಯ ಮೇಲೆ ಕುಳಿತುಕೊಂಡಿದ್ದನು. ಪಕ್ಕದಲ್ಲಿ ಚಿಕ್ಕಸ್ಟೂಲಿನ ಮೇಲೆ ಬ್ರಾಂದಿಯ ಸೀಸೆ, ಗ್ಲಾಸಿನ ಕಪ್ಪುಗಳು, ಸೋಡಾ ಸೀಶೆಗಳು ! ಬಾಗಿಲು ಶಬ್ದವಾದೊಡನೆ ಸರಿಯಾಗಿ ಕುಳಿತುಕೊಂಡನು. ಮೀನಾಕ್ಷಿಯನ್ನು ನೋಡಿದ ತಕ್ಷಣ ಕೈಯ್ಯಲ್ಲಿದ್ದ ಗ್ಲಾಸನ್ನು ಪಕ್ಕದಲ್ಲಿಟ್ಟು ಬಾಟಲನ್ನು ಮುಚ್ಚಿಡುವ ಗೊಂದಲದಲ್ಲಿ ಗ್ಲಾಸನ್ನು ಕೆಳಗೆ ಕೆಡವಿದನು. ಮೀನಾಕ್ಷಿ ತಕ್ಷಣ ಹೋಗಿ ಅವನ ಕೈ ಹಿಡಿದುಕೊಂಡು ನಡಗುವ ಧ್ವನಿಯಲ್ಲಿ ಕೇಳಿದಳು.

" ಏಕೆ ಚಂದ್ರೂ, ನನ್ನನ್ನು ನೋಡಿದರೆ ಹೆದರಿಕೆಯೇನು ?"

" ಇಲ್ಲ ಇಲ್ಲ ಮೀನಾ. ಹೆದರಿಕೆಯಲ್ಲ, ಭಕ್ತಿ" ಎಂದು ಚಂದ್ರು ಮುಸಿನಕ್ಕನು. ಅವನ ಕಣ್ಣುಗಳು ಮಾದಕ ಪೂರ್ಣವಾಗಿ ಕೆಂಪಡರಿದ್ದುವು. ಮುಖ ದೀಪದ ಬೆಳಕಿಗೆ ಮಿಂಚುತ್ತಿದ್ದಿತು. ಮೀನಾಕ್ಷಿ ದೈನ್ಯದಿಂದ ಮೆಲು ಧ್ವನಿಯಲ್ಲಿ ಕೇಳಿದಳು.

" ನೀನು ನನ್ನನ್ನು ಪ್ರೀತಿಸುವೆ ಅಲ್ಲವೆ !"

" ಹೌದು ಮೀನಾ. ಅದು ನನ್ನ ಹೃದಯಕ್ಕೆ ಗೊತ್ತು. ಎಂಟು ವರ್ಷದಿಂದ ನಿನಗಾಗಿ ಎಷ್ಟು ಹಂಬಲಿಸಿದೆ ತಿಳಿದಿದೆಯೇ ಮೀನಾಕ್ಷಿ? ಆ ನಿನ್ನ ಚಿತ್ರವೇ ನನ್ನ ಪ್ರೇಮಕ್ಕೆ ಸಾಕ್ಷಿ. ಇದುವರೆವಿಗೆ ಈ ಎರಡು ವರ್ಷಗಳಿಂದ ಹುಣ್ಣಿಮೆಯ ರಾತ್ರಿ ನನಗೆ ನಿನ್ನ ದರ್ಶನವಾಗಿದೆ ಮೀನಾಕ್ಷಿ. ನಾನು ಹುಚ್ಚನಾಗಿದ್ದೇನೆ. ಆ ರಾತ್ರಿಗಳಲ್ಲಿ ನಾನು ನಿನ್ನೊಡನೆ ಮಾತನಾಡಿದ್ದೇನೆ ಮೀನಾ. ಹೋ ! ಅದು ಎಂತಹ

ಅನುಭವ. ನೀನು ಈ ದಿನ ಎದುರಿಗೆ ನಿಂತಿರುವಂತೆ ಆ ರಾತ್ರಿಗಳಲ್ಲೂ ನನ್ನ ಎದುರಿಗೆ ಬಂದು ನಿಲ್ಲುತ್ತಿದ್ದೆ. ನೋಡು ಮೇಲೆ ಕಾಣುವ ಆ ರಂಧ್ರ ದಿಂದ ಚಂದ್ರನ ಬೆಳಕು, ನಿನ್ನ ಮುಖದ ಮೇಲೆ ಬಿದ್ದು ನಿನ್ನ ಚಿತ್ರ ವನ್ನು ಬೆಳಗಿಸುತ್ತಿದ್ದಿತು ನಾನು ನಿನ್ನನ್ನೇ ಎವೆಹಾಕದೆ ನೋಡುತ್ತ ಧ್ಯಾನಿಸುತ್ತಿದ್ದೆ. ಆಗ ನೀನು ರೂಮಿನೊಳಕ್ಕೆ ಈ ನನ್ನ ಮಂಚದ ಬಳಿ ತೂರಿಬಂದು ನಿಲ್ಲುತ್ತಿದ್ದೆ. ನಾನು ಆಲಂಗಿಸಲು ಕೈ ನೀಡುತ್ತಿದ್ದೆ. ನೀನು ಹಿಂದೆ ಹಿಂದೆ ಹೋಗಿ ಆ ಗೋಡೆಗೆ ಆತು ನಿಂತುಕೊಳ್ಳುತ್ತಿದ್ದೆ. ನಿನ್ನ ಹೂವಿನ ವಾಸನೆ, ನಿನ್ನ ಹೊಸ ಸೀರೆಯ ವಾಸನೆ, ಏಕೆ ನಿನ್ನ ಉಸಿರಿನ ಏರಿಳಿತಗಳನ್ನೆಲ್ಲ ಅನುಭವಿಸುತ್ತಿದ್ದೆ. ಪ್ರೇಮದಿಂದ ನಿನ್ನನ್ನು ಆಲಂಗಿಸಿಕೊಳ್ಳುವಷ್ಟರಲ್ಲಿ ನೀನು ಮಾಯವಾಗಿ ಹೋಗುತ್ತಿದ್ದೆ. ನನ್ನ ಕೈ ರಪ್ಪನೆ ಗೋಡೆಗೆ ಹೊಡೆದು ನನಗೆ ವೈ ತಿಳಿಯುತ್ತಿದ್ದಿತು. ಆಗ ನಾನು ನೀನು ಕೈ ತಪ್ಪಿಹೋದೆಯೆಂದು ಕೆರಳಿ ಪಶುವಾಗುತ್ತಿದ್ದೆ. ಮೈಯ್ಯಲ್ಲಿನ ಬೆಂಕಿಯನ್ನು ತಡೆಯಲಾರದೆ ಹಾಲಿನಲ್ಲಿ ಮಲಗುತ್ತಿದ್ದ ಕಾಮಾಕ್ಷಿಯ ಬಳಿ ಹೋಗಿ ಅತ್ಯಾಚಾರ ನಡೆಸಿ ವಿಟಪುರುಷನಂತೆ ಮತ್ತೆ ಇಲ್ಲಿಗೆ ಕಳ್ಳತನದಿಂದ ಓಡಿಬರುತ್ತಿದ್ದೆ. ಮೀನಾ ಇದು ನನ್ನ ಬಾಳಿನ ನಿಜವಾದ ಚರಿತ್ರೆ. ನಾನು ನಿನ್ನನ್ನು ಮನಸಾರ ಬಯಸಿ, ಪ್ರೇಮಿಸಿ ದಾರಿಕಾಣದೆ ದಾರುಣವಾದ ಯಾತನೆಯನ್ನು ಅನುಭವಿಸು ತ್ತಿದ್ದೆನೆಂಬುದಕ್ಕೆ ನಿದರ್ಶನ."

"ಅಬ್ಬ! ನಾನೆಷ್ಟು ಭಾಗ್ಯಶಾಲಿ. ನನ್ನ ಬಾಳು ಪಾವನ ವಾಯಿತು ಚಂದ್ರು. ನಿನ್ನ ಪ್ರೇಮಕ್ಕೆ ನಾನು ಯೋಗ್ಯಳೇ ಅನ್ನಿಸುತ್ತದೆ. ನನಗೆ ಆನಂದದಿಂದ ಅಳುಬರುತ್ತಿದೆ. ಇಂತಹ ಅನುಭವ ಸಾಧ್ಯವೇ ಎನ್ನಿಸುತ್ತಿದೆ."

"ಸಾಧ್ಯ.... ಈ ಅನುಭವ ಸತ್ಯ. ಮೀನಾಕ್ಷಿ ನಾನು ನಿನ್ನನ್ನು ಪ್ರೇಮಿಸುವೆನೆಂಬುದು ನಾನು ಬದುಕಿರುವಷ್ಟೇ ಸತ್ಯ."

"ಚಂದ್ರು, ನನ್ನನ್ನು ನೀನಿಷ್ಟು ಪ್ರೇಮಿಸುವೆಯೆಂದಮೇಲೆ ನಾನು ಅತ್ಯಂತ ಸುಖಿ. ನನಗೆ ಮೋಸಮಾಡಬೇಡ ಚಂದ್ರು. ನೀನು ಬದುಕಿ ನನ್ನನ್ನೂ ಬದುಕಿಸು. ನಿನ್ನ ದೇಹ ಕೆಡಿಸಿಕೊಳ್ಳಬೇಡ. ನಿನ್ನ ಜೀವನ

ವನ್ನು ಹಾಳುಮಾಡಿಕೊಳ್ಳಬೇಡ. ಮದ್ಯವನ್ನು ಕುಡಿಯಬೇಡ ಚಂದ್ರೂ."

"ಮದ್ಯ!....ನೀನು ನನ್ನ ಕೈ ತಪ್ಪಿದಮೇಲೆ ಅದು ನನ್ನ ಕೈ ಹಿಡಿಯಿತು ಮೀನಾ."

ಮೀನಳ ಎದೆ ತುಡಿಯುತ್ತಿದ್ದಿತು. ಬಹಳ ದಿವಸಗಳಿಂದ ಕೇಳ ಬೇಕೆಂದು ಮನಸ್ಸಿನಲ್ಲಿಯೇ ಸೆರೆಹಾಕಿ ಕೊಳೆಸುತ್ತಿದ್ದ ಪ್ರಶ್ನೆಯನ್ನು ಅಂದು ಧೈರ್ಯಮಾಡಿ ಕೇಳಿಯೇಬಿಟ್ಟಳು.

"ಮತ್ತೆ....ಕಾಮಾಕ್ಷಿಯನ್ನು ಏಕೆ ಮದುವೆಮಾಡಿಕೊಂಡೆ ?"

"ದುಡ್ಡು!....ದುಡ್ಡಿಗಾಗಿ ಮೀನಾ. ವಿಕಾಸಹೊಂದದ ಮನಸ್ಸಿನ ಘನಘೋರವಾದ ತಪ್ಪು ಇದು"

ಎಂದು ಚಂದ್ರು ದೀನನಾಗಿ ಹೇಳಿ ನಕ್ಕನು.

ಅದು ಕಠೋರ ಸತ್ಯವಾಗಿದ್ದಿತು. ಮೀನಾ ಅವನನ್ನೇ ದಿಟ್ಟಿಸಿ ನೋಡುತ್ತ ನಿಂತುಬಿಟ್ಟಳು. ಚಂದ್ರುವೇ ಕೇಳಿದನು.

"ನನ್ನ ಸ್ಟುಡಿಯೋ ಹೆಸರು ಏನು ಗೊತ್ತೇ ?"

"ಉಹ್ಞು, ನನಗೆ ಹೇಗೆ ತಿಳಿಯಬೇಕು. ನನ್ನನ್ನು ಒಂದು ದಿನವಾದರೂ ಕರೆದುಕೊಂಡು ಹೋಗಿ ನಿನ್ನ ಸ್ಟುಡಿಯೋ ತೋರಿಸಿದೆಯಾ ?"

"ಅದು ನಿನ್ನದೇ ಮೀನಾ. ಅದಕ್ಕೆ ನಿನ್ನ ಹೆಸರೇ ಇಟ್ಟಿದ್ದೇನೆ, 'ಮೀನಾ ಫೋಟೋ ಸ್ಟುಡಿಯೋ' ಎಂದು."

ಮೀನಾಕ್ಷಿಗೆ ಹೃದಯ ತುಂಬಿ ಬಂದಿತು. 'ನಿಜ. ಚಂದ್ರು ನನ್ನನ್ನು ಮರೆತಿಲ್ಲ' ಎಂದುಕೊಂಡಳು. ಆದರೂ ಮುಸಿನಕ್ಕು ಕೇಳಿದಳು.

"ಸುಳ್ಳು, ನಾನು ಹೇಗೆ ನಂಬಲಿ ?"

"ನಾಳೆ ನನ್ನ ಜೊತೆ ಬಾ ಮೀನಾ. ನೀನೇ ಬಂದು ನೋಡು, ಆಗ ತಿಳಿಯುತ್ತದೆ."

"ನನ್ನ ಮೇಲೆ ನಿನಗೆ ಅಷ್ಟು ಪ್ರೀತಿ ಇದ್ದರೆ ಈ ಮದ್ಯವನ್ನು ಮುಟ್ಟಬೇಡ ಚಂದ್ರೂ."

" ನಾನು ಅದನ್ನು ಬಿಡಲಾರೆ ಮೀನಾ. ನಿನ್ನ ಬದಲು ಮದಿರಾ ದೇವಿಯೇ ಈಗ ನನ್ನ ಪ್ರೇಯಸಿ "

" ನಿನ್ನ ಮಕ್ಕಳ ಸುಖಕ್ಕಾಗಿಯಾದರೂ ಕುಡಿಯಬೇಡ ಚಂದ್ರೂ."

" ಅವರು ನಿನ್ನ ಮಕ್ಕಳಾಗಿದ್ದರೆ ನಾನು ಇದನ್ನು ಮುಟ್ಟುತ್ತಲೇ ಇರಲಿಲ್ಲ ಮೀನಾ !"

ಮಾತು ಮಾತಿಗೂ ಮೀನಾ ಸೋತುಹೋದಳು. ಅವಳಿಗೆ ದುಃಖ ತಡೆಯಲಾಗಲಿಲ್ಲ. ಮೀನಾಕ್ಷಿ ಹೊರಗೆ ಬಂದಳು. ಜಗದೀಶ್, ವನಿತಾ, ಸುಜಾತ ಹಾಯಾಗಿ ನಿದ್ದೆಮಾಡುತ್ತಿದ್ದರು. ಎಂತಹ ಮುದ್ದು ಮಕ್ಕಳು ! ಇವರೆಲ್ಲ ಅವಳ ಮಕ್ಕಳಾಗಿದ್ದರೆ — ಇವರಲ್ಲಿ ಒಬ್ಬರು ಅವಳ ಮಗುವಾಗಿದ್ದರೂ ಅವಳಿಗೆ ಎಂತಹ ಆನಂದವಾಗುತ್ತಿದ್ದಿತು – ಇವರೆಲ್ಲ ಕಾಮಾಕ್ಷಿಯಮಕ್ಕಳು – ಆ ಮುದ್ದು ಮಕ್ಕಳ ಮೇಲೂ ಅವಳಿಗೆ ಅರಘಳಿಗೆ ಕ್ರೋಧ ಮೂಡಿತು. ಸುಜಾತ ನಿದ್ದೆಯಲ್ಲಿ ಮುಸಿನಕ್ಕಳು. ವನಿತಾ " ಚಿಕ್ಕಮ್ಮಾ , ಚಿಕ್ಕಮ್ಮಾ........ನಾನೂ ಬರ್ತೀನಿ " ಎಂದು ಕನವರಿಸಿಕೊಂಡಳು. ಮೀನಾಕ್ಷಿಗೆ ಪ್ರೀತಿ ಉಕ್ಕಿ ಹರಿಯಿತು. ಪ್ರೇಮ ಲಹರಿಯಿಂದ ಮೈ ಕಂಪಿಸಿತು. ಕರುಳು ಮಿಡಿಯಿತು. ಇವರೆಲ್ಲ ನನ್ನ ಚಂದ್ರುವಿನ ಮಕ್ಕಳು ಎಂದುಕೊಂಡು ಎಲ್ಲರಿಗೂ ಮುತ್ತಿಟ್ಟು ದೀಪ ಆರಿಸಿ, ಸುಜಾತೆಯನ್ನು ಅಪ್ಪಿಕೊಂಡು ನಿದ್ರೆಹೋದಳು. ಅಂದು ರಾತ್ರಿ ಮೀನಳಿಗೆ ಬರಿಯ ಹೊಂಗನಸುಗಳು. ಆ ಕನಸುಗಳ ರಾಜ ಚಂದ್ರು, ರಾಣಿ ಮೀನಾ. ಆ ಹೊಂಗನಸುಗಳ ಹೊನಲಿನಲ್ಲಿ ಮಿಂದು, ಮೀನಾ ಚಂದ್ರುವಿನೊಡನೆ ಕಾವೇರಿಯ ತೀರದಲ್ಲಿ ವಿಹರಿಸಿದಳು. ಅವನೊಡನೆ ಕಬ್ಬಿನ ಗದ್ದೆಗಳಲ್ಲಿ, ಜೋಳದ ಹೊಲಗಳಲ್ಲಿ ಚೂಟಾಟ ಆಡಿದಳು. ಆ ಮರಳು ದ್ವೀಪದಲ್ಲಿ ಅರಳಂತೆ ಚೆಲ್ಲಿದ್ದ, ಮರಳಿನ ಮೇಲೆ ಚಂದ್ರುವಿನೊಡನೆ ಕುಳಿತು ಕಪ್ಪೆಯಗೂಡು ಕಟ್ಟಿದಳು. ಕಪ್ಪೆಯ ಚಿಪ್ಪುಗಳನ್ನು ಆರಿಸಿದಳು. ನೀರಿನಲ್ಲಿ ಮೀನುಗಳಿಗೆ ಕಡಲೆಯ ಕಾಳನ್ನು ತಿನ್ನಿಸಿದಳು. ಮೀನುಗಳು ನೀರಿನಿಂದ ಮೇಲಕ್ಕೆ ಚಿಮ್ಮಿದವು. ಅದರ ತಳಮೈ ಥಳಥಳಿಸಿತು. ಮೀನಾ

ನೀರಿಗೆ ಕೈ ಹಾಕಿದ್ದವಳು ದೊಡ್ಡ ಮೀನೊಂದು ಫಳ್ಳನೆ ಮೇಲಕ್ಕೆ ಚಿಮ್ಮಲು ಭಯದಿಂದ "ಅಯ್ಯೋ ಚಂದ್ರು ಮೊಸಳೆ........" ಎಂದು ಹಿಂದಕ್ಕೆ ಹಾರಿದಳು. ಚಂದ್ರು ಮೀನಾಕ್ಷಿಯನ್ನು ಅತುಕೊಂಡು ಮುತ್ತಿಟ್ಟನು. ಆದರೆ ಆ ಚಂದ್ರು ಹುಡುಗನಾಗಿರಲಿಲ್ಲ. ನವ ಯುವಕನಾಗಿದ್ದನು. ತಾನು ನವ ಯುವತಿಯಾಗಿದ್ದಳು. ಮೀನಾ ನಾಚಿಕೆಯಿಂದ "ಥೂ ಬಿಡು ಚಂದ್ರೂ.........." ಎಂದು ಸರ್ರನೆ ಕಣ್ಣು ಬಿಟ್ಟಳು. ಬೆಳ್ಳಗೆ ಬೆಳಗಾಗುತ್ತಿದ್ದಿತು. ಗಡಿಯಾರ ಆರು ಘಂಟೆ ಹೊಡೆಯಿತು. ಅದು ಕನಸೆಂದು ಮೀನಾಕ್ಷಿಗೆ ತಿಳಿದು ನಿರಾಶೆಯಾಯಿತು. ಆದರೆ ಆ ಕನಸಿನ ಸವಿ ನೆನಪು ಅವಳ ಮೈಯ್ಯಲ್ಲಿ ಆನಂದ ಲಹರಿಯನ್ನು ಹರಿಸಿತು. ಮೀನಾ ಮುಸಿನಕ್ಕು ಮತ್ತೆ ಆ ಕನಸು ಬರಲೆಂದು ದೇವರನ್ನು ಪ್ರಾರ್ಥಿಸಿ ಸುಜಾತೆಯನ್ನು ಎದೆಗಪ್ಪಿಕೊಂಡು ಮಲಗಿದಳು. ಕನಸಿನ ಬದಲು ಅದರ ನೆನಹಿನ ಗುಂಗು ಮಾತ್ರ ಮೀನಳ ತಲೆಯಲ್ಲಿ ಅಲೆದಾಡಿತು. ಮೀನಾ ಹತ್ತು ನಿಮಿಷ ಆ ನೆನಹಿನಲ್ಲಿ ನಲಿದಾಡಿ, ಹಾಸಿಗೆಯಲ್ಲಿ ಹೊರಳಾಡಿದಳು. ಮೀನಳಿಗೆ ತಕ್ಷಣ ಕಾಫಿಯ ನೆನಪಾಯಿತು. ಹೊಸ ಉತ್ಸಾಹದಿಂದ ಮೀನಾ ಎದ್ದು ಕುಳಿತು ಮೈಮುರಿದಳು.

ಎಂಟು ಘಂಟೆಗೆಲ್ಲಾ ಮೀನಾಕ್ಷಿ ಮಕ್ಕಳಿಗೆಲ್ಲ ಕಾಫಿ ತಿಂಡಿ ಮಾಡಿ ಕೊಟ್ಟು, ಸಿಂಗರಿಸಿಕೊಂಡು ಸಿದ್ಧವಾಗಿದ್ದಳು. ಟ್ಯಾಕ್ಸಿಯಲ್ಲಿ ಚಂದ್ರುವಿನೊಡನೆ ಮೀನಾಕ್ಷಿ ಚಂದ್ರುವಿನ ಸ್ಟುಡಿಯೋವಿಗೆ ಹೋದಳು. ಬಾಗಿಲ ಮೇಲೆಯೇ ತೂಗುಹಾಕಿದ್ದ "ಮೀನಾ ಫೋಟೋ ಸ್ಟುಡಿಯೋ" ಎಂಬ ದೊಡ್ಡ ಬೋರ್ಡನ್ನು ನೋಡಿ ಅವಳಿಗಾದ ಸಂತೋಷ ಅಷ್ಟಿಷ್ಟಲ್ಲ. ಚಂದ್ರು ಟ್ಯಾಕ್ಸಿಯಿಂದ ಕೆಳಗೆ ಇಳಿದು ಅವಳನ್ನೇ ತುಂಬುಗಣ್ಣುಗಳಿಂದ ನೋಡುತ್ತಾ "ನೋಡಿದೆಯಾ ಮೀನಾ. ಈಗಲಾದರೂ ನನ್ನ ಮಾತಿನಲ್ಲಿ ನಂಬಿಕೆ ಬಂತೇ" ಎಂದು ಕೇಳಿದನು. ಅವನ ಪ್ರಶ್ನೆಗೆ ಮೀನಳ ಮುಗುಳುನಗೆಯೇ ಉತ್ತರವಾಯ್ತು.

ಮೀನಾ ಮೆಟ್ಟಲು ಹತ್ತಿ ಒಳಗೆ ಹೋದಳು. ಅಂತಹ ಸುಸಜ್ಜಿತವಾದ ಸ್ಟುಡಿಯೋ ಅವಳು ಎಂದೂ ನೋಡಿರಲಿಲ್ಲ. ಅಲ್ಲಿಯ ಬೆಲೆ

ಬಾಳುವ ಸುಂದರ ಚಿತ್ರವಿಚಿತ್ರ ಪರದೆಗಳು, ದೀಪಾಲಂಕಾರ, ಚಿತ್ರಿಸಿದ್ದ ಗೋಡೆಗಳು, ಚೈನಾ ಗಾಜಿನ ಪುಷ್ಪಕರಂಡಗಳಲ್ಲಿ ಜೋಡಿಸಿಟ್ಟಿದ್ದ ಬಗೆಬಗೆಯ ಹೂಗುತ್ತಿಗಳು, ಎಲ್ಲ ನಯನಮನೋಹರವಾಗಿದ್ದುವು. ಎಲ್ಲ ಚಂದ್ರುವಿನ ಕಲೆಯ ಅಭಿರುಚಿಯನ್ನು ಎತ್ತಿಹಿಡಿದಿದ್ದಿತು. ಇಲ್ಲಿ ಹೀಗಿರುವ ಚಂದ್ರು ಮನೆಯಲ್ಲಿ ಏಕೆ ಹಾಗಿರುವನು ?

ಚಂದ್ರು, ಮೀನಾಕ್ಷಿಯನ್ನು ದೊಡ್ಡ ಕ್ಯಾಮರಾದ ಮುಂದೆ ಕೂಡಿಸಿ, ನಿಲ್ಲಿಸಿ ಏಳೆಂಟು ಭಂಗಿಗಳಲ್ಲಿ ಫೋಟೋ ತೆಗೆದನು. ಷೋ ಕೇಸಿನಲ್ಲಿ ತಗಲಿಹಾಕಿದ್ದ ವರ್ಣರಂಜಿತವಾದ ದೊಡ್ಡ ಚಿತ್ರ ಒಂದನ್ನು ತೋರಿಸಿ ಚಂದ್ರು ಅವಳಿಗೆ ತೀರ ಸನಿಯದಲ್ಲಿ ನಿಂತು ಕೇಳಿದನು—

" ಮೀನಾ ಅದು ಯಾರ ಚಿತ್ರ ಹೇಳು "

ಮೀನಾಕ್ಷಿ ಆ ಚಿತ್ರವನ್ನೇ ದಿಟ್ಟಿಸಿ ನೋಡುತ್ತಿದ್ದಳು. ಚಂದ್ರು ಅದನ್ನು ತೆಗೆದು ಅವಳ ಕೈಗೆ ಕೊಟ್ಟನು. ಮೀನಾಕ್ಷಿ ಆ ಚೆಲುವಾದ ಹುಡುಗಿಯ ಚಿತ್ರವನ್ನು ಮೆಚ್ಚಿಕೊಂಡಳು. ಚಂದ್ರು ಮುಂದೆ ಬಾಗಿ ಮತ್ತೊಮ್ಮೆ ಕೇಳಿದನು.

" ಮೀನಾ, ಯಾರ ಚಿತ್ರ ಅದು ತಿಳಿಯಲಿಲ್ಲವೇ ? "

ಅದು ಯಾರದೆಂದು ಅವಳಿಗೆ ತಿಳಿದಿತ್ತು. ಆದರೂ ಮೀನಾ ತಲೆ ಅಲ್ಲಾಡಿಸಿ ನಕ್ಕಳು. ತಲೆ ಎತ್ತಿ ಚಂದ್ರುವನ್ನು ನೋಡಿದಳು. ಅನಿರೀಕ್ಷಿತವಾದ ಆನಂದದಿಂದ ಅವಳು ಮೂಕಳಾಗಿದ್ದಳು.

" ನಿನ್ನ ಚಿತ್ರ ಮೀನಾ. ನಾನು ಕ್ಯಾಮರಾ ತೆಗೆದುಕೊಂಡಾಗ, ತುಳಸೀಕಟ್ಟೆಯ ಹತ್ತಿರ ನಿಲ್ಲಿಸಿ ಮೊದಲು ನಿನ್ನ ಫೋಟೋ ತೆಗೆಯಲಿಲ್ಲವೇ. ಅದೇ ಚಿತ್ರ ಇದು ಮೀನಾ. ನನ್ನ ಮೊಟ್ಟಮೊದಲನೆಯ ಚಿತ್ರ ನಿನ್ನಿಂದ ಅತಿ ಸುಂದರವಾಯ್ತು. ಈ ಚಿತ್ರವೇ ನನಗೆ ಸ್ಫೂರ್ತಿ ಕೊಟ್ಟು ನನ್ನ ಬಾಳಿನಲ್ಲಿ ಆಗಾಗ ಸುಖದ, ಆನಂದದ ಮಿಂಚನ್ನು ಮಿಂಚಿಸುತ್ತಿರುವುದು."

ಮೀನಾಕ್ಷಿಗೆ ಸಂತೋಷದಿಂದ ಕಣ್ಣಂಚಿನಲ್ಲಿ ನೀರು ತುಂಬಿತು. ಚಂದ್ರು ಕೂಡಲೇ "ಏಕೆ ಅಳುತ್ತೀಯ ಮೀನಾ" ಎಂದನು.

" ಇಲ್ಲ, ಇಂತಹ ಸುದ್ದಿ ಕೇಳಿ ಅಳುವುದೇ. ಆನಂದದಿಂದ

ಕಣ್ಣಲ್ಲಿ ನೀರು ಬಂದಿತು ಅಷ್ಟೆ."

ಮೀನಾ ಮತ್ತೆ ತನ್ನ ಭಾವಚಿತ್ರವನ್ನು ನೋಡಿದಳು. ಚಂದ್ರು ಅವಳ ಭುಜದಮೇಲೆ ಬಾಗಿ, ಅವಳ ಕೂದಲಿಗೆ ತನ್ನ ಕೆನ್ನೆ ಸೋಕುವಂತೆ ನಿಂತು—

"ನೋಡು ಮೀನಾ, ಆಗ ಹೇಗಿದ್ದೆ. ಈಗ ನಿನ್ನ ಮುಖ ನೋಡಿಕೊಂಡಿರುವೆಯಾ. ಎಷ್ಟು ವ್ಯತ್ಯಾಸ. ಆಗ ಲಂಗ ಹಾಕಿಕೊಂಡು ಚೆಂಡಿನಂತೆ ನೆಗೆಯುತ್ತಿದ್ದೆ. ನನ್ನನ್ನು ಎಷ್ಟು ಗೋಳು ಹುಯ್ದುಕೊಳ್ಳುತ್ತಿದ್ದೆ. ನನ್ನ ಪುಸ್ತಕ ಹರಿದುಹಾಕಿ, ನನ್ನ ಪೆನ್ಸಿಲ್ಲು ಬಚ್ಚಿಟ್ಟು, ಅಟ್ಟಿಸಿಕೊಂಡು ಬಂದರೆ, ಈ ತುಳಸೀಕಟ್ಟೆಯ ಸುತ್ತಲೂ ನನ್ನನ್ನು ಎಷ್ಟು ಸುತ್ತು ಹಾಕಿಸುತ್ತಿದ್ದೆ ನೆನಪಿಲ್ಲವೇ ಮೀನಾ, ಆ ಮರುಳು ದ್ವೀಪ ನಿನಗೆ ನೆನಪಿಲ್ಲವೇನು? ಮೀನಿಗೆ ಹೆದರಿ ನೀನು ಹಿಂದಕ್ಕೆ ನೆಗೆದಾಗ ನಾನು ಆತುಕೊಂಡೆ. ನೀನು ನಾಚಿಕೆಯಿಂದ ಬಿಡಿಸಿಕೊಂಡೆ ........ಮತ್ತೊಂದು ದಿನ, ನೀನು ಸೀರೆಯುಟ್ಟಮೇಲೆ ನಾನು ಮೈಸೂರಿನಿಂದ ಒಂದು ಸಾರಿ ಬಂದಿದ್ದೆ. ಕಾಮಾಕ್ಷಿ ಏನೋ ಅಂದಳೆಂದು ನೀನು ರೂಮಿನಲ್ಲಿ ಕೋಪಮಾಡಿಕೊಂಡು ಕುಳಿತಿದ್ದೆ. ಆಗ ನಾನು ನಿನ್ನನ್ನು ತಬ್ಬಿಕೊಂಡು ನಿನ್ನ ................"

ಚಂದ್ರುವಿನ ಬಿಸಿಯುಸಿರು ಅವಳ ಕೆನ್ನೆಗೆ ತಟ್ಟಿತು. ಮೀನಾಕ್ಷಿಯ ಮೈ ಕಂಪಿಸಿತು. ಸರ್ರನೆ ತಿರುಗಿ ನಿಂತು ಚಂದ್ರುವಿನ ಬಾಯಿ ಮುಚ್ಚಿಬಿಟ್ಟಳು.

"ನೋಡು ಮೀನಾ, ಇದು ನನ್ನ ಕಥೆ. ಇವಳು ನನ್ನ ಕಥೆಯ ನಾಯಕಿ. ನಾಯಕನಿಂದ ದೂರ ಹೋದ ನಿರ್ದಯೀ ನಾಯಕಿ" ಎಂದು ಚಂದ್ರು ಅವಳ ಕೈಯ್ಯಿಂದ ಆ ಭಾವಚಿತ್ರವನ್ನು ತೆಗೆದುಕೊಂಡು ಷೋ ಕೇಸಿನಲ್ಲಿಟ್ಟು ಬೀಗ ಹಾಕಿದನು.

ಮೀನಾಕ್ಷಿಯ ಮನಸ್ಸಿನಲ್ಲಿ ಆಂದೋಳನವೆದ್ದಿತು. ತಾನು ಮದುವೆಯಾಗುವ ತನಕ ಚಂದ್ರುವಿನೊಡನಾಡಿದ ಆಟಗಳು, ಕಳೆದ ರಸ ನಿಮಿಷಗಳು ಎಲ್ಲ ನೆನಪಾಯಿತು. ಮೀನಾ ನಿಟ್ಟುಸಿರುಬಿಟ್ಟು ತಡೆದುತಡೆದು ಕೇಳಿದಳು.

“ ಚಂದ್ರೂ, ನಾನು ನಿನಗೆ ಮೋಸ ಮಾಡಿದೆನೇ ?”

ಚಂದ್ರು ದುಃಖದಿಂದ ನಕ್ಕು ಹೇಳಿದನು, “ ನೀನಲ್ಲ ಮೀನಾಕ್ಷಿ ಮೋಸ ಮಾಡಿದ್ದು. ನಮ್ಮನ್ನು ಮೋಸಗೊಳಿಸಿದ್ದು ವಿಧಿ.” ಚಂದ್ರು ಮತ್ತೆ ತಿರಸ್ಕಾರದಿಂದ ನಕ್ಕು “ ವಿಧಿಯೂ ಅಲ್ಲ ಮೀನಾಕ್ಷಿ, ನನ್ನ ಅತ್ತೆ ನಮಗೆ ಮೋಸ ಮಾಡಿದರು ” ಎಂದು ಸೇರಿಸಿದನು. ಮೀನಾ ನಿರುತ್ತರ ಳಾಗಿದ್ದಳು. ಆ ಮಾತು ಅವಳಿಗೆ ನಿಜವೆನ್ನಿಸಿತು.

ಗಾಡಿಯಲ್ಲಿ ಚಂದ್ರುವಿನ ಹತ್ತಿರದಲ್ಲಿ ಮೈಗೆ ಮೈ ಹತ್ತಿದಂತೆ ಕೂತ ಮೀನಾ ಮೌನವಾಗಿದ್ದಳು. ಅವಳಿಗೆ ಏನು ಮಾತನಾಡ ಬೇಕೋ ತಿಳಿಯಲಿಲ್ಲ. ಅಡಿಗಡಿಗೆ ಪ್ರೇಮಪೂರಿತವಾದ ಚಂದ್ರುವಿನ ಕಣ್ಣುಗಳು ಮೀನಾಕ್ಷಿಯ ಕಣ್ಣುಗಳನ್ನು ನೋಡಿಹಾಕಿ ಸೆಳೆಯುತ್ತಿದ್ದಿತು. ತುಟಿಗಳ ಮೇಲೆ ಮಂದಹಾಸ ನಲಿಯುತ್ತಿದ್ದಿತು. ಪ್ರೇಮ ಚಿಮ್ಮಿ ಮೈ ನವಿರೇಳುತ್ತಿದ್ದಿತು. ಮೀನಾ ಆ ಕಣ್ನೋಟವನ್ನು ಎದುರಿಸ ದಾದಳು. ಪ್ರಯತ್ನಪೂರ್ವಕವಾಗಿ ದೃಷ್ಟಿಯನ್ನು ಬೀದಿಗೆ ತಿರುಗಿಸಿದಳು.

ಮನೆಗೆ ಬಂದ ಮೀನಾಕ್ಷಿಗೆ ಆ ದಿನವೆಲ್ಲ ಒಂದು ಬಗೆಯ ಆನಂದ, ಉತ್ಸಾಹ. ಚಂದ್ರುವಿನ ಸಾಮೀಪ್ಯ, ಅವನ ಪ್ರೇಮಪೂರಿತವಾದ ಸವಿ ಮಾತುಗಳು, ಅವಳಿಗೆ ಸುಖ ತಂದಿತು. ಮಕ್ಕಳಿಗೆಲ್ಲ ನೀರು ಹಾಕಿದಳು. ಹಬ್ಬದಡಿಗೆ ಮಾಡಿದಳು ಚಂದ್ರು ಊಟ ಮಾಡುವಾಗ ಆಶ್ಚರ್ಯಪಟ್ಟು ಕೇಳಿದನು,

“ ಮೀನಾ ಇದೇನು ಈವತ್ತು ಶಾವಿಗೆ ಪಾಯಸ ಮಾಡಿದ್ದೀಯ. ಇವತ್ತು ಯಾವ ಹಬ್ಬ ? ”

ಮೀನಾ ಮುಸಿನಕ್ಕು ಹೇಳಿದಳು “ಈ ದಿನ ನನ್ನ ಸಂತೋಷದ ಹಬ್ಬ.”

“ ಹಾಗಾದರೆ ಇಷ್ಟು ದಿವಸಗಳವರೆವಿಗೆ ನೀನು ಸಂತೋಷ ವಾಗಿರಲಿಲ್ಲವೇ ?”

“ ಇಲ್ಲ....ನನಗೆ ಜೀವನದಲ್ಲಿ ಕೊಂಚವೂ ಸಂತೋಷವಿರಲಿಲ್ಲ.”

“ಈ ದಿನ ನಿನ್ನ ಸಂತೋಷಕ್ಕೆ ಕಾರಣ....ಕೇಳಬಹುದೇ ಮೀನಾ?”

ಅನ್ನ ತೋಡಿಕೊಳ್ಳುತ್ತಿದ್ದ ಮೀನಾಕ್ಷಿ ಚಂದ್ರುವಿನೆಡೆಗೆ ವಾರೆ

ಗಣ್ಣೋಟ ಬೀರಿ ಮುಸಿನಕ್ಕಳು. ಮತ್ತೆ ಅನ್ನದ ತಪ್ಪಲೆಯ ಕಡೆ ದೃಷ್ಟಿ ಹರಿಸಿ ಮೆಲ್ಲನೆ ನಿಟ್ಟುಸಿರುಬಿಟ್ಟು ಹೇಳಿದಳು,

"ಕಾರಣ ಏನೆಂದು ಹೇಳಲಿ ಚಂದ್ರು. ನಿಜ ಹೇಳಬೇಕೆಂದರೆ ನಿನ್ನ ಸ್ಟುಡಿಯೋವನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಚಂದ್ರೂ ನಿನ್ನ ಸ್ಟುಡಿಯೋ ನಿಜವಾಗಿ ಬಹಳ ಚೆನ್ನಾಗಿದೆ."

"ಕಾರಣ ಅದಲ್ಲ ಮೀನಾ. ನನಗೆ ತಿಳಿದಿದೆ ನಿನಗೆ ಏತಕ್ಕೆ ಸಂತೋಷವೆಂದು. ನಿನಗೆ ಈ ದಿನ ನಿನ್ನ ಭಾವ ಚಿತ್ರವನ್ನು ನೋಡಿ ಸಂತೋಷವಾಗಿದೆ. ನನ್ನನ್ನು ನೋಡಿ ಆನಂದವಾಗಿದೆ........ ನಾನು ಸತ್ಯವಂತನೆಂದು ತಿಳಿದು ನಿನಗೆ ಅತಿಯಾದ ಸಂತೋಷವಾಗಿದೆ. ಅಲ್ಲವೇ ಮೀನಾ ?"

ಮೀನಾಕ್ಷಿಯ ಮುಖ ನಾಚಿಕೆಯಿಂದ ಕೆಂಪಾಯಿತು. ಅವಳು ಚಂದ್ರುವನ್ನು ನೋಡದಾದಳು. ತಲೆತಗ್ಗಿಸಿಕೊಂಡೇ ಚಂದ್ರುವಿಗೆ ಅನ್ನ ಹಾಕಿ ಮೊಸರು ಬಡಿಸಿದಳು. ಚಂದ್ರು ಏನನ್ನೋ ನೆನೆಸಿ ಕೊಂಡವನಂತೆ ಕೇಳಿದನು.

"ಮೀನಾ, ನೋಡು ನನ್ನ ರೂಮಿನಲ್ಲಿ ಕಳ್ಳರ ಕಾಟ ಹೆಚ್ಚಾಗಿ ಹೋಗಿದೆ. ನಾನು ನಿನ್ನ ಭಾವಚಿತ್ರದ ಮೇಲೆ ಇಟ್ಟ ಹೂವನ್ನು ದಿನವೂ ಯಾರೋ ಕದ್ದು ಬಿಡುತ್ತಾರೆ. ಅದರ ಬದಲು ನನ್ನ ಭಾವಚಿತ್ರದ ಮೇಲೆ ಹೊಸದಾದ ರೋಜಾ ಹೂವನ್ನು ಇಟ್ಟಿರುತ್ತಾರೆ. ಈ ದಿನವೂ ಹಾಗೆಯೇ ಆಗಿದೆ. ನಾನಿಟ್ಟ ದಾಸವಾಳದ ಹೂವಿನ ಪತ್ತೆಯೇ ಇಲ್ಲ"

ಚಂದ್ರು ಮೀನಾಕ್ಷಿಯ ಮುಡಿಯನ್ನು ಕಳ್ಳ ನೋಟದಿಂದ ಇಣುಕಿ ನೋಡಿದನು. ಮೀನಾಕ್ಷಿ ನಕ್ಕುಬಿಟ್ಟಳು.

"ಮೀನಾ ನಿನಗೆ ನನ್ನ ಸ್ಟುಡಿಯೋವಿಗೆ ಬಂದ ಸಂತೋಷದಿಂದ ಇಷ್ಟು ರುಚಿಯಾದ ಹಬ್ಬದ ಅಡಿಗೆ ಮಾಡಲು ಬರುವ ಹಾಗಿದ್ದರೆ ನಿನ್ನನ್ನು ದಿನವೂ ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ."

ಮೀನಾ ನಗುತ್ತಾ ಉತ್ತರಕೊಟ್ಟಳು. "ನಾನು ದಿನವೂ ಈರೀತಿ ಸಂತೋಷದಿಂದ ಅಡಿಗೆ ಮಾಡಿ ಹಾಕುತ್ತಿದ್ದರೆ ನೀನು ಎರಡು ತಿಂಗಳಲ್ಲೇ

ದಿವಾಳಿ ಏಳುತ್ತೀಯೆ ಚಂದ್ರೂ."

" ದಿವಾಳಿ, ಹುಂ....ಮೀನಾ ನೀನು ಸಂತೋಷವಾಗಿರುವ ಹಾಗಿದ್ದರೆ ನನಗೆ ಏನು ಆದರೂ ಹೆದರುವುದಿಲ್ಲ. ದಿವಾಳಿಯಲ್ಲ ನನ್ನ ಸರ್ವಸ್ವವೂ ಲೂಟಿ ಆಗಿಹೋಗಿ ನಾನು ಭಿಕಾರಿಯಾದರೂ ನಿನ್ನ ಸಂತೋಷವನ್ನು ನೋಡಿ ನಾನು ಸುಖವಾಗಿರಬಲ್ಲೆ "

ಮೀನಾಕ್ಷಿ ತುಂಬುಗಣ್ಣುಗಳಿಂದ ಚಂದ್ರುವನ್ನು ದಿಟ್ಟಿಸಿ ನೋಡಿದಳು. ಚಂದ್ರು ಮುಸಿನಕ್ಕು ತನ್ನ ಕೊಠಡಿಗೆ ಹೋದನು.

' ಸುಖ....ನಿನ್ನನ್ನು ಬಿಟ್ಟು ನನ್ನ ಬಾಳಿಗೆ ಎಂದೂ ಸುಖವಿಲ್ಲ ಚಂದ್ರು. ಇದು ಸತ್ಯ' ಎಂದು ಮೀನಾಕ್ಷಿ ತನ್ನಲ್ಲಿಯೇ ಹೇಳಿಕೊಂಡಳು.

ಚಂದ್ರುವಿನ ಸೇವೆಯಲ್ಲಿ ಅವಳಿಗೆ ಅವರ್ಣನೀಯವಾದ ತೃಪ್ತಿಯುಂಟಾಗುತ್ತಿದ್ದಿತು. ಗೇರುಸೊಪ್ಪೆಯಲ್ಲಿ ಗಂಡನೊಡನೆ ಹೆಂಡತಿಯಾಗಿ ನಡೆಸಿದ ಕಹಿಬಾಳಿಗಿಂತ ಈ ಮನೆಯಲ್ಲಿ ಚಂದ್ರುವಿನ ಸಮೀಪದಲ್ಲಿ ರಾಣಿಯಾಗಲ್ಲದಿದ್ದರೆ ದಾಸಿಯಾಗಿಯಾದರೂ ತಾನು ಸಾಯುವ ತನಕ ಇರಲು ಅವಕಾಶ ಸಿಕ್ಕಿದರೆ ತಾನು ಭಾಗ್ಯಶಾಲಿಯೆಂದು ಯೋಚಿಸಿಕೊಂಡಳು. ಹಗಲಿರುಳು ಆ ಕನಸಿನ ನನಸಿಗಾಗಿ ಬಯಸಿದಳು.

ಚಂದ್ರುವಿನ ಮನೆಯಲ್ಲಿ ಈಗ ಅವಳದೇ ಮಾತು. ಅವಳದೇ ರಾಜ್ಯ. ಮಕ್ಕಳಿಬ್ಬರೂ "ಚಿಕ್ಕಮ್ಮ ಚಿಕ್ಕಮ್ಮ" ಎಂದು ಮುತ್ತಿಕೊಳ್ಳುತ್ತಿದ್ದರು. ಆಗ ಮೀನಾಕ್ಷಿಗಾಗುತ್ತಿದ್ದ ಸಂತೋಷ ವರ್ಣನಾತೀತವಾಗಿದ್ದಿತು. ತಾನೇ ಕಾಮಾಕ್ಷಿಯಾಗಿ ಮಕ್ಕಳೊಡನೆ ನಕ್ಕು ನಲಿದಳು. ಆ ಮಕ್ಕಳು ತನ್ನವೇ ಎಂದುಕೊಂಡಳು. ಆ ಚಿಕ್ಕಮ್ಮ ಎನ್ನುವುದರಲ್ಲಿ ಅವಳಿಗೆ ಅಮೋಘವಾದ ಅರ್ಥ ಕಂಡುಬಂದಿತು. ಚಿಕ್ಕಮ್ಮ....ನಾನು ಚಂದ್ರುವಿನ ಮಕ್ಕಳ ಚಿಕ್ಕಮ್ಮ. ಅಂದರೆ ನಾನು ಚಂದ್ರುವಿನ....ಅವಳ ಮುಖನಾಚಿಕೆಯಿಂದ ಕೆಂಪಾಗುತ್ತಿದ್ದಿತು. ಹೃದಯ ಹಗುರವಾಗುತ್ತಿದ್ದಿತು.

ಕಾಮಾಕ್ಷಿಗೆ ಎಡಬಿಡದೆ ಜ್ವರ ಕಾಯುತ್ತಿತ್ತು. ಲೇಡಿ ಡಾಕ್ಟರು ಅವಳು ಚೆನ್ನಾಗಿ ಸುಧಾರಿಸಿಕೊಂಡು ಓಡಾಡುವ ಹಾಗೆ ಆಗಬೇಕಾಗಿದ್ದರೆ ಇನ್ನೂ ಒಂದು ತಿಂಗಳು ಬೇಕಾಗುವುದೆಂದೂ, ಇನ್ನೂ

ಕೆಲವು ಕಾಲ ಆಸ್ಪತ್ರೆಯಲ್ಲೇ ಬಿಟ್ಟಿದ್ದರೆ ಒಳ್ಳೆಯದೆಂದೂ ಸಲಹೆ ಕೊಟ್ಟರು.

ಮೀನಾಕ್ಷಿಯ ಬೋಧನೆಯಿಂದ ಚಂದ್ರು ಕಾಮಾಕ್ಷಿಯನ್ನು ಸ್ನೇಹಿತೆಯಂತೆ ಗೌರವಿಸಿ ಪ್ರೇಮಿಸತೊಡಗಿದ್ದನು. ಮೀನಾಕ್ಷಿ ದಿನವೂ ಅವನನ್ನು ತಿದ್ದುತ್ತಿದ್ದಳು. ಕಾಮಾಕ್ಷಿಗೆ ಕೊಂಚವೂ ನೋವಾಗದ ಹಾಗೆ ನೋಡಿಕೊಳ್ಳಬೇಕೆಂದು ಬೋಧಿಸುತ್ತಿದ್ದಳು. ಮೀನಾಕ್ಷಿಯ ಮಾತಿನಂತೆ ಚಂದ್ರು ಹಣ ವೆಚ್ಚವಾದರೂ ಚಿಂತೆಯಿಲ್ಲವೆಂದು ಕಾಮಾಕ್ಷಿಯನ್ನು ಮತ್ತೆ ಒಂದು ತಿಂಗಳು ಆಸ್ಪತ್ರೆಯಲ್ಲಿಯೇ ಇಡಲು ಒಪ್ಪಿಗೆ ಕೊಟ್ಟನು. ಮೀನಾ ತನ್ನ ಸಂಸಾರದಲ್ಲಿ ಕಾಣದ ಸುಖವನ್ನು ಚಂದ್ರುವಿನ ಸಂಸಾರದಲ್ಲಿ ಕಂಡುಕೊಂಡಳು. ಕಾಮಾಕ್ಷಿಯ ಸ್ಥಾನದಲ್ಲಿ ನಿಂತು ತಾನು ಬಯಸುವ ಸುಖವನ್ನೆಲ್ಲ ಕಾಮಾಕ್ಷಿಗೆ ಕೊಡಿಸಲು ಮನಸ್ಸು ಮಾಡಿದಳು. ಆದರೆ ವಿಧಿ ಪವಿತ್ರಳಾಗಿ ಅವಳನ್ನು ಆ ರೀತಿ ಮಾಡಲು ಬಿಡಲಿಲ್ಲ.

ಮೀನಾಕ್ಷಿ ಎರಡು ದಿವಸಗಳಮೇಲೆ ಮಕ್ಕಳೊಡನೆ ಕಾಮಾಕ್ಷಿಯನ್ನು ನೋಡುವುದಕ್ಕೆ ಹೋದಳು. ಕಾಮಾಕ್ಷಿ ಆ ಹೊತ್ತು ಕೊಂಚ ಗೆಲುವಾಗಿದ್ದಹಾಗೆ ಕಂಡಿತು. ಆದರೂ ಸಣ್ಣದಾಗಿ ಜ್ವರ ಇದ್ದೇ ಇತ್ತು. ಸಿಂಗರಿಸಿಕೊಂಡ ಮಕ್ಕಳೊಡನೆ ಬಂದ ತಂಗಿಯನ್ನು ನೋಡಿ ಕಾಮಾಕ್ಷಿ ಮನಸ್ಸಿನಲ್ಲಿಯೇ ಸಂತೋಷಪಟ್ಟಳು. ಎಳೆಮಗು ತಾಯಿಯ ಬಳಿಗೆ ಹೋಗಲು ಅತ್ತಿತು. ವನಿತಾ ಚಿಕ್ಕಮ್ಮನನ್ನು ಕಟ್ಟಿಕೊಂಡು ನಿಂತುಬಿಟ್ಟಿದ್ದಳು. ಕಾಮಾಕ್ಷಿಗೆ ಆ ದೃಶ್ಯನೋಡಿ ಎದೆ ತುಂಬಿ ಬಂದಿತು. ಗದ್ಗದ ಸ್ವರದಲ್ಲಿ ಹೇಳಿದಳು.

"ನಿನ್ನ ಉಪಕಾರವನ್ನು ನಾನು ಜನ್ಮ ಜನ್ಮಕ್ಕೂ ತೀರಿಸಲಾರೆ."

"ತಂಗಿಯಾಗಿ ನಿನ್ನ ಮನೆಸೇರಿ, ನಿನ್ನ ಜೊತೆ ಬೆಳೆದು, ಅಷ್ಟೂ ಮಾಡಬೇಡವೇನಕ್ಕಾ ?"

"ನಿನ್ನದು ದೊಡ್ಡ ಹೃದಯ ಮೀನಾ"

"ನೀನು ಹಾಗೆಲ್ಲಾ ನನ್ನನ್ನು ಹೊಗಳಬೇಡಕ್ಕ."

"ಹುಂ, ಬರಿಯ ಹೊಗಳಿಕೆಯಿಂದೇನು........?"

“.... ...... .... .... ....”

“ಹುಡುಗರೆಲ್ಲ ಬಹಳ ಗೋಳು ಹುಯ್ದುಕೊಳ್ಳುತ್ತಾರೆ, ಅಲ್ಲವೇ?”

“ಇಲ್ಲವಲ್ಲಾ, ಯಾರು ಹೇಳಿದರು? ಚಿನ್ನದಂತಹ ಮಕ್ಕಳು. ಇಂತಹ ಇನ್ನು ಹತ್ತು ಮಕ್ಕಳಿದ್ದರೂ ನಿಭಾಯಿಸಬಹುದು.”

ಮೀನಾಕ್ಷಿಗೆ ತಕ್ಷಣ ಅವಳ ಗೆಳತಿ ಪಾಪಚ್ಚಿಯ ನೆನಪಾಯಿತು. ತನ್ನ ತಂಗಿಯ ತಮ್ಮಂದಿರು ರಗಳೆ ಮಾಡಿದಾಗ, ಪಾಪಚ್ಚಿ ರೇಗಿದರೆ ಇದೇ ಮಾತನ್ನು ಅವಳಿಗೂ ಹೇಳುತ್ತಿದ್ದಳು ಮೀನಾಕ್ಷಿ.

ಮೀನಾ ಹೇಳಿದಳು. “ನನ್ನ ಸ್ನೇಹಿತೆ ಪಾಪಚ್ಚಿ ಈಗ ಶಿವಮೊಗ್ಗದಲ್ಲಿ ಇದ್ದಾಳಂತೆ. ಐದು ಮಕ್ಕಳಂತೆ. ಅವಳ ತಾಯಿ ಹೇಳಿದರು.”

“ಹೌದು ಮೀನಾ, ಹೋದಸಲ ಹೋದಾಗ ಅವಳನ್ನು ನೋಡಿದ್ದೆ. ಆಗ ಅವಳಿಗೆ ಎರಡೇ ಮಕ್ಕಳಿದ್ದುದು.”

“ಅಂದರೆ ಮೂರುವರ್ಷಕ್ಕೆ ಮೂರು ಮಕ್ಕಳೇ! ಹೇಗಿರುವಳೋ ನೋಡಬೇಕು ಎನ್ನಿಸುತ್ತದೆ. ಆದರೆ ಎಲ್ಲಿ? ನಾನಿರುವುದೇ ಇಲ್ಲ. ಇನ್ನೂ ಎರಡು ಮೂರು ತಿಂಗಳು ಬಿಟ್ಟು ಬರುತ್ತಾಳಂತೆ.”

ಮೀನಾಕ್ಷಿಗೆ ಎಲ್ಲೆಲ್ಲೂ ಮಕ್ಕಳ ಅಳು ಕೇಳುತ್ತಿದ್ದಿತು. ಅಲ್ಲಿದ್ದವರೆಲ್ಲ ಹೆಚ್ಚುಮಂದಿ ತಾಯಂದಿರೇ. ಕಾಮಾಕ್ಷಿ ಇದ್ದ ಸ್ಪೆಷಲ್ ವಾರ್ಡಿನಲ್ಲೇ ಮೂರು ಜನ ತಾಯಂದಿರಿದ್ದರು. ಎಲ್ಲರ ಪಕ್ಕದ ತೊಟ್ಟಿಲಲ್ಲೂ ಒಂದೊಂದು ಮುದ್ದು ಮಗು. ಅವರನ್ನು ನೋಡಲು ಬರುತ್ತಿದ್ದವರ ಕೈಯಲ್ಲಿ ಒಂದೆರಡು ಮುದ್ದು ಮಕ್ಕಳು. ಆದರೆ ತಾನು! ತಾನು ಬಂಜೆ! ಮೀನಾಕ್ಷಿಯ ಯೋಚನಾಲಹರಿ ಸಿಕ್ಕಿದತ್ತ ಹರಿಹಾಯ್ದಿತು. ಬಿರುಗಾಳಿಗೆ ಸಿಕ್ಕಿದ ಹಡಗಿನಂತೆ ಅವಳ ಮನಸ್ಸು ಅಸ್ಥಿರವಾಯಿತು. ಕಾಮಾಕ್ಷಿಯ ಮಾತಿನಿಂದ ಮೀನಾ ಎಚ್ಚರಗೊಂಡಳು. ಕಾಮಾಕ್ಷಿ ನೊಂದ ಧ್ವನಿಯಲ್ಲಿ ಕೇಳಿದಳು.

“ಮೀನಾಕ್ಷೀ, ಅವರ ಹೊತ್ತುಗೊತ್ತು ನಿನಗೆ ಸರಿಹೋಗುವುದೇ? ರಾತ್ರಿ ಒಂದು ಘಂಟೆಗೆ, ಎರಡು ಘಂಟೆಗೆ ಮನೆಗೆ ಬರುತ್ತಾರೆ.”

“ಇಲ್ಲ ಅಕ್ಕ, ಈಗ ಒಂಭತ್ತು ಘಂಟೆಗೆಲ್ಲ ಮನೆಗೆ ಬಂದು ಬಿಡುತ್ತಾನೆ.”

ಕಾಮಾಕ್ಷಿ ಅಕ್ಕಪಕ್ಕದಲ್ಲಿ ನೋಡಿ ಮೆಲ್ಲನೆ ಪಿಸುಮಾತಿನಲ್ಲಿ ಹೇಳಿದಳು.

"ರಾತ್ರಿ ಕುಡಿದು ಬರುತ್ತಾರೆ. ಮಕ್ಕಳನ್ನಂತೂ ಮಾತನಾಡಿಸುವುದೇ ಇಲ್ಲ. ಯಾವಾಗಲೂ ರೇಗಿ ಬೀಳುತ್ತಾರೆ. ನಿನಗೆ ಇದೆಲ್ಲ ಹೊಸದು. ನಿನ್ನ ಕೈಯಲ್ಲಿ ನಿಭಾಯಿಸುವುದಕ್ಕೆ ಆಗುತ್ತದೆಯೇ ?"

"ಇಲ್ಲ ಅಕ್ಕ, ನನಗೆ ತಿಳಿಯುತ್ತದೆ. ಅವನು ಈಗ ಕುಡಿಯುವುದಿಲ್ಲ. ಮನೆಗೆ ಬಂದ ತಕ್ಷಣ ಮಕ್ಕಳನ್ನೆಲ್ಲ ಮಾತನಾಡಿಸುತ್ತಾನೆ. ಒಂದೊಂದು ದಿನ ಸುಜಾತೆಯನ್ನು ಅರ್ಧ ಘಂಟೆ ಎತ್ತಿಕೊಂಡು ನಕ್ಕು ನಗಿಸುತ್ತಾನೆ. ಮುತ್ತಿನ ಮಳೆಗರೆಯುತ್ತಾನೆ. ಜಗದೀಶನನ್ನಾಗಲೀ, ವನಿತಳನ್ನಾಗಲೀ ತನ್ನ ಪಕ್ಕದಲ್ಲೇ ಮಲಗಿಸಿಕೊಳ್ಳುತ್ತಾನೆ."

"ಏನೋಮ್ಮ. ಎಲ್ಲ ವಿಚಿತ್ರವಾಗಿದೆ. ನಿನ್ನ ಮಾತಿನಲ್ಲಿ ನನಗೆ ನಂಬಿಕೆಯೇ ಇಲ್ಲ !"

"ಅಕ್ಕ, ನೀನು ಇನ್ನು ಯೋಚನೆ ಮಾಡಬೇಡ. ನಿನ್ನ ಸಂಸಾರವನ್ನು ನೆಟ್ಟಗೆ ಮಾಡಿ ಹೋಗುತ್ತೇನೆ. ಅದಕ್ಕೇ ನಾನು ಬಂದಿರುವುದು. ಚಂದ್ರುವಿನ ಗುಣ ಚಿಕ್ಕಂದಿನಿಂದಲೂ ನನಗೆ ಗೊತ್ತು. ಅವನು ನನ್ನ ಮಾತನ್ನು ಗೌರವಿಸುತ್ತಾನೆ ! ಅವನನ್ನು ಎಳೆ ಮಗುವಿನಂತೆ ನಡೆಸಿಕೊಳ್ಳಬೇಕು ಅಷ್ಟೆ. ಅವನಿಗೆ ಕೊಂಚ ಮುಂಗೋಪ. ಉಪಾಯವಾಗಿ ತಿಳಿಯ ಹೇಳಿದರೆ ನಿನ್ನ ಚಿಕ್ಕ ಮಗು ಸುಜಾತೆಯನ್ನು ಮುದ್ದುಮಾಡಿ ರಮಿಸುವಂತೆ ರಮಿಸಬಹುದು."

"ಈ ಸಾರಿ ನಮ್ಮ ಮನೆಗೆ ದೇವತೆಯಾಗಿ ಬಂದಿದ್ದೀಯಮ್ಮಾ. ಸಧ್ಯ ಅಷ್ಟು ಮಾಡಿದರೆ ಏಳೇಳು ಜನ್ಮಕ್ಕೂ ನಿನ್ನ ದಾಸಿಯಾಗಿ ಕೆಲಸ ಮಾಡುತ್ತೇನೆ."

ಕಾಮಾಕ್ಷಿ ಆರ್ತಳಾಗಿ ತನ್ನ ಹೃದಯವನ್ನು ತೋಡಿಕೊಂಡಳು. ಮೀನಾಕ್ಷಿಯ ಭರವಸೆ ಅವಳಿಗೆ ಅಮೃತಸೇಚನ ಮಾಡಿದಂತಾಯಿತು. ಅವಳ ಎದೆಯಲ್ಲಿ ಹುದಗಿದ್ದ ದುಃಖದ ಆವೇಗ ಅರ್ಧಕ್ಕರ್ಧ ಕಮ್ಮಿಯಾಗಿಹೋಯಿತು. ಮೀನಾಕ್ಷಿ ಅವಳ ಕಣ್ಣಿಗೆ ದೇವತೆಯಂತೆಯೇ ಕಂಡಳು.

## ೧೪

ಮೀನಾಕ್ಷಿ ಮತ್ತೆ ಒಂದುವಾರದವರೆಗೆ ಚಂದ್ರುವಿನ ಕೊಠಡಿಗೇ ಹೋಗಲಿಲ್ಲ. ಆದರೆ ಚಂದ್ರುವಿನ ಆದರ, ಒಲವು ಅವಳ ಕಡೆ ಹೆಚ್ಚಿದ್ದಿತು. ನಾಲ್ಕು ದಿವಸಗಳ ಹಿಂದೆ ಬಲವಂತಮಾಡಿ ಚಂದ್ರು ಮೀನಾಕ್ಷಿಯನ್ನು ಒಂದು ಚಲನಚಿತ್ರಕ್ಕೆ ಕರೆದುಕೊಂಡು ಹೋಗಿದ್ದನು. ಮೀನಾ ತುಂಬುಮನಸ್ಸಿನಿಂದ ಹೋಗಿ ಬಂದಳು. 'ದೇವದಾಸ್' ಚಿತ್ರವನ್ನುನೋಡಿ ಮೀನಾಕ್ಷಿ ಕಣ್ಣೀರಿಟ್ಟಳು. ಚಂದ್ರುವಿನ ಪಕ್ಕದಲ್ಲಿ ಕುಳಿತುಕೊಂಡಿದ್ದ ಅವಳಿಗೆ ಚಿತ್ರ ನೋಡುತ್ತ ಹೃದಯ ಉದ್ವೇಗಗೊಂಡಿತ್ತು. ಆ ಕತ್ತಲೆಯಲ್ಲಿ ಚಂದ್ರುವಿನ ಸಾಮೀಪ್ಯ ಅವಳ ಮೈಯಲ್ಲಿ ಮಾದಕ ಪೂರ್ಣವಾದ ಆನಂದಲಹರಿಯನ್ನು ಹರಿಸುತ್ತಿತ್ತು. ಚಂದ್ರು ಅಡಿಗಡಿಗೆ ನಿಟ್ಟುರಿಸಿಬಿಟ್ಟು ಮೀನಾಕ್ಷಿಗೆ ಚಿತ್ರಕಥೆಯನ್ನೂ, ಆ ಪಾರ್ವತಿ ದೇವದಾಸರ ಸಂಭಾಷಣೆಯನ್ನೂ ಕನ್ನಡಕ್ಕೆ ತರ್ಜುಮೆ ಮಾಡಿ ಹೇಳುತ್ತಿದ್ದನು. ಮೀನಾಕ್ಷಿ ತಾನು ಗೌರಿಯಾಗಿ ಆ ಮಾತಿನ ಸುಖ ದುಃಖಗಳನ್ನು ಸವಿದಳು. ಚಿತ್ರದ ಸೈಗಾಲನ ಕುಡುಕನಪಾತ್ರ ಅಡಿಗಡಿಗೆ ಅವಳಿಗೆ ಚಂದ್ರುವಿನ ಜೀವನದ ನೆನಪನ್ನು ತರುತ್ತಿದ್ದಿತು. ದೇವದಾಸ್ ವಿವಾಹಿತನಾಗಿರಲಿಲ್ಲ ಚಂದ್ರುವಿಗೆ ಮದುವೆಯಾಗಿತ್ತು ಅಷ್ಟೆ. ಪಾರ್ವತಿ ದೇವದಾಸರ ಬಾಲ್ಯ ಚಂದ್ರುವಿನ ಬಾಲ್ಯದ ನೆನಪನ್ನು ತಂದು ಕೊಟ್ಟಿತು. ಚಂದ್ರುವಿಗೂ ತಮ್ಮಿಬ್ಬರ ಬಾಲ್ಯ ಪಾರ್ವತೀ ದೇವದಾಸರ ಬಾಲ್ಯವನ್ನು ಎಷ್ಟು ಚೆನ್ನಾಗಿ ಹೋಲುತ್ತದೆಂಬುದನ್ನು ನೋಡಿ ಆಶ್ಚರ್ಯವಾಯಿತು. ಮೀನಾಕ್ಷಿಗೆ ಹಾಗೆಯೇ ಹೇಳಿ ನಿಟ್ಟುಸಿರುಬಿಟ್ಟನು. ಚಿತ್ರ ಮುಂದುವರಿದಂತೆ, ಕಥೆ ದುರಂತ ಘಟನೆಗಳನ್ನು ಮುಟ್ಟುತ್ತಿದ್ದಂತೆ, ಸೈಗಾಲನ ಮಧುರ ಕಂಠದಿಂದ ಹೊರಬಂದ ದುಃಖಭರಿತ ಹಾಡುಗಳನ್ನು ಕೇಳುತ್ತಿದ್ದಂತೆ ಮೀನಾಕ್ಷಿಗೆ ದುಃಖ ಉಕ್ಕಿಬಂತು. ಸೈಗಾಲನ ಆ ಮಧುರಧ್ವನಿಯಲ್ಲಿ ನೋವಿತ್ತು. ನೋವಿನಷ್ಟೇ ನಲಿವಿತ್ತು. ಕಡೆಗೆ ಪಾರ್ವತಿಯನ್ನು ನೋಡಲು ಬಂದ

ಕುಡುಕ ರೋಗಿ ದೇವದಾಸನ ಮರಣ, ಪಾರ್ವತಿಯ ಚೀತ್ಕಾರ, ಉರಿಯುತ್ತಿದ್ದ ಚಿತೆಯ ಬಳಿ ಪಾರ್ವತಿ ಹುಚ್ಚಿಯಂತೆ ಓಡಿ ಬಂದು ನಿಂತದ್ದನ್ನು ನೋಡಿ ಮಿನಾಕ್ಷಿ ವೈಮೆರೆತು, ಉದ್ವೇಗದಿಂದ ಬಿಕ್ಕಿಬಿಕ್ಕಿ ಅತ್ತುಬಿಟ್ಟಳು. ಚಿತ್ರ ಮುಗಿದು ಮತ್ತೆ ದೀಪಗಳನ್ನು ಹಚ್ಚಿದರು. ಅಕ್ಕಪಕ್ಕದವರೆಲ್ಲ ಅವಳ ಮುಖವನ್ನು ಮಿಕಮಿಕನೆ ನೋಡಿದರು. ಮೀನಾಕ್ಷಿಯ ಕಣ್ಣೀರು ಇನ್ನೂ ಆರಿರಲಿಲ್ಲ. ಮೀನಾಕ್ಷಿ ಹಿಂತಿರುಗಿ ನೋಡಿದಳು. ಚಂದ್ರು ಕರವಸ್ತ್ರದಿಂದ ಕಣ್ಣೀರನ್ನು ಒರಸಿ ಕೊಳ್ಳುತ್ತಿದ್ದನು. ಮೀನಾಕ್ಷಿ ಮೌನವಾಗಿ ಹೊರಗೆ ಬಂದಳು. ಗಾಡಿಯಲ್ಲಿ ಕುಳಿತು ಮತ್ತೆ ಮತ್ತೆ ಚಿತ್ರ ಕಥೆಯನ್ನು ನೆನಸಿಕೊಂಡಳು. ಕಡೆಗೊಂದು ಸಾರಿ ತನ್ನಲ್ಲಿಯೇ ನಿರ್ಧರಿಸಿಕೊಂಡಳು.

'ಛೀ, ನಾನು ಪಾರ್ವತಿಯಂತೆ ದೇವದಾಸನನ್ನು ದುರ್ಮರಣಕ್ಕೀಡುಮಾಡಲಾರೆ. ನಾನೇಕೆ ಈ ಸಮಾಜದ ಬಂಧನಕ್ಕೆ ಹೆದರಿ ನನ್ನ ಬಾಳನ್ನು ಮಸಣವನ್ನಾಗಿ ಮಾಡಿಕೊಳ್ಳಬೇಕು ? ನನಗೆ ಚಂದ್ರು ಬೇಕು. ಚಂದ್ರುವಿನ ಹೃದಯ........ಅವನ ದೇಹ........ಸಂಪೂರ್ಣ ಚಂದ್ರು ನನಗೆ ಬೇಕು !.... ನನ್ನ ಸರ್ವಸ್ವವನ್ನೂ ತ್ಯಾಗಮಾಡಿ ನನ್ನ ಚಂದ್ರುವನ್ನು ಬದುಕಿಸಿಕೊಳ್ಳುತ್ತೇನೆ. ನಾನೂ ಬದುಕುತ್ತೇನೆ.'

ಚಲನಚಿತ್ರ ನೋಡಿಬಂದ ಲಾಗಾಯ್ತು ಮೀನಾಕ್ಷಿಯ ಹೃದಯದಲ್ಲಿ ಬಿರುಗಾಳಿ ಏಳುತ್ತಿದ್ದಿತು. ಅವಳ ದೇಹ ಚಂದ್ರುವಿನ ಸ್ಪರ್ಶಕ್ಕಾಗಿ ಹಾತೊರೆಯುತ್ತಿದ್ದಿತು. ಹೃದಯ ಚಂದ್ರುವಿನ ಹೃದಯವನ್ನು ಬಯಸುತ್ತಿತ್ತು. ಅವಳ ಎದೆ ಬಡಿತ ಅವನ ಎದೆಯ ಬಡಿತದೊಂದಿಗೆ ಒಂದಾಗಲು ಬಯಸುತ್ತಿದ್ದಿತು. ಆ ಪ್ರವೃತ್ತಿಯ ಹಿಡಿತಕ್ಕೆ ಸಿಕ್ಕಿ ಮೀನಾಕ್ಷಿಯ ದೇಹ ಕಂಪಿಸುತ್ತಿದ್ದಿತು. ಆ ಕಂಪನೆಯಲ್ಲಿ ನೋವಿತ್ತು. ಆ ನೋವಿನಲ್ಲಿ ಸುಖವಿತ್ತು.

ಮೀನಾಕ್ಷಿ ಆ ದಿನವೂ ಮಕ್ಕಳೊಡನೆ ಮಲಗದಾದಳು. ಉನ್ಮತ್ತ ಮನಸ್ಸು ಚಂದ್ರೈಕ್ಯವಾಗಿದ್ದಿತು. ಹಾಸಿಗೆಯಲ್ಲಿ ಹೊರಳಾಡಿ ಎದ್ದು ಕುಳಿತಳು. ಅರೆಕ್ಷಣ ಯೋಚಿಸಿ, ತುಟಿ ಕಚ್ಚಿಕೊಂಡು ಮೇಲೆದ್ದು ಚಂದ್ರುವಿನ ಕೊಠಡಿಗೆ ಹೋದಳು. ಚಂದ್ರು ಕುಡಿತದಲ್ಲಿ

ವೈಮರೆತಿದ್ದ. ಮೀನಾಕ್ಷಿ ಎದುರಿಗೆ ಹೋಗಿ ನಿಂತಳು. ಚಂದ್ರು ಕೆಂಪಡರಿದ ಕಣ್ಣುಗಳನ್ನು ಮೀನಾಕ್ಷಿಯ ಮೇಲೆ ಹರಿಸಿ ನೆಟ್ಟನೋಟ ದಿಂದ ನೋಡುತ್ತ ಕುಳಿತನು.

ಮೀನಾಕ್ಷಿ ದೈನ್ಯದಿಂದ, ಅವನ ಎರಡು ಕೈಗಳನ್ನೂ ಹಿಡಿದು ಕೊಂಡು ಕೇಳಿಕೊಂಡಳು —

"ನೀನು ಈ ಕುಡಿತವನ್ನು ನಿಲ್ಲಿಸುವುದಿಲ್ಲವೇ ?"

" ಇಲ್ಲ ಮೀನಾಕ್ಷಿ ನಾನು ಇದನ್ನು ಬಿಡಲಾರೆ. ನನಗೆ ಜೀವನ ದಲ್ಲಿ ಇನ್ನೇನೂ ಆಶೆಯೇ ಇಲ್ಲ. ಕುಡಿದು ಕುಡಿದು ಸಾಯಬೇಕು ಅದೊಂದೇ ನನ್ನ ಆಶೆ "

" ನಾನು........! "

" ನೀನು ! ........... ನಿನ್ನ ಮೇಲಿನ ಆಶೆ ನನ್ನ ಜೊತೆಗೂಡಿ ಸಾಯುವುದು ಅಷ್ಟೆ. ಅಲ್ಲಿಯವರೆಗೆ ನಿನ್ನನ್ನು ಮರೆಯಲಾರೆ."

" ಚಂದ್ರೂ.......... "

" ಏನು ಮೀನಾ "

" ಇದಕ್ಕೆ ಬೇರೆ ದಾರಿಯೇ ಇಲ್ಲವೇ ?"

" ಯಾವುದಕ್ಕೆ........"

" ನೀನು ನನ್ನನ್ನೂ ಪ್ರೀತಿಸಬೇಕು. ಕಾಮಾಕ್ಷಿಯ ಬಾಳೂ ಸುಖವಾಗಬೇಕು."

" ಇದೆ ಮೀನಾ........ಒಂದೇ ದಾರಿ ಇದೆ."

" ಏನದು ಚಂದ್ರು ?"

" ಹೇಳಲು ಮನಸ್ಸು ಹಿಂತೆಗೆಯುತ್ತದೆ ಮೀನಾ. ನೀನು ಏನನ್ನುವೆಯೋ. ನಿನ್ನ ತಿರಸ್ಕಾರವನ್ನು ಮಾತ್ರ ಸಹಿಸಲಾರೆ."

"ಹೇಳು ಚಂದ್ರು. ನಿನ್ನ ಬಾಳು ಸುಖಮಯವಾಗುವುದಾದರೆ, ನಾನು ಯಾವುದನ್ನೂ ತಿರಸ್ಕರಿಸುವುದಿಲ್ಲ. ಹೇಳು ಚಂದ್ರು....ಬೇಗ ಹೇಳು."

" ಮೀನಾ, ನೀನು ನನ್ನವಳಾಗು. ನನ್ನ ಇಂದಿನ ಈ ಸ್ಥಿತಿಗೆ ನೀನೇ ಕಾರಣ. ಮೀನಾ, ನನ್ನ ಬಾಳೆಲ್ಲ ನಿನ್ನನ್ನೇ ಅವಲಂಬಿಸಿದೆ."

" ಚಂದ್ರೂ.... ಬೇರೆ ಉಪಾಯವೇ ಇಲ್ಲವೆ ?"

" ಇಲ್ಲ ಮೀನಾ, ಬೇರೆ ಉಪಾಯವೇ ಇಲ್ಲ. ನಿನ್ನನ್ನು ನೋಡದೆ ದೂರ ಇದ್ದುಇದ್ದು ಸಂಕಟ ಅನುಭವಿಸಿದೆ. ನಿನ್ನನ್ನು ನೋಡಲು ಬರುವುದಕ್ಕೆ ಆಗುತ್ತಿರಲಿಲ್ಲವೆ ಮೀನಾ. ಆಗುತ್ತಿತ್ತು. ಆದರೆ ನಿನ್ನನ್ನು .ನೋಡುವುದರಿಂದ ನನ್ನ ಹೃದಯ ಒಡೆದು ಹೋಗುವುದೇನೋ ಎನ್ನಿಸುತ್ತಿದ್ದಿತು. ನನ್ನ ಅತ್ತೆ ನಿನಗೆ ಮೋಸ ಮಾಡಿದರು. ನೀನು ಆ ಮುದುಕನ ಕೈಹಿಡಿದೆ ಅವನೊಡನೆ ಸಂಸಾರ ಮಾಡಿದೆ. ಅವನ ತೆರೆಯ ಮರೆಯ ಚರಿತ್ರೆ ನನಗೆ ತಿಳಿಯಿತು ಮೀನಾ. ಅವನೆಷ್ಟು ಮನೆ ಮುರಿದಿರುವನೆಂದು ನನಗೆ ತಿಳಿದಿದೆ. ಮಕ್ಕಳಿಗಾಗಿ ಹಂಬಲಿಸಿದ ನಿನಗೆ ಒಂದು ಮಗುವನ್ನೂ ಕೊಡಲಾರದ ಷಂಡ ಅವನು. ಅವನ ಕೈ ಹಿಡಿದು ನೀನೇನು ಸುಖ ಅನುಭವಿಸಿದೆ. ನಿನ್ನನ್ನು ನಾನು ನೋಡಿದ್ದರೆ ನಿನಗೆ ಈ ವಿಷಯಗಳನ್ನೆಲ್ಲ ಹೇಳಬೇಕಾಗುತ್ತಿದ್ದಿತು. ಆಗ ನಿನ್ನ ಬಾಳಿಗೆ ಮತ್ತಷ್ಟು ದುಃಖ ಕವಿಯುತ್ತಿದ್ದಿತು. ನೀನು ದುಃಖದಿಂದ ಕಣ್ಣೀರು ಕರೆಯುತ್ತಿದ್ದೆ. ಇಂದಿಗೂ ನಿನ್ನ ಬಾಳಿಗೆ ಏನು ಸುಖ. ನಿತ್ಯ ಗೋಳಾಟ, ಅಳು. ಅದರ ಪ್ರಭಾವ ನಿನ್ನ ಸೌಂದರ್ಯದ ಮೇಲೆ ಬಿದ್ದಿದೆ. ನೀನೆಷ್ಟು ಮಲಿನವಾಗಿ ಹೋಗಿರುವೆ. ಹೂವನ್ನು ಹಿಸುಕಿ ಎಸೆದಂತೆ ನಿನ್ನನ್ನು ಹಿಂಡಿ ಬಿಟ್ಟಿರುವರು ಮೀನಾ. ನಿನಗೆ ಅದು ತಿಳಿಯದು. ನನ್ನ ಬಾಳೂ ದುಃಖದ ಕಡಲಿನಲ್ಲಿ ಮುಳುಗಿತು. ನಿನ್ನ ಬಾಳಿನಲ್ಲಿ ಒಂದು ದಿನವೂ ನಗುವಿಲ್ಲ. ಅರೆಕ್ಷಣದ ಶಾಂತಿಯಿಲ್ಲ. ಅವರು ನಿನಗೆ ಕೊಟ್ಟಿರುವ ಹೆಸರು ಬಂಜೆ. ಮಕ್ಕಳನ್ನು ತಿಂದು ಕೊಂಡ ರಾಕ್ಷಸಿ........"

ಮೀನಾಕ್ಷಿ ಅವನ ವಾಕ್‌ಪ್ರಹಾರದಿಂದ ತಲ್ಲಣಿಸಿ ಹೋದಳು. ತಕ್ಷಣ ಕಿರುಚಿದಳು.

" ಚಂದ್ರೂೂ !........ಸಾಕು ಚಂದ್ರೂ. ನಾನು ಕೇಳಲಾರೆ."

ಮೀನಾ ಮೇಜಿನ ಮೇಲೆ ತಲೆ ಇಟ್ಟು ಬಿಕ್ಕಿ ಬಿಕ್ಕಿ ಅತ್ತಳು. ಅವಳ ಕರುಳು ಕತ್ತರಿಸಿದಂತಾಗಿದ್ದಿತು. ಚಂದ್ರು ಜರ್ಝರಿತವಾದ ಅವಳ ಹೃದಯದ ಮೇಲೆ ಆಯ ನೋಡಿ ಏಟು ಹಾಕಿದ್ದನು. ಚಂದ್ರು

ತೂರಾಡುತ್ತ ಎದ್ದು ಬಂದು ಅವಳನ್ನು ಅಪ್ಪಿಕೊಂಡು ಸಮಾಧಾನ ಮಾಡಿದನು. ಅವನ ಮೇಲೆ ಮದ್ಯ ತನ್ನ ಪ್ರಭಾವವನ್ನು ಬೀರುತ್ತಿದ್ದಿತು.

" ಮೀನಾ, ನಿನ್ನ ಮನಸ್ಸನ್ನು ನೋಯಿಸಿದ್ದಕ್ಕೆ ಕ್ಷಮಿಸು. ನಿನ್ನ ಬಾಳನ್ನು ನೋಡಿ ನನ್ನ ಹೃದಯ ದುಃಖದಿಂದ ಕುದಿಯಿತು. ಕಾಮಾಕ್ಷಿ ಒಂದು ಸಾರಿ ಅವಳ ಮಗು ಸತ್ತಾಗ ನಿನ್ನ ಹೊಟ್ಟೆ ಉರಿಯು ವಂತೆ ಕಾಗದ ಬರೆದದ್ದು ನನಗೆ ತಿಳಿಯಿತು. ಅಂದಿನಿಂದಲೇ ನಾನು ಅವಳನ್ನು ಮತ್ತಷ್ಟು ದ್ವೇಷಿಸತೊಡಗಿದೆ. ತಾನೊಂದು ಮಹಾಕಾರ್ಯ ವನ್ನು ಮಾಡಿದೆನೆಂದು ನನ್ನ ಹತ್ತಿರ ಹೇಳಿಕೊಂಡಳು. ನಾನು ಅವಳ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಿದೆ. ದುರ್ದೈವ ನನ್ನನ್ನು ವಂಚಿಸಿತು. ಅಮರಪ್ರೇಮಿಯಂತೆ ನಿನ್ನ ಮನಸ್ಸನ್ನು ರಮಿಸಿ ನಿನ್ನ ಹೃದಯವನ್ನು ಗೆಲ್ಲಲು ನನಗೆ ಅವಕಾಶವಿಲ್ಲದೇ ಹೋಯಿತು ಮೀನಾ. ಕಾರಣ ಸಮಾಜ. ನಿನ್ನ ಮೇಲಿನ ಪ್ರೇಮ ದಾರಿಕಾಣದೆ ನನ್ನಲ್ಲಿ ಪಾಶವೀ ವೃತ್ತಿಯನ್ನು ಹುಟ್ಟಿಸಿತು. ಪ್ರೇಮ ಕಾಮವಾಯಿತು ಮೀನಾ. ನಾನು ಪಶುವಾದೆ. ಮತ್ತೆ ಪ್ರೇಮಿಯಾಗಬೇಕೆಂದು ಹೃದಯ ಬಯಸುತ್ತಿದೆ ಮೀನಾ........"

ಚಂದ್ರುವಿನ ಆಲಿಂಗನ, ಅವನ ವೈಯ್ಯ ಬಿಸಿ ಆವಳ ಸ್ತ್ರೀತ್ವವನ್ನು ಹೊಡೆದೆಬ್ಬಿಸಿತು. ಅವನ ಬಿಸಿಯುಸಿರು, ನೊಂದ ಮಾತುಗಳು ಅವಳ ಹೃದಯವನ್ನು ಕರಗಿಸಿತು. ಮೀನಾ ಜಾರಿ ಬೀಳುವೆನೆಂದು ಹೆದರಿದಳು! ಸರ್ರನೆ ಎದ್ದು ಅವನ ತೆಕ್ಕೆಯಿಂದ ಬಿಡಿಸಿಕೊಂಡು ದೂರ ನಿಂತಳು. ಕಣ್ಣೀರು ತುಂಬಿ ಅವನನ್ನು ನೋಡಿದಳು. ಚಂದ್ರು ಹಿಮ್ಮೆಟ್ಟಿ ನಿಂತವನು ಅವಳನ್ನೇ ದೃಷ್ಟಿಸಿ ನೋಡುತ್ತಿದ್ದನು. ಅವನ ಮುಖ ಉದ್ವೇಗದಿಂದ ಉರಿಯುತ್ತಿದ್ದಿತು. ಕಣ್ಣುಗಳು ದೈನ್ಯದಿಂದ ಬೇಡಿಕೊಳ್ಳುತ್ತಿದ್ದವು. ಮೀನಾ ಹೊರಗೆ ಹೋಗಲು ಹಿಂತಿರುಗಿದಳು. ಸರ್ರನೆ ನಿಂತು ಹಿಂತಿರುಗಿ ಕಣ್ಣೀರು ತುಂಬಿ ಮತ್ತೊಂದು ಸಾರಿ ಕೇಳಿದಳು.

" ಬೇರೆ ಉಪಾಯವೇ ಇಲ್ಲವೆ ಚಂದ್ರು ?"

" ಇಲ್ಲ ಮೀನಾ. ನಾನು ಯೋಗಿಯಲ್ಲ. ಆದರ್ಶವಾದಿಯಲ್ಲ.

ನಿಜವಾದ ಪ್ರೀತಿ ಏನೆಂದು ತಿಳಿದಿರುವ ಸಾಮಾನ್ಯ ಮನುಷ್ಯ. ನೀನೇ ಮನಸಾರ ಒಲಿದು ಬಂದು ನನ್ನನಳಾಗದಿದ್ದರೆ ನನ್ನ ಹೃದಯಕ್ಕೆ ಎಂದಿಗೂ ಶಾಂತಿ ಇಲ್ಲ. ನಾನು ನಿನ್ನನ್ನು ಬಲಾತ್ಕರಿಸುವುದಿಲ್ಲ ಮೀನಾಕ್ಷಿ. ನನಗೆ ಬೇಕಾದುದು ಪ್ರಾಪಂಚಿಕ ಸುಖ. ಹೇಡಿಗಳು ಹೇಳುವಂತೆ ಪರಲೋಕದ ಸುಖವಲ್ಲ. ಹೃದಯ ಬೇಕೆಂದು ಹೇಳಿ ದೇಹಕ್ಕೆ ಮೋಸ ಮಾಡಲಾರೆ. ದೇಹ ಸಂಬಂಧವಿಲ್ಲದ ಪ್ರೇಮ ದೈವ ಪ್ರೇಮ. ಅದು ದೇವರಿಗೆ ಸಂಬಂಧಿಸಿದ್ದು. ಸ್ತ್ರೀ ಪುರುಷರ ಪ್ರೇಮ ಕಾಮಕ್ಕೆ ಸಂಬಂಧಿಸಿದ್ದು. ಆ ಪವಿತ್ರ ಕಾಮದಲ್ಲೇ ಸೃಷ್ಟಿ, ಸ್ಥಿತಿ, ಲಯಗಳು ಅಡಗಿರುವುದು. ಬರಿಯ ಪ್ರೇಮದಿಂದ ಜೀವನ ಸಾರ್ಥಕವಾಗಲಾರದು. ಕಾಮ, ಪ್ರೇಮದ ಒಂದು ಅಂಗ. ಕಾಮ ಪ್ರೇಮಗಳೆರಡರ ರಸಸಮ್ಮಿಳನವೇ ಜೀವನ. ಕಾಮವನ್ನು ಬಿಟ್ಟ ಸ್ತ್ರೀಪುರುಷರ ಪ್ರೇಮ ಎಂದೂ ಸಂಪೂರ್ಣವಾದ ಪ್ರೇಮವಾಗಲಾರದು. ಅಂತಹ ಪ್ರೇಮ ನಮ್ಮಂತಹ ಸಾಮಾನ್ಯ ಮನುಷ್ಯರಿಗೆ ಸಾಧ್ಯವಿಲ್ಲ ಮೀನಾ. ನೀನಾಗಿ ಒಲಿದು ನನ್ನ ಕಂಗೆಟ್ಟ ಬಾಳಿಗೆ ಶಾಂತಿ ನೀಡು ಬಾ ಮೀನಾ ನಾನಿದುವರೆಗೆ ಅನುಭವಿಸಿದ ನೋವಿಗೆ ಮುಕ್ತಿ ತೋರಿಸು ಮೀನಾ............ "

ಮೀನಾ ಅವನ ದಯಾರ್ದ್ರ ಮುಖವನ್ನು ನೋಡಲಾರದೇ ಹೋದಳು. ಲಾಲಸೆ ಅವಳಲ್ಲಿ ಕಿಡಿಹಚ್ಚಿತು. ಮೀನಳಿಗೆ ತಾನು ತೆರೆದ ಚಂದ್ರುವಿನ ತೋಳತೆಕ್ಕೆಯಲ್ಲಿ ಬೀಳುತ್ತಿರುವಂತೆ ಭಾಸವಾಯಿತು. ಮೀನಾಕ್ಷಿ ಮುಖ ಮುಚ್ಚಿಕೊಂಡು ಹೊರಗೆ ಬಂದುಬಿಟ್ಟಳು. ಬಾಗಿಲು ಹಾಕಿಕೊಂಡು ಮಲಗಿಕೊಂಡಳು. ರೂಮಿನಲ್ಲಿ ಚಂದ್ರು ಸೋಡಾಶೀಶೆಯನ್ನು ಒಡೆದ ಶಬ್ದ ಕೇಳಿಸಿತು. ಅವಳ ಕಿವಿಯಲ್ಲಿ ಚಂದ್ರುವಿನ ಪ್ರತಿಯೊಂದು ಮಾತೂ ಝೇಂಕಾರ ಮಾಡುತ್ತಿದ್ದಿತು.

" ದೇಹ ಸಂಬಂಧವಿಲ್ಲದ ಪ್ರೇಮ ದೈವ ಪ್ರೇಮ. ಅದು ದೇವರಿಗೆ ಸಂಬಂಧಿಸಿದ್ದು. ಕಾಮ, ಪ್ರೇಮದ ಒಂದು ಅಂಗ. ಪ್ರೇಮದೊಡನೆ ಬೆರೆತ ಕಾಮ ಜೀವನದ ಪರಿಪೂರ್ಣತೆಗೆ ಆವಶ್ಯಕ. ಅದು ಪ್ರಕೃತಿಯ ಧರ್ಮ."

ಚಂದ್ರುವಿನ ಈ ಮಾತುಗಳು ಮೀನಾಕ್ಷಿಯ ತಲೆಯಲ್ಲಿ ಕುಣಿ

ದಾಡಿದುವು. ಚಂದ್ರುವಿನ ರೂಪು ಯೌವನಗಳು ಅವಳ ಸ್ತ್ರೀತ್ವವನ್ನು ಕಿಚ್ಚೆಬ್ಬಿಸಿ ಉರಿಸಿತು. ಅವನ ಸುಂದರವಾದ ಮೈಕಟ್ಟು ಅವಳ ಕಣ್ಣು ಕಟ್ಟಿತು. ಮಲಗಿದ್ದಂತೆ ನಾನಾ ವಿಚಾರಗಳು ಬೃಹತ್ ರೂಪ ತಳೆದು ಅವಳನ್ನು ಮುತ್ತಿದುವು, ಜಿಂಕೆಯನ್ನು ಮುತ್ತುವ ಬೇಟೆನಾಯಿಗಳಂತೆ. ಹೃದಯವೆದ್ದು ಕೂಗಿಕೊಂಡಿತು.

'ಕಾಮಾಕ್ಷಿಯ ಸುಖಕ್ಕಾಗಿ ನನ್ನನ್ನು ತ್ಯಾಗ ಮಾಡಿಕೊಳ್ಳುತ್ತೇನೆ.'

'ನೀನು ತ್ಯಾಗಿಯಲ್ಲ. ಸ್ವಸುಖಾಪೇಕ್ಷೆಗಾಗಿ, ಕೇವಲ ಕ್ಷಣಿಕ ಭೋಗಕ್ಕಾಗಿ ಆತ್ಮವನ್ನು ವಂಚಿಸಿಕೊಳ್ಳಲು ಬಯಸುತ್ತಿರುವ ವಂಚಕಿ ನೀನು. ಪತಿಯನ್ನು ಮೋಸ ಪಡಿಸಲು ಹೊರಟಿರುವ ಪಾತಕಿ ನೀನು' ಎಂದು ಗಹಗಹಿಸಿ ನಕ್ಕಿತು ಅವಳ ಅಂತರಾತ್ಮ.

'ನಾನು ವಂಚಕಿ, ಯಾರನ್ನು ವಂಚಿಸುತ್ತಿರುವೆ ?'

'ನನ್ನನ್ನು ಮೀನಾಕ್ಷಿ, ನಿನ್ನ ಕೈಹಿಡಿದ ಗಂಡನನ್ನು' ಎಂದು ರಾಮಚಂದ್ರಯ್ಯ ರೋಷದಿಂದ ಕಿರುಚಿಕೊಂಡಂತಾಯಿತು.

'ನೀನು ನನ್ನ ಗಂಡನಲ್ಲ. ಮೋಸದಿಂದ, ಬಲವಂತದಿಂದ, ನನ್ನ ಇಚ್ಛೆಯನ್ನು ಮೀರಿ ನನ್ನನ್ನು ಮದುವೆಯಾಗಿರುವ ಮೋಸಗಾರ ನೀನು. ಮಕ್ಕಳನ್ನು ಕೊಡಲಾರದ ಷಂಡ. ನನ್ನ ಬಾಳಿಗೆ ಬೆಂಕಿಯಿಟ್ಟ ರಾಕ್ಷಸ. ನನ್ನನ್ನು ವಂಚಕಿ ಅನ್ನುವೆಯಾ !'

ಎಂದು ಮೀನಾಕ್ಷಿ ಚಿಟ್ಟನೆ ಚೀರಿದಳು.

ನೂರಾರು ಮುದ್ದು ಮಕ್ಕಳು ಅವಳ ಕಣ್ಣು ಮುಂದೆ ಹಾದು ಹೋದರು. ಎಲ್ಲರೂ ಅವಳ ಮುಖ ದಿಟ್ಟಿಸಿ "ಉಹ್ಞು, ಇವಳು ನನ್ನ ಅಮ್ಮ ಅಲ್ಲ" ಎಂದು ಮುಖ ತಿರುಗಿಸಿಕೊಂಡು ಹೋದರು.

'ಮಗು, ನನ್ನ ಮಗು...... ನನಗೆಲ್ಲಿಯ ಮಗು !'

ಮೀನಾಕ್ಷಿ ನಿಟ್ಟುಸಿರುಬಿಟ್ಟಳು. ಅವಳ ಹೊಟ್ಟೆಯಲ್ಲಿ ಸಹಿಸಲಾರದ ಉರಿ ಎದ್ದಂತಾಯಿತು. ಕರುಳು ಕೂಗಿತು. ಕಾಣದ ಮಗುವಿಗಾಗಿ ಅತ್ತಿತು.

'ಕಾಮಾಕ್ಷಿಯ ಜೀವನ, ಸುಖದ ಬೀಡಾಗಬೇಕಾಗಿದ್ದರೆ,

ನಿನ್ನ ದೇಹವನ್ನು ನಿನ್ನ ಚಂದ್ರುವಿಗೆ ಅರ್ಪಿಸು. ಅದರ ಪ್ರತಿಫಲ ನಿನಗೊಂದು ಮಗು. ನೀನು ಮನಸಾರ ಪ್ರೇಮಿಸಿ ಎಂದೋ ಪತಿಯೆಂದು ತಿಳಿದುಕೊಂಡಿರುವ ಚಂದ್ರುವಿನಿಂದ ನಿನಗೊಂದು ಮುದ್ದು ಮಗು. ಬಂಜೆ ಎಂದು ಹಳಿಯುವ ಜನರ ಕಣ್ಣು ಕುಕ್ಕುವಂತೆ ನಿನಗೊಂದು ಮುದ್ದುಮಗು. ನಿನ್ನ ಪ್ರೇಮಿ ಚಂದ್ರುವಿನ ಪ್ರತಿರೂಪ, ಪುಟ್ಟ ಚಂದ್ರು—ಬಾಲಚಂದ್ರ—ಇಲ್ಲ, ಚಂದ್ರಲೇಖ !'

'ಬಾ ಮೀನಾ, ಬಾ. ನನ್ನ ಬಾಳನ್ನು ಬೆಳಗು ಬಾ ಮೀನಾ. ನನ್ನ ದೇಹಕ್ಕೆ ಶಾಂತಿ ನೀಡು. ನಿನ್ನ ಬಾಳನ್ನೂ ಸುಖಮಯವನ್ನಾಗಿ ಮಾಡಿಕೊ.........ಬಾ ಮೀನಾ' ಎಂದು ಚಂದ್ರು ಕೈ ಚಾಚಿ ಮೊರೆ ಯಿಟ್ಟಂತಾಯಿತು. ಮೀನಾಕ್ಷಿಯ ಹೆಣ್ಣು ಹೃದಯ, ಬಂಜೆ ಹೊಟ್ಟೆ, ಮಗುವಿಗಾಗಿ ಹಂಬಲಿಸಿ ಅತ್ತಿತು. ಮನಸ್ಸು, 'ಹೋಗು, ಬೇಗ ಹೋಗಿ ಚಂದ್ರುವಿಗೆ ನಿನ್ನ ದೇಹವನ್ನು ಅರ್ಪಿಸಿಕೋ' ಎಂದು ಆಣತಿ ಮಾಡಿತು. ಮೀನಾಕ್ಷಿ ದಿಕ್ಕುಗೆಟ್ಟ ಹರಿಣಿಯಂತೆ ಬೇಡನ ಬಲೆಗೆ ಬೀಳಲು ತವಕಿಸಿದಳು.

ಮೀನಾಕ್ಷಿ ಹಾಲಿನ ಬಾಗಿಲನ್ನು ತೆಗೆದುಕೊಂಡು ಚಂದ್ರುವಿನ ಕೊಠಡಿಗೆ ಓಡಿಹೋದಳು. ಚಂದ್ರು ಹಾಸಿಗೆಯ ಮೇಲೆ ಬಿದ್ದು ಕೊಂಡಿದ್ದನು. ಧಡಾರನೆ ಬಾಗಿಲನ್ನು ನೂಕಿ "ಚಂದ್ರೂ, ನನ್ನ ಚಂದ್ರೂ" ಎಂದು ಉದ್ವೇಗದಿಂದ ಓಡಿಹೋಗಿ ಅವನ ಪಕ್ಕದಲ್ಲಿ ಉರುಳಿಕೊಂಡಳು. "ಮೀನಾ, ಬಾ ಮೀನಾ" ಎಂದು ಮದಿಸಿದ ಚಂದ್ರುವಿನ ತೋಳುಗಳು ಅವಳ ದೇಹವನ್ನು ಬಳಸಿ ಅಪ್ಪಿಕೊಂಡಿತು. ಇಂಗಲಾರದ ಹಸಿವಿನ ಜ್ವಾಲೆಯಿದ್ದಿತು ಆ ದೇಹದಲ್ಲಿ. ತೃಷೆಯಾರದ ಬೇಗೆ ಅವನ ಮೈಯಲ್ಲಿ ಹರಿಯುತ್ತಿದ್ದಿತು. ಮೀನಳ ಸಂಗ ಆ ಬೇಗೆಗೆ, ಬಾಯಾರಿಕೆಗೆ ಶಾಂತಿ ನೀಡಿತು. ಮೀನಾಕ್ಷಿ ಜಾರಿದಳು. ತಾನು ಜಾರಿ ಚಂದ್ರುವನ್ನು ಬದುಕಿಸಿಕೊಂಡಳು !

ಮಾರನೆಯ ದಿನದಿಂದ ಚಂದ್ರು ಹೊಸ ಬಾಳನ್ನು ಕಂಡನು. ಅವನ ಬಾಳಬಯಕೆ ಕೈಗೂಡಿ ಅರ್ಚಿಸಿದ ದೇವತೆ ಅವನಿಗೆ ಒಲಿದು ಬಂದಿದ್ದಳು.

ಬೆಳಿಗ್ಗೆ ಬಹಳ ಹೊತ್ತಿನಮೇಲೆ ಮೀನಾಕ್ಷಿ ಚಂದ್ರುವಿನ ಕೊಠಡಿ ಬಿಟ್ಟು ಬಂದಳು. ಅವಳಿಗೆ ಅವರ್ಣನೀಯವಾದ ತೃಪ್ತಿ ದೊರೆತಿದ್ದಿತು. ಮೀನಾಕ್ಷಿ ಹೊಸ ಬಾಳನ್ನು ಕಂಡಿದ್ದಳು. ಮತ್ತೆ ಮಧ್ಯಾಹ್ನ ಮೀನಾ ಪ್ರೇಮಿಯ ಕೊಠಡಿಯನ್ನು ಸೇರಿಕೊಂಡಳು. ಮೀನಳ ಕೈಯ್ಯ ತಾಂಬೂಲದಿಂದ ಚಂದ್ರುವಿನ ತುಟಿಗಳು ಕೆಂಪಾಯಿತು. ಮೀನಾಕ್ಷಿ ಚಂದ್ರುವಿನ ಮೈಮೇಲೆ ಒರಗಿ ಅವನ ಮುಖವನ್ನೇ ದಿಟ್ಟಿಸಿನೋಡಿ ಅರೆಕ್ಷಣದಲ್ಲಿಯೇ ಗಳಗಳನೆ ಅತ್ತುಬಿಟ್ಟಳು. ಚಂದ್ರುವಿಗೆ ಗಾಬರಿ ಯಾಯಿತು. ಸರ್ರನೆ ಎದ್ದುಕುಳಿತು ಮೀನಳ ಕೈಹಿಡಿದು, “ ಏಕೆ ಮೀನಾ, ಏಕೆ ಅಳುತ್ತೀಯ” ಎಂದು ಕೇಳಿದನು. ಮೀನಾಕ್ಷಿ ತಲೆತಗ್ಗಿಸಿ ಬಿಕ್ಕುತ್ತಲೇ ಹೇಳಿದಳು.

“ ಚಂದ್ರು ನಾನು ಇದೆಂತಹ ಕೆಲಸ ಮಾಡಿಬಿಟ್ಟೆ. ನನ್ನ ಗತಿ ಏನು ? ”

ಚಂದ್ರು, ಅವಳನ್ನು ಅಪ್ಪಿಕೊಂಡು ಸಮಾಧಾನ ಮಾಡಿದನು.

ಮೀನಾ ಸಜಲನಯನಳಾಗಿ ಕತ್ತೆತ್ತಿ ಉಸರಿದಳು.

“ ಚಂದ್ರು. ಕಾಮಾಕ್ಷಿಗೆ ನಾನು ಮೋಸಮಾಡಿದೆ ಎಂದು ದುಃಖವಾಗುತ್ತಿದೆ. ಅವರಿಗೆ ಮೋಸ ಮಾಡಿದೆ ಎಂದು ಹೃದಯದಲ್ಲಿ ಅಡಿಗಡಿಗೆ ಭರ್ಜಿಯಿಂದ ತಿವಿದಂತಾಗುತ್ತಿದೆ.”

“ ಇಲ್ಲ ಮೀನಾ, ನೀನು ಯಾರಿಗೂ ಮೋಸಮಾಡಿಲ್ಲ. ಎಲ್ಲರೂ ನಿನಗೆ ಮೋಸಮಾಡಿದರು ಅಷ್ಟೆ. ನೀನು ಮೊದಲಿನಿಂದಲೂ ನನ್ನನ್ನು ಪ್ರೇಮಿಸಿದ್ದೆ. ನಾನೂ ನಿನ್ನನ್ನು ಪ್ರೇಮಿಸಿದ್ದೆ. ಈಗ ಅದರ ಪರಿಪೂರ್ಣ ವಾಯಿತು. ನಮ್ಮಿಬ್ಬರ ಬಾಳ ಬಯಕೆ ಪೂರ್ಣವಾಯಿತು. ನೆನ್ನೆಯ

ರಾತ್ರಿ ನಮ್ಮಿಬ್ಬರ ಪ್ರೇಮಕಥೆಗೆ ಅಂಕಿತವಾಯಿತು. ನಾನು ಮೋಸ ಮಾಡುವೆನೆಂದು ನಿನಗಿನ್ನೂ ಸಂಶಯವೇ ಮೀನಾಕ್ಷಿ? ನಿನಗೆ ಆ ಸಂಶಯವಿರಬಹುದು ! ಆದರೆ ನಾನು ನೆನ್ನೆ ರಾತ್ರಿಯಿಂದಲೇ ಹೊಸ ಮನುಷ್ಯನಾದೆ ಮೀನಾ. ನಿನ್ನ ಪ್ರೇಮದ ತನಿರಸವನ್ನು ಕುಡಿಸಿ ನೀನು ನನ್ನ ಬಾಳಿನ ದೃಷ್ಟಿಯನ್ನೇ ಬದಲಾಯಿಸಿದೆ. ಇನ್ನು ಎಂದೆಂದಿಗೂ ನಾನು ನಿನ್ನವನು. ನಿನ್ನ ಸುಖಕ್ಕಾಗಿ, ನಿನ್ನ ಸಂತೋಷಕ್ಕಾಗಿ ನಾನು ಎಲ್ಲವನ್ನೂ ತ್ಯಾಗಮಾಡಲು ಸಿದ್ಧನಾಗಿದ್ದೇನೆ ಮೀನಾ"

ಮೀನಾಕ್ಷಿ ಅವನ ಎದೆಯಮೇಲೆ ಒರಗಿ ಅವನ ಕೆದರಿದ ಗುಂಗುರು ಕೂದಲಿನಲ್ಲಿ ಕೈ ಬೆರಳುಗಳನ್ನಾಡಿಸುತ್ತಾ ಕೇಳಿದಳು-

"ಹಾಗಾದರೆ ನೀನು ಬೀರ್, ವೈನ್ ಕುಡಿಯುವುದಿಲ್ಲವೆಂದು ಭಾಷೆ ಕೊಡು. ಕಾಮಾಕ್ಷಿಗೆ ಎಂದೆಂದಿಗೂ ಕಷ್ಟ ಕೊಡುವುದಿಲ್ಲವೆಂದು ಪ್ರಮಾಣ ಮಾಡು. ಆಗ ನನಗೆ ಸಮಾಧಾನವಾಗುತ್ತದೆ."

ಚಂದ್ರು ಮೀನಾಕ್ಷಿಯ ಕೈಮೇಲೆ ಕೈ ಇಟ್ಟು, "ಇನ್ನು ಮೇಲೆ ಬೀರ್, ವೈನ್ ಕುಡಿಯುವುದಿಲ್ಲ. ಇದಕ್ಕೆ ನಮ್ಮಿಬ್ಬರ ಪ್ರೇಮವೇ ಸಾಕ್ಷಿ" ಎಂದು ಪ್ರಮಾಣ ಮಾಡಿದನು.

"ಕಾಮಾಕ್ಷಿಯನ್ನು ಈ ಮನೆಯ ಯಜಮಾನಿಯಂತೆ ಗೌರವಿಸುತ್ತೇನೆ. ಅವಳಿಗೆ ಯಾವ ವಿಧವಾದ ಕಷ್ಟವನ್ನೂ ಕೊಡುವುದಿಲ್ಲ. ಇದಕ್ಕೆ ನಮ್ಮಿಬ್ಬರ ಪ್ರೇಮವೇ ಸಾಕ್ಷಿ" ಎಂದು ಮೀನಳ ಕೈಯನ್ನು ತುಟಿಗಳಿಗೆ ಒತ್ತಿಕೊಂಡು ದೀರ್ಘವಾಗಿ ಚುಂಬಿಸಿದನು.

ಮೀನಾಕ್ಷಿಗೆ ಅಮಿತವಾದ ಆನಂದವಾಯಿತು. ಅವಳ ತೀರದ ಬಾಳಬಯಕೆಯನ್ನು ಚಂದ್ರು ತೀರಿಸಿದ್ದನು. ಹಗಲಿರುಳು ಹಂಬಲಿಸಿದ ಅವಳ ಚಂದ್ರು, ಅವಳ ಅಂಧಕಾರದ ಬಾಳಿಗೆ ನಂದಾದೀಪವನ್ನು ಹಚ್ಚಿಟ್ಟನು.

ಆ ದಿನ ಸಾಯಂಕಾಲ ಚಂದ್ರು ಮೀನಾಕ್ಷಿಗೆ ಭಾಷೆ ಕೊಟ್ಟಿದ್ದಂತೆ, ಆಸ್ಪತ್ರೆಗೆ ಹೋಗಿ ಕಾಮಾಕ್ಷಿಯೊಡನೆ ಪ್ರೇಮದಿಂದ ಮಾತನಾಡಿ, ಅವಳ ಕ್ಷಮೆ ಬೇಡಿದನು. ಕಾಮಾಕ್ಷಿಯ ಕೈಗಳನ್ನು ಹಿಡಿದುಕೊಂಡು ದೈನ್ಯದಿಂದ ಕೇಳಿಕೊಂಡನು.

" ಕಾಮಾಕ್ಷಿ, ನಿನಗೆ ಬಹಳ ಕಷ್ಟ ಕೊಟ್ಟೆ. ಎಲ್ಲ ಮರೆತು ಬಿಡು. ರೂಪ ಮುಖ್ಯವಲ್ಲ. ಪ್ರೇಮ, ಗುಣ ಮುಖ್ಯವೆಂದು ಮೀನಾಕ್ಷಿ ನನಗೆ ತಿಳಿಸಿಕೊಟ್ಟಳು. ಅವಳು ದೇವತೆಯಂತೆ ನಮ್ಮ ಸಂಸಾರವನ್ನು ಉದ್ಧಾರ ಮಾಡಲು ನಮ್ಮ ಮನೆಗೆ ಬಂದಳು. ನನಗ ನಿಜವಾಗಿಯೂ ಪಶ್ಚಾತ್ತಾಪವಾಗುತ್ತಿದೆ."

ಕಾಮಾಕ್ಷಿಗೆ ಕಣ್ಣೀರು ಹರಿದು ಬಂದಿತು. ತಾನು ಎಷ್ಟೇ ಕಷ್ಟ ಅನುಭವಿಸಿದ್ದರೂ, ತನ್ನ ಪತಿ ತನಗೆ ನರಕ ಯಾತನೆ ಕೊಟ್ಟಿದ್ದರೂ, ತನ್ನ ಜೀವನ ಸರ್ವಸ್ವವಾದ ಆ ವ್ಯಕ್ತಿಯ ಕರುಣಾಪೂರಿತ ಧ್ವನಿಯನ್ನು ಕೇಳಲಾರದೇ ಹೋದಳು.

" ನೀವು ಹಾಗೆಲ್ಲ ನೊಂದುಕೊಳ್ಳಬೇಡಿ. ನೀವು ನನಗೇನೂ ಕಷ್ಟ ಕೊಟ್ಟಿಲ್ಲ."

ಎಂದು ಸಮಾಧಾನ ಮಾಡಿದಳು. ಚಂದ್ರು ಅಚ್ಚರಿಯಿಂದ ಅವಳ ಮುಖವನ್ನು ದಿಟ್ಟಿಸಿದನು. ಕಾಮಾಕ್ಷಿಗೂ ಅತ್ಯಾಶ್ಚರ್ಯವಾಯಿತು. ಚಂದ್ರು ತನ್ನನ್ನು ಅಷ್ಟು ಕೇಳಿಕೊಳ್ಳುವುದೆಂದರೆ, ಅದೊಂದು ಪವಾಡವಾಗಿ ಕಂಡಿತು. ಆದರೆ ಅದನ್ನು ಅವಳೇ ನೋಡಿದಳು. ಅವನ ಮನನೊಂದ ಮಾತುಗಳನ್ನು ಕಿವಿಯಾರ ಕೇಳಿದಳು. ಚಂದ್ರು ಮತ್ತೆ ಸಂತೋಷದಿಂದ ಹೇಳಿದನು.

" ಕಾಮಾಕ್ಷಿ ನಾನು ಇನ್ನು ಮೇಲೆ ಕುಡಿಯುವುದಿಲ್ಲ. ಎಲ್ಲ ಬಿಟ್ಟು ಬಿಡುತ್ತೇನೆ."

" ನಿಜವಾಗಿಯೂ....!"

" ಸತ್ಯವಾಗಿ "

ಚಂದ್ರುವಿನ ಇನಿಮಾತುಗಳೇ ಅವಳಿಗೆ ಔಷಧಿಯಾಯಿತು. ಅವನ ಮಾತುಗಳನ್ನು ಕೇಳಿ, ಅವಳಿಗಾದ ಆನಂದ, ತೃಪ್ತಿ ಅಷ್ಟಿಷ್ಟಲ್ಲ. ಕಾಮಾಕ್ಷಿ ಸ್ವಪ್ನಲೋಕದಲ್ಲಿ ವಿಹರಿಸಿದಳು.

ಕಾಮಾಕ್ಷಿಗೆ ಮೂರನೆಯ ದಿನದಿಂದ ಜ್ವರ ನಿಂತು ಹೋಯಿತು. ಆದರೆ ನಿಶ್ಯಕ್ತಿ ಇದ್ದೇ ಇದ್ದಿತು. ಬೇಗಬೇಗ ಚೇತರಿಸಿಕೊಳ್ಳತೊಡಗಿದಳು. ಇನ್ನು ಹದಿನೈದು ದಿವಸಗಳಿದ್ದು ಹೋಗಬಹುದೆಂದು

ಡಾಕ್ಟರೂ ಹೇಳಿದರು. ಆ ದಿನ ಸಾಯಂಕಾಲ ನರ್ಸು ಈ ವಿಚಾರ ವನ್ನು ಚಂದ್ರುವಿಗೆ ಹೇಳಿದಳು. ಅವನಿಗೆ ಆ ಮಾತು ಮಾತ್ರ ಇಷ್ಟವಾಗಲಿಲ್ಲ. ಕಾಮಾಕ್ಷಿ ಮನೆಗೆ ಬಂದು ಬಿಟ್ಟರೆ ತನ್ನ, ಮೀನಾಕ್ಷಿಯ ಸುಖಜೀವನಕ್ಕೆ ಕಲ್ಲು ಬಿದ್ದಂತೆ. ಅವನು ಕಾಮಾಕ್ಷಿ ಯನ್ನು ಅಕ್ಕರೆಯಿಂದ ನೋಡಿಕೊಳ್ಳಲು ಸಿದ್ಧನಾಗಿದ್ದನು. ಆದರೆ ಅವಳನ್ನು ಪ್ರೇಮಿಸಲು ಸಿದ್ಧನಾಗಿರಲಿಲ್ಲ. ತನ್ನ ಪ್ರೇಮವನ್ನೆಲ್ಲ ಮೀನಾಕ್ಷಿಗೆ ಧಾರೆ ಎರೆದಿದ್ದನು. ಭಾರವಾದ ಮನಸ್ಸಿನಿಂದ ಮನೆಗೆ ಮರಳಿ ಮೀನಾಕ್ಷಿಗೆ ಸುದ್ದಿ ತಿಳಿಸಿದನು.

" ಏನು ಮೀನಾ, ಇನ್ನು ಹದಿನೈದು ದಿವಸಗಳಿಗೆ ಅವಳು ಬಂದು ಬಿಡುತ್ತಾಳಲ್ಲಾ "

ಮೀನಳ ಹೃದಯದಲ್ಲಿ ಅರೆಕ್ಷಣ ದುಃಖ ಮೂಡಿತು. ಅವಳಿಗೂ ಆ ಮಾತು ರುಚಿಸಲಿಲ್ಲ. ಆದರೆ ಮೀನಾ ಎಚ್ಚೆತ್ತುಕೊಂಡು ಸಂತೋಷದಿಂದ ಹೇಳಿದಳು.

" ಸದ್ಯ ಖಾಯಿಲೆ ವಾಸಿಯಾಗಿ ಅವಳು ಮನೆಗೆ ಬರುವಂತಾ ಯಿತಲ್ಲಾ "

ಚಂದ್ರು ತನ್ನ ಕೊಠಡಿಗೆ ಮೀನಳನ್ನು ಎಳೆದುಕೊಂಡು ಹೋದನು.

ಆ ಹದಿನೈದು ದಿವಸಗಳು ಮೀನಾಕ್ಷಿ, ಚಂದ್ರಶೇಖರರಿಗೆ ರಸ ನಿಮಿಷಗಳಾದವು. ಮೀನಾಕ್ಷಿ ಆನಂದದ ಅತಿರೇಕದಲ್ಲಿ ಮೈ ಮರೆತು ಚಂದ್ರುವಿನ ಸಹವಾಸದಲ್ಲಿ ಹಗಲು ರಾತ್ರಿಗಳನ್ನು ಕಳೆದಳು. ಉಳಿ ದಿರುವ ಅಲ್ಪ ಅವಕಾಶದಲ್ಲಿ ತಮ್ಮ ಜೀವನದ ಸಂಪೂರ್ಣ ಸುಖವನ್ನು ಅನುಭವಿಸಲು ಇಬ್ಬರೂ ನಿರ್ಧರಿಸಿದರು. ಮೀನಳ ಮೈ ಒಮ್ಮೊಮ್ಮೆ ತಾನು ಹೋಗಲೇ ಬೇಕಾಗಿದ್ದ ಗೇರುಸೊಪ್ಪೆಯ ಮನೆಯನ್ನೂ ಅಲ್ಲಿನ ನೀರಸ ಜೀವನವನ್ನೂ ನೆನೆಸಿಕೊಂಡು ಕಂಪಿಸುತ್ತಿದ್ದಿತು. ಬೆದರಿದ ಮಗುವಿನಂತೆ ಚಂದ್ರುವನ್ನು ಬಿಗಿದು ಅಪ್ಪಿಕೊಳ್ಳುತ್ತಿದ್ದಳು. ಆ ಹದಿನೈದು ದಿವಸಗಳು ಚಂದ್ರುವನ್ನು ಸರಿಯಾಗಿ ಸ್ಟುಡಿಯೋವಿಗೂ ಹೋಗಗೊಡಲಿಲ್ಲ. ಚಂದ್ರು ಹಗಲಿರುಳು ತನ್ನ ಕಣ್ಣೆದುರಿಗೇ ಇರ

ಬೇಕೆಂದು ಬಯಸಿದಳು. ಚಂದ್ರು ತುಂಬು ಹೃದಯದಿಂದ ಅವಳ ಪ್ರೇಮಕ್ಕೆ ಚೇತನವಿತ್ತನು.

ತನ್ನ ಪತಿಯಲ್ಲಿ ಕಾಣದ ಸುಖವನ್ನು ಮೀನಾ ಚಂದ್ರುವಿನಲ್ಲಿ ಕಂಡಳು. ಅವಳ ಪತಿ ಕೊಡಲಾರದ ಆತ್ಮತೃಪ್ತಿಯನ್ನು ಚಂದ್ರು ಕೊಟ್ಟನು. ಮೀನಾಕ್ಷಿ ಮೈ ಕೈ ತುಂಬಿಕೊಂಡು ಚಲುವಿನ ರಾಣಿಯಾದಳು. ಅವಳ ಮುಖ ರಾಗರಂಜಿತವಾಗಿ ಮೆರೆಯಿತು.

ಚಂದ್ರುವಿನ ಮುಖದಲ್ಲಿ ಹೊಸದೊಂದು ಕಾಂತಿ ಹುಟ್ಟಿಕೊಂಡಿತು. ಆರು ವರ್ಷಗಳಿಂದ ತನ್ನ ಹೆಂಡತಿಯಲ್ಲಿ ಕಾಣದ ಸುಖವನ್ನು, ತೃಪ್ತಿಯನ್ನು ಚಂದ್ರು, ಮೀನಾಕ್ಷಿಯಲ್ಲಿ ಕಂಡನು. ಅವನಲ್ಲಿ ತೃಪ್ತಿ, ನಗು, ಸಂತೋಷಗಳು ತಾಂಡವವಾಡಿದುವು.

ಆ ಹದಿನೈದು ದಿವಸಗಳು, ಇಬ್ಬರೂ ಒಬ್ಬರನ್ನೊಬ್ಬರು ಅರೆಕ್ಷಣವೂ ಬಿಟ್ಟಿರದಾದರು. ಒಟ್ಟಿಗೆ ವಾಯುವಿಹಾರ ಮಾಡಿದರು. ಅಕ್ಕಪಕ್ಕದಲ್ಲಿ ಕುಳಿತು ಟ್ಯಾಕ್ಸಿಯಲ್ಲಿ ಬೆಂಗಳೂರಿನ ಸುಂದರ ಪ್ರದೇಶಗಳನ್ನೆಲ್ಲಾ ಸುತ್ತಾಡಿ ಬಂದರು. ಒಂದೇ ತಟ್ಟೆಯಲ್ಲಿ ಊಟ ಮಾಡಿದರು. ಆರು ವರ್ಷಗಳಿಂದ ಹೃದಯದಲ್ಲಿ ಅಡಗಿಸಿಟ್ಟುಕೊಂಡಿದ್ದ ಭಾವನೆಗಳನ್ನೆಲ್ಲಾ ಹೊರಗೆಡಹಿದರು. ಜಗಳವಾಡಿದರು. ನಕ್ಕು ನಲಿದರು.

ಕಾಮಾಕ್ಷಿ ಮನೆಗೆ ಬರುವುದಕ್ಕೆ ಮೊದಲ ರಾತ್ರಿ ಅವರ ಬಾಳಿನಲ್ಲಿ ತೀರ ದುರ್ಭರವಾದ ರಾತ್ರಿಯಾಗಿದ್ದಂತೆ ತೋರಿತು. ಆ ದಿನವೆಲ್ಲ ಇಬ್ಬರೂ ಎಲ್ಲೂ ಹೊರಗೆ ಹೋಗಲಿಲ್ಲ. ಪ್ರತಿ ಒಂದು ಕ್ಷಣವನ್ನೂ ಒಟ್ಟಿಗೆ ಕಳೆದರು. ತಮ್ಮ ಭಾವೀ ಜೀವನದ ಭವ್ಯ ಕನಸುಗಳನ್ನು ಕಟ್ಟಿದರು. ಆ ರಾತ್ರಿ ಅವರ ಸರ್ವ ಸ್ವಾತಂತ್ರ್ಯದ ಭಯರಹಿತ ರಾತ್ರಿಯಾಗಿದ್ದಿತು. ಆ ದಿನ ತಪ್ಪಿದರೆ ಮತ್ತೆಷ್ಟು ದಿವಸಗಳಿಗೋ ತಾವು ಸಂಧಿಸುವುದು. ಆ ರಾತ್ರಿ ಅರೆ ನಿಮಿಷವೂ ಕಣ್ಣು ಮುಚ್ಚದೆ ಒಬ್ಬರನ್ನೊಬ್ಬರು ನೋಡುತ್ತ ಮಲಗಿಕೊಂಡರು. ದ್ವಾದಶೀ ಚಂದ್ರನು ಕಿಟಕಿಯ ಮೂಲಕ ತನ್ನ ಸುಕಾಂತಿಯುಕ್ತವಾದ ಹೂ ಬೆಳ್ದಿಂಗಳನ್ನು ಪ್ರೇಮಿಗಳಿಬ್ಬರಿಗೂ ಆಶೀರ್ವಾದದ ರೂಪಕವಾಗಿ ಕಳುಹಿಸಿದ್ದನು.

ಅದರ ಶೀತಲ ಪ್ರತಿಭೆಯಲ್ಲಿ ಚಂದ್ರುವಿನ ಮುಖ ಬೆಳಗಿತು. ಮೀನಳ ಕಣ್ಣುಗಳಿಗೆ ಅವನ ಮುಖ ಚಂದ್ರಬಿಂಬದಂತೆ ಕಂಡಿತು. ಚಂದ್ರುವನ್ನು ಬಿಗಿದಪ್ಪಿ ಚುಂಬಿಸಿದಳು.

"ಚಂದ್ರೂ, ನೀನು ನನಗೆ ಮೋಸ ಮಾಡಕೂಡದು."

"ಇಲ್ಲ ಮೀನಾ. ಭಾಷೆ ಕೊಟ್ಟಿರುವೆನಲ್ಲಾ. ಇನ್ನೂ ನನ್ನ ಮೇಲೆ ಸಂಶಯವೇ ?"

"ಅಕ್ಕನ ಸುಖಕ್ಕಾಗಿ, ನನ್ನ ಸುಖಕ್ಕಾಗಿ ನನ್ನನ್ನು ನಿನಗೆ ಅರ್ಪಿಸಿಕೊಂಡೆ. ನನ್ನ ಆತ್ಮಕ್ಕೆ ಮೋಸಮಾಡಿದರೆ ನೀನು ನಿನ್ನ ಜನ್ಮ ಜನ್ಮಕ್ಕೂ ಆತ್ಮ ವಂಚಕನಾಗುವೆ"

"ನಿನ್ನನ್ನು ಮುಟ್ಟಿ ಪ್ರಮಾಣ ಮಾಡಿರುವೆನಲ್ಲಾ ಮೀನಾ. ನಾನು ಎಂದೆಂದಿಗೂ ಕಾಮಾಕ್ಷಿಯನ್ನು ನೋಯಿಸುವುದಿಲ್ಲ. ನನ್ನ ಹೊಲಸು ಬಾಳಿಗೆ ನೀನು ಒಲಿದು ಬಂದ ದಿನವೇ ಕಡೆಯಾಯಿತು ಮೀನಾ. ಹಾಲು ಕುಡಿದು ಮತ್ತೆ ಆ ಕೊಚ್ಚೆಯ ನೀರಿಗೆ ಕೈ ಒಡ್ಡುವೆನೇ ?"

ಅವನ ಭರವಸೆಯಿಂದ ಅವಳ ಮನಸ್ಸು ತನ್ನ ಭವಿಷ್ಯದ ಬಾಳಿನ ಆನಂದದೆಡೆಗೆ ಧಾವಿಸಿತು. ಮೀನಾ ಉತ್ಸಾಹದಿಂದ ಕೇಳಿದಳು.

"ನನ್ನ ಮಗುವನ್ನು ನೋಡಲು ಬರುವೆ ಅಲ್ಲವೇ ?"

"ಮಗು !........ ಹೋ!........ ಬರದೆ ಉಂಟೆ ಮೀನಾ. ಖಂಡಿತ ಬರುತ್ತೇನೆ. ಅದು ನನ್ನದಲ್ಲವೇ. ಅದೊಂದೇ ನಿಜವಾದ ನನ್ನ ಮಗು."

ಮೀನಳ ಹೃದಯ ಅವನ ಮಾತಿಗೆದ್ದು ಮಿಡಿಯಿತು. ತನ್ನಷ್ಟು ಸುಖಿಗಳು ಈ ಪ್ರಂಚದಲ್ಲಿಯೇ ಇಲ್ಲವೆಂದುಕೊಂಡಳು, ಮೀನಾಕ್ಷಿ. ಉಳಿದಿದ್ದ ರಾತ್ರಿ ಅರೆಕ್ಷಣದಲ್ಲಿ ಮಾಯವಾಯಿತು.

ಮಾರನೆಯ ದಿನ ಹನ್ನೊಂದು ಘಂಟೆಯ ಹೊತ್ತಿಗೆ ಚಂದ್ರಶೇಖರ ಆಸ್ಪತ್ರೆಯಿಂದ ಕಾಮಾಕ್ಷಿಯನ್ನು ಟ್ಯಾಕ್ಸಿಯಲ್ಲಿ ಕರೆದುಕೊಂಡು ಬಂದನು. ಮನೆಯ ಒಳಗೆ ಕಾಲಿಡುತ್ತಿದ್ದಂತೆ ಕಾಮಾಕ್ಷಿಗೆ ಹರ್ಷವಾಯಿತು. ಮೀನಾಕ್ಷಿ ಒಳಗೆ ಓಡಿ ಬೆಳ್ಳಿತಟ್ಟೆಯಲ್ಲಿ ಕದರಿಟ್ಟಿದ್ದ

ಆರತಿಯನ್ನು ತಂದು "ಬಾಕ್ಕಾ ಬಾ.... ಸಧ್ಯ ನಿನ್ನ ಮನೆಗೆ ನೀನು ಮತ್ತೆ ಬರುವಂತಾಯಿತಲ್ಲಾ. ದೇವರು ದೊಡ್ಡವನು" ಎಂದು ಆರತಿ ಬೆಳಗಿದಳು. ಕಾಮಾಕ್ಷಿ ಮನೆಯ ಅಂದ ಚೆಂದ ಓರಣೆಯನ್ನು ನೋಡಿ ಹಿಗ್ಗಿದಳು. ಜಗದೀಶ್, ವನಿತಾ "ಅಮ್ಮಾ.... ಅಮ್ಮಾ...." ಎಂದು ಓಡಿಬಂದು ಅವಳನ್ನು ತಬ್ಬಿಕೊಂಡರು. ಮಕ್ಕಳಿಲ್ಲ ಮೈ ತುಂಬಿಕೊಂಡಿದ್ದರು. ಕೆಲಸದ ಹುಡುಗಿ ಚಿಕ್ಕ ಮಗುವನ್ನು ಅವಳ ಕೈಗೆ ಕೊಟ್ಟಳು. ತಾಯಿಯ ಮುಖವನ್ನು ನೋಡಿ ಸುಜಾತ ನಕ್ಕಳು. ಆನಂದದಿಂದ ಕೇಕೆ ಹಾಕಿ ತಾಯಿಯ ಮುಖಕ್ಕೆ ಮುಖತಿಕ್ಕಿ ಜೊಲ್ಲಿನ ಅಭಿಷೇಕ ಮಾಡಿದಳು. ಕಾಮಾಕ್ಷಿ ಮಕ್ಕಳನ್ನೆಲ್ಲ ಎದೆಗೆ ಅಪ್ಪಿಕೊಂಡು ಮುತ್ತಿಟ್ಟಳು. ತಾಯ್ತನದ ರಸಾನುಭವದಿಂದ, ಕಾಮಾಕ್ಷಿಯ ಕಣ್ಣಲ್ಲಿ ನೀರು ತುಂಬಿತು. ಆ ಆನಂದಭಾಷ್ಪ ತುಂಬಿದ ಕಣ್ದೃಷ್ಟಿಯನ್ನು ಮೀನಾಕ್ಷಿಯೆಡೆಗೆ ಹರಿಸಿ ಕೃತಜ್ಞತೆಯಿಂದ ನೋಡಿದಳು. ಕಾಮಾಕ್ಷಿ ಚಂದ್ರುವಿನ ಕೊಠಡಿಗೆ ಹೋದಳು. ಚಂದ್ರುವಿನ ಕೊಠಡಿ ಹೊಸ ರೂಪ ಹೊತ್ತಿತ್ತು. ಅಲ್ಲಿನ ಪ್ರತಿಯೊಂದು ಪದಾರ್ಥಗಳೂ ಜೀವಕಳೆಯಿಂದ ತುಂಬಿಕೊಂಡಿದ್ದವು. ಕಾಮಾಕ್ಷಿಯ ದೃಷ್ಟಿಗೆ ಗೋಡೆಯನ್ನಪ್ಪಿ ಕುಳತಿದ್ದ ಮೀನಾಕ್ಷಿಯ ಭಾವಚಿತ್ರ ಕಂಡಿತು. ಎಂದಿನಂತಾಗಿದ್ದರೆ ಕಾಮಾಕ್ಷಿಯ ಮುಖ ದ್ವೇಷದಿಂದ ಕಪ್ಪಾಗುತ್ತಿದ್ದಿತು. ಹುಬ್ಬುಗಳು ಗಂಟು ಬೀಳುತ್ತಿದ್ದವು. ಆದರೆ ಆ ದಿನ ಕಾಮಾಕ್ಷಿಯ ಮುಖ ಆನಂದದಿಂದ, ಹೆಮ್ಮೆಯಿಂದ ಅರಳಿತು. ತುಟಿಗಳ ಮೇಲೆ ಕಿರುನಗೆ ಮೂಡಿತು. ತಾನು ತುಂಬಲಾರದ ಸೌಂದರ್ಯವನ್ನು ಮೀನಾ ಆ ಕೊಠಡಿಗೆ ತುಂಬಿದ್ದಳು! ಕಾಮಾಕ್ಷಿಗೆ ತಂಗಿಯ ವಿಷಯದಲ್ಲಿ ಎಂದಿಗೂ ಅಳಿಯದ ಹೆಮ್ಮೆ ಹುಟ್ಟಿತು. ಚಂದ್ರು ಬಾಗಿಲಲ್ಲಿ ನಿಂತು ಎಲ್ಲ ನೋಡುತ್ತಿದ್ದನು. ಕಾಮಾಕ್ಷಿ ಹಿಂತಿರುಗಿ ನೋಡಿದಳು. ಚಂದ್ರು ಮುಸಿನಕ್ಕನು.

ಕಾಮಾಕ್ಷಿ, ತನ್ನ ಬಾಳಿಗೆ ನವಚೈತನ್ಯವನ್ನು ಕೊಟ್ಟು ತನ್ನ ದುಃಖಗಳನ್ನೆಲ್ಲ ಬಗೆ ಹರಿಸಿದ್ದ ಮೀನಾಕ್ಷಿಯ ಬಗ್ಗೆ ಭಯಭಕ್ತಿಗಳಿಂದ ನಡೆದುಕೊಂಡಳು. ಅಗಾಧವಾದ ಪ್ರೀತಿಯನ್ನು ತೋರಿಸಿದಳು.

ಕಾಮಾಕ್ಷಿಯ ಬಲವಂತದಿಂದ ಮತ್ತೆ ನಾಲ್ಕು ದಿವಸಗಳಿದ್ದು ಮೀನಾಕ್ಷಿ ಊರಿಗೆ ಹೊರಟು ನಿಂತಳು.

ಊರಿಗೆ ಹೊರಡುವ ಹಿಂದಲ ದಿನ ಮೀನಾ ಚಂದ್ರರ ಭೇಟಿ "ಮೀನಾ ಫೋಟೋ ಸ್ಟುಡಿಯೋ"ವಿನಲ್ಲಿ ನಡೆಯಿತು.

ಮೀನಾಕ್ಷಿ ಸಂಜೆ ಆರು ಘಂಟೆಗೆ ಸುಜಾತೆಯನ್ನು ಕರೆದುಕೊಂಡು ಸ್ಟುಡಿಯೋವಿಗೆ ಬಂದಳು. ಆ ಸಾಲಿನ ಅಂಗಡಿಗಳೆಲ್ಲ ಬಾಗಿಲು ಹಾಕಿದ್ದುವು. ಚಂದ್ರು ಮಹಡಿಯ ಮೇಲೆ ಸಜ್ಜೆಯ ಬಳಿಯೇ ಒರಗಿಕೊಂಡು ಎದುರುನೋಡುತ್ತಿದ್ದನು. ಚಂದ್ರು ಮುಸಿನಕ್ಕು ಮೀನಾಕ್ಷಿಗೆ ಸ್ವಾಗತ ನೀಡಿದನು. ಕೆಲಸದ ಹುಡುಗನ ಕೈಗೆ ಮಗುವನ್ನು ಕೊಟ್ಟು ಎಂಟಾಣೆಯನ್ನು ಕೈಯಲ್ಲಿಟ್ಟು, ಚಂದ್ರು "ಮಗುವನ್ನು ಲಾಲ್‌ಬಾಗಿಗೆ ಕರೆದುಕೊಂಡು ಹೋಗಿ ತಿರುಗಾಡಿಸಿಕೊಂಡು ಕೊಂಚ ಹೊತ್ತಾಗಿ ಬಾ" ಎಂದನು.

ಆಳು ಕೆಳಗಿಳಿದುಹೋದನು. ಸುಜಾತೆ ಅವನ ಕೈ ಸೇರಿದಳು. ಹೊರಬಾಗಿಲಿನ ಮೇಲೆ "ಈ ದಿನ ರಜ" ಎಂದು ದೊಡ್ಡ ಬೋರ್ಡನ್ನು ಚಂದ್ರು ತೂಗುಹಾಕಿದ್ದನು. ಮೀನಾ ಅದನ್ನು ನೋಡಿ ಮುಸಿನಕ್ಕಳು. ಇಬ್ಬರೂ ಒಳಗೆಹೋಗಿ ಬಾಗಿಲು ಹಾಕಿಕೊಂಡರು. ಮೀನಾಕ್ಷಿ ತನ್ನ ಬಾಲ್ಯದ, ಲಂಗ ಉಟ್ಟ ಭಾವಚಿತ್ರವನ್ನು ಕಣ್ತುಂಬ ನೋಡಿದಳು. ಚಂದ್ರು ಅವಳನ್ನು ಎಳೆದುಕೊಂಡು ಬಂದು ಸರ್ಚ್ ಲೈಟಿನ ಬೆಳಕಿನಲ್ಲಿ ನಿಲ್ಲಿಸಿ, ಹಿಂದೆ ಸರಿದು ಕಲಾವಿದನು ಚಿತ್ರವನ್ನು ಈಕ್ಷಿಸುವಂತೆ ನಾನಾ ಕೋನಗಳಿಂದ ಮೀನಾಕ್ಷಿಯನ್ನು ದಿಟ್ಟಿಸಿದನು. ಮೀನಾ ಭುವನಮೋಹಿನಿಯಂತೆ ಕಂಡಳು. ತುಂಬಿದ ಬಿಳಿಯ ಮೈಗೆ ಅಂಗೈ ಅಗಲದ ಕೆಂಪು ಅಂಚಿನ ನೀಲಿಯ ಸಿಲ್ಕ್ ಸೀರೆ ಹತ್ತಿಕೊಂಡು ಅವಳ ಮೈಮಾಟವನ್ನು ಪ್ರದರ್ಶಿಸುತ್ತಿದ್ದಿತು. ನೀಲಿಯ ಸೀರೆಗೆ ಹೊಂದಿಕೊಂಡಂತೆ ಮೀನಾ ತಿಳಿಹಳದಿಯ ಸ್ಯಾಟಿನ್ ಕುಪ್ಪಸ ತೊಟ್ಟಿದ್ದಳು. ಕತ್ತಿನಲ್ಲಿ ಉಬ್ಬಿದ ಬಿಳಿಯ ಚರ್ಮದ ಮೇಲೆ ದೃಷ್ಟಿ ಬೊಟ್ಟುಗಳಿಟ್ಟಂತೆ ಕರಿಯಮಣಿ ಮಾಲೆ ಶೋಭಿಸುತ್ತಿದ್ದಿತು. ಅದರೊಡನೆ ಮಿಂಚುತ್ತಿದ್ದ ಕೆಂಪು ಬಂಗಾರದ ಎರಡೆಳೆ ಅವಲಕ್ಕಿ ಸರ. ಮೀನಾ ನಿಡಿಗೂದಲನು

ಎತ್ತಿ ಸುತ್ತುಕಟ್ಟಿದ್ದಳು. ಅದರ ಸುತ್ತಲೂ ಕನಕಾಂಬರದ ದಂಡೆಯು ಕುಳಿತುಕೊಂಡಿದ್ದಿತು. ವಿಶಾಲವಾದ ನೀಲನೇತ್ರಗಳು ಬೆಳಕಿಗೆ ಫಳ್ಳನೆ ಮಿಂಚಿದುವು. ತಾಂಬೂಲದ ಕೆಂಪಿನಿಂದ ತುಟಿಗಳು ರಾಗ ರಂಜಿತವಾಗಿದ್ದುವು. ಚಂದ್ರುವಿನ ಮೈ ನವಿರೆದ್ದಿತು. ಮುಂದೆ ನುಗ್ಗಿ ಮೀನಾಕ್ಷಿಯನ್ನು ಬಿಗಿದಪ್ಪಿದನು. ಮೀನಾಕ್ಷಿಯ ಮೈಮೇಲೆ ಮುತ್ತಿನ ಮಳೆಗರೆದನು. ಅವನ ಎದೆ ಉದ್ವೇಗದಿಂದ ಹೊಡೆದುಕೊಳ್ಳುತ್ತಿದ್ದಿತು. ಅವಳ ತಲೆಯನ್ನು ಹಿಂದಕ್ಕೆ ಆನಿಸಿ, ಮುಖದಲ್ಲಿ ಮುಖವಿಟ್ಟು ಕೇಳಿದನು.

" ಮೀನಾ ನೀನು ನಾಳೆ ಹೋಗಲೇ ಬೇಕೇ "

ಮೀನಾ ಕಣ್ಣು ಮಿಟಕಿಸಿ ತಲೆ ಅಲ್ಲಾಡಿಸಿದಳು. ಚಂದ್ರುವನ್ನೇ ಎವೆಯಿಕ್ಕದೆ ದಿಟ್ಟಿಸಿ ನಿಟ್ಟುಸಿರಿಟ್ಟಳು. ಚಂದ್ರು ದೈನ್ಯದಿಂದ ಕೇಳಿ ಕೊಂಡನು.

" ಬೇಡ ಮೀನಾ. ನನ್ನನ್ನು ಬಿಟ್ಟು ಹೋಗಬೇಡ."

" ಸಾಧ್ಯವೇ ಚಂದ್ರು.... .... ...."

" ಇನ್ನೂ ಒಂದು ಹದಿನೈದು ದಿವಸಗಳು ಇರಲು ಸಾಧ್ಯವಿಲ್ಲವೇ ಮೀನಾ "

" ಇಲ್ಲ ಚಂದ್ರು ಸಾಧ್ಯವಿಲ್ಲ. ಅವರಿಗೆ ಕೋಪ ಬರುವುದು."

" ಇನ್ನೂ ಅವನ ಯೋಚನೆ ಮಾಡುವೆಯಾ ಮೀನಾ "

" ಸಮಾಜ ಚಂದ್ರು........ಜನಗಳ ಕಣ್ಣಿಗೆ ಮಣ್ಣೆರಚಬೇಕು. ಮೋಸದಿಂದ ಮೋಸವನ್ನು ಗೆಲ್ಲಬೇಕು. ಈಗ ನಾನು ಹೋಗಬೇಡವೇ. ನಾನು ಮಾಡಬೇಕಾದ ಕೆಲಸಗಳು ಬಹಳ ಇರುವುವು. ಮೊನ್ನೆಯೇ ನಿನಗೆ ಹೇಳಲಿಲ್ಲವೇ ಚಂದ್ರು"

ಮೀನಾ ಕಿರುನಗೆ ನಕ್ಕಳು ಅವನಿಗೆ ಅರ್ಥವಾಯಿತು ! ಚಂದ್ರು ಅವಳನ್ನು ಮೆತ್ತನೆಯ ಜಮಖಾನದ ಮೇಲೆ ಕೂಡಿಸಿದನು. ಅವಳು ಹೂವಿನ ಹಾಸಿಗೆಯಂತಿದ್ದ ಆ ಜಮಖಾನದಮೇಲೆ ಉರುಳಿಕೊಂಡಳು.

" ಮೀನಾ............"

" ಏನು ಚಂದ್ರು............"

" ನಾಳೆ ಆಗದಿರಲೆಂದು ನೀನು ಬಯಸುವುದಿಲ್ಲವೇ ?"

" ನಾವು ಬಯಸಿದುದೆಲ್ಲಾ ದೊರೆಯುವುದೇ ಚಂದ್ರು"

" ಈಗ ದೊರೆತಿಲ್ಲವೇ "

" ಆದರೆ........ನಾಳೆ "

ಚಂದ್ರು ಮೀನಳ ಕಣ್ಣಲ್ಲಿ ಕಣ್ಣಿಟ್ಟು ನೋಡಿದನು.

" ಇಂದು ಅನುಭವಿಸಿದ್ದೇ ನಮ್ಮದು ಮೀನಾ. ನಾಳಿನ ಮಾತು ನಾಳೆಗೆ."

" ಅಂದರೆ ನೀನು ಅಲ್ಲಿಗೆ ಬರುವುದಿಲ್ಲವೆ ?"

" ಎಲ್ಲಿಗೆ "

" ಗೇರುಸೊಪ್ಪೆಗೆ........ನನ್ನ ಮನೆಗೆ "

" ನನ್ನದಲ್ಲವೇ "

" ಮನೆ ನಿನ್ನದಲ್ಲ. ಈ ಹೃದಯ ನಿನ್ನದು"

ಚಂದ್ರುವಿನ ಮುಖ ಅವಳ ಮಾತುಗಳನ್ನು ಕೇಳಿ ವಿಕಸಿತ ವಾಯಿತು. ಅವಳ ಪ್ರೇಮಮಯ ಕಂಠಮಾಧುರ್ಯಕ್ಕೆ ಅವನ ಮೈ ಕಂಪಿಸಿ ನವಿರೆದ್ದಿತು.

" ನನಗೆ ಹೀಗೆಯೇ ಇದ್ದುಬಿಡೋಣವೆನ್ನಿಸಿದೆ. ಆ ನಾಳೆಯೇ ಬರದಿರಲೆಂದು ಶಾಪ ಕೊಡುತ್ತೇನೆ ಮೀನಾ "

ಮೀನಾ ಅವನ ಮಾತಿಗೆ ಮುಸಿನಕ್ಕಳು. ಅವಳು ಅವನ ಎಡ ಗೈಯ್ಯ ಬೆರಳಿನೊಡನೆ ಆಡುತ್ತಿದ್ದಳು. ಚಂದ್ರುವಿನ ಬೆರಳಲ್ಲಿದ್ದ ವಜ್ರ ದುಂಗುರವನ್ನು ಬೆಳಕಿಗೆ ಹಿಡಿದು ಅದು ಫಳ್ಳನೆ ಮಿಂಚುತ್ತಿದ್ದುದನ್ನು ಹಿಗ್ಗಿನಿಂದ ನೋಡುತ್ತಿದ್ದಳು. ಚಂದ್ರು ತಕ್ಷಣ ಕೇಳಿದನು.

" ಮೀನಾ, ಇದು ನಿನಗೆ ಬೇಕೇ ?"

" ನನಗೆ ! ವಜ್ರದುಂಗುರ !"

" ಏಕೆ ಮೀನಾ ಆಶ್ಚರ್ಯ. ಇಂತಹ ಸಾವಿರ ಉಂಗುರಗಳಾದರೂ ನಿನಗೆ ಕಮ್ಮಿಯೇ. ನನ್ನ ಜೀವವೇ ನಿನಗೆ ಮುಡಿಪು ಮೀನಾ. ನೀನು ನನ್ನ ದೇವತೆ."

ಮೀನಾ ಎವೆಹಾಕದೆ ಚಂದ್ರುವನ್ನು ದಿಟ್ಟಿಸಿದಳು. ತನ್ನ ವಿಶಾಲತೆ

ಯಲ್ಲಿ ಚಂದ್ರುವಿನ ಸೌಂದರ್ಯ, ಪ್ರೇಮಗಳನ್ನೆಲ್ಲ ಯಾವ ಕಾಲಕ್ಕೂ ತುಂಬಿಕೊಳ್ಳುತ್ತಿರುವಂತೆ ಕಂಡವು ಆ ಚೆಲುವಾದ ಕಣ್ಣುಗಳು.

ಚಂದ್ರು ಎದ್ದು ಕುಳಿತನು. ತನ್ನ ಬೆರಳಿನಿಂದ ವಜ್ರದುಂಗುರವನ್ನು ತೆಗೆದು ಮೀನಾಕ್ಷಿಯ ಬೆರಳಿಗೆ ತೊಡಿಸಿ, ಅದನ್ನು ಬೆಳಕಿಗೆ ಹಿಡಿದು ನೋಡಿ ಆತ್ಮಾನಂದವನ್ನು ಅನುಭವಿಸಿದನು. ಮೆಲ್ಲನೆ ಮೀನಳ ಮೇಲೆ ಬಾಗಿ ಅವಳ ಕಿವಿಯಲ್ಲಿ ಉಸುರಿದನು.

" ಬೆಳದಿಂಗಳಿನಲ್ಲಿ ತಾರೆ ಉದಯಿಸಿದಂತಾಯಿತು."

ಮೀನಳ ಮೈ ಆ ಪ್ರೇಮದ ಸ್ವರ ಮಾಧುರ್ಯಕ್ಕೆ ಕಂಪಿಸಿತು. ಆನಂದದಿಂದ ಪುಳಕಿತವಾಯಿತು. ಚಂದ್ರುವನ್ನು ತನ್ನೆಡೆಗೆ ಎಳೆದುಕೊಂಡು ಮಧುರವಾಗಿ ಕೇಳಿದಳು.

" ಹಾಗಾದರೆ ನಾನು ಬೆಳದಿಂಗಳೇ "

" ಬೆಳದಿಂಗಳ ಬೆಳದಿಂಗಳು. ನೀನು ದೇವಲೋಕದ ಸ್ವರ್ಣಪ್ರಭೆ."

ಮೀನಾ ಕಣ್ಣರಳಿಸಿ ಚಂದ್ರುವನ್ನು ಅರೆಕ್ಷಣ ನೋಡಿದಳು. ಚಂದ್ರು ಕಂಪಿತ ಸ್ವರದಲ್ಲಿ ಕೇಳಿಕೊಂಡನು.

" ಮೀನಾ, ಈ ಉಂಗುರ ನಮ್ಮ ಪ್ರೇಮದ ಸಂಕೇತ. ಹುಷಾರಾಗಿಟ್ಟುಕೋ. ಇದು ಎಂದೆಂದಿಗೂ ನಿನ್ನದೇ "

ಅವನ ಕಂಠ ಗದ್ಗದಿತವಾಯಿತು. ಪ್ರೇಮದ ಪರಮಾನುಭವವಾಗಿ ಅವನ ಕಣ್ಣಲ್ಲಿ ನೀರೂರಿತು. ನಾಳೆ ಮೀನಾ ಹೊರಟುಹೋಗುವಳಲ್ಲಾ ಎಂಬ ದುಃಖವೂ ಸೇರಿತು.

ಮೀನಾಕ್ಷಿಯ ಬಲಗಣ್ಣು ಅದುರಿತು! ಅವಳ ಮೈ ಕಂಪಿಸಿತು! ಕಂಪಿತ ಸ್ವರದಲ್ಲೇ ಮೃದುಮಧುರವಾಗಿ ಹೇಳಿದಳು.

" ಆಗಲಿ ಚಂದ್ರು, ಎಂದೆಂದಿಗೂ ಇದು ನನ್ನದೇ. ಇದು ನನ್ನ ಮಾನಕಾಯುವ ದೇವತೆ."

ಯಾವುದೋ ಗುಪ್ತಶಕ್ತಿ ಅವಳ ಬಾಯಲ್ಲಿ ಆ ಮಾತನ್ನಾಡಿಸಿತು. ಯಾವುದೋ ಭಯಂಕರ ಯೋಚನೆಯಿಂದ ಅವಳ ಮೈ ಅದುರಿತು.

ಗಡಿಯಾರದಲ್ಲಿ ಏಳು ಘಂಟೆ ಹೊಡೆಯಿತು.

ಚಂದ್ರುವಿಗೆ ಮುತ್ತಿನ ಕಡೆಯು ಸುಂಕ ತೆತ್ತು, ಮೀನಾಕ್ಷಿ ಮನೆಗೆ ಹೊರಟಳು. ಹೋಗುವಾಗ ಮತ್ತೊಮ್ಮೆ ತನ್ನ ಬಾಲ್ಯದ ಚಿತ್ರವನ್ನು ನೋಡಿ ಹೊರಗೆ ಬಂದಳು.

ಮೀನಾಕ್ಷಿ ಹೊರಡುವ ದಿನ ಕಾಮಾಕ್ಷಿ ತಂಗಿಗೆ ತಾನೇ ಔತಣದ ಅಡಿಗೆ ಮಾಡಿ ಬಡಿಸಿದಳು. ಅವಳು ಅಡಿಗೆ ಮಾಡಿ ಹಾಕುವಷ್ಟು ಚೇತರಿಸಿಕೊಂಡಳಲ್ಲಾ ಎಂದು ಮೀನಾಕ್ಷಿಗೆ ತೃಪ್ತಿಯಾಯಿತು. ಕಾಮಾಕ್ಷಿ ಗಂಡನಿಗೆ ಹೇಳಿ ಎಂಭತ್ತು ರೂಪಾಯಿ ಹುಟ್ಟಿಸಿ ಒಂದು ನೀಲಿಯ ಜರತಾರಿ ಸೀರೆಯನ್ನೂ, ಖಣವನ್ನೂ ತರಿಸಿ ತಂಗಿಗೆ ಅರಿಶಿನ ಕುಂಕುಮ ಇಟ್ಟು ತಾಂಬೂಲ ಕೊಟ್ಟಳು. ಮೀನಾಕ್ಷಿ ಅವಳಿಗೆ ತಾಯಿಯಂತೆ ಉಪದೇಶ ಮಾಡಿದಳು.

"ಅಕ್ಕ, ಇನ್ನು ನೀನು ಹೆದರಿಕೊಳ್ಳಬೇಡ- ತಂಗಿಯಾಗಿ ನಿನ್ನ ಮನೆ ಸೇರಿದ್ದಕ್ಕೆ, ನಿನ್ನ ಮನೆಯನ್ನು ನಿಲ್ಲಿಸಿದೆ. ಅದೇ ನನಗೊಂದು ಹೆಮ್ಮೆ. ಚಂದ್ರು ಬಹಳ ಒಳ್ಳೆಯವನು. ಅವನನ್ನು ಚೆನ್ನಾಗಿ ನಡೆಸಿಕೊಳ್ಳುವುದು ನಿನ್ನ ಕೈಯಲ್ಲಿದೆ. ಚಂದ್ರುವು ನೀನು ಬದುಕಿರುವ ತನಕ ನಿನಗೆ ಇನ್ನು ಕಷ್ಟ ಕೊಡುವುದಿಲ್ಲ. ಅವನು ನನಗೆ ಪ್ರಮಾಣ ಮಾಡಿದ್ದಾನೆ."

"ಮೀನಾ, ಸಾಯುವ ತನಕ ನಿನ್ನನ್ನು ದೇವತೆಯಂತೆ ಪೂಜೆ ಮಾಡುತ್ತೇನೆ. ನನ್ನ ಸಂಸಾರ ಸರಿಹೋಗುವುದಕ್ಕಿಂತ ನನಗಿನ್ನೇನು ಸುಖಬೇಕು ಹೇಳು. ನೀನು ನನ್ನ ಭಾಗದ ದೇವರಾಗಿ ಬಂದು ನನ್ನನ್ನೂ ಮಕ್ಕಳನ್ನೂ ಕಾಪಾಡಿದೆ."

"ಅಷ್ಟು ದೊಡ್ಡ ಮಾತು ಬೇಡ ಅಕ್ಕಾ"

ಮೀನಾಕ್ಷಿ ಅಕ್ಕನಿಗೆ ನಮಸ್ಕಾರ ಮಾಡಿದಳು.

"ನೂರು ವರ್ಷ ಸುಮಂಗಲಿಯಾಗಿ ಬಾಳು. ಮುಂದಿನ ಸಾರಿ ನಾನು ಬರುವಾಗ ನಿನ್ನ ಬಾಣಂತನಕ್ಕೇ ಬರುವುದು"

ಎಂದು ಕಾಮಾಕ್ಷಿ ಹರಸಿದಳು.

ಮೀನಾಕ್ಷಿ ಸರ್ರನೆ ಕಾಮಾಕ್ಷಿಯ ಮುಖವನ್ನು ನೋಡಿದಳು. ಅವಳ ಮುಖದ ಮೇಲೆ ಸಂಶಯದ ಒಂದು ಕಪ್ಪು ತೆರೆ ಮೂಡಿ

ಮಾಯವಾಯಿತು. ಕಾಮಾಕ್ಷಿ ಏಕೆ ಆ ರೀತಿ ಮಾತನಾಡಿದಳೋ? ಆದರೆ ಅವಳು ತುಂಬು ಹೃದಯದಿಂದ ಆ ಮಾತನ್ನಾಡಿದ್ದಳು.

ಮೀನಾಕ್ಷಿಗೆ ನಾಚಿಕೆಯಿಂದ ಮುಖ ಕೆಂಪಾಯಿತು. ಕಾಮಾಕ್ಷಿಯ ಮಾತು ನಿಜವಾಗಲಿ ಎಂದು ದೇವರಲ್ಲಿ ಹರಿಸಿಕೊಂಡಳು.

ಚಂದ್ರು ಗಾಡಿತಂದನು. ಮಕ್ಕಳೆಲ್ಲ ಚಿಕ್ಕಮ್ಮ ಹೊರಟು ಹೋಗುವಳೆಂದು ಅತ್ತರು. ಮೀನಾಕ್ಷಿ ಮಕ್ಕಳನ್ನು ಸಮಾಧಾನಮಾಡಿ, ಎಲ್ಲರಿಗೂ ರುಪಾಯಿಗಳನ್ನು ಕೊಟ್ಟು ಗಾಡಿ ಹತ್ತಿದಳು. ಸುಜಾತ ತಾನೂ ಬರಬೇಕೆಂದು ಚಿಟ್ಟನೆ ಚೀರಿ ಅತ್ತಳು. ಕಾಮಾಕ್ಷಿ ಕಣ್ಣೀರು ಕರೆದಳು. ಮೀನಾಕ್ಷಿಯ ಹೃದಯ ಮಕ್ಕಳನ್ನು ಬಿಟ್ಟುಹೋಗಲಾರದೆ ಅತ್ತಿತ್ತು. ಅವಳ ಕಣ್ಣಲ್ಲಿ ನೀರೂರಿತು.

ಗಾಡಿಮರೆಯಾಯಿತು. ಮೀನಾ ಕಣ್ಣೊರಸಿಕೊಂಡಳು.

ಚಂದ್ರು ಮೀನಾಕ್ಷಿಯ ಕೈ ಹಿಡಿದು ಕುಳಿತಿದ್ದನು. ಅವನ ಮುಖ ಬಾಡಿ ಹೋದಂತಾಗಿದ್ದಿತು. ಅಡಿಗಡಿಗೆ ಮೀನಾಕ್ಷಿಯ ಮುಖವನ್ನು ನೋಡುತ್ತಿದ್ದನು. ಅವನಿಗೆ ಬೆಳಿಗ್ಗೆಯಿಂದ ಮನಸ್ಸು ಸಮಾಧಾನವಿರಲಿಲ್ಲ. ಮೀನಾಕ್ಷಿ ಹೊರಟು ಹೋದರೆ, ತನ್ನ ಬಾಳು ಹೇಗೆಂದು ಯೋಚನೆ ಹತ್ತಿದ್ದಿತು. ಮೀನಾಕ್ಷಿ ತನ್ನವಳೇ. ತಾನು ಬೇಕಾದಾಗ ಹೋಗಿ ಮೀನಾಕ್ಷಿಯನ್ನು ಕಂಡು ಬರಬಹುದು. ಅವನು ತಿಂಗಳಿಗೊಂದು ಸಾರಿ ಗೇರುಸೊಪ್ಪೆಗೆ ಹೋಗಿ ಬರಬೇಕೆಂದು ಯೋಚಿಸಿಕೊಂಡನು. ಆ ಯೋಚನೆ ಒಂದೇ ಅವನಿಗೆ ಸಮಾಧಾನ ತರುತ್ತಿದ್ದಿತು.

ಗಾಡಿ ನಿಲ್ದಾಣವನ್ನು ತಲಪಿತು. ಹೊರಡುವುದಕ್ಕೆ ಇನ್ನೂ ಅರ್ಧ ಘಂಟೆಯಿದ್ದಿತು. ಇಬ್ಬರೂ ಬಾರ್‌ಗೆ ಹೋಗಿ ಬಿಸ್ಕತ್ತು, ಟೋಸ್ಟುಗಳನ್ನು ತಿಂದು ಕಾಫಿಕುಡಿದು ಬಂದರು. ಚಂದ್ರು ಮೀನಾಕ್ಷಿಗೆ ಸೆಕೆಂಡ್ ಕ್ಲಾಸ್ ಟಿಕೀಟು ತೆಗೆದುಕೊಟ್ಟು ಸರಿಯಾದ ಸ್ಥಳ ನೋಡಿ ಕೂಡಿಸಿದನು. ಒಬ್ಬಾಕೆ ಇಂಡಿಯನ್ ಕ್ರಿಶ್ಚಿಯರ್ನ ತನ್ನ ಮಗುವಿನೊಡನೆ ಮೀನಾಕ್ಷಿಯ ಎದುರು ಸೀಟಿನಲ್ಲಿ ಕುಳಿತಿದ್ದಳು.

ಚಂದ್ರು ಹೊರಗಡೆ ಕಿಟಕಿಯ ಹತ್ತಿರ ನಿಂತುಕೊಂಡು ಮೀನಾಕ್ಷಿಯನ್ನೇ ಎವೆಹಾಕದೆ ನೋಡುತ್ತಿದ್ದನು. ಮೀನಾಕ್ಷಿಯ

ಕಣ್ಣು ತೇವವಾಗಿದ್ದಿತು. ಉಕ್ಕಿ ಬರುತ್ತಿದ್ದ ದುಃಖವನ್ನು ತಡೆದು ಕೊಳ್ಳುತ್ತಿದ್ದಳು. ಚಂದ್ರು ಕಿಟಕಿಯ ಕಟ್ಟೆನ ಮೇಲಿದ್ದ ಅವಳ ಕೈಗಳನ್ನು ಹಿಡಿದುಕೊಂಡು ಮೆಲ್ಲನೆ ಕೇಳಿದನು.

"ಇನ್ನೂ ಅಳುತ್ತಿದ್ದೀಯಾ ? "

" ನಿನಗೆ ಅಳು ಬರುವುದಿಲ್ಲವೇ ? "

" ನಮಗೆ ಅದನ್ನು ತಡೆದಿಟ್ಟುಕೊಳ್ಳುವ ಶಕ್ತಿಯಿದೆ "

" ನಮಗೆ ಆ ಶಕ್ತಿ ಇಲ್ಲವಲ್ಲ. ನೀವು ಗಂಡಸರು. ಎಲ್ಲಾ ಬೇಗ ಮರೆತು ಬಿಡುತ್ತೀರಿ."

" ಆದರೆ ನಾನು ಬೇರೆಯ ತರಹ ಮೀನಾ "

" ನೀನು ಖಂಡಿತ ನನ್ನ ಯೋಚನೆ ಮಾಡುತ್ತಿರಕೂಡದು."

" ಈಗ ತಾನೇ ನೀನೇ ಹೇಳಿದೆ. ಮಾಡದೇ ಇರಲು ಸಾಧ್ಯವೇ ಇಲ್ಲ."

" ನೀನು ಗೇರುಸೊಪ್ಪೆಗೆ ಬರುವುದಿಲ್ಲವೇ ? "

" ಬರದೇ ಇರಲು ಸಾಧ್ಯವೇ. ತಿಂಗಳಿಗೊಂದು ಸಾರಿಯಾದರೂ ಬರುತ್ತೇನೆ "

" ನಿಜವಾಗಿ .... .... ! "

" ನಿಜವಾಗಿ ಮೀನಾ. ನನ್ನ ಬಾಳಿನ ಸುಳ್ಳೆಲ್ಲ ಸತ್ತು ಹೋಯಿತು."

" ಕಾಗದ ಬರೆಯುತ್ತೀ ತಾನೆ "

" ನಿನ್ನ ಯಜಮಾನರಿಗೆ ತಿಳಿದರೆ !"

" ಪರವಾಗಿಲ್ಲ ಬರಿ. ಆದರೆ ಭಾನುವಾರ ನನಗೆ ತಲಪುವಂತೆ ಮಾತ್ರ ಬರೆಯಬೇಡ. ಅವರು ಆ ದಿನವೆಲ್ಲಾ ಮನೆಯಲ್ಲೇ ಇರುತ್ತಾರೆ ! ಸಮಯ ಸಂದರ್ಭ ಹೇಗಿರುತ್ತೋ. ನಮ್ಮ ಹುಷಾರಿನಲ್ಲಿ ನಾವಿರಬೇಕು."

" ನೀನೂ ಬರೆಯುತ್ತೀಯಾ "

" ವಾರಕ್ಕೊಂದು ಬರೆಯುತ್ತೀನಿ "

" ಮೀನಾ, ಈಗ ನೀನು ಎಷ್ಟು ಸುಂದರಳಾಗಿ ಕಾಣುತ್ತೀಯ,

ನಿನಗೆ ಗೊತ್ತೆ "

"ಆಹಾ !........"

"ನೀನು ಈ ರೂಪನ್ನೇ ಉಳಿಸಿಕೊಂಡು ಬರುವೆನೆಂದು ಆಣೆಯಿಟ್ಟು ಹೇಳು"

"ಸತ್ಯವಾಗಿ, ದೇವರಾಣೆಗೂ ನಾನು ನನ್ನ ಫ್ಯೆ ಕೆಡಿಸಿಕೊಳ್ಳುವುದಿಲ್ಲ."

"ಇನ್ನೊಂದು ತಿಂಗಳಿಗೆ ಬರುತ್ತೇನಲ್ಲಾ. ಆಗ ತಿಳಿಯುತ್ತದೆ."

"ಚಂದ್ರೂ, ನೀನು ಈಗ ಎಷ್ಟು ಚೆನ್ನಾಗಿ ಆಗಿದ್ದೀಯಾ ನಿನಗೆ ಗೊತ್ತೆ ?"

"ನನಗೆ ಗೊತ್ತು. ದೊಣ್ಣೆದೊಣ್ಣೆಯಾಗಿ ವಿಕಾರವಾಗಿ ಆಗಿದ್ದೀನಿ"

"ಅಲ್ಲ ಚಂದ್ರು. ನೀನು ರಾಜನ ಹಾಗೆ ಆಗಿದ್ದೀಯ. ನೀನು ನನ್ನ ರಾಜ. ಹೀಗೆಯೇ ಇರಬೇಕು"

"ನೀನು ಹೊರಟು ಹೋದ ಮೇಲೂ !.... ಹುಂ ಆಗಲಿ ಮೀನ ಪ್ರಯತ್ನ ಪಡುತ್ತೇನೆ."

ಮೀನಾಕ್ಷಿಯ ಬಾಯಿಂದ ಅದನ್ನು ಕೇಳಿ ಅವನ ಹೃದಯ ಹಿಗ್ಗಿ ಹೆಮ್ಮೆಯಿಂದ ಮೆರೆಯಿತು.

ರೈಲು ಹೊರಡಲು ಸೂಚಿಸುವ ಮೊದಲ ಘಂಟೆಯಾಯಿತು. ಚಂದ್ರು ಪಕ್ಕದಲ್ಲೇ ಹೋಗುತ್ತಿದ್ದ ಬಿಸ್ಕತ್ತು ಗಾಡಿಯನ್ನು ನಿಲ್ಲಿಸಿ ಮೀನಾಕ್ಷಿಗೆ ನಾಲ್ಕು ಕ್ಯಾಡ್‌ಬರೀ ಚಾಕಲೇಟನ್ನೂ ಎರಡು ಪೊಟ್ಟಣ ಗ್ಲಾಕ್ಸ್ನೋ ಬಿಸ್ಕತ್ತುಗಳನ್ನೂ ತೆಗೆದುಕೊಟ್ಟನು. ಆ ಚಾಕಲೇಟು ಅವರ ಬಾಲ್ಯದ ಸವಿನೆನಪನ್ನು ತಂದಿತು. ಮೀನಾಕ್ಷಿ ಒಂದನ್ನು ಕಚ್ಚಿ ಅಲ್ಲಿಯೇ ತಿಂದಳು. ಮಿಕ್ಕರ್ಧವನ್ನು ಚಂದ್ರುವಿಗೆ ಕೊಟ್ಟಳು.

ರೈಲು ಶಿಳ್ಳು ಹಾಕಿತು ಇನ್ನಿರುವುದು ಒಂದೇ ನಿಮಿಷ. ಅಗಲಿಕೆಯ ದುಃಖ ಒತ್ತರಿಸಿಕೊಂಡು ಬಂದಿತು. ಅವಳ ಬಾಯಿಂದ ಮಾತೇ ಹೊರಡದಾಯಿತು. ಕಣ್ಣುಗಳು ತೇವಗೂಡಿದುವು. ಅವಳು ನೋಡುತ್ತಿದ್ದಂತೆ ಚಂದ್ರುವಿನ ಕಣ್ಣುಗಳಿಂದ ಎರಡು ತೊಟ್ಟು ಕಣ್ಣೀರು ಹರಿದು

ಬಂದಿತ್ತು. ಮೀನಾಕ್ಷಿಗೆ ಆ ಕಣ್ಣೀರನ್ನು ನೋಡಲಾಗಲಿಲ್ಲ. ಅವಳ ಹೃದಯ ಅವಳ ಅಸಹಾಯಕತೆಗೆ ಅನುಕಂಪಿಸಿತು. ಚಂದ್ರು ಧೂಳನ್ನು ಒರಸಿಕೊಳ್ಳುವಂತೆ ಆ ಕಣ್ಣೀರನ್ನು ಕರವಸ್ತ್ರದಿಂದ ತೊಡೆದುಹಾಕಿದನು. ರೈಲು ಹೊರಟುಬಿಟ್ಟಿತು. ಚಂದ್ರು ನಿಲ್ದಾಣದ ಕಡೆಯತನಕ ಅವಳ ಕೈಹಿಡಿದು ನಡೆದುಕೊಂಡು ಹೋದನು. "ಮೀನಾ........ ನನ್ನನ್ನು ಮರೆಯಬೇಡ" ಎನ್ನುತ್ತಲೇ ಇದ್ದನು. ರೈಲಿನ ವೇಗ ಹೆಚ್ಚಿದಂತೆ ಅವನ ಹೃದಯದ ಆವೇಗವೂ ಹೆಚ್ಚಾಯಿತು. ಪೋಲೀಸಿನವನು "ಸಾರ್! ಹಿಂದಕ್ಕೆ ಬನ್ನಿ" ಎಂದು ಕೂಗಿಕೊಂಡನು. ಚಂದ್ರು ಹಿಂದಕ್ಕೆ ಬರಲಿಲ್ಲ. ಸರ್ರನೆ ಬಾಗಿಲನ್ನು ನೂಕಿ ಡಬ್ಬಿಯೊಳಗೆ ಹತ್ತಿ ಮೀನಾಕ್ಷಿಯ ಹತ್ತಿರ ಕುಳಿತುಕೊಂಡುಬಿಟ್ಟನು! ಮೀನಾಕ್ಷಿಯ ಕಣ್ಣೀರು ನಿಂತುಹೋಯಿತು. ಆನಂದ ತುಂಬಿತು. ಎದುರಿಗೆ ಕುಳಿತಿದ್ದ ಕ್ರಿಶ್ಚಿಯನ್ ಆಶ್ಚರ್ಯದಿಂದ ಬಾಯಿಬಿಟ್ಟುಕೊಂಡು ಇವರ ಕಡೆ ನೋಡುತ್ತಿದ್ದಳು. ಮೀನಾಕ್ಷಿ ಆಶ್ಚರ್ಯದಿಂದ ಕೇಳಿದಳು.

"ಏನು ಚಂದ್ರೂ, ನೀನೂ ಬರುತ್ತೀಯಾ. ಟಿಕೀಟು ತೆಗೆದುಕೊಂಡಿಲ್ಲ."

"ಮುಂದಲ ಸ್ಟೇಷನ್ನಿನಲ್ಲಿ ತೆಗೆದುಕೊಳ್ಳುತ್ತೇನೆ. ನಾನೂ ಶ್ರೀರಂಗಪಟ್ಟಣದ ತನಕ ನಿನ್ನ ಜೊತೆ ಬಂದು ಮಾವನನ್ನು ನೋಡಿಕೊಂಡು ಬರುತ್ತೇನೆ. ನಿನ್ನ ಜೊತೆಯಲ್ಲೂ ಇದ್ದಹಾಗಾಯ್ತು. ನಿನ್ನ ಜೊತೆ ಒಂದು ನಿಮಿಷ ಹೆಚ್ಚಾಗಿ ಇರಲು ಅವಕಾಶ ದೊರೆತರೂ ಅದು ನನ್ನ ಭಾಗ್ಯ ಮೀನಾ."

ಮೀನಾಕ್ಷಿಗೆ ಆ ಮಾತಿನಿಂದ ಬಹಳ ನಾಚಿಕೆಯಾಯಿತು. ಅವಳಿಗೆ ಏನು ಉತ್ತರ ಹೇಳಬೇಕೋ ತೋರಲಿಲ್ಲ. ತಕ್ಷಣ ಅವಳ ದೃಷ್ಟಿ ಎದುರು ಸೀಟಿನ ಮೂಲೆಯಲ್ಲಿ ಕಿಟಕಿಯ ಬಳಿ ಕುಳಿತು ತನ್ನ ಕೈಯಲ್ಲಿದ್ದ ಬಿಸ್ಕತ್ತು ಪೊಟ್ಟಣವನ್ನೇ ನೋಡುತ್ತಿದ್ದ ಆ ಕ್ರಿಶ್ಚಿಯನ್ನಳ ಮುದ್ದುಮಗುವಿನೆಡೆಗೆ ಹರಿಯಿತು. ಮೀನಾಕ್ಷಿ ಮುಸಿನಕ್ಕಳು. ಆ ಮಗುವೂ ನಕ್ಕಿತು. ಸರ್ರನೆ ಪೊಟ್ಟಣ ಬಿಚ್ಚಿ ಮೀನಾ ನಾಲ್ಕು ಬಿಸ್ಕತ್ತುಗಳನ್ನು ಆ ಮಗುವಿನ ಕೈಯಲ್ಲಿ ಇಡಲು ಹೋದಳು ಆ ಮಗು

ತಾಯಿಯ ಕಡೆ ಪ್ರಶ್ನಾರ್ಥಕವಾಗಿ ನೋಡಿ ಬೇಡವೆಂದು ತಲೆ ಅಲ್ಲಾಡಿಸಿತು. ಮೀನಾಕ್ಷಿ "ಪರವಾಗಿಲ್ಲಮ್ಮ ತಗೋ........ ಅಮ್ಮ ಏನೂ ಅನ್ನುವುದಿಲ್ಲ" ಎಂದಳು. ಆ ಮಾತು ಅದಕ್ಕೆ ಅರ್ಥವಾಗಲಿಲ್ಲ. ಆ ಮಗುವಿನ ತಾಯಿಯೂ "ನೋ, ನೋ ವೈಡುಯು ಗೀವ್ ಇಟ್ ಟು ಹರ್. ಹೇವ್ ಇಟ್ ಫಾರ್ ಯುವರ್‌ಸೆಲ್ಫ್" ಎಂದು ನಗುತ್ತಾ ಬೇಡವೆಂದಳು. ಚಂದ್ರು ಮೀನಾಕ್ಷಿಯ ಸಹಾಯಕ್ಕೆ ಬಂದನು.

"ಓ, ಆಫ್ಟರ್ ಆಲ್ ವಾಟ್ ಈಸ್ ದೇರ್ ಮ್ಯಾಡಾಮ್. ಬಿಸ್ಕಟ್ಸ್ ಆರ್ ಮೆಂಟ್ ಫಾರ್ ಚಿಲ್ಡ್ರನ್. ಪ್ಲೀಸ್ ಆಸ್ಕ್ ದಟ್ ಚಮ್ ಟು ಹೇವ್ ಇಟ್."

ಎಂದು ಮೀನಾಕ್ಷಿಯ ಕೈಯಿಂದ ಬಿಸ್ಕತ್ತುಗಳನ್ನು ತೆಗೆದುಕೊಂಡು ಆ ಮುದ್ದುಮಗುವಿನ ಕೈಗಿಟ್ಟನು. ಅದರ ತಾಯಿಯೂ "ಟೇಕ್ ಇಟ್ ಚೈಲ್ಡ್........" ಎಂದಳು. ಮಗು ಬಿಸ್ಕತ್ತುಗಳನ್ನು ತೆಗೆದುಕೊಂಡು ಮುದ್ದಾಗಿ "ಥ್ಯಾಂಕ್ಯೂಸರ್. ಥ್ಯಾಂಕ್ಯೂ ಮ್ಯಾಡಾಂ" ಎಂದು ತಲೆಬಗ್ಗಿಸಿ ಎತ್ತಿತು.

ಚಂದ್ರು, ಮೀನಾಕ್ಷಿಯರಿಗೆ ಬಹಳ ಸಂತೋಷವಾಯಿತು.

ರೈಲು ವೇಗವಾಗಿ ಓಡುತ್ತಿತ್ತು. ಮೀನಾಕ್ಷಿ ಸರ್ರನೆ ಗಾಬರಿಯಿಂದ ಕೇಳಿದಳು. "ಚಂದ್ರು, ಕಾಮಾಕ್ಷಿಗೆ ಹೇಳದೆ ಬಂದುಬಿಟ್ವಿ ಪಾಪ! ಎಷ್ಟು ಹೆದರಿಕೊಳ್ಳುತ್ತಾಳೋ"

"ಹೆದರಿಕೆ ಏಕೆ ಮೀನಾ. ಕೆಂಗೇರಿಯಲ್ಲಿ ಟೆಲಿಗ್ರಾಮ್ ಕೊಡುತ್ತೀನೆ."

ಮೀನಾಕ್ಷಿಗೆ ಸಮಾಧಾನವಾಯಿತು. ಚಂದ್ರು ಅವಳ ಪಕ್ಕದಲ್ಲಿ ಸರಿದು ಕುಳಿತನು. ಇನ್ನೇನು ಬೇಕು ಅವಳಿಗೆ. ತನ್ನ ಚಂದ್ರು ಪಕ್ಕದಲ್ಲಿರುವನು. ಅವನ ಮಗು..........?

ರೈಲು ಓಡಿತು. ಅದರ ಓಟದ ಶಬ್ದ ಮೀನಾಕ್ಷಿಯ ಕಿವಿಯಲ್ಲಿ ಮೊರೆಯಿತು. ಅವಳ ಮನಸ್ಸಿಗೆ ರೈಲು "ಚಂದ್ರಮೀನಾ...., ಚಂದ್ರಮೀನಾ........ಚಂದ್ರಮೀನಾ" ಎಂದು ಒಂದೇ ಪಲ್ಲವಿಯನ್ನು ಹಾಡುತ್ತಿದ್ದಂತೆ ತೋರಿತು.

*

## ೧೭

ಒಂದು ವಾರ ತಾಯಿಯ ಮನೆಯಲ್ಲಿ ಇದ್ದು ಮೀನಾಕ್ಷಿ ಗೇರು ಸೊಪ್ಪೆಗೆ ತಂದೆಯೊಡನೆ ವಾಪಸ್ಸು ಬಂದಳು. ತಂದೆಯನ್ನು ಒಂದು ವಾರ ಇಟ್ಟುಕೊಂಡು ಊರಿಗೆ ಕಳುಹಿಸಿದಳು.

ಮೀನಾಕ್ಷಿ ಗೇರುಸೊಪ್ಪೆಯಲ್ಲಿ ಹೊಸ ಜೀವನ ಕಂಡಳು. ರಾಮಚಂದ್ರಯ್ಯ ಹೆಂಡತಿಯ ಮುಖವನ್ನು ನೋಡಿ, "ಅಬ್ಬ! ಮೀನಾಕ್ಷಿ ಎಷ್ಟು ಬದಲಾಯಿಸಿಹೋಗಿದ್ದಾಳೆ. ಇವಳ ಈ ರೂಪು ಎಲ್ಲಿ ಹೋಗಿದ್ದಿತೋ. ಇವಳ ಈ ಉತ್ಸಾಹ, ನಗು ಎಲ್ಲಿ ಅಡಗಿ ಕೊಂಡಿದ್ದಿತೋ" ಎಂದುಕೊಂಡನು.

ಹದಿನೈದು ದಿವಸ ಕಳೆಯಿತು. ಮೀನಾಕ್ಷಿಗೆ ಆಗ ತನ್ನ ಬಯಕೆ ಈಡೇರಿದೆಯೆಂದು ಸ್ಥಿರವಾಯಿತು. ತಾನು ತಾಯಿಯಾಗುವೆನೆಂದು, ಕಾಮಾಕ್ಷಿಯ ಬಾಳಿಗೆ ಸುಖ ಕೊಟ್ಟೆನೆಂದು ಅವಳಿಗೆ ಅವರ್ಣನೀಯ ವಾದ ತೃಪ್ತಿ ದೊರಕಿತು. ಮೀನಾಕ್ಷಿ ರಾಮಚಂದ್ರಯ್ಯನ ಜೊತೆ, ಹದಿನೈದು ದಿವಸ ಊರೂರು ಅಲೆದು ಬಂದಳು. ಮೀನಾಕ್ಷಿಗೆ ಮತ್ತೆ ಆಗುಂಬೆಯ ದರ್ಶನವಾಯಿತು. ಕಡಲನ್ನು ನೋಡಿ ಕಣ್ಣುಗಳಿಗೆ ಹಬ್ಬ ಮಾಡಿಕೊಂಡಳು. ರಾಮಚಂದ್ರಯ್ಯ ಆ ಪ್ರಕೃತಿಯ ಮಡಿಲಲ್ಲಿ ಮೀನಾಕ್ಷಿಯ ಸಹವಾಸದಲ್ಲಿ ಹೊಸ ಸುಖ ಕಂಡನು.

ಊರು ಸುತ್ತಿ ಬರುವುದರಲ್ಲಿ ರಾಮಚಂದ್ರಯ್ಯನಿಗೆ ಆನಂದದ ಸುದ್ದಿ ಕಾದಿದ್ದಿತು. ಅವನಿಗೆ ಸಂಬಳ ತೊಂಭತ್ತು ರೂಪಾಯಿಗಳಿಗೆ ಬಡ್ತಿಯಾಗಿದ್ದಿತು. ಆನಂದದಿಂದ ಮನೆಗೆ ಬಂದನು.

"ಮೀನಾ, ನೀನು ಊರಿಗೆ ಮರಳಿದ ಘಳಿಗೆ ಅಮೃತ ಘಳಿಗೆ. ನನಗೆ ಹದಿನೈದು ರೂಪಾಯಿಗಳ ಸಂಬಳ ಹೆಚ್ಚಾಯಿತು" ಎಂದು ಸಂತೋಷದಿಂದ ಹೇಳಿಕೊಂಡನು.

ಮೀನಾ ತನ್ನ ಹುಟ್ಟುವ ಮಗುವಿಗೆ ಭವ್ಯ ಭವಿಷ್ಯವನ್ನು ಕಟ್ಟಿದಳು.

ಅದಕ್ಕಿಂತ ಹೆಚ್ಚಾದ ಆನಂದ ಅವಳಿಗೆ ದೊರೆತದ್ದು ಮತ್ತೆ ಎರಡು ವಾರ ಕಳೆದ ಮೇಲೆ. ಆ ದಿನ ಚಂದ್ರಶೇಖರ ಬಂದಿಳಿದನು. ರಾಮಚಂದ್ರಯ್ಯ ಕೆಲಸಕ್ಕೆ ಹೊರಟುಹೋಗಿದ್ದನು. ಮೀನಾಕ್ಷಿ ನಗುನಗುತ್ತ ಚಂದ್ರುವಿಗೆ ಸ್ವಾಗತ ನೀಡಿದಳು. ಅವಳ ಉತ್ಸಾಹ ಹೇಳತೀರದು.

"ಚಂದ್ರು, ಕಡೆಗೂ ಬಂದುಬಿಟ್ಟೆಯಾ. ಬರುವುದಿಲ್ಲವೆಂದು ಹೃದಯ ಹೊಡೆದುಕೊಳ್ಳುತ್ತಿದ್ದಿತು."

ಬಳಿಸಾರಿ ಚಂದ್ರು ಕೇಳಿದನು.

"ಹೇಳು ಮೀನಾ, ನಾನು ಅಷ್ಟು ಕೆಟ್ಟವನೇ, ನಿನ್ನನ್ನು ಮರೆಯುವಷ್ಟು ?"

"ಇಲ್ಲ ಚಂದ್ರು ನನಗೆ ಆ ಭಯವಿಲ್ಲ. ಆದರೆ ಹೃದಯದಲ್ಲಿ ಆ ರೀತಿ ಭಾವನೆಗಳು ಹುಟ್ಟುತ್ತವೆ. ಅದು ನನ್ನ ತಪ್ಪಲ್ಲ. ನಿನ್ನ ಮೇಲೆ ಹುಟ್ಟಿರುವ ನನ್ನ ಪ್ರೇಮದ ತಪ್ಪು. ನಿನ್ನನ್ನು ನೋಡ ದಿದ್ದರೆ ಏನೇನೋ ಹುಚ್ಚು ಕಲ್ಪನೆಗಳು ಹುಟ್ಟುತ್ತವೆ. ನನ್ನ ಹೃದಯ ದಲ್ಲಿ ಆಗುವ ಭಾವನೆಗಳ ಕೋಲಾಹಲ ನಿನಗೆ ವರ್ಣಿಸಲು ಸಾಧ್ಯವಿಲ್ಲ ಚಂದ್ರು. ಈ ದಿನ ನನ್ನ ಹೃದಯ ಎಷ್ಟು ಹಗುರವಾಗಿದೆ ಬಲ್ಲೆಯಾ?"

ಚಂದ್ರುವಿನ ಬಾಯಿ ಕಟ್ಟಿದಂತಾಯಿತು. ಒಂದು ತಿಂಗಳ ಅಗಲಿಕೆ ಅವನ ಹೃದಯವನ್ನು ವೇದನೆಯಿಂದ ಮೆತ್ತಗೆ ಮಾಡಿದ್ದಿತು.

"ಮೀನಾ, ನನ್ನ ಮೀನಾ. ನಿನ್ನನ್ನು ಹೊಂದಿದ ನನ್ನ ಬಾಳೆಷ್ಟು ಸೊಗಸು, ಮೀನಾ" ಎಂದು ಕಣ್ಣೀರು ಹಾಕಿದನು.

"ಛೇ, ಇದಕ್ಕೆಲ್ಲ ಅಳುವುದೇ ಚಂದ್ರು" ಎಂದು ಮೀನಾ ತನ್ನ ಸೆರಗಿನಿಂದ ಅವನ ಕಣ್ಣೊರೆಸಿದಳು.

"ಮೀನಾ, ಇದು ಆನಂದ ಬಾಷ್ಪ. ನಿನ್ನ ಪ್ರೇಮದಲ್ಲಿ ನಾನು ಮೂಕನಾಗಿ ಹೋಗಿರುವೆನು. ನಾನೇಕೆ ದುಃಖದಿಂದ ಕಣ್ಣೀರು ಹಾಕಲಿ? ನನಗೆ ಉಳಿದಿರುವುದು ಬರೀ ಸುಖ, ಸಂತೋಷ. ಆ ಸುಖ, ಸಂತೋಷ ಎಲ್ಲವೂ ನೀನೇ ಮೀನಾ."

ಮೀನಾ ಅವನನ್ನು ಕಣ್ಣು ತುಂಬ ನೋಡಿ, ಅವನ ತೆಕ್ಕೆಯಿಂದ

ಬಿಡಿಸಿಕೊಂಡು ಕಾಫಿ, ಉಪ್ಪಿಟ್ಟನ್ನು ಮಾಡಲು ಅಡುಗೆಮನೆಗೆ ಹೋದಳು. ಇಬ್ಬರೂ ಒಟ್ಟಿಗೆ ಕುಳಿತು ಉಪಹಾರ ಮುಗಿಸಿದರು.

ಚಂದ್ರು ಆಫೀಸಿಗೇ ಹೋಗಿ ಪರಿಚಯ ಕೊಟ್ಟು ರಾಮಚಂದ್ರಯ್ಯನನ್ನು ಮಾತನಾಡಿಸಿದನು. ರಾಮಚಂದ್ರಯ್ಯ ಸುಸ್ವಾಗತ ನೀಡಿದನು.

"ಬಹಳ ಅಪರೂಪವಾಗಿ ಬಂದುಬಿಟ್ಟರಿ. ನಿಮ್ಮನ್ನು ನೋಡಿ ಆರು ವರ್ಷಗಳಾಗಿ ಹೋಯಿತು. ನೀವು ಬಂದಿದ್ದು ಬಹಳ ಸಂತೋಷ, ಮಿಸ್ಟರ್ ಚಂದ್ರಶೇಖರ್."

"ಎಲ್ಲಿ ಪುರಸತ್ತೇ ಆಗುತ್ತಿರಲಿಲ್ಲ. ಗೇರುಸೊಪ್ಪೆ ಜಲಪಾತವನ್ನು ನೋಡಿಕೊಂಡು ಹೋಗೋಣವೆಂದು ಬಂದೆ."

"ನಿಮ್ಮ ಹೆಂಡತಿಯನ್ನೂ, ಮಕ್ಕಳನ್ನೂ ಕರೆದುಕೊಂಡು ಬಂದಿದ್ದರೆ ಚೆನ್ನಾಗಿರುತ್ತಿತ್ತು."

"ಏನು ಮಾಡುವುದು. ಏನೋ ತೊಂದರೆ, ಅವಳಿಗೆ ಮೈ ಸರಿಯಾಗಿಲ್ಲ. ನನ್ನ ಸ್ಟುಡಿಯೋವಿಗೆ ಇಲ್ಲಿನ ಸುಂದರ ದೃಶ್ಯಗಳ ಫೋಟೋ ತೆಗೆದುಕೊಂಡು ಹೋಗಬೇಕೆಂದು ಬಹಳ ಆಸೆಯಿತ್ತು. ಬರುವುದಕ್ಕೇ ಆಗುತ್ತಿರಲಿಲ್ಲ. ಪಾಳು ಕೆಲಸ. ಈಗ ಕೊಂಚ ಬಿಡುವು ಸಿಕ್ಕಂತಾಯಿತು. ತಕ್ಷಣ ಹೊರಟು ಬಂದೆ. ಬೆಂಗಳೂರಿನಲ್ಲಿ ಈ ಜಲಪಾತದ ಫೋಟೋವಿಗೆ ಒಳ್ಳೇ ಗಿರಾಕಿಯಿದೆ."

"ನೀವು ಸರಿಯಾದ ಸಮಯಕ್ಕೇ ಬಂದಿರುವಿರಿ. ಈಗ ಫ್ಲಡ್ ಸೀಸನ್ ಶುರುವಾಗಿದೆ. ಆದರೆ ಇನ್ನೂ ಒಂದು ತಿಂಗಳು ಕಳೆಯಬೇಕು. ಜಲಪಾತವನ್ನು ಆಗ ನೋಡಬೇಕು. ಕ್ರಿಸ್‌ಮಸ್ ರಜದಲ್ಲಿ ಬಹಳ ಜನ ವಿಸಿಟರ್ಸ್ ಬೊಂಬಾಯಿ ಮದ್ರಾಸು ಕಡೆಗಳಿಂದ ಬರುತ್ತಾರೆ. ಆಗ ಫ್ಲಡ್ ಲೈಟ್ ಅರೇಂಜುಮೆಂಟು ಬಹಳ ಚೆನ್ನಾಗಿರುತ್ತೆ. ಆಗ ಬನ್ನಿ"

"ನೋಡೋಣ, ಆಗ ಬರುವುದಕ್ಕೆ ಆಗುತ್ತದೋ ಇಲ್ಲವೋ. ಪ್ರಯತ್ನ ಪಡುತ್ತೇನೆ. ಆಗದಿದ್ದರೆ ಮತ್ತೊಮ್ಮೆ ಬಂದರಾಯ್ತು." ಎಂದು ಚಂದ್ರು ಆ ಮಾತನ್ನು ಅಲ್ಲಿಗೇ ಮುಗಿಸಿಬಿಟ್ಟನು.

ರಾಮಚಂದ್ರಯ್ಯ ಕಾಮಾಕ್ಷಿಯ ಮಕ್ಕಳ ಯೋಗಕ್ಷೇಮ ವಿಚಾರಿಸಿದನು. ಬೆಂಗಳೂರಿನ ವ್ಯಾಪಾರ, ಜನಜೀವನಗಳ ವಿಚಾರ ವೆಲ್ಲಾ ಅರ್ಧಘಂಟೆಯಲ್ಲಿ ಮುಗಿದುಹೋಯಿತು.

"ನನಗೆ ಈಗ ತಾನೇ ಇಂಕ್ರಿಮೆಂಟ್ ಆಗಿದೆ. ಕೈತುಂಬ ಕೆಲಸ. ಸೂಪರಿಂಟೆಂಡೆಂಟರಿಗೆ ಒಳ್ಳೇ ಇಂಪ್ರೆಷನ್ ಕೊಡಬೇಕು. ನಾನು ನಿಮ್ಮ ಸೇವೆ ಮಾಡುವುದಕ್ಕೆ ವಿರಾಮವಿಲ್ಲ. ಮೀನಾಕ್ಷಿ ಮನೆಯಲ್ಲೇ ಇದ್ದಾಳೆ. ನೀವು ಸಂಕೋಚ ಪಟ್ಟುಕೊಳ್ಳದೆ ಅವಳ ಸೇವೆ ಸ್ವೀಕರಿಸ ಬೇಕು. ನಾನು ಎಂಟು ಘಂಟೆಗೆ ಕಡಿಮೆ ಮನೆಗೆ ಬರುವುದಕ್ಕಾಗು ವುದಿಲ್ಲ."

"ಪರವಾಗಿಲ್ಲ, ನೀವೇನೂ ಯೋಚಿಸಬೇಡಿ ಮಿಸ್ಟರ್. ರಾಮಚಂದ್ರಯ್ಯ. ನನಗಾಗಿ ನಿಮ್ಮ ಕೆಲಸವನ್ನು ಕೆಡಿಸಿಕೊಳ್ಳಬೇಡಿ. ಮೀನಾಕ್ಷಮ್ಮ ನನಗೇನೂ ಹೊಸಬರಲ್ಲ!"

ಆಫೀಸಿನ ಆಳೊಬ್ಬ ಬಂದು "ಸಾರ್, ಸಾಹೇಬರು ನಿಮ್ಮನ್ನು ಈಗಲೇ ಬರಹೇಳಿದರು" ಎಂದು ಹೇಳಿದ

"ನೀವು ನನಗಾಗಿ ಊಟಕ್ಕೆ ಕಾಯಬೇಡಿ, ಚಂದ್ರಶೇಖರ್. ಎಂಟೂವರೆಯವರೆವಿಗೆ ನೋಡಿ, ನಾನು ಬರದಿದ್ದರೆ ಊಟ ಮಾಡಿ ಬಿಡಿ. ನನಗೆ ನೋಡಿ, ಟೈಮಿಂಗ್ಸೇ ಇಲ್ಲ" ಎಂದು ಆಳಿನೊಡನೆ ಆಫೀಸಿನ ದಾರಿ ಹಿಡಿದನು.

"ಉಂಟೇ....ನೀವು ಬರುವ ತನಕ ಕಾದಿರುತ್ತೇನೆ. ಬೇಗ ಬರಲು ಪ್ರಯತ್ನ ಮಾಡಿ. ಇಬ್ಬರೂ ಒಟ್ಟಿಗೇ ಊಟ ಮಾಡೋಣ" ಎಂದು ಚಂದ್ರು ಕೂಗಿ ಹೇಳಿದ. ಅವನಿಗೆ ರಾಮಚಂದ್ರಯ್ಯನದೇ ಯೋಚನೆ. 'ಛೇ, ಎಂತಹ ಅನ್ಯಾಯ ಮಾಡಿದ. ತನ್ನ ದೇಹ ವನ್ನು ಕೆಡಿಸಿಕೊಂಡು ಸೊಕ್ಕಿ ಸೊರಗಿಹೋಗಿದ್ದಾನೆ. ಮೀನಾಕ್ಷಿಗೆ ಬಹಳ ಅನ್ಯಾಯ ಮಾಡಿಬಿಟ್ಟ. ರಾಮಚಂದ್ರಯ್ಯ ಎಷ್ಟು ಮುದುಕ ನಾಗಿ ಕಾಣುತ್ತಾನೆ. ಮೀನಾ....ಮೀನಾ ನವಯುವತಿ. ಛೇ! ಎಂತಹ ಜೋಡಿ. ಬಹಳ ಅನ್ಯಾಯ' ಎಂದುಕೊಂಡನು.

ಚಂದ್ರುವಿನ ಮನಸ್ಸು ಮೀನಳ ಕಡೆ ಎಳೆಯಿತು. ರಾಮ

ಚಂದ್ರಯ್ಯ ಎಂಟು ಘಂಟೆಯ ತನಕ ಮನೆಗೆ ಬರುವುದಿಲ್ಲ. ಆ ಸದವಕಾಶವನ್ನು ಉಪಯೋಗಿಸಿಕೊಳ್ಳಲು ಚಂದ್ರು ಹತ್ತು ನಿಮಿಷಗಳಲ್ಲೇ ಮನೆ ಸೇರಿಕೊಂಡನು. ಮೀನಾಕ್ಷಿ ಹೊರಗೆ ಬಂದು ಜಗುಲಿಯ ಮೇಲೆ ಜೊತೆಗೆ ಕಾವಲಿರುತ್ತಿದ್ದ ಮುದುಕಿಯನ್ನು ಮನೆಗೆ ಹೋಗೆಂದು ಹೇಳಿದಳು. ಮುದುಕಿ ಕುತೂಹಲದಿಂದ ಕೇಳಿದಳು.

"ಅದು ಯಾರವ್ವಾ ಬಂದವ್ರು ?"

"ನನ್ನ ದೊಡ್ಡಮ್ಮನ ಮಗ ಕಣೆ ಚೆನ್ನಿ. ಏನೋ ಅಪರೂಪಕ್ಕೆ ಬಂದಿದಾನೆ."

"ಹೌದು ಕಾಣ್ರವ್ವ. ನೆಂಟ್ರೇ ಇಲ್ದೆ ಮನೆ ಬಿಕೋ ಅಂತಿತ್ತು. ಇನ್ನೂ ಎಂಟ್ದಿನ ಕಳಸ್ಬೇಡಿ ಅವ್ವ.......ಬುದ್ಯೋರ್ಗೆ ಲಗ್ಣ ಆಗೈತೇನ್ರವ್ವಾ ?"

"ಓ........ಮದ್ವೆ ಆಗಿ ಮೂರು ಮಕ್ಳದಾರೆ."

"ಅಂಗಾ ಬುದ್ದಿ... ....ಎಲ್ಲಾರ್ನೂ ಕರ್ಕೊಂಡು ಬಂದಿದ್ರೆ ಚೆಂದಾಗಿತ್ತು. ಮಕ್ಳಿದ್ರೇ ಮನೇಗೆ ಚೆಂದ."

ಹೀಗೆ ಹೇಳಿ ಚೆನ್ನಿ ಮೀನಾಕ್ಷಿಯ ಮುಖ ನೋಡಿದಳು. ಅವಳಿಗೂ ಒಂದು ವರ್ಷದಿಂದ ಮೀನಾಕ್ಷಿಯೊಡನೆ ಇದ್ದು ಅವಳ ಹೊಟ್ಟೆಯ ಸಂಕಟದ ಅರಿವಾಗಿದ್ದಿತು. ಆಗೀಗ ಅನುಕಂಪ ತೋರಿಸಿ, ಮರುಕಪಟ್ಟು ಮೀನಾಕ್ಷಿಯ ದುಃಖದಲ್ಲಿ ತಾನೂ ಭಾಗಿಯಾಗುತ್ತಿದ್ದಳು. ಮೀನಾಕ್ಷಿ ಆ ದಿನ ಎಂದಿನಂತೆ ಕಣ್ಣೀರು ಹಾಕಲಿಲ್ಲ. ಮುಸಿನಕ್ಕಳು.

"ಚೆನ್ನಿ, ನಮ್ಮ ಮನೆಯಲ್ಲೂ ಒಂದು ಕೂಸು ಹುಟ್ಟೋ ಹಾಗಿದೆ. ನಾನು ಈ ತಿಂಗಳು ಹೊರಗಾಗಿಲ್ಲ."

ಚೆನ್ನಿ ಬಾಯಿಬಿಟ್ಟಳು. "ಹಂಗಾ ಬುದ್ದೀ! ನನ್ನವ್ವಾ ಆ ಸಿವ ದೊಡ್ಡೋನು ಕಾಣ್ರವ್ವ. ನಂಬ್ದೋರ್ಗೆ ಎಂದೂ ಮೋಸ ಮಾಡಾಕಿಲ್ಲ."

"ಚೆನ್ನೀ........ಹುಷಾರು. ಈಗ್ಲೇ ಎಲ್ಲಾರ್ಗೂ ಹೇಳ್ಕೊಂಡು ಬಂದ್ಬಿಡ್ಬೇಡ. ಉಂ....ನಂಗಿನ್ನು ಹೊತ್ತಾಯ್ತು. ಅಡ್ಗೆ ಮಾಡ್ಬೇಕು"

ಮೀನಾಕ್ಷಿ ಬಾಗಿಲು ಹಾಕಿಕೊಂಡು ಒಳಗೆ ಹೊರಟುಹೋದಳು.

ಚೆನ್ನಿ ಮನಸ್ಸಿನಲ್ಲಿಯೇ ಹಿಗ್ಗುತ್ತ ದೇವರಿಗೆ ಸಾವಿರ ನಮಸ್ಕಾರ ಹಾಕುತ್ತ, "ಅಂಗೇ ಆಗ್ಬುಡ್ಲಿ ಶಿವ್ನೇ........ನಮ್ಮ ಅಮ್ಮಾವರ್ಗೆ ಒಂದು ಮಗಾ ಆಗ್ಬಿಡ್ಲಿ. ನಿಂಗೊಂದು ಕಾಯೊಡೀತೀನಿ" ಎಂದು ಹರಕೆ ಹೊತ್ತು ಮೆಲ್ಲನೆ ಹೆಜ್ಜೆ ಹಾಕುತ್ತ ಮನೆಯ ಕಡೆ ಹೊರಟಳು.

ಮೀನಾಕ್ಷಿಯನ್ನು ಎದುರು ನೋಡುತ್ತ ಚಂದ್ರು ಅಡಿಗೆ ಮನೆಯ ಬಾಗಿಲಲ್ಲೇ ನಿಂತಿದ್ದನು. ಮೀನಾಕ್ಷಿ ಬಾಗಿಲ ಬಳಿ ಬಂದ ಕೂಡಲೇ ಚಂದ್ರು ಅವಳನ್ನು ತಡೆದನು........ಕೊಂಚ ಹೊತ್ತಿನ ಮೇಲೆ ಮೀನಾಕ್ಷಿ ತಲೆ ಬಾಚಿ, ಕುಂಕುಮ ಇಟ್ಟುಕೊಂಡು, ಅಡಿಗೆಮನೆಗೆ ಹೋದಳು. ಅವಳ ತುಟಿಗಳಮೇಲೆ ಮುಸಿನಗೆ ಮಿಂಚುತ್ತಿದ್ದಿತು.

ರಾಮಚಂದ್ರಯ್ಯ ಒಂಭತ್ತು ಘಂಟೆಗೆ ಮನೆಗೆ ಬಂದನು. ಚಂದ್ರು ಕುರ್ಚಿಯಮೇಲೆ ಕುಳಿತು ನಿದ್ದೆಮಾಡುತ್ತಿದ್ದವನಂತೆ ನಟಿಸಿದನು. ರಾಮಚಂದ್ರಯ್ಯ ಕೈಕಾಲು ತೊಳೆದುಕೊಂಡು ಚಂದ್ರುವನ್ನು ಊಟಕ್ಕೆ ಎಬ್ಬಿಸಿದನು. ಚಂದ್ರು ಕಣ್ಣುಬಿಟ್ಟು,

"ಹೋ........ನೀವು ಬಂದು ಎಷ್ಟು ಹೊತ್ತಾಯಿತು. ಹಾಳಾದ ಬಸ್ಸು ಪ್ರಯಾಣ. ಬಹಳ ಸುಸ್ತಾಗಿ ಬಿಟ್ಟಿದ್ದಿತು. ನಿದ್ದೆ ಮಾಡಿಬಿಟ್ಟೆ" ಎಂದು ಎದ್ದನು.

ಊಟಕ್ಕೆ ಕುಳಿತಾಗ ರಾಮಚಂದ್ರಯ್ಯ ಔಪಚಾರಿಕವಾಗಿ ಹೇಳಿದನು,

"ನಿಮಗೆ ಬಹಳ ಹೊತ್ತಾಯಿತೇನೋ. ನಾನು ನೀವು ಊಟ ಮಾಡಿಬಿಡಿ ಎಂದು ಹೇಳಿದ್ದೆ."

"ಏನಿಲ್ಲ........ಅಂಥಾದ್ದು ಏನೀವಾಗ. ಮೀನಾಕ್ಷಮ್ಮ ಆಗಲೇ ಊಟಕ್ಕೆ ಏಳಿ ಅಂದರು. ನಾನು ಬೇಡ ನೀವು ಬರಲಿ ಎಂದು ಹಾಗೇ ಕುಳಿತೆ. ನಿದ್ದೆ ಬಂದುಬಿಟ್ಟಿತು."

ಮೀನಾಕ್ಷಿ ಮಾಡಿದ್ದ ಈರುಳ್ಳಿ ಬೇಳೆಹುಳಿ, ಸೌತೇಕಾಯಿ ಮೊಸರು ಕೋಸಂಬರಿ, ಸಂಡಿಗೆ ಚಂದ್ರು ಪಟ್ಟಾಗಿ ಹೊಡೆದನು. ಚಂದ್ರು ಮೀನಾಕ್ಷಿ ತನ್ನ ಹೆಂಡತಿಯನ್ನು ಬದುಕಿಸಿದಳೆಂದು ಮನಸಾರ ಹೊಗಳಿದನು. ಕದ್ದು ಕದ್ದು ಮೀನಾಕ್ಷಿಯ ಮುಖ ನೋಡುತ್ತಿದ್ದನು.

ಮೀನಾಕ್ಷಿ ಕೀಟಲೆ ಮಾಡಬೇಡ ಸುಮ್ಮನಿರು, ಎಂದು ಹೇಳುವಂತೆ ತೋರುತ್ತಿದ್ದಿತು.

ಊಟವಾಯಿತು. ಹನ್ನೊಂದು ಘಂಟೆಯ ವರೆವಿಗೆ ಹರಟೆ ಹೊಡೆದು ಎಲ್ಲರೂ ಮಲಗಿಕೊಂಡರು. ಮೀನಾಕ್ಷಿ ಚಂದ್ರುವಿಗೆ ಹಾಲಿನಲ್ಲಿ ಹಾಸಿಗೆ ಹಾಸಿಕೊಟ್ಟಳು. ಚಂದ್ರು ಭಾರವಾದ ಮನಸ್ಸಿನಿಂದ ಹಾಸಿಗೆಯ ಮೇಲೆ ಉರುಳಿಕೊಂಡನು. ಮೀನಾಕ್ಷಿ ಗಂಡನ ಬಳಿ ಮಲಗುವುದಕ್ಕೆ ಹೋಗುವ ಮೊದಲು ಹಾಲಿನ ದೀಪ ಆರಿಸಲು ಬಂದಳು. ಚಂದ್ರು ಮಂಕು ಹಿಡಿದವನಂತೆ ಹಾಸಿಗೆಯ ಮೇಲೆ ಕುಳಿತಿದ್ದನು. ಮೀನಾಕ್ಷಿ ದೈನ್ಯದಿಂದ ಚಂದ್ರುವನ್ನು ನೋಡಿದಳು. ಚಂದ್ರು ಕೈನೀಡಿ ಬಾ ಮೀನಾ ಎಂದು ಸನ್ನೆ ಮಾಡಿದನು. ಮೀನಾಕ್ಷಿಯ ಹೃದಯ ದುಃಖದಿಂದ ಭಾರವಾಯಿತು. ತಲೆ ಅಲ್ಲಾಡಿಸಿ ಮುಸಿನಕ್ಕು ಮೀನಾಕ್ಷಿ ದೀಪವಾರಿಸಿ ಗಂಡನ ಕೊಠಡಿಗೆ ಹೋಗಿ ಬಾಗಿಲು ಹಾಕಿಕೊಂಡಳು. ಮಾತ್ಸರ್ಯದಿಂದ ಚಂದ್ರುವಿನ ಮೈ ಉರಿಯಿತು.

ಮಾರನೆಯ ದಿನ ಬೆಳಿಗ್ಗೆ ಚಂದ್ರು ಆರು ಘಂಟೆಗೇ ಎದ್ದು ಕಾಫಿ ಕುಡಿದು ತನ್ನ ಕ್ಯಾಮರಾವನ್ನು ತೆಗೆದುಕೊಂಡು ಹೊರಟನು. ಚಂದ್ರು ಟ್ರಾಲಿ ಸ್ಟೇಷನ್ನಿನ ಬಳಿ ನಿಂತು ಎದುರಿಗೆ ವಿಶಾಲವಾಗಿ ದಿಗಂತದವರೆವಿಗೆ ಹರಡಿದ್ದ ಪಶ್ಚಿಮ ಘಟ್ಟಗಳನ್ನು ಆಶ್ಚರ್ಯದಿಂದ ನೋಡಿದನು. ಅವುಗಳ ಶಿಖರಗಳ ಮೇಲೆ ಮಂಜು ಮುಸುಕಿತ್ತು. ಮಂಜು ಬಿಳಿಯಬಟ್ಟೆ ಹೊದ್ದಿಸಿದಂತೆ ಕಾಣುತ್ತಿದ್ದಿತು. ಆಗ ತಾನೇ ಸೂರ್ಯನು ಉದಯಿಸುತ್ತಿದ್ದನು. ಕಾದ ತಾಮ್ರದ ಬೆಳಕಿನಂತೆ ಪೂರ್ವ ಕೆಂಪೇರಿದ್ದಿತು. ತರಣಿ ಕಿರಣಗಳು ಗಿಡಮರಗಳಲ್ಲಿ ತೂರಿ ಆ ಬೆಟ್ಟಗಳ ಮೇಲೆ ಬೆಳಕನ್ನು ಚೆಲ್ಲಿತ್ತು. ಮಂಜು ಹಬೆಯಾಗಿ ಮೇಲೆ ಹೋಗುತ್ತಿತ್ತು. ಬಾನೆತ್ತರ ಬೆಳೆದು ನಿಂತಿದ್ದ ಮರಗಿಡಗಳ ಮೇಲೆ ಹಕ್ಕಿಗಳ ಹಿಂಡು ಮೇಳಕೂಡಿ ಹಾಡುತ್ತಿದ್ದುವು. ಉದಯರಾಗ ಹಾಡಿ ಚಂದ್ರುವನ್ನು ಸ್ವಾಗತಿಸುತ್ತಿದ್ದುವು. ಕೆಳಗೆ ಅಗಾಧವಾಗಿ ಕಾಣುತ್ತಿದ್ದ ಕಣಿವೆಯಲ್ಲಿ ಶರಾವತಿ ಪ್ರವಾಹ ತುಂಬಿ ಉಬ್ಬಿ ಸರಸರನೆ ಹರಿದು ಹೋಗುತ್ತಿದ್ದಳು. ನೊರೆ ತುಂಬಿದ ಆ ಕೆನ್ನೀರು ಜೇನಿನೊಡನೆ ಹಾಲು ಬೆರಸಿದಂತೆ ಕಾಣುತ್ತಿದ್ದಿತು.

ಚಂದ್ರು ಆ ಸುಂದರ ಚಿತ್ರದ ಚೆಲುವನ್ನು ಹೀರಿ ತನ್ನ "ರೋಲಿಫ್ಲೆಕ್ಸ್" ಕ್ಯಾಮಾರಾದಲ್ಲಿ ಆ ಚಿತ್ರವನ್ನು ತುಂಬಿಕೊಂಡನು. ಚಂದ್ರು ಜಲ ಪಾತದ ದಾರಿಯನ್ನು ಹಿಡಿದು ಹಿಂತಿರುಗಿದನು. ಆಗಲೇ ಕೆಲಸಗಾರರು ವಿದ್ಯುತ್ ಕೇಂದ್ರದ ಕಡೆ ಹೋಗುತ್ತಿದ್ದರು. ಆಗಾಗ ದೂರದಲ್ಲಿ ಡೈನಮೈಟ್ ಹಾರಿದ ಶಬ್ದ ಕೇಳಿಸುತ್ತಿದ್ದಿತು.

ಟೀಬಿಯ ಮುಂದೆ ಹಾಕಿದ್ದ ಕಲ್ಲು ಬೆಂಚಿನ ಬಳಿ ಹೋಗಿ ನಿಂತು ಶರಾವತಿಯ ಭೈರವರೂಪನ್ನು ನೋಡುತ್ತ ಕೈಪಿಡಿ ಗೋಡೆಯ ಮೇಲೆ ಕೈಗಳನ್ನೂರಿ ನಿಂತುಕೊಂಡನು. ಆ ಘನಘೋರ ರುದ್ರಾವತಾರವನ್ನು ನೋಡಿ ಚಂದ್ರು ಬೆರಗಾದನು. ಆ ದೃಶ್ಯದ ದರ್ಶನದಿಂದಾಗುವ ಭಾವಾ ನಂದದಲ್ಲಿ ಚಂದ್ರು ಮೈಮರೆತನು. ಅರ್ಧಘಂಟೆ ಆ ಸುಂದರ ನೋಟದ ಚೆಲುವನ್ನು ಅನುಭವಿಸಿ ಚಂದ್ರು ಮೆಟ್ಟಲಿಳಿದು ಜಲಪಾತದ ತಳಭಾಗಕ್ಕೆ ಹೋದನು. ಹೋಗುತ್ತಿದ್ದಂತೆ ಅವನ ಮೈ ಝುಮ್ಮೆಂದಿತು. ಆಚೀಚೆ ಮುಗಿಲೆತ್ತರ ಬೆಳೆದು ನಿಂತಿದ್ದ ಮರಗಳ ಘನಘೋರವಾದ ಸುಂದರ ಕಾಡು, ಆ ದಾರಿಯ ಮೇಲೆ, ಸುತ್ತಸುತ್ತ ಇನ್ನೂ ಕತ್ತಲನ್ನು ಹರಡಿತ್ತು. ಜಲಪಾತದ ಮೊರೆತ ಕಿವಿಯನ್ನು ಮುಚ್ಚಿಸುತ್ತಿದ್ದಿತು. ಚಂದ್ರು ಮುಂದೆ ಮುಂದೆ ಹೋದಂತೆ ಗಾಳಿಯೊಡನೆ ತೂರಿಬಂದ ಇರಚಲು ಅವನ ಮುಖಕ್ಕೆ ಬಡಿಯಿತು ಚಂದ್ರು ಆದಷ್ಟು ಹತ್ತಿರ ಹೋಗಿ ನಿಂತು ಆ ಉಬ್ಬಿ ಆರ್ಭಟಿಸಿ ಕೆಳಗೆ ಧುಮುಕುತ್ತಿದ್ದ ಶರಾವತಿಯನ್ನು ತಲೆ ಎತ್ತಿ ನೋಡಿದನು. ಆಹಾ ! ಎಂತಹ ಘೋರ ಸೌಂದರ್ಯ. ಹಾಲಿನ ಹೊಳೆ ಯಂತೆ ಪ್ರವಾಹ ತುಂಬಿ ಶರಾವತಿ ಒಂಬೈನೂರು ಅಡಿಗಳೆತ್ತರದಿಂದ ಭೂಮಿಯನ್ನು ಬೇಧಿಸುವಂತೆ ಆ ದೊಡ್ಡ ಪ್ರಪಾತದೊಳಕ್ಕೆ ರುದ್ರೆಯಾಗಿ ಧುಮುಕುತ್ತಿದ್ದಳು. ಹಾಲಿನ ಬುಗ್ಗೆ ಏಳಿಸುತ್ತಿದ್ದಳು. ಅಚ್ಚ ಬಿಳಿಯ ಹಾಲು ನೊರೆ ಕುಣಿಕುಣಿಯುತ್ತ ಪ್ರವಾಹದೊಡನೆ ಮುಂದೆ ಹರಿದು ಹೋಗುತ್ತಿದ್ದಿತು. ಆ ದೃಶ್ಯ ಚಂದ್ರುವಿನ ಮೈ ನಡುಗಿಸಿತು. ಆ ರುದ್ರಾವತಾರ ಚಂದ್ರುವಿಗೆ ಪುರಾಣದ ಗಂಗೆಯ ನೆನಪನ್ನು ತಂದಿತು. ದೇವಲೋಕದಿಂದ ಭಗೀರಥನು ತಂದ ಗಂಗೆ ಇದೇ ರೀತಿ ಕೆಳಗೆ ಧುಮುಕಿರಬೇಕು. ಇದೇ ಧರಿತ್ರಿಯಂತೆ ಶಿವನೂ ಅವಳ ಕೊಬ್ಬನ್ನು

ಅಣಗಿಸಲು ಆ ರುದ್ರಪ್ರವಾಹವನ್ನು ತನ್ನ ಜಟಾಜೂಟದಲ್ಲಿ ಬಂಧಿಸಿ ಅಡಗಿಸಿರಬೇಕು ! ಎನ್ನಿಸಿತು.

ಒಂದು ದೊಡ್ಡ ಗಿಡದ ಹಿಂದೆ ನಿಂತು ಮತ್ತೆರಡು ಗಿಡಗಳನ್ನು ವಸ್ತುವಾಗಿ ಉಪಯೋಗಿಸಿಕೊಂಡು ಚಂದ್ರು ವಿಧವಿಧವಾದ ಕೋನದಲ್ಲಿ ಆ ಸುಂದರ ಜಲಪಾತದ ಭಾವಚಿತ್ರಗಳನ್ನು ತೆಗೆದುಕೊಂಡನು. ಆ ಗುಡ್ಡಗಾಡಿನಲ್ಲಿ ಅಲೆದಾಡಿ ಕಣ್ಣಿಗೆ ಚೆಲುವಾಗಿ ಕಂಡ ದೃಶ್ಯಗಳನ್ನೆಲ್ಲಾ ಚಿತ್ರ ತೆಗೆದನು. ಹಾರುವ ಹಕ್ಕಿ, ಹೂಗುತ್ತಿಗಳನ್ನು ಹೊತ್ತುಕೊಂಡು ಮೆರೆಯುವ ವೃಕ್ಷಾವಳಿ, ಬಾನಿನ ಕರಿ ಮೋಡ, ಮೇಲೇರುತ್ತಿರುವ ಸೂರ್ಯ, ಎಲ್ಲಾ ಅವನ ಹೃದಯವನ್ನು ಸೂರೆಗೊಂಡುವು.

ಗೇರುಸೊಪ್ಪೆಯ ಸಂಜೆ ಕೂಡ ಅವನ ಮನಸ್ಸಿಗೆ ಹರ್ಷ ತಂದಿತು. ಅಲ್ಲಿನ ಸುಂದರ ಸೂರ್ಯಾಸ್ತ ರಾಗರಂಜಿತವಾಗಿದ್ದಿತು. ರಸಿಕರ ಚಿತ್ತೋಹಾರಿಯಾಗಿದ್ದಿತು. ಅವನಿಗೆ ಪ್ರಪಂಚವೆಲ್ಲ ಅತಿ ಸುಂದರವಾಗಿ ಕಂಡಿತು.

ರಾಮಚಂದ್ರಯ್ಯ ಮೀನಾಕ್ಷಿಯನ್ನು ಸುಖದಲ್ಲಿಡಲು ಹಗಲಿರುಳು ದುಡಿಯುತ್ತಿದ್ದನು. ಊಟಕ್ಕೆ ಮಾತ್ರ ಮನೆಗೆ ಬರುತ್ತಿದ್ದನು. ಬಾಕಿಯ ವೇಳೆ ಆಫೀಸಿನಲ್ಲಿ ಇಲ್ಲ, ವಿದ್ಯುತ್ ಕೇಂದ್ರದ ಬಳಿ.

ಚಂದ್ರುವನ್ನು ಆಕರ್ಷಿಸಿದ್ದು ರಾಮಚಂದ್ರಯ್ಯನ ನಿಷ್ಕಪಟತ್ವ. ಮೀನಾಕ್ಷಿಯ ಅವನ ಮೇಲಿನ ನಿಶ್ಚಲವಾದ ಪ್ರೇಮ.

ಒಂದು ವಾರದ ನಂತರ ಚಂದ್ರು ಊರಿಗೆ ಹೊರಟು ನಿಂತನು. ರಾಮಚಂದ್ರಯ್ಯ ಬಲವಂತ ಮಾಡಿ ಎರಡು ದಿವಸ ಹೆಚ್ಚಿಗೆ ನಿಲ್ಲಿಸಿಕೊಂಡನು. ಹೊರಡುವ ದಿನ ರಾಮಚಂದ್ರಯ್ಯ ಔತಣದ ಅಡಿಗೆ ಮಾಡಿಸಿದನು. ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡಿದರು. ಚಂದ್ರು ಊರಿಗೆ ಹೊರಡುವಾಗ ಮತ್ತೊಮ್ಮೆ ರಾಮಚಂದ್ರಯ್ಯನನ್ನು ಬೆಂಗಳೂರಿಗೆ ಬರುವಂತೆ ಆಹ್ವಾನಿಸಿದನು. ರಾಮಚಂದ್ರಯ್ಯ, ಚಂದ್ರು ಹೆಂಡತಿ ಮಕ್ಕಳನ್ನು ಕರೆದುಕೊಂಡು ಬಂದರೆ ತಾವು ಬೇಸಿಗೆಯಲ್ಲಿ ಬೆಂಗಳೂರಿಗೆ ಬರುವುದಾಗಿ ವಾಗ್ದಾನ ಮಾಡಿದನು.

ರಾಮಚಂದ್ರಯ್ಯ ಚಂದ್ರುವನ್ನು ಬಸ್ಸಿನಲ್ಲಿ ಕೂಡಿಸಿ ಬಂದನು.

ಚಂದ್ರು ಹೋದೊಡನೆ ಮೀನಾಕ್ಷಿಯ ಬಾಳಿಗೆ ಕಾರ್ಮೋಡ ಕವಿದಂತಾಯಿತು. ಒಬ್ಬಳೇ ಕುಳಿತು ಅತ್ತಳು. 'ದೇವರೇ ಈ ಬಂಧನದಿಂದ ವಿಮೋಚನೆಯೇ ಇಲ್ಲವೇ. ಎಂದೆಂದಿಗೂ ನಾನೂ ಚಂದ್ರುವೂ ಒಟ್ಟಿಗೆ ಇರಲು ಸಾಧ್ಯವೇ ಇಲ್ಲವೇ?'

'ಇಲ್ಲ. ಇಲ್ಲ ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ. ನಿಮ್ಮ ದೇಹಗಳೆರಡೂ ಒಟ್ಟಿಗಿರಲು ಸಾಧ್ಯವಿಲ್ಲ. ನೀವು ಗಂಡಹೆಂಡಿರಂತೆ ಸಂಸಾರ ಮಾಡಲು ಸಾಧ್ಯವೇ ಇಲ್ಲ. ದೊರೆಯಲಾರದುದನ್ನು ಬಯಸುವ ನೀನು ಹುಚ್ಚಿ ಅಲ್ಲವೆ. ಈಗ ದೊರೆತಿರುವಷ್ಟರಲ್ಲೇ ತೃಪ್ತಿಪಟ್ಟುಕೋ ಮೀನಾ' ಎಂದು ಅವಳ ಅಂತರಂಗ ಪ್ರತಿಧ್ವನಿ ಮಾಡಿತು.

ಚಂದ್ರು ಊರಿಗೆ ಹೋದ ಒಂದು ವಾರದಲ್ಲೇ ಮೀನಾಕ್ಷಿ ರಾಮಚಂದ್ರಯ್ಯನಿಗೆ ಮತ್ತೆ ತಾನು ಮಗುವನ್ನು ಹೊತ್ತಿರುವ ಸಮಾಚಾರವನ್ನು ತಿಳಿಸಿದಳು. ರಾಮಚಂದ್ರಯ್ಯನಿಗೆ ಆನಂದವಾಯಿತು. ಆದರೂ ಹಿಂದೆ ಒಂದು ಸಾರಿ ಮೂರು ತಿಂಗಳಾಗಿ ಮೈ ಇಳಿದು ಹೋಟದ್ದನ್ನು ನೆನಸಿಕೊಂಡು ಕೊಂಚ ಬೇಸರವಾಯಿತು. ನಾಲ್ಕು ವರ್ಷಗಳಿಂದ ತನಗೆ ಮಕ್ಕಳಾಗುವ ಆಶೆಯನ್ನೇ ಬಿಟ್ಟುಬಿಟ್ಟಿದ್ದ ರಾಮಚಂದ್ರಯ್ಯನಿಗೆ ಮತ್ತೆ ತಂದೆಯೆಂದು ಹೆಮ್ಮೆಮಾಡಿತು.

ಮೀನಾಕ್ಷಿಗೆ ಮೂರು ತಿಂಗಳು ತುಂಬುತ್ತ ಬಂದಂತೆ ರಾಮಚಂದ್ರಯ್ಯ ಕುಣಿದಾಡಿಬಿಟ್ಟನು. ಆಗ ಅವಳ ತಾಯ್ತನದಲ್ಲಿ ಅವನಿಗೆ ನಂಬಿಕೆ ಹುಟ್ಟಿತು ತಾಯಿಗೆ ಸುದ್ದಿ ತಿಳಿಸಿ ಕಾಗದ ಬರೆದನು. ನಾಗವೇಣಮ್ಮ ಹಿಗ್ಗಿಹೋದರು. ಸೊಸೆಯನ್ನು ಬಂಜೆಯೆಂದು ಗೋಳು ಹುಯ್ದುಕೊಂಡೆನಲ್ಲಾ ಎಂದು ನೊಂದುಕೊಂಡರು. ಆದರೆ ಅವರು ಹಾಸಿಗೆ ಹಿಡಿದಿದ್ದ ಗಂಡನನ್ನು ಬಿಟ್ಟು ಬರಲಾರದೇ ಹೋದರು. ಸೊಸೆಯನ್ನು ನೋಡಬೇಕೆಂದು ಹಂಬಲಿಸಿ ಕಾಗದ ಬರೆದರು. ರಾಮಚಂದ್ರಯ್ಯ ಘಂಟೆಗಟ್ಟಲೆ ಯೋಚನೆ ಮಾಡಿದನು. ಅವನಿಗೆ ಹಿಂದಿನದೆಲ್ಲ ನೆನಪಾಯಿತು. ಮೀನಳು ಆಗ ಮೈ ಇಳಿದುಹೋದ ವರ್ಷ ಅನುಭವಿಸಿದ ಕಷ್ಟದ ನೆನಪು ಅವನನ್ನು ಮೆತ್ತಗೆ ಮಾಡಿತು. ಯಾರಿಗೆ

ಗೊತ್ತು ನನ್ನ ಹಣೆಯಲ್ಲಿ ಏನು ಬರೆದಿದೆಯೋ. ಮತ್ತೆ ಮೀನಳಿಗೆ ಹಾಗೇ ಆದರೆ. ಕೋಪದ ಆವೇಶದಲ್ಲಿ ಖಂಡಿತ ತನ್ನ ತಾಯಿ ಮೀನಾಕ್ಷಿಗೆ ನರಕಯಾತನೆ ಕೊಡುವುದು ಖಂಡಿತ ಎನ್ನಿಸಿತು. ಯೋಚಿಸಿ ಕಡೆಗೆ 'ನೀನು ಅವಳ ಯೋಚನೆ ಮಾಡಬೇಡ. ಎಂಟು ತಿಂಗಳಾಗುವವರೆಗೆ ನಾನು ಅವಳನ್ನು ಕರೆದುಕೊಂಡು ಬರುವುದಿಲ್ಲ. ಅವಳನ್ನು ನಾನೇ ನೋಡಿಕೊಳ್ಳುತ್ತೇನೆ. ಅದು ನನ್ನ ಆಶೆ' ಎಂದು ರಾಮಚಂದ್ರಯ್ಯ ಮಾರುತ್ತರ ಬರೆದು ಹಾಕಿದನು.

ನಾಗವೇಣಮ್ಮನವರು ವ್ಯಥೆಪಟ್ಟುಕೊಂಡು ಸುಮ್ಮನಾದರು. ಊರುಬಿಟ್ಟು ಮೂರು ವರ್ಷಗಳಾದರೂ ಅವಳು ತಮ್ಮೊಡನೆ ಬಂದು ಒಂದು ದಿವಸವೂ ಇರಲಿಲ್ಲವಲ್ಲಾ ಎಂದು ಸೊಸೆಯ ಮೇಲೆ ಅವರಿಗೆ ವಿಪರೀತ ಕೋಪಬಂದಿತು.

ರಾಮಚಂದ್ರಯ್ಯ ಶಾಮಣ್ಣನವರಿಗೂ ಕಾಗದ ಹಾಕಿದನು. ಅವರಿಂದ ಬಂದ ಉತ್ತರ ಚಿತ್ತೋಹಾರಿಯಾಗಿದ್ದಿತು.

"ಇದು ನಮ್ಮ ಜೀವನದಲ್ಲೇ ಅತ್ಯಂತ ಸಂತೋಷಕರವಾದ ವಿಚಾರ. ನಾವು ಬದುಕಿರುವುದರಲ್ಲಿ ಮೀನಾಕ್ಷಿಯ ಮಗುವನ್ನು ನೋಡಬೇಕೆಂದು ಹಂಬಲಿಸಿದೆವು. ಮಕ್ಕಳಿಲ್ಲದಿದ್ದರೆ ಅವಳಿಗೆ ಬಹಳ ದುಃಖವಾಗುತ್ತಿದ್ದಿತು. ಈಗ ಅವಳಿಗೆ ಬಹಳ ಸಂತೋಷವಾಗಿರ ಬೇಕು. ಅವಳನ್ನು ಹುಷಾರಾಗಿ ನೋಡಿಕೋ. ಅವಳಿಗೆ ನಮ್ಮ ಆಶೀರ್ವಾದಗಳನ್ನು ತಿಳಿಸು. ಈ ತನ್ನ ಮುದಿ ತಂದೆತಾಯಿಯರನ್ನು ನೆನಸಿಕೊಳ್ಳುತ್ತಿರಬೇಕೆಂದು ಹೇಳು. ನಾವೂ ಅವಳ ಹೆರಿಗೆಯ ದಿವಸದ ಹೊತ್ತಿಗೆ ಬರಬೇಕೆಂದಿದ್ದೇವೆ. ಎಲ್ಲಾ ದೈವಸಂಕಲ್ಪ."

ಕಾಮಾಕ್ಷಿಯಿಂದಲೂ ಕಾಗದಗಳು ಬರುತ್ತಿದ್ದವು. ಕಾಮಾಕ್ಷಿ ಪ್ರತಿಯೊಂದು ಕಾಗದದಲ್ಲೂ "ಮೀನಾ, ನೀನು ನನ್ನ ಮನೆಗೆ ದೇವತೆ ಯಾಗಿ ಬಂದೆಯಮ್ಮಾ. ನನ್ನ ಜೀವಕ್ಕೆ ಚೈತನ್ಯ ನೀಡಿದೆ. ನನ್ನ ಮಕ್ಕಳನ್ನು ಕಷ್ಟದಿಂದ ಉಳಿಸಿದೆ. ನಿನ್ನನ್ನು ನಾನು ಎಂದೆಂದಿಗೂ ಮರೆಯುವುದಿಲ್ಲ" ಎಂದು ತನ್ನ ಹೃದಯ ತೋಡಿಕೊಳ್ಳುತ್ತಿದ್ದಳು.

ಚಂದ್ರುವಿನ ಪ್ರೇಮಪತ್ರಗಳೊಡನೆ ಕಾಮಾಕ್ಷಿಯ ನಿಷ್ಕಪಟ ಪತ್ರ

ಗಳೂ ಕೈಸೇರಿ ಅವಳನ್ನು ಹೆಮ್ಮೆಯಿಂದ ಮೆರೆಸುತ್ತಿದ್ದುವು. ಕಾಮಾ ಕ್ಷಿಯ ಬಾಳು ನೆಟ್ಟಗಾಯಿತಲ್ಲಾ, ತಾನು ಅದಕ್ಕೆ ಕಾರಣನಾದೆನಲ್ಲಾ ಎಂದು ಅವಳ ಹೃದಯ ಉಬ್ಬುತ್ತಿದ್ದಿತು. ಚಂದ್ರು ಅವಳ ನರ ನಾಡಿಗಳಲ್ಲಿ, ಧಮನಿಗಳಲ್ಲಿ ಚೇತನರೂಪ ಹೊತ್ತು ಜೀವಕೋಟಿಯಾಗಿ ಮೆರೆದನು.

## ೧೮

ಹೊಟ್ಟೆಯಲ್ಲಿ ಜೀವ ಹೊತ್ತ ಮೀನಾಕ್ಷಿಯ ಸೌಂದರ್ಯ ವರ್ಣನಾ ತೀತವಾಗಿದ್ದಿತು. ಎರಡು ತಿಂಗಳಾದರೂ ಚಂದ್ರು ಮೀನಾಕ್ಷಿಯನ್ನು ನೋಡಲು ಬಂದಿರಲಿಲ್ಲ. ಮೀನಾಕ್ಷಿಗೆ ನಾಲ್ಕನೆಯ ತಿಂಗಳು ನಡೆಯು ತ್ತಿತ್ತು, ಅವಳ ಲೆಖ್ಖದ ಪ್ರಕಾರ. ಮೀನಾಕ್ಷಿ ಚಂದ್ರುವಿಗೆ ಕಾಗದದ ಮೇಲೆ ಕಾಗದ ಬರೆದು ಹಾಕಿದಳು. ಚಂದ್ರು ಹದಿನೈದು ದಿನ ಬಿಟ್ಟು ಬರುವುದಾಗಿ ಕಾಗದ ಬರೆದು ಹಾಕಿದನು. ಚಂದ್ರು ಬರುವನಲ್ಲಾ ಅವನನ್ನು ನೋಡುವೆನಲ್ಲಾ ಎಂದು ಅವಳು ಆನಂದಪಟ್ಟಳು.

ಇದ್ದಕ್ಕಿದ್ದಂತೆ ಮೀನಾಕ್ಷಿಯ ಬಾಳಿಗೆ ಕಾರ್ಮೋಡ ಕವಿಯಿತು. ಮೀನಾಕ್ಷಿಯನ್ನು ಕಾಯುತ್ತಿದ್ದ, ಅವಳ ಸುಖದುಃಖಗಳಲ್ಲಿ ಭಾಗಿ ಯಾಗುತ್ತಿದ್ದ ಚೆನ್ನಿ ತೀರಿಕೊಂಡಳು. ಮೀನಾಕ್ಷಿಗೆ ಒಬ್ಬಳು ಒಳ್ಳೆಯ ಗೆಳತಿ ಹೋದಷ್ಟು ದುಃಖವಾಯಿತು. ಅವಳಿಗೆ ಮತ್ತೆ ಒಂಟಿ ಬಾಳೇ ಆಯಿತು.

ರಾಮಚಂದ್ರಯ್ಯನಿಗೆ ಕೈತುಂಬ ಕೆಲಸ. ಅವನು ಹೆಂಡತಿಯನ್ನು ಒಬ್ಬಂಟಿಗಳಾಗಿ ಬಿಟ್ಟುಹೋಗಲು ಹೆದರುತ್ತಿದ್ದನು. ಆದರೆ ಮೀನಾಕ್ಷಿ ತಾನೊಬ್ಬಳೇ ಇರಬಲ್ಲೆನೆಂದು ಧೈರ್ಯ ಹೇಳಿ ಗಂಡನನ್ನು ಆಫೀಸಿಗೆ ಕಳುಹಿಸುತ್ತಿದ್ದಳು. ಆದರೂ ರಾಮಚಂದ್ರಯ್ಯನಿಗೆ ಮನಸ್ಸು ಸಮಾ ಧಾನವಾಗಲಿಲ್ಲ. ಅಡಿಗೆಯವಳನ್ನು ಗೊತ್ತುಮಾಡಲು ಮನಸ್ಸುಮಾಡಿ

ದನು. ಈ ವಿಚಾರ ಗುರುತಿನವರಿಗೆಲ್ಲಾ ಹೇಳಿ ಅವರ ಸಹಾಯ ಕೋರಿದನು. ಆದಷ್ಟು ಬೇಗ ಯಾರನ್ನಾದರೂ ಹುಡುಕಿಕೊಡುವಂತೆ ಮುತ್ತಣ್ಣನವರನ್ನು ಪೀಡಿಸಿದನು. ಮುತ್ತಣ್ಣನವರು ಏನನ್ನೋ ಯೋಚಿಸಿಕೊಂಡು ಇನ್ನೆರಡು ದಿವಸಗಳಲ್ಲಿ ಒಬ್ಬಾಕೆಯನ್ನು ಗೊತ್ತು ಮಾಡಿಕೊಡುವುದಾಗಿ ಮಾತುಕೊಟ್ಟರು.

ಗುಮಾಸ್ತೆ ಮುತ್ತಣ್ಣನವರದು ದೊಡ್ಡ ಕುಟುಂಬ. ಆರು ಜನ ಮಕ್ಕಳು. ಮೂವತ್ತು ರೂಪಾಯಿ ಸಂಬಳ. ಕೈಗೆ ಬಂದ ಸಂಬಳ ಮೂರು ದಿವಸಗಳಿಗೇ ಮುಕ್ತಾಯವಾಗುತ್ತಿದ್ದಿತು. ಮನೆಗೆ ತಂದು ಹಾಕಿದ ಸಾಮಾನುಗಳನ್ನು ಜಠರಾಗ್ನಿ ಹದಿನೈದು ದಿವಸಗಳಲ್ಲಿ ಭಸ್ಮ ಮಾಡುತ್ತಿದ್ದಿತು. ಮುತ್ತಣ್ಣನವರು ಬಡತನದ ಬೇಗೆಗೆ ಸಿಕ್ಕಿ ಬಳಲಿದ್ದರು. ಅವರನ್ನು ಅಪಹಾಸ್ಯ ಮಾಡುವಂತೆ ವಿಧಿ ವರ್ಷದ ಹಿಂದೆ ಮನೆ ತಪ್ಪಿದ ತಂಗಿಯೊಬ್ಬಳನ್ನು ಮನೆಗೆ ತಂದು ಹಾಕಿತ್ತು. ಮುತ್ತಣ್ಣನವರು ಭೂಮಿಗಿಳಿದು ಹೋಗಿದ್ದರು. ಆದರೆ ಅವರ ಸಹೃದಯತೆ, ದಯಾಪರತೆ, ಅನುಕೂಲವಿದ್ದರೂ ಅತ್ತೆಯ ಹಿಂಸೆಗೆ ಹೆದರಿಹೋಗುವುದಿಲ್ಲವೆಂದು ಹಟಮಾಡಿದ ತಂಗಿಯನ್ನು ಆ ಮನೆಗೆ ಕಳುಹಿಸಲಾರದೇ ಹೋಯಿತು. ನಾಲ್ಕು ವರ್ಷದ ಹೆಣ್ಣು ಹುಡುಗಿಯೊಬ್ಬಳನ್ನು ಅತ್ತೆಯ ಮನೆಯಲ್ಲಿ ಬಿಟ್ಟು, ಮೂರು ವರ್ಷದ ಗಂಡುಮಗುವನ್ನು ತನ್ನ ಹತ್ತಿರವೇ ಇಟ್ಟುಕೊಂಡು ಅಣ್ಣನ ಮನೆಯಲ್ಲಿ ಇದ್ದು ಬಿಟ್ಟಳು. ಆ ವಿಧವೆ ತಂಗಿ ಅಣ್ಣನ ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡಳು. ಅಣ್ಣನೆಷ್ಟು ಒಳ್ಳೆಯವನೋ, ತಂಗಿ ಅಷ್ಟು ದುಡುಕು ಸ್ವಭಾವದವಳು. ಬಾಯಾಳಿತನ, ಹೊಟ್ಟೆಕಿಚ್ಚು, ಅಸೂಯೆ ಬಾಲ್ಯದಿಂದಲೇ ಅವಳಲ್ಲಿ ಬೆಳೆದುಕೊಂಡು ಬಂದಿದ್ದಿತು. ತನ್ನ ಗಂಡ ಹೋದ ಕಿಚ್ಚಿಗೆ ಅತ್ತಿಗೆಯ ಮೇಲೆ, ಅಣ್ಣನ ಮಕ್ಕಳ ಮೇಲೆ ಎಗರಾಡಿ ವಿಷಕಾರಿದ್ದಳು. ಗಂಡನಿಗಾಗಿ ಮುತ್ತಣ್ಣನವರ ಹೆಂಡತಿ ಎಲ್ಲ ಸಹಿಸಿಕೊಂಡು ಸುಮ್ಮಗಾದರು. ಒಮ್ಮೊಮ್ಮೆ ಮುತ್ತಣ್ಣನವರೂ ಅವಳ ಬಾಯಿಗೆಸಿಕ್ಕಿ ಅವಳ ಬೈಗಳನ್ನು ಕೇಳಬೇಕಾಗಿದ್ದಿತು. ಮುತ್ತಣ್ಣನವರು ಶಾಂತಚಿತ್ತದಿಂದ ಎಲ್ಲ ಕೇಳಿಕೊಂಡು ಸುಮ್ಮನಾಗುತ್ತಿದ್ದರು.

ರಾಮಚಂದ್ರಯ್ಯನ ಕೇಳಿಕೆಯಿಂದ ಅವರಿಗೆ ಒಂದು ಹೊಸ ಯೋಚನೆ ಹೊಳೆದಿತ್ತು. ತಮ್ಮ ಆ ವಿಧವೆ ತಂಗಿಯನ್ನೇ ರಾಮಚಂದ್ರಯ್ಯನ ಕುಟುಂಬದೊಡನೆ ಸಹಾಯ ಮಾಡಿಕೊಂಡು, ಜೊತೆಗಿರಲು ಕಳುಹಿಸಿದರೆ ತಮಗೂ ಎಷ್ಟೋ ಕಷ್ಟ ಕಮ್ಮಿಯಾಗುವುದೆಂದುಕೊಂಡರು. ತಂಗಿಯೂ ಎಷ್ಟೋ ಸಾರಿ ತನ್ನ ಆ ಇಚ್ಛೆಯನ್ನು ಅಣ್ಣನಿಗೆ ಸೂಕ್ಷ್ಮವಾಗಿ ತಿಳಿಸಿದ್ದಳು. ಮನೆಗೆ ಹೋದೊಡನೆ ಮುತ್ತಣ್ಣನವರು ಚಾಪೆಯ ಮೇಲೆ ಉರುಳಿಕೊಂಡಿದ್ದ ತಂಗಿಯನ್ನು ಪ್ರೀತಿಯಿಂದ ಕೇಳಿದರು,

"ಗುಂಡೀ, ನೀನು ಎಲ್ಲಿಯಾದರೂ ಅಡಿಗೆ ಕೆಲಸ ಸಿಕ್ಕಿದರೆ ಹೋಗುತ್ತೇನೆ ಅಂದಿದ್ದೆಯಲ್ಲಾ. ನನ್ನ ಸ್ನೇಹಿತರೊಬ್ಬರು ರಾಮಚಂದ್ರರಾಯರು ಅಂತ ಇದ್ದಾರೆ. ಮನೆಯಲ್ಲಿ ಗಂಡ ಹೆಂಡತಿ ಇಬ್ಬರೇ. ಅಡಿಗೆಗೆ ಯಾರಾದರೂ ಬೇಕು ಅಂದರು. ನಿನ್ನನ್ನು ಕೇಳಿನೋಡುತ್ತೇನೆ ಎಂದು ಹೇಳಿ ಬಂದೆ. ನೀನು...."

"ಹ್ಞಾ... ಎಲ್ಲ ಏರ್ಪಾಟು ಮಾಡಿ ಬಂದ್ಬಿಟ್ಟೇನೋ. ಆಗ್ಲೇಪ್ಪಾ ಆಗ್ಲಿ.... ಹೊರಟ್ಹೋಗ್ತೀನಿ. ನನ್ನ ಮಗೂನೂ ಕರ್ಕೊಂಡು ಹೋಗ್ತೀನಿ. ನಾವಿಬ್ರೇ ತಾನೆ ನಿನಗೆ ಭಾರ."

ಗುಂಡಮ್ಮ ಆರ್ಭಟಿಸಿಕೊಂಡು ಅಳುತ್ತಾ ಎದ್ದು ಹೊರಗೆ ಮಣ್ಣಿನಲ್ಲಿ ಆಡುತ್ತಾ ಕುಳಿತಿದ್ದ ಮಗುವನ್ನು ಎತ್ತಿಕೊಂಡು ಹೊರಡುವಳಂತೆ ಬಾಗಿಲ ಹತ್ತಿರ ನಿಂತುಬಿಟ್ಟಳು. ಮುತ್ತಣ್ಣನವರು ಪೇಚಿಗೆ ಸಿಕ್ಕಿಕೊಂಡರು. ಅವಳ ಆರ್ಭಟಕ್ಕೆ ಹೆದರಿದರು. ಆದರೂ ಸಮಾಧಾನ ಮಾಡಿಕೊಂಡು ಮತ್ತೆ ಹೇಳಿದರು.

"ಹಾಗಲ್ಲಾ ಕಾಣೆ ಗುಂಡಿ ನಾನು ಹೇಳಿದ್ದು. ಮಗೂನೂ ಕರ್ಕೊಂಡು ಹೊರಟು ಹೋಗು ಅಂದ್ನೇನೇ. ಏನೋ ನನಗೆ ದೇವ್ರು ಕೊಟ್ಟಿದ್ದು ಅಂಬ್ಲಿಯೋ, ಉಪ್ಪು ಅನ್ನೋ ನಿಂಗೂ ಇದ್ದೀನಿ. ಆದರೆ ನೀನೂ ನಮ್ಹಾಗೇ ಏಕೆ ಕಷ್ಟ ಪಡಬೇಕು ಅಂತ. ಕೊಂಚ ದಿನವಾದ್ರೂ ಹಾಯಾಗಿರು ಅಂತ ಹೇಳೋಕೆ ಬಂದೆ. ಅವರ ಮನೇಲಿ ಇರೋದು ಇಬ್ರೇ. ಆತಂಗೂ ಹತ್ಹತ್ರ ನೂರು ರೂಪಾಯಿ ಬರುತ್ತೆ. ನಿಂಗೆ

ಊಟಕ್ಕೇನೂ ತೊಂದ್ರೆ ಇಲ್ಲ. ಆಕೆ ಬಸುರಿಯಂತೆ. ಈಗಿನ್ನೂ ಮೂರು ತಿಂಗಳು. ಹೆರಿಗೆ ಆಗಿ ಮೂರು ತಿಂಗಳು ಆಗುವ ತನಕ ಯಾರಾದರೂ ಸಿಕ್ಕೋ ಹಾಗಿದ್ರೆ ನೋಡಿ ಸ್ವಾಮಿ, ಎಂದು ಗೋಗರೆದ್ರು. ಸಂಬಳ ಎಂಟು ರೂಪಾಯಾಗ್ಲಿ ಪರವಾಗಿಲ್ಲ ಅಂದರು. ಅದಕ್ಕೇ ಹೇಳೋಕೆ ಬಂದೆ...."

"ಆ ! ಸಂಬಳ ಎಂಟು ರೂಪಾಯಿ ಕೊಡ್ತಾರಂತ ?"

"ಐದು ರೂಪಾಯಿ ಅಂದ್ರು. ನಾನು ಅಷ್ಟಕ್ಕೆ ಯಾರೂ ಬರೊಲ್ಲ ಅಂದೆ. ಒಂದೋ ಎರಡೋ ಹೆಚ್ಚಾದರೂ ಪರವಾಗಿಲ್ಲ. ಅಂದರು"

"ಈ ಮಗೂನ ಏನು ಮಾಡಲಿ........"

"ನನ್ನ ಮಕ್ಕಳ ಜೊತೆಗೆ ಅದೊಂದು ನನಗೆ ಭಾರವೇ. ಇಲ್ಲೇ ಬಿಟ್ಟು ಹೋಗು. ಅವ್ವ ನೋಡ್ಕೋತಾಳೆ. ಆಗಾಗ ಬಂದು ನೋಡ್ಕೊಂಡು ಹೋಗು. ಮನೆ ಏನು ದೂರ್ವೆ. ಮುಕ್ಕಾಲು ಮೈಲಿ ಆಗ್ಬಹ್ದು, ಅಷ್ಟೆ. ಮಗೂನ್ನೋಡ್ಬೇಕು ಅಂತ ಕೇಳಿದ್ರೆ ಬೇಡ ಅಂತಾರ್ಯೇ ?"

ಗುಂಡಮ್ಮ ಪ್ರಸನ್ನಳಾದಳು. ಸಂಬಳ ಎಂಟು ರೂಪಾಯಿ, ಕೆಲಸ ಕಮ್ಮಿ, ಸುಖಭೋಜನ ಇವುಗಳನ್ನು ನೆನಸಿಕೊಂಡು ಅವಳ ಮನಸ್ಸು ಪ್ರಫುಲ್ಲವಾಯಿತು. ಆದರೂ ಕೊಂಚ ಬಿಗುಮಾನದಿಂದ "ಆಗ್ಲೀ....ಯೋಚ್ನೆ ಮಾಡ್ತೀನಿ" ಎಂದಳು.

"ಯೋಚ್ನೆ ಮಾಡುವುದಕ್ಕೆ ಪುರಸತ್ತೇ ಇಲ್ಲ ನೀನು ಈಗ್ಲೇ ಹೇಳ್ಬಿಡಬೇಕು. ಆಕೆ ಒಬ್ರೇ ಅಂತೆ ಮನೇಲಿ. ಅದಕ್ಕೇ ಅವರಿಗೆ ಅಷ್ಟು ಅವಸರ ನೀನು ನಾಳೆಯೇ ಹೊರಟು ಹೋಗಬೇಕು."

"ಅಯ್ಯೋ ರಾಮ....ಅದೇನು ನಿಂತ ಘಳ್ಗೇಲೇ ಹೊರಡಿಸಬೇಕು ಅಂತ ಹಾಗ್ಬೊಡ್ಕೊಂತೀಯ. ಇರು ಕೊಂಚ ಬೆಳಗಾಗೋ ತನಕ"

ಗುಂಡಮ್ಮ ಮಗುವನ್ನು ಎತ್ತಿಕೊಂಡು ಒಳಗೆ ಬಂದಳು. ಅವರ ಮಾತು ಕೇಳುತ್ತ ಅಡಿಗೆ ಮನೆಯ ಬಳಿ ಬಂದು ನಿಂತಿದ್ದ

ಅತ್ತಿಗೆಯ ಮುಖ ನೋಡಿ, ವ್ಯಂಗ್ಯವಾಗಿ

"ಸಧ್ಯ ನಿನಗೆ ಹಾಯಾಯ್ತಲ್ಲಮ್ಮ, ಅತ್ತಿಗೆಮ್ಮಾ. ನಾಳೆ ನಿನ್ನ ಮನೆ ಬಿಟ್ಟು ತೊಲಗಿ ಹೋಗ್ತೀನಿ. ಅದೇನು ರಾಜಭೋಗ ಪಡ್ತಿಯೋ ಪಡು" ಎಂದು ಮೂತಿ ತಿರುಗಿಸಿ ಚಾಪೆಯ ಮೇಲೆ ಮಗುವನ್ನು ಕುಕ್ಕರಿಸಿದಳು.

ಆ ಮಾತಿನಿಂದ ಮುತ್ತಣ್ಣನವರಿಗೆ ಉತ್ತರ ಸಿಕ್ಕಿದಂತಾಯಿತು.

ಆ ರಾತ್ರಿಯೇ ಹೋಗಿ ರಾಮಚಂದ್ರಯ್ಯನಿಗೆ ಹೇಳಿ ಬಂದರು. ರಾಮಚಂದ್ರಯ್ಯ ಮುತ್ತಣ್ಣನವರು ಹೋದಮೇಲೆ ಮೀನಾಕ್ಷಿಗೆ ಆ ವಿಚಾರ ತಿಳಿಸಿದ. ಮೀನಾಕ್ಷಿ ಹೆದರಿದಳು. ನಾಳೆ ಚಂದ್ರು ಬಂದರೆ ?....

"ಅಯ್ಯೋ ಬೇಡೀಂದ್ರೆ. ವಿನಾ ಖರ್ಚು. ನಾನು ಒಬ್ಳೇ ಇರ್ತೀನಿ ಏನು ಹೆದರಿಕೆ ಹೇಳಿ."

"ಹಾಗಲ್ಲ ಮೀನಾ. ನೀನು ಇರಬಹುದು. ನಿನ್ನನ್ನು ಒಬ್ಬಳನ್ನೇ ಬಿಟ್ಟು ನಾನು ಆಫೀಸಿನಲ್ಲಿ ಪಡುವ ಹಿಂಸೆ ನಿನಗೆ ತಿಳಿದರೆ ನೀನು ಹೀಗೆ ಹೇಳುತ್ತಿರಲಿಲ್ಲ. ನಾಳೆ ಏನಾದರೂ ಅನಾಹುತವಾದರೆ? ನನ್ನ ಜವಾಬ್ದಾರಿ ನಾನು ನಿರ್ವಹಿಸಬೇಕು. ಏನು ಒಂದು ಎಂಟು ರೂಪಾಯಿ ತಾನೇ, ಹೋಗಲಿ. ಅದರಿಂದ ಎಷ್ಟು ಅನುಕೂಲ....ಇದೊಂದು ಮಾತಿಗಾದರೂ ನೀನು ಒಪ್ಪಲೇ ಬೇಕು ಮೀನಾ."

ರಾಮಚಂದ್ರಯ್ಯ ದೈನ್ಯದಿಂದ ಕೇಳಿಕೊಂಡನು. ಮೀನಳ ಮೌನ ಸಮ್ಮತಿ ಸೂಚಿಸಿತು. ಆದರೆ ಮೀನಳ ಯೋಚನೆ ಬೇರೆಯಾಗಿತ್ತು. ಅವಳ ಹೃದಯ ಅವಳಿಗೆ ಹೇಳಿದಂತಾಯಿತು. 'ಹ್ಞ ಅನುಕೂಲ. ಅನುಕೂಲವಲ್ಲ ಮೀನಾ ಇದು. ಇದು ನಿನ್ನ ಬಾಳಿಗೆ ಪ್ರತಿಕೂಲ. ನಿನ್ನ ಬಾಳಿಗೊಂದು ಕಂಟಕ. ನಾಳೆ ಚಂದ್ರು ಬಂದರೆ ಏನು ಮಾಡುವೆ ? ಇಬ್ಬರೇ ಇರಲು ಸಾಧ್ಯವೇ? ಇಲ್ಲದ ಪಿಶಾಚಿಯನ್ನು ಗಂಟುಹಾಕಿಕೊಳ್ಳುತ್ತೀಯೆ...........'

'ಆದರೆ........ಏನು ಮಾಡುವುದು. ಅವರು ಅಷ್ಟು ದೀನರಾಗಿ ಕೇಳಿಕೊಳ್ಳುತ್ತಾರೆ. ಬೇಡ ಅನ್ನಲು ಸಾಧ್ಯವೇ............ಇಲ್ಲ,

ಅವರು ಏನಂದುಕೊಳ್ಳುವರು. ಹುಂ...........ಇಷ್ಟಾಗಿ ಈಗೇಕೆ ಯೋಚನೆ. ನಾಳೆ ಅವಳು ಹೇಗಿರುವಳೋ, ಎಂತಹವಳೋ ನೋಡಿದರಾಯ್ತು. ಅವಳನ್ನು ಸರಿಮಾಡಿಕೊಂಡರೆ, ಕೊಂಚ ಹದ್ದುಬಸ್ತಿನಲ್ಲಿ ಇಟ್ಟರೆ ಎಲ್ಲಾ ಸರಿಹೋಗುತ್ತದೆ........' ಎಂದಿತು ಮನಸ್ಸು.

ಮಾರನೆಯ ದಿನ ಎಂಟು ಘಂಟೆಯ ಹೊತ್ತಿಗೆ ಮುತ್ತಣ್ಣನವರು ಗುಂಡಮ್ಮನನ್ನು ಕರೆದುಕೊಂಡು ಬಂದರು. ಮೀನಾಕ್ಷಿಗೆ ಗುಂಡಮ್ಮನ ಪರಿಚಯ ಮಾಡಿಸಿಕೊಟ್ಟರು. ಗುಂಡಮ್ಮ ಮೀನಾಕ್ಷಿಯ ಕಣ್ಣಿಗೆ ಬಹಳ ಸಾಧುಸ್ವಭಾವದವಳಾಗಿ, ತಿಳಿವಳಿಕೆಯಿಲ್ಲದವಳಾಗಿ ಕಂಡಳು. 'ಅಯ್ಯೋ, ಇವಳೇನು ಮಹಾ, ಇವಳನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಬಹುದು' ಎಂದುಕೊಂಡಳು. ಅವಳಿಗೆ ಗುಂಡಮ್ಮ ಒಪ್ಪಿಗೆಯಾದಳು.

ಗುಂಡಮ್ಮ ಮೀನಾಕ್ಷಿಯನ್ನು ದೃಷ್ಟಿಸಿ ನೋಡಿದಳು. ಪಕ್ಕದಲ್ಲಿ ನಿಂತಿದ್ದ ರಾಮಚಂದ್ರಯ್ಯನನ್ನೂ ಒಮ್ಮೆ ನೋಡಿ ವಿನೀತಳಾಗಿ, ತಲೆಬಗ್ಗಿಸಿಕೊಂಡು ನಿಂತಳು. ಅವಳ ಮನಸ್ಸಿಗೆ ಮೀನಾಕ್ಷಿ ಮುಗ್ಧೆಯಾಗಿ, ತಿಳಿವಳಿಕೆಯಿಲ್ಲದವಳಾಗಿ ಕಂಡಳು ! ಅವಳು ತನಗಿಂತ ಎಂಟು ಹತ್ತು ವರ್ಷಗಳಾದರೂ ಚಿಕ್ಕವಳಾಗಿರಬೇಕು ಅನ್ನಿಸಿತು. ಕೊಂಚ ದಿನದಲ್ಲೇ ಆ ಮನೆಯಲ್ಲಿ ಕೊಂಚ ದರ್ಪ ತೋರಿಸಬಹುದು ಎನ್ನಿಸಿತು ಅವಳ ಸೂಕ್ಷ್ಮಬುದ್ಧಿಗೆ !

ಗುಂಡಮ್ಮ ಆ ದಿನವೇ ಅಡಿಗೆಮನೆಯ ಪ್ರವೇಶಮಾಡಿ, ಅಡಿಗೆ ಕೆಲಸ ಪ್ರಾರಂಭಿಸಿದಳು. ಗುಂಡಮ್ಮನ ನಯ ವಿನಯ, ಅಚ್ಚುಕಟ್ಟಿನ ಓರಣೆ ಮೀನಾಕ್ಷಿಗೆ ಒಪ್ಪಿತು.

ಹದಿನೈದು ದಿನಸಗಳು ಕಳೆಯುವುದರಲ್ಲಿ ಗುಂಡಮ್ಮ, ಮೀನಾಕ್ಷಿಯರಲ್ಲಿ ಸಲಿಗೆ ಬೆಳೆದು ಬಂದಿತು ಕಿರಿ ವಯಸ್ಸಿನ, ಸಂಸಾರಸುಖವನ್ನು ಅನುಭವಿಸಿದ್ದ ಗುಂಡಮ್ಮನ ಸಹವಾಸದಲ್ಲಿ ಮೀನಾಕ್ಷಿಗೆ ಬೇಸರ ಕಳೆಯಿತು. ಗುಂಡಮ್ಮ, ಮೀನಾಕ್ಷಿಯ ಸಂಸಾರದ ಚರಿತ್ರೆಯನ್ನೆಲ್ಲ ತಿಳಿದುಕೊಂಡಳು. ಅವಳ ಆತ್ಮೀಯರು ಯಾರು ಯಾರೆಂದು ತಿಳಿಯಿತು. ಗುಂಡಮ್ಮನ ಸೂಕ್ಷ್ಮಬುದ್ಧಿಗೆ ಮೀನಾಕ್ಷಿ, ರಾಮಚಂದ್ರಯ್ಯನ ಸಂಬಂಧದಲ್ಲಿ ಕುಂದಿದೆ. ಮೀನಾಕ್ಷಿ ಗಂಡನನ್ನು ಅಣುಮಾತ್ರವೂ

ಪ್ರೀತಿಸುವುದಿಲ್ಲ, ಎಲ್ಲ ತೋರಿಕೆಯ ನಟನೆಯೆಂದು ಮನದಟ್ಟಾಯಿತು. ರಾಮಚಂದ್ರಯ್ಯನ ಪ್ರೀತಿ ವಿಶ್ವಾಸಗಳು, ಅವನ ಹುಂಬುತನ, ಮೀನಾಕ್ಷಿಗೆ ಅವನು ಮನೆಯಲ್ಲಿ ಕೊಟ್ಟಿದ್ದ ಸ್ಥಾನ ಇವುಗಳನ್ನು ನೋಡಿ ಅಸೂಯೆಯಾಯಿತು. ತನ್ನ ಹೀನ ಅದೃಷ್ಟವನ್ನು, ತನ್ನ ಒಡೆದು ಹೋದ ಸಂಸಾರವನ್ನು ನೆನೆಸಿಕೊಂಡು ಅವಳ ಹೊಟ್ಟೆಯುರಿಯಿತು. ಅತ್ತೆಯ ಕಾಟವಿಲ್ಲದೆ ರಾಣಿಯಂತೆ ಸಿಂಗರಿಸಿಕೊಂಡು ತಾನೇ ತಾನಾಗಿ ಹಾಯಾಗಿದ್ದ ಮೀನಾಕ್ಷಿಯನ್ನು ನೋಡಿ ಅಸೂಯೆ ಪಟ್ಟಳು. ಮೀನಾಕ್ಷಿಯ ಬಳಿಯಿದ್ದ ಒಳ್ಳೊಳ್ಳೆಯ ಜರತಾರಿ, ರೇಶಿಮೆ ಸೀರೆಗಳನ್ನೂ, ಮೈಮೇಲೆ ಹಾಕಿಕೊಂಡಿದ್ದ ಒಡವೆಗಳನ್ನೂ ನೋಡಿ ಅವಳ ಹೊಟ್ಟೆ ಉರಿಯುತ್ತಿತ್ತು. ಮೀನಾಕ್ಷಿಯ ವಸ್ತುಗಳಲ್ಲೆಲ್ಲಾ ಅವಳ ಮನಸ್ಸನ್ನು ಅಪಹರಿಸಿದ್ದೆಂದರೆ ಚಂದ್ರು ಕೊಟ್ಟಿದ್ದ ವಜ್ರದುಂಗುರ, ಕಾಮಾಕ್ಷಿ ಅರಶಿನ ಕುಂಕುಮ ಇಟ್ಟು ಕೊಟ್ಟಿದ್ದ ನೀಲಿಯ ಜರತಾರಿ ಸೀರೆ ! ಮಂಗಳ ದ್ರವ್ಯಗಳ, ಮಂಗಳಸೂತ್ರದ ಭಾಗ್ಯವನ್ನು ಕಳೆದುಕೊಂಡಿದ್ದ, ಗಂಡನ ಸುಖವನ್ನು ಕಳೆದುಕೊಂಡಿದ್ದ ಅವಳಿಗೆ, ಮೀನಾಕ್ಷಿಯ ಸೌಭಾಗ್ಯವನ್ನು ಕಂಡು ಅಸೂಯೆಯ ಉರಿ ಏಳುತ್ತಿತ್ತು. ಅವಳ ಯೌವನ ಅವಳನ್ನು ಹಾಸ್ಯಮಾಡುತ್ತಿತ್ತು. ಮನಸ್ಸು ಕಳೆದು ಹೋದ ಸುಖಗಳನ್ನು ಬಯಸುತ್ತಿತ್ತು. ಆದರೆ ಗುಂಡಮ್ಮನಿಗೆ ಆ ಸುಖಗಳೆಲ್ಲ ಗಗನಕುಸುಮವಾಗಿ ಕಂಡಿತು. ಆ ನಿರಾಶೆಯಿಂದ ಅವಳಲ್ಲಿ ಆಗಾಗ ಮಾತ್ಸರ್ಯ ಹೊಗೆಯಾಡುತ್ತಿದ್ದಿತು. ಆದರೆ ಅವಳ ಸ್ಥಾನ ಅವಳನ್ನು ಎಚ್ಚರಿಸುತ್ತಿದ್ದಿತು.

## ೧೪

ಒಂದು ದಿನ ಮಧ್ಯಾಹ್ನ ಚಂದ್ರು ಇದ್ದಕ್ಕಿದ್ದಂತೆ ಮೀನಾಕ್ಷಿಯನ್ನು ನೋಡಲು ಬಂದನು. ಊಟ ಮಾಡಿ ಮೀನಾಕ್ಷಿ ಕೊಠಡಿ

ಯಲ್ಲಿ ಮಲಗಿದ್ದಳು ಚಂದ್ರುವಿಗೆ ರಾಮಚಂದ್ರಯ್ಯ ಆಫೀಸಿಗೆ ಹೋಗಿರುವನೆಂದು ಖಚಿತವಾಗಿ ತಿಳಿದಿದ್ದಿತು. ಆದರೂ ಅಭಾಸ ವಾಗದಿರಲೆಂದು ಬಾಗಿಲು ತಟ್ಟಿ ರಾಮಚಂದ್ರಯ್ಯನ ಹೆಸರು ಹಿಡಿದು ಕೂಗಿದನು. ಮೀನಾಕ್ಷಿಗೆ ಚಂದ್ರುವಿನ ಯೋಚನೆಯಲ್ಲೇ ನಿದ್ದೆ ಬಂದಿತ್ತು. ಕನಸಿನಲ್ಲಿ ಚಂದ್ರುವನ್ನು ಕಾಣುತ್ತಿದ್ದಳು. ಚಂದ್ರುವಿನ ಧ್ವನಿ ಅವಳ ಕಿವಿಗೆ ಬಿದ್ದ ತಕ್ಷಣ ಎಚ್ಚರವಾಯಿತು. ಆದರೆ ಅದರಲ್ಲಿ ನಂಬಿಕೆ ಬರಲಿಲ್ಲ. ಅಷ್ಟರಲ್ಲಿ ಗುಂಡಮ್ಮ ಬಾಗಿಲು ತೆಗೆದಳು. ಚಂದ್ರುವಿಗೆ ಹೊಸ ಮುಖವನ್ನು ಕಂಡು ದಿಗ್ಭ್ರಮೆಯಾಯಿತು. ಕೊಂಚ ಬೆದರಿದ ಧ್ವನಿಯಲ್ಲೇ ಕೇಳಿದನು.

"ರಾಮಚಂದ್ರರಾಯರು ಮನೆಯಲ್ಲಿ ಇದ್ದಾರೆಯೋ ?"

"ಇಲ್ಲ. ಅವರು ಆಫೀಸಿಗೆ ಹೋಗಿದ್ದಾರೆ. ಇನ್ನು ಸಾಯಂಕಾಲಕ್ಕೇ ಬರುವುದು."

"ಅವರ ಹೆಂಡತಿ ಮೀನಾಕ್ಷಮ್ಮ ಮನೆಯಲ್ಲೇ ಇರಬಹುದು ಅಲ್ಲವೇ ?"

ಅಷ್ಟು ಹೊತ್ತಿಗೆ ಮೀನಾಕ್ಷಿಗೆ ಚಂದ್ರುವಿನ ಧ್ವನಿಯೆಂದು ಖಚಿತ ವಾಯಿತು. ಉತ್ಸಾಹದಿಂದ ಹೊರಗೆದ್ದು ಬಂದಳು. ಬಾಗಿಲಲ್ಲಿ ನಿಂತಿದ್ದ ಚಂದ್ರುವನ್ನು ನೋಡಿ ಆಶ್ಚರ್ಯದಿಂದ, ಆನಂದದಿಂದ ಅವಳ ಮೈ ಪುಳಕಿತವಾಯಿತು. ಕಣ್ಣುಗಳಲ್ಲಿ ಪ್ರೇಮ ತುಂಬಿತು. ಗುಂಡಮ್ಮ "ಹ್ಞ.... ಇದ್ದಾರೆ" ಎನ್ನುವಷ್ಟರಲ್ಲಿ ಮೀನಾಕ್ಷಿ ಚಂದ್ರರ ದೃಷ್ಟಿ ಮಿಲನವಾಯಿತು. ಮೀನಾಕ್ಷಿ ಆನಂದದಿಂದ ಕಣ್ಣರಳಿಸಿ "ಹೋ! ಚಂದ್ರು ! .... ಬಾ ಚಂದ್ರು. ಒಳಗೆ ಬಾ. ಕಡೆಗೂ ಬಂದೆಯಲ್ಲಾ" ಎಂದು ಮೈಮರೆತು ಮುಸಿನಗೆ ನಕ್ಕಳು. ಅನಳಿಗೆ ಕೂಡಲೇ ಗುಂಡಮ್ಮ ಇರುವುದರ ಅರಿವಾಯಿತು. ನಾಚಿಕೆಯಿಂದ ಅವಳ ಮುಖ ಕೆಂಪಾ ಯಿತು. ಚಂದ್ರುವಿಗೆ ಗುಂಡಮ್ಮನಿರುವುದು ದೊಡ್ಡ ಕಂಟಕವಾಗಿ ತೋರಿತು. ಆ ಹೊಸ ವ್ಯಕ್ತಿಯ ಎದುರಿಗೆ ಅವನಿಗೆ ಬಾಯಿಕಟ್ಟಿದಂತಾ ಯಿತು. ಮುಸಿನಕ್ಕು ಒಳಗೆ ಹೋದನು. ಗುಂಡಮ್ಮ ಮಿಕ ಮಿಕನೆ ಕಣ್ಣುಬಿಟ್ಟುಕೊಂಡು ಇಬ್ಬರನ್ನೂ ನೋಡುತ್ತ ನಿಂತುಬಿಟ್ಟಳು.

ಅವಳಿಗೆ ಆ ಹೊಸ ವ್ಯಕ್ತಿಯಾರೆಂದು ತಿಳಿದುಕೊಳ್ಳಲು ಕುತೂಹಲ ವಾಯಿತು. ಮೀನಾಕ್ಷಿಗೂ ಅವಳ ಕುತೂಹಲದ ಸುಳಿವು ತೋರದಿರ ಲಿಲ್ಲ. ಅವಳಿಗೆ ಅವರಿಬ್ಬರ ಸಂಬಂಧವನ್ನು ಉಪಾಯವಾಗಿ ತಿಳಿಸಿ ಹೇಳಲು ಅಲ್ಲಿಯೇ ನಿಂತು ಕೇಳಿದಳು.

"ಏನು ಭಾವ, ಅಕ್ಕ ಮಕ್ಕಳು ಚೆನ್ನಾಗಿದ್ದಾರಾ.... ಬರಿಯ ಕೈಯಲ್ಲಿ ಬಂದಿರೋ ಹಾಗಿದೆ. ಬೆಂಗಳೂರಿನಿಂದ ತಾನೇ ಬರು ತ್ತಿರುವುದು ?"

"ಎಲ್ಲರೂ ಚೆನ್ನಾಗಿದ್ದಾರೆ .... ಹಾಗೇ ಸ್ನೇಹಿತರ ಜೊತೆ ಬಂದೆ. ಟೇಬಿಯಲ್ಲೇ ಇಳಿದುಕೊಂಡಿದ್ದೀನಿ. ನಿಮ್ಮನ್ನು ನೋಡಿಕೊಂಡು ಹೋಗೋಣವೆಂದು ಬಂದೆ."

ಚಂದ್ರುವಿಗೆ ಯಾವ ಮಾತನ್ನು ಹೇಳಲೂ ಹೆದರಿಕೆ. ಎರಡು ಮೂರು ಸಾರಿ ಹಿಂತಿರುಗಿ ಪಡಸಾಲೆಯಲ್ಲಿ ನಿಂತಿದ್ದ ಗುಂಡಮ್ಮನ ಕಡೆ ನೋಡಿದನು. ಗುಂಡಮ್ಮ ಬೀದಿ ಬಾಗಿಲು ಹಾಕಿಕೊಂಡು ಅಡಿಗೆ ಮನೆಗೆ ಹೋದಳು. ಚಂದ್ರು ಪ್ರಶ್ನಾರ್ಥಕ ದೃಷ್ಟಿಯಿಂದ ಮೀನಾಕ್ಷಿ ಯನ್ನು ನೋಡಿದನು.

"ಗುಂಡಮ್ಮ, ಕಾಫಿ ಮಾಡಿ" ಎಂದು ಮೀನಾಕ್ಷಿ ಅಪ್ಪಣೆಮಾಡಿ ಚಂದ್ರುವನ್ನು ಕೊಠಡಿಯೊಳಕ್ಕೆ ಸ್ವಾಗತಿಸಿ ಬಾಗಿಲು ಮುಂದಕ್ಕೆ ಮಾಡಿದಳು. ಗುಂಡಮ್ಮ ಕುತೂಹಲದಿಂದ ಅಡಿಗೆ ಮನೆಯ ಬಾಗಿಲ ಹಿಂದೆನಿಂತು, ಬಾಗಿಲಸಂದಿನಿಂದ ಎಲ್ಲ ನೋಡುತ್ತಿದ್ದಳು.

ಕೊಠಡಿಯೊಳಗೆ ಹೋದ ತಕ್ಷಣ ಚಂದ್ರು ಮೀನಾಕ್ಷಿಯನ್ನು ಅಪ್ಪಿಕೊಂಡನು. ಮೀನಾಕ್ಷಿ ಅವನ ತೋಳ ತೆಕ್ಕೆಯಲ್ಲಿ ತನ್ನ ಹೃದಯದ ನೋವನ್ನೆಲ್ಲ ಮರೆತಳು. ಅವಳಿಗೆ ತಾವಿಬ್ಬರೇ ಇರಲು ಅವಕಾಶವಿಲ್ಲದೇ ಹೋಯಿತಲ್ಲಾ ಎಂದು ವ್ಯಸನವಾಯಿತು. ತನ್ನ ಮಾತನ್ನು ಮೀರಿ ತನ್ನ ಸುಖಕ್ಕೆ ಪರೋಕ್ಷವಾಗಿ ಆತಂಕ ತಂದನೆಂದು ಗಂಡನನ್ನು ಶಪಿಸಿದಳು.

"ಏನು ಚಂದ್ರು, ಇಂತಹ ದಿನ ಖಂಡಿತ ಬರುತ್ತೇನೆಂದು ಕಾಗದ ಬರೆದಿದ್ದರೆ ಈ ಶನಿಯನ್ನು ಎಲ್ಲಿಗಾದರೂ ತೊಲಗಿಸುತ್ತಿದ್ದೆ."

"ಏನು ಮಾಡಲಿ ಮೀನಾ. ಹೊರಡುವುದೇ ನಿಶ್ಚಯವಾಗಿರಲಿಲ್ಲ. ನನ್ನ ಗೆಳೆಯರೊಬ್ಬರು ಅನಿರೀಕ್ಷಿತವಾಗಿ ಹೊರಟು ಬಿಟ್ಟರು. ನಾನೂ ಹೊರಡಬೇಕಾಯಿತು. ಕಾಗದ ಬರೆಯಲು ಪುರಸತ್ತೇ ಆಗಲಿಲ್ಲ. ಈಗ ವ್ಯಾಪಾರ ಚೆನ್ನಾಗಿದೆ. ನನ್ನ ಸಂಸಾರದ ಸುಖಕ್ಕಾಗಿ, ನಿನ್ನ ಸುಖಕ್ಕಾಗಿ ನಿರ್ವಂಚನೆಯಿಂದ ದುಡಿಯುತ್ತಿದ್ದೇನೆ ಮೀನಾ. ನಿನಗೆ ಕೊಟ್ಟಿರುವ ಭಾಷೆಯನ್ನು ಉಳಿಸಿಕೊಳ್ಳಬೇಡವೇ...."

ಮೀನಾ, ನಿರುತ್ತರಳಾದಳು. ಚಂದ್ರು ತನ್ನ ಜೇಬಿನಿಂದ ಒಂದು ಮುತ್ತಿನ ಸರ ತೆಗೆದು ಮೀನಳ ಕಣ್ಣು ಮುಂದೆ ಹಿಡಿದನು. ಆ ಸುಂದರ ವಾದ ಮುತ್ತಿನ ಸರವನ್ನು ನೋಡಿ ಮೀನಳ ಹೃದಯ ಅರಳಿತು. ಒಂದೊಂದು ಮುತ್ತನ್ನೂ ಕೈಯಲ್ಲಿ ಹಿಡಿದು ನೋಡಿ ಆನಂದಪಟ್ಟಳು. ಪ್ರೇಮ ತುಂಬಿದ ಕಣ್ಣುಗಳಿಂದ ಚಂದ್ರುವನ್ನು ನೋಡಿ

"ಚಂದ್ರು, ಇದಕ್ಕೇಕೆ ಈಗ ಖರ್ಚು ಮಾಡಿದೆ?" ಎಂದು ಕೇಳಿದಳು.

"ಖರ್ಚು, ಇನ್ನಾರಿಗೆ ಖರ್ಚು ಮಾಡಲಿ ಮೀನಾ. ನಾನು ಕಷ್ಟಪಟ್ಟು ಸಂಪಾದಿಸುತ್ತಿರುವುದು ನಿನಗಾಗಿ. ನನಗೆ ಬೇರೆ ರೀತಿ ಖರ್ಚು ಮಾಡಲು ಅವಕಾಶವೇ ಇಲ್ಲ."

ಚಂದ್ರು ಮೀನಾಕ್ಷಿಯ ಕೊರಳಿಗೆ ಮುತ್ತಿನ ಸರ ತೊಡಿಸಿದನು. ಸೆರಗು ಸರಿಸಿ ಆ ಸುಂದರವಾದ ಕತ್ತಿನ ಸುತ್ತ ಅಪ್ಪಿ ಕುಳಿತ ಆ ಸರವನ್ನು ಅದರ ಹಿನ್ನೆಲೆಯಲ್ಲಿ ಅಡಗಿದ್ದ ಮೀನಳ ಸೌಂದರ್ಯವನ್ನು ಆಸ್ವಾದಿಸಿದನು. ಮೀನಾ ಕನ್ನಡಿಯ ಮುಂದೆ ನಿಂತು ನೋಡಿ ಕೊಂಡಳು. ಚಂದ್ರು ಬಂದು ಹಿಂದೆ ನಿಂತನು. ಮೀನಾ ಅವನ ಎದೆಯ ಮೇಲೆ ಒರಗಿಕೊಂಡಳು. ಇಬ್ಬರೂ ತಮ್ಮಿಬ್ಬರ ಪ್ರತಿಬಿಂಬ ವನ್ನು ನೋಡಿಕೊಂಡರು. ಚಂದ್ರುವಿನ ಪ್ರತಿಬಿಂಬ, ಮೀನಳ ಹಣೆ ಯನ್ನು ಚುಂಬಿಸಿತು.

ಗುಂಡಮ್ಮ ಹಾಲಿನಲ್ಲಿ ಬಂದು ನಿಂತು ಕೂಗಿಕೊಂಡಳು.

"ಮೀನಾಕ್ಷಮ್ಮ, ನೀರು ಕುದಿಯುತ್ತಿದೆ. ನೀವೇ ಪುಡಿ ಸಕ್ಕರೆ ಹಾಕಿ. ಬನ್ನಿ."

ಮೀನಾಕ್ಷಿ ಹಾಗೆಯೇ ಹೊರಗೋಡಿದಳು.

ಅಡಿಗೆಮನೆಯಲ್ಲಿ ಕಾಫಿ ಪಾತ್ರೆಗೆ ಪುಡಿ, ಸಕ್ಕರೆಯನ್ನು ಹಾಕುತ್ತಿದ್ದಂತೆ, ಗುಂಡಮ್ಮನ ಕಾಕದೃಷ್ಟಿ ಮೀನಾಕ್ಷಿಯ ಕತ್ತಿನಮೇಲೆ ಹೋಯಿತು. ಆ ಸುಂದರವಾದ ಮುತ್ತಿನ ಸರ ಅವಳ ಕಣ್ಣು ಕುಕ್ಕಿತು ಗುಂಡಮ್ಮ ಆಶ್ಚರ್ಯದಿಂದ ಕೇಳಿದಳು.

"ಇದ್ಯಾವುದು ಮುತ್ತಿನ ಸರ ! ಹೊಸ್ದೇ....? "

"ಹೌದು, ಹೋದಸಾರಿ ಹೋಗಿದ್ದಾಗ ನಮ್ಮಕ್ಕನ ಕೈಲಿ ಹೇಳಿ, ದುಡ್ಡುಕೊಟ್ಟು ಬಂದಿದ್ದೆ. ನಮ್ಮ ಭಾವ ಮಾಡಿಸಿ ತಂದರು. ಚೆನ್ನಾಗಿದ್ಯೇ ಗುಂಡಮ್ಮ?"

"ದಿವ್ಯನಾಗಿದೆ....ಎಂಥಾ ಚೆನ್ನಾಗಿದೇಂದ್ರೆ—ಎಷ್ಟಾಯ್ತೇ"

"ಇನ್ನೂರು ರೂಪಾಯಿ ಕೊಟ್ಟು ಬಂದಿದ್ದೆ ........ ಅಷ್ಟೇ ಆಗಿರ್ಬೇಕು ಅಥ್ವಾ ಇನ್ನೊಂದೈವತ್ತು ಜಾಸ್ತಿ ಆಗಿರ್ಬೇಕು."

ಮೀನಾಕ್ಷಿ ಗುಂಡಮ್ಮನಿಗೆ,

" ಕೊಂಚ ಈರುಳ್ಳಿ, ಆಲೂಗಡ್ಡೆ ಹೆಚ್ಚಿ ಹಾಕಿ ರವೆ ಉಪ್ಪಿಟ್ಟು ಮಾಡಿಬಿಡಿ " ಎಂದು ಹೇಳಿ, ಎರಡು ಲೋಟ ಕಾಫಿ ತೆಗೆದುಕೊಂಡು ಚಂದ್ರುವಿನ ಬಳಿ ಹೋದಳು. ಹೋಗುತ್ತಿರುವಂತೆ ಗುಂಡಮ್ಮ ಕೇಳಿದಳು,

" ರಾತ್ರಿ ಊಟಕ್ಕೆ ಇರುತ್ತಾರೆ ತಾನೇ ?"

" ಇಲ್ಲ, ಅವರ ಸ್ನೇಹಿತರ ಜೊತೆ ಬಂದಿದ್ದಾರೆ. ಟೇಬೀಗೆ ಹೋಗಿ, ಅಲ್ಲೇ ಊಟ ಮಾಡುತ್ತಾರಂತೆ."

ಮೀನಾಕ್ಷಿ ಹೊರಟು ಹೋದಮೇಲೆ ಗುಂಡಮ್ಮ ಅವಳ ಹಿಂದೆ ಮೂತಿ ತಿರುಗಿಸಿ ಅಪಹಾಸ್ಯದ ನಗು ನಕ್ಕಳು. ' ಭಾವಾಂದ್ರೆ ಇಷ್ಟು ಎಗ್ರಾಡ್ಬೇಕೇನೋ ಗರ್ತಿ, ನಾಚ್ಕೆ ಬಿಟ್ಟು. ಗಂಡನ್ನ ಒಂದು ದಿನಾನಾದ್ರೂ ಇಷ್ಟು ಮಟ್ಟಿಗೆ ನಗುತ್ತಾ ಮಾತನಾಡ್ಸಿಲ್ಲ. ಅವರ ಮುಖ ಕಂಡ್ರೆ ಧುಮುಧುಮು ಅಂತ ಇರ್ತಾಳೆ....'

ಅವಳಿಗೆ ಏನೇನೋ ಯೋಚನೆಗಳು ಬಂದುವು, ಮೀನಾಕ್ಷಿಯ ವರ್ತನೆ ತೀರ ಅಭಾಸವಾಗಿ ಕಂಡಿತು. ಅವಳ ವೈಯ್ಯಾ ನರನಾಡಿ

ಗಳೆಲ್ಲ ಅವರಿಬ್ಬರೂ ಏನು ಮಾತನಾಡುವರೋ ಕೇಳಬೇಕೆಂದು ಒದ್ದಾಡಿತು. ಅವಳು ಒಂದೆರಡು ಸಾರಿ ಬಾಗಿಲ ಸಂದಿನಿಂದ ಇಣುಕಿ ನೋಡಿದಳು. ಕೊಠಡಿಯ ಬಾಗಿಲು ಮುಂದಕ್ಕೆ ಹಾಕಿತ್ತು. ಅಸ್ಪಷ್ಟವಾಗಿ ಮಾತುಗಳು ಕೇಳುತ್ತಿದ್ದಿತು.

"ಕಾಮಾಕ್ಷಿ, ಮಕ್ಕಳು, ಸ್ಟುಡಿಯೋ. ವ್ಯಾಪಾರ....ಅತ್ತೆ, ಮಾವ...."ಎಂದು ಒಂದೊಂದು ಪದಗಳು ಅವಳ ಕಿವಿಗೂ ಬಿದ್ದಿತು. ಅದರಿಂದ ಅವಳಿಗೆ ಮೀನಾಕ್ಷಿ ಅಕ್ಕನ ಸಮಾಚಾರ ಕೇಳುತ್ತಿದ್ದಾಳೆ ಎಂದು ತಿಳಿದು ಕುತೂಹಲ ಕಡಿಮೆಯಾಯಿತು.

ಆದರೆ ನಿಜವಾಗಿ ಆ ಕೊಠಡಿ ಮೀನಾ ಚಂದ್ರರ ವಿಹಾರ ವಾಗಿದ್ದಿತು.

ಕೊಂಚ ಹೊತ್ತಿನಲ್ಲೇ ಮೀನಾಕ್ಷಿ ಹೊರಗೆದ್ದು ಬಂದಳು. ಮೀನಾಕ್ಷಿ ಬೆಳ್ಳಿಯ ತಟ್ಟೆಯೊಂದರ ತುಂಬ ಉಪ್ಪಿಟ್ಟನ್ನೂ ಕಾಫಿಯನ್ನೂ ತೆಗೆದುಕೊಂಡು ಚಂದ್ರುವಿನ ಬಳಿ ಹೋದಳು. ಅಷ್ಟೊಂದು ಒಬ್ಬರಿಗೇ ತೆಗೆದುಕೊಂಡು ಹೋಗಿ ಕೊಡುತ್ತಾಳೆಯೋ ಎಂದು ಗುಂಡಮ್ಮನಿಗೆ ಸಂಶಯ ಬಂದಿತು. ಅವಳು ಅಡಿಗೆ ಮನೆಯ ಹೊರಬಾಗಿಲಿನ ಬಳಿ ಬಂದು ನಿಂತಳು. ಕೊಠಡಿಯಲ್ಲಿ ನಗುವಿನ ಶಬ್ದ ಕೇಳಿಸುತ್ತಿದ್ದಿತು. ಗುಂಡಮ್ಮ ಮೆಲ್ಲನೆ ಹೆಜ್ಜೆ ಇಟ್ಟುಕೊಂಡು ಬಂದು ಬಾಗಿಲಿನಲಿ ಸಣ್ಣಗೆ ಬಿಟ್ಟಿದ್ದ ಬಿರುಕಿನಿಂದ ಇಣುಕಿ ನೋಡಿದಳು. ಟೇಬಲ್ಲಿನ ಮೇಲೆ ಎದುರು ಬದರಿಗೆ ಕುಳಿತು ಮೀನಾ ಚಂದ್ರರು ಇಬ್ಬರೂ ಒಂದೇ ತಟ್ಟೆಯಲ್ಲಿ ಉಪ್ಪಿಟ್ಟು ತಿನ್ನುತ್ತಿದ್ದರು! ಗುಂಡಮ್ಮನಿಗೆ ಅದನ್ನು ನೋಡಿ ಮೈ ಝುಮ್ಮೆಂದಿತು ತನ್ನ ಊಹೆ ನಿಜವಾಯಿತಲ್ಲಾ ಎಂದು ಅವಳಿಗೆ ಹಿಡಿಸಲಾರದಷ್ಟು ಆನಂದವಾಯಿತು. ಜೊತೆಗೆ ಅವಳಲ್ಲಿ ಸುಪ್ತವಾಗಿ ಅಡಗಿದ್ದ ಆಸೆ ಅವಳನ್ನು ಮತ್ತಷ್ಟು ಕುತೂಹಲದಿಂದ ನೋಡುವಂತೆ ಮಾಡಿತು. ಸದರವಿರಬಹುದು, ಆದರೆ ಎಂಜಲು ತಿನ್ನುವಷ್ಟು. ಛೀ! ಎಂದಿತು ಮನಸ್ಸು.

ಸ್ವಲ್ಪ ಹೊತ್ತಿನ ಮೇಲೆ ಒಳಗೆ ಮಾತಿನ ಶಬ್ದವೂ ನಿಂತು ಹೋಯಿತು. ಗುಂಡಮ್ಮ ಕುತೂಹಲವನ್ನು ತಡೆಯದಾದಳು.

ಧೈರ್ಯಮಾಡಿ ಮತ್ತೆ ಬಾಗಿಲ ಸಂದಿನಿಂದ ಇಣುಕಿ ನೋಡಿದಳು. ಅವಳಿಗೆ ಇಬ್ಬರೂ ಕಾಣಲಿಲ್ಲ. ಆದರೆ ಎದುರಿಗೆ ಕನ್ನಡಿಯಲ್ಲಿ ಮಾತ್ರ ಚಂದ್ರು ಮೀನಾಕ್ಷಿಯರ ಅರೆ ಪ್ರತಿಬಿಂಬ ಕಂಡಿತು. ಚಂದ್ರುವಿನ ಕೈಗಳು ಮೀನಾಕ್ಷಿಯ ದೇಹವನ್ನು ಬಳಸಿದ್ದುವು! ಪಿಸು ಮಾತು ಅಸ್ಪಷ್ಟವಾಗಿ ಕೇಳುತ್ತಿದ್ದಿತು

ಗುಂಡಮ್ಮನ ಎದೆ ಧಸಕ್ ಎಂದಿತು! ಅಯ್ಯೋ, ಎಂತಹ ಅನ್ಯಾಯ, ಎಂದುಕೊಂಡಳು. ಕಣ್ಣರಳಿಸಿ ಒದ್ದಾಡಿ ಆ ಸಂದಿನಿಂದ ಕಾಣುವಷ್ಟನ್ನೂ ಚೆನ್ನಾಗಿ ನೋಡಿ ಖಚಿತಮಾಡಿಕೊಂಡಳು. ಅವಳಿಗೆ ಮಾತುಗಳನ್ನು ಕೇಳಬೇಕೆನ್ನಿಸಿತು. ಮೈಯೆಲ್ಲ ಕಿವಿಯಾಗಿ ಅವರ ಮಾತುಗಳನ್ನು ಆಲಿಸಿದಳು.

" ಊಹುಂ. ಚಂದ್ರು ಸಾಧ್ಯವಿಲ್ಲ. ನಾನು ಅಲ್ಲಿಗೆಲ್ಲಾ ಬರಲಾರೆ. ಅವರಿಗೆ ತಿಳಿದರೆ ಏನು ಗತಿ ? "

" ಮೊದಲು ವಾಕಿಂಗ್ ಹೋಗುತ್ತಿದ್ದೆಯಲ್ಲಾ, ಹಾಗೆಯೇ ಈಗಲೂ ಬರಬಾರದೆ ? "

" ಊಹುಂ. ಈಗ ಸಾಧ್ಯವೇ ಇಲ್ಲ. ಆ ಪಿಶಾಚಿಯನ್ನು ಬೇರೆ ನನ್ನ ಕೊರಳಿಗೆ ಕಟ್ಟಿದ್ದಾರೆ. ಕೊಂಚ ಇರು.........ಅಡಿಗೆ ಮನೆಯಲ್ಲಿ ಶಬ್ದವೇ ಕೇಳಿಸುವುದಿಲ್ಲ. ಅವಳು ಏನು ಮಾಡುತ್ತಿದ್ದಾಳೋ."

ಮೀನಾ ಎದ್ದುನಿಂತ ಶಬ್ದವಾಯಿತು. ಕಳ್ಳತನ ಮಾಡಿದವರಂತೆ ಗುಂಡಮ್ಮನ ಗುಂಡಿಗೆ ಹಾರಿತು. ಸರ್ರನೆ ತಲೆ ಎತ್ತಿದಳು. ಚಿಲಕಕ್ಕೆ ತಲೆ ಬಡಿದು ಟಪ್ ಎಂದು ಶಬ್ದವಾಯಿತು. ಒಂದೇ ಏಟಿಗೆ ಗುಂಡಮ್ಮ ಬಚ್ಚಲುಮನೆಗೆ ಹಾರಿಕೊಂಡು ನಲ್ಲಿ ತಿರುಗಿಸಿ ಪಾತ್ರೆ ತೊಳೆಯಲಾರಂಭಿಸಿದಳು. ಮೀನಾಕ್ಷಿಗೆ ಬಾಗಿಲ ಬಳಿ ಆದ ಸದ್ದಿನಿಂದ ಗಾಬರಿಯಾಯಿತು. ಅದು ಗುಂಡಮ್ಮನದೇ ಇರಬೇಕೆಂಬುದರಲ್ಲಿ ಸಂಶಯ ಉಳಿಯಲಿಲ್ಲ. ಸರ್ರನೇ ಬಾಗಿಲು ತೆಗೆದು ಹೊರಗೆ ನೋಡಿದಳು. ಗುಂಡಮ್ಮ ಬಚ್ಚಲುಮನೆಗೆ ಹೋಗುವುದರಲ್ಲಿ ಅವಳನ್ನು ನೋಡಿಬಿಟ್ಟಳು. ಅವಳ ಎದೆ ಹಾರಿತು ಆದರ ಹಿಂದೆಯೇ ನಲ್ಲಿ ತಿರುಗಿಸಿದ ಶಬ್ದ, ಪಾತ್ರೆಉಜ್ಜಿದ ಶಬ್ದ ಕೇಳಿಸಿತು. ಮೀನಾಕ್ಷಿಯ ಎದೆ ಬೆದರಿದ

ಪಾರಿವಾಳದ ಎದೆಯಂತೆ ಬಡಿದುಕೊಂಡಿತು. ಕಳುವು ಮಾಡುವಾಗ ಸಿಕ್ಕಿಹಾಕಿಕೊಂಡವರ ಸ್ಥಿತಿಯಾಯಿತು. ಸಂಶಯ ನಿಜವಾದರೂ ಅದು ಸುಳ್ಳಾಗಬಹುದೇನೋ ಎಂಬ ಕುಂಟು ಭರವಸೆಯಿಂದ ಬಚ್ಚಲ ಮನೆಯ ಹತ್ತಿರ ಹೋಗುತ್ತಾ ಕೇಳಿದಳು.

"ಏನು ಗುಂಡಮ್ಮಾ, ಈಗ ನೀವು ನನ್ನನ್ನು ಕರೆದಿರಾ ?"

"ಇಲ್ಲಾಮ್ಮ.........ನಾನೇಕೆ ಕರೀಲಿ."

ಗುಂಡಮ್ಮನ ಮಾತಿನಲ್ಲಿ ಖಾರವಿತ್ತು, ವ್ಯಂಗ್ಯವಿತ್ತು, ಧೋರಣೆಯಿತ್ತು. ದೃಷ್ಟಿಯಲ್ಲಿ ತಿರಸ್ಕಾರವಿತ್ತು. ಮೀನಳ ಹೃದಯಕ್ಕೆ ಅವುಗಳು ಸೂಜಿಯಂತೆ ನಾಟಿಕೊಂಡುವು.

ಮೀನಾ ಭಾರವಾದ ಮನಸ್ಸಿನಿಂದ ಚಂದ್ರುವನ್ನು ಬೀಳ್ಕೊಟ್ಟಳು.

ಮೀನಾಕ್ಷಿಗೆ ಚಂದ್ರುವಿನ ಅಗಲಿಕೆಯ ದುಃಖ, ತಾನೇ ನೈಮರೆತು ಮೈಮೇಲೆ ತಂದುಹಾಕಿಕೊಂಡ ಈ ಭಯಂಕರ ಪ್ರಸಂಗದ ಕಹಿನೆನಪು, ಎರಡೂ ಸೇರಿ ಅಳಬೇಕೆನ್ನಿಸಿತು- ಕೊಠಡಿಯೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡು ಬಿಕ್ಕಿಬಿಕ್ಕಿ ಅತ್ತಳು.

ಐದು ನಿಮಿಷಗಳ ಮೇಲೆ ಗುಂಡಮ್ಮ ಬಾಗಿಲ ಹತ್ತಿರ ನಿಂತು "ಮೀನಾಕ್ಷಮ್ಮಾ ............ ಬನ್ನಿ, ಉಪ್ಪಿಟ್ಟು ಆರಿಹೋಗುತ್ತೆ. ತಂಗೊಂಡ್ಬಿಡಿ" ಎಂದು ಕರೆದಳು.

ಮೀನಾಕ್ಷಿ ಸರ್ರನೆ ಎದ್ದು ಕಣ್ಣೊರಸಿಕೊಂಡು ಹೊರಗೆ ಹೋದಳು. ಬಚ್ಚಲು ಮನೆಗೆ ಹೋಗಿ ಮುಖ ತೊಳೆದುಕೊಂಡು ಪಡಸಾಲೆಯಲ್ಲಿ ಕುರ್ಚಿಯಮೇಲೆ ಹೋಗಿ ಕುಳಿತುಕೊಂಡಳು. ಅಲ್ಲಿದ್ದ ಹಳೆಯ ಮಾಸಪತ್ರಿಕೆ ಒಂದನ್ನು ತೆಗೆದುಕೊಂಡು ಸುಮ್ಮನೆ ಪುಟತಿರುವಿ ಹಾಕಿದಳು. ಗುಂಡಮ್ಮ ಮತ್ತೆ ಪ್ರತ್ಯಕ್ಷವಾದಳು.

"ಬನ್ನಿ ಮೀನಾಕ್ಷಮ್ಮ. ಇದೇನು ಹೀಗೆ ಕೂತುಬಿಟ್ರಿ. ಉಪ್ಪಿಟ್ಟು ತಗೊಂಡುಬಿಡೀಮ್ಮ ಆರಿಹೋಗುತ್ತೆ."

"ನಂಗೆ ಹಸಿವಿಲ್ಲ........"

"ಅಯ್ಯೋ, ಅದೇಕೆ ಹಾಗೆ ಹೇಳ್ತೀರಿ. ಎಷ್ಟೋ ಇಷ್ಟವಾಗಿ ಮಾಡಿಸಿಕೊಂಡು ತಿಂತಿದ್ರಿ. ನಿಮ್ಮ ಭಾವನವ್ರ ಜೊತೆ ಕೊಂಚ

ತಗೊಂಡ್ರೇನೋ ”

ಮೀನಾಕ್ಷಿಗೆ ಆ ಮಾತು ಮುಳ್ಳು ಚುಚ್ಚಿದಂತಾಯಿತು. ಇವಳು ತಾನು ಚಂದ್ರುವಿನ ಜೊತೆ ಉಪ್ಪಿಟ್ಟು ತಿಂದಿದ್ದನ್ನೂ ನೋಡಿಬಿಟಳೇನೋ ಎಂದು ಎದೆ ಅಳುಕಿತು.

“ ಇಲ್ಲ........ನಮ್ಮ ಭಾವನವರೇ ಎಲ್ಲಾ ತಿಂದರು. ತುಂಬ ಚೆನ್ನಾಗಿತ್ತಂತೆ.”

ಗುಂಡಮ್ಮ ಅಲ್ಲಿಗೇ ಬಿಡುವಂತೆ ಕಾಣಲಿಲ್ಲ. ಮರುಕಪಟ್ಟವಳಂತೆ ಮಾತನಾಡಿದಳು. “ ಪಾಪ, ಎಷ್ಟು ಹಸಿದು ಬಂದಿದ್ದರೋ ಇಲ್ಲಿ ಬಂದ ಮೇಲೆ ಹಸಿವು ಇಂಗಿತು ಅಂತ ತೋರುತ್ತೆ !”

ಆ ಮಾತಿನ ವ್ಯಂಗ್ಯ, ಗೂಢಾರ್ಥ ಮತ್ತೆ ಅವಳ ಅಂತರ್ಯವನ್ನು ಚುಚ್ಚಿತು. ಮೀನಾಕ್ಷಿಯ ಮುಖ ಕಪ್ಪಿಟ್ಟಿತು.

ಐದು ಘಂಟೆ ಹೊಡೆದ ಶಬ್ದ ಕೇಳಿ ಮೀನಾಕ್ಷಿಗೆ ಗಂಡನ ನೆನಪಾಗಿ ಸರಸರನೆ ಎದ್ದು ನಿಂತಳು. ಅವಳಿಗೆ ಕೂಡಲೇ ಮುತ್ತಿನ ಸರದ ನೆನಪಾಯಿತು. ಅದನ್ನು ಮುಟ್ಟಿನೋಡಿಕೊಂಡು ಅವಳಿಗೆ ಗಾಬರಿಯಾಯಿತು. ‘ ಅಬ್ಬ ! ಅವರು ಬಂದುಬಿಟ್ಟಿದ್ದರೆ, ಎಂಥ ಅಭಾಸವಾಗುತ್ತಿದ್ದಿತು. ಸಧ್ಯ ಜ್ಞಾಪಕ ಬಂದಿತಲ್ಲಾ ’ ಎಂದುಕೊಂಡು ಅದನ್ನು ಪೆಟ್ಟಿಗೆಯಲ್ಲಿ ತೆಗೆದಿಡಲು ಒಳಗೆ ಹೋದಳು.

ಸಾಯಂಕಾಲ ಆರು ಘಂಟೆಯ ಹೊತ್ತಿಗೆ ರಾಮಚಂದ್ರಯ್ಯ ಮನೆಗೆ ಬಂದನು. ಮೀನಾಕ್ಷಿ ನಟನೆಯ ನಗುವನ್ನು ಬೀರಿ ಎಂದಿನಂತೆ ಅವನನ್ನು ಸ್ವಾಗತಿಸಿದಳು. ಯಾವುದೋ ಕುತ್ತಿಗೆಗೆ ಗಂಟುಬಿದ್ದ ಕರ್ತವ್ಯದಂತೆ ತಾನು ದ್ವೇಷಿಸುತ್ತಿದ್ದ—ಆದರೂ ಸಮಾಜದ ದೃಷ್ಟಿಯಲ್ಲಿ ತನ್ನ ಜೀವನ ಸರ್ವಸ್ವವಾಗಿದ್ದ — ಗಂಡನೆಂಬ ಆ ವ್ಯಕ್ತಿಗೆ ಉಪಹಾರವನ್ನು ತೆಗೆದುಕೊಂಡು ಹೋಗಿ ಕೊಟ್ಟಳು. ಗುಂಡಮ್ಮ ಮೀನಾಕ್ಷಿಯ ಕುತ್ತಿಗೆಯನ್ನೇ ನೋಡುತ್ತಿದ್ದಳು. ಮೀನಾ ಅವಸರದಲ್ಲಿದ್ದುದರಿಂದ ಅವಳಿಗೆ ಕೇಳಬೇಕೆಂದಿದ್ದ ಪ್ರಶ್ನೆಯನ್ನು ಕೇಳಲು ಅವಕಾಶ ಸಿಕ್ಕಲಿಲ್ಲ. ಮೀನಾ ಉಪಹಾರ ಮುಗಿಸಿ ಎಂದಿನಂತೆ ಗಂಡನೊಡನೆ ಕಟುಕರವನನ್ನು ಹಿಂಬಾಲಿಸಿಹೋಗುವ ಕುರಿಯಂತೆ ಹೊರಗೆ ಗಾಳಿ

ಸಂಚಾರಕ್ಕೆ ಹೊರಟಳು. ಗುಂಡಮ್ಮ ಅವರಿಬ್ಬರೂ ಹೋಗುವುದನ್ನೇ ನೋಡುತ್ತ ನಿಂತವಳು ಅವರು ಮರೆಯಾದಮೇಲೆ ಮೂತಿ ತಿರುಗಿಸಿ, 'ಚಿನಾಲಿ, ಬಹಳ ಕಿಲಾಡಿ ಇವ್ಳು. ನಾಚಿಕ್ಕೆಟ್ಟೋಳು, ಗರ್ತಿ ಹಾಗೆ ಗಂಡನ ಜೊತೆ ತಲೆ ತಗ್ಗಿಸಿಕೊಂಡು ಹೋಗೋದು ನೋಡು. ಮಾನ ಮರ್ಯಾದೆ........ ಥೂ ಇವ್ಳ ಜನ್ಮಕ್ಕೆ ಬೆಂಕಿ ಹಾಕ' ಎಂದು ಉಗಿದು ಬಾಗಿಲು ಹಾಕಿಕೊಂಡಳು.

ಆ ರಾತ್ರಿ ಊಟಮಾಡಿ ಮಲಗುವುದಕ್ಕೆ ಮೊದಲು ಹಾಲು ಕುಡಿಯಲು ಬಂದ ಮೀನಾಕ್ಷಿಯನ್ನು ಗುಂಡಮ್ಮ ವ್ಯಂಗ್ಯವಾಗಿ ಕೇಳಿದಳು.

"ಅದೇನು ಮೀನಾಕ್ಷಮ್ಮ, ಮುತ್ತಿನ ಸರ ಸಾಯಂಕಾಲವೇ ತೆಗೆದುಹಾಕಿಬಿಟ್ಟಿದ್ರಿ. ನಿಮ್ಮ ಯಜಮಾನ್ರಿಗೆ ತೋರಿಸಲಿಲ್ವೇ. ಏನಂದ್ರು ?"

"ಆಂ.........ಇಲ್ವಲ್ಲ. ಅವರು ಬಂದ್ಮೇಲೆ ಒಂದೈದು ನಿಮಿಷ ಹಾಕ್ಕೊಂಡು ತೋರಿಸಿ ತೆಗೆದಿಟ್ಟೆಟ್ಟೆ. ಬಹಳ ಚೆನ್ನಾಗಿದೆ ಅಂದ್ರು."

ಮೀನಾಕ್ಷಿ ಮಾತು ತೇಲಿಸಿ ಅವಳ ಸಂಶಯ ದೃಷ್ಟಿಯನ್ನೂ, ತಿರಸ್ಕಾರದ ನಗುವನ್ನೂ ಗಮನಿಸಿ ನೋಡಿಯೂ ನೋಡದವಳಂತೆ ಹಾಲು ಕುಡಿದು ಹೊರಟು ಹೋದಳು. ಗುಂಡಮ್ಮ ನೆಟಿಕೆ ಮುರಿದು ಮೂತಿ ತಿರುಗಿಸಿ, "ನಿನ್ನಾಟ ಎಲ್ಲ ನನ್ಹತ್ರ ನಡ್ಯೊಲ್ಲ. ನನ್ನ ಕಣ್ಣಿಗೇ ಮಣ್ಣೆರಚ್ತೀಯ.... ಈ ಗುಟ್ಟೆಲ್ಲ ಹೊರಗೆ ಹಾಕ್ದಿದ್ರೆ ನಾನು ಗುಂಡಮ್ನೇ ಅಲ್ಲ" ಎಂದುಕೊಂಡಳು.

ರಾತ್ರಿ ಗುಂಡಮ್ಮನಿಗೆ ನಿದ್ದೆ ಬರಲಿಲ್ಲ. ತಾನು ಮೀನಾಕ್ಷಿಯನ್ನು ಯಾವ ರೀತಿ ಹೆದರಿಸಬಹುದೆಂದು ಯೋಚನೆ ಮಾಡುತ್ತಾ ಮಲಗಿಕೊಂಡಳು. ತಾನು ಕಂಡುದನ್ನೂ, ಮೀನಾಕ್ಷಿಯ ಮುತ್ತಿನ ಸರದ ವಿಷಯವನ್ನೂ ಧೈರ್ಯಮಾಡಿ ರಾಮಚಂದ್ರಯ್ಯನಿಗೆ ಹೇಳಬಹುದು. ಆದರೆ ಅದನ್ನು ಅವನು ಎಷ್ಟರ ಮಟ್ಟಿಗೆ ನಂಬಬಹುದು. ಸುಳ್ಳು ದೂರು ಹೇಳುವಳೆಂದು ತನ್ನ ಮೇಲೆಯೇ ತಿರುಗಿ ಬಿದ್ದರೆ ? ಮೀನಾಕ್ಷಿ ಕತ್ತು ಹಿಡಿದು ತನ್ನನ್ನು ಹೊರಗೆ ನೂಕಿದರೆ ? ತಾನು ಕಂಡುದನ್ನು

ಊರಿನವರಿಗೆಲ್ಲ ಹೇಳಿಕೊಂಡು ಬರಬಹುದು. ಆದರೆ ಎಷ್ಟು ಜನ ನಂಬುವರು. ತಾನಿರುವ ಸ್ಥಿತಿಯಲ್ಲಿ ಯಾರೂ ತನ್ನ ಮಾತನ್ನು ನಂಬುವುದಿಲ್ಲವೆಂದು ಅವಳಿಗೆ ತಿಳಿಯಿತು. ನಂಬಿದರೂ ಅದರಿಂದ ತನಗೇನು ಲಾಭವಾದ ಹಾಗಾಯಿತು? ಅವಳ ಮನಸ್ಸು ಲಾಭದ ಕಡೆಗೆ ಹೊರಳಿತು. ಮೀನಳ ಮುತ್ತಿನ ಸರ, ವಜ್ರದುಂಗುರ, ನೀಲಿಯ ಜರತಾರಿ ಸೀರೆ ಎಲ್ಲ ಅವಳ ಕಣ್ಣು ಮುಂದೆ ಹಾದು ಹೋಯಿತು. ಆಸೆಯ ಲಾಲಸೆ ಅವಳಲ್ಲಿ ಕಿಚ್ಚೆಬ್ಬಿಸಿತು. ತನ್ನ ಹೆಣ್ಣುಮಗುವಿನ ಆಕೃತಿ ಕಣ್ಣಿಗೆ ಕಟ್ಟಿತು. ತನ್ನ ಒಬ್ಬನೇ ಮಗನ ಭವಿಷ್ಯ ಎದುರಿಗೆ ಭೂತವಾಗಿ ಬಂದು ನಿಂತಿತು. ಏನೋ ಕೊಂಚ ಆಸ್ತಿ ಇರಬಹುದು. ಅದು ಯಾವ ಮೂಲೆಗೆ? ಹೆಣ್ಣುಮಗಳ ಮದುವೆಯಾಗಬೇಕು. ನಾಲ್ಕು ಜನ ಮೈದಂದಿರು ಹರಿದು ಹಂಚಿ ಕೊಂಡು ಉಡಾಯಿಸಿದ ಮೇಲೆ ಎಷ್ಟು ಆಸ್ತಿ ಉಳಿಯುತ್ತದೋ. ತನ್ನ ಬಾಯಾಳಿತನದಿಂದ ಕೆಟ್ಟವರನ್ನಾಗಿ ಮಾಡಿಕೊಂಡಿದ್ದ ಅತ್ತೆ ಮಾವ ಇನ್ನೂ ಬದುಕಿರುವಾಗಲೇ ಆ ಆಸ್ತಿ ತನ್ನ ಮಗನಿಗೆ ದಕ್ಕುವ ಹಾಗಿಲ್ಲ. ಮಗ ಹಕ್ಕುದಾರನಾಗಲು ಇನ್ನೂ ಹದಿನಾರು ವರ್ಷ ಕಳೆಯಬೇಕು. ಅಲ್ಲಿಯವರೆವಿಗೆ ಬರಿಯ ದುಡಿತದಿಂದ ಕಾಲಕಳೆಯ ಬೇಕು. ಆ ದುಡಿತದ ದುಡ್ಡು ಯಾವ ಮೂಲೆಗೆ? ಮೀನಾಕ್ಷಿಯನ್ನು ಹೆದರಿಸಿ ದುಡ್ಡು ಕೀಳಬೇಕೆಂಬ ಭಯಂಕರ ಯೋಚನೆ ಅವಳ ತಲೆ ಯನ್ನು ಹೊಕ್ಕಿತು. ಆದರೆ ಹೇಗೆ? ಯಾವ ರೀತಿಯಲ್ಲಿ? ಪ್ರಮಾಣ ವೆಲ್ಲಿದೆ? ಯಾವುದರ ಆಧಾರದ ಮೇಲೆ ತನ್ನ ಹಿಂಸೆಯ ಬಲೆ ಬೀಸ ಬಹುದು? ಅವಳಿಗೆ ಬಗೆ ಹರಿಯಲಿಲ್ಲ. ಅಯ್ಯೋ....ಯಾವುದಾದರೂ ಒಂದೇ ಒಂದು ಪ್ರಮಾಣ ಸಿಕ್ಕಿದ್ದರೆ....ಆಹಾ! ಎಷ್ಟು ತಮಾಷಿ ಯಾಗಿರುತ್ತಿದ್ದಿತು ಎಂದು ಬಯಸಿದಳು. ಯೋಚಿಸಿ ಯೋಚಿಸಿ ತನ್ನ ದುರದೃಷ್ಟವನ್ನು ಹಳಿದುಕೊಂಡಳು.

ಮಾರನೆಯ ದಿನದಿಂದ ಗುಂಡಮ್ಮನ ನಡವಳಿಕೆಯೇ ಬದಲಾ ಯಿಸಿತು. 'ತಲೆನೋವು ಹಾಳು ಕೆಲಸ, ಮೈ ಕೈ ನೋವು' ಎಂದು ಗೊಣಗಾಟ ಆರಂಭಿಸಿದಳು. ತರಕಾರಿ ತಂದು ಮೀನಾಕ್ಷಿಯ

ಮುಂದೆ ಹಾಕಿ, "ಕೊಂಚ ಹೆಚ್ಚಿಕೊಡಿ, ನಂಗೇಕೋ ಕೈ ನೋಯುತ್ತೆ" ಎನ್ನುತ್ತಿದ್ದಳು. ಕಾಫಿ ಬಟ್ಟಲುಗಳು, ಹಾಲಿನ ಪಾತ್ರೆ, ಡಿಕಾಕ್ಷನ್ ಬಗ್ಗಿಸಿದ ಪಾತ್ರೆ, ತಿಂಡಿಮಾಡಿದ ಬಾಂಡಲೆ, ತಿಂಡಿ ತಟ್ಟೆಗಳು ಎಲ್ಲಾ ಸಾಯಂಕಾಲವಾದರೂ ಅಲ್ಲೇ ಬಿದ್ದಿರುತ್ತಿದ್ದುವು. ಒಂದೆರಡು ದಿನ ಮೀನಾಕ್ಷಿಯೇ ತೊಳೆದಿಟ್ಟಳು.

ಆ ದಿನ ಬೆಳಿಗ್ಗೆ ದರ್ಜಿಯವನು ಮೀನಾಕ್ಷಿಗೆ ಹೊಸ ತರಪದ ಕುಪ್ಪುಸ ಹೊಲೆದು ತಂದುಕೊಟ್ಟನು. ಮೀನಾ, ತೋಳಿಗೆ ಹೂವಿನ ಕೈಕೆಲಸ ಮಾಡಿ ಲೋನೆಕ್ ಮಾದರಿಯಲ್ಲಿ ಹೊಲಿದುಕೊಂಡು ಬಂದಿದ್ದ ಆ ಕುಪ್ಪುಸ ತೊಟ್ಟುಕೊಂಡು ಗುಂಡಮ್ಮನಿಗೆ ತೋರಿಸಿದಳು. ಕೆಂಪು ದಮಾಸಿನ ಆ ಕುಪ್ಪುಸ ಮೀನಳ ಬಿಳಿ ಮೈಗೆ ಅಂದವಾಗಿ ಅಪ್ಪಿಕುಳಿತಿದ್ದಿತು. ಕತ್ತಿನ ಮಟ್ಟವನ್ನು ವಿಶಾಲವಾಗಿ ಕತ್ತರಿಸಿದ್ದರಿಂದ ಎಂದಿಗಿಂತ ಅವಳ ಮೇಲು ಎದೆ ಹೆಚ್ಚಾಗಿ ಕಾಣುತ್ತಿದ್ದಿತು. ಗುಂಡಮ್ಮನಿಗೆ ಕುಪ್ಪುಸ ತುಂಬ ಮನಸ್ಸಿಗೆ ಹಿಡಿಸಿತು. ಆದರೆ ಆ ಭಾಗ್ಯ ತನಗಿಲ್ಲವಲ್ಲಾ ಎಂದು ಹೊಟ್ಟೆಯುರಿಯಿತು. ಅವಳಿಗೆ ಏನಾದರೂ ಕೊಂಕು ಮಾತನಾಡಬೇಕೆನ್ನಿಸಿತು. ಮುಖ ಅಸಹ್ಯ ಮಾಡಿಕೊಂಡು,

"ಥೂ......ಕೊಂಚವೂ ಚೆನ್ನಾಗಿಲ್ವಲ್ರೀ, ಎದೆ ಎಲ್ಲ ಕಾಣುತ್ತಮ್ಮ. ಅಸಹ್ಯ" ಎಂದು ಬಿಟ್ಟಳು. ಮೀನಾಕ್ಷಿಗೆ ಅಸಮಾಧಾನವಾಯಿತು.

"ನಿಮಗೆ ಅದೆಲ್ಲಾ ಗೊತ್ತಾಗೊಲ್ಲ. ನಿಮಗೆ ಈಗಿನ ಕಾಲದ ಫ್ಯಾಷನ್ ತಿಳಿಯೊಲ್ಲ. ಬೆಂಗಳೂರಿನಲ್ಲೆಲ್ಲಾ ಎಲ್ಲರೂ ಹೀಗೇ ಹಾಕ್ಕೊಳ್ಳೋದು."

"ಬೆಂಗಳೂರು ಮನೆ ಹಾಳಾಯ್ತು. ಅದಕ್ಕೇ ಜನ ಕುಲಗೆಟ್ಟು ಹೋಗಿರೋದು."

"ಅದ್ಯಾಕ್ರೀ ಬೆಂಗಳೂರ್ನವರ್ನ ಬೈತೀರಿ. ಯಾರೋ ಒಂದಿಬ್ಬರು ಕೆಟ್ಟು ಹೋದರೆ ಬೆಂಗಳೂರೇ ಕೆಟ್ಹೋಯ್ತೇನು. ಸರಿಯಾಗಿರೋರು ಸರಿಯಾಗೇ ಇದ್ದಾರೆ. ಫ್ಯಾಷನಬಲ್ ಆಗಿ ಬಟ್ಟೆ ಹಾಕ್ಕೊಂಡುಬಿಟ್ರೆ

ಎಲ್ರೂ ಕೆಟ್ಟೋಗೊಲ್ಲ. ನಡತೆ ಸರಿಯಾಗಿಟ್ಕೋಬೇಕು, ಅಷ್ಟೆ."

"ಹೌದು, ನಾನು ಹೇಳೋದೂ ಅದೆ. ನಡ್ತೆ ಚೆನ್ನಾಗಿ ಇಟ್ಕೋಬೇಕೂ ಅಂತ. ಸರಿಯಾಗಿರೋರು ಸರಿಯಾಗೇ ಇದಾರೆ. ನಾನು ಕೆಟ್ಟುಹೋಗಿರುವವರ ವಿಚಾರ ಮಾತಾಡ್ತಿರೋದು. ಮೈ ಕೈ ತೋರಿಸ್ಕೊಂಡು ಬರೀ ಮೈಲಿ ಮೆರೆದಾಡ್ಲಿ. ಗಂಡಸ್ರು ಸ.ಮ್ಗ .ಬಿಡ್ತಾರ್ಯೇ. ಫ್ಯಾಷನ್ ಅಂತೆ. ಮೈ ಬಿಟ್ಕೊಂಡು ತಿರುಗಾಡೋದು ಫ್ಯಾಷನ್, ಅಲ್ವೆ. ನಾಳೆ ಕೆಟ್ಟಕೆಲಸ ಮಾಡೋದೂ, ಗಂಡನ್ಗೆ ಮೋಸ ಮಾಡೋದೂ ಫ್ಯಾಷನ್ ಅಂತಾರೆ. ಪಟ್ಟಣದವ್ರು ಮಾನ ಬಿಟ್ಟು ಕುಣ್ಯೋದು. ಹಳ್ಳಿ ಗುಗ್ಗೂಗ್ಳು ಪಟ್ಣಕ್ಕೆ ಹೋಗಿ ಅವರ ಅಲಂಕಾರ, ಕುಣಿತ ನೋಡಿ ಬಾಯ್ಬಾಯಿ ಬಿಟ್ಟು, ಹಳ್ಳಿಗೆ ಬಂದು ಅವರ್ಹಾಗೇ ಮೆರ್ಯೋದು. ನಡ್ತೆ ಬಿಟ್ಟು ನರಕಕ್ಕೆ ಹೋಗೋದು."

ಮೀನಾಕ್ಷಿಗೆ ಮನಸ್ಸು ಅಳುಕಿತು. ಆ ಮಾತುಗಳು ತನ್ನನ್ನೇ ಕುರಿತು ಹೇಳುವಂತೆ ತೋರಿತು.

"ಪಟ್ಟಣಕ್ಕೆ ಹೋಗಿ ಫ್ಯಾಷನ್ ಕಲ್ತು ಬಂದವ್ರೆಲ್ಲಾ, ಹಳ್ಳೀಗೆ ಬಂದು ಕೆಟ್ಟುಹೋಗಿದಾರ್ಯೇ?"

"ಇಲ್ದೆ ಏನು. ನಿಮಗೆ ಎಷ್ಟು ಬೇಕು ನಿದರ್ಶನ. ನಮ್ಮ ನೆಂಟರಲ್ಲೇ ಒಬ್ಬ ಹುಡುಗಿ. ಏನೂ ಅರೀದವ್ಳು, ಹಳ್ಳೀಲಿ ಗಂಡನ ಮನೇಲಿ ಅರುಂಧತಿ ಇದ್ಹಾಗೆ ಇದ್ದಳು. ಬೆಂಗಳೂರು ದಂಡಿಗೆ ಅವರ ಅಕ್ಕನ ಮನೆಗೆ ಹೋಗಿ ನಾಲ್ಕು ತಿಂಗಳಿದ್ದಳು. ಅಲ್ಲಿ ಗಾಳಿ ಬೀಸಿತು. ಎರಡು ತಿಂಗಳಲ್ಲೇ ಅವಳ ಫ್ಯಾಷನ್ ಏನು, ಅವಳ ಸಿಸ್ತೇನು, ಅಲ್ಲಿ ಅವಳಿಗೂ, ಅವಳ ಭಾವನಿಗೂ ಗಂಟುಬಿತ್ತು. ಊರಿಗೆ ಬರೋ ಹೊತ್ತಿಗೆ ಎರಡು ತಿಂಗಳು ಬಸುರಿಯಾಗಿ ಬಂದಳು. ಗಂಡನಿಗೆ ಸಮಾಚಾರ ತಿಳೀತು. ಪರಕೆ ತಗೊಂಡು ಬಡಿದು ತಾಯಿಮನೆಗೆ ಓಡಿಸಿದ. ಅಲ್ಲಿ ಆದ ಅಪಮಾನ ತಡೀಲಾರ್ದೆ ಭಾವೀಗೆ ಬಿದ್ದು ಸತ್ಲು. ಇಂಥಾದ್ದು ಇನ್ನೂ ಎಷ್ಟೋ. ಮಾಡೋದು ಅನಾಚಾರ ಮನೆ ಮುಂದೆ ಬೃಂದಾವನ ಅಂತ, ಅದಕ್ಕೇನು ಎಲ್ರೂ ಸಾವಿರ ಹೇಳಬಹುದು ......."

ಮೀನಾಕ್ಷಿಯ ಮುಖದ ಮೇಲೆ ಹೊಡೆದ ಹಾಗಾಯಿತು. ಮುಖ

ಕಪ್ಪಿಟ್ಟಿತು. ಆ ಮಾತು ತನ್ನನ್ನೇ ಕುರಿತು ಅವಹೇಳನ ಮಾಡಿ ಆಡಿದ್ದೆಂದು ಖಚಿತವಾಯಿತು. ಮೀನಾಕ್ಷಿ ಸಾವರಿಸಿಕೊಂಡಳು. ಕೊಂಚ ಕೋಪದಿಂದಲೇ ಕೇಳಿದಳು.

"ಏನ್ರೀ ಅದು, ಮಾಡೋದು ಅನಾಚಾರ, ಮನೇ ಮುಂದೆ ಬೃಂದಾವನ. ಹಾಗಂದರೇನ್ರಿ. ಯಾರ್ರೀ ಅನಾಚಾರ ಮಾಡ್ದವರು?"

"ಇನ್ನಾರು, ಆ ಭಾವೀಗೆ ಮುಗಚಿಕೊಂಡ್ಲಲ್ಲ ಅಂಥಾವ್ರು. ಅವ್ಳು ನಮ್ಮೂರ್ನಲ್ಲೇ ಇದ್ದಿದ್ದು. ಎಂಥೆಂಥಾ ನೀತಿ ಹೇಳ್ತಿದ್ಲು ಅಂತೀರಿ. ನಿತ್ಯ ಸಾವಿತ್ರಿ ಚರಿತ್ರೆ ಓದ್ತಿದ್ಲು, ಗೀತೆ ಓದ್ತಿದ್ಲು. ಪುರಾಣ ಕೇಳಿದ್ದೂ ಕೇಳಿದ್ದೆ. ಮಾಡಿದ್ದು ನೋಡ್ದ್ರೆ ಇಂಥಾ ಅನಾಚಾರ. ನಾಚಿಗ್ಗೆಟ್ಟೋರು ಮೆರೀತಾರೆ ತಾವೂ ಗರ್ತೀರು ಅಂತ. ಇತ್ಲಾ ಕಡೆ ಗಂಡನಿಗೂ ಮೋಸ, ಅವಳಿಗೂ ಸುಖವಿಲ್ಲ. ಹಾಳು ರಂಡೇರು."

ಮೀನಾಕ್ಷಿಯ ಮೈ ಆ ಅವಹೇಳನವನ್ನು ಕೇಳಿ ನಡುಗಿತು. ಗುಂಡಮ್ಮನ ಆ ತಿರಸ್ಕಾರ ದೃಷ್ಟಿಯನ್ನು ಎದುರಿಸಲಾರದೇ ಮೀನಾಕ್ಷಿ ತನ್ನ ಕೊಠಡಿಗೆದ್ದು ಹೋದಳು. ಅವಳಿಗೆ ಪ್ರತ್ಯುತ್ತರ ಏನು ಹೇಳ ಬೇಕೆಂದು ತೋರಲಿಲ್ಲ. ಬದಲಾಗಿ ಕಣ್ಣಲ್ಲಿ ನೀರು ತುಂಬಿಕೊಂಡಿತು.

ಮತ್ತೆ ಎರಡು ದಿವಸಗಳು ಕಳೆಯಿತು. ಗುಂಡಮ್ಮನ ವಿಚಿತ್ರ ರೀತಿಯ ನಡವಳಿಕೆ, ಧೋರಣೆ, ತಿರಸ್ಕಾರಗಳು ಹೆಚ್ಚಿದವು. ಮೀನಾಕ್ಷಿ ತಡೆಯಲಾರದೇ ಗಂಡನ ಹತ್ತಿರ ಹೇಳಿಕೊಂಡಳು.

"ನನಗೇಕೋ ಅಡಿಗೆಯವಳ ನಡತೆ ಸರಿಬರಲಿಲ್ಲ ಅಂದರೆ. ತಿಂಗಳಿಂದ ಸರಿಯಾಗಿದ್ದಳು. ನಾಲ್ಕೈದು ದಿವಸಗಳಿಂದ ತೀರ ಬದಲಾಯಿಸಿ ಹೋಗಿದ್ದಾಳೆ. ಒಂದು ತರಹ ತಿರಸ್ಕಾರದಿಂದ ಉಭಾಯಿಸಿ ಮಾತನಾಡುತ್ತಾಳೆ. ಕೆಲಸ ಜಾಸ್ತಿ ಎಂದು ಗೊಣಗಿ ಕೊಳ್ಳುತ್ತಾಳೆ. ಅವನನ್ನು ಕಳಿಸಿಬಿಡುವುದೇ ಒಳ್ಳೆಯದೆನ್ನಿಸುತ್ತದೆ."

"ಏನೋ ಕೆಲಸ ಜಾಸ್ತಿ ಇರಬಹುದು ಮೀನಾ. ಗೊಣಗಿ ಕೊಳ್ಳಲಿ ಬಿಡು. ಈಗ ಜನ ಸಹಾಯ ಸಿಕ್ಕುವುದೇ ಕಷ್ಟ. ನೋಡು ಅವಳು ಬಂದ ಮೇಲೆ ನೀನು ಎಷ್ಟೋ ಮೈ ತುಂಬಿಕೊಂಡು ಆರೋಗ್ಯ ವಾಗಿ ಕಾಣುತ್ತಿಯ. ನಿನಗೆ ಕಾಲಕಾಲಕ್ಕೆ ನೀರು ನಿಡಿ ಹಾಕಿ,

ಆರೈಕೆ ಯಾರು ಮಾಡಬೇಕು ಹೇಳು. ಒಳ್ಳೆ ಮಾತನಾಡಿಕೊಂಡು ಕೊಂಚ ಸಹಿಸಿಕೋ ಮೀನಾ. ಅವಳು ಬಂದ ಮೇಲೆ ನೋಡು ನನಗೆ ಎಷ್ಟೋ ಯೋಚನೆ ಕಡಿಮೆಯಾಗಿದೆ.

ರಾಮಚಂದ್ರಯ್ಯನ ಪ್ರೀತಿಯ ಧ್ವನಿಯಲ್ಲಿ ಮೀನಾಕ್ಷಿಯ ಕೋಪ ಕರಗಿತು. "ಆಗಲಿ, ಇನ್ನು ಒಂದು ಹದಿನೈದು ದಿನ ತಡೆದು ಕೊಂಡು ಒಳ್ಳೇಮಾತನಾಡಿ ನೋಡುತ್ತೇನೆ. ಅಲ್ಲಿಗೂ ಅವಳು ಸರಿ ಹೋಗದಿದ್ದರೆ ಕತ್ತು ಹಿಡಿದು ಹೊರಗೆ ದಬ್ಬೇನಿ. ನನಗೇಕೆ ಇಲ್ಲದ ಶನಿಕಾಟ?"

ರಾಮಚಂದ್ರಯ್ಯ ಮೀನಾಕ್ಷಿಯ ಮಾತಿಗೆ ತಲೆದೂಗಿ ಸಮ್ಮತಿಸಿ, ಮುಸಿನಕ್ಕನು.

ಮಾರನೆಯ ದಿನ ಮೀನಾಕ್ಷಿಯ ಬಾಳಿನಲ್ಲಿ ಅತ್ಯಂತ ದುರ್ದಿನ ವಾಗಿತ್ತು. ಗುಂಡಮ್ಮನ ಎಣಿಕೆಯಲ್ಲಿ ಅದು ಮಹಾ ಸುದಿನವಾಗಿತ್ತು. ಅವಳು ಬಯಸಿದಂತೆ ಮೀನಾಕ್ಷಿ ಅವಳ ಬಲೆಯಲ್ಲಿ ಸಿಕ್ಕಿಬಿದ್ದಳು.

ಮಧ್ಯಾಹ್ನ ಅಂಚೆಯವನು ಕಾಗದ ತಂದು ಕೊಟ್ಟನು. ಎಂದಿನಂತೆ 'ಪೋಸ್ಟ್' ಎಂದು ಕೂಗಲು ಗುಂಡಮ್ಮ ಕಿಟಕಿಯಿಂದ ಕಾಗದ ತೆಗೆದುಕೊಂಡಳು. ಮೀನಾಕ್ಷಿ ಕೊಠಡಿಯಲ್ಲಿ ಮಲಗಿದ್ದಳು. ಗುಂಡಮ್ಮ ಯಾವಾಗಲೂ ಮೀನಾಕ್ಷಿಯನ್ನು ಎಬ್ಬಿಸಿ ಅವಳ ಕೈಗೆ ಕಾಗದವನ್ನು ಕೊಡುತ್ತಿದ್ದಳು. ಆ ರೀತಿ ಮೀನಾಕ್ಷಿಯ ಅಪ್ಪಣೆಯಾಗಿದ್ದಿತು. ಗುಂಡಮ್ಮ ಕಾಗದವನ್ನು ತಿರುಗಿಸಿ ನೋಡಿದಳು. ಅದರಿಂದ ಒಂದು ಬಗೆಯ ಸುವಾಸನೆ ಬರುತ್ತಿದ್ದಿತು. ಗುಂಡಮ್ಮ ಕವರನ್ನು ಮೂಸಿ ನೋಡಿದಳು. ಅದನ್ನು ತೆಗೆದುಕೊಂಡು ಇನ್ನೇನು ಮೀನಾಕ್ಷಿಯ ಕೊಠಡಿಯೊಳಕ್ಕೆ ಹೋಗಬೇಕು. ಅವಳಿಗೆ ಏನೋ ಯೋಚನೆ ಹೊಳೆಯಿತು. ಸಿಡಿಲು ಹೊಡೆದವಳಂತೆ ಅಲ್ಲಿಯೇ ನಿಂತುಬಿಟ್ಟಳು. ಕಾಗದ ಚಂದ್ರಶೇಖರರಾಯರು ಬರೆದಿದ್ದರೆ? ಅಯ್ಯೋ.... ಎಂತಹ ಸುಯೋಗ. ಆ ಒಂದು ಕಾಗದ ಅವನದಾಗಿದ್ದರೆ ತಾನು ಕಟ್ಟಿದ ಕನಸೆಲ್ಲ ಕೈಗೂಡಿ ಹೋಗುವುದೆಂದು ಯೋಚಿಸಿಕೊಂಡಳು. ಅವನದಲ್ಲದಿದ್ದರೆ? ಏನೀಗ ......ಕಾಗದವನ್ನು ಹರಿದು ಹಾಕಿ ಕೊಡದೇ ಹೋದರಾಯಿತು.

ಗುಂಡಮ್ಮ ಅಡಿಗೆ ಮನೆಗೆ ಹೋಗಿ ಕವರನ್ನು ಒಡೆದು ಕಾಗದ ಓದಿದಳು. ಓದುತ್ತಿದ್ದಂತೆ ಗುಂಡಮ್ಮನಿಗೆ ಸಂತೋಷದಿಂದ ಕಿರುಚಿಕೊಳ್ಳು ವಂತಾಯಿತು. ಗುಂಡಮ್ಮ ಮತ್ತೆ ಮತ್ತೆ ಆ ಕಾಗದ ಓದಿಕೊಂಡಳು.

ಪ್ರೇಯಸಿ ಮೀನಾ,

ನಿನ್ನ ಜೊತೆ ಸ್ವರ್ಗದಲ್ಲಿ ವಿಹರಿಸಿ ಇಲ್ಲಿ ಮತ್ತೆ ನರಕಕ್ಕೆ ಬಂದಂತಾಯಿತು. ನಿನ್ನ ಪ್ರೇಮದ ರಸದೌತಣವನ್ನು ಎಂದೆಂದಿಗೂ ಮರೆಯಲಾರೆ. ಎಂದೆಂದಿಗೂ ನಿನ್ನೊಡನೆ ಇರ ಬೇಕೆಂದು ಬಯಸುತ್ತೇನೆ. ಆದರೆ ಸಾಧ್ಯವೇ? ವಿಧಿ ನಮ್ಮನ್ನು ಕ್ಷಣಕಾಲ ಕೂಡಿಸಿ ಮತ್ತೆ ಅಗಲಿಸುತ್ತದೆ. ಇದು ವಿಧಿಯಾಟ! ನಾವು ಸಿಕ್ಕಿದಷ್ಟನ್ನೇ ಅನುಭವಿಸಿ ತೃಪ್ತಿಪಟ್ಟುಕೊಳ್ಳಬೇಕು. ನಮ್ಮ ದೇಹ ದೂರವಿರಬಹುದು ಮೀನಾ. ಆದರೆ ನಮ್ಮ ಹೃದಯಗಳು ಎಂದೆಂದಿಗೂ ಒಂದೆ. ನಿನ್ನೊಡನೆ ಕಳೆದ ಆ ಒಂದೆರಡು ಘಂಟೆಗಳ ರಸನಿಮಿಷಗಳ ನೆನಪಿನಲ್ಲಿ ನನ್ನೆಲ್ಲ ದುಃಖವನ್ನೂ ಮರೆಯುತ್ತೇನೆ. ಆ ನೆನಪೊಂದೇ ನನಗೆ ಚೇತನ ನೀಡುತ್ತದೆ. ಬಾಳಬೇಕು, ಬದುಕಬೇಕು ಎಂಬ ಆಶೆಯು ಹಣತೆಯನ್ನು ಹಚ್ಚಿ ದಾರಿ ತೋರಿಸುತ್ತದೆ.

ಮೀನಾ, ನಾನು ಬರುವಾಗ ನಿನ್ನ ಮುಖ ಬಾಡಿದಂತಿದ್ದಿತು. ಆ ಅಡಿಗೆಯವಳ ಹೆದರಿಕೆಯಿಂದ ಹಾಗಾಗಿರಬಹುದು. ನಾನು ಕೇಳಿದಂತೆ ನನ್ನೊಡನೆ ಟೇಬಿಗೆ ಬಂದು ಸುತ್ತಾಡಿಕೊಂಡು ಬರಲು ಸಾಧ್ಯವಾಗಲಿಲ್ಲವಲ್ಲಾ ಎಂದು ನೊಂದುಕೊಂಡಿರ ಬಹುದು. ಆದರೆ ನಿನ್ನ ಸ್ಥಿತಿ ಎಂತಹುದೆಂದು ನನಗೆ ತಿಳಿದಿಲ್ಲವೇ? ನೀನು ಬರಲಿಲ್ಲವೆಂದು ನಿನ್ನ ಪ್ರೀತಿ ಕಮ್ಮಿಯಾಯಿತೇ. ಇಲ್ಲ, ಎಂದಿಗೂ ಸಾಧ್ಯವಿಲ್ಲ. ನಾನು ಇದ್ದಷ್ಟು ಹೊತ್ತೂ ನನಗೆ ಅಮೃತಪಾನ ಮಾಡಿಸಿದೆ. ಯೋಚಿಸಬೇಡ ಮೀನಾ. ಹೆದರ ಬೇಡ. ನಮ್ಮಿಬ್ಬರ ಪ್ರೇಮ ನಿರ್ಮಲವಾಗಿರುವಾಗ, ಪರಿಶುದ್ಧ ವಾಗಿರುವಾಗ ನಾವು ಯಾರಿಗೇಕೆ ಹೆದರಬೇಕು? ನಾವು

ಬಯಸಿದಂತೆ ಆಗಾಗ ನಾವಿಬ್ಬರೇ ಏಕಾಂತದಲ್ಲಿ ಮಿಲನವಾಗಲು ಸಾಧ್ಯವಾಗದಿರಬಹುದು. ಅದಕ್ಕಾಗಿ ಯೋಚನೆ ಮಾಡಬೇಡ. ನಿನ್ನ....ಆಗುವುದರಲ್ಲಿ ನಾನು ಮತ್ತೊಂದು ಸಾರಿ ಬರುತ್ತೇನೆ.

ಯೋಚನೆ ಮಾಡಿ ಆರೋಗ್ಯ ಕೆಡಿಸಿಕೊಳ್ಳಬೇಡ. ಚೆನ್ನಾಗಿ ತಿಂದು ಸಂತೋಷವಾಗಿರು. ಹಣ್ಣುಗಳನ್ನು ತಿನ್ನು. ನಗುತ್ತ ನಗುತ್ತ ಇರು. ನಿನ್ನ ಹೊಟ್ಟೆಯಲ್ಲಿರುವ ನನ್ನ ಮಗ (?) ಆರೋಗ್ಯವಾಗಿ ನಿನ್ನಷ್ಟೇ ಸುಂದರನಾಗಿ ಬೆಳೆಯಲಿ! ನನ್ನ ಮಗನನ್ನು ನೋಡಬೇಕೆಂದು ಬಹಳ ಆಸೆ ಆಗುತ್ತದೆ ಮೀನಾ! ಇನ್ನೂ ಎಷ್ಟು ದಿನವೋ....

ಕಾಮಾಕ್ಷಿ, ಮಕ್ಕಳು ಆರೋಗ್ಯವಾಗಿದ್ದಾರೆ. ಸಾವಿರ ಮುತ್ತು ಗಳೊಡನೆ ಈ ಕಾಗದ ಮುಗಿಸುತ್ತೇನೆ. ನನ್ನ ಮುದ್ದು ಮೀನಾ.

ನಿನ್ನ ಅಮರಪ್ರೇಮಿ,
ಚಂದ್ರು

ವಿ. ಸೂ :—ನಿನಗೆ ದುಡ್ಡು ಬೇಕಾದರೆ ಬರಿ. ಯಾವಾಗ ಬೇಕಾದರೂಕಳುಹಿಸುತ್ತೇನೆ.

ಗುಂಡಮ್ಮ ಕಡೆಯ ಪುಟವನ್ನು ಬಾರಿಬಾರಿಗೂ ಓದಿ ವಿಕಟ ವಾಗಿ ನಕ್ಕಳು. "ನಿನ್ನ ಹೊಟ್ಟೆಯಲ್ಲಿರುವ ನನ್ನ ಮಗ........ನನ್ನ ಮುದ್ದು ಮಗ. ಅಂದರೆ ಮೀನಾಕ್ಷಿ ಅಕ್ಕನ ಮನೆಗೆ ಹೋಗಿದ್ದಾಗ........ ಹೋ! ನನ್ನ ಊಹೆ, ನನ್ನ ಕಥೆ ನಿಜವೇ ಆಯಿತು.......... ಹಹ್ಹ ಹ್ಹ ಹ್ಹ" – ಗುಂಡಮ್ಮ ಕಾಗದವನ್ನು ಕುಪ್ಪುಸದೊಳಗೆ ಸೇರಿಸಿ ದಳು. ಆನಂದದಿಂದ ನೆಲದಮೇಲೆ ಉರುಳಿಕೊಂಡಳು. ಆ ಆನಂದ ದಲ್ಲಿ ಅವಳು ತಿಂಡಿಯನ್ನೂ ಮಾಡಲಿಲ್ಲ. ತನ್ನ ಭವಿಷ್ಯದ ಭವ್ಯಮಂದಿರ ವನ್ನು ಕಲ್ಪಿಸುವುದರಲ್ಲಿ ಗುಂಡಮ್ಮ ಮೈಮರೆತಳು. ಅವಳ ಕಣ್ಣೆದುರಿಗೆ ಮೀನಾಕ್ಷಿಯ ನೀಲಿಯ ಜರತಾರಿ ಸೀರೆ, ವಜ್ರದುಂಗುರ, ಮುತ್ತಿನ ಸರ ಎಲ್ಲ ಬಂದು ನಿಂತು ನಾಟ್ಯವಾಡಿದುವು. ಚಂದ್ರು ಬರೆದಿದ್ದ "ನಿನಗೆ ದುಡ್ಡು ಬೇಕಾದರೆ ಬರಿ. ಯಾವಾಗ ಬೇಕಾದರೂ ಕಳುಹಿಸು

ತ್ತೀಸೆ" ಎಂಬ ವಾಕ್ಯಗಳು ಅವಳ ಸ್ಮೃತಿಪಟಲದಲ್ಲಿ ಅಚ್ಚೊತ್ತಿ ನಿಂತವು. ಕಣ್ಣಿನ ಮುಂದೆ ನಾಟ್ಯವಾಡಿದುವು. ಝಣಝಣ ಎಂದು ದುಡ್ಡಿನ ಸದ್ದು ಅವಳ ಕಿವಿ ಕೊರೆಯಿತು !

ಮೀನಾಕ್ಷಿ ನಾಲ್ಕು ಘಂಟೆಯ ಹೊತ್ತಿಗೆ ಎದ್ದು ಅಡಿಗೆಯ ಮನೆಗೆ ಬಂದಳು. ಅಷ್ಟು ಹೊತ್ತಿಗೆ ಕಾಫಿ ಕುಡಿಯುವುದು ಅವಳಿಗೆ ಅಭ್ಯಾಸ ವಾಗಿದ್ದಿತು. ಗುಂಡಮ್ಮ ಅಲ್ಲಿರಲಿಲ್ಲ. ಕಾಫಿ ಒಲೆ ಹಚ್ಚಿದಂತೆಯೂ ಕಾಣಲಿಲ್ಲ. ಮೀನಾಕ್ಷಿಗೆ ಕೋಪ ಬಂತು. "ಗುಂಡಮ್ಮಾ, ಗುಂಡಮ್ಮಾ" ಎಂದು ಕೂಗಿಕೊಂಡು, ಪಡಸಾಲೆಯಲ್ಲಿ ಬಗ್ಗಿ ನೋಡಿ ದಳು. ಗುಂಡಮ್ಮ ಅಲ್ಲಿರಲಿಲ್ಲ. ಹಿತ್ತಲು ಬಾಗಿಲು ಹಾಕಿದ್ದಿತು. ಮೀನಾಕ್ಷಿಗೆ ಆಶ್ಚರ್ಯವಾಯಿತು. ಮತ್ತೆ ಪಡಸಾಲೆಗೆ ಬಂದು ನೋಡಿ ದಳು. ಬೀದಿ ಬಾಗಿಲ ಅಗುಳಿ ಹಾಕಿರಲಿಲ್ಲ. ಮೀನಾಕ್ಷಿ ಬಾಗಿಲು ತೆಗೆದುಕೊಂಡು ಕಾಂಪೌಂಡಿನ ಬಾಗಿಲ ಹತ್ತಿರ ನಿಂತುಕೊಂಡು ಆಚೀಚೆ ನೋಡಿದಳು. ಗುಂಡಮ್ಮ ಅಯ್ಯಂಗಾರರ ಮನೆ ಬಾಗಿಲ ಹತ್ತಿರ ನಿಂತು ಒಳಗಡೆ ಯಾರ ಹತ್ತಿರವೋ ಮಾತನಾಡುತ್ತಿದ್ದಳು. ಮೀನಾಕ್ಷಿಗೆ ಸಿಟ್ಟು ಹತ್ತಿತು. "ಗುಂಡಮ್ಮಾ, ಬನ್ರೀ ಅಲ್ಲೇನು ಮಾಡ್ತೀರಿ. ನಾಲ್ಕು ಘಂಟೆ ಆಯ್ತು" ಎಂದು ಕೂಗಿಕೊಂಡಳು. ಗುಂಡಮ್ಮ ತಿರುಗಿನೋಡಿ "ಏರ್ಯ್ ಇರು" ಅನ್ನುವಂತೆ ಕೈಸನ್ನೆಮಾಡಿಸಿ ಮತ್ತೆ ಮಾತನಾಡ ತೊಡಗಿದಳು. ಮೀನಾಕ್ಷಿಗೆ ಅವಳ ಅಹಂಕಾರ ಕಂಡು ಮೈ ಬೆಂಕಿಯಾಯಿತು. ಕಡೆಗೆ ಗುಂಡಮ್ಮ ದರ್ಪದಿಂದ ಬಂದಳು. ಮೀನಾಕ್ಷಿ ಸಿಟ್ಟಿನಿಂದ ಒದರಿದಳು.

"ಏಕ್ರೀ, ಅಲ್ಲೀಗೇಕೆ ಹೋಗಿದ್ರಿ. ಅವರ ಮನೇಗೆಲ್ಲ ಹೋಕ್ಕೂಡ್ದು ಅಂತ ಹೇಳಿಲ್ರಿಲ್ವ ?"

"ಅಶ್ಶೆ.... ಆದ್ಯಾಕಮ್ಮಾ ಹಾಗಾಡ್ತೀಯ. ಯಾರ್‍ಯಾರ ಮನೇಗೆ ಹೋಗ್ಬೇಕು, ಯಾರ್‍ಯಾರ ಮನೇಗೆ ಹೋಕ್ಕೂಡ್ದು ಅಂತ ನೀವು ಬರ್‍ಕೊಟ್ಟ ಕಾಗ್ದಕ್ಕೆ ನಾನೇನು ರುಜು ಹಾಕ್ಲಿಲ್ಲ. ಈ ಹಾಳ್ಮನೇಲಿ ಮೂರ್‍ಹೊತ್ತೂ ನೇಣು ಹಾಕ್ಕೋತೀನಿ ಅಂತ ನಾನೇನು ಪತ್ರ ಬರ್‍ಕೊ ಟ್ಟಿಲ್ಲ. ಬೇಜಾರಾದಾಗ ಬೇಕಾದವ್ರ ಮನೇಗೆ ಹೋಗೋದೆ. ಯಾರ

ಅಡ್ಡೀನೂ ಇಲ್ಲ."

ಮೀನಾಕ್ಷಿಗೆ ದಿಗ್ಭ್ರಮೆಯಾಯಿತು. ಅವಳ ವೈಸಿಟ್ಟಿನಿಂದ ಕುದಿಯಿತು.

"ಎಷ್ಟು ಗುಂಡಮ್ಮ ನಿಮಗೆ ತಲೆ ಹರಟೆ. ಯಾಕೆ ಅವ್ರ ಮನೇಗೆ ಹೋಗಿದ್ರಿ ಅಂದ್ರೆ ತಲೇ ಎಲ್ಲ ಹರಟ್ತಾರೆ. ಕಾಫೀನೂ ಮಾಡ್ದೆ ಹಾಳು ಹರಟೆ ಹೊಡೀತಾ ನಿಂತು ಮತ್ತೆ ಬಾಯ್ಮಾಡ್ತೀರಿ. ಮಾತು ನೋಡಿ· ಹಾಳ್ಮನೆಯಂತೆ ಹಾಳ್ಮನೆ."

ಗುಂಡಮ್ಮ ಬೀದಿ ಬಾಗಿಲು ಧಡಾರನೆ ಮುಚ್ಚಿಬಿಟ್ಟು ಬಂದು ಮೀನಾಕ್ಷಿಯ ಮುಂದೆ ನಿಂತು ಅಬ್ಬರಿಸಿದಳು.

"ಏನ್ರಿ ಅದು ಘೋರು ಮಾಡ್ತೀರಿ. ಹಾಳ್ಮನೇ ಅಲ್ಲ ಇದು, ಹಾದರದ ಮನೆ. ನಿಮ್ಮ ಚಾಲೆಲ್ಲಾ ನಂಗೆ ಗೊತ್ತಿಲ್ಲ ಅಂದ್ಕೊಂಡ್ರೇನೂ. ನಿಮ್ಮಾಟ ಎಲ್ಲ ನನ್ನ ಹತ್ತಿರ ನಡ್ಯೊಲ್ಲ, ತಿಳ್ಕೊಳ್ಳಿ. ನೋಡ್ಲಿಲ್ವೆ ನಿಮ್ಮ ಭಾವ ಬಂದಿದ್ದಾಗ ನೀವು ಮಾಡಿದ ಅನಾಚಾರಾನ. ಸಮಯ ಸಿಕ್ಲಿ ಅಂತ ಕಾದಿದ್ದೆ. ಏನೋ ಗರ್ತಿ ಹಾಗೆ ಮಾತಾಡ್ತೀರಿ."

ಮೀನಾಕ್ಷಿಗೆ ಸಿಡಿಲು ಹೊಡೆದಂತಾಯಿತು. ತಾನೇ ಯೋಚಿಸಿದ್ದಂತೆ ಅವಳಿಗೆ ಎಲ್ಲಾ ಗೊತ್ತಾಗಿಬಿಟ್ಟಿದೆಯೆಂದು ಹೆದರಿಕೆಯಾಯಿತು. ಇನ್ನು ಉಳಿದಿರುವುದು ಒಂದೇ ಮಾರ್ಗ. ರಾಮಚಂದ್ರಯ್ಯ ಬಂದೊಡನೆ ಅವನೊಡನೆ ಅವಳ ನಡತೆ ಚೆನ್ನಾಗಿಲ್ಲವೆಂದು ಹೇಳಿ ಮನೆಬಿಟ್ಟು ಓಡಿಸುವುದು. ಮೀನಾಕ್ಷಿಗೆ ಈ ಯೋಚನೆಯಿಂದ ಕೊಂಚ ಧೈರ್ಯ ಬಂದಿತು.

"ಏನ್ರೀ ಅದು ಬಾಯಿಗೆ ಬಂದಿದ್ದೆಲ್ಲಾ ಮಾತಾಡ್ತೀರಿ. ಎಷ್ಟು ಮನೆ ಹೀಗೆ ಹಾಳ್ಮಾಡಿ ಬಂದಿದ್ದೀರಿ ನೀವು. ಇರಿ ಕೊಂಚ ಹೊತ್ತು. ಅವ್ರು ಬರ್ಲಿ. ಕತ್ತು ಹಿಡಿದು ಆಚೇಗೆ ನೂಕಸ್ತೀನಿ."

ಆ ಮಾತಿಗಾಗೇ ಕಾಯುತ್ತಿದ್ದ ಗುಂಡಮ್ಮ ಗಹಗಹಿಸಿ ನಕ್ಕು, ಆರ್ಭಟಿಸಿದಳು.

"ನೋಡು ಮೀನಾಕ್ಷೀ, ನೀನು ಈ ಮನೆ ಬಿಟ್ಟು ಹೋಗುತ್ತೀಯೊ, ನಾನೋ. ನಿನ್ನ ಗಂಡ ಬಂದ ತಕ್ಷಣ, ಚಂದ್ರಶೇಖರ ಬರೆದ

ಈ ಕಾಗದ ನೋಡಿ ಪರಕೆಯಲ್ಲಿ ಹೊಡೆದು ನಿನ್ನ ಹೊರಗೆ ಹಾಕ್ತಾನೆ. ಎಲ್ಲಾ ಇನ್ನು ಕೊಂಚಹೊತ್ತು ಅಷ್ಟೆ."

ಮೀನಾ ಗರಬಡಿದವಳಂತೆ ತಿರುಗಿ ಕಣ್ಣರಳಿಸಿ ಗುಂಡಮ್ಮನನ್ನೇ ನೋಡುತ್ತ ನಿಂತುಬಿಟ್ಟಳು. ಗುಂಡಮ್ಮ ಕುಪ್ಪಸದಲ್ಲಿ ಬಚ್ಚಿಟ್ಟು ಕೊಂಡಿದ್ದ ಚಂದ್ರುವಿನ ಕಾಗದವನ್ನು ಅವಳಿಗೆ ತೋರಿಸಿ ವಿಕಟವಾಗಿ ನಕ್ಕಳು.

ಮೀನಳ ಮೈ ಥರಥರನೆ ನಡುಗಿತು. ಆ ಚಿರಪರಿಚಿತ ತೆಳು ನೀಲಿ ಕಾಗದ ನೋಡಿ ತಲೆ ತಿರುಗಿ ಬೀಳುವಂತಾಯಿತು. ಮೀನಾಕ್ಷಿ ಹಾಗೆಯೇ ಸಾವರಿಸಿಕೊಂಡು ನಿಂತಳು. ಶಕ್ತಿಯನ್ನೆಲ್ಲಾ ಒಟ್ಟು ಗೂಡಿಸಿ ಒಂದೇ ಏಟಿಗೆ ಹಾರಿಬಂದು ಗುಂಡಮ್ಮನ ಮೈಮೇಲೆ ಬಿದ್ದು "ರಾಕ್ಷಸೀ, ಕೊಡು. ಆ ಕಾಗದ ಇಲ್ಲಿ ಕೊಟ್ಟುಬಿಡು" ಎಂದು ಅವಳ ಕೈಯಿಂದ ಕಿತ್ತುಕೊಳ್ಳಲು ಪ್ರಯತ್ನಿಸಿದಳು. ಗುಂಡಮ್ಮ ಗುಂಡುಕಲ್ಲಿ ನಂತೆಯೇ ಇದ್ದಳು. ಮೀನಾಕ್ಷಿಯನ್ನು ಹಿಂದಕ್ಕೆ ನೂಕಿ ತಿರಸ್ಕಾರ ದಿಂದ ಹೇಳಿದಳು.

"ಹಷ್ಟ ಹ್ಹ........ಈ ಕಾಗದ. ಇದು ನನ್ನ ಆಸ್ತಿ. ಅದನ್ನು ಮಾತ್ರ ನಾನು ಕೊಡುವುದಿಲ್ಲ."

ಮೀನಾಕ್ಷಿಯ ರೋಷವೆಲ್ಲ ಕರಗಿಹೋಯಿತು. ಅವಳು ಭಿಕ್ಷುಕಿ ಯರ ಭಿಕ್ಷುಕಿಯಾಗಿಬಿಟ್ಟಳು. ಅವಳ ಕಣ್ಣಲ್ಲಿ ನೀರು ತುಂಬಿತು. ಗುಂಡಮ್ಮನ ಕಾಲು ಹಿಡಿದುಕೊಂಡು ಬೇಡಿಕೊಂಡಳು.

"ಬೇಡಿ ಗುಂಡಮ್ಮ. ನನ್ನ ಮಾನ ಕಳೆಯಬೇಡಿ. ನನ್ನ ಹೊಟ್ಟೆಯ ಸಂಕಟ ನಿಮಗೆ ಗೊತ್ತಿಲ್ಲ ನಾವಿಬ್ಬರೂ ಚಿಕ್ಕವಯಸ್ಸಿ ನಿಂದ ಪ್ರೀತಿಸುತ್ತಿದ್ದೆವು. ವಿಧಿ ನಮ್ಮನ್ನು ವಂಚಿಸಿತು. ನಾವು ಬೇರೆ ಯಾದೆವು. ಆದರೆ ಮನಸಾರ ನಾನು ಅವರನ್ನು ಎಂದೋ ವರಿಸಿದ್ದೆ. ಆರು ವರ್ಷದಿಂದ ಸಂಕಟ ಅನುಭವಿಸಿದೆ. ಕಡೆಗೆ ಅವರು ಮತ್ತೆ ಸಿಕ್ಕಿದರು. ಮತ್ತೆ ನನ್ನನ್ನು ದುಃಖದಲ್ಲಿ ನೂಕ ಬೇಡಿ. ಅಕ್ಕ ಎಂದು ಭಾವಿಸಿ ನಿಮ್ಮ ಕಾಲು ಹಿಡಿದು ಬೇಡಿಕೊಳ್ಳುತ್ತೇನೆ. ನಾನು ಮಾಡಿದ್ದು ಕೆಟ್ಟ ಕೆಲಸವಲ್ಲ ಗುಂಡಮ್ಮ. ಮೋಸಕ್ಕೆ ಮೋಸ ಮಾಡಿದೆ. ನನ್ನ

ಸಂತೋಷಕ್ಕೆ ಕಲ್ಲು ಹಾಕಬೇಡಿ. ನಾನು ನಿಮಗೇನು ಅನ್ಯಾಯ ಮಾಡಿದೆ. ಅಕ್ಕನಂತೆ ಉಪಚಾರ ಮಾಡಿದೆನಲ್ಲಾ. ಕೊಟ್ಟು ಬಿಡಿ ಗುಂಡಮ್ಮಾ. ಅದರಿಂದ ನಿಮಗೇನು ಪ್ರಯೋಜನ. ಜನ್ಮಜನಕ್ಕೂ ನಿಮ್ಮ ಉಪಕಾರ ನೆನೆಸಿಕೊಳ್ಳುತ್ತೇನೆ. ಕೊಟ್ಟು ಬಿಡಿ ಗುಂಡಮ್ಮಾ."

ಮೀನಾಕ್ಷಿಯ ಕಥೆ, ಅವಳ ಕಣ್ಣೀರಿನ ಕೋಡಿ, ದೈನ್ಯ ತುಂಬಿದ ಮುಖ ಅರೆಕ್ಷಣ ಗುಂಡಮ್ಮನ ಪಾಷಾಣ ಹೃದಯವನ್ನೂ ಅಲುಗಿಸಿತು. ಆದರೆ ಅವಳ ಲಾಲಸೆ ಅವಳನ್ನು ಎಚ್ಚರಿಸಿತು. ಗುಂಡಮ್ಮ ಕಲ್ಲು ವಿಗ್ರಹದಂತೆ ನಿಂತು ಹೇಳಿದಳು.

"ನಿನ್ನ ಕಥೆ, ನಿನ್ನ ಪ್ರೇಮ ಹೇಗಾದರೂ ಇರಲಿ. ಅದರಿಂದ ನನಗೇನು ? ಈ ಕಾಗದ ನನಗೆ ಬಹಳ ಬೆಲೆ ಬಾಳುತ್ತದೆ. ಇದನ್ನು ಕೊಟ್ಟು ಬಿಟ್ಟರೆ ನನ್ನನ್ನು ಆಗಲೇ ಹೇಳಿದಂತೆ ಕತ್ತು ಹಿಡಿದು ಹೊರಗೆ ದಬ್ಬಿಸುತ್ತೀಯೆ. ಇದನ್ನು ಕೊಟ್ಟರೆ ನನಗೆ ಏನು ಪ್ರತಿಫಲ ಕೊಡುತ್ತೀರಿ ಹೇಳಿ."

ಮೀನಾಕ್ಷಿಯ ಕಣ್ಣರಳಿತು. ಏನಾದರೂ ಕೊಟ್ಟು ಅವಳ ಬಾಯಿ ಮುಚ್ಚಿಸಬಹುದೆಂದು ತೋರಿತು. ಬಾಡಿ ಬಿದ್ದ ಭರವಸೆ ಮತ್ತೆ ಚಿಗುರಿತು.

"ಪ್ರತಿಫಲ ಏನು ಕೊಡಬೇಕು ಗುಂಡಮ್ಮ ? ನಿಮಗೆ ಏನು ಬೇಕು ? "

"ಪ್ರತಿಫಲ, ನೀವು ಎಂದುಕೊಂಡಿರುವಂತೆ ಸಾಧಾರಣವಾದುದಲ್ಲ. ಅದು ಅಮೂಲ್ಯವಾಗಿರಬೇಕು. ಈ ಕಾಗದದ ಮೇಲೆ ಈಗ ನಿಮ್ಮ ಭವಿಷ್ಯ ನಿಂತಿದೆ. ಅದಕ್ಕೆ ಬೆಲೆ ಎಷ್ಟು ಹೆಚ್ಚಾಗಿರಬೇಕು, ನೀವೇ ಯೋಚಿಸಿ. ನನಗೆ ಏನು ಕೊಟ್ಟರೂ ಅದು ಕಮ್ಮಿ, ಮೀನಾಕ್ಷಮ್ಮ"

"ಅಂದರೆ....ನನ್ನ ಹತ್ತಿರ ಏನಿದೆ ? ನನಗೆ ಸೇರಿದ್ದಾದರೆ ನಾನು ಕೊಡುತ್ತೇನೆ. ಹೇಳಿ ಗುಂಡಮ್ಮಾ"

"ನಿಮ್ಮ ವಜ್ರದುಂಗರ"

"ಹಾ ! ವಜ್ರದುಂಗುರ ! "

"ಏಕೆ ಮೀನಾಕ್ಷಮ್ಮ. ವಜ್ರದುಂಗುರ ನಾನು ಮಾಡುವ ಉಪಕಾರಕ್ಕೆ ಜಾಸ್ತಿಯೇ ?"

"ಇಲ್ಲ ಇಲ್ಲ ಗುಂಡಮ್ಮ. ಅದು ಮಟ್ಟಿಗೆ ಸಾಧ್ಯವಿಲ್ಲ. ಅದು ನನ್ನ ಜೀವನ ಸರ್ವಸ್ವ. ಅದು ನಮ್ಮ ಅಮರ ಪ್ರೇಮದ ಸಂಕೇತ. ಅದು ನಾನು ಇರುವವರೆಗೂ ನನ್ನೊಡನೆ ಇರಬೇಕು.... ಹೌದು ಇರಬೇಕು. ದಯವಿಟ್ಟು ಅದೊಂದನ್ನು ಮಾತ್ರ ಕೇಳಬೇಡಿ. ನಿಮ್ಮ ಕಾಲಿಗೆ ಬೀಳುತ್ತೇನೆ, ಗುಂಡಮ್ಮಾ."

"ಇಲ್ಲ ನನಗೆ ಒಂದು ಸಾವಿರ ರೂಪಾಯಿಗಳಷ್ಟು ಒಡವೆ ವಸ್ತು ಕೊಡಬೇಕು."

"ಒಂದು ಸಾವಿರ !"

"ಹೌದು, ಒಂದು ಸಾವಿರ."

"ಒಂದು ಸಾವಿರ ನನ್ನ ಹತ್ತಿರ ಎಲ್ಲಿ ಬರಬೇಕು ಗುಂಡಮ್ಮಾ? ನನ್ನ ಹತ್ತಿರ ಒಂದು ನೂರು ರೂಪಾಯಿ ಇರಬಹುದು. ನಾನೇನು ಅಷ್ಟು ಸಾಹುಕಾರಳೇ ?"

"ಬರಿಯ ದುಡ್ಡು ಬೇಡ. ಅಷ್ಟೇ ಬೆಲೆಯ ಒಡವೆ ಸೀರೆಯನ್ನಾದರೂ ಕೊಡಲೇಬೇಕು"

"ಒಡವೆ, ಸೀರೆ ?"

"ಹೌದು, ನನಗೆ ನಿಮ್ಮ ಮುತ್ತಿನಸರ ಬೇಕು. ನಿಮ್ಮ ನೀಲಿಯ ಜರತಾರಿ ಸೀರೆ ಬೇಕು. ಚಂದ್ರಶೇಖರರಾಯರು ನಿಮಗೆ ದುಡ್ಡು ಬೇಕಾದಾಗ ಬರಿ, ಯಾವಾಗ ಬೇಕಾದರೂ ಕಳುಹಿಸುತ್ತೇನೆಂದು ಬರೆದಿದ್ದಾರೆ. ಅವರಿಂದ ದುಡ್ಡು ತರಿಸಿಕೊಡಿ. ಯಾರಿಗೋಸ್ಕರ ಕೊಡುತ್ತಾರೆ."

ಮೀನಾಕ್ಷಿ ಒಂದು ನಿಮಿಷ ಯೋಚಿಸಿದಳು. ಏನನ್ನೋ ನಿರ್ಧರಿಸಿಕೊಂಡು ಎದ್ದು "ಬನ್ನಿ ಗುಂಡಮ್ಮಾ, ನನ್ನ ಆಸ್ತಿಯನ್ನೆಲ್ಲ ತೋರಿಸುತ್ತೇನೆ. ನೀವು ನೋಡಿಯೇ ಇದ್ದೀರಿ" ಎಂದು ಮಲಗುವ ಮನೆಗೆ ಹೋದಳು. ಗುಂಡಮ್ಮ ಹಿಂಬಾಲಿಸಿದಳು.

ಮೀನಾಕ್ಷಿ ಮಂಚದ ತಳಗಿದ್ದ ಟ್ರಂಕನ್ನು ಎಳೆದು ಬೀಗತೆಗೆದಳು. ಒಳಗಿದ್ದ ನಾಲ್ಕು ಜರತಾರಿ ಸೀರೆಗಳನ್ನೂ, ಎರಡು ರೇಶ್ಮೆಯ ಸೀರೆ

ಗಳನ್ನೂ, ಎರಡು ಖಣಗಳನ್ನೂ ತೆಗೆದಿಟ್ಟಳು. ಚಂದ್ರು ತಂದು ಕೊಟ್ಟಿದ್ದ ಮುತ್ತಿನಸರ ವೆಲ್‌ವೆಟ್ ಪೆಟ್ಟಿಗೆಯಲ್ಲಿಟ್ಟಿದ್ದಳು. ಅದನ್ನು ತೆಗೆದು ಗುಂಡಮ್ಮನಿಗೆ ಕೊಟ್ಟು "ಇದನ್ನುತೆಗೆದುಕೊಳ್ಳಿ. ಇನ್ನೂರೈವತ್ತು ರೂಪಾಯಿಯಾಯಿತು. ಇನ್ನು ಈ ನೀಲಿಯ ಜರತಾರಿ ಸೀರೆ, ಈ ಬಾಕಿಯ ಸೀರೆಗಳು ಒಂದೂ ನನ್ನದಲ್ಲ ನಾಳೆ ಮನೆಯಲ್ಲಿ ಕೇಳಿದರೆ ಏನು ಹೇಳಲಿ ?" ಎಂದು ದೈನ್ಯದಿಂದ ಗುಂಡಮ್ಮನನ್ನು ದೃಷ್ಟಿಸಿದಳು.

"ಊಹುಂ, ಸಾಧ್ಯವೇ ಇಲ್ಲ. ನನಗೆ ಈ ಸೀರೆ ಬೇಕೇ ಬೇಕು. ಕಳ್ಳ ತೆಗೆದುಕೊಂಡುಹೋದನೆಂದು ಹೇಳಿ.... ಎಲ್ಲಿ ನೂರು ರೂಪಾಯಿ ಎಂದಿರಲ್ಲ ?"

ಒಂದು ಕರ್ಪೂರದ ಪೆಟ್ಟಿಗೆಯಲ್ಲಿ ಮುಡಿಚಿಟ್ಟಿದ್ದ ನೂರು ನೋಟು ಗಳನ್ನು ಎಣಿಸಿ ಮೀನಾಕ್ಷಿ ಗುಂಡಮ್ಮನಿಗೆ ಕೊಟ್ಟು, "ನೋಡಿ ಮುನ್ನೂರೈವತ್ತು ರೂಪಾಯಿಗಳಾಯಿತು. ನಿಮಗೆ ಈ ಸೀರೆಯೇ ಬೇಕು ಎಂದರೆ ನನ್ನ ಮಗುವಿನ ನಾಮಕರಣವಾಗುವವರೆಗೆ ಕಾದಿರಿ. ಆ ದಿನ ಉಟ್ಟುಕೊಂಡುಬಿಟ್ಟರೆ ಆಮೇಲೆ ಭಯವಿಲ್ಲ. ಆಮೇಲೆ ನಾನು ಎಷ್ಟು ದಿನ ಬದುಕುತ್ತೇನೋ........ಹಾಳಾಗಿಹೋಯಿತು ಎಂದರೆ ಸರಿ. ಕೇಳು ವವರೂ ಇರುವುದಿಲ್ಲ. ನಾಮಕರಣವಾದ ಮೇಲೆ ಸತ್ಯವಾಗಿ ಕೊಡು ತ್ತೇನೆ. ನನಗೆ ಯಾವುದರ ಮೇಲೆಯೂ ಆಶೆಯೇ ಇಲ್ಲ. ನನ್ನ ಮಗು ಒಂದೇ. ಅದನ್ನು ನೋಡಿದಮೇಲೆ..........ನಾನು ಸತ್ತರೂ ಚಿಂತೆಯಿಲ್ಲ" ಮೀನಾಕ್ಷಿಯ ಕಣ್ಣಲ್ಲಿ ನೀರೂರಿತು. ಕಂಠ ಗದ್ಗದವಾಯಿತು. ಗುಂಡಮ್ಮನಿಗೆ ಅವಳ ಮಾತಿನಮೇಲೆ ಗಮನವೇ ಇರಲಿಲ್ಲ. ಅವಳು ಮುತ್ತಿನ ಸರವನ್ನು ಕಣ್ಣರಳಿಸಿ ನೋಡುತ್ತಿದ್ದಳು. ನೂರು ರೂಪಾಯಿ ಗಳ ಕಂತೆಯನ್ನು ಕೈಯಿಂದ ಸವರುತ್ತಿದ್ದಳು.

"ಈ ಸೀರೆ ನೂರು ರೂಪಾಯಿ ಆಯಿತು. ಒಟ್ಟು ನಾನೂರೈವತ್ತು ಆಯಿತು. ಇನ್ನು ಐನೂರ ಐವತ್ತಕ್ಕೆ ಏನು ಮಾಡಲಿ ?"

"ಈಗಲೇ ಏನೂ ಅವಸರವಿಲ್ಲ ಮೀನಾಕ್ಷಮ್ಮ. ನಿಧಾನವಾಗಿ ತೀರಿಸಿ. ಚಂದ್ರಶೇಖರರಾಯರಿಂದ ತರಿಸಿಕೊಂಡು ಕೊಡಿ. ನಾನು ಹೋಗುವಷ್ಟರಲ್ಲಿ ಕೊಟ್ಟರೆ ಸರಿ."

" ಅಂದರೆ........! "

" ಅಂದರೇನು........ ನಾನು ಅಡಿಗೆ ಕೆಲಸಕ್ಕೆ ಇಲ್ಲೇ ಇರುತ್ತೇನಲ್ಲಾ. ದುಡ್ಡು ಬಂದಾಗಲೆಲ್ಲಾ ನಾನೇ ತೆಗೆದುಕೊಳ್ಳುತ್ತೇನೆ. ನನ್ನ ಹೆಸರಿಗೇ ಕಳುಹಿಸಿ ಎಂದು ಬರೆಯಿರಿ. "

" ಹೋ........ನೀವು ಇರುತ್ತೀರಾ..........ಆಗಲಿ ಗುಂಡಮ್ಮ. ಎಲ್ಲಿ ಕಾಗದ ಕೊಟ್ಟುಬಿಡಿ."

" ಕಾಗದ ! ಮೀನಾಕ್ಷಮ್ಮ, ನೀವು ಪೂರ್ತಿ ಸಾವಿರ ತೀರಿಸದೆ ಆ ಕಾಗದ ನಿಮ್ಮ ಕೈಗೆ ಸಿಕ್ಕುವುದಿಲ್ಲ. ಅದನ್ನು ನಾನು ಜೋಪಾನವಾಗಿ ಇಟ್ಟುಕೊಂಡಿರುತ್ತೇನೆ."

" ಆಗುವುದಿಲ್ಲ, ನಿಮ್ಮನ್ನು ಹೇಗೆ ನಂಬುವುದು. ನೀವು ಯಾರಿಗಾದರೂ ತೋರಿಸಿ ಮಾನ ತೆಗೆದರೆ.....ಆಮೇಲೆ ಕೊಡುವುದಿಲ್ಲ ಎಂದರೆ ?"

" ನನ್ನ ಮಗುವಿನ ಆಣೆಗೂ ಅಂತಹ ಕೆಲಸ ಮಾಡುವುದಿಲ್ಲ ಮೀನಾಕ್ಷಮ್ಮ. ನನಗೂ ಎರಡು ಮಕ್ಕಳಿವೆ. ಅವರಾಣೆಗೂ ಬಾಯಿ ಎರಡು ಮಾಡಿದರೆ, ನನ್ನ ನಾಲಗೆ ಸೀಳಿಹೋಗಲಿ. ಈ ಕಾಗದವನ್ನು ಮನೆಯಲ್ಲಿ ನನ್ನ ಟ್ರಂಕಿನೊಳಗೆ ಭದ್ರವಾಗಿ ತೆಗೆದಿಟ್ಟಿರುತ್ತೇನೆ. ನನಗೆ ದುಡ್ಡು ಬೇಕು ಮೀನಾಕ್ಷಮ್ಮಾ, ನನ್ನ ಮಗಳಿಗೆ ಒಡವೆ ಬೇಕು. ನೀವು ಬಾಕಿ ತೀರಿಸಿದ ಕೂಡಲೇ ಕಾಗದ ನಿಮ್ಮ ಕೈಗೆ ಕೊಡುತ್ತೇನೆ."

ಗುಂಡಮ್ಮ ಕೃತ್ರಿಮ ನಗೆಯನ್ನು ನಕ್ಕು " ಹೋ, ಐದು ಘಂಟೆಯಾಯಿತು. ರಾಯರು ಬರುತ್ತಾರೆ. ತಿಂಡಿ ಮಾಡಬೇಕು " ಎಂದು ಅಡಿಗೆಮನೆಗೆ ಹೋದಳು.

ಮೀನಾಕ್ಷಿ ಗಂಡಾಂತರ ಕಳೆಯಿತೆಂದು ನಿಟ್ಟುಸಿರಿಟ್ಟಳು. ಆದರೆ ಪತ್ರ ತನ್ನ ಕೈಸೇರಲಿಲ್ಲ. ಆದಷ್ಟುಬೇಗ ದುಡ್ಡು ಕೂಡಿಸಿ ಆ ರಾಕ್ಷಸಿಯ ಋಣ ತೀರಿಸಬೇಕೆಂದು ಯೋಚಿಸಿಕೊಂಡಳು. ' ಅಯ್ಯೋ, ಎಂತಹ ಹೀನ ಅದೃಷ್ಟ! ನಾನೇ ಕೈಯಾರ ಮಾಡಿಕೊಂಡೆ. ಅಯ್ಯೋ, ದೇವರೇ ........ಚಂದ್ರೂ........ನನ್ನ ಚಂದ್ರೂ. ನಮ್ಮಿಬ್ಬರಿಗೆ ಇನ್ನೂ ಕಷ್ಟ ತಪ್ಪಿಲ್ಲ........' ಎಂದು ಮೀನಾಕ್ಷಿ ಪೆಟ್ಟಿಗೆ ಮುಚ್ಚಿ ಅದರಮೇಲೆ ತಲೆ ಇಟ್ಟು, ಬಿಕ್ಕಿಬಿಕ್ಕಿ ಅತ್ತಳು.

ಮೂರನೆಯ ದಿನದಿಂದ ಗುಂಡಮ್ಮ, ಮೀನಾಕ್ಷಿಯರ ಸಂಬಂಧ ದಲ್ಲಿ ಬಲವಾದ ಬದಲಾವಣೆಯಾಯಿತು. ಮೀನಾಕ್ಷಿಗೆ ಗುಂಡಮ್ಮನ ನೆರಳು ಕಂಡರೆ ಭಯವಾಗತೊಡಗಿತು. ಆ ಭಯ ದಿನ ಕಳೆದಂತೆ ದ್ವೇಷಕ್ಕೆ ತಿರುಗಿತು. ಗುಂಡಮ್ಮ ಮೀನಾಕ್ಷಿಯನ್ನು ಅಷ್ಟೇನೂ ತಿರಸ್ಕಾ ರದಿಂದ ಕಾಣದಿದ್ದರೂ ಅವಳಲ್ಲಿ ಒಂದು ಬಗೆಯ ಧೋರಣೆ ಮನೆಮಾಡಿ ಕೊಂಡಿತು. ಚಂದ್ರಶೇಖರರಾಯರಿಗೆ ಕಾಗದ ಬರೆದಿರಾ, ದುಡ್ಡು ತರಿಸಿದಿರಾ ಎಂದು ಮೀನಾಕ್ಷಿಯನ್ನು ಪೀಡಿಸುತ್ತಿದ್ದಳು. ಮೀನಾಕ್ಷಿ ಹೆದರಿಕೊಂಡೇ ಅವಳನ್ನು ಸಮಾಧಾನಪಡಿಸುತ್ತಿದ್ದಳು. ಕೈಗೆ ಸಿಕ್ಕಿದ ದುಡ್ಡನ್ನೆಲ್ಲ ಕೂಡಿಹಾಕಿ ಗುಂಡಮ್ಮನ ಕೈಯಲ್ಲಿಡುತ್ತಿದ್ದಳು.

ಈ ಪ್ರಸಂಗ ನಡೆದಮೇಲೆ ಒಂದು ದಿನ ಮೀನಾಕ್ಷಿ ಎಂದಿನಂತೆ ಗಂಡನ ಜೊತೆ ವಾಯುವಿಹಾರ ಹೊರಟಳು. ದಿನವೂ ದೂರವಾಗು ತ್ತದೆ ಬೇಡವೆನ್ನುತ್ತಿದ್ದವಳು ಆ ದಿನ, ತಾನೇ ಜಲಪಾತದ ಹತ್ತಿರ ಹೋಗೋಣವೆಂದು ರಾಮಚಂದ್ರಯ್ಯನನ್ನು ಕರೆದುಕೊಂಡುಹೋದಳು. ಅಲ್ಲೆಲ್ಲಾ ತಿರುಗಾಡಿಕೊಂಡು ತೀರ ಕತ್ತಲಾದಮೇಲೆ ಮನೆಗೆ ಬಂದಳು. ಸೀರೆ ಬದಲಾಯಿಸಲು ಬಾಗಿಲು ಹಾಕಿಕೊಂಡ ಮೀನಾಕ್ಷಿ ಗಾಬರಿ ಯಿಂದ ಪಡಸಾಲೆಯಲ್ಲಿ ಕುಳಿತಿದ್ದ ಗಂಡನಹತ್ತಿರ ಓಡಿಬಂದು "ಅಯ್ಯೋ ನೋಡೀಂದ್ರೆ ನನ್ನ ಅಮ್ಮನ ಮನೆಯಲ್ಲಿ ಕೊಟ್ಟಿದ್ದ ಬಂಗಾರದ ಸರ ಎಲ್ಲೋ ಬಿದ್ದುಹೋಗಿದೇಂದ್ರೆ............ಅಯ್ಯೋ ಏನ್ಮಾಡ್ಲಿ. ಎಲ್ಬಿ ದ್ಹೋಯ್ತೋ" ಎಂದು ಬಡಬಡಿಸಿದಳು. ರಾಮಚಂದ್ರಯ್ಯ ಬೆಚ್ಚಿ ಬಿದ್ದನು.

"ಏನೇ....ಬಂಗಾರದ ಸರಾನೇ. ಎಲ್ಲಿ ಬಿತ್ತೇ ಮೀನಾ. ನೀನು ನನ್ಜೊತೆ ಬರುವಾಗ ಇತ್ತೇನೇ. ನೀನು ಕಡೆಯಸಾರಿ ಎಲ್ಲಿ ನೋಡಿ ಕೊಂಡೆ ?"

"ಟಿ.ಬಿ ಹತ್ತಿರ ಹೋದೆವಲ್ಲಾ ಆಗ ನೋಡಿಕೊಂಡೆ, ಇತ್ತು. ಏನ್ಮಾಡೋದೊಂದ್ರೆ. ಎಲ್ಲಿ ಹುಡುಕೋದೂ. ಎಲ್ಲೋ ಕೊಂಡಿ ಸವೆದು ಹೋಗಿತ್ತೂಂತ ಕಾಣುತ್ತೆ. ಆ ಜಲಪಾತ ನೋಡೋಕೆ ಮೆಟ್ಟಿಲಿಳಿದು ಹೋಗಿದ್ವಲ್ಲಾ, ಅಲ್ಲೇ ಬಿದ್ಹೋಗಿರ್ಬೇಕೊಂದ್ರೆ."

ರಾಮುಚಂದ್ರಯ್ಯ ಬೀದಿಯ ದೀಪ ಹಚ್ಚಿ ಗೇಟಿನ ತನಕ ಇದ್ದ ಕಾಲುಹಾದಿಯಲ್ಲೂ ಮತ್ತೆ ಬೀದಿಯಲ್ಲೂ ಹುಡುಕಿ ಒಳಗೆ ಬಂದು, ಮನೆಯಲ್ಲೆಲ್ಲಾ ಹುಡುಕಾಡಿದನು.

"ಮೀನಾ, ನಿನ್ನ ಸೀರೆ ಕೊಡವಿ ನೋಡಿದೆಯಾ ? ಬಚ್ಚಲು ಮನೆಗೆ ಏನಾದರೂ ಹೋಗಿದ್ದೆಯಾ ?"

"ಅಯ್ಯೋ ಇಲ್ಲಾಂದ್ರೆ. ಬಚ್ಚಲು ಮನೇಗೆ ಹೋಗ್ಲೇ ಇಲ್ಲ. ಅದು ಅಲ್ಲೇ ಎಲ್ಲೋ ಬಿದ್ದೋಗಿದೇಂದ್ರೆ. ನಂಗೆ ಗೊತ್ತು"

"ಏನ್ಮಾಡೋದು ಈವಾಗ. ಹುಡಕ್ಕೊಂಡು ಹೋಗ್ಲೇ. ಒಂದು ಲಾಟೀನು ಹಚ್ಕೊಡು."

"ಚೆನ್ನಾಗಿದೇಂದ್ರೆ, ಇಷ್ಟೊತ್ನಲ್ಲಿ? ಎಲ್ಲಗರ್ೂ ಗೊತ್ತಾಗ್ಲಿ. ಸುಮ್ಗಿರಿ. ಬೆಳಿಗ್ಗೆ ಅಷ್ಟೊತ್ಗೇ ಯಾರಾದರೂ ಹುಡುಕಿ ತಗೊಂಡು ಬಿಟ್ಟಾರು. ನೀವೇ ಬೆಳಿಗ್ಗೆ ಐದು ಘಂಟೆಗೇ ಎದ್ದು ವಾಕಿಂಗ್ ಹೋಗೋವ್ರತರಹ ಹೋಗಿ ಅಲ್ಲೆಲ್ಲಾ ಹುಡಕ್ಕೊಂಡು ಬನ್ನಿ. ಏನೋ ಸಿಕ್ಕಿದರೆ ನನ್ನ ಅದೃಷ್ಟ. ಎಲ್ಲಾ ನನ್ನ ಗ್ರಹಚಾರ."

ಮೀನಾಕ್ಷಿ ಕಣ್ಣಲ್ಲಿ ನೀರು ತಂದುಕೊಂಡು ತಲೆಯಮೇಲೆ ಕೈ ಇಟ್ಟುಕೊಂಡು ಕುಳಿತಳು. "ಸುಮ್ನಿರು ಮೀನಾ. ನಿಂದೇನು ತಪ್ಪು. ಎಲ್ಲಾ ಗ್ರಹಚಾರ. ನಮ್ದಾಗಿದ್ರೆ ಸಿಕ್ಕುತ್ತೆ. ಇಲ್ದಿದ್ರೆ ಇಲ್ಲ. ಸುಮ್ನೆ ಯೋಚ್ನೆ ಮಾಡ್ಬೇಡ" ಎಂದು ರಾಮುಚಂದ್ರಯ್ಯ ಸಮಾಧಾನ ಮಾಡಿದನು. ಗುಂಡಮ್ಮ ಸರ ಹೋಯಿತೆಂದು ಬಹಳ ನೊಂದುಕೊಂಡಳು. ಅವಳ ಪೇಚಾಟ ಸರ ಕಳೆದುಕೊಂಡ ಮೀನಾಕ್ಷಿಗಿಂತ ಹೆಚ್ಚಾಗಿತ್ತು.

ರಾಮುಚಂದ್ರಯ್ಯ ಕೊಠಡಿಗೆ ಹೋಗಿ ಮಲಗಿಕೊಂಡನು. ಮೀನಾಕ್ಷಿ ಹಾಲು ಕುಡಿದು ಹೋಗಲು ಅಡಿಗೆ ಮನೆಗೆ ಬಂದಳು. ಗುಂಡಮ್ಮ ಹಾಲಿನ ಲೋಟ ಮುಂದಿಟ್ಟಳು ಮೀನಾಕ್ಷಿ ತನ್ನ ಕುಪ್ಪಸದೊಳಗಿನಿಂದ ಬಂಗಾರದ ಚೈನನ್ನು ತಗೆದು ಗುಂಡಮ್ಮನ ಕೈಯ್ಯಲ್ಲಿ ಇಟ್ಟು, ಪಿಸುಮಾತಿನಲ್ಲಿ "ನೋಡಿ ಗುಂಡಮ್ಮ ಹುಶಾರ್, ಹಾಳಾಗಿ ಹೋಯ್ತು ಎಂದು ಹೇಳಿದ್ದು ಇದೇ ಚೈನು. ಅವರು ಹಾಗೇ ನಂಬಿಕೊಂಡಿದ್ದಾರೆ. ನೋಡಿ ಇದು ಎರಡೂವರೆ ತೊಲ ಇದೆ. ಇನ್ನೂರು

ರೂಪಾಯಿಗೆ ಕಮ್ಮಿ ಆಗೋಲ್ಲ. ಅಂದರೆ ನಿಮಗೆ ಇನ್ನೊಂದು ಮುನ್ನೂರು ರೂಪಾಯಿ ಕೊಡಬೇಕಾಗುತ್ತೆ ಅಷ್ಟೆ. ಹುಶಾರ್! ಬಾಯಿ ಬಿಡಬೇಡಿ " ಎಂದು ಹಾಲಿನ ಲೋಟ ಕೈಗೆ ತೆಗೆದುಕೊಂಡಳು.

ಗುಂಡಮ್ಮನ ಮುಖ ಪ್ರಸನ್ನವಾಯಿತು. ಮೀನಾಕ್ಷಿ ದ್ವೇಷದಿಂದ ಆ ನಗುಮುಖವನ್ನು ನೋಡಿದಳು. ಅಲ್ಲಿ ಗೆಲುವಿನ ನಲಿವಿತ್ತು. ಆ ಗೆಲುವು ಎಂತಹ ಗೆಲುವು. ತನ್ನ ಮೈಯ್ಯ ಕಣಕಣವೂ ಸಂತಾಪ ದಿಂದ ಕುದಿಯುತ್ತಿರುವಾಗ ಗುಂಡಮ್ಮನ ನಗೆಯನ್ನು, ಮೀನಾಕ್ಷಿ ನೋಡದಾದಳು.

ಆ ರಾತ್ರಿ ಅವಳಿಗೆ ಬರಿಯ ಗುಂಡಮ್ಮನ ಕನಸುಗಳೇ.

ಬೆಳಗ್ಗೆ ಐದು ಘಂಟೆಗೇ ಮೀನಾಕ್ಷಿ ಗಂಡನನ್ನು ಎಬ್ಬಿಸಿ ಸರ ಹುಡುಕಿಕೊಂಡು ಬರಲು ಕಳುಹಿಸಿದಳು.

ಮೂರನೆಯ ದಿನ ಮೀನಾಕ್ಷಿ ತನ್ನ ಮೊದಲಿನ ನಿರ್ಧಾರವನ್ನು ಮುರಿದು ಚಂದ್ರುವಿಗೆ ಎಲ್ಲ ತಿಳಿಸಿ ಕಾಗದ ಬರೆದಳು. ಕೂಡಲೇ ಇನ್ನೂರು ರೂಪಾಯಿಗಳನ್ನು ಕಳುಹಿಸಬೇಕೆಂದೂ ಬರೆದು ಹಾಕಿದಳು. ಕಾಗದ ಬರುವವರೆಗೆ ಮೀನಾಕ್ಷಿ ರಣಹದ್ದಿನಂತೆ ನಿದ್ದೆಯನ್ನೂ ಮಾಡದೆ, ಅಂಚೆಯವನನ್ನು ಕಾದಳು. ನಾಲ್ಕು ದಿವಸಗಳ ಮೇಲೆ ಚಂದ್ರುವಿನಿಂದ ಬಂದ ಕಾಗದ, ಹಣ ಮೀನಾಕ್ಷಿಯ ಕೈ ಸೇರಿತು. ಮೀನಾಕ್ಷಿ ಗುಂಡಮ್ಮನ ಮುಖದ ಮೇಲೆ ಹಣವನ್ನು ಎಸೆದು ಕಾಗದ ಕೊಡೆಂದು ಕೇಳಿದಳು. ಗುಂಡಮ್ಮ ಮರುಮಾತನಾಡದೆ ಮೀನಾಕ್ಷಿಯ ಕಾಗದವನ್ನು ಕೊಟ್ಟು ಬಿಟ್ಟಳು. ಮೀನಾಕ್ಷಿ ಅವಳೆದುರಿಗೇ ಆ ಕಾಗದವನ್ನೂ, ಮತ್ತೆ ಹತ್ತು ಹದಿನೈದು ನಕಲಿ ಕಾಗದಗಳನ್ನೂ ಸುಟ್ಟು ವಿಜಯೋತ್ಸಾಹದಿಂದ ನಕ್ಕಳು. ಅವಳಿಗೆ ಇಲ್ಲದ ಶಕ್ತಿ ಬಂದಿದ್ದಿತು. ಫಟಾರನೆ ಗುಂಡಮ್ಮನ ಕೆನ್ನೆಗೆ ಹೊಡೆದು " ನಾಯಿ ಆ ಸರ ಕೊಟ್ಟು ಮೊದಲು ನನ್ನ ಮನೆ ಬಿಟ್ಟು ಹೊರಡು. ನೀನು ನನ್ನನ್ನು ಏನೂ ಮಾಡಲಾರೆ. ನಾಚಿಕೆಯಿಲ್ಲದವಳೇ, ರಾಕ್ಷಸಿ, ತಿಂಗಳಿಂದ ಗರಗಸದಿಂದ ನನ್ನ ಕತ್ತು ಕೊಯ್ದೆ. ನನ್ನ ಸುಖ ಶಾಂತಿ ಗಳನ್ನು ಸುಟ್ಟು ಹಾಕಿದೆ. ಹುಂ....ನಿನ್ನ ಬಟ್ಟೆ ಕಟ್ಟಿಕೊಂಡು

ಹೊರಡು. ಇನ್ನು ಈ ಮನೆಯ ಹೊಸ್ತಿಲು ತುಳಿದರೆ ನಿನ್ನ ಗತಿ ಪೂರೈಸಿತು ಎಂದುಕೋ. ನಡಿ, ಹೊರಟು ಹೋಗು" ಎಂದು ಆರ್ಭಟಿಸಿದಳು.

ಗುಂಡಮ್ಮ ಮೀನಾಕ್ಷಿಯ ರುದ್ರಾವತಾರವನ್ನು ನೋಡಿ ಹೆದರಿದಳು. ಏನನ್ನೋ ಹೇಳಲು ಬಾಯಿ ಬಿಟ್ಟಳು. ಮೀನಾಕ್ಷಿ ಮತ್ತೊಂದು ಕೆನ್ನೆಗೆ ಹೊಡೆದು, ಹಜಾರಕ್ಕೆ ಹೋಗಿ ಬಾಗಿಲು ತೆಗೆದು, "ಹ್ಞ.... ಅವರು ಬರುವುದರಲ್ಲಿ ಹೊರಟು ಹೋಗು. ಇಲ್ಲ, ಪೋಲೀಸರಿಗೆ ಕೊಡಿಸುತ್ತೇನೆ" ಎಂದು ಆರ್ಭಟಿಸಿದಳು. ಗುಂಡಮ್ಮ ಅಡಿಗೆ ಮನೆಗೆ ಹೋಗಿ ತನ್ನ ಸೀರೆಯನ್ನೂ, ಶಾಲನ್ನೂ ಸುತ್ತಿಕೊಂಡು ಮೀನಾಕ್ಷಿಯ ಸರವನ್ನು ನೆಲದ ಮೇಲೆ ಎಸೆದು ಹೊರಗೆ ಹೋದಳು. ಮೀನಾಕ್ಷಿ, "ಥೂ....ಪಿಶಾಚಿ, ಹಾಳಾಗಿ ಹೋಗು" ಎಂದು ತನ್ನ ಸಿಟ್ಟೆಲ್ಲವನ್ನೂ ಹೊರಗೆ ಹಾಕಿ ಬಾಗಿಲು ಹಾಕಿಕೊಂಡು ದೀರ್ಘವಾದ ನಿಟ್ಟುಸಿರುಬಿಟ್ಟಳು.

ಗುಂಡಮ್ಮ ಹಿಂದೆ ತಿರುಗಿ ಆ ಮನೆಯನ್ನು ನೋಡಿ, "ಅಯ್ಯೋ ಕಡೆಗೂ ರಂಡೆ ಕೈ ಕೊಟ್ಟಳಲ್ಲಾ. ಎಂಥಾ ಮನೆ, ಎಷ್ಟು ಹಾಯಾಗಿದ್ದೆ. ಹ್ಞ, ಸಿಕ್ಕಿದಷ್ಟೇ ಲಾಭ" ಎಂದುಕೊಂಡು ಹೊರಟು ಹೋದಳು.

ಮೀನಾಕ್ಷಿ ಒಳಗೆ ಹೋಗಿ ದೇವರಿಗೆ ತುಪ್ಪದ ದೀಪ ಹಚ್ಚಿಟ್ಟಳು. ಅವಳ ಮುಖದ ಮೇಲೆ ವಿಜಯೋತ್ಸಾಹ ಮೆರೆಯಿತು. ಮೀನಾಕ್ಷಿ ಗೆದ್ದಳು.

ಸಾಯಂಕಾಲ ರಾಮಚಂದ್ರಯ್ಯ ಮನೆಗೆ ಬಂದೊಡನೆ, "ನೋಡಿ, ಆ ಅಡಿಗೆಯವಳನ್ನು ಕಳುಹಿಸಿಬಿಟ್ಟೆ. ಅವಳ ಹಾಸಿಗೆಯಲ್ಲಿ ನನ್ನ ಸರ ಸಿಕ್ಕಿತು. ನನಗೇನೋ ಸಂಶಯ ಬಂದು ಅವಳು ಹೊರಗೆ ಹೋಗಿದ್ದಾಗ ಹುಡುಕಿದೆ. ಅದು ಅವತ್ತು ಅಡುಗೆ ಮನೆಯಲ್ಲೇ ಬಿದ್ದುಹೋಗಿದೆ. ಅವಳೇ ತೆಗೆದಿಟ್ಟುಕೊಂಡು ಬಿಟ್ಟಿದ್ದಾಳೇಂದ್ರೆ ಎಂಥಾ ಕಳ್ಳಿ. ಸಧ್ಯ ಸಿಕ್ಕಿತಲ್ಲಾ" ಎಂದು ಮುಸಿನಕ್ಕಳು.

"ಆಂ........ಅವಳು ಅಂಥಾವಳೇ ! ನೀನು ಹೇಳುತ್ತಿದ್ದೆ ಮೀನಾ

ನನಗೆ ತಿಳಿಯಲಿಲ್ಲ. ಸಧ್ಯ ಸಿಕ್ಕಿತಲ್ಲ. ಆದರೆ ನಿನಗೆ ಜೊತೆಯಾಗಿದ್ದಳು. ಈಗ ಒಂಟಿಯಾಗಿ ಬಿಟ್ಟೆ."

"ಶನಿ.... ಬೇಜಾರಾಗುತ್ತಿತ್ತು. ಸಧ್ಯ ತೊಲಗಿ ಹೋಯಿತಲ್ಲಾ. ನೀವು ಸುಮ್ನಿರಿ. ಅವಳ ಅಣ್ಣನ ಹತ್ತಿರ ಏನು ಹೇಳಲೂ ಹೋಗ್ಬೇಡಿ. ಪಾಪ ಗಂಡನಿಲ್ಲದವಳು. ಅಣ್ಣನ ಮನೆಯೂ ತಪ್ಪಿ ಹೋದೀತು. ಸಧ್ಯ ನನ್ನ ಬಿಟ್ಟು ತೊಲಗಿದಳಲ್ಲಾ."

"ಹೌದು ಮೀನಾ. ನಿನಗೆ ರಾಹು ಮುಚ್ಚಿಕೊಂಡ ಹಾಗೆಯೇ ಇದ್ದಿತು ಈ ಒಂದು ತಿಂಗಳಿಂದ. ಸಧ್ಯ ಈ ದಿನ ನಗುತ್ತ ಸಂತೋಷ ವಾಗಿದ್ದೀಯಲ್ಲಾ. ಅಷ್ಟೇ ಸಾಕು."

ರಾಮುಚಂದ್ರಯ್ಯ ಉಪಹಾರ ಮುಗಿಸಿದನು. ಮೀನಾಕ್ಷಿ ಆದಿನ ಸಂತೋಷದಿಂದ ಗಂಡನೊಡನೆ ಹೊರಗೆ ಹೋಗಿ ಬಂದಳು. ಮನೆಗೆ ಬಂದು ಬಿಸಿಯಾಗಿ, ರುಚಿಯಾಗಿ ಅಡಿಗೆ ಮಾಡಿದಳು. ಇಬ್ಬರೂ ಸಂತೋಷದಿಂದ, ನಗುತ್ತಾ ಊಟ ಮಾಡಿದರು.

ಮೀನಾಕ್ಷಿಯ ಸ್ಥಾನ ಆ ಸಂಸಾರದಲ್ಲಿ ಮತ್ತೆ ಸ್ಥಿರವಾಯಿತು.

## ೨೦

ಈಗೀಗ ಮೀನಾಕ್ಷಿಗೆ ಏನೋ ಬಗೆ ಹರಿಯಲಾರದ ಯೋಚನೆ. ಗುಂಡಮ್ಮ ಹೋಗಿ ತಿಂಗಳ ಮೇಲಾಗಿತ್ತು. ಆದರೂ ಮೀನಾಕ್ಷಿಗೆ ಶಾಂತಿ ಸಿಕ್ಕಲಿಲ್ಲ. ಗುಂಡಮ್ಮನ ಅವಹೇಳನ ಅವಳ ಕಿವಿಯಲ್ಲಿ ಗುಂಯ್ ಗುಡುತ್ತಿದ್ದಿತು. ಗುಂಡಮ್ಮ ಅವಳ ಅಂತರಾತ್ಮವನ್ನು ಹೊಡೆದೆಬ್ಬಿಸಿ, ಅವಳ ವಿಚಾರಸಮುದ್ರವನ್ನು ಕಲಕಿ ಹೋಗಿದ್ದಳು. ಮೀನಾಕ್ಷಿಗೆ ತಾನು ತಪ್ಪು ಮಾಡಿದೆ, ಕೈ ಹಿಡಿದ ಗಂಡನಿಗೆ ಮೋಸ ಮಾಡಿದೆ ಎನ್ನಿಸತೊಡಗಿತು. ಆರುತಿಂಗಳು ತುಂಬುತ್ತ ಬಂದಂತೆ ಅವಳಿಗೆ ದುಃಖದ ಆವೇಗ ಹೆಚ್ಚಿತು. ರಾಮುಚಂದ್ರಯನ ಒಳ್ಳೆಯ

ತನ ಅವಳ ಮನಸ್ಸಿನ ಮೇಲೆ ದುಷ್ಪರಿಣಾಮವನ್ನು ಮಾಡಿತು. ಅವನ ಅತಿಯಾದ ಒಳ್ಳೆಯತನ ಅವಳ ಹೃದಯವನ್ನು ಹಿಂಡುತ್ತಿದ್ದಿತು. ಅಂತಹ ವ್ಯಕ್ತಿಗೆ ಮೋಸ ಮಾಡಿ ತಾನು ಅವನೊಡನೆ ಸಂಸಾರ ನಡೆಸ ಬೇಕೇ ? ಅವನನ್ನು ನಂಬಿಸಿ ಅವನ ಅನ್ನ ತಿಂದು ಅವನಿಗೆ ಮೋಸ ಮಾಡುವುದೇ ? ದೇವರು ಒಪ್ಪುತ್ತಾನೆಯೇ ?ಆದರೆ ಅವನು ಹೇಡಿ, ಷಂಡ. ಅವನು ನನ್ನನ್ನು ಏಕೆ ಇಷ್ಟು ಪ್ರೀತಿಸುತ್ತಾನೆ ? ನನ್ನನ್ನು ದೇವತೆಯಂತೆ ಪೂಜಿಸುತ್ತಾನೆ. ನಾನು ಒಮ್ಮೆ ನಕ್ಕರೆ ಅದು ಮಹಾ ಭಾಗ್ಯವೆಂಬಂತೆ ಸಂತೋಷಪಡುತ್ತಾನೆ....ಅವನುಒಂದೇ ಒಂದು ಸಾರಿ ವೀರನಂತೆ, ಪುರುಷನಂತೆ ವರ್ತಿಸಿದರೆ.........ಹೋ ............ ಎಷ್ಟು ಆನಂದವಾಗಿರುತ್ತದೆ. ! ಆದರೆ....... ....ನಾನು ಎಲ್ಲಿಗೆ ಹೋಗಲಿ ? ಚಂದ್ರುವಿನೊಡನೆ ಬಹಿರಂಗವಾಗಿ ಹೆಂಡತಿ ಎಂದು ಹೇಳಿಕೊಂಡು ಸಂಸಾರ ಮಾಡಲು ಆಗುತ್ತದೆಯೇ ? ಇಲ್ಲ ಇಲ್ಲ. ಅದು ಈ ನಮ್ಮ ಸಮಾಜದಲ್ಲಿ ಸಾಧ್ಯವಿಲ್ಲ. ಚಂದ್ರುವನ್ನು ಗಂಡಸೆಂದು ಕ್ಷಮಿಸಬಹುದು. ಆದರೆ ನನ್ನನ್ನು.... ಹೆಂಗಸನ್ನು.... ಈ ಹಾಳು ಹೆಣ್ಣುಜನ್ಮವನ್ನು ಧಿಕ್ಕರಿಸುತ್ತದೆ..... ಸೂಳೆಯೆಂದು ಪಾತಾಳಕ್ಕೆ ತುಳಿಯುತ್ತದೆ. ಅಯ್ಯೋ ! ನನಗೆ ಬೇರೆ ಗತಿಯೇ ಇಲ್ಲ. ಇಲ್ಲಿಯೇ ಇರಬೇಕು. ಇವನೊಡನೆಯೇ ಸಂಸಾರ ನಡೆಸಬೇಕು. ಕೈ ಹಿಡಿದ ಗಂಡನನ್ನು ವಂಚಿಸಿ ಸುಳ್ಳು ಬಾಳನ್ನು ಬಾಳಬೇಕು. ಎಂದು ಮೀನಾಕ್ಷಿ ಕಣ್ಣೀರಿಡುತ್ತಿದ್ದಳು

ಮೀನಾಕ್ಷಿಯ ಮನಸ್ಸಿನಲ್ಲಿ ಬಲವಾದ ಬದಲಾವಣೆಯಾಯಿತು. ಚಂದ್ರುವಿನ ವಿಚಾರದಲ್ಲಿ ಅವಳ ದೃಷ್ಟಿ ಬದಲಾಯಿತು. ಮೊದಲಿದ್ದ ಆವೇಗ ಕಡಿಮೆಯಾಯಿತು.

ರಾಮಚಂದ್ರಯ್ಯ ಮೀನಾಕ್ಷಿಯನ್ನು ಸ್ವರ್ಗಲೋಕದಲ್ಲಿ ಕೂಡಿಸಿ ದನು. ತನ್ನ ಸ್ವಂತ ಸುಖವನ್ನೂ ಕಡೆಗಾಣಿಸಿ, ಕೈಮೀರಿ ತುಪ್ಪ ತರ ಕಾರಿಗಳನ್ನು ಮನೆಗೆ ತಂದುಹಾಕುತ್ತಿದ್ದನು. ಶಕ್ತಿಮೀರಿ ಹಣ್ಣು ಗಳನ್ನೂ, ಟಾನಿಕ್ಕುಗಳನ್ನೂ ತಂದುಕೊಟ್ಟು ಅದನ್ನು ತಪ್ಪದೆ ತಾನೇ ಕೈಯ್ಯಾರ ಅವಳಿಗೆ ತಿನ್ನಿಸಿ, ಕುಡಿಸುತ್ತಿದ್ದನು. ಮೀನಾಕ್ಷಿ ಆ ಸುಖ

ವನ್ನು ತಡೆಯಲಾರದೇ ಹೋದಳು. ಹೊಟ್ಟೆಯಲ್ಲಿ ತನ್ನ ಪತಿಗಾಗದ ವನ ಜೀವಾಂಶ ಬೆಳೆಯುತ್ತಿದ್ದಂತೆ, ಆ ಪತಿಯ ನಿಷ್ಕಪಟ ಪ್ರೇಮ ಸ್ವಚ್ಛಂದವಾಗಿ, ಹೊನಲಾಗಿ ಹರಿಯುತ್ತಿದ್ದಿತು. ಹಗಲಿರುಳು ಬಯಸಿದ ಆ ಫಲವು ಕೈಗೆ ಬರುವ ಸಮಯದಲ್ಲಿ ಆ ಜೀವ ಅಲ್ಲಿಯೇ ಕರಗಿ ಹೋಗಬಾರದೇ ಎಂದುಕೊಳ್ಳುತ್ತಿದ್ದಳು. ಪಶ್ಚಾತ್ತಾಪವು ಅವಳ ತಲೆ ಯನ್ನು ಒಳಗೇ ಕೊರೆಯುತ್ತಿದ್ದಿತು. ಭಯಂಕರವಾದ ಯೋಚನೆಗಳು ಮಿಡತೆಗಳಂತೆ ಅವಳ ಮೆದಳನ್ನು ಮುತ್ತಿ ಮೆಲ್ಲುತ್ತಿದ್ದುವು. ಆದರೆ ಮಗುವಿನ ಆಸೆ ಎಲ್ಲ ದುಷ್ಟ ಯೋಚನೆಗಳನ್ನೂ ನಿರ್ಮೂಲ ಮಾಡಿ, ಹೊಸ ರೂಪ ಹೊತ್ತು ತಲೆ ಎತ್ತಿ ನಿಲ್ಲುತ್ತಿದ್ದಿತು.

"ಮೀನಾ, ಮೀನಾ" ಎಂದು ಕೂಗುವ ಗಂಡನ ಕರುಣಾಪೂರಿತ ಪ್ರೀತಿಪೂರ್ವಕ ಕಂಠ ಮಾಧುರ್ಯಕ್ಕೆ ಅವಳ ಹೃದಯ ಮಾರುಹೋಗುತ್ತಿ ದ್ದಿತು. ಆ ಸಮಯದಲ್ಲಿ ರಾಮಚಂದ್ರಯ್ಯನನ್ನು ಅಪ್ಪಿಕೊಂಡು ಬಿಡುತ್ತಿದ್ದಳು. ಹೆದರಿದ ಮಗುವಿನಂತೆ ಅವನ ತೋಳ ಸೆರೆಯಲ್ಲಿ ಅಡಗಿಕೊಳ್ಳುತ್ತಿದ್ದಳು. ಒಮ್ಮೊಮ್ಮೆ, "ನನಗೆ ಹೆದರಿಕೆಯಾಗುವುದು. ನನಗೆ ಏನಾದರೂ ಆಗಿಬಿಟ್ಟರೆ?" ಎಂದು ರಾಮಚಂದ್ರಯ್ಯನ ತೆಕ್ಕೆಯಲ್ಲಿ ನಡಗುತ್ತಿದ್ದಳು. ರಾಮಚಂದ್ರಯ್ಯ ಸಮಾಧಾನ ಮಾಡುತ್ತಿದ್ದನು.

"ಹುಚ್ಚಿ, ಇನ್ನು ಹೆದರಿಕೆಯಿಲ್ಲ. ಮಕ್ಕಳು ಬೇಕೆಂದು ಹಂಬಲಿಸಿದೆ. ಮಕ್ಕಳಿಗಾಗಿ ಗೋಳಾಡಿದೆ. ಈಗ ಮಗನನ್ನು ಹೊಟ್ಟೆಯಲ್ಲಿಟ್ಟುಕೊಂಡು ಹೆದರುವೆಯಲ್ಲೇ. ಹೆದರಬೇಡ. ನನ್ನ ಮಗನಿಗೂ ನಿನ್ನ ಹೆದರಿಕೆಯ ಸ್ವಭಾವವೇ ಬಂದುಬಿಟ್ಟೀತು. ನಗು ನಗುತ್ತ ಇರು ಮೀನಾ. ನನ್ನ ಮಗನೂ ನಗುನಗುತ್ತ ನಿನ್ನ ಹಾಗೆ ಸುಂದರನಾಗಿ ಹುಟ್ಟಲಿ."

ರಾಮಚಂದ್ರಯ್ಯ "ನನ್ನ ಮಗ" ಎಂದಾಗ ಮೀನಾಕ್ಷಿಯ ಹೃದಯಕ್ಕೆ ಬಾಣ ನೆಟ್ಟಂತಾಗುತ್ತಿದ್ದಿತು. ಅವನ ದುರ್ಬಲತೆ, ಎಲ್ಲೆ ಮೀರಿದ ಸಾಧುತ್ವಕ್ಕೆ ಒಮ್ಮೊಮ್ಮೆ ಮನಮರುಗುತ್ತಿದ್ದಿತು.

ಮೀನಾಕ್ಷಿ ಒಮ್ಮೊಮ್ಮೆ ಹುಚ್ಚಿಯಂತಾಡುತ್ತಿದ್ದಳು. ರಾಮ ಚಂದ್ರಯ್ಯನು ಇಲ್ಲದ ವೇಳೆ, ಅವಳು ಸುಮ್ಮನೆ ಯೋಚಿಸುತ್ತಾ

ಮುಲಗಿಕೊಂಡು ಬಿಡುತ್ತಿದ್ದಳು. ಏನೋ ಹೆದರಿಕೆ. ಒಂದು ಬಗೆಯ ಮೂಕ ವೇದನೆ. 'ನಾನೇಕೆ ಹೀಗೆ ಮಾಡಿಬಿಟ್ಟೆ' ಎಂದು ಕೊಳ್ಳುತ್ತಿದ್ದಳು. 'ನಾನು ಅವರಿಗೆ ಮೋಸ ಮಾಡಿದೆನೇ' ಎಂದು ತನಗೆ ತಾನೇ ಪ್ರಶ್ನೆ ಹಾಕಿಕೊಳ್ಳುತ್ತಿದ್ದಳು. 'ಪಾಪಿ, ವಂಚಕಿ........ಚಿನ್ನದಂತಹ ಗಂಡನಿಗೆ ಮೋಸಮಾಡಿದ ಮಹಾ ಮೋಸಗಾತಿ' ಎಂದು ಹೃದಯ ಕೋಪದಿಂದ ಆರ್ಭಟಿಸುತ್ತಿದ್ದಿತು. ಆದರೆ ಎಲ್ಲ ಕ್ಷಣಿಕ. ಮಗುವಿನ ನೆನಪಾದೊಡನೆ ದುಃಖವೆಲ್ಲ, ಪಶ್ಚಾತ್ತಾಪವೆಲ್ಲ, ಮಂಜಿನಂತೆ ಕರಗಿ ಹೋಗುತ್ತಿದ್ದಿತು ಆದರೆ ಅದೂ ಕ್ಷಣಿಕ. ಆಗಾಗ ಅವಳಿಗೆ ಹಿಂದೊಮ್ಮೆ ಆದ ಆ ಭಯಂಕರ ಕನಸಿನ ನೆನಪಾಗುತ್ತಿದ್ದಿತು. ಆ ಸ್ವಪ್ನದ ಘೋರಾಂತ್ಯವನ್ನು ನೆನೆದು ಅವಳ ಎದೆ ತಲ್ಲಣಿಸುತ್ತಿದ್ದಿತು. ಆಗ ರಾಮಚಂದ್ರಯ್ಯನ ಮೇಲೆ ಅತಿಯಾದ ಪ್ರೀತಿ ಹುಟ್ಟುತ್ತಿದ್ದಿತು. ಆ ಕನಸಿನ ಸಂಕೇತ ನಿಜವಾಗಿದ್ದಿತು. ಪೂರ್ವಾರ್ಧದ ಕನಸಿನ ಸಂಕೇತದಂತೆ ಚಂದ್ರು ಶರಾವತಿಯಂತಹ ಸಂಸಾರ ಸಾಗರವನ್ನು ದಾಟಿಸಲು ಮಗು ಒಂದನ್ನು ಕೊಟ್ಟಿದ್ದನು. ಅವಳ ಬಾಳಿಗೆ ಚೈತನ್ಯವನ್ನು ನೀಡಿ ಅವಳ ಬಂಜೆತನವನ್ನು ನೀಗಿಸಿ ತಾಯಾಗಿಸಿದ್ದನು! ಹಾಗೆಯೇ ಕನಸಿನ ಉತ್ತರಾರ್ಧದ ಸಂಕೇತ ನಿಜವಾಗಿಬಿಟ್ಟರೆ? ರಾಮಚಂದ್ರಯ್ಯನಿಗೆ ಒದಗಿದ ಆ ದುರಂತ ನಿಜವಾಗಿಬಿಟ್ಟರೆ.... 'ದೇವರೇ, ಹಾಗೆಮಾತ್ರ ಮಾಡಬೇಡ....ನನ್ನನ್ನು ಕಾಡುಪಾಲುಮಾಡಬೇಡ' ಎಂದು ದೇವರಲ್ಲಿ ಮೊರೆಯಿಡುತ್ತಿದ್ದಳು.

ಮತ್ತೆ ಚಂದ್ರು ಊರಿಗೆ ಬಂದಾಗ ಮೀನಾಕ್ಷಿ ತುಂಬ ಬದಲಾಯಿಸಿ ಹೋಗಿದ್ದಳು. ಪಶ್ಚಾತ್ತಾಪದ ಬೇಗೆಯಿಂದ ಬೆಂದು ಸೊರಗಿ ಹೋಗಿದ್ದಳು. ಅವಳ ಬಾಳದೃಷ್ಟಿ ಬದಲಾಯಿಸಿತ್ತು. ಆದರೆ ಚಂದ್ರುವಿನ ಮೇಲಿನ ನಿಷ್ಕಲ್ಮಶ ಪ್ರೇಮ ಅಣುಮಾತ್ರವೂ ಕಡಿಮೆಯಾಗಿರಲಿಲ್ಲ.

ಮೀನಾಕ್ಷಿ ಚಂದ್ರುವನ್ನು ತಬ್ಬಿಕೊಂಡು ಅತ್ತಳು. ತಿಂಗಳಿಂದ ಪಶ್ಚಾತ್ತಾಪದ ಬೇಗೆಯಿಂದ ಹೊರಗೆ ಹರಿದುಬರಲು ದಾರಿ ಕಾಣದೆ ಒಳಗೇ ತುಂಬಿಕೊಂಡಿದ್ದ ಕಣ್ಣೀರು ಚಂದ್ರುವನ್ನು ನೋಡಿದೊಡನೆ

ಕಟ್ಟೆಯೊಡೆದು ಕೋಡಿ ಹರಿಯಿತು. ಚಂದ್ರು ಗಾಬರಿಯಿಂದ ಕೇಳಿದನು.

"ಮೀನಾ, ಏಕೆ ಹೀಗೆ ಆಗಿದ್ದೀಯೆ ! ಆ ಶನಿ ಹೊರಟುಹೋದ ಳಲ್ಲಾ. ತಿರುಗಿಬಂದು ಗಲಾಟೆ ಮಾಡುತ್ತಿದ್ದಾಳೆಯೇ? "

"ಇಲ್ಲ ಚಂದ್ರು, ಆ ಗಂಡಾಂತರ ಕಳೆದುಹೋಯಿತು. ಅವಳ ಕಾಟವಿದ್ದಿದ್ದರೆ ನಾನು ಇಷ್ಟುಹೊತ್ತಿಗೆ ಸತ್ತುಹೋಗುತ್ತಿದ್ದೆ ಚಂದ್ರೂ ........ "

"ಛೀ........ಅಂತಹ ಮಾತನಾಡಬಾರದು ಮೀನಾ. ಸಾಯಲು ನಿನಗೇನು ಅಂತಹ ಕಷ್ಟಬಂದಿರುವುದು ಮೀನಾ. ನಾನು ಬದುಕಿಲ್ಲವೇ ? ನಾನು ನಿನ್ನನ್ನು ಎಂದಿಗೂ ಸಾಯಗೊಡುವುದಿಲ್ಲ ಮೀನಾ."

ಮೀನಾಕ್ಷಿ ಮಮತೆ ತುಂಬಿ, ಅಭಿಮಾನದಿಂದ ಅವನ ಮುಖ ವನ್ನು ನೋಡಿ ದೈನ್ಯದಿಂದ ಕೇಳಿಕೊಂಡಳು.

"ಚಂದ್ರು, ಇನ್ನು ನೀನು ನನಗಾಗಿ ದುಃಖಪಡಬೇಡ. ಇನ್ನು ನೀನು ಬರಬೇಡ. ನನಗೆ ಈ ಗುಟ್ಟಿನ ಜೀವನ ಸಾಕಾಗಿದೆ. ನಾನು ಕೈಹಿಡಿದವರಿಗೆ ಮೋಸಮಾಡಿದೆ. ಅದರ ಪಶ್ಚಾತ್ತಾಪ ನನ್ನ ಹೃದಯ ವನ್ನು ಸುಡುತ್ತಿದೆ. "

ಚಂದ್ರುವಿಗೆ ಗಾಬರಿಯಾಯಿತು. ಮೀನಾ ಸಂಪೂರ್ಣವಾಗಿ ಬದ ಲಾಯಿಸಿಹೋಗಿದ್ದಾಳೆ ಎನ್ನಿಸಿತು. ಮೀನಳ ಕಂಗೆಟ್ಟ ದೇಹ ನೋಡಿ ಅವನಿಗೆ ಅಪಾರವಾದ ಯಾತನೆಯಾಯಿತು. ಅವಳಲ್ಲಿ ಧೈರ್ಯ ತುಂಬಲು ಪ್ರಯತ್ನಿಸಿದನು.

"ಮೀನಾ, ನೀನು ನಿಜವಾಗಿಯೂ ಅವನಿಗೆ ಮೋಸ ಮಾಡಿಲ್ಲ ಮೀನಾ. "

"ಅದನ್ನು ನೀನು ಆಗಿನಿಂದಲೂ ಹೇಳುತ್ತಿರುವೆ. ಗಂಡಸು, ನಿನಗೆ ಅದು ತಿಳಿಯುವುದಿಲ್ಲ, ಹೆಣ್ಣಿನ ಹೃದಯ ನಿನಗೆ ತಿಳಿಯದು ಚಂದ್ರು. ನಾನು ತಿಂಗಳಿಂದ ಯೋಚಿಸಿದೆ. ನಿನ್ನೊಡನೆ ಸುಖ ಸವಿ ದಾಯಿತು ಚಂದ್ರು. ಇನ್ನು ನನ್ನ ಪಾಲಿಗುಳಿದಿರುವುದು ದುಃಖ. ಅದನ್ನೂ ಸಂತೋಷದಿಂದ ಅನುಭವಿಸುತ್ತೇನೆ. ಮತ್ತೊಬ್ಬರ ಹೆಂಡತಿ ಯಾಗಿದ್ದುಕೊಂಡು ಮತ್ತೆ ಇಂತಹ ಗುಟ್ಟಿನ ಮೋಸದ ಬಾಳನ್ನು ನಡಸ

ಲಾರೆ. ಅವರಿಗೆ ಮೋಸಮಾಡಲಾರೆ. ಆದರೂ ನಿನ್ನನ್ನು ಮರೆಯಲಾರೆ. ಅವರು ನನ್ನ ದೇಹದ ಪತಿ. ನೀನು ಹೃದಯದ ರಾಜ. ಚಂದ್ರು.........ನಾವು ದೂರವಾಗಿಯೇ ಇದ್ದು ಪ್ರೇಮಿಸೋಣ. ಅದರಲ್ಲೇ ಸ್ವರ್ಗಸುಖ ಕಾಣಬಹುದು"

"ಹಾಗಾದರೆ ನಾನು ಹೋಗುತ್ತೇನೆ. ಬಂದಿದ್ದು ತಪ್ಪಾಯಿತು."

ಚಂದ್ರು ಹೊರಡುವುದರಲ್ಲಿದ್ದನು. ಮೀನಾಕ್ಷಿ ಅವನ ಕೈಹಿಡಿದುಕೊಂಡು ದೈನ್ಯದಿಂದ ಕೇಳಿಕೊಂಡಳು.

"ಬೇಡ ಚಂದ್ರು, ಹೋಗಬೇಡ. ಕೋಪ ಮಾಡಿಕೊಂಡು ಹೋಗಬೇಡ. ಅದನ್ನು ಮಾತ್ರ ನಾನು ಸಹಿಸಲಾರೆ. ನಿನಗೆ ಮೋಸ ಮಾಡುತ್ತಿಲ್ಲ ಚಂದ್ರು. ನಾನು ಎಂದಿಗಿಂತ ಹೆಚ್ಚಾಗಿ ನಿನ್ನನ್ನು ಪ್ರೇಮಿಸುತ್ತೇನೆ. ಆದರೆ....ಆದರೆ ?"

ಮೀನಳ ಕಣ್ಣಲ್ಲಿ ನೀರೂರಿತು. ಚಂದ್ರು ಅರೆಕ್ಷಣ ನಿಂತು ಅವಳನ್ನು ತುಂಬುಗಣ್ಣುಗಳಿಂದ ನೋಡಿದನು. ಮುಂದೆ ಹೋಗಲು ಹೆಜ್ಜೆಯಿಟ್ಟನು. ಮೀನಾ ದೈನ್ಯದಿಂದ ಕೇಳಿಕೊಂಡಳು.

"ಕೋಪ ಮಾಡಿಕೊಂಡು ಹೋಗಬೇಡ ಚಂದ್ರೂ". ಚಂದ್ರು ನಿಂತು ಕೇಳಿದನು.

"ನಮ್ಮಿಬ್ಬರ ಸಂಬಂಧ ಕಡಿಯಿತೇ ಮೀನಾ ?"

"ಇಲ್ಲ ಚಂದ್ರು. ಅದು ನಾನು ಬದುಕಿರುವ ತನಕ ಕಡಿದು ಹೋಗುವುದಿಲ್ಲ. ನಮ್ಮಿಬ್ಬರ ಸಂಬಂಧ ಜನ್ಮಜನ್ಮಾಂತರದ ಪವಿತ್ರ ಬಂಧನ. ಆದರೆ....ಅವರಿಗೆ ಮೋಸ ಮಾಡಲಾರೆ. ನಿನ್ನನ್ನು ದೂರದಿಂದಲೇ ನೋಡಿ ಸಂತೋಷ ಪಡುತ್ತೇನೆ. ನಿನ್ನ ಚಿತ್ರ ಯಾವಾಗಲೂ ಈ ನನ್ನ ಹೃದಯದಲ್ಲಿರುತ್ತದೆ. ಚಂದ್ರು ನೀನು ನನ್ನ ದೇವರು."

"ಮೀನಾ, ನೀನು ಮತ್ತೆ ಅದೇ ಮಾತನಾಡುವೆ. ನೀನು ಯಾರಿಗೂ ಮೋಸ ಮಾಡಿಲ್ಲ. ಹೆಣ್ಣಿನ ಹೃದಯ ಮಗುವಿಗಾಗಿ ಹಂಬಲಿಸಿದುದು ಸಹಜ ಮೀನಾ. ನೀನೊಬ್ಬಳೇ ಅಲ್ಲ. ಜಗತ್ತಿನ ಲಕ್ಷಾಂತರ ಹೆಣ್ಣುಗಳೂ ಮಕ್ಕಳಿಗಾಗಿ ಹಂಬಲಿಸುವರು. ತಾಯ್ತನವನ್ನು ಪಡೆದುಕೊಳ್ಳಲು ತಪಸ್ಸು ಮಾಡುವರು. ವಿಧಿ ನಿನ್ನನ್ನು

ವಂಚಿಸಿತು. ನಮ್ಮಿಬ್ಬರ ಪ್ರೇಮ ಹಳೆಯದು. ಅದು ಪವಿತ್ರವಾದುದು. ನಿರ್ಮಲವಾದುದು. ನನ್ನ ಬಾಳಿಗೊಂದು ಬೆಳಕು ನೀಡಿ ನನ್ನ ಮನೆ ಉಳಿಸಿದ ನೀನು ನನ್ನ ಸರ್ವನಾಶ ಮಾಡಲು ಹೊಂಚುಹಾಕಿದ್ದೀಯೆ. ಬೇಡ ಮೀನಾ." ಚಂದ್ರು ವಿನೀತನಾಗಿ ಬೇಡಿಕೊಂಡನು. ಅವನ ಕಣ್ಣುಗಳು ತೇವಗೂಡಿದುವು.

" ಹಾಗಾದರೆ ನಾನು ವಂಚಕಿ ಅಲ್ಲವೆ ಚಂದ್ರು. ನಾನು ಯಾರನ್ನೂ ವಂಚಿಸಿಲ್ಲ ಅಲ್ಲವೆ ? ನೀನು ನನ್ನನ್ನು ಪ್ರೀತಿಸುವೆ ಅಲ್ಲವೆ?"

" ಇಲ್ಲ ಮೀನಾ, ನೀನು ವಂಚಕಿಯಲ್ಲ. ಒಂದು ಸಂಸಾರವನ್ನು ಉದ್ಧಾರಮಾಡಿದ ದೇವತೆ. ತನ್ನ ಅಧಃಪತನ ಮಾಡಿಕೊಳ್ಳುತ್ತಿದ್ದ ನನ್ನ ಪ್ರೇಮಿಗೆ ಚೈತನ್ಯ ನೀಡಿದ ಅಮರಪ್ರೇಮಿ. ನಾನು ಬದುಕಿರುವಷ್ಟೇ ಸತ್ಯವಾಗಿ ನಿನ್ನನ್ನು ಪ್ರೀತಿಸುವೆನು ಮೀನಾ."

" ಹಾಗಾದರೆ ನೀನು ಇನ್ನು ನನ್ನನ್ನು ಬಯಸಬೇಡ ಚಂದ್ರು! ಸ್ನೇಹಿತನಂತೆ ಬಾ. ಸ್ನೇಹಿತನಂತೆ ಹೋಗು. ಆದರೆ ನಗುನಗುತ್ತ ಹೋಗು. ನೀನು ನನಗಾಗಿ ದುಃಖಿಸಕೂಡದು. ನನ್ನ ಸರ್ವಸ್ವವನ್ನೂ ತ್ಯಾಗ ಮಾಡಿ ಇದನ್ನು ನಿನ್ನಿಂದ ಪ್ರತಿಯಾಗಿ ಭಿಕ್ಷೆ ಬೇಡುತ್ತಿರುವೆನು. ಇಲ್ಲ ಎನ್ನಬೇಡ ಚಂದ್ರೂ..........ಇಲ್ಲ ಎನ್ನಬೇಡ."

ಮೀನಾಕ್ಷಿ ಅವನ ಕಾಲ ಬಳಿ ಕುಳಿತು ಸೆರಗೊಡ್ಡಿ ಬೇಡಿದಳು. ದೈನ್ಯದಿಂದ ಚಂದ್ರುವನ್ನು ಯಾಚಿಸಿದಳು.

" ಸ್ನೇಹಿತನಂತೆ ಇರುತ್ತೇನೆಂದು ಮಾತು ಕೊಡು ಚಂದ್ರು."

ಚಂದ್ರು ಸ್ಥಬ್ದನಾಗಿ, ಅಚಲನಾಗಿ ಎವೆಹಾಕದೆ ಶೂನ್ಯವನ್ನು ದೃಷ್ಟಿಸುತ್ತ ನಿಂತುಬಿಟ್ಟನು. ಅವನ ಹೃದಯ ಯಾತನೆಯಿಂದ ಕುದಿಯುತ್ತಿದ್ದಿತು. ಅರೆಕ್ಷಣದಲ್ಲಿ ಉದ್ವೇಗದಿಂದ ಕಿರುಚಿದನು.

" ಹಾಗಾದರೆ ಇನ್ನು ನಮ್ಮ ಸಂಬಂಧ ಕಡಿಯಿತೇ ಮೀನಾ?"

" ದೇಹಸಂಬಂಧ ಕಡಿದುಹೋಗಲಿ ಚಂದ್ರು. ಹೃದಯ ಸಂಬಂಧ ಶಾಶ್ವತವಾಗಿ ನಿಲ್ಲಲಿ. ನನ್ನ ಮನಸ್ಸು ಎಂದೆಂದಿಗೂ ನಿನ್ನದೇ. ನಿನಗೆ ಅದನ್ನು ಎಂದೋ ಧಾರೆ ಎರೆದು ಕೊಟ್ಟುಬಿಟ್ಟಿರುವೆನು."

ಮೀನಾಕ್ಷಿ ಬಿಕ್ಕಿಬಿಕ್ಕಿ ಅತ್ತಳು. ಚಂದ್ರು ಹೊರಗೆ ಬಂದು

ಬಿಟ್ಟನು. ಮೀನಾಕ್ಷಿ ಅವನನ್ನು ತಡೆಯಲಿಲ್ಲ. ಎದ್ದು ತನ್ನ ಕೊಠಡಿಗೆ ಹೊರಟುಹೋದಳು. ಚಂದ್ರು ಬಾಗಿಲನ್ನು ಮುಚ್ಚಿ ಅರೆಕ್ಷಣ ನಿಂತು ಆಗಸವನ್ನು ದಿಟ್ಟಿಸಿದನು. ದುಃಖದಿಂದ ಅವನಿಗೆ ಪ್ರಪಂಚವೇ ಶೂನ್ಯ ವಾಗಿ ಕಂಡಿತು. ಚಂದ್ರು ದೀರ್ಘವಾದ ಒಂದು ನಿಟ್ಟುಸಿರನ್ನು ಬಿಟ್ಟು ಗೇಟನ್ನು ತೆಗೆದುಕೊಂಡು ಮೆಟ್ಟಲಿಳಿದಿದ್ದನು. ಎದುರಿಗೆ ರಾಮ ಚಂದ್ರಯ್ಯ ಬಂದನು. ಚಂದ್ರುವಿಗೆ ಅದು ಗೊತ್ತಾಗಲಿಲ್ಲ. ತಲೆ ತಗ್ಗಿಸಿಕೊಂಡು ಮುಂದಡಿ ಇಟ್ಟನು. ರಾಮಚಂದ್ರಯ್ಯ ಆ ಮುಸ್ಸಂಜೆ ಯಲ್ಲಿ ಚಂದ್ರುವನ್ನು ಗುರುತಿಸಿದನು.

"ಓಹೋ, ನೀವು ಯಾವಾಗ ಬಂದಿರಿ, ಚಂದ್ರಶೇಖರ್?"

ಚಂದ್ರು ಬೆಚ್ಚಿ ತಲೆ ಎತ್ತಿದನು. ಎದುರಿಗೆ ತನ್ನ ಜೀವನದ ಪ್ರತಿಕಕ್ಷಿ ! ಅವನ ಹೆದರಿಕೆಯಿಂದಲೇ ಅಲ್ಲವೆ ಅಂದು ತನ್ನ ಮೀನಳ ಸಂಬಂಧವು ಕಡಿದುಹೋದದ್ದು. ಅವನಿಗೆ ಅಲ್ಲಿ ಒಂದು ನಿಮಿಷವೂ ನಿಲ್ಲಲು ಇಚ್ಛೆಯಾಗಲಿಲ್ಲ. ಹಾಗೆಯೇ ಹೋಗೋಣವೆನ್ನಿಸಿತು. ಆದರೆ ನಿರ್ವಾಹವಿಲ್ಲದೆ ನಿಂತನು. ಆದಷ್ಟು ಸಮಾಧಾನದಿಂದ ಉತ್ತರ ಕೊಟ್ಟನು.

"ಸಾಯಂಕಾಲ ಬಂದೆ, ಟಿ.ಬಿಯಲ್ಲಿ ಇಳಿದುಕೊಂಡಿದ್ದೇನೆ. ಈಗ ನಿಮ್ಮನ್ನು ನೋಡುವುದಕ್ಕೇ ಆಫೀಸಿಗೆ ಬರುತ್ತಿದ್ದೆ. ನೀವೇ ಬಂದುಬಿಟ್ಟರಿ."

"ಬನ್ನಿ, ಒಳಗೆ ಹೋಗೋಣ."

"ಇಲ್ಲ, ನನ್ನ ಸ್ನೇಹಿತರಿಬ್ಬರ ಜೊತೆಯಲ್ಲಿ ಬಂದಿದ್ದೇನೆ. ಅವರಿಬ್ಬರೇ ಇರುತ್ತಾರೆ. ಅವರೂ ಗೇರುಸೊಪ್ಪೆಯನ್ನು ನೋಡ ಬೇಕೆಂದರು. ಕರೆದುಕೊಂಡು ಬಂದೆ. ಫಾಲ್ಸ್ ನೋಡಿಯಾಯಿತು. ನಾಳೆ ಬೆಳಗ್ಗೆ ಎಲ್ಲರೂ ಹೊರಡಬೇಕು. ಆಗುಂಬೆ, ಸೊರಬ, ಸಾಗರ ಎಲ್ಲ ನೋಡಿಕೊಂಡು ಹೋಗಬೇಕು."

"ಎಲ್ಲರೂ ಇಲ್ಲಿಗೇ ಬಂದಿದ್ದರೆ ಚೆನ್ನಾಗಿತ್ತು."

"ಛೇ! ನಿಮಗೇಕೆ ವೃಥಾ ತೊಂದರೆ. ಟಿ.ಬಿ, ಹೋಟೆಲು ಎಲ್ಲಾ ಅನುಕೂಲವಾಗಿದೆ."

" ಮೀನಾಕ್ಷಿ ನಿಮ್ಮನ್ನು ಹೋಗಗೊಟ್ಟಳೇ ?"

" ನಾನು ಬಲವಂತ ಮಾಡಿದರೆ ಅವರು ಏನು ಮಾಡುತ್ತಾರೆ. 'ಹೋಗಿ' ಎಂದರು. ಇನ್ನು ನಾನು ಹೊರಡುತ್ತೇನೆ. ನೀವು ದಯವಿಟ್ಟು ಏನೂ ತಿಳಿದು ಕೊಳ್ಳಬೇಡಿ. ನಮಸ್ಕಾರ" ಎಂದು ಚಂದ್ರು ಪ್ರತ್ಯುತ್ತ ರಕ್ಕೆ ಕಾಯದೇ ಹೊರಟೇ ಹೋದನು.

ರಾಮಚಂದ್ರಯ್ಯನಿಗೆ ಏನು ಹೇಳಲೂ ತೋರಲಿಲ್ಲ. ಚಂದ್ರುವಿನ ನಡತೆ ಬಹಳ ವಿಚಿತ್ರವಾಗಿ ತೋರಿತು. ಅವನು ನೇರವಾಗಿ ಒಳಗೆ ಹೋದನು. ಮೀನಾಕ್ಷಿ ರೂಮಿನಲ್ಲಿ ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತ ಕುಳಿತಿದ್ದಳು. ರಾಮಚಂದ್ರಯ್ಯ ಬಾಗಿಲಲ್ಲಿ ಬಂದು ನಿಂತಿದ್ದೂ ತಿಳಿಯಲಿಲ್ಲ. ಅವನಿಗೆ ಎಲ್ಲ ವಿಪರೀತವಾಗಿ ಕಂಡಿತು. ಎರಡು ಮೂರು ನಿಮಿಷ ಬಾಗಿಲಲ್ಲಿ ನಿಂತಿದ್ದರೂ, ಮೀನಾಕ್ಷಿ ಮುಖ ಮುಚ್ಚಿಕೊಂಡು ಬಿಕ್ಕುತ್ತಿದ್ದಳು. ರಾಮಚಂದ್ರಯ್ಯ ಗುಡುಗಿದನು.

" ಮೀನಾ.... .... ...."

ಮೀನಾಕ್ಷಿ ಬೆಚ್ಚಿಬಿದ್ದಳು. ತಕ್ಷಣ ಎದ್ದು ನಿಂತಳು. ಸೆರಗಿ ನಿಂದ ಕಣ್ಣುಗಳನ್ನು ಒರಸಿಕೊಂಡಳು. ರಾಮಚಂದ್ರಯ್ಯ ಸಂಶಯ ದೃಷ್ಟಿಯಿಂದ ಮೀನಾಕ್ಷಿಯನ್ನೇ ಅರೆಕ್ಷಣ ನೋಡಿದನು. ಮೀನಾಕ್ಷಿಯ ಎದೆ ನಡುಗಿತು. ಸಾವರಿಸಿಕೊಂಡು ನಗುವ ಯತ್ನ ಮಾಡಿದಳು. ರಾಮಚಂದ್ರಯ್ಯ ಮತ್ತೆ ಗಡುಸಾದ ಧ್ವನಿಯಲ್ಲಿ ಕೇಳಿದನು.

" ಏಕೆ ಮೀನಾ ? ಏಕೆ ಅಳುತ್ತಿದ್ದೆ ?"

" ಇಲ್ಲವಲ್ಲಾ................"

" ನಾನು ಐದು ನಿಮಿಷದಿಂದ ನಿಂತು ನೋಡಿದೆ. ಸುಳ್ಳು ಹೇಳುತ್ತೀಯಾ ?"

ಮೀನಾಕ್ಷಿ ತಲೆ ತಗ್ಗಿಸಿದಳು. ಅವಳ ಬಾಯಿಂದ ಮಾತೇ ಹೊರಡಲಿಲ್ಲ. ಮನಸ್ಸು ಸುಳ್ಳು ನೆಪಕ್ಕಾಗಿ ತಡಕಾಡತೊಡಗಿತು.

" ಮೀನಾ ....ಏಕೆ ಅಳುತ್ತಿದ್ದೆ ?"

ರಾಮಚಂದ್ರಯ್ಯ ಮತ್ತೆ ರೋಷದಿಂದ ಅರಚಿದನು. ಮೀನಾ ಕ್ಷಿಯ ಹೃದಯ ಕಂಪಿಸಿತು. ಅವನ ಮುಖ ಕೋಪದಿಂದ ಕೆಂಪ

ಗಾಗಿತ್ತು. ಅವಳ ಜೀವನದಲ್ಲಿ ಅಂದೇ ಮೊದಲ ದಿನ ರಾಮ ಚಂದ್ರಯ್ಯನ ರೋಷ ನೋಡಿದುದು. ಮೀನಾ ಆ ಕ್ರೂರ ದೃಷ್ಟಿ ಯನ್ನು ಎದುರಿಸಲಾರದೇ ಹೋದಳು. ಝಗ್ಗನೆ ಎದ್ದು ಹೋಗಿ ಮೀನಾಕ್ಷಿ ಬಿಗಿಯಾಗಿ ಅವನ ಕೈಹಿಡಿದುಕೊಂಡಳು. ರೂಮಿ ನೊಳಗೆ ಕರೆದುಕೊಂಡು ಬಂದು ಮೆಲ್ಲನೆ ಹೇಳಿದಳು. ಅವಳ ಕಣ್ಣು ಗಳಲ್ಲಿ ಕಣ್ಣೀರು ತುಂಬಿಕೊಂಡಿತು. ಅವಳ ಬಾಯಿಂದ ನಿರರ್ಗಳವಾಗಿ ಮಾತು ಹರಿದು ಬಂದಿತು.

"ಅಕ್ಕನಿಗೆ ತಿರುಗಿ ಮೈ ಚೆನ್ನಾಗಿಲ್ಲವಂತೆ. ಚಂದ್ರು ಜಗಳ ಆಡಿಕೊಂಡು ಸ್ನೇಹಿತರ ಜೊತೆ ಇಲ್ಲಿಗೆ ಬಂದು ಬಿಟ್ಟನಂತೆ. ಅಕ್ಕನ ಬಾಳು ನೋಡಿ ಅಳು ಬಂದಿತು."

"ಅವರನ್ನು 'ಹೋಗಿ' ಎಂದೆಯಂತೆ!"

"ಹೋ, ನಿಮಗೆ ಸಿಕ್ಕಿದ್ದನೆ? ಅಕ್ಕನೊಡನೆ ಜಗಳವಾಡಿ ಕೊಂಡು ಬಂದವನನ್ನು ಇರು ಎಂದು ಉಪಚರಿಸಬೇಕಾಗಿದ್ದಿತೇನೋ. ಚೆನ್ನಾಗಿ ಬೈದು ಬುದ್ಧಿ ಹೇಳಿದೆ. ಕೋಪ ಮಾಡಿಕೊಂಡು ಹೊರಟು ಹೋದ."

ರಾಮಚಂದ್ರಯ್ಯನ ಆವೇಗ ಕಮ್ಮಿಯಾಯಿತು. ಮೀನಾಕ್ಷಿಯ ಮುಖವನ್ನು ನೋಡಿ ಅವನ ಸಂಶಯಗಳೆಲ್ಲ ಹಾರಿಹೋದುವು.

"ಮೀನಾ, ನಾನು ಏನೋ ಊಹಿಸಿದ್ದೆ" ಎಂದು ಕೋಟು ಕಳಚಿ ಸ್ಟ್ಯಾಂಡಿನ ಮೇಲೆ ಹಾಕಿದನು. ಮೀನಾಕ್ಷಿ ಅವನ ಊಹೆ ಏನೆಂದು ಕೇಳಲಿಲ್ಲ. ಅವನ ಊಹೆ ಏನಿರಬೇಕೆಂದು ಮೀನಾಕ್ಷಿಯೂ ಊಹಿಸಿದ್ದಳು. ಅವಳು ನಿಶ್ಚಿಂತೆಯ ನಿಟ್ಟುಸಿರುಬಿಟ್ಟಳು.

ಮೀನಾ ಕೊಂಚ ಹೊತ್ತಿನಲ್ಲೇ ನಗುತ್ತ ನಲಿಯುತ್ತ ಕಾಫಿ ತಿಂಡಿಯನ್ನು ತಂದು ಟೇಬಲಿನ ಮೇಲಿಟ್ಟಳು. ರಾಮಚಂದ್ರಯ್ಯ ಮೀನಾಕ್ಷಿಯ ಕುಡಿಗಣ್ಣೋಟಕ್ಕೆ ಮಾರುಹೋದನು. ಇಬ್ಬರೂ ನಗುನಗುತ್ತಾ ಒಂದೇ ತಟ್ಟೆಯಲ್ಲಿ ತಿಂಡಿ ತಿಂದು ಮುಗಿಸಿದರು. ಒಂದೇ ಲೋಟದಲ್ಲಿ ಕಾಫಿಯನ್ನು ಕುಡಿದರು. ಆಗ ಮೀನಾಕ್ಷಿಯ ಹೃದಯ ದಲ್ಲಾಗುತ್ತಿದ್ದ ಸಂಕಟವನ್ನು ಅವನು ಅರಿತಿದ್ದರೆ ಖಂಡಿತ ಎದೆ

ಯೊಡೆದು ಸಾಯುತ್ತಿದ್ದನು. ನಗುನಗುತ್ತ ಗಂಡನನ್ನು ರಮಿಸಿದಳು. ಆದರೆ ಅದರ ಹಿಂದೆ ಅಡಗಿದ್ದ ಅಪಾರವಾದ ದಾರುಣ ವ್ಯಥೆ ಹೃದಯ ಬೇಧಕವಾಗಿದ್ದಿತು.

## ೨೧

ಮೀನಾಕ್ಷಿ ದಿನದಿನಕ್ಕೆ ತೆಗೆದು ಹೋಗುತ್ತಿದ್ದಳು. ರಾಮು ಚಂದ್ರಯ್ಯನಿಗೆ ಗಾಬರಿಯಾಯಿತು. ಲೇಡಿ ಡಾಕ್ಟರರ ಬಳಿ ಕರೆದು ಕೊಂಡು ಹೋಗಿ ಪರೀಕ್ಷೆ ಮಾಡಿಸಿದನು. ಅವರು ನಿಶ್ಶಕ್ತಿ ಎಂದು ಟಾನಿಕ್ಕು ಬರೆದುಕೊಟ್ಟರು. ಆದರೆ ಮೀನಾಕ್ಷಿಯ ವೇದನೆ ನಿಶ್ಶಕ್ತಿ ಯಿಂದ ಬಹಳ ದೂರವಾಗಿದ್ದಿತು. ಅವಳ ಬಾಯಿಲೆ ಸಹಿಸಲಾರದ ಹೃದಯ ವೇದನೆಯಾಗಿದ್ದಿತು. ರಾಮುಚಂದ್ರಯ್ಯನನ್ನು ಮೆಚ್ಚಿಸಲು ಅವನು ತಂದು ಕೊಟ್ಟ ಟಾನಿಕ್ಕುಗಳನ್ನು ಕುಡಿದಳು. ಮಾತ್ರೆಗಳನ್ನು ನುಂಗಿದಳು. ಆದರೆ ಅವನು ಅವಳ ಮನಸ್ಸಿಗೆ ಔಷಧಿ ಕೊಡಲಾರದೇ ಹೋದನು.

ಅವಳಿಗೆ ಚಂದ್ರು ತನ್ನಿಂದ ದೂರ, ಬಹಳ ದೂರ, ಹೊರಟು ಹೋದನೆನ್ನಿಸಿತು. ಅವಳಿಗೆ ಅದೇ ಯೋಚನೆಯಾಯಿತು. ಚಂದ್ರು ವನ್ನು ತಾನೇ ದೂರ ಮಾಡಿದ್ದಳು. ನಾನು ಆ ಅಗಲಿಕೆಯ ದುಃಖವನ್ನು ತಡೆಯಬಲ್ಲೆನೇ? ಚಂದ್ರು ನನ್ನ ಮೇಲಿನ ಮೋಹ ಕ್ಕಾಗಿ ಮತ್ತೆ ಬರುವನೆ ? 'ಬರುವನು, ಖಂಡಿತ ಬಂದೇ ಬರುವನು' ಎಂದಿತು ಮನಸ್ಸು. ಅದೇ ಮನಸ್ಸು ಮತ್ತೆ ಯೋಚಿಸಿತು. 'ಚಂದ್ರು ನನ್ನ ಮೇಲಿನ ಮೋಹದಿಂದ ವಿಪರೀತ ಯೋಚಿಸಿ, ಹುಚ್ಚನಂತಾಡಿ ಮತ್ತೆ ಮದ್ಯ ಕುಡಿಯತೊಡಗಿದರೆ ? ಜಿಗುಪ್ಸೆಯಿಂದ ಕಾಮಾಕ್ಷಿಗೆ ನರಕಯಾತನೆ ಕೊಟ್ಟರೆ ? ದೇವರೇ, ಅದನ್ನುಮಟ್ಟಿಗೆ ಮಾಡಿಸಬೇಡ. ನಾನು ಮಾಡಿದ ತ್ಯಾಗವೆಲ್ಲ ಮಣ್ಣುಪಾಲಾಗುವುದು. ಕಾಮಾಕ್ಷಿಯ

ಸಂಸಾರವನ್ನು ನಿಲ್ಲಿಸಿದ ಹೆಮ್ಮೆಯಿಂದ ನಾನು ಇನ್ನೂ ಬದುಕಿದ್ದೇನೆ.... ಚಂದ್ರೂ, ನನಗೆ ಮೋಸ ಮಾಡಬೇಡ. ನನ್ನ ಮೇಲಿನ ಮೋಹವನ್ನು ಬಿಟ್ಟುಬಿಡು' ಎಂದು ಹಗಲಿರುಳು ಸಂಕಟಪಡುತ್ತಿದ್ದಳು.

ಮೀನಾಕ್ಷಿಗೆ ಒಮ್ಮೊಮ್ಮೆ ಚಂದ್ರುವನ್ನು ನೆನಸಿಕೊಂಡರೆ ಕೋಪ ಬರುತ್ತಿದ್ದಿತು. ತಾನು ಕೇಳುವ ಪ್ರೇಮಕ್ಕೆ, ಕಾಮರಹಿತ ಪ್ರೇಮಕ್ಕೆ ಪುರಸ್ಕಾರವನ್ನು ಕೊಡದೇ ಹೋದನಲ್ಲಾ. ಚಂದ್ರುವಿನ ಅಂಶವನ್ನು ಹೊತ್ತಿದ್ದರೂ ಅವನಿಗಿನ್ನೂ ತೃಪ್ತಿಯಿಲ್ಲವಲ್ಲಾ ಎಂದು ಕೋಪ ಬರುತ್ತಿದ್ದಿತು. ಇನ್ನೊಮ್ಮೆ ಅವನ ಮುಖವನ್ನೇ ನೋಡಬಾರದೆಂದು ಹಠ ಕಟ್ಟಿಕೊಳ್ಳುತ್ತಿದ್ದಳು. ಆದರೆ ಪ್ರೇಮಪೂರಿತವಾದ ಚಂದ್ರುವಿನ ಮೃದು ಮಧುರವಾದ ಕಂಠಸ್ವರ ಕಿವಿಯಲ್ಲಿ ಪ್ರತಿಧ್ವನಿಸುತ್ತಿದ್ದಿತು. ಅವನ ಪ್ರೇಮದ ಕಣ್ದೃಷ್ಟಿ, ಸುಂದರಾಕೃತಿ ಕಣ್ಣಮುಂದೆ ಬಂದು ನಿಲ್ಲುತ್ತಿದ್ದಿತು. 'ಮೀನಾ, ನನ್ನನ್ನು ಹೀಗೇಕೆ ತಿರಸ್ಕರಿಸಿದೆ? ನನ್ನ ಸಂಪರ್ಕ ನಿನಗೆ ಬೇಡವಾಯಿತೇ?' ಎಂದು ದೈನ್ಯದಿಂದ ಕಣ್ಣೀರು ತುಂಬಿ ಮೊರೆಯಿಡುತ್ತಿದ್ದಿತು. ಆಗ ಮೀನಳ ಕೋಪ ಕರಗಿ ನಿರಾಗುತ್ತಿದ್ದಿತು. ಚಂದ್ರುವನ್ನು ನೋಡಬೇಕೆಂದು ಕಣ್ಣೀರು ಕರೆಯುತ್ತಿದ್ದಳು—ಎಲ್ಲಾ ಹುಚ್ಚು, ಹುಚ್ಚು.

ನಿದ್ದೆಯೂ ಅವಳನ್ನು ವಂಚಿಸಿದಂತೆ ತೋರಿತು. ರಾಮಚಂದ್ರಯ್ಯನಿಗೂ ಎರಡು ಮೂರು ದಿನ, ಮೀನಾಕ್ಷಿ ನಿದ್ದೆ ಮಾಡದೆ ಹಾಸಿಗೆಯ ಮೇಲೆ ಕುಳಿತು ಕೊಂಡಿದ್ದ ಸುಳಿವು ತೋರಿತು. "ಏಕೆ ಮೀನಾ, ನಿದ್ದೆ ಬಂದಿಲ್ಲವೆ? ಏನು ಯೋಚನೆಮಾಡುತ್ತಿರುವೆ? ಹೆದರಿಕೆಯೆ?" ಎಂದು ಕೇಳುತ್ತಿದ್ದನು. ಮೀನಾಕ್ಷಿ ಉತ್ತರ ಹೇಳದಿದ್ದರೆ ಪ್ರೀತಿಯಿಂದ ತಲೆ ನೇವರಿಸಿ, "ನಾನಿರುವಾಗ ನಿನಗೆ ಹೆದರಿಕೆಯೇ?" ಎಂದು ಬಲವಂತದಿಂದ ಮಲಗಿಸಿ ನಿದ್ದೆ ಮಾಡಿಸುತ್ತಿದ್ದನು. ಒಮ್ಮೊಮ್ಮೆ ಮೀನಾಕ್ಷಿ "ನನಗೆ ಕಾಮಾಕ್ಷಿಯದೇ ನೆನಪು. ಅವಳು ಈಗ ಹೇಗಿದ್ದಾಳೋ" ಎಂದು ಸುಳ್ಳು ನೆವ ಹೇಳುತ್ತಿದ್ದಳು.

"ಹುಚ್ಚು ಹುಡುಗಿ, ಸುಮ್ಮನೆ ಮಲಗಿಕೋ. ನಾಳೆ ಕಾಗದ ಬರೆದು ಹಾಕಿದರೆ ಆಯಿತು" ಎಂದು ಸಮಾಧಾನ ಹೇಳಿ ಅವಳ

ಯೋಚನೆ ತಪ್ಪಲೆಂದು ತನ್ನ ಆಫೀಸಿನಲ್ಲಿ ನಡೆದ ತಮಾಷೆ ವಿಷಯಗಳನ್ನು ಹೇಳಿ ಅವಳನ್ನು ಬಲವಂತದಿಂದ ಮಲಗಿಸುತ್ತಿದ್ದನು. ಅವಳು ಮಲಗದಿದ್ದರೆ ತಾನೂ ಅವಳೊಡನೆ ಜಾಗರಣೆ ಮಾಡುತ್ತಿದ್ದನು. ಆಗಾಗ, "ಏನು ಮೀನಾ, ಒಬ್ಬಳೇ ಇರಲು ಹೆದರಿಕೆಯಾಗುತ್ತದೆಯೇ. ಅಮ್ಮನನ್ನು ಕರೆಸಲೇ ?" ಎನ್ನುತ್ತಿದ್ದನು. ಆಗ ಅವಳು ನಿಜವಾಗಿ ಹೆದರುತ್ತಿದ್ದಳು. ಅವನು ಎಲ್ಲಿ ಕರೆಸಿ ಬಿಡುವನೋ ಎಂದು ಖಡಾಖಂಡಿತವಾಗಿ ಹೇಳಿ ಬಿಡುತ್ತಿದ್ದಳು : "ನೀವು ಖಂಡಿತ ಅವರನ್ನು ಕರೆಸಬೇಡಿ. ನನಗೆ ನಿಮ್ಮೊಬ್ಬರೊಡನೇ ಇರಬೇಕೆಂದು ಆಸೆ. ನೀವು ಖಂಡಿತ ಅವರಿಗೇನೂ ಬರೆಯ ಬೇಡಿ." ರಾಮಚಂದ್ರಯ್ಯ ಆನಂದದಿಂದ, ಅಭಿಮಾನದಿಂದ ಸುಮ್ಮನಾಗುತ್ತಿದ್ದನು.

ಮೀನಾಕ್ಷಿ ಏನೇನೋ ಕನವರಿಸಿಕೊಳ್ಳುತ್ತಿದ್ದಳು. ಬೆಳಿಗ್ಗೆ ಎದ್ದು ಕೇಳಿದರೆ, "ಏನೂ ಇಲ್ಲ. ನನಗೇನೂ ಯೋಚನೆ ಇಲ್ಲ. ಏನೋ ಕನವರಿಸಿಕೊಂಡಿರಬಹುದು. ಎಲ್ಲರೂ ಕನವರಿಸಿಕೊಳ್ಳುವುದಿಲ್ಲವೇ ? ನಿಮಗೇನೋ ನಂದು ಅತಿಶಯವಾಗಿದೆ. ನೀವೂ ಕನವರಿಸಿಕೊಳ್ಳುತ್ತೀರಿ. ಅದು ನಿಮಗೆ ತಿಳಿಯುವುದಿಲ್ಲ" ಎಂದುಬಿಡುತ್ತಿದ್ದಳು.

ಆ ದಿನ ಮೀನಾಕ್ಷಿ ರಾತ್ರಿ ಹನ್ನೆರಡು ಘಂಟೆಯವರೆಗೆ ಎದ್ದಿದ್ದು ಆಮೇಲೆ ಮಲಗಿಕೊಂಡಳು. ಅವಳಿಗೆ ಚಂದ್ರುವಿನದೇ ಯೋಚನೆಯಾಗಿದ್ದಿತು. ಅರ್ಧ ಘಂಟೆಯಾದ ಮೇಲೆ ರಾಮಚಂದ್ರಯ್ಯ ಕೆಮ್ಮು ಬಂದು ಎದ್ದುಬಿಟ್ಟನು. ಗಂಟಲು ಒಣಗಿದಂತಾಗಿ ನೀರು ಕುಡಿಯಲು ಮೇಲೆದ್ದನು. ನೀರು ಕುಡಿಯುತ್ತಿದ್ದಂತೆ, ಮೀನಾಕ್ಷಿ ಕನವರಿಸಿದಳು. "ಚಂದ್ರೂ, ಚಂದ್ರೂ........ಹೋಗಬೇಡ" ಎಂದು ಕೂಗುತ್ತ ಧುಗ್ಗನೆದ್ದು ಕುಳಿತು ಕಣ್ಣು ಬಿಟ್ಟಳು. ಲೈಟು ಅವಳ ಕಣ್ಣು ಕೋರೈಸಿತು. ರಾಮಚಂದ್ರಯ್ಯ ಅವಳ ಕೈಹಿಡಿದು ತಲೆ ನೇವರಿಸಿ ಸಮಾಧಾನ ಮಾಡಿದನು.

"ಏಕೆ ಮೀನಾ, ಕನವರಿಸಿಕೊಂಡೆಯಾ .... ಮಲಗಿಕೋ. ನಾನು ಇಲ್ಲೇ ಇದ್ದೇನೆ."

ಮೀನಾಕ್ಷಿಗೆ ನಾಚಿಕೆಯಾಯಿತು. ರಾಮಚಂದ್ರಯ್ಯ ತಾನು

ಕೂಗಿದ್ದನ್ನು ಎಲ್ಲಿ ಕೇಳಿಬಿಟ್ಟನೋ ಎಂದು ಮನಸ್ಸಿಗೆ ಬೇಸರವಾಯಿತು. ಮತ್ತೆ ಮಲಗಿಕೊಂಡಳು. ರಾಮಚಂದ್ರಯ್ಯ ದೀಪ ಆರಿಸಿ ಮಲಗಿಕೊಂಡನು. ಅವನಿಗೆ ನಿದ್ದೆ ಬರಲಿಲ್ಲ. ಮೀನಾಕ್ಷಿ "ಚಂದ್ರು, ಚಂದ್ರು" ಎಂದು ಕನವರಿಸಿದ್ದು ಅವನ ಹೃದಯಕ್ಕೆ ಏಟುಕೊಟ್ಟಂತಾಯಿತು. ಅವನನ್ನು ಸಂಶಯಪಿಶಾಚಿ ಕಾಡಿತು. ಬೆಳಗಿನಝಾವ ತಂಗಾಳಿ ಬೀಸಿ ಛಳಿಯಾಗಲು, ಮೈ ತುಂಬ ಹೊದ್ದುಕೊಂಡು ಮಲಗಿಕೊಂಡನು.

ಆ ದಿನ ಮಧ್ಯಾಹ್ನ ಊಟವಾದಮೇಲೆ ಮೀನಾಕ್ಷಿ ರಾಮಚಂದ್ರಯ್ಯನಿಗೆ ಎಲೆ ಅಡಿಕೆ ತಂದು, ಅವನ ಮಂಚದ ಮೇಲೆ ಕುಳಿತುಕೊಂಡಳು. ರಾಮಚಂದ್ರಯ್ಯನ ಮನಸ್ಸು ಅಲ್ಲಕಲ್ಲೋಲವಾಗಿದ್ದಿತು. ಮೀನಳನ್ನೇ ದಿಟ್ಟಿಸಿನೋಡಿ ಅವಳ ಕೈ ಹಿಡಿದುಕೊಂಡು ಅಕ್ಕರೆಯಿಂದ ಕೇಳಿದನು.

"ಮೀನಾ, ನಾನೊಂದು ಮಾತು ಕೇಳುತ್ತೇನೆ. ನಿಜ ಹೇಳುತ್ತೀಯಾ ?"

"ಒಂದೇ ಮಾತು !........ ಹುಂ"

"ನನ್ನನ್ನು ಮದುವೆ ಮಾಡಿಕೊಳ್ಳುವುದಕ್ಕೆ ಮೊದಲು ನೀನು ಯಾರನ್ನಾದರೂ ಪ್ರೀತಿಸುತ್ತಿದ್ದೆಯಾ ?"

"ಇಲ್ಲವಲ್ಲ.... ನಾನು ಪ್ರೀತಿಸಿದ್ದು ನಿಮ್ಮನ್ನೇ."

"ಇರಲಾರದು ಮೀನಾ. ಚಂದ್ರು ನಿಮ್ಮ ಮನೆಯಲ್ಲಿ ಓದುತ್ತಿದ್ದ ಅಲ್ಲವೆ ?"

"ಹೌದು .... ...... ...."

"ನನಗೆ ಗೊತ್ತು. ನೀನು ಚಂದ್ರುವನ್ನು ಪ್ರೀತಿಸುತ್ತಿದ್ದೆ. ಅವನನ್ನು ಮದುವೆ ಮಾಡಿಕೊಳ್ಳಬೇಕೆಂದಿದ್ದೆ."

ರಾಮಚಂದ್ರಯ್ಯನ ಮಾತುಗಳು ತೀರ ಅನಿರೀಕ್ಷಿತವಾಗಿದ್ದವು. ಮೀನಾಕ್ಷಿಯ ಎದೆ ಅಳುಕಿತು. ಆ ಸಂಧಿಗ್ಧ ಪರಿಸ್ಥಿತಿಯಿಂದ ಜಾರಿಕೊಳ್ಳಲು ಪ್ರಯತ್ನಿಸಿದಳು. ತನ್ನ ಒನಪು ವೈಯ್ಯಾರದ ಮೋಹದ ಬಲೆಯನ್ನು ಬೀಸಿದಳು.

"ಹೋಗೀಂದ್ರೆ, ನೀವು ಇಂತಹ ಮಾತಾಡಬೇಡಿ. ಎಲ್ಲ

ಬರಿಯ ಸುಳ್ಳು. ಕೇಳಿದವರು ನಗುತ್ತಾರೆ ಅಷ್ಟೆ. ನಿಮಗೆ ಎಲ್ಲಾ ಹುಡುಗಾಟ."

" ಹುಡುಗಾಟ ಅಲ್ಲ ಮೀನಾ. ಖಂಡಿತ ನಿಜ "

" ಅಬ್ಬ ! ನಿಜ. ನಿಮಗೆ ಯಾರು ಹೇಳಿದರು ? "

" ನೀನೇ .... .... ...."

" ನಾನೇ ! ಯಾವಾಗ ? "

" ನಿದ್ದೆಯಲ್ಲಿ."

" ಅಂದರೆ.... .... "

" ಮೀನಾ ನೀನು ದಿನವೂ ನಿದ್ದೆ ಮಾಡುವುದಿಲ್ಲ ಏನೋ ಯೋಚನೆ ಮಾಡುತ್ತೀ. ನಿನ್ನೆ 'ಚಂದ್ರೂ, ಚಂದ್ರೂ ಹೋಗಬೇಡ' ಎಂದು ಕನವರಿಸಿಕೊಂಡು ನಿದ್ದೆಯಿಂದ ಎದ್ದೆ. ನಾನೇ ಸಮಾಧಾನ ಮಾಡಿ ಮತ್ತೆ ಮಲಗಿಸಿದೆ. ನಿನಗೆ ಮರೆತು ಹೋಯಿತೇ. ಅದಕ್ಕೇ ನಾನು ಕೇಳಿದ್ದು."

ಮೀನಾಕ್ಷಿ ಘೊಳ್ಳನೆ ನಕ್ಕುಬಿಟ್ಟಳು. ರಾಮಚಂದ್ರಯ್ಯ ಪೆಚ್ಚಾದನು. " ನೋಡಿದಿರಾ, ಮರತೇ ಹೋಯಿತು. ನಿನ್ನೆ ನನಗೆ ಕನಸಾಯಿತು. ನಿಮಗೆ ನಾನೇ ಹೇಳಬೇಕೆಂದಿದ್ದೆ. ಕನಸು ಬಹಳ ತಮಾಷಿಯಾಗಿತ್ತು. ಆದರೂ ನಿಜವೇನೋ ಅನ್ನಿಸಿಬಿಟ್ಟಿತು. ನಾನು ಕಾಮಾಕ್ಷಿಯ ಮನೆಗೆ ಹೋದೆ. ಚಂದ್ರು ಕಾಮಾಕ್ಷಿಯನ್ನು ಹೊಡೆದು ಹೊಡೆದು, ಅವಳು ರಕ್ತ ಕಾರುತ್ತ ನೆಲಕ್ಕೆ ಬಿದ್ದುಬಿಟ್ಟಳು. ನಾನು ಹೋಗಿ ತಡೆದೆ. ಚಂದ್ರು ನನ್ನನ್ನೂ ಚೆನ್ನಾಗಿ ಹೊಡೆದು, ನಮ್ಮಿಬ್ಬರನ್ನೂ ಎಳೆದುಕೊಂಡು ಹೋಗಿ, ಒಂದು ಕಾಡಿನಲ್ಲಿ ಹಾಕಿದ. ಕಾಮಾಕ್ಷಿ ಮೂರ್ಛೆಹೋಗಿದ್ದಳು. ಚಂದ್ರು ನಮ್ಮನ್ನು ಬಿಟ್ಟುಹೊರಟು ಹೋಗಿದ್ದ. ನಾನು ಹೆದರಿಕೊಂಡು ಚಂದ್ರೂ, ಚಂದ್ರೂ ನಮ್ಮನ್ನು ಬಿಟ್ಟುಹೋಗಬೇಡ ಎಂದು ಕಿರುಚಿಕೊಂಡೆ. ತಕ್ಷಣ ಎದ್ದುಬಿಟ್ಟೆ."

ಮೋಹದ ಬಲೆಗೆ ಕಾಮದ ಮೀನು ಸಿಕ್ಕಿಬಿದ್ದಿತು. ರಾಮಚಂದ್ರಯ್ಯ ಅವಳ ಹಾವಭಾವಗಳಿಗೆ ಕುಡಿಮಿಂಚಿನ ಕಣ್ಣೋಟಕ್ಕೆ, ಮಂದಹಾಸದ ಮೆಲುನಗೆಗೆ ಮಾರುಹೋದನು. " ನಾನು ಏನೋ

ಎಂದುಕೊಂಡಿದ್ದೆ" ಎಂದು ಗಟ್ಟಿಯಾಗಿ ನಕ್ಕುಬಿಟ್ಟನು.

"ಅಬ್ಬ ! ನನ್ನ ವಿಷಯದಲ್ಲಿ ಇಷ್ಟು ಸಂಶಯ ಪಡುವಿರಲ್ಲಾ. ನೀವು ನನ್ನಮೇಲೆ ಪತ್ತೇದಾರಿಗಳಾದರೆ ಏನೂ ಸಿಕ್ಕುವುದಿಲ್ಲ. ಖೂನಿ ಕೇಸುಗಳನ್ನು ಹಿಡಿದು ಪತ್ತೇದಾರಿ ಕೆಲಸ ಮಾಡಿ. ಖಂಡಿತ ಸಾವಿರಾರು ರೂಪಾಯಿ ಸಂಪಾದಿಸಬಹುದು" ಎಂದು ಮೀನಾ ಕೊರಳು ಕೊಂಕಿಸಿ, ಸುವಾಸನೆಯ ಸುಣ್ಣ ಹಚ್ಚಿದ ಚಿಗುರೆಲೆಯನ್ನು ಮಡಿಸಿ, ಅವನ ಬಾಯಿಗೆ ತುರುಕಿದಳು.

ಮಾರನೆಯ ದಿನದಿಂದ ಮೀನಾಕ್ಷಿ ಅವನ ಪಕ್ಕದಲ್ಲಿ ಮಲಗಿ ಕೊಂಡು ನಿದ್ದೆಹೋಗುವುದಕ್ಕೇ ಹೆದರಿಕೊಂಡಳು. ಅವಳಿಗೊಂದು ಉಪಾಯ ಹೊಳೆಯಿತು. ಆಸ್ಪತ್ರೆಯ ಕಾಂಪೌಂಡರ ಹೆಂಡತಿಗೆ, ತನಗೆ ನಿದ್ದೆ ಬರುವುದಿಲ್ಲವೆಂದು ಹೇಳಿ, ದುಡ್ಡು ಕೊಟ್ಟು ನಿದ್ದೆಯ ಗುಳಿಗೆ ಗಳನ್ನು ತರಿಸಿಕೊಂಡಳು. ನಿಯೋಜನೆಯಿಂದ ಅದನ್ನು ಕೊಂಚ ಹಾಲಿಗೆ ಹಾಕಿ ಬೆರಸಿ ಗಂಡನಿಗೆ ಕುಡಿಯಲು ಕೊಟ್ಟುಬಿಡುತ್ತಿದ್ದಳು ! ಹಾಲು ಕುಡಿದ ರಾಮಚಂದ್ರಯ್ಯ ಕುಂಭಕರ್ಣನಂತೆ ಮಲಗಿಕೊಂಡು ಗೊರಕೆ ಹೊಡೆಯುತ್ತಿದ್ದನು. ಅವಳ ಕನಸು, ಕನವರಿಕೆಗಳು ನಿರ್ಭಯ ವಾಗಿ, ನಿರಾಂತಕವಾಗಿ ನಡೆಯುತ್ತಿದ್ದುವು.

ಮೀನಾಕ್ಷಿಯ ಲೆಕ್ಕದ ಪ್ರಕಾರ ಅವಳ ಹೆರಿಗೆಯ ದಿವಸಗಳು ಸಮೀಪಿಸುತ್ತಿದ್ದುವು. ಅವಳಿಗೆ ಏನೋ ಹೆದರಿಕೆ, ಆವೇಗ, ದುಃಖ, ಸಂಶಯ, ಸಂತೋಷ ! ರಾಮಚಂದ್ರಯ್ಯನ ಎಣಿಕೆಯ ಪ್ರಕಾರ ಮೀನಾಕ್ಷಿಗೆ ಏಳನೆಯ ತಿಂಗಳು ಮುಗಿಯುತ್ತಿತ್ತು. ಮೀನಾಕ್ಷಿ ಅವನಿಗೆ ನಂಬಿಕೆ ಹುಟ್ಟಿಸಿದ ರೀತಿ ಹಾಗಿತ್ತು. ಅವನು ತಾಯಿಯನ್ನು ಊರಿಗೆ ಕರೆಸುವ ಯೋಚನೆ ಮಾಡಿದನು. ಅಷ್ಟರಲ್ಲಿ ತಾಯಿಯಿಂದಲೇ ಆಗ್ರಹದ ಕಾಗದ ಬಂದಿತು. ಮೀನಾಕ್ಷಿಯನ್ನು ಹೆರಿಗೆಗಾಗಿ ಸಾಗರಕ್ಕೆ ಕಳುಹಿಸುವ ಯೋಚನೆ ಮಾಡಿದನು.

"ಮೀನಾ, ನಿನ್ನನ್ನು ನಾನು ನೋಡಲಾರೆ. ನೀನು ಬಹಳ ಇಳಿದುಹೋಗಿದ್ದೀಯೆ. ನಾಳೆ ಏನಾದರೂ ಅನಾಹುತವಾದರೆ ಏನು ಗತಿ ? ಕಾಮಾಕ್ಷಮ್ಮನನ್ನಾದರೂ ಇಲ್ಲಿಗೇ ಕರೆಸಿಕೊಂಡುಬಿಡು.

ನಿನಗೂ ನಿಶ್ಚಿಂತೆಯಾಗುತ್ತದೆ. ಇಲ್ಲ ನಾಳೆಯೇ ಹೊರಡು. ರಜ ತೆಗೆದುಕೊಂಡು ಅಮ್ಮನ ಹತ್ತಿರ ಬಿಟ್ಟುಬರುತ್ತೇನೆ."

ಮೀನಾ ಹೆದರಿಕೊಂಡವಳಂತೆ ತಲೆ ಅಲ್ಲಾಡಿಸಿ ವಿರೋಧಿಸಿದಳು. ಅವಳಿಗೆ ಗೇರುಸೊಪ್ಪೆ ಒಗ್ಗಿಹೋಗಿದ್ದಿತು. ಆ ನಿಸರ್ಗದ ಮಡಿಲಲ್ಲಿ ತೊಟ್ಟಿಲಂತಿದ್ದ, ಸುತ್ತಲಿನ ಜಗತ್ತಿನಿಂದ ದೂರವಾದಂತಿದ್ದ ಗೇರುಸೊಪ್ಪೆಯ ಗಾಳಿ, ನೀರು ಅವಳ ಮೈಯ ಪ್ರತಿಯೊಂದು ಕಣದಲ್ಲೂ ಸೇರಿಕೊಂಡಿದ್ದುವು. ಮೀನಾಕ್ಷಿ ಅಲ್ಲಿಯೇ ಇರಲು ಆಸೆಪಟ್ಟಳು.

"ಬೇಡ, ಬೇಡ. ನನಗೇನೂ ಆಗಿಲ್ಲ. ನಾನು ಚೆನ್ನಾಗಿ ಆರೈಕೆ ಮಾಡಿಕೊಳ್ಳುತ್ತಿದ್ದೇನೆ. ನೀವು ನನಗೆ ಇನ್ನೇನೂ ಮಾಡಬೇಕಾಗಿಲ್ಲ. ನಾನು ಇಲ್ಲಿಯೇ ಇರುತ್ತೇನೆ. ನಿಮ್ಮ ಜೊತೆಯಲ್ಲೇ ಇರಬೇಕೆನ್ನಿಸಿದೆ. ಬೇಡ ಅನ್ನಬೇಡಿ. ನಮ್ಮ ಅಮ್ಮನನ್ನು ಇಲ್ಲೇ ಕರೆಸಿಬಿಡಿ. ನಾಳೆಯೇ ಬರೆದುಹಾಕಿಬಿಡಿ."

ರಾಮಚಂದ್ರಯ್ಯ ಆನಂದದಿಂದ, ಅಭಿಮಾನದಿಂದ ಮೂಕನಾದನು.

"ನಿನಗೆ ನಿಜವಾಗಿ ನನ್ನ ಹತ್ತಿರ ಇರಬೇಕೆನ್ನಿಸಿದೆಯೇ ಮೀನಾ?"

"ಸತ್ಯವಾಗಿ ಅದು ನನ್ನ ಬಯಕೆ. ನೀವು ಇಲ್ಲ ಎನ್ನಕೂಡದು."

ಅವನ ಹೃದಯ ಹೆಮ್ಮೆಯಿಂದ ಎದ್ದು ಕುಣಿಯಿತು. ಆ ಕ್ಷಣವೇ ಕುಳಿತುಕೊಂಡು ಶಾನುಣ್ಣನವರಿಗೆ ಕಾಗದ ಬರೆದುಹಾಕಿದನು. ಮೀನಾಕ್ಷಿಯೂ ಕಾಂಪೌಂಡರ ಮನೆಗೆ ಹೋಗಿ ಅವರ ಮಗನ ಕೈಲಿ ಗಾಬರಿಗೆ ಅವಕಾಶವಿಲ್ಲವೆಂದೂ, ಆದರೂ ಬೇಗ ಬರಬೇಕೆಂದೂ ತಾಯಿಗೆ ತಂತಿ ಕೊಡಿಸಿದಳು.

ಎರಡು ದಿವಸಗಳಲ್ಲೇ ಸುಬ್ಬಮ್ಮನವರು ಬಂದುಬಿಟ್ಟರು. ಮೀನಾಕ್ಷಿಗೆ ಧೈರ್ಯ ಬಂದಿತು. ಸುಬ್ಬಮ್ಮನವರಿಂದ ಅವಳಿಗೆ ಕಾಮಾಕ್ಷಿ ಶ್ರೀರಂಗಪಟ್ಟಣಕ್ಕೆ ಮಕ್ಕಳಿಬ್ಬರನ್ನೂ ಕರೆದುಕೊಂಡು ಬಂದಿರುವಳೆಂದೂ, ಚಂದ್ರುವೇ ಕಳುಹಿಸಿಕೊಟ್ಟಿದ್ದನೆಂದೂ ತಿಳಿಯಿತು. ಚಂದ್ರು, ಕಾಮಾಕ್ಷಿಯರ ಬಾಳನೌಕೆ ಸುಲಲಿತವಾಗಿ ನಡೆದುಹೋಗುತ್ತಿದೆಯಲ್ಲಾ ಎಂದು ಅವಳಿಗೆ ಸಮಾಧಾನವಾಯಿತು.

ಸುಬ್ಬಮ್ಮನವರು ಬಂದ ಹದಿನೈದು ದಿವಸಗಳಲ್ಲೇ ಮೀನಾಕ್ಷಿ ಹೆರಿಗೆಯ ನರಕಯಾತನೆ ಅನುಭವಿಸಿದಳು. ದುರ್ಬಲವಾದ ಶರೀರ ತುಂಬಿದ ಜೀವದ ಭಾರವನ್ನು ತಡೆಯಲಾರದೇ ಹೋಯಿತು. ಎರಡು ಮೂರು ದಿವಸಗಳು ನೋವು ತಿಂದಳು. ಆ ನರಳಾಟ ಕೇಳಿ ಎಲ್ಲರೂ ಅವಳು ಖಂಡಿತ ಸತ್ತೇಹೋಗುತ್ತಾಳೆಂದುಕೊಂಡರು. ಒಂದು ದಿನವೆಲ್ಲ ಸೂಲಗಿತ್ತಿಯನ್ನು ಮನೆಯಲ್ಲೇ ಇಟ್ಟುಕೊಂಡರು. ಅಯ್ಯಂಗಾರ್ಯರ ಮನೆಯ ಮುದುಕಿ ದ್ವೇಷ ಮರೆತು ಸುಬ್ಬಮ್ಮನವರಿಗೆ ತುಂಬ ನೆರವಾದರು. ನಾಲ್ಕನೆಯ ದಿನ ಮೀನಾಕ್ಷಿ ಗಂಡುಮಗುವನ್ನು ಹೆತ್ತಳು. ಸಧ್ಯ ವೈ ಕಳೆಯಿತಲ್ಲಾ ಎಂದು ಎಲ್ಲರಿಗೂ ಸಂತೋಷ ವಾಯಿತು. ಆಫೀಸಿಗೂ ಹೋಗದೆ ತಲೆಯಮೇಲೆ ಕೈಹೊತ್ತುಕೊಂಡು ಕುಳಿತಿದ್ದ ರಾಮಚಂದ್ರಯ್ಯ, ಮಗ ಹುಟ್ಟಿ ಮೀನಾಕ್ಷಿ ಬದುಕಿಕೊಂಡ ಳೆಂದು ಕೇಳಿ ಆನಂದಪಟ್ಟನು. ಸೂಲಗಿತ್ತಿ ಮೀನಾಕ್ಷಿಯನ್ನು ಬಗೆಬಗೆ ಯಾಗಿ ಉಪಚರಿಸಿದಳು. ಕುಗ್ಗಿಹೋಗಿದ್ದ ರಾಮಚಂದ್ರಯ್ಯ ಹಿಗ್ಗಿ ನಿಂತನು. ತಾನು ತಂದೆಯಾಗಲಾರನೆಂದು ನಿರ್ಧರಿಸಿಕೊಂಡು ಮೂಕವೇದನೆಯನ್ನು ಅನುಭವಿಸುತ್ತಿದ್ದ ಅವನ ಹೃದಯದ ಗಾಢಾಂಧಕಾರಕ್ಕೆ, ಹುಟ್ಟಿದ ಪುಟ್ಟ ಮಗು ಹಣತೆ ಹಚ್ಚಿ ಬೆಳಕು ಮಾಡಿತು. ಅವನ ಹಿಂದಿನ ವಿಷಮಯ, ಪಾಪಮಯ, ಬಾಳನ್ನೆಲ್ಲ ಅರಘಳಿಗೆ ಮರೆತು, ಮೊರದಲ್ಲಿ ದುಂಡುದುಂಡಾಗಿ, ಕೆಂಪಗೆ ಮಲಗಿದ್ದ ಮೀನಾಕ್ಷಿಯ ಮಗುವನ್ನು ನೋಡಿ ಕುಣಿದಾಡಿಬಿಟ್ಟನು. ಅವನ ಕಣ್ಣುಗಳು ತೇವಗೊಂಡವು !

ಜ್ಞಾನ ಬಂದಮೇಲೆ ಮೀನಾಕ್ಷಿ ಮಗುವನ್ನು ನೋಡಿದಳು. ಸುಬ್ಬಮ್ಮನವರು ಮಗುವನ್ನು ಅವಳ ಪಕ್ಕಕ್ಕೆ ಎತ್ತಿಕೊಟ್ಟರು. ತನ್ನ ದೇಹದ ಅಂಶದಿಂದ, ತನ್ನ ಹೊಟ್ಟೆಯಲ್ಲೇ ಬೆಳೆದು ದೊಡ್ಡದಾದ ಆ ಮಾಂಸದ ಮುದ್ದೆಯ ಸ್ಪರ್ಶದಿಂದ ಅವಳ ಮೈ ನವಿರೆದ್ದಿತು. ಮೀನಾ ಆ ಸುಖ ಸ್ಪರ್ಶಕ್ಕಾಗಿ, ತಾಯ್ತನದ ಆ ಅಂಕುರತೆಯ ನವನವೀನತೆ ಗಾಗಿ ಎಷ್ಟು ಹಂಬಲಿಸಿದ್ದಳೋ. ಇಂದು ಅವಳ ಆಸೆ ಈಡೇರಿದ್ದಿತು. ಮಗುವಿನ ಮೃದುಚರ್ಮವನ್ನು ನೇವರಿಸುತ್ತ ಮೀನಾ ಆತ್ಮಾನಂದ

ವನ್ನು ಅನುಭವಿಸಿದಳು. ಅಡಿಗಡಿಗೆ ಮೀನಾ ಮಗುವಿನ ಮೈನೇವರಿಸಿ ಬಯಸಿ ಬಯಸಿ ಬಾಡಿದ್ದ ತನ್ನ ಮನಸ್ಸನ್ನು ಪ್ರಫುಲ್ಲಗೊಳಿಸಿದ್ದ ತನ್ನ ಮುದ್ದುಮಗುವಿನ ಮುಖವನ್ನು ದಿಟ್ಟಿಸಿನೋಡಿದಳು. ಶಾಖಕೊಟ್ಟು, ಕಡೆಗೊಂದು ದಿನ ಮೊಟ್ಟೆಯೊಡೆದು ಮರಿ ಹೊರಬಂದಾಗ ಶತ್ರುಭಯ ದಿಂದ ಹಕ್ಕಿ ತನ್ನ ಮರಿಯನ್ನು ತನ್ನ ರೆಕ್ಕೆಯಡಿಯಲ್ಲಿ ಹುದುಗಿಸಿ ಕೊಳ್ಳುವಂತೆ ಮೀನಾ ತನ್ನ ಮುದ್ದುಮಗುವನ್ನು ಎದೆಗೆ ಆನಿಸಿಕೊಂಡು ಸುತ್ತಮುತ್ತ ಬೆದರಿಕೆಯ ದೃಷ್ಟಿಯನ್ನು ಹರಿಸಿದಳು. ಪಕ್ಕದಲ್ಲಿ ನಿಂತು ನೋಡುತ್ತಿದ್ದ ಸುಬ್ಬಮ್ಮನವರಿಗೆ ಅವಳ ಈ ಭಾವನೆಯ ಅರಿವಾಯಿತು. ಅವರಿಗೆ ತಮ್ಮ ತಾಯ್ತನದ ನೆನಪಾಯಿತು. ಮೀನಾಕ್ಷಿಯನ್ನು ನೋಡಿ ಮುಸಿನಕ್ಕರು.

"ಅಮ್ಮಾ, ಮಗು ಮುದ್ದಾಗಿದೆ ಅಲ್ಲವೇನಮ್ಮಾ?"

"ಮುದ್ದಾಗಿದೆ....ಮುತ್ತಿನ ಮಣಿಯಹಾಗಿದೆ. ಥೇಟ್ ಕೃಷ್ಣನ ಬೊಂಬೆ. ಕಷ್ಟಕೊಟ್ಟರೂ ಕೊಟ್ಟ, ತುಂಟ, ಒಳ್ಳೆಯ ಕೃಷ್ಣ ಹುಟ್ಟಿದ ಹಾಗೆ ಹುಟ್ಟಿಬಿಟ್ಟ."

ಎಂದು ಸುಬ್ಬಮ್ಮನವರು ಮಗುವಿಗೆ ದೃಷ್ಟಿ ನಿವಾಳಿಸಿ, ಕಿವಿಯ ಹತ್ತಿರ ನೆಟಿಕೆ ಮುರಿದರು. ಮೀನಳ ಹೃದಯ ಓಗ್ಗಿತು. ಮಗುವಿನ ಕಡೆಗೆ ಹರಿಸಿದ ದೃಷ್ಟಿಯನ್ನು ಮೀನಾ ಬಹಳ ಹೊತ್ತಿನವರೆಗೆ ಬೇರೆ ಕಡೆಗೆ ಹರಿಸಲಿಲ್ಲ. ಆ ಮುದ್ದುಮುಖದಲ್ಲಿ ತನ್ನ ಪ್ರೇಮಿಯ ಪ್ರತಿ ಬಿಂಬವನ್ನು ಕಂಡಳು. ಅವಳಿಗೆ ಕೂಡಲೇ ಅನ್ನಿಸಿತು: 'ಎಲ್ಲ ಚಂದ್ರು ವಿನ ಪ್ರತಿರೂಪ' ಎಂದು. ಅದೇ ಕಣ್ಣುಗಳು, ಅದೇ ಗುಂಗುರು ಕೂದಲು. ಅದಕ್ಕಾಗಿ ಅವಳೆಷ್ಟು ಹಂಬಲಿಸಿದ್ದಳು. ಈ ಮೂರು ತಿಂಗಳಿಂದ ಅದೆಷ್ಟು ನರಕಯಾತನೆ ಅನುಭವಿಸಿದಳು. ಮೀನಾಕ್ಷಿ 'ನನ್ನ ಮಗ....ನನ್ನ ಪುಟ್ಟ ಚಂದ್ರು' ಎಂದು ಆ ಮಗುವನ್ನು ತಬ್ಬಿ ಕೊಂಡು, ಅಪ್ಪಿ ಚುಂಬಿಸಿ ಮತ್ತೆ ತಾಯಿಯನ್ನು ಕೇಳಿದಳು.

"ಅಮ್ಮಾ, ಮಗು ಮುದ್ದಾಗಿದೆ ಅಲ್ಲವೇನಮ್ಮಾ?"

ಸುಬ್ಬಮ್ಮನವರು ಅವಳ ಕರ್ಪೂರದ ಬೊಂಬೆ ತಂದು ಆ ಮಗು ವಿನ ಪಕ್ಕದಲ್ಲಿಟ್ಟು "ನೋಡೇ ಮೀನಾಕ್ಷಿ, ಎರಡೂ ಒಂದೇ ತರಹ

ಇದೆ. ನಿನ್ನ ಮಗು ಈ ಕರ್ಪೂರದ ಬೊಂಬೆಗಿಂತ ಮುದ್ದಾಗಿದೆ. ಅದೇ ಕಣ್ಣು, ಅದೇ ಬಣ್ಣ....ಅದರಷ್ಟೇ ದುಂಡುದುಂಡಾಗಿದೆ" ಎಂದು ಮೆಚ್ಚಿಕೊಂಡರು. ಮೀನಾಕ್ಷಿ ಮುಖ ಹಿಗ್ಗಿನಿಂದ ಅರಳಿತು. ಹೌದು, ವಾಸ್ತವವಾಗಿ ಮಗು ಕರ್ಪೂರದ ಬೊಂಬೆಯ ಹಾಗೇ ಇದ್ದಿತು. ಸುಬ್ಬಮ್ಮನವರು, "ಎಂಟು ತಿಂಗಳಿಗೇ ಎಷ್ಟು ಮುದ್ದಾಗಿ ಬೆಳೆದಿದ್ದಾನೆ" ಎಂದು ತಮ್ಮ ದೃಷ್ಟಿ ತಾಗದಿರಲೆಂದು ಮತ್ತೊಮ್ಮೆ ಕೈ ನಿವಾಳಿಸಿ ನೆಟಿಕೆ ಮುರಿದು, ಮಗುವನ್ನು ಎತ್ತಿಕೊಂಡು ಮೊರದಲ್ಲಿ ಮಲಗಿಸಿದರು.

ಮೀನಾಕ್ಷಿಗೆ ಹೆಚ್ಚು ಸಂತೋಷಪಡಲು ಆಗಲಿಲ್ಲ. ಅವಳ ಶಕ್ತಿಯೆಲ್ಲ ಉಡಗಿ ಹೋಗಿದ್ದಿತು. ನಿಶ್ಶಕ್ತಿಯಿಂದ ತಲೆ ಸುತ್ತುತ್ತಿದ್ದಿತು. ಎದೆಯಲ್ಲಿ ಒಂದು ತರಹದ ನೋವು. ತಾನು ಭೂಮಿಯ ಮೇಲೆ ಇಲ್ಲವೆಂದೇ ಅನ್ನಿಸಿಬಿಟ್ಟಿತು, ಅಂತಹ ನಿರುತ್ಸಾಹ, ನಿಶ್ಶಕ್ತಿ ! ಅಡಿಗಡಿಗೆ ಗುಂಡಮ್ಮ ಭೂತವಾಗಿ ಎದುರಿಗೆ ಬಂದು ನಿಲ್ಲುತ್ತಿದ್ದಳು. ಅವಳ ಮಾತುಗಳು ಮೀನಾಕ್ಷಿಯ ಕಿವಿಯಲ್ಲಿ ಘಂಟಾಘೋಷವಾಗಿ ಮೊರೆಯುತ್ತಿದ್ದಿತು. ಆಗ ಮೀನಾಕ್ಷಿಗೆ ಅಸಾಧ್ಯ ವೇದನೆಯಾಗುತ್ತಿದ್ದಿತು. ಆದರೆ ಮಗನ ಅಳು ಕೇಳಿದಾಗ, ಅದರ ಪುಟ್ಟಬಾಯಿಗೆ ತನ್ನ ಎದೆ ಸ್ಪರ್ಶವಾದಾಗ ಅರೆಕ್ಷಣ ಅವಳ ತಾಯಿಹೃದಯ ಮಗನ ಮೃದು ಸ್ಪರ್ಶದಿಂದ ತಣಿಯುತ್ತಿದ್ದಿತು. ಕೂಡಲೇ ಚಂದ್ರು ಗಹಗಹಿಸಿ ನಕ್ಕಂತಾಗುತ್ತಿತ್ತು. ಆಗ ಹೃದಯಕ್ಕೆ ಶೂಲ ನೆಟ್ಟಂತಾಗುತ್ತಿತ್ತು. ಚಂದ್ರು 'ಹಹ್ಹಹ್ಹಾ....ಮೀನಾ ಇದು ಯಾರ ಮಗು....ಈಗ ನಾನು ಬೇಡವಾದೆ, ನನ್ನ ಸಂಪರ್ಕ ಬೇಡವಾಯಿತು ಅಲ್ಲವೇ' ಎಂದು ಕಿವಿಯಲ್ಲಿ ಭಯಂಕರವಾಗಿ ಕೂಗಿದಂತಾಗುತ್ತಿದ್ದಿತು.

ಪತ್ತು ದಿನ ಹೊಲಮನೆಯ ವಾಸ ಯಾವ ಗಂಡಾಂತರವೂ ಇಲ್ಲದೆ ಕಳೆದು ಹೋಯಿತು. ಆ ದಿನ ಮೀನಾಕ್ಷಿಗೆ ನೀರು. · ರಾಮು ಚಂದ್ರಯ್ಯ ರಜ ತೆಗೆದುಕೊಂಡಿದ್ದನು. ನಾಗವೇಣಮ್ಮನವರೂ, ಎರಡು ದಿನ ಯಾರೋ ನೆಂಟರಿಗೆ ಯಜಮಾನರನ್ನು ನೋಡಿಕೊಳ್ಳುವ ಭಾರ ಒಪ್ಪಿಸಿ ಮೊಮ್ಮಗನನ್ನು ನೋಡುವುದಕ್ಕೆ ಸಾಗರದಿಂದ ಬಂದು ಬಿಟ್ಟರು. ಮೊರದ ತುಂಬ ಕಣ್ಣು ಕುಕ್ಕುವ ಹಾಗೆ ಮಲಗಿದ್ದ ಮೊಮ್ಮಗನನ್ನು ನೋಡಿ ಅವರಿಗೆ ಹೃದಯ ತುಂಬಿತು. ಮೀನಾಕ್ಷಿ ಈಗ ಅವರ ಕಣ್ಣಿಗೆ ಗೃಹದೇವತೆಯಾಗಿ ಬಿಟ್ಟಳು.

ಶಾಮಣ್ಣನವರೂ, ಮನೆಗೆ ಬೀಗ ಹಾಕಿಕೊಂಡು ಕಾಮಾಕ್ಷಿಯನ್ನೂ ಮಕ್ಕಳನ್ನೂ ಕರೆದುಕೊಂಡು ಬಂದು ಬಿಟ್ಟರು. ಬಂದ ದಿನದಿಂದ ಹೊಲಮನೆಯೆಂದು ನೋಡದೆ ಕಾಮಾಕ್ಷಿ ಮೀನಾಕ್ಷಿಯ ಹತ್ತಿರ ಸೇರಿಬಿಟ್ಟಳು. ಕಾಮಾಕ್ಷಿ ಬಂದಿದ್ದು ಮೀನಾಕ್ಷಿಯ ಜೀವಕ್ಕೆ ಚೈತನ್ಯ ಕೊಟ್ಟಂತಾಯಿತು. ರೆಕ್ಕೆ ಉದರಿ ಹೋಗಿದ್ದ ಹಕ್ಕಿಗೆ ಮತ್ತೆ ರೆಕ್ಕೆ ಬಂದಂತಾಯಿತು. ಕಾಮಾಕ್ಷಿ ಮೈ ಕೈ ತುಂಬಿಕೊಂಡು ಆರೋಗ್ಯವಾಗಿ ಕಾಣುತ್ತಿದ್ದಳು. ಅವಳ ಮುಖದ ಮೇಲೆ ಸದಾ ಮುಗಿನಗು ಕಾಣುತ್ತಿತ್ತು. ಆ ಜೀವ ತುಂಬಿದ ಮುಖ ಮೀನಳ ದೇಹಕ್ಕೆ ಶಕ್ತಿ ತುಂಬಿತು. ಅವಳನ್ನು ನೋಡಿದ ತಕ್ಷಣ ಮೀನಾಕ್ಷಿ ಮೊದಲು ಕೇಳಿದ ಪ್ರಶ್ನೆ—

"ಅಕ್ಕಾ, ಚಂದ್ರು ನಿನ್ನನ್ನು ಕಳುಹಿಸಿದನೇ ?"

"ನಿನ್ನನ್ನು ನೋಡಬೇಕೆಂದು ಮನಸ್ಸಾಯಿತು. ಅವರಿಗೆ ಒಂದು ಕಾಗದ ಬರೆದು ಹಾಕಿ ಅಪ್ಪನ ಜೊತೆ ಬಂದು ಬಿಟ್ಟೆ."

ಮೀನಾಕ್ಷಿಗೆ ಅವಳು ಚಂದ್ರುವಿನ ಒಪ್ಪಿಗೆಯನ್ನು ಪಡೆಯದೆ ಬಂದಿದ್ದು ಸರಿಯಲ್ಲವೆನ್ನಿಸಿತು. ಕೇಳಿದ್ದರೆ ಚಂದ್ರು ಏನು ಹೇಳುತ್ತಿದ್ದನೋ ? ಅವಳ ಎರಡನೆಯ ಪ್ರಶ್ನೆ—

" ಅಕ್ಕಾ, ನೀನು ಸುಖವಾಗಿರುವೆಯಾ ?"

" ಮೀನಾ, ನನ್ನಷ್ಟು ಸುಖಿಗಳು ಈ ಪ್ರಪಂಚದಲ್ಲೇ ಇಲ್ಲ "

ಕಾಮಾಕ್ಷಿಯ ಆ ಮಾತು, ಮೀನಳ ಹೃದಯಕ್ಕೆ ಅಮೃತ ಸೇಚನಮಾಡಿತು. ಹೃದಯ ಹಗುರವಾಯಿತು. ಮೂರನೆಯ ಪ್ರಶ್ನೆ—

"ಚಂದ್ರು ಆರೋಗ್ಯವಾಗಿರುವನೇ ?"

" ಇದ್ದಾರೆ, ಆದರೆ ಕೊಂಚ ತೆಗೆದು ಹೋಗಿದ್ದಾರೆ. ಕೇಳಿದರೆ ಬಹಳ ಕೆಲಸ ಜಾಸ್ತಿ ಎಂದರು. ಏನೋ ತುಂಬ ಓಡಾಡ್ತಾ ಇರೋ ಹಾಗಿದೆ. 'ಯಾವುದಾದರೂ ಸಿನಿಮಾ ಸ್ಟುಡಿಯೋದಲ್ಲಿ ಕ್ಯಾಮರಾಮನ್ ಆಗಿ ಕೆಲಸಕ್ಕೆ ಸೇರಬೇಕು, ನನಗೆ ಈ ಊರು ಬೇಜಾರು' ಅನ್ನು ತ್ತಿದ್ದರು. ಕೊಂಚ ತೆಗೆದು ಹೋಗಿದ್ದರೂ ಆರೋಗ್ಯವಾಗಿದ್ದಾರೆ. ಏನೋ ಯೋಚನೆ ಮಾಡ್ತಾ ಇರೋಹಾಗೆ ಕಾಣತ್ತಮ್ಮ. ಏನು ಯೋಚನೆಯೋ.... ಹಾಳು ಕೆಲಸ. ಒಂದು ನಿಮಿಷ ಪುರಸೊತ್ತಿಲ್ಲ."

ಮೀನಾಕ್ಷಿಗೆ ಆ ಮಾತುಗಳು ಮಾತ್ರ ವ್ಯಥೆಯನ್ನುಂಟು ಮಾಡಿದುವು.

ಕಾಮಾಕ್ಷಿ ಹತ್ತು ದಿನದ ಹಸುಳೆಯನ್ನು ಎತ್ತಿಕೊಂಡಳು. ಗುಂಗುರು ಕೂದಲು, ದೊಡ್ಡದೊಡ್ಡ ಕಣ್ಣುಗಳು, ಕೆಂಪು ಬಣ್ಣ, ಎಲ್ಲಾ ಸುಮನೋಹರವಾಗಿದ್ದಿತು ಕಾಮಾಕ್ಷಿಯ ಒಂದು ಮಗುವೂ ಹಾಗೆಯೇ ಇದ್ದಿತು! ಅವಳಿಗೆ ತಕ್ಷಣ ನೆನಪಾಯಿತು. ಹೌದು ಮಗುವಾಗಿದ್ದಾಗ ವನಿತಾ ಹೀಗೆಯೇ ಇದ್ದಳು. ಇದೇ ಮೈ ಕಟ್ಟು, ಇದೇ ಛಾಯೆ. ಈಗಲೂ ಅಷ್ಟೆ, ವನಿತಾ ಎಲ್ಲಾ ಚಂದ್ರುವಿನ ಹಾಗೆಯೇ! ಈ ಮಗುವೂ.... ಅವಳ ಎದೆ ಒಮ್ಮೆ ಘುಳ್ ಎಂದಿತು. ಆದರೆ ಸಂಶಯ ಹೆಚ್ಚು ಹೊತ್ತು ಹೃದಯದಲ್ಲಿ ನಿಲ್ಲಲಿಲ್ಲ. ಮಾತಿನ ರೂಪದಲ್ಲಿ ಹೊರಬಂದು ಗಾಳಿಯಲ್ಲಿ ತೇಲಿಹೋಯಿತು. ಲೋಕಾಭಿ ರಾಮವಾಗಿ ಆಡಿಬಿಟ್ಟಳು.

" ಎಲ್ಲಾ ನಮ್ಮ ವನಿತಾ ಹಾಗೇ ಇದೆ, ಮೀನಾ. ನಮ್ಮ ವನಿತಾ ಮಗುವಿನಲ್ಲಿ ಹೀಗೆಯೇ ಇದ್ದಳು. ಅವಳು ಅವರ ತದ್ರೂಪು. ಅವಳೊಬ್ಬಳೇ ಅವರನ್ನು ಹೋಲುವುದು. ಅವಳು ಹೆಣ್ಣು, ಇವನು

ಗಂಡು ಅಷ್ಟೆ."

ಕಾಮಾಕ್ಷಿಗೆ ಊರಿನಲ್ಲಿ ಬಿಟ್ಟು ಬಂದ ವಸಿತಾ ನೆನಪಾಯಿತು. ಮಗುವಿಗೆ ಮಮತೆಯಿಂದ ಲೊಚಲೊಚನೆ ಮುತ್ತಿಟ್ಟಳು. ದೃಷ್ಟಿ ನಿವಾಳಿಸಿ ನೆಟಿಕೆ ಮುರಿದಳು.

ಮೀನಾಕ್ಷಿಗೆ ಎದೆಗೆ ಹೊಡೆದಂತಾಯಿತು. ಮುಖ ಅರೆಕ್ಷಣ ಕಪ್ಪಾಯಿತು. ಅವಳಿಗೆ ಯಾವುದೋ ಯೋಚನೆ. 'ಚಂದ್ರುವಿನ ಹಾಗೆಂದು ಕಾಮಾಕ್ಷಿಗೆ ನಿಜವಾಗಿ ಗೊತ್ತಾಗಿದೆ! ಗೊತ್ತಾದರೆ ಏನೀಗ?' ಎಂದಿತು ಅವಳ ಪೊಂಡು ಧೈರ್ಯ. ಕಾಮಾಕ್ಷಿ ಮಗುವನ್ನು ಮತ್ತೆ ಮೊರದಲ್ಲಿ ಮಲಗಿಸಿ, ಮಂಕಾಗಿ ಶೂನ್ಯವನ್ನೇ ದಿಟ್ಟಿಸಿ ನೋಡುತ್ತಿದ್ದ ತಂಗಿಯನ್ನು ಮಮತೆಯಿಂದ ಕೇಳಿದಳು.

"ಮೀನಾ, ನೀನು ಏಕೆ ಇಷ್ಟು ತೆಗೆದು ಹೋಗಿದ್ದೀಯ. ನಿನ್ನನ್ನು ನೋಡಿದರೆ ನನಗೆ ಅಳು ಬರುತ್ತದೆ. ಬಾಣಂತಿಯಾದರೆ ತೀರ ಇಷ್ಟು ಕಂಗೆಟ್ಟು ಹೋಗಬೇಕೇ? ಪೈಯ್ಯಚರ್ಮ ಮೂಳೆಗೆ ಅಂಟಿದೆ. ನನಗೆ ಹೇಳುತ್ತಿದ್ದವಳು ನೀನೇ ಹೀಗೆ ಆಗಿರುವೆ. ನಿನಗೇನು ಅಂಥಾ ಯೋಚನೆ?"

ಮೀನಾಕ್ಷಿ ಪಕ್ಕದಲ್ಲಿ ಮಲಗಿದ್ದ ಮಗುವನ್ನು ತೋರಿಸಿ ಹೇಳಿದಳು. "ಎಲ್ಲಾ ಇವನನ್ನು ಹೊತ್ತ ಫಲ. ನಂದೇನು? ಅವನೊಬ್ಬ ಆರೋಗ್ಯ ವಾಗಿ ಚೆನ್ನಾಗಿದ್ದರೆ ಸಾಕು" ಎಂದು ನಕ್ಕಳು. ಆದರೆ ಆ ನಗುವಿನಲ್ಲಿ ನಿರುತ್ಸಾಹ ಅಡಗಿದ್ದಿತು.

"ನೀನು ಅವರಿಗೆ ಹೇಳಿ ನನಗೆ ಉಪಚಾರ ಮಾಡಿಸಿ, ಒಳ್ಳೇ ಔಷಧಿ ಕೊಡಿಸಿ ಜೀವತುಂಬಿದೆ. ನಾನೂ ನಿನ್ನ ಯಜಮಾನರಿಗೆ ಹೇಳಿ ಹೋಗುತ್ತೇನೆ ಇರು"

ಕಾಮಾಕ್ಷಿ ಉಪಕಾರದ ನೆನಪಿನಿಂದ ಹೃದಯ ತುಂಬಿ ಬಂದು ಹೇಳಿದಳು. ಮೀನಾ ಸುಮ್ಮನೆ ನಕ್ಕಳು, ಅಷ್ಟೆ. ಅವಳ ಅಂತರಾತ್ಮ ಅಳುಕಿ ಹೇಳಿಕೊಂಡಿತು. 'ನಾನೇನು ಸುಮ್ಮನೆ ನಿನಗೆ ಸಹಾಯ ಮಾಡಲಿಲ್ಲ. ನೋಡು ಅದಕ್ಕೆ ಎಂತಹ ಅಮೂಲ್ಯವಾದ ಪ್ರತಿಫಲ ಕೊಟ್ಟಿದ್ದೀಯೆ .... ಎಂತಹ ಮುದ್ದಾದ ಮಗ.'

ಮೀನಾಕ್ಷಿಗೆ ನೀರು ಹಾಕಿದ ಶಾಸ್ತ್ರವಾಯಿತು. ಹದಿಮೂರನೆಯ ದಿನ ನಾಮಕರಣದ ಶಾಸ್ತ್ರವೂ ಅವರ ಯೋಗ್ಯತೆಗೆ ಮೀರಿ, ವೈಭವ ದಿಂದ ನಡೆಯಿತು. ಲಾಡು ಮಾಡಿಸಿ ಊರ ಸುಮಂಗಲಿಯರನ್ನೆಲ್ಲ ಕರೆದು ಅರಿಶಿನ ಕುಂಕುಮ ಕೊಟ್ಟರು. ಎಲ್ಲದಕ್ಕೂ ಕಾಮಾಕ್ಷಿಯದೇ ಓಡಾಟ. ಹತ್ತು ವರ್ಷಗಳಿಂದ ಕಡಿದು ಹೋಗಿದ್ದ ಅಕ್ಕತಂಗಿಯರ ಮಧುರ ಬಾಂಧವ್ಯ ಮತ್ತೆ ಹೊಸೆದುಕೊಂಡಿತು.

ಹೆಸರು ಇಡುವುದರಲ್ಲಿ ನಾಗವೇಣಮ್ಮನವರದೇ ಉತ್ಸಾಹ. ಅವರ ಹಟ ಮಗುವಿಗೆ "ಬಾಲಚಂದ್ರ" ಎಂದೇ ಇಡಬೇಕೆಂದು. ಅವರ ವಾದವೂ ನ್ಯಾಯವಾಗಿದ್ದಿತು.

"ಇದರ ತಾತನ ಹೆಸರೂ ಅದೇ (ಚಂದ್ರಶೇಖರಯ್ಯ). ಇದರ ಅಪ್ಪನ ಹೆಸರೂ ರಾಮಚಂದ್ರಯ್ಯ. ಅಪರೂಪಕ್ಕೆ ಹುಟ್ಟಿದ್ದಾನೆ ಮೊಮ್ಮಗ, ಬಾಲಚಂದ್ರನ ಹಾಗೆ. ಅನನು ಹುಟ್ಟಿದ್ದು ಪಾಡ್ಯ. ಈವತ್ತು ತ್ರಯೋದಶಿ. ಬಾಲಚಂದ್ರನ ಹಾಗೆಯೇ ಬೆಳೆಯಲಿ. ಏನು ಸುಬ್ಬಮ್ಮನವರೇ ನೀವು ಏನಂತೀರಿ. ಏನೋ ರಾಮು, ಕುಲಕ್ಕೆ ಒಬ್ಬ ಮೊಮ್ಮಗ ಹುಟ್ಟಿದ್ದಾನೆ. ಹಿರಿಯರ ಹೆಸರಿಟ್ಟರೆ ಅವನಿಗೂ ಒಳ್ಳೆಯದಾಗುತ್ತದೆ. ನಿನ್ನ ಹೆಸರು ರಾಮಚಂದ್ರ. ಇವನು ಬಾಲ ಚಂದ್ರ ಅಷ್ಟೆ."

ಎಲ್ಲರಿಗೂ ಮಗು ನಿಜವಾಗಿ ಬಾಲಚಂದ್ರನಂತೆಯೇ ತೋರಿತು. ಆಕೆಯ ವಾದಸರಣಿಯೂ ಹಿತವಾಗಿದ್ದಿತು. ಅದಕ್ಕೆ ಸರಿಯಾಗಿ ಆ ದಿನ ತ್ರಯೋದಶಿ. ಮಲ್ಲಿಗೆಯ ಹೂ ಚೆಲ್ಲಿದಂತೆ ಬೆಳ್ದಿಂಗಳು ಹರಡಿತ್ತು. ಸುಬ್ಬಮ್ಮನವರು,

"ಪರ್ವಾಗಿಲ್ಲ, ನಾಗವೇಣಮ್ಮನೋರು. ಮೊಮ್ಮಗನಿಗೆ ಒಳ್ಳೇ ಹೆಸರೇ ಹುಡುಕಿ ಚಿಟ್ಟರು" ಎಂದು ಹೊಗಳಿದರು. ಕಾಮಾಕ್ಷಿ, ರಾಮಚಂದ್ರಯ್ಯ, ಬಂದಿದ್ದವರು ಎಲ್ಲರೂ 'ಬಾಲಚಂದ್ರ' ನಿಗೇ ಓಟು ಕೊಟ್ಟರು.

ಮಗುವಿಗೆ ಅದೇ ನಾಮಕರಣವಾಯಿತು.

ಮೀನಾಕ್ಷಿಯನ್ನು ಕೇಳುವ ಗೋಜಿಗೆ ಯಾರೂ ಹೋಗಲಿಲ್ಲ.

ಮಗುವಿನ ಮೇಲೆ ಆ ದಿನ ಎಲ್ಲರಿಗೂ ಅಧಿಕಾರ ಬಂದಿದ್ದಿತು. ಬಾಲಚಂದ್ರ ಅವರೆಲ್ಲರ ಮಗುವಾಗಿ ಹೋಗಿದ್ದನು. ಬಂಜೆ ಎಂದು ಮೀನಾಕ್ಷಿಯನ್ನು ಹಳಿಯುತ್ತಿದ್ದವರೆಲ್ಲರೂ ಆ ದಿನ ಮೀನಾಕ್ಷಿ ಕೊಟ್ಟ ಲಾಡು ಬಾಗಿನಕ್ಕೆ ಮನಸೋತರು. ಕರ್ಪೂರದ ಬೊಂಬೆ ಹಾಗಿದ್ದ ಮಗುವಿಗೆ ದೃಷ್ಟಿತಾಗುವಹಾಗೆ ಎಲ್ಲರೂ ಮುತ್ತುಕೊಟ್ಟು ಹೋದರು.

ಮೀನಾಕ್ಷಿಯ ಹೃದಯ "ಬಾಲಚಂದ್ರ" ನೆಂಬ ಹೆಸರು ಕೇಳಿ ತಳಮಳಿಸಿತು. ಹಿಂದೆ ಅವಳಿಗೂ ಅದೇ ಹೆಸರು ಮೆಚ್ಚುಗೆಯಾಗಿದ್ದಿತು. ಗಂಡುಮಗುವಾದರೆ ಬಾಲಚಂದ್ರನೆಂದೂ ಹೆಣ್ಣು ಮಗುವಾದರೆ ಚಂದ್ರಲೇಖ ಎಂದೂ ಹೆಸರಿಡಬೇಕೆಂದು ಕನಸುಕಂಡಿದ್ದಳು. ಆದರೆ ಈ ದಿನ.... ? 'ಅಯ್ಯೋ, ಇವರಿಗೆ ಬೇರೆ ಹೆಸರೇ ಹೊಳೆಯಲಿಲ್ಲವೇ ' ಎಂದು ಬೇಸರ ಪಟ್ಟುಕೊಂಡಳು. ಮತ್ತೆ ಅದೇ ಮನಸ್ಸು ಚಂದ್ರುವಿನ ನೆನಪಿನಿಂದ ಉಲ್ಲಸಿತವಾಯಿತು. ಕಾಮಾಕ್ಷಿ ಮಗುವನ್ನು " ಬಾಲೂ, ಬಾಲೂ " ಎಂದು ಕರೆದಳು. ಮಗುವಿಗೆ ಅದೇ ಮುದ್ದು ಹೆಸರಾಯಿತು.

ನೆರೆಹೊರೆಯವರು, ಆಫೀಸರರ ಹೆಂಡತಿಯರು ಕೆಲವರು ಅಂದವಾದ ಬೆಳ್ಳಿಯ ಪಾತ್ರೆಗಳನ್ನೂ, ಉಣ್ಣೆಯ ಬಟ್ಟೆಗಳನ್ನೂ ಸಂತೋಷದಿಂದ ಓದಿಸಿದರು. ಕಾಮಾಕ್ಷಿ, ಮಗುವಿಗೆ ಬೆಳ್ಳಿಯ ಗಿಲಕಿ, ಬೆಳ್ಳಿಯ ಒಳಲೆ, ಬೆಳ್ಳಿಯ ಗಿಂಡಿ ಬಹುಮಾನ ಕೊಟ್ಟಳು. ಸುಬ್ಬಮ್ಮನವರು ಐವತ್ತು ರೂಪಾಯಿ ಓದಿಸಿಬಿಟ್ಟರು. ಶಾಮಣ್ಣನವರು ಮೊದಲೇ ಯೋಚಿಸಿಕೊಂಡಿದ್ದರೇನೋ? " ನಮ್ಮ ಬಾಲಚಂದ್ರನಿಗೆ ಆಟವಾಡಲು ಬಾಲಕೃಷ್ಣ" ಎಂದು ಒಂದು ಬಾಲಕೃಷ್ಣನ ಬೆಳ್ಳಿಯ ವಿಗ್ರಹವನ್ನು ಮಗುವಿನ ಕೈಯಲ್ಲಿ ಇಟ್ಟರು. ಅರ್ಧಅಡಿ ಎತ್ತರದ ಆ ವಿಗ್ರಹವನ್ನು ಆ ಮಗು ಹಿಡಿದುಕೊಳ್ಳಲಾರದೇ ಹೋಯಿತು. ಅಂಗೈಮುಷ್ಟಿಯನ್ನು ಬಿಗಿಯಾಗಿ ಮುಚ್ಚಿಕೊಂಡಿತು. ಎಲ್ಲರೂ ಘೊಳ್ಳೆಂದು ನಕ್ಕು, " ನೋಡಿದೆಯಾ, ತಾತಯ್ಯನಿಗೆ ಆಗಲೇ ಎಷ್ಟು ಜಂಭ. ಮಗು ಬಾಲಕೃಷ್ಣನ ಹಾಗೇ ಇರುತ್ತದೆಂದು ಊಹಿಸಿಕೊಂಡು ಅಲ್ಲಿಂದಲೇ ತಂದು ಬಿಟ್ಟಿದ್ದಾರಲ್ಲಾ ಬೆಳ್ಳಿಯ ಕೃಷ್ಣನನ್ನು" ಎಂದು ತಮಾಷೆ ಮಾಡಿದರು.

ಮತ್ತೆ ಎರಡು ದಿನ ಬಹಳ ಸಂತೋಷವಾಗಿ ಕಳೆಯಿತು.

ಕಾಮಾಕ್ಷಿ, ಶಾಮಣ್ಣನವರು ಊರಿಗೆ ಹೊರಟು ನಿಂತರು. ರಾಮಚಂದ್ರಯ್ಯ ಅವಳನ್ನು ಮತ್ತೆ ಬರುವಂತೆ ಆಹ್ವಾನಿಸಿದನು.

"ನಿಮ್ಮ ಯಜಮಾನರು ನಿಮ್ಮನ್ನು ಕ್ರಿಸ್‌ಮಸ್ ರಜಕ್ಕೆ ಕರೆದುಕೊಂಡು ಬರುತ್ತೇನೆಂದಿದ್ದರು. ನಾನೂ ಮೀನಾಕ್ಷಿ ಎಷ್ಟೋ ಆಸೆಯಿಂದ ಎದುರುನೋಡುತ್ತಿದ್ದೆವು. ಆದರೆ ಬರಲಿಲ್ಲ. ಅವರಿಗೆ ನಾನು ಈ ಮಾತು ಹೇಳಿದೆನೆಂದು ಜ್ಞಾಪಿಸಿ. ಈ ಸಾರಿ ಖಂಡಿತ ಬರಬೇಕೆಂದು ಹೇಳಿ."

ಮೀನಾಕ್ಷಿಯೂ ಸಮಯೋಚಿತವಾಗಿ ಸ್ವರ ಸೇರಿಸಿದಳು.

"ಯಾಕಕ್ಕಾ, ಯೋಚನೆ ಮಾಡುತ್ತಿ ? ಬರಬಾರದೇ ?"

"ನೀವು ಇಷ್ಟು ಪ್ರೀತಿಯಿಂದ ಕರೆದಮೇಲೆ ಬರುವುದಿಲ್ಲ ಅನ್ನುತ್ತೇನೆಯೇ. ಖಂಡಿತ ಅವರನ್ನೂ ಕರೆದುಕೊಂಡು ಬರುತ್ತೇನೆ."

ನಾಗವೇಣಮ್ಮ ತಾವೂ ಮಾತಾಡಬೇಕೆಂದು ಮಾತನಾಡಿದರು. ಎಲ್ಲದಕ್ಕಿಂತ ಮುಖ್ಯವಾಗಿ ಆಕೆ ಚಂದ್ರು ಕೈತುಂಬ ಹಣ ಸಂಪಾದಿಸುತ್ತಾನೆ ಎಂದು ಕೇಳಿದ್ದರು. ದೊಡ್ಡಮನುಷ್ಯರು ಯಾರಾದರಾಗಲಿ ಅವರ ಮನೆಗೆ ಬರಬೇಕೆಂದು ಆಕೆಗೆ ಆಸೆ. ಅವರನ್ನು ಉಪಚರಿಸಬೇಕೆಂದರಂತೂ ಬಹಳ ಇಷ್ಟ.

"ಏಕಮ್ಮಾ ಕಾಮಾಕ್ಷಮ್ಮಾ, ಎಲ್ಲ ಅಪರೂಪವಾಗಿ ಒಟ್ಟಿಗೆ ಸೇರಿದ್ದೀರಿ. ನಿಮ್ಮ ಯಜಮಾನರೂ ಬಂದು ಒಂದೆರಡು ದಿನ ತಮಾಷಿಯಾಗಿದ್ದು ಹೋಗಿದ್ದರೆ ಚೆನ್ನಾಗಿತ್ತು. ಏನೋ ರಾಮು, ಅವರಿಗೆ ಕಾಗದ ಹಾಕಲಿಲ್ಲವೇನೋ!"

"ಹಾಕದೇ ಏನಮ್ಮ. ಮೀನಾಕ್ಷಿಯೇ ಅಡ್ರೆಸ್ಸು ಬರೆದು ಕೊಟ್ಟಳು. ಏನು ಕೆಲಸವಿತ್ತೋ ಬರಲಿಲ್ಲ."

"ಏನೋಮ್ಮ ಹಾಳು ಕೆಲ್ಸ ಇದ್ದೇ ಇದೆ. ಅವನೂ ಬಂದು ಒಂದೆರಡು ದಿವಸ ಇದ್ದು ಹೋಗಿದ್ದರೆ ಚೆನ್ನಾಗಿತ್ತು. ಶ್ರೀರಂಗಪಟ್ಟಣಕ್ಕೇ ಬರುವುದಿಲ್ಲ ಅವನು. ಪುರಸತ್ತೇ ಆಗುವುದಿಲ್ಲ."

"ಎಲ್ಲೋ ಬರಲು ಸಂಕೋಚಪಟ್ಟುಕೊಂಡಿರಬೇಕು. ಮಗೂನ

ನೋಡೋಕೆ ಬರಬಹುದಾಗಿತ್ತು. ಮೀನಾಕ್ಷಿ ಏನು ಅವರಿಗೆ ಹೊಸಬಳೇ? ಜೊತೆಯಲ್ಲಿ ಬೆಳೆದವರು."

ನಾಗವೇಣಮ್ಮನವರು, 'ಅವಳೇನು ಅವರಿಗೆ ಹೊಸಬಳೇ' ಎಂದ ಮಾತು ಕೇಳಿ ಅವಳ ಎದೆ ಅಳುಕಿತು. 'ಅತ್ತೆ ಹಾಗೇಕೆ ಹೇಳಿದರು, ಆಕೆಗೂ ಗೊತ್ತಾಗಿ ಹೋಗಿದೆಯೇನು' ಎಂದು ಹೆದರಿಕೊಂಡಳು. 'ಇವರೆಲ್ಲ ಏಕೆ ಅವನು ಬರಲಿಲ್ಲವೆಂದು ಇಷ್ಟು ಒದ್ದಾಡುತ್ತಾರೆ. ಹೌದು, ನ್ಯಾಯವಾಗಿಯೇ ಇದೆ. ಎಲ್ಲರೂ ಬಂದು ಅವನೊಬ್ಬ ಬರದೇ ಹೋದರೆ........ಚಂದ್ರು ಏಕೆ ಬರಲಿಲ್ಲ. ಬಂದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಅದಕ್ಕೆ ಯಾರು ಕಾರಣ? ನಾನೇ ಅಲ್ಲವೇ? ಚಂದ್ರು ಬಂದೊಮ್ಮೆ ನನ್ನ...........ಅಲ್ಲ, ಅವನ ಮಗನನ್ನು ನೋಡಿಕೊಂಡು ಹೋದರೆ, ನನಗೊಮ್ಮೆ ಮುಖತೋರಿಸಿ ಹೋದರೆ, ಎಷ್ಟು ಆನಂದವಾಗಿರುತ್ತದೆ........ನಿನ್ನ ಮಗುವೊಂದೇ ನನ್ನ ನಿಜವಾದ ಮಗು ಎಂದು ಹೇಳಿದ್ದ. ಮಗನನ್ನು ನೋಡುವುದಕ್ಕಾದರೂ ಬರುತ್ತಾನೆಯೇ.... ಬರುವನೇ? ನಾನು ಸಾಯುವುದರಲ್ಲಿ ಒಮ್ಮೆ ಬಂದು ಮುಖ ತೋರಿಸುತ್ತಾನೆಯೇ........' ಮೀನಳ ಕಣ್ಣಲ್ಲಿ ಫಕ್ಕನೆ ನೀರೂರಿ ಹನಿಗಳಾಗಿ ಕೆಳಗುದುರಿದವು. ಕಾಮಾಕ್ಷಿ ಅದು ತನಗಾಗಿ ಎಂದುಕೊಂಡು ಸಮಾಧಾನ ಮಾಡಿದಳು.

"ಹುಚ್ಚಿ, ನಾನೇನು ಬಹಳ ದೂರ ಹೊರಟುಹೋಗ್ತೀನೇನೇ. ಇನ್ನೆರಡು ಮೂರು ತಿಂಗಳಿಗೆ ಅವರ ಜೊತೆ ಖಂಡಿತ ಬರುತ್ತೇನೆ. ಇಲ್ಲಿಗೇ ನಿಂತುಹೋಯಿತೇ ನಮ್ಮ ಸಂಬಂಧ" ಎಂದು ಮೀನಳ ಕಣ್ಣೊರೆಸಿದಳು. 'ಅವರೊಡನೆ ಖಂಡಿತ ಬರುತ್ತೇನೆ' ಎನ್ನುವ ಕಾಮಾಕ್ಷಿಯ ಭರವಸೆಯ ಮಾತು ಅವಳ ನಿರಾಶೆಯ ಹೃದಯದಲ್ಲಿ ಆಶೆಯ ಕಿಡಿ ಹಚ್ಚಿತು. ಮೀನಳ ಕಣ್ಣು ಬೆಳಕಾಯಿತು.

ಕಾಮಾಕ್ಷಿ ತಂದೆಯೊಡನೆ ಹೊರಟು ಹೋದಳು.

ಮಾರನೆಯ ದಿನ ನಾಗವೇಣಮ್ಮನವರೂ ಕಾಹಿಲೆಯ ಗಂಡನನ್ನು ಬಿಟ್ಟುಬಂದು ನಾಲ್ಕು ದಿವಸಗಳಾದ್ದರಿಂದ ಹೊರಟುಬಿಡಬೇಕಾಯಿತು.

"ಎರಡು ತಿಂಗಳು ತುಂಬಿದ ಮೇಲಾದರೂ ಹೆಂಡ್ತೀನೂ ಮಗನನ್ನೂ ಕರೆದುಕೊಂಡು ಬಾ. ಅವರೂ ಮೊಮ್ಮಗನನ್ನ ನೋಡಲಿ. ಏನೋ ಹೇಳಿದ್ನ ಅಂತ ತಾತ್ಸಾರ ಮಾಡಬೇಡ" ಎಂದು ಸೊಸೆಯ ಎದುರಿನಲ್ಲೇ ಮಗನಿಗೆ ಚುರುಕು ಮುಟ್ಟಿಸಿದರು.

"ಏನೇ, ನಾನು ಊರಿಗೆ ಹೋಗುತ್ತೀನೆ. ಅವನು ಕರ್ಕೊಂಡು ಬರ್ತೀನಿ ಅಂದಾಗ ಬರೊಲ್ಲ, ಬೇಡ ಅಂತ ಅದಕ್ಕೂ ಕಲ್ಹಾಕ ಬೇಡ. ಮಗು ನಿಂದೊಬ್ಬಳ್ದೇ ಅಲ್ಲ. ನನುಗೂ ಸೇರಿದೆ" ಎಂದು ಸೊಸೆಗೆ ಗಡಸಾಗಿ ಹೇಳಿ ಹೊರಟುಬಿಟ್ಟರು.

ಮೀನಾಕ್ಷಿ ಅತ್ತುಕೊಂಡು ಮನಸ್ಸಿನಲ್ಲೇ 'ಅತ್ತೇ .... ನಿಮ್ಮನ್ನ ಮತ್ತೆ ನೋಡುತ್ತೇನೋ ಇಲ್ಲವೋ' ಎಂದುಕೊಂಡು ಅತ್ತೆಯ ಕಾಲಿಗೆ ನಮಸ್ಕಾರ ಮಾಡಿದಳು! ರಾಮಚಂದ್ರಯ್ಯ ತಾಯಿಯನ್ನು ಸಾಗರದಲ್ಲಿ ಬಿಟ್ಟು ಒಂದು ದಿನ ಇದ್ದು ಗೇರುಸೊಪ್ಪೆಗೆ ಮರಳಿದನು.

ಮತ್ತೆ ಅವನ ಸಂಸಾರ ಸಾಗಿತು. ಆಫೀಸಿನ ಕೆಲಸ ಜನ್ಮಕ್ಕೆ ಅಂಟಿದುದಾಗಿತ್ತು. ಅವನಿಗೆ ಹೆಚ್ಚು ಕೆಲಸ ಬಿದ್ದಿತ್ತು. ಸಂಸಾರದ ಸಮಸ್ತ ಭಾರವನ್ನೂ ಸುಬ್ಬಮ್ಮನವರ ತಲೆಯ ಮೇಲೆ ಹಾಕಿ ನಿಶ್ಚಿಂತೆಯಿಂದ ಆಫೀಸಿಗೆ ಹೋಗಿ ಬರುತ್ತಿದ್ದನು.

ಸುಬ್ಬಮ್ಮನವರು ತಾವೇ ಎಲ್ಲ ಕೆಲಸವನ್ನೂ ವಹಿಸಿಕೊಂಡರು. ಮೀನಳ ಏಕಾಂತ ಅವಳ ತಲೆಯನ್ನು ಯೋಚನೆಗಳ ತೌರು ಮನೆಯನ್ನಾಗಿಸಿತು. ಹಗಲಿರುಳು ಯೋಚಿಸಿ ಯೋಚಿಸಿ ಯಾವ ಪರಿಹಾರವೂ ತೋರದೆ ಸವೆದು ಹೋದಳು. ತಪ್ಪುಮಾಡಿದ ದೇಹಕ್ಕೆ ಪಶ್ಚಾತ್ತಾಪದ ಬೆಂಕಿ ಹೊತ್ತಿಸಿ ನಿಧಾನವಾಗಿ ಸುಟ್ಟುಕೊಂಡಳು.

## ೨೩

ಮೀನಾಕ್ಷಿ ಮಗುವಿಗೆ ಒಂದು ತಿಂಗಳಾಗಿತ್ತು. ರಾಮಚಂದ್ರಯ್ಯ ಆನಂದದಿಂದ ಕಾಲಕಳೆಯುತ್ತಿದ್ದನು. ಮಗುವನ್ನು ನೋಡುವ,

ಆಡಿಸುವ ಆಶೆಯಿಂದ ಕೆಲಸಕ್ಕೂ ಸೊನ್ನೆ ಸುತ್ತಿ ಹೆಚ್ಚು ಹೊತ್ತು ಮನೆಯಲ್ಲಿರುತ್ತಿದ್ದನು. ಅವಕಾಶ ಸಿಕ್ಕಾಗಲೆಲ್ಲಾ ಆಫೀಸಿನಿಂದ ಮನೆಗೆ ಬಂದುಬಿಡುತ್ತಿದ್ದನು. ಮನೆಗೆ ಬಂದಾಗಲೆಲ್ಲಾ ರಾಮ ಚಂದ್ರಯ್ಯ ಮಗುವನ್ನು ಎತ್ತಿಕೊಂಡು

"ನೋಡು ಮೀನಾ, ನನ್ನ ಮಗ, ಇಲ್ಲ, ಇಲ್ಲ ನಿನ್ನ ಮಗ ಎಲ್ಲ ನಿನ್ನ ಹಾಗೇ. ನೋಡು, ಬುದ್ಧಿಯಲ್ಲಿ ರೂಪಿನಲ್ಲಿ ನಿನ್ನನ್ನೂ ಮೀರಿಸುತ್ತಾನೆ. ನನ್ನ ಮಗ ಇಂಗ್ಲೆಂಡಿಗೆ ಹೋಗಿ ಬರುತ್ತಾನೆ" ಎಂದು ಮಗುವನ್ನು ತಡವುತ್ತ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದನು. ಮಗುವನ್ನು ಆಡಿಸಿ ತಾನೂ ಎಳೆ ಮಗುವಿನಂತೆ ಆಡುತ್ತಿದ್ದನು. ಅದು ಮೂತಿ ಸೊಟ್ಟ ಮಾಡಿದರೂ, ಅಳುಮುಖ ಮಾಡಿದರೂ ಅವನಿಗೆ ನಕ್ಕಂತೆ. ಭಾನುವಾರವಂತೂ ಎಲ್ಲೂ ಹೊರಗೆ ಹೋಗುತ್ತಿರಲಿಲ್ಲ.

ಮೀನಾಕ್ಷಿಗೆ ಅವನನ್ನು ನೋಡಿ ಪ್ರೈಯ್ಯುರಿಯುತ್ತಿದ್ದಿತು. ಕಣ್ಣಿಗೆ ಕಾಣದೆ ದೂರ ಹೊರಟು ಹೋಗಬಾರದೇ ಎಂದು ಬಯಸುತ್ತಿದ್ದಳು. ಆದರೆ ರಾಮಚಂದ್ರಯ್ಯ ಅಡಿಗಡಿಗೆ ಮಗುವನ್ನು ನೋಡುವ ನೆವದಿಂದ ಒಳಗೆ ಹೋಗಿ ಮಗುವಿನ ಮೇಲೆ ಅತಿಯಾದ ಪ್ರೀತಿತೋರಿಸಿ ಮೀನಾ ಕ್ಷಿಯ ಮನಸ್ಸನ್ನು ಬೇಸರಪಡಿಸುತ್ತಿದ್ದನು. ಮೀನಾಕ್ಷಿ ರೋಷದಿಂದ ಕುದಿ ಯುತ್ತಿದ್ದಳು. ಆದರೆ ವಿಧಿ ಇಲ್ಲ. ಎಲ್ಲ ಸಹಿಸಿಕೊಳ್ಳಬೇಕಾಗಿದ್ದಿತು.

ಆ ದಿನ ಭಾನುವಾರ. ರಾಮಚಂದ್ರಯ್ಯ ಹಜಾರದಲ್ಲಿ ಕುರ್ಚಿಯಮೇಲೆ ಕುಳಿತಿದ್ದನು. ಪೋಸ್ಟ್‌ಮ್ಯಾನ್ ಕಾಗದ ಕೊಟ್ಟು ಹೋದನು. ತನಗೆ ತೀರ ಅಪರಿಚಿತವಾದ ಹಸ್ತಾಕ್ಷರದ ವಿಳಾಸ ಕಂಡಿತು. ಕಾಗದ ಮೀನಾಕ್ಷಿಯ ಹೆಸರಿಗಿತ್ತು. ಕವರಿನ ಒಂದು ಮೂಲೆಯಲ್ಲಿ 'ಮೀನಾ ಫೋಟೋ ಸ್ಟುಡಿಯೋ. ಸಜ್ಜನರಾವ್ ಸರ್ಕಲ್. ವಿಶ್ವೇಶ್ವರಪುರಂ, ಬೆಂಗಳೂರು. ಪ್ರೊಪ್ರೈಟರ್: ಚಂದ್ರ ಶೇಖರ್' ಎಂಬ ವಿಳಾಸವಿತ್ತು. ಮೀನಾಗೆ ಯಾರು ಬೆಂಗಳೂರಿನಿಂದ ಕಾಗದ ಬರೆಯುವವರು? ಶ್ರೀರಂಗಪಟ್ಟಣದಿಂದ ಕಾಮಾಕ್ಷಿ ಕಾಗದ ಬಂದು ಇನ್ನೂ ಎರಡು ದಿವಸಗಳಾಗಿಲ್ಲ. ಇಷ್ಟು ಬೇಗ ಬೆಂಗಳೂರಿಗೆ ಹೋಗಿ ಕಾಗದ ಬರೆದಿರುತ್ತಾಳೆಯೇ? ಬರೆದಿದ್ದರೂ ಅದು ಇಲ್ಲಿಗೆ

ಒಂದು ದಿನದಲ್ಲಿ ಬಂದು ತಲಪುತ್ತದೆಯೋ ? ಮತ್ತೆ ಇನ್ನು ಯಾರು ಬರೆಯುತ್ತಾರೆ....? ಚಂದ್ರು ! ಹೌದು, ಚಂದ್ರುವೇ ಇರಬೇಕು. ರಾಮಚಂದ್ರಯ್ಯನ ಮನಸ್ಸಿನ ಮೇಲೆ ಏನೇನೋ ಯೋಚನೆಗಳು ಧಾಳಿ ಮಾಡಿದುವು. ಅದನ್ನು ತೆಗೆದು ಓದಲೇ ? ಬೇಡ, ಬೇಡ ಎಂದಿತು ಮನಸ್ಸು. ಮೀನಾಕ್ಷಿಯ ಕಾಗದ ನೀನೇಕೆ ಓದಬೇಕು ? ನೀನು ಯಾವತ್ತಾದರೂ ಓದಿದ್ದೆಯಾ ? ಎಂದೂ ಇಲ್ಲದ್ದು ಈವತ್ತು ಏಕೆ ಓದಬೇಕು ? ಮೀನಾಕ್ಷಿ ಆ ದಿನ ಬೆಳಗಿನ ಜಾವದಲ್ಲೂ ಮಗುವನ್ನು ಅಪ್ಪಿಕೊಂಡು 'ಚಂದ್ರು, ಚಂದ್ರು' ಎಂದು ಅಪ್ಪಿ ಮುದ್ದಾಡುತ್ತಿದ್ದುದನ್ನು ಕದ್ದು ನೋಡಿದ್ದನು. ಎಲ್ಲರೂ 'ಬಾಲು, ಬಾಲು' ಎಂದು ಮುದ್ದಿಗಾಗಿ ಕರೆದರೆ, ಮೀನಾಕ್ಷಿ ಮಗುವನ್ನು 'ಚಂದ್ರು' ಎಂದು ಏಕೆ ಕರೆಯಬೇಕು ? ಚಂದ್ರುವಿಗೂ, ಮೀನಾಕ್ಷಿಗೂ ಸ್ನೇಹವಿದ್ದಿತೇ !– ಇದ್ದಿತೇ! ರಾಮಚಂದ್ರಯ್ಯನ ನೆನಪು ಮತ್ತೆ ಆ ದಿನ ಮೀನ 'ಚಂದ್ರೂ ಚಂದ್ರೂ' ಎಂದು ಕನವರಿಸಿಕೊಂಡು ಎದ್ದ ರಾತ್ರಿಗೆ ಹೊರಳಿತು. ಏನು ತೋರಿತೋ ಏನೋ. ಒಳಗೆ ಎದ್ದು ಹೋಗಿ ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ದಿಟ್ಟಿಸಿನೋಡಿ ಕೋಟು ಹಾಕಿಕೊಂಡು ಕಾಗದವನ್ನು ಜೇಬಿಗೆ ಹಾಕಿಕೊಂಡು ಹೊರಗೆ ಹೋದನು. ಎಂದೂ ಹೋಗದಿದ್ದವನು ಆ ದಿನ ಭಾನುವಾರವಾಗಿದ್ದರೂ ಆಫೀಸಿಗೆ ಹೋದನು. ಮನಸ್ಸು ಕೆಲಸದಲ್ಲೂ ಹಾಯಲಿಲ್ಲ. ಏನೇನೋ ಯೋಚನೆಗಳು. ಜೇಬಿನಲ್ಲಿದ್ದ ಕಾಗದ ಅವನ ದೇಹವನ್ನು ಚುಚ್ಚುತ್ತಿದ್ದಂತೆ ತೋರಿತು ! ತಪ್ಪು ತಪ್ಪು ಲೆಖ್ಖ ಬರೆದನು. ಹೊಡೆದು ಹಾಕಿದನು. ಮತ್ತೆ ಬರೆದನು. ಮತ್ತೆ ಹೊಡೆದುಹಾಕಿದನು. ಅವನಿಗೆ ಮೈಯೆಲ್ಲ ಚುಚ್ಚಿದಂತಾಗುತ್ತಿದ್ದಿತು. ಹೌದು ! ಆ ಕಾಗದ ಮುಳ್ಳಾಗಿ ಅವನ ಮೈ ಚುಚ್ಚುತ್ತಿದ್ದಿತು. ಅವನಿಗೆ ಹೆಚ್ಚುಹೊತ್ತು ಅಲ್ಲಿ ಕುಳಿತುಕೊಳ್ಳಲು ಆಗಲಿಲ್ಲ. ಎದ್ದು ಹೊರಗೆ ಬಂದನು. ಅವನ ಕಾಲುಗಳು ಅವನನ್ನು ಟಿ.ಬಿಯ ಬಳಿಗೆ ಎಳೆದೊಯ್ದುವು. ಅಲ್ಲಿ ಹೋಗಿ ಜಲಪಾತದ ರಾಜಗಾಂಭೀರ್ಯವನ್ನು, ಅದರ ಠೀವಿಯನ್ನು ನೋಡುತ್ತ ನಿಂತನು. ಮನಸ್ಸು ಕೇಳಿತು, 'ನೋಡಲೇ, ಕಾಗದ

ನೋಡಿಬಿಡಲೇ—ಪಾಪ ! ಚಂದ್ರು ಸ್ನೇಹಕ್ಕೆ ಬರೆದಿದ್ದರೆ ? ಇಬ್ಬರೂ ಬಾಲ್ಯದ ಗೆಳೆಯರು. ಮೀನಾಕ್ಷಿಗೆ ನಾನು ಸಂಶಯಪಡುವುದಿಲ್ಲವೆಂದು ಪ್ರಮಾಣಮಾಡಿದ್ದೇನೆ. ಆದರೆ........ಈ ಕಾಗದ ? ನನಗೇಕೋ ಎಂದೂ ಇಲ್ಲದ ಸಂಶಯ ಬರುತ್ತಿದೆ. ಹೃದಯ ಓದಲು ಹಾತೊರೆಯುತ್ತಿದೆ. ಓದಿ ನೋಡುತ್ತೇನೆ....ಏನಿದೆಯೋ. ಮೀನಾ, ಚಂದ್ರು ! ಇಬ್ಬರಿಗೂ ಎಂತಹ ಸಂಬಂಧವಿದೆಯೋ ಈ ಕಾಗದದಿಂದ ತಿಳಿದು ಹೋಗುತ್ತದೆ. ಓದಲೇ....ಓದಲೇ....ಓದು ! ಓದು ! ಓದು !'

ರಾಮಚಂದ್ರಯ್ಯ ಜೇಬಿನಿಂದ ಕಾಗದ ತೆಗೆದು ಓದುತ್ತಿದ್ದಂತೆ ಅವನ ಮುಖ ಸಿಟ್ಟಿನಿಂದ ಕೆಂಪಾಯಿತು. ಹಣೆಯಮೇಲೆ ಬೆವರಿನ ಹನಿಗಳು ಮೂಡಿದುವು. ಕೋಪದಿಂದ ಮೈ ನಡುಗಿತು. ಚಂದ್ರು ಮೀನಳಿಗೆ ಭಾನುವಾರ ತಲಪುವಂತೆ ಕಾಗದ ಬರೆದು ಅಪಘಾತ ಮಾಡಿಕೊಂಡಿದ್ದನು. ಚಂದ್ರು ಅನಿರೀಕ್ಷಿತವಾಗಿ ಅವಳ ಬಾಳಿನ ಸುಖಕ್ಕೆ ಹುಳಿ ಹಿಂಡಿದ್ದನು. ಚಂದ್ರು ಎದುರಿಗೆ ನಿಂತು ಗಹಗಹಿಸಿ ನಕ್ಕಂತಾಯಿತು. ಕಾಗದದ ಅಕ್ಷರಗಳು ಮಂಜುಮಂಜಾಗಿ ಕಂಡವು.

ನನ್ನ ಮೀನಾ,

ನಿನ್ನನ್ನು ಮರೆಯಲಾರೆ. ನಿನ್ನ ಆಜ್ಞೆಯಂತೆ ನಾನು ನಿನ್ನಿಂದ ದೂರವಾಗಿಯೇ ಇರುವೆನು. ನಿನ್ನನ್ನು ದೂರದಲ್ಲಿದ್ದು ಕೊಂಡೇ ಪ್ರೇಮಿಸುತ್ತೇನೆ. ನನ್ನ ಮನಸ್ಸನ್ನು ಎಂದೋ ನಿನಗೆ ಕೊಟ್ಟುಬಿಟ್ಟಿರುವೆನು. ಸಾಯಬೇಕೆಂದು ಮನಸ್ಸು ಬಯಸುತ್ತದೆ. ಆದರೆ ನಾನು ಆತ್ಮಹತ್ಯೆ ಮಾಡಿಕೊಳ್ಳಲು ಬಯಸುವುದಿಲ್ಲ. ಕಾರಣ ಎಂದಾದರೊಮ್ಮೆ ನಿನ್ನನ್ನು ನೋಡಬೇಕೆಂಬ ಆಸೆ ಇನ್ನೂ ಜೀವಂತವಾಗಿದೆ. ಅದೂ ಅಲ್ಲದೆ ನನ್ನ ಸಾವಿನಿಂದ ಏನನ್ನೂ ಸಾಧಿಸಲಾರೆ. ನಿನಗೆ ಕೊಟ್ಟ ಭಾಷೆಯನ್ನು ನಡೆಸಬೇಡವೇ. ಕಾಮಾಕ್ಷಿಯನ್ನೂ, ಮಕ್ಕಳನ್ನೂ ಕಷ್ಟವಾಗದಿರುವಂತೆ ನೋಡಿಕೊಳ್ಳಬೇಡವೇ. ಬದುಕಿದ್ದು ನಿನ್ನಗಲಿಕೆಯ ನೋವನ್ನು ಸಹಿಸಿಕೊಂಡು ನಿನಗೆ ಕೊಟ್ಟಿರುವ ಭಾಷೆಯನ್ನು

ಸಾಧಿಸುತ್ತೇನೆ.

ರಾತ್ರಿ ಹಗಲು ನಿನ್ನ ಯೋಚನೆ ಮಾಡುತ್ತೇನೆ. ಮಾಡದಿರಲು ಸಾಧ್ಯವೇ ಇಲ್ಲ. ನಿನ್ನ ಮಗ ಹುಟ್ಟಿರುವನಂತೆ! ಅದೇ ನನ್ನ ಮಗು! ನಿನ್ನ ಪುಟ್ಟ ಚಂದ್ರ. ಮೀನಾ ನಾನು ನಿನ್ನ ಮಗುವನ್ನು ನೋಡಲು ಬರಲೇ? ನನ್ನ ಮಗನನ್ನು ನೋಡಿಕೊಂಡು ಬಂದುಬಿಡುತ್ತೇನೆ. ಬೇಡ ಅನ್ನಬೇಡ. ಅವನಿಗೆ ರಗ್ಗು, ಶಾಲು, ಶಾಲುಚೀಲ, ಉಲ್ಲನ್ ಬಟ್ಟೆ ಎಲ್ಲ ತರಬೇಕೆನ್ನಿಸುತ್ತಿದೆ. ಆದರೆ ಜನ ಏನನ್ನುತ್ತಾರೋ. ನನಗೂ ಮಗುವಿಗೂ ಏನು ಸಂಬಂಧವೆಂದು ಕೇಳಬಹುದು. ನಾನು ಅದರ ಅಪ್ಪನೆಂದು ಅವರಿಗೆ ಹೇಗೆ ತಿಳಿಯಬೇಕು. ಮೀನಾ ಅದು ನನ್ನ ಮಗುವಲ್ಲವೇ. ನೀನು ಬಾ ಎಂದು ಬರೆಯದೆ ಬರಲು ನನಗೆ ಧೈರ್ಯ ಸಾಲದು. ಆದರೆ ನೋಡಬೇಕೆಂದು ಹೃದಯ ಮಿಡಿಯುತ್ತಿದೆ. ಕಾರಣ, ಅದೇ ನಿಜವಾದ ನನ್ನ ಮಗು. ನಾನು ಮನಸಾರ ಪ್ರೇಮಿಸಿದ ನಿನ್ನಲ್ಲಿ ಹುಟ್ಟಿದ ನನ್ನ ಮಗು.

ಮೀನಾ, ನಿನ್ನ ಕ್ಷಮೆ ಕೇಳಿ ಒಂದು ಭಾಷೆ ಮುರಿಯುತ್ತೇನೆ. ಅದೇ ಮದ್ಯ....ಅದನ್ನು ಬಿಡಲಾರೆ. ಮತ್ತೆ ಅದರ ಕೈ ಹಿಡಿದೆ ಮೀನಾ. ಇದೊಂದು ವಿಷಯದಲ್ಲಿ ನನ್ನನ್ನು ಕ್ಷಮಿಸು. ಮಾತಿಗೆ ತಪ್ಪಿದ ನೀಚ ಎನ್ನು. ಅಡಿಗಡಿಗೂ ಪಾಪ ಮಾಡುತ್ತಿರುವ ಪಾಪಾತ್ಮ ಎನ್ನು. ಅಳಬೇಡ. ನನ್ನ ಮಗನನ್ನು ನೋಡಿ ನಕ್ಕು ನಲಿ. ಅವನನ್ನು ಅಪ್ಪಿ ಚುಂಬಿಸು. ಅದು ನನಗೆ ತಲಪುತ್ತದೆ. ಅವನಲ್ಲಿ ನನ್ನನ್ನು ಕಾಣು ನನಗೆ ನೀನು ಕಂಡಂತೆ ಆಗುತ್ತದೆ. ನನ್ನ ಮನಸ್ಸನ್ನು ಜಯಿಸಲು ಅವಕಾಶ ಕೊಡು, ಮೀನಾ. ಒಂದು ದಿನ ಅಮರಪ್ರೇಮಿಯಾಗಿ ನಿನ್ನ ಬಳಿ ಬರುತ್ತೇನೆ. ಆ ಸುದಿನ ಬೇಗ ಬರಲೆಂದು ಪ್ರಾರ್ಥಿಸುತ್ತೇನೆ. ನನ್ನ ಮಗನಿಗೆ ನನ್ನ ಪ್ರೇಮದ ಮುತ್ತುಗಳು. ನಮ್ಮ ಪ್ರೇಮ ಸಂಕೇತ ವಜ್ರದುಂಗುರ ಎಚ್ಚರಿಕೆ! ಅದನ್ನಾದರೂ

ಯಾವಾಗಲೂ ನಿನ್ನ ಬಳಿ ಇಟ್ಟುಕೋ.

ಎಂದೆಂದಿಗೂ ನಿನ್ನವನೇ ಆದ
ಚಂದ್ರು

'ನನ್ನ ಮೀನಾ, ನನ್ನ ಮಗು, ನನ್ನ ಮೀನಾ, ನನ್ನ ಮಗ. ಪ್ರೇಮಸಂಕೇತ ವಜ್ರದುಂಗುರ!' ರಾಮಚಂದ್ರಯ್ಯ ಅದನ್ನೇ ಐದಾರು ಸಲ ಘಟ್ಟಿಯಾಗಿ ಅಂದುಕೊಂಡನು. ವಿಕಟವಾಗಿ ನಕ್ಕನು. ರೋಷದಿಂದ ತುಟಿಗಳು ಅದುರುತ್ತಿದ್ದುವು. ಕಾಗದವನ್ನು ಉಂಡೆ ಮಾಡಿ ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದುಕೊಂಡು ಅದುಮಿದನು. 'ಅಯ್ಯೋ, ಅದು ನನ್ನ ಮಗುವಲ್ಲ. ಬಾಲು ನನ್ನ ಮಗನಲ್ಲ' ಎಂದು ಕಣ್ಣೀರಿಟ್ಟನು. ಅವನ ದೇಹ ಅದುರುತ್ತಿತ್ತು. ಹೃದಯ ಗೋಳಾಡುತ್ತಿತ್ತು. ಇಳಿದುಹೋಗಿ ಜಲಪಾತದ ಹತ್ತಿರ ಧುಮುಕುತ್ತಿದ್ದ ಶರಾವತಿಯನ್ನು ನೋಡುತ್ತ ಒಂದು ಬಂಡೆಯಮೇಲೆ ಕುಳಿತುಬಿಟ್ಟನು. 'ಮೀನಾ, ಮೀನೂ ನನಗೇಕೆ ಮೋಸ ಮಾಡಿದೆ' ಎಂದು ರಾಮಚಂದ್ರಯ್ಯ ಕಣ್ಣೀರುಕೋಡಿ ಹರಿಸಿದನು. ಅವನ ಕಣ್ಣುಗಳಿಂದ ಪಟಪಟನೆ ಹನಿಗಳುದುರಿ ಶರಾವತಿಯೊಡನೆ ಬೆರೆಯಿತು. ಮಗನ ಭವಿಷ್ಯದಲ್ಲಿ ಜಾಗೃತವಾಗಿದ್ದ ಮನಸ್ಸು, ಬದುಕಬೇಕೆಂಬ ಆಸೆ ನೀರಿನ ಗುಳ್ಳೆಯಂತೆ ಒಡೆದುಹೋಯಿತು. ಅವನ ಹಿಂದಿನ ಬಾಳು ಚಿತ್ರಫಲಕದಲ್ಲಿ ತೆರೆತೆರೆಯಾಗಿ ಹಾದುಹೋಯಿತು. ಅಂತರಾತ್ಮ, 'ದ್ರೋಹಿ, ವಂಚಕ, ಮೀನಾಕ್ಷಿಗೆ ಏನು ಸುಖ ಕೊಟ್ಟೆ? ತನ್ನ ಸೌಂದರ್ಯದಿಂದ, ತನ್ನ ಪ್ರೇಮದ ಅಮೃತಸೇಚನದಿಂದ, ಚಂದ್ರುವಿನ ಹೃದಯದ ರಾಣಿಯಾಗಬೇಕಾಗಿದ್ದ ಮೀನಾಕ್ಷಿಯ ಬಾಳನ್ನು ಹಾಳುಮಾಡಿದ ನರರಾಕ್ಷಸ, ಕಾಮುಕ....ದ್ರೋಹಿ....ಆತ್ಮವಂಚಕ....ಷಂಡ' ಎಂದು ರೊಚ್ಚಿದ್ದು ಕೂಗಿತು.

ರಾಮಚಂದ್ರಯ್ಯ ಅದರ ರಭಸಕ್ಕೆ ತಲ್ಲಣಿಸಿದನು. ಯಾವುದೋ ಅಜ್ಞಾತ ಪಾಶವೀಶಕ್ತಿ ಅವನನ್ನು ನಿರ್ವೀರ್ಯನನ್ನಾಗಿ ಮಾಡಿತು. ಕ್ರೋಧ, ಕೋಪಗಳು ಅಲ್ಲೇ ಅಣಗಿ ಹೋಯಿತು. ನೀರಿಗೆ ಹಾರಿ

ಕೊಳ್ಳಬೇಕೆಂಬ ಅವನ ಯೋಚನೆ ಹರಿದು ಚೆಲ್ಲಿತು. ಮತ್ತೆ ಮತ್ತೆ ಚಂದ್ರು, 'ಮೀನಾಕ್ಷಿಯ ಬಾಳನ್ನು ಹಾಳು ಮಾಡಿದ ವಂಚಕ. ಹೇಡಿಯಂತೆ ಆತ್ಮಹತ್ಯೆ ಮಾಡಿಕೊಳ್ಳುವೆಯಾ' ಎಂದು ಗಹಗಹಿಸಿ ನಕ್ಕಂತಾಯಿತು. ಅವನ ಪಾಪಮಯ ಜೀವನದ ನೆನಪು ಹೊರ ಹೊಮ್ಮಿ ವಿಷದಂತೆ ಅವನ ಮೈಯನ್ನು ವ್ಯಾಪಿಸಿತು. ಆ ಆಂತರ್ಯದ ಹೊಡೆತವನ್ನು ಅವನು ತಡೆಯಲಾರದೇ ಹೋದನು. 'ಮೀನಾ ನಿರಪರಾಧಿ. ನಿನ್ನೊಡನೆ ನೀರಸಮಯ ಬಾಳ್ವೆಯನ್ನು ನಡೆಸಿ ಯಾವ ಸುಖವೂ ಇಲ್ಲದೆ ಮೀನಾ ನರಳಿನರಳಿ ಸಾಯಬೇಕಾಗಿದ್ದಿತೇ? ಮೀನಾ ಮನುಷ್ಯಳಲ್ಲವೇ? ಹೆಣ್ಣಲ್ಲವೇ? ಮನುಷ್ಯರಿಗಿರಬೇಕಾದ ಸಹಜ ಆಶೆ ಆಕಾಂಕ್ಷೆಗಳು ಮೀನಳಿಗೂ ಇರುವುದು ತಪ್ಪೆ? ವೈವಾಹಿಕ ಜೀವನದ ಸುಖ ಸಂತೋಷ ತೃಪ್ತಿಗಳನ್ನು ಬಯಸಿದ್ದು ಮೀನಳ ತಪ್ಪೇ.....ಹೇಳು, ಹೇಳು.'

'ಇಲ್ಲ, ಇಲ್ಲ ಮೀನಳ ತಪ್ಪಲ್ಲ. ಎಲ್ಲ ನನ್ನ ತಪ್ಪು. ನಾನೇ ಅಪರಾಧಿ....ಪಾಪಿ.'

ರಾಮಚಂದ್ರಯ್ಯ ಹುಚ್ಚನಂತಾಗಿಬಿಟ್ಟನು. ರಾತ್ರಿ ಹತ್ತು ಘಂಟೆಯವರೆಗೆ ದೆಯ್ಯ ಬಡಿದವನಂತೆ ಅಲ್ಲಿಯೇ ಕುಳಿತಿದ್ದನು. ಯೋಚನೆ ಮಾಡಿದಂತೆ ತಪ್ಪೆಲ್ಲ ತನ್ನದೇ ಎನ್ನಿಸಿತು. ಪಶ್ಚಾತ್ತಾಪದಿಂದ ಅವನ ಹೃದಯ ತಲ್ಲಣಿಸಿತು. ಯಾರೋ ಕೆಲಸಗಾರ,

"ಯಾರು ಸ್ವಾಮಿ ಅದು ಅಲ್ಲಿ, ಇಷ್ಟು ಒತ್ನಾಗೆ. ಮನೆಗೆ ಹೋಗಿ. ಇಷ್ಟು ಒತ್ನಲ್ಲಿ ಅಲ್ಲೇನು ಮಾಡೀರಿ" ಎಂದು ಕೂಗಿ ಕೊಂಡನು. ಅದು ಅವನಿಗೆ ಕೇಳಲಿಲ್ಲ. ಕೂಗಿದವನು ಹತ್ತಿರ ಬಂದು ಲಾಟೀನಿನ ಬೆಳಕನ್ನು ಮುಖಕ್ಕೆ ಬಿಟ್ಟು ನೋಡಿದನು. ಅವನಿಗೆ ಆಶ್ಚರ್ಯವಾಯಿತು.

"ಬುದ್ದೀ, ತಾವೇ ಏನು. ಯಾರೋ ಅಂದ್ಕೊಂಡಿದ್ದೆ. ಉಣ್ಮೆ ರಾತ್ರಿ. ಹತ್ತು ಗಂಟೆ ಆಯ್ತು. ಇಷ್ಟೊತ್ನಲ್ಲಿ ಇಲ್ಲೇನು ಮಾಡೀರಿ. ಇಷ್ಟೊತ್ನಾಗೆ ಇಲ್ಲೆಲ್ಲಾ ಬರಬಾರ್ದು ಬುದ್ದಿ, ಸಂಸಾರಸ್ತ್ರು. ಉಡ್ಗಾಟಾನ, ಎದ್ದು ಮನ್ಗೋಗಿ ನನ್ನೊಡ್ಯ."

ತನ ಯೋಚನೆಗೆ ಅಡ್ಡ ಬಂದನೆಂದು ರಾಮಚಂದ್ರಯ್ಯ ಅವನನ್ನು ಮನಸ್ಸಿನಲ್ಲೇ ಶಪಿಸಿದನು.

"ಏನಿಲ್ಲ ಕಾಣೋ ನಿಂಗ. ತಿಂಗಳ ಬೆಳಕಿನಲ್ಲಿ ಜಲಪಾತ ಹೇಗಿರುವುದೋ ನೋಡುತ್ತ ಕುಳಿತಿದ್ದೆ" ಎಂದು ಹೇಳಿ ಮೆಟ್ಟಿಲು ಏರಿ, ಟಿ.ಬಿಯನ್ನು ಹಾದು ಕಾಲು ಎಳೆಯುತ್ತ ಮನೆಯ ದಾರಿ ಹಿಡಿದನು. ಅವನು ಮೇಲೆ ಏರುತ್ತಿದ್ದಂತೆ, ಶರಾವತಿಯ ನೀರಿನಂತೆ ಅವನ ಮನಸ್ಸು ಕೆಳಕ್ಕೆ ಎಳೆಯುತ್ತಿದ್ದಿತು. ಆ ನೀರಿನಂತೆಯೇ ಅದೂ ಆ ಪ್ರಪಾತದೊಳಕ್ಕೆ ಬೀಳಲು ಬಯಸುತ್ತಿದ್ದಿತು.

ಆ ಭಯಂಕರ ಯೋಚನೆಯೊಡನೆಯೇ ರಾಮಚಂದ್ರಯ್ಯ ಮನೆಯ ಹಾದಿ ಹಿಡಿದಿದ್ದನು. ಆಗಾಗ ಕಣ್ಣು ಮುಚ್ಚಿ ಉಸಿರು ಎಳೆದುಕೊಂಡು ದುಃಖವನ್ನು ಬಿಗಿ ಹಿಡಿಯುತ್ತಿದ್ದನು.

ಮನೆಯ ಗೇಟನ್ನು ತೆರೆದುಕೊಂಡು ಒಳಗೆ ಕಾಲಿಡುತ್ತಿದ್ದಂತೆ ಮಗು ಕಿರುಚಿಕೊಳ್ಳುತ್ತಿದ್ದಿತು. ಹಜಾರದಲ್ಲೇ ತೂಕಡಿಸುತ್ತ ಕುಳಿತಿದ್ದ ಸುಬ್ಬಮ್ಮನವರು, ಅವನು ಒಂದು ಸಾರಿ ಅತ್ತೇ....ಎಂದು ಬಾಗಿಲು ತಟ್ಟಿದೊಡನೆ ಎದ್ದು ಬಂದು ಬಾಗಿಲು ತೆಗೆದರು. ಅವನು ಒಳಗೆ ಹೋದ ಕೂಡಲೇ ಬಾಗಿಲು ಹಾಕಿಕೊಂಡು ಹಿತ್ತಲ ಕಡೆ ಹೋದರು. ಮಗು ಇನ್ನೂ ಅಳುತ್ತಿದ್ದಿತು. ಆ ಅಳು ಅವನ ರೋಮರೋಮದಲ್ಲೂ ಕಿಚ್ಚೆಬ್ಬಿಸಿತು. ಕತ್ತು ಹಿಚುಕಿ ಆ ಶಬ್ದವನ್ನು ಅಲ್ಲಿಯೇ ಅಡಗಿಸ ಬೇಕೆಂದು ಆವೇಶ ಬಂದಿತು. ಮೈ ಕುದಿಯಿತು. ಮೀನಾಕ್ಷಿಯ ರೂಮಿನೊಳಕ್ಕೆ ರಭಸದಿಂದ ನುಗ್ಗಿದನು. ಬಾಗಿಲು ಧಡಾರನೆ ತೆರೆದು ಕೊಂಡಿತು. ಎದುರಿಗೆ ಮೀನಾಕ್ಷಿ ಮಗುವನ್ನು ತೊಡೆಯ ಮೇಲೆ ಹಾಕಿಕೊಂಡು ಹಾಲು ಕುಡಿಸಲು ಹವಣಿಸುತ್ತಿದ್ದಳು. ಬಾಗಿಲು ತೆಗೆದುಕೊಂಡ ಶಬ್ದಕ್ಕೆ, ಬೆದರಿ ಬೆಚ್ಚಿ ಕತ್ತೆತ್ತಿ ನೋಡಿದಳು. ಅವನ ಕೆಂಡ ಕಾರುತ್ತಿದ್ದ ಕಣ್ಣುಗಳನ್ನು ನೋಡಿ ಅವಳಿಗೆ ಹೆದರಿಕೆಯಾಯಿತು. ರಾಮಚಂದ್ರಯ್ಯನ ಆವೇಶಪೂರಿತವಾದ ದೃಷ್ಟಿಯ ಘೋರತೆಯನ್ನು ನೋಡಿ ಅವಳ ಮೈ ನಡುಗಿತು. ಎಂತಹ ಕ್ರೂರ ನೋಟ ! ನನ್ನ ಮಗುವನ್ನು ಕೊಲೆ ಮಾಡಲು ಬಂದಿರುವನೇ ? 'ಹೌದು, ಹೌದು,

ಎಚ್ಚರಿಕೆ !.... ಮೀನಾ, ಹುಷಾರ್ !' ಎಂದು ಯಾರೋ ಕೂಗಿದಂತಾಯಿತು. ಮೀನಾ ಮಗುವನ್ನು ಎದೆಗವುಚಿಕೊಂಡಳು. ಭಯದಿಂದ ಮಂಚದ ಮೂಲೆಯಲ್ಲಿ ಗೋಡೆಯ ಮಗ್ಗುಲಿಗೆ ಅಡಗಿ ಕುಳಿತಳು. ಬಿಚ್ಚಿದ ಕೂದಲು ಮುಖದ ಮೇಲೆ ಹರಿಯಿತು. ಕೂದಲ ಹಿಂದೆ ಮಿಂಚಿದ, ಆ ದಯಾಪೂರಿತ, ಭಯಗರ್ಭಿತವಾದ, ಕಣ್ದೃಷ್ಟಿಯನ್ನು ಅವನು ಎದುರಿಸಲಾರದೇ ಹೋದನು. ಅವಳ ಬಿಳಚಿಕೊಂಡ ಮುಖವನ್ನು ನೋಡಲಾರದೇ ಹೋದನು. ಮುಖ ತಗ್ಗಿಸಿ, ತಲೆ ಕೊಡವಿ, ಹಾಗೆಯೇ ಹಿಂದಕ್ಕೆ ಸರಿದು ತನ್ನ ಕೊಠಡಿಗೆ ಹೊರಟು ಹೋದನು.

ಅವನ ಸಂಸಾರ ಎರಡೇ ದಿವಸಗಳಲ್ಲಿ ನೀರಸಮಯವಾಗಿ ಹೋಯಿತು ಕ್ರೋಧ, ದ್ವೇಷ ಭಯ, ಶಂಕೆಗಳೆಂಬ ಪಿಶಾಚಿಗಳು ಮನೆಯಲ್ಲಿ ಘೋರವಾಗಿ ನರ್ತಿಸಿದುವು.

ರಾಮಚಂದ್ರಯ್ಯ ಮಾರನೆಯ ದಿನದಿಂದ ಕೆಲಸಕ್ಕೆ ಹೋಗಲಿಲ್ಲ. ಹುಚ್ಚನಂತೆ ಬೆಟ್ಟಗುಡ್ಡಗಳಲ್ಲಿ ತಿರುಗಾಡಿದನು. ಸುಬ್ಬಮ್ಮನವರ ಬಲವಂತಕ್ಕೆ ಒಂದು ತುತ್ತು ತಿಂದು ಹೊರಟು ಹೋಗುತ್ತಿದ್ದನು. ಮನೆಯಲ್ಲಿದ್ದರೆ ಮಗುವಿನ ಅಳು ಕೇಳಬೇಕಾಗಿದ್ದಿತು. ಕೊಠಡಿಯ ಕಡೆ ಸುಳಿದರೆ ಮಗುವನ್ನು ನೋಡಲೇಬೇಕಾಗಿದ್ದಿತು. ಆಗ ಅವನಿಗಾಗುತ್ತಿದ್ದ ಯಾತನೆ ಮಗುವನ್ನು ಸಾಯಿಸಬೇಕೆಂದು ಮನಸ್ಸನ್ನು ಹುಚ್ಚೆಬ್ಬಿಸಿ ಕುಣಿಸುತ್ತಿದ್ದಿತು. ಆ ಘೋರ ಕೊಲೆಯನ್ನು ತಪ್ಪಿಸಲು ಹೊರಗೋಡಿ ಬರುತ್ತಿದ್ದನು. ಜೀವರಾಶಿಗಳ ಅಗಾಧವಾದ ನಿತ್ಯ ಸೌಂದರ್ಯದಲ್ಲಿ ಅವನ ಸೇಡಿನ ಮನೋಭಾವ ತಣ್ಣಗಾಗುತ್ತಿದ್ದಿತು.

ಅವನು ದೂರ, ಬಹಳ ದೂರ ದಿಗಂತದವರೆಗೆ ಮೂಲೆಮೂಲೆಯಾಗಿ ಹಬ್ಬಿದ ಪರ್ವತಸಾಲನ್ನು ದಿಟ್ಟಿಸಿ ನೋಡುತ್ತ ಬಂಡೆಯೊಂದರ ಮೇಲೆ, ಯಾರ ಕಣ್ಣಿಗೂ ಕಾಣದ ಸ್ಥಳದಲ್ಲಿ ಕುಳಿತುಕೊಳ್ಳುತ್ತಿದ್ದನು. ಎಲ್ಲೆಲ್ಲೂ ಹಚ್ಚ ಹಸಿರು ಹರಿಯುವ ಶರಾವತಿಯ ಕಲಕಲ ನಿನಾದ. ಭೋರೆಂದು ಬೀಳುವ ಅವಳ ರೌದ್ರಾವತಾರದ ಪ್ರತಿಧ್ವನಿ ನೀರು ಹಕ್ಕಿಗಳ ಬೇಟೆಯಾಟ. ಕಾಡು ಮೃಗಗಳ ಕರ್ಕಶ ಧ್ವನಿ.

ಯೊಡನೆ ಬೆರೆತ ಹಕ್ಕಿಗಳ ಸವಿಯಿಂಚರ. ಅನಂತ ಜೀವರಾಶಿಗಳ ಸುಮನೋಹರ, ಸುಮಧುರ ಸಮ್ಮಿಳನ. ಸುಯ್ಯನೆ ತೀಡುವ ಸುಳಿ ಗಾಳಿ. ಭೋರೆಂದು ಬೀಸುವ ಬಿರುಗಾಳಿ. ಅಚ್ಚ ನೀಲಿಯ ಸ್ವಚ್ಛ ವಾದ ತಿಳಿಬಾನು. ಇವುಗಳ ಮಧ್ಯೆ ಮನಸ್ಸು ಶಾಂತವಾಗುತ್ತಿದ್ದಿತು. ಹೃದಯ ಸಮಾಧಾನ ತಾಳುತ್ತಿದ್ದಿತು. ವೇದಾಂತ ಕಿವಿಯಲ್ಲಿ ಮೊರೆ ಯುತ್ತಿದ್ದಿತು. ಸುವಿಚಾರ ತಲೆ ಹೊಕ್ಕು ಕಂಚಿನ ಧ್ವನಿಯಂತೆ ಹೇಳುತ್ತಿದ್ದಿತು, 'ನೀನು ಮಾಡಿದ ಮೋಸಕ್ಕೆ ಮೀನಾಕ್ಷಿ ನಿನಗೆ ಮೋಸ ಮಾಡಿದಳು ಸೇಡಿಗೆ ಸೇಡು, ಶಿಕ್ಷೆಗೆ ಶಿಕ್ಷೆ' ಎಂದು ಸುತ್ತ ಲಿನ ಜೀವರಾಶಿಗಳು ಕೂಗಿಕೊಳ್ಳುತ್ತಿದ್ದುವು. ಅವನ ತಪ್ಪಿಗೆ ಪ್ರಾಯಶ್ಚಿತ್ತವಾಯಿತೆಂದು ಏಕಕಂಠದಿಂದ ಸಾರುತ್ತಿದ್ದುವು.

ರಾಮಚಂದ್ರಯ್ಯನಿಗೆ ಅವುಗಳ ಮಾತಿನ ಸತ್ಯದ ಅರಿವಾಗಿದ್ದಿತು. ಹೌದು, ತಾನು ಮಾಡಿದ ಪಾಪಕ್ಕೆ ಮೀನಾಕ್ಷಿ ಪ್ರಾಯಶ್ಚಿತ್ತ ಮಾಡಿ ದ್ದಳು. ಸತ್ಯವನ್ನು ಕಂಡ ಅವನ ಹೃದಯ ಆನಂದದ ಗುಂಗಿನಲ್ಲಿ ಎಲ್ಲವನ್ನೂ ಮರೆಯುತ್ತಿದ್ದಿತು. ದುಃಖವನ್ನು ಮರೆತು ಆ ಪ್ರಕೃತಿಯ ಮಡಿಲಲ್ಲಿ ಸುಖವನ್ನು ಸವಿಯುತ್ತಿದ್ದನು. ಆ ಚೇತನಮಯ, ಶಾಂತ ಮಯ, ಸುಂದರಮಯ ಪ್ರಕೃತಿಯ ದರ್ಶನದಿಂದ ರಾಮಚಂದ್ರಯ್ಯನ ಹೃದಯದಲ್ಲಿ ಪ್ರೇಮ ಸೌಹಾರ್ದಗಳ ಉದ್ಭವವಾಗುತ್ತಿದ್ದಿತು. ಸೇಡಿನ ಸಮಾಧಿಯಾಗುತ್ತಿದ್ದಿತು.

ಅವನ ಸ್ವಭಾವ ತಿಳಿಯದ ಸುಬ್ಬಮ್ಮನವರು ಅವನನ್ನು ಹೆಚ್ಚಾಗಿ ಮಾತನಾಡಿಸುತ್ತಲೇ ಇರಲಿಲ್ಲ. ಮೀನಾಕ್ಷಿ ಸೊರಗಿ ಸೊರಗಿ ಸಾಯು ತ್ತಿರುವುದೇ ಅವರಿಗೊಂದು ದೊಡ್ಡ ಚಿಂತೆಯಾಗಿದ್ದಿತು. ಆ ಮನೆ ಯಲ್ಲಿ ಗಂಡನೊಂದು ತರಹ, ಹೆಂಡತಿಯೊಂದು ತರಹ. ಎಲ್ಲ ವಿಚಿತ್ರ. ಆಕೆಯ ಬುದ್ಧಿಗೆ ಏನೂ ಹೊಳೆಯಲಿಲ್ಲ. 'ನಾನು ಏಕಾದರೂ ಬಂದೆನೋ' ಎಂದುಕೊಳ್ಳುತ್ತಿದ್ದರು, ಒಮ್ಮೊಮ್ಮೆ. ಆ ಹುಚ್ಚ ರೊಡನೆ ಹುಚ್ಚರಾಗಿ ಬೆರೆಯಲು ಪ್ರಯತ್ನಿಸಿ ವಿಫಲರಾಗುತ್ತಿದ್ದರು. ಆಕೆ ಒಮ್ಮೊಮ್ಮೆ ದುಃಖದ ಆವೇಗದಲ್ಲಿ ಅತ್ತು ಅಂಗಲಾಚುತ್ತಿದ್ದರು.

"ಏನೇ ಮೀನಾಕ್ಷಿ, ನಿನಗೇನು ಆಗಿಹೋಯಿತೇ? ತಿಂದ

ಅನ್ನ ವ್ಮೈಗೆ ಹತ್ತುವುದಿಲ್ಲ. ನಾನೇನು ಕಡಿಮೆ ಮಾಡಿದ್ದೀನಮ್ಮಾ ? ಏನೋ ಯೋಚನೆ ಮಾಡುತ್ತಿರುತ್ತೀ. ಅಂತಹುದೇನು ಆಗಿರುವುದು ನಿನಗೆ? ನಾಳೆ ನಿನ್ನ ಅತ್ತೆ ಸರಿಯಾಗಿ ನೋಡಿಕೊಳ್ಳಲಿಲ್ಲವೆಂದು ನನ್ನನ್ನು ಉಗಿಯುವುದಿಲ್ಲವೇ. ಆಕೆಗೆ ನಮ್ಮನ್ನು ಹಂಗಿಸುವುದಕ್ಕೆ ನಾವೇ ದಾರಿ ಮಾಡಿಕೊಟ್ಟಂತೆ ಆಗುವುದಿಲ್ಲವೇ? ಡಾಕ್ಟರಿಗಾದರೂ ತೋರಿಸಿ ಔಷಧ ತೆಗೆದುಕೋ ಬೇಡವೇ ? ಅವನಿಗಂತೂ ಅದರ ಯೋಚನೆಯೇ ಇಲ್ಲ."

ಮೀನಾಕ್ಷಿ ತನ್ನ ಅಗಾಧವಾದ ವ್ಯಥೆಯನ್ನು ಹಾಸ್ಯದಲ್ಲಿ ಲಘು ವಾಗಿ ತೇಲಿಸಿಬಿಟ್ಟಳು.

"ನಿನಗೆ ಅಷ್ಟೂ ಗೊತ್ತಾಗುವುದಿಲ್ಲವೇನಮ್ಮಾ ? ನನ್ನ ಶಕ್ತಿಯನ್ನೆಲ್ಲಾ ಈ ನನ್ನ ಚಂದ್ರು ಹೀರಿಬಿಟ್ಟಿದ್ದಾನಮ್ಮಾ. ಇನ್ನು ಇವನೇ ನನಗೆ ಶಕ್ತಿ, ಉತ್ಸಾಹ, ಸಂತೋಷ. ಎಲ್ಲಾ ಇವನೇ"

ಮೀನಾಕ್ಷಿ ಚಂದ್ರು ಎನ್ನುವ ಪದವನ್ನು ಒತ್ತಿಹೇಳಿದಳು. ಕಾರಣ ಆ ಮುದ್ದುಮಗನ ಮುಖವಲ್ಲಿ ಪ್ರೇಮಿಯ ಮುಖ ಕಂಡಿತು. ಮೀನಾಕ್ಷಿ ಚಂದ್ರುವನ್ನು ಅಪ್ಪಿಕೊಂಡು ಮುದ್ದಿನ ಮಳೆಗರೆದಳು. ಸುಬ್ಬಮ್ಮ ನವರು ಹೊರಗೆ ಹೋದಮೇಲೆ ಕಣ್ಣೀರು ಕರೆದಳು. 'ನೋಡು ಚಂದ್ರು, ನಿನ್ನ ಅಪ್ಪ ಬರಲಿಲ್ಲ ನೋಡು........ಏಕೆ ಬರಲಿಲ್ಲ ಚಿನ್ನ. ನಿನಗೆ ಗೊತ್ತು........ಕಳ್ಳ ನಗುತ್ತೀಯೆ........ನಿನಗೆ ಗೊತ್ತು. ಹೋ, ಮುಖ ಸಿಂಡರಿಸುತ್ತೀಯಾ. ನಿನಗೂ ನನ್ನಮೇಲೆ ಕೋಪ ಬಂದಿತೆ? ನಾನು ನಿಮ್ಮಪ್ಪನನ್ನು ದೂರ ಕಳುಹಿಸಿದೆ ಎಂದು ಕೋಪ ಬಂತೆ........ಬೇಡ ಕಂದ....ನನ್ನ ಚಿನ್ನಾ. ಬೇಡ, ನನ್ನಮೇಲೆ ಕೋಪಮಾಡಿಕೊಳ್ಳಬೇಡ. ನನಗಿರುವುದು ನೀನೊಬ್ಬನೇ........ಏಕೆ ಬರಲಿಲ್ಲ? ಚಂದ್ರು ಏಕೆ ಬರ ಲಿಲ್ಲ........ಒಂದು ಕಾಗದವನ್ನೂ ಬರೆದಿಲ್ಲ........ಒಂದು ಕಾಗದವನ್ನಾ ದರೂ ಬರೆದರೆ........ಛೀ ತುಂಟ, ನಗುವೆಯಾ? ಕಾಗದ ಬರುತ್ತದೆಂದು ನಗುವೆಯಾ....ನನ್ನ ಚಿನ್ನ, ನನ್ನ ಬಂಗಾರ' ಎಂದು ಮೀನಾ ಚಂದ್ರು ವನ್ನು ಎದೆಗವುಚಿಕೊಂಡು, ಅವನ ಕಣ್ಣು, ಕಿವಿ, ಮೂಗು, ಬಾಯಿಗಳ ಮೇಲೆ ಲೊಚಲೊಚನೆ ಮುತ್ತಿಟ್ಟಳು.

ಅವಳಿಗೆ ಸರ್ರನೇ ರಾಮಚಂದ್ರಯ್ಯನ ನೆನಪಾಯಿತು. ಮೈ ಹೆದ ರಿಕೆಯಿಂದ ನಡುಗಿತು. 'ಆ ದಿನ ಅವರೇಕೆ ಆ ರೀತಿ ನನ್ನ ರೂಮಿಗೆ ಬಂದಿದ್ದರು ? ನನ್ನನ್ನೂ ಮಗುವನ್ನೂ ದುರುಗುಟ್ಟಿಕೊಂಡು ಕಡಿದು ಹಾಕಿಬಿಡುವರಂತೆ ನೋಡಿದರು ? ಆ ದೃಷ್ಟಿ ಎಷ್ಟು ಭಯಂಕರವಾಗಿ ದ್ದಿತು. ಅಬ್ಬ! ಈಗಲೂ ಹೆದರಿಕೆಯಾಗುತ್ತದೆ. ಅದೇ ಕಡೆಯಾಯಿತು. ನನ್ನ ರೂಮಿಗೇ ಬರುವುದಿಲ್ಲ. ಮಗುವನ್ನು ಒಂದು ಸಲವೂ ನೋಡಿಲ್ಲ. ಅವರು ಏಕೆ ಬಂದಿದ್ದರು .......? ಕೊಲೆ .... ನನ್ನ ಮಗುವಿನ ಕೊಲೆ ಮಾಡಲು ಬಂದಿದ್ದರೇ........ಅಬ್ಬ !.ದೇವರೇ........ಇಲ್ಲ, ಇಲ್ಲ ಅವರು ಕೊಲೆಮಾಡಲಾರರು. ಅವರು ಏನನ್ನೂ ಮಾಡಲಾರರು. ಅವರ ಹೃದಯ ಹೇಡಿಗಳ ಹೃದಯ....ಅಲ್ಲಿ ಬೆಂಕಿಯಿದೆ, ಆದರೆ ಕಾವಿಲ್ಲ.... ಅವರು ಕಾವಿಲ್ಲದ ಕೆಂಡ, ವಿಷವಿಲ್ಲದ ಹಾವು, ಪುರುಷತ್ವವಿಲ್ಲದ ಗಂಡಸು........ '.

ಮೀನಾ ತಿರಸ್ಕಾರದಿಂದ ನಕ್ಕಳು. ವಿಷದ ಹಲ್ಲು ಕಿತ್ತ ಹಾವು ವಿಷದ ಮೊಟ್ಟೆ ಹಾಕುವುದೆಂದೂ, ಅದರಿಂದ ವಿಷಸರ್ಪಗಳೇ ಹುಟ್ಟುವು ದೆಂದೂ ಅವಳಿಗೆ ನೆನಪಾಯಿತು. ಅಂದರೆ.....ಹೇಡಿನ ಕಿಚ್ಚಿನಲ್ಲಿ ಹೆಡೆ ತುಳಿಸಿಕೊಂಡ ಹಾವಿನಂತೆ, ಷಂಡನೂ ಗಂಡಸಾಗಬಹುದೆಂದು, ಹೇಡಿಯೂ ಕೊಲೆಪಾತಕನಾಗಬಹುದೆಂದು ಅವಳ ಹೃದಯ ಎಚ್ಚರಿಕೆ ಹೇಳಿತು. ಮೀನಾಕ್ಷಿ ನಡುಗಿದಳು. ಆ ಯೋಚನೆಯಿಂದ ಅವಳ ಮನಸ್ಸಿನ ಮೇಲೆ ಮತ್ತೆ ಭಯ, ಸಂಶಯಗಳ ಕಾರ್ಗತ್ತಲೆ ಮುಸುಕಿ ಕೊಂಡಿತು. ಹಗಲಿರುಳು ಮೀನಾ ಮಗುವನ್ನು ಗಂಡನ ಆ ರಕ್ತಸಿಂಚಿತ ಹಸ್ತದಿಂದ ದೂರವಾಗಿಡಲು, ಕಾಪಾಡಲು ನಿರ್ಧರಿಸಿದಳು. ರಾಮ ಚಂದ್ರಯ್ಯನಿಗೆ ತನ್ನ ಮತ್ತು ಚಂದ್ರುವಿನ ಸಂಬಂಧ ತಿಳಿದುಹೋಗಿದೆ ಯೆಂದು ಅವಳಿಗೆ ಖಚಿತವಾಯಿತು. ಯಾರು ಹೇಳಿರಬೇಕು ?........ ಗುಂಡಮ್ಮ............ಕಡೆಗೂ ಗುಂಡಮ್ಮ ತನಗೆ ಮೋಸ ಮಾಡಿದಳು. ರಾಕ್ಷಸಿ....ಪಿಶಾಚಿ....ಕೊಲೆಗಾತಿ ಗುಂಡಮ್ಮ ಗುಂಡಮ್ಮನ ನೆನಪಿ ನಿಂದ ಮೀನಾ ತಲ್ಲಣಿಸುತ್ತಿದ್ದಳು. ಅವಳ ಅವಹೇಳನ, ಭರ್ತ್ಸನೆ ಅವಳ ಕಿವಿಯಲ್ಲಿ ನಗಾರಿಯಂತೆ ಶಬ್ದಮಾಡಿ ತಲೆಕೆಡಿಸುತ್ತಿದ್ದಿತು. ಆ

ಭಯಂಕರ ದಿನಗಳ ನೆನಪು ಅವಳನ್ನು ಹಗಲಿರುಳು ಕಾಡಿತು.

ಹೀಗೆಯೇ ಶೋಕಭರಿತವಾದ ಎರಡು ತಿಂಗಳು ಕಳೆಯಿತು. ಮೀನಾಕ್ಷಿ ಚೇತರಿಸಿಕೊಳ್ಳಲಿಲ್ಲ. ಚಿಂತೆ ಅವಳ ದೇಹವನ್ನು ದಹಿಸುತ್ತಿದ್ದಿತು. ಅವಳ ಸತ್ವವನ್ನೆಲ್ಲ ಹೀರಿದ್ದಿತು. ಅವಳ ದೇಹ ಒಣಗಿ ಕಡ್ಡಿಯಂತಾಗಿತ್ತು. ಆದರೂ ಹೃದಯಾಂತರಾಳದಲ್ಲಿ ಜೀವಜ್ಯೋತಿ ಮಗನ ಆಸೆಗಾಗಿ ಆರದೆ ಬೆಳಗುತ್ತಿದ್ದಿತು. ಆದರೆ ವಿಧಿಯ ಕ್ರೂರ ದೃಷ್ಟಿ ಇದ್ದಕ್ಕಿದ್ದಂತೆ ಬರಸಿಡಿಲಿನಂತೆ ಅವಳಮೇಲೆ ಎರಗಿತು.

ಆ ದಿನ ಬೆಳಗಿನ ಜಾವ ತಾನು ಮಗುವಿನೊಡನೆ ಮಲಗಿದ್ದಂತೆ, ಕರಿಯ ಮುಖವಾಡ ಧರಿಸಿದ್ದ ಕರಾಳ ವ್ಯಕ್ತಿಗಳಿಬ್ಬರು ತನ್ನ ಕುತ್ತಿಗೆಯನ್ನು ಹಿಚುಕಿದಂತೆ, ತನ್ನ ನಿರ್ಜೀವ ದೇಹವನ್ನು ಎಲ್ಲಿಗೋ ಹೊತ್ತುಕೊಂಡುಹೋದಂತೆ, ಚಂದ್ರು ನಿದ್ದೆಯಿಂದ ಎಚ್ಚೆತ್ತು, ‘ ಅಮ್ಮಾ, ಅಮ್ಮಾ ’ ಎಂದು ಕಿರುಚಿಕೊಂಡು ಅತ್ತಂತೆ, ಮೀನಾಕ್ಷಿಯ ಸತ್ತದೇಹ ಮತ್ತೆ ಅಲುಗಾಡಿ “ ಕಂದಾ.... ಚಂದ್ರೂ.... ನನ್ನ ಮಗು, ಅಯ್ಯೋ! ನನ್ನ ಮಗು ” ಎಂದು ಕಿರುಚಿಕೊಂಡು ಎದ್ದು ಕುಳಿತಂತೆ ಕನಸು ಕಂಡಳು. ಮೀನಾಕ್ಷಿ ನಿಜವಾಗಿ ಎದ್ದುಕುಳಿತಿದ್ದಳು. ತೊಟ್ಟಿಲಲ್ಲಿ ಚಂದ್ರು ಹಾಯಾಗಿ ಮಲಗಿ ನಿದ್ರಿಸುತ್ತಿದ್ದನು. ಮೀನಾ ಸರ್ರನೇ ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ಎತ್ತಿಕೊಂಡು ತನ್ನ ಪಕ್ಕದಲ್ಲಿ ಮಲಗಿಸಿಕೊಂಡು, ಅಪ್ಪಿಕೊಂಡು ಮಲಗಿದಳು. ಆದರೆ ನಿದ್ರೆ ಬರಲಿಲ್ಲ. ಮೀನಾ ದಿನವೆಲ್ಲಾ ಆ ಭಯಂಕರ ಕನಸನ್ನೇ ಯೋಚಿಸುತ್ತಿದ್ದಳು. ಸುಬ್ಬಮ್ಮನವರ ಬಲವಂತಕ್ಕೆ ಎದ್ದು ನೀರು ಹಾಕಿಕೊಂಡಳು. ಮಗುವಿಗೂ ನೀರು ಹಾಕಿಸಿ, ಸಾಂಬ್ರಾಣಿ ಹೊಗೆ ಹಾಕಿ, ಹಣೆಗೆ ತಿಲಕವಿಟ್ಟಳು. ಕಣ್ಣಿಗೆ ಕಾಡಿಗೆ ಬಳಿದು, ತನ್ನ ಕೊರಳಲ್ಲಿದ್ದ ಚಿನ್ನದ ಚೈನನ್ನು ಹಾಕಿದಳು. ಕೈಗೆ ಮಿರುಗುವ ಚಿನ್ನದ ಬಳೆಗಳನ್ನು ಹಾಕಿದಳು. ಬಂಗಾರದ ಗಿಲೀಟಿನ ಬೆಳ್ಳಿಯ ಉಡುದಾರವನ್ನು ಕಟ್ಟಿದಳು. ರಾಮುಚಂದ್ರಯ್ಯ ತಂದುಕೊಟ್ಟಿದ್ದ ರೋಜಾ ಬಣ್ಣದ ಉಣ್ಣೆಯಂಗಿಯನ್ನು ಹಾಕಿ ತೊಟ್ಟಿಲಲ್ಲಿ ಮಲಗಿಸಿದಳು. ಅವಳಿಗೆ ಸಮಾಧಾನವಾಗಲಿಲ್ಲ. ಮತ್ತೆ ಮಗುವನ್ನು ಎತ್ತಿಕೊಂಡು

ತೊಡೆಯಮೇಲೆ ಮಲಗಿಸಿಕೊಂಡು ಕುಳಿತುಕೊಂಡಳು. ಅವಳಿಗೆ ಏನೋ ಹೆದರಿಕೆ. ಸುತ್ತಲೂ ದಿಟ್ಟಿಸಿ ನೋಡುವಳು. ಮಗುವನ್ನು ಅಪ್ಪಿಕೊಂಡು ಮುದ್ದಿನ ಮಳೆಗರೆಯುವಳು. ಅವನನ್ನೇ ದಿಟ್ಟಿಸಿ ನೋಡುತ್ತ ಗರಬಡಿದವಳಂತೆ ಕುಳಿತುಬಿಟ್ಟಳು.

ಮಧ್ಯಾಹ್ನ ಸುಬ್ಬಮ್ಮನವರು ಮೀನಾಕ್ಷಿಗೆ ಒಂದು ಕಾಗದ ತಂದುಕೊಟ್ಟರು. ಬೆಂಗಳೂರಿನ ಮುದ್ರೆ ನೋಡಿ, ಚಂದ್ರುವಿನ ಚಿತ್ರ ಕಣ್ಣಿಗೆ ಕಟ್ಟಿತು. ಅವಳ ಮೈ ಆನಂದದಿಂದ ಕಂಪಿಸಿತು. ಕಾಗದ ತೆಗೆದು 'ತಂಗೀ' ಎಂದು ಓದಿ ನಿರಾಶೆಯಾಯಿತು. ಕಾಮಾಕ್ಷಿ ಕಾಗದ ಬರೆದಿದ್ದಳು.

ತಂಗೀ,

ನೀನು ಮಾಡಿಟ್ಟು ಹೋದ ನನ್ನ ಸಂಸಾರಸ್ವರ್ಗ ನುಚ್ಚು ನೂರಾಯಿತು. ಅವರು ಹುಚ್ಚರಾಗಿಬಿಟ್ಟಿದಾರೆ. ನನ್ನನ್ನು ಹೊಡೆಯುವುದಿಲ್ಲ. ನನ್ನ ತಂಟೆಗೆ ಬರುವುದಿಲ್ಲ. ಆದರೆ ಆ ಕುಡಿತ! ಕುಡಿದು ಕುಡಿದು ಹಾಳಾಗುತ್ತಿದ್ದಾರೆ ಮೀನಾ. ಈಗ ಮನೆಗೇ ಸೂಳೆಯರನ್ನು ಕಟ್ಟಿಕೊಂಡು ಬರುತ್ತಾರೆ. ನನ್ನ ಬಾಳು ಹಾಳಾಯಿತು. ನಾನು ಸಾಯಬೇಕೆಂದು ನಿಶ್ಚಯಿಸಿದ್ದೇನೆ. ಆದರೆ....ಮಕ್ಕಳು? ವನಿತಾ ವಿಷಮಶೀತ ಜ್ವರ ಬಂದು ಒಂದೇ ವಾರದಲ್ಲಿ ಸತ್ತುಹೋದಳು. ಅವರು ಡಾಕ್ಟರನ್ನು ಕಳುಹಿಸಿದರು, ಔಷಧಿ ಕೊಡಿಸಿದರು. ಆದರೆ, ಮಗುವನ್ನು ನೋಡಲೇ ಇಲ್ಲ. ನನ್ನ ಮುದ್ದು ವನಿತಾ ಸತ್ತೇಹೋದಳು. ನನ್ನ ಹೊಟ್ಟೆಯಲ್ಲಿ ಬೆಂಕಿ ಇಟ್ಟ ಹಾಗಾಗಿದೆ. ಅವರು ಮನೆಗೆ ಬಂದು ನಾಲ್ಕು ದಿವಸಗಳಾಯಿತು ಮೀನಾ. ಯಾರ ಕೈಲೋ ದುಡ್ಡು ಕಳುಹಿಸಿದರು, ನನ್ನ ಹೊಟ್ಟೆಗೆ–ನನ್ನ ಮಕ್ಕಳ ಹೊಟ್ಟೆಗೆ. ಏನು ಸುಖ ಮೀನಾ? ಇದು ಎಂತಹ ಬಾಳು. ನಾನು ಬದುಕಿರಬಹುದೇ, ನೀನೇ ಹೇಳು ನೀನೇ ನನ್ನನ್ನು ಬದುಕಿಸಬೇಕು. ಅವರಿಗೆ ಬರೆಯಲಾರೆಯಾ? ನಿಮ್ಮಿಬ್ಬರ ಸಂಬಂಧ ನನಗೆ ಗೊತ್ತು

ಮೀನಾ. ಆದರೆ.... ನಿನ್ನ ತ್ಯಾಗಕ್ಕೆ ಪ್ರತಿಫಲ ಕೊಟ್ಟೆ ಮೀನಾ. ಯಾವ ಹೆಂಗಸು ಇಂತಹ ತ್ಯಾಗಮಾಡುತ್ತಾಳೆ ? ನನ್ನ ಮಾಂಗಲ್ಯ ಕಳೆದು ಹೋಗುವ ಕಾಲ ಬಂದಿದೆ ಮೀನಾ. ಅದನ್ನು ಉಳಿಸುವ ಶಕ್ತಿ ನಿನಗಿದೆ. ನನ್ನ ಸಂಸಾರ ಉಳಿಸು ತಂಗೀ....

ಮೀನಾಕ್ಷಿ ಕಾಗದ ಓದುತ್ತಿದ್ದಂತೆಯೇ, "ಅಯ್ಯೋ, ಅಮ್ಮಾ...." ಎಂದು ಅರಚಿ ಹಿಂದಕ್ಕೆ ಬಿದ್ದು ಮೂರ್ಛೆ ಹೋದಳು. ಸುಬ್ಬಮ್ಮನವರು ಗಾಬರಿಯಿಂದ ಓಡಿ ಬಂದರು. ಮೀನಾಕ್ಷಿ ಕೆಳಗೆ ಬಿದ್ದಿರುವುದನ್ನು ನೋಡಿ ಬೇಗ ತಲೆಗೆ ನೀರು ತಟ್ಟಿದರು. ಬಾಲಚಂದ್ರ ಕಿಟಾರನೆ ಕಿರುಚಿಕೊಂಡು ಅಳುತ್ತಿದ್ದನು. ಮೀನಾಕ್ಷಿಯ ಮೈಮೇಲೆ ಬಿದ್ದು ಕೊಂಡಿದ್ದ ಮಗುವನ್ನು ಸರ್ರನೇ ಎತ್ತಿಕೊಂಡು ತೊಟ್ಟಿಲಲ್ಲಿ ಮಲಗಿಸಿದರು. ಅವರಿಗೆ ಮೈ ನಡುಕ ಬಂದುಬಿಟ್ಟಿತು. ಮನೆಯಲ್ಲಿ ಒಬ್ಬರೇ. ರಾಮಚಂದ್ರಯ್ಯನನ್ನು ಎಲ್ಲಿ ಹುಡುಕಿಕೊಂಡು ಹೋಗುವುದು ? ಆಕೆ ಮಂಚದ ಮೇಲೆ ಕುಳಿತು ಮೀನಾಕ್ಷಿಯನ್ನು ಸರಿಯಾಗಿ ಮಲಗಿಸಿದರು. ಮುಖಕ್ಕೆ ನೀರು ತಟ್ಟಿದರು. ಐದು ನಿಮಿಷ ಜೀವ ಹಿಡಿದುಕೊಂಡು ಕುಳಿತಿದ್ದರು. ಮತ್ತೆ ಮುಖಕ್ಕೆ ನೀರು ಚಿಮುಕಿಸಿ, " ಮೀನಾ.... ಏಳಮ್ಮಾ, ನನ್ನಮ್ಮಾ. ಏನಾಯಿತೇ .... ಏಳಮ್ಮಾ ಏಳು " ಎಂದು ಪರಿಪರಿಯಾಗಿ ಬೇಡಿಕೊಂಡು ಅವಳ ಕಣ್ಣನ್ನು ತೆರೆಸಲು ಪ್ರಯತ್ನಿಸಿದರು. ಕಿವಿಯಲ್ಲಿ 'ಮೀನಾ' ಎಂದು ಕೂಗಿದರು. ಉಕ್ಕಿಬರುತ್ತಿದ್ದ ಅಳುವನ್ನು ತಡೆದುಕೊಳ್ಳುತ್ತಿದ್ದರು. ಮೀನಾಕ್ಷಿ ಚೇತರಿಸಿಕೊಂಡು ಕಣ್ಣುಬಿಟ್ಟಳು. ತಕ್ಷಣ ಎದ್ದು ಕುಳಿತಳು. ಅಳುತ್ತಿದ್ದ ಬಾಲಚಂದ್ರನನ್ನು ಸರ್ರನೇ ಎತ್ತಿಕೊಂಡು, "ನನ್ನ ಚಂದ್ರು.... ನನ್ನ ಮಗು.... ನನ್ನ ಚಿನ್ನ" ಎಂದು ಎದೆಗಪ್ಪಿಕೊಂಡಳು. ಸುಬ್ಬಮ್ಮನವರಿಗೆ ಅವಳ ಆವೇಶವನ್ನು ನೋಡಿ ಹೆದರಿಕೆಯಾಯಿತು. ಗಾಬರಿಯಿಂದ ಕೇಳಿದರು. " ಮೀನಾ........ ಏಕೆ ಹಾಗೆ ಬಿದ್ದು ಬಿಟ್ಟೇ ? ಏನಾಯಿತೇ........ ಕಾಗದ ಯಾರದೇ ?" ಮೀನಾಕ್ಷಿ ಗೋಡೆಯ ಪಕ್ಕದಲ್ಲಿ ಬಿದ್ದಿದ್ದ ಕಾಗದವನ್ನು ತೆಗೆದು ಕುಪ್ಪಸದಲ್ಲಿ ಬಚ್ಚಿಟ್ಟುಕೊಂಡಳು.

"ಕಾಮಾಕ್ಷಿಯುದಮ್ಮಾ, ವನಿತಾಗೆ ಟೈಫಾಯಿಡ್ ಆಗಿ ಸತ್ತು ಹೋದಳಂತೆ. ಚಂದ್ರು ಮತ್ತೆ ಕುಡೀತಾನಂತೆ. ಯಾರಯಾರನ್ನೋ ಕಟ್ಟಿಕೊಂಡು ಅಲೆಯುತ್ತಾನಂತೆ. ಅತ್ತುಕೊಂಡು ಕಾಗದ ಬರೆದಿದ್ದಾಳೆ. ಅವಳ ಸಂಕಟ ಓದಲಾರದೇ ಹೋದೆ. ಅವಳ ಗತಿ ಮತ್ತೆ ಹೀಗಾಗಿ ಹೋಯಿತೇ ?"

ಸುಬ್ಬಮ್ಮನವರು ತಲ್ಲಣಿಸಿಹೋದರು. "ಚೆನ್ನಾಗಿದ್ದಾಳೆ ಅಂತ ಕೇಳಿ ಹಾಯಾಗಿದ್ದೆನಲ್ಲೇ. ಆ ಮಗೂಗೆ ಬಂತೇ ಸಾವು. ಅಯ್ಯೋ ನನ್ನ ಕಂದಾ. ನನ್ನಬಿಟ್ಟು ನೀನು ಸಾಯಬೇಕಾಗಿತ್ತೇನಮ್ಮಾ. ಅವಳಿಗಿದ್ದಿದ್ದು ಆ ಮಕ್ಕಳು. ಅದಕ್ಕೂ ಬಂತೆ ಕೇಡು" ಎಂದು ಅತ್ತರು. ತಾವೇ ಸಮಾಧಾನ ತಂದುಕೊಂಡು ಎದ್ದು ಹೋದರು.

ಮೀನಾಕ್ಷಿ ದೆಯ್ಯ ಬಡಿದವಳಂತೆ ಕುಳಿತುಕೊಂಡಿದ್ದಳು. ಎದ್ದು ಪೆಟ್ಟಿಗೆ ತೆರೆದು ಚಂದ್ರುವಿನ ವಜ್ರದುಂಗುರವನ್ನು ತೆಗೆದು ಬೆರಳಿಗೆ ಹಾಕಿಕೊಂಡಳು. ಮತ್ತೆ ಹಾಸಿಗೆಯಮೇಲೆ ಬಂದು ಕುಳಿತುಕೊಂಡು ಥಳಥಳಿಸುವ ಆ ವಜ್ರವನ್ನೇ ಎವೆಯಿಕ್ಕದೆ ನೋಡುತ್ತ ಕುಳಿತಳು. ಅವಳು ಕೈ ತಿರುಗಿಸಿದಾಗಲೆಲ್ಲಾ ವಜ್ರವು ಬೆಳಕಿಗೆ ಏಳು ಬಣ್ಣ ಹೊತ್ತು ರಾರಾಜಿಸಿತು ! ಸುಬ್ಬಮ್ಮನವರೇ ಮಗು ಅತ್ತಾಗ ಅವಳ ಕೈಯಿಂದ ಮಗುವನ್ನು ತೆಗೆದುಕೊಂಡು ಒಳಲೆಯಲ್ಲಿ ಹಾಲು ಹಾಕಿ ಹೋದರು. ಮೀನಾಕ್ಷಿ ಮತ್ತೆ ಮಗನನ್ನು ಎತ್ತಿಕೊಂಡು ಕುಳಿತುಕೊಂಡಳು. ಮಧ್ಯಾಹ್ನದಿಂದ ಏನನ್ನೂ ಕುಡಿಯದೆ, ತಿನ್ನದೆ ಕುಳಿತಿದ್ದ ಅವಳಿಗೆ ಸುಬ್ಬಮ್ಮನವರು ಬಲವಂತದಿಂದ ಒಂದು ಲೋಟ ಹಾಲುಕುಡಿಸಲು ಹೋದರು. ಮೀನಾಕ್ಷಿ ಬಿರುಗಣ್ಣು ಬಿಟ್ಟುಕೊಂಡು ಅವರ ಮೇಲೆ ರೇಗಿಬಿದ್ದಳು. ಅವಳ ತಲೆ ಕೆದರಿ ವಿಕಾರವಾಗಿ ಕಾಣುತ್ತಿದ್ದಿತು. ಮಗುವನ್ನು ತೊಟ್ಟಿಲಲ್ಲಿ ತೂಗಿ ಮಲಗಿಸಲು ಹೋದರು. ಮತ್ತೆ ಮೀನಾಕ್ಷಿ ವಿಕಾರವಾದ ಕಣ್ಣುಗಳಿಂದ ಅವರನ್ನು ದೃಷ್ಟಿಸಿ ನೋಡಿದಳು. ಮಗು ಸುಮ್ಮನೆ ಅರಚಿಕೊಳ್ಳುತ್ತಿತ್ತು. ಮಗುವನ್ನು ಕಿತ್ತುಕೊಳ್ಳುವುದಕ್ಕೆ ಕೈಹಾಕಿದರು. "ನನ್ನ ಮಗು, ಮುಟ್ಟಬೇಡ" ಎಂದು ಅವಳು ಕಿಟಾರನೆ ಕಿರುಚಿದಳು. ಹುಚ್ಚು ಹುಚ್ಚಾಗಿ ಕೇಕೆ ಹಾಕಿಕೊಂಡು

ನಕ್ಕಳು. ಸುಬ್ಬಮ್ಮನವರಿಗೆ ಹೆದರಿಕೆ ಆಯಿತು. ಹೊರಗೋಡಿ ಬಂದು ಬಿಟ್ಟರು. ಐಯ್ಯಂಗಾರರ ಮನೆಗೆ ಹೋಗಿ ಅವರ ತಾಯಿಯನ್ನು ಮೆಲ್ಲನೆ ಕರೆದುಕೊಂಡು ಬಂದು ತೋರಿಸಿದರು ಆಕೆ ಬಾಗಿಲಲ್ಲಿ ಬಂದು ನಿಂತರೂ ಮೀನಾಕ್ಷಿಗೆ ಎಚ್ಚರವಿರಲಿಲ್ಲ. ಮಗುವನ್ನು ಅಪ್ಪಿಕೊಂಡು, ತಟ್ಟಿ, ಲಾಲಿಹಾಡನ್ನು ಹೇಳುತ್ತಿದ್ದಳು. ಆಕೆ ತಲೆ ಅಲ್ಲಾಡಿಸಿ

"ಹೌದು, ಸುಬ್ಬಮ್ಮನವರೇ. ದೆಯ್ಯ ಹಿಡಿದ ಹಾಗೇ ಇದೆ ಲಕ್ಷಣಗಳೆಲ್ಲ. ಬಾಣಂತಿ ದೆಯ್ಯ ಇರಬೇಕೂಂದ್ರೆ. ಕಣ್ಣು ನೋಡಿ ಹೇಗೆ ತಿರುಗಿಸುತ್ತಾಳೆ. ಮಗುವನ್ನು ಏನಾದರೂ ಮಾಡಿಬಿಡುತ್ತಾಳೇಂದ್ರೆ, ಕಿತ್ತುಕೊಳ್ಳಿ" ಎಂದರು.

ಸುಬ್ಬಮ್ಮನವರು ಹಿಂತೆಗೆದರು. ಆಕೆಯೇ ಹೋಗಿ ಸರ್ರನೇ ಕಿತ್ತುಕೊಂಡರು. ಮೀನಾಕ್ಷಿ ಒಂದೇ ಏಟಿಗೆ ಹಾರಿ ಬಂದು "ಅಯ್ಯೋ, ನನ್ನ ಮಗು.... ಅವನ್ನ ತಗೊಂಡು ಹೋಗ್ಬೇಡೀಮ್ಮ ಅದನ್ನ ಕೊಲ್ಬೇಡಿ.... ಲಕ್ಷ್ಮಮ್ಮನವರೇ" ಎಂದು ಅರಚಿ, ತನ್ನ ಶಕ್ತಿಯನ್ನೆಲ್ಲ ಬಿಟ್ಟು ಅವರ ಕೈಯಿಂದ ಮಗುವನ್ನು ಕಿತ್ತುಕೊಂಡು ಎದೆಗಪ್ಪಿಕೊಂಡು ಆಕೆಯನ್ನು ದುರುಗುಟ್ಟಿಕೊಂಡು ನೋಡಿದಳು. ಸುಬ್ಬಮ್ಮನವರು ಸಂಕಟ ತಡೆಯಲಾರದೆ,

"ಮೀನಾ, ಏಕಮ್ಮ... ಏಕೆ ಹೀಗಾಡುತ್ತೀಯ. ಸುಧಾರಿಸಿಕೋ ತಾಯಿ" ಎಂದರು ಬಾಗಿಲಲ್ಲೇ ನಿಂತು.

ಮೀನಾಕ್ಷಿ ಮತ್ತೆ ಹಾಸಿಗೆಯಮೇಲೆ ಕುಳಿತುಕೊಂಡಳು. ಅವರನ್ನು ದುರುಗುಟ್ಟಿಕೊಂಡು ನೋಡಿದಳು. ತಕ್ಷಣ ಮೃದುವಾಗಿ ನಕ್ಕು,

"ಏನೂ ಇಲ್ಲ, ಅಮ್ಮ. ನೀನು ಸುಮ್ಮನೆ ಹೆದರಿಕೊಳ್ಳುತ್ತೀಯ. ಕಾಮಾಕ್ಷಿಗೆ ಸುಖವಿಲ್ಲದೇ ಹೋಯಿತಲ್ಲಾ ಎಂದು ದುಃಖವಾಯಿತು ಅಷ್ಟೆ. ವನಿತಾ ಎಷ್ಟುಬೇಗ ಹೋಗ್ಬಿಟ್ಳು........ ನನ್ನ ಚಂದ್ರೂಗೂ, ನನ್ನ ರಾಜಂಗೂ ಹಾಗೇ ಆಗ್ಬಿಟ್ರೆ....ಇಲ್ಲಾ ಅಂತ ಹೇಳಮ್ಮಾ... ಇಲ್ಲಾಂತ ಹೇಳು."

ಮೀನಾಕ್ಷಿ ಅತ್ತು ಮಗುವನ್ನು ಎದೆಗೆ ಅಪ್ಪಿಕೊಂಡಳು. ಮತ್ತೆ

ಮಗುವನ್ನು ಪಕ್ಕದಲ್ಲಿ ಮಲಗಿಸಿಕೊಂಡು ಮಲಗಿಕೊಂಡಳು. ಲಕ್ಷ್ಮಮ್ಮನವರಿಗೆ ಆಶ್ಚರ್ಯವಾಯಿತು. ಆಕೆ ಕೊಂಚ ಅನುಭವಸ್ಥೆ. ನಿಜಾಂಶವನ್ನೇ ಆಕೆ ಕಂಡುಹಿಡಿದರು.

"ಅವಳಿಗೆ ಮಗುವಾದ ಸಂತೋಷ. ಮಕ್ಕಳಿಲ್ಲದೇ ಹಂಬಲಿಸಿ ಹಂಬಲಿಸಿ ಮಗುವಾದರೆ ಹಾಗೇ. ಸುಬ್ಬಮ್ಮನವರೇ, ನಿಮ್ಮ ಮೊಮ್ಮಗು ಸತ್ಹೋಯ್ತು ಅಂತ ಕೇಳಿ ಅವಳಿಗೆ ಗಾಬರಿಯಾಗಿ ಬಿಟ್ಟಿದೆ. ತನ್ನ ಮಗೂಗೂ ಏನಾದರೂ ಮಾಡಿಬಿಟ್ಟಾರೆಂದು ಅವಳಿಗೆ ಪೆದರಿಕೆ. ಅದಕ್ಕೇ ಹಾಗೆ ಆಡ್ತಾಳೆ."

ಸುಬ್ಬಮ್ಮನವರಿಗೆ ನಂಬಿಕೆಯಾಗಲಿಲ್ಲ. "ಹೇಗಾದರಾಗಲಿ. ನಿಮ್ಮ ಮಗನ್ನ ಕೊಂಚ ಕಳ್ಸಿ ರಾಮಚಂದ್ರಯ್ಯನ್ನ ನೋಡಿಕೊಂಡು ಬರುವಂತೆ ಹೇಳಿ. ನಿಮಗೂ ಪುಣ್ಯ ಬರುತ್ತೆ. ಆ ಮಗು ಸತ್ಹೋದ ಸಂಕಟ ತಡೀಲೊ, ಇಲ್ಲಿ ಇವಳ ಹುಚ್ಚಾಟ ತಡಿಲೋ. ನನ್ನ ಕೈಲಿ ತಡೆಯೋಕಾಗೊಲ್ಲಮ್ಮ. ಹಸೀ ಮೈ. ಏನಾದ್ರೂ ಆಗ್ಬಿಟ್ರೆ ಏನ್ಗತೀಂದ್ರೆ. ಏಕೋ ಹೆದರ್ಕೆ ಆಗುತ್ತೆ."

ಆಕೆ ಹೊರಟು ಹೋದರು. ಸಂಜೆಯಾಗಿತ್ತು. ಹುಡುಕಿ ಹುಡುಕಿ ಆ ಹುಡುಗ ನಿರಾಶನಾಗಿ ಮನೆಗೆ ಬಂದನು. "ಎರಡು ತಿಂಗಳಿಂದ ರಾಮಚಂದ್ರಯ್ಯನವರು ಆಫೀಸಿಗೆ ರಜ ತಗೊಂಡಿದ್ದಾರಂತೆ. ಕ್ಲಬ್ಬಿಗೂ ಹೋಗುವುದಿಲ್ಲವಂತೆ" ಎಂದು ಅವನು ಹೇಳಿದ್ದನ್ನು ಕೇಳಿ ಸುಬ್ಬಮ್ಮನವರಿಗೆ ಆಶ್ಚರ್ಯವಾಯಿತು. ಐಯ್ಯಂಗಾರರ ಮನೆಯಿಂದ ಒಬ್ಬೊಬ್ಬರಾಗಿ ಎಲ್ಲರೂ ಬಂದು ಮೀನಾಕ್ಷಿಯನ್ನು ನೋಡಿಕೊಂಡು ಹೋದರು. ಮೀನಾಕ್ಷಿ ನಿದ್ದೆಮಾಡುತ್ತಿದ್ದಳು. ಎಲ್ಲರೂ ಸುಬ್ಬಮ್ಮನವರಿಗೆ "ಅವಳಿಗೆ ಆಯಾಸವಾಗಿದೆ. ಎಬ್ಬಿಸಬೇಡಿ" ಎಂದು ಧೈರ್ಯ ಹೇಳಿದರು.

ಮೀನಾಕ್ಷಿ ಥಟ್ಟನೆದ್ದು ಕುಳಿತಳು. ಎದ್ದು ಅಡಿಗೆ ಮನೆಗೆ ಹೋದಳು. ಸುಬ್ಬಮ್ಮನವರಿಗೆ ಅವಳು ಬಂದಿದ್ದು ನೋಡಿ ಸಮಾಧಾನವಾಯಿತು. "ಅಮ್ಮಾ, ನನಗೆ ನಿದ್ದೆ ಬರುತ್ತೆ. ಒಂಭತ್ತು ಘಂಟೆಯವರೆಗೆ ಏಳಿಸಬೇಡ" ಎಂದು ಹೇಳಿದಳು. ಸುಬ್ಬಮ್ಮನವರಿಗೆ ಸಂತೋಷವಾಯಿತು. "ನನ್ನಮ್ಮಾ, ಮಲಕ್ಕೋ........ಯಾರು ಬೇಡಾಂದ್ರು.

ಎಷ್ಟುಹೊತ್ತು ಬೇಕಾದರೂ ಮಲಕ್ಕೋ ತಾಯಿ. ಸಧ್ಯ ನೀನು ಯಾರ ಯೋಚ್ನೇನೂ ಮಾಡಿ, ತಲೆಕೆಡಿಸ್ಕೊಂಡು ಹುಚ್ಚುಹುಚ್ಚಾಗಿ ಆಡಬೇಡ. ಹಾಯಾಗಿ ಮಲಕ್ಕೋ ಹೋಗು" ಎಂದರು.

ಮೀನಾ ನೋವಿನ ನಗೆ ನಕ್ಕಳು. 'ಮಲಗಿಕೊಳ್ಳುತ್ತೇನೆ, ಅಮ್ಮಾ ....ಮಲಗಿ ಕೊಳ್ಳುತ್ತೇನೆ....ಇನ್ನು ಎಂದೆಂದಿಗೂ ಏಳುವುದಿಲ್ಲ. ಚಿರ ನಿದ್ರೆ ಮಾಡುತ್ತೇನೆ, ದೀರ್ಘ ನಿದ್ರೆ........' ಎಂದುಕೊಂಡು ಮೀನಾ ಮತ್ತೆ ತನ್ನ ಕೊಠಡಿಗೆ ಹೋಗಿ, ದೀಪ ಹಾಕಿ ಬಾಗಿಲು ಹಾಕಿ ಕೊಂಡಳು. ಸುಬ್ಬಮ್ಮನವರಿಗೆ ನಿಶ್ಚಿಂತೆಯಾಯಿತು. 'ಸಧ್ಯ ದೇವರು ದೊಡ್ಡವನು. ಎಷ್ಟೋ ಗೆಲುವಾಗಿದ್ದಾಳೆ. ಒಳ್ಳೇ ಹುಡುಗಿ. ಪಾಪ ಇನ್ನೊಬ್ಬರ ದುಃಖ ನೋಡಿ ಎಷ್ಟು ಮರಗುತ್ತಾಳೆ. ದೇವರು ಅವಳ ಕಷ್ಟ ಎಲ್ಲ ಕಡೆಗಾಣಿಸಿ ಶಾಶ್ವತವಾದ ಸುಖ ಕೊಡಬೇಕು' ಎಂದು ದೇವರಿಗೆ ಕೈ ಮುಗಿದು ಬೇಡಿಕೊಂಡರು !

ಬಾಗಿಲು ಹಾಕಿದ ಮೇಲೆ ಮೀನಾ ಕುಪ್ಪಸದಲ್ಲಿ ಬಚ್ಚಿಟ್ಟು ಕೊಂಡಿದ್ದ ಕಾಮಾಕ್ಷಿಯ ಕಾಗದವನ್ನು ಮತ್ತೊಂದು ಸಾರಿ ತೆಗೆದು ಓದಿಕೊಂಡಳು. ಅವಳ ಕಣ್ಣಲ್ಲಿ ಕಣ್ಣೀರು ತುಂಬಿತು. 'ನನ್ನ ಚಂದ್ರುವನ್ನು ನಿನಗೇ ಹಿಂದಕ್ಕೆ ಕೊಡುತ್ತೇನೆ ಕಾಮಾಕ್ಷಿ....ನಾನಿದ್ದು ಚಂದ್ರುವನ್ನು ಮತ್ತೆ ನಿನಗೆ ಕೊಡಲಾರೆ. ನಾನು ಸತ್ತು ಚಂದ್ರು ವನ್ನು ನಿನಗೆ ಕೊಡುತ್ತೇನೆ....ನನ್ನ ಹೃದಯವನ್ನು ಕಿತ್ತು ನಿನಗೆ ಕೊಡು ತ್ತೇನೆ. ನನ್ನ ಪ್ರಾಣವನ್ನೇ ನಿನಗೆ ಕೊಡುತ್ತೇನೆ ಕಾಮಾಕ್ಷೀ....' ಮೀನಾಕ್ಷಿ ಬಿಕ್ಕಿಬಿಕ್ಕಿ ಅತ್ತಳು. ಪೆಟ್ಟಿಗೆ ತೆಗೆದು ಚಂದ್ರುವಿನ ಪ್ರೇಮಪತ್ರಗಳ ಕಟ್ಟನ್ನು ಹೊರಕ್ಕೆ ತೆಗೆದಳು. ಒಂದೆರಡು ಕಾಗದ ಗಳನ್ನು ಕಣ್ಣೀರು ಸುರಿಸುತ್ತಾ ಸರಸರನೆ ಓದಿಕೊಂಡಳು. ಚಂದ್ರು ವಿನಿಂದ ತೆಗೆದುಕೊಂಡು ಬಂದಿದ್ದ ಅವನ ಸುಂದರ ಭಾವಚಿತ್ರವನ್ನು ತೆಗೆದು ಕಣ್ಣು ತುಂಬ ನೋಡಿ ಕಣ್ಣುಗಳಿಗೆ ಒತ್ತಿಕೊಂಡಳು. ಮೀನಳ ಮುಖದ ಮೇಲೆ ನಿರ್ಧಾರ ಮೂಡಿತು. ಸರ್ರನೇ ಕಡ್ಡಿಗೀರಿ ಚಂದ್ರುವಿನ ಭಾವಚಿತ್ರವನ್ನೂ, ಅವನ ಪ್ರೇಮಪತ್ರಗಳನ್ನೂ, ಕಾಮಾಕ್ಷಿಯ ಕಾಗದವನ್ನೂ ಹತ್ತಿಸಿ, ಸುಟ್ಟು ಹಾಕಿದಳು. ಆ ಉರಿಯೊಡನೆ

ಮೀನಾಕ್ಷಿಯ ಹೃದಯವೇದನೆಯೂ ಭುಗಿಲ್ ಎಂದು ಹತ್ತಿಕೊಂಡು ಉರಿಯಿತು. ಮೀನಾ ಎದ್ದು ಮಗುವಿನ ಹತ್ತಿರ ಕುಳಿತುಕೊಂಡು ಅದರ ಮೈಮೇಲೆ ಮುತ್ತಿನ ಮಳೆಗರೆದಳು. ಮಗು ಎದ್ದು ಬಿಡುವುದೇನೋ ಎಂದು ತಟ್ಟಿ ಮಲಗಿಸಿ, ಬೀರುವಿನ ಕಡೆ ದೃಷ್ಟಿ ಹರಿಸಿದಳು. ಚಂದ್ರದ ಶೀಸೆಯ ಮಗ್ಗುಲಲ್ಲಿ ಚಂದ್ರುವಿನಂತಹ ಅವಳ ಕರ್ಪೂರದ ಬೊಂಬೆ ನಗುತ್ತ ಕುಳಿತಿತ್ತು. ಹಾಸಿಗೆಯ ಮೇಲೆ 'ಚಂದ್ರು' ಮುಸಿನಗುತ್ತ ಹಾಯಾಗಿ ನಿದ್ರೆ ಮಾಡುತ್ತಿದ್ದನು. ಮೀನಾ ಕೈಯ್ಯಲ್ಲಿ ಹಿಡಿದಿದ್ದ ವಜ್ರದುಂಗುರವನ್ನು ಬೆಳಕಿಗೆ ಹಿಡಿದು ನೋಡಿದಳು. ಫಳಫಳನೆ ನಾಗಮಣಿಯಂತೆ ಮಿಂಚುವ ವಜ್ರದ ಆ ಸುಕಾಂತಿಯ ತೀಕ್ಷ್ಣತೆಯಲ್ಲಿ ಮೀನಾ ತನ್ನ ಬಾಳನ್ನು ಕಂಡುಕೊಂಡಳು.

'ಮೀನಾ, ಇದು ನಮ್ಮ ಪ್ರೇಮದ ಸಂಕೇತ. ಇದನ್ನು ಹುಷಾರಾಗಿಟ್ಟುಕೋ.'

'ಆಗಲಿ ಚಂದ್ರು. ಇದನ್ನು ಎಂದೆಂದಿಗೂ ನನ್ನ ಬಳಿ ಇಟ್ಟುಕೊಳ್ಳುತ್ತೇನೆ. ಇದು ನನ್ನ ಮಾನ ಕಾಯುವ ದೇವತೆ!'

ಮೀನಾ ಆ ಮಾತುಗಳ ನೆನಪಿನಿಂದ ನಡುಗಿದಳು. ಅವಳ ಮುಖ ಕಪ್ಪಿಟ್ಟಿತು. ಆ ವಜ್ರದುಂಗುರವನ್ನು ಮತ್ತೆ ಬೆಳಕಿಗೆ ಹಿಡಿದು ನೋಡಿದಳು. ವಜ್ರ ಬೆಳಕಿನಲ್ಲಿ ಫಳ್ಳನೆ ಮಿಂಚಿತು. ಮೀನಳ ದೃಷ್ಟಿ ಮೂಲೆಯಲ್ಲಿದ್ದ ಅರೆಯುವ ಕಲ್ಲಿನ ಮೇಲೆ ಹರಿಯಿತು! ಮೀನಾಕ್ಷಿಯ ಮುಖದ ಮೇಲೆ ಅತಿ ಘೋರವಾದ ನಗು ಕಾಣಿಸಿಕೊಂಡಿತು! ಮೀನಾ ಎದ್ದು ಹೋಗಿ ಕಲ್ಲಿನಿಂದ ವಜ್ರದುಂಗುರವನ್ನು ಜಜ್ಜಿದಳು. ವಜ್ರ ಕಳಚಿಬಂದಿತು. ಆ ವಜ್ರವನ್ನು ತನ್ನ ಶಕ್ತಿಯನ್ನೆಲ್ಲಬಿಟ್ಟು ಕಲ್ಲಿನಡಿಯಲ್ಲಿ ಪುಡಿಮಾಡಿದಳು. ಅರೆಕ್ಷಣದಲ್ಲಿ ಮೀನಾಕ್ಷಿ ಆ ಪುಡಿಯನ್ನು ನೀರಿನಲ್ಲಿ ಕದಡಿ ಕುಡಿದು ಬಿಟ್ಟಳು! ಅವಳ ಮುಖದ ಮೇಲೆ ಅವರ್ಣನೀಯವಾದ ಗೆಲುವು ಕಾಣಿಸಿಕೊಂಡಿತು. ಮೀನಾ ಎದ್ದು ಬೀರುವಿನ ಬಳಿ ಹೋದಳು. ಸಾಯಬೇಕೆಂಬ ಆತುರದಲ್ಲಿ ಕೈಗೆ ಸಿಕ್ಕಿದ ವಿಷವನ್ನೆಲ್ಲ ತಿಂದಳು. ಗಂಟಲು ಬಿಗಿದುಕೊಂಡು ಮೀನಾ ತೂರಾಡುತ್ತ ಮಗುವಿನ ಪಕ್ಕದಲ್ಲಿ ಉರುಳಿ

ಕೊಂಡಳು. ಅವಳ ಮೈಯಲ್ಲಿ ಅಸಾಧ್ಯ ಉರಿಎದ್ದಿತು. ಕಣ್ಣು ಕತ್ತಲೆ ಕಟ್ಟಿತು.

*   *   *   *   *

ಸಾಯಂಕಾಲ ರಾಮಚಂದ್ರಯ್ಯ ನದಿಯ ದಡದಲ್ಲೇ ಅರ್ಧ ಮೈಲಿ ನಡೆದು ಹೋಗಿ ಅಲ್ಲಿ ನಿಬಿಡವಾಗಿ ಬೆಳೆದಿದ್ದ ಮರಗಳ ಗುಂಪಿನ ಮಧ್ಯೆ ಬಂಡೆಯೊಂದರ ಮೇಲೆ ಕುಳಿತಿದ್ದನು. ಹೆದರಿಕೆ ಎನ್ನುವುದು ಅವನಿಂದ ದೂರವಾಗಿದ್ದಿತು. ಮನಸ್ಸಿನ ಉನ್ಮಾದ ಅವನನ್ನು ಎಲ್ಲ ಹೆದರಿಕೆಗಳಿಂದ ದೂರಮಾಡಿತ್ತು. ರಾಮಚಂದ್ರಯ್ಯ ಅರೆಹುಚ್ಚನಾಗಿದ್ದನು.

ರಾಮಚಂದ್ರಯ್ಯನಿಗೆ ಆಯಾಸದಿಂದ ಜೊಂಪುಹತ್ತಿ ನಿದ್ದೆ ಬಂದಿತು. ಹಾಗೆಯೇ ಕಲ್ಲುಬಂಡೆಗೆ ಒರಗಿಕೊಂಡನು. ಘೋರವಾದ ನಿದ್ರೆ ಅವನನ್ನು ಆವರಿಸಿಕೊಂಡಿತು. ಅವನ ಸುಪ್ತ ಚೈತನ್ಯ ವಿಕಟವಿರಾಟ್‌ರೂಪವನ್ನು ಹೊತ್ತು ಅವನನ್ನು ಕಾಡಿತು. ಅವನ ಹಿಂದಿನ ಬಾಳೆಲ್ಲ ಅವನ ಕಣ್ಣು ಕಟ್ಟಿತು.

ವಿದ್ಯುತ್ ಇಲಾಖೆಗೆ ಸೇರಿದ್ದ ಹೊಸದರಲ್ಲಿ ಅವನ ಕಾಮುಕ ಜೀವನಕ್ಕೆ ಸ್ನೇಹಿತ ಸುಬ್ಬರಾಜು ಹೊಸ ಹೆಣ್ಣಿನ ಪರಿಚಯ ಮಾಡಿಸಿದ. ಸುಂದರಿ ! ವಿಪರೀತ ಕಾಮಜೀವನ ನಡೆಸಿ ಅವಳ ದೇಹ ಹಾಳಾಯಿತು. ಆ ಸುಂದರ ಮೈಯ್ಯ ವಿಷ! ಒಂದು ತಿಂಗಳಲ್ಲೇ ಅವನ ದೇಹ ಮೋಹಕ್ಕೆ ಬಲಿಯಾಯಿತು. ವಿಷಸುಂದರಿಯ ಲಾಲಸೆಗೆ ಕೈಹಿಡಿದ ಹೆಂಡತಿ ಸುಶೀಲಳ ಬಂಗಾರದ ಕೈಬಳೆಗಳನ್ನು ಆಹುತಿ ಕೊಟ್ಟನು. ಅವಳ ಸಹವಾಸದಲ್ಲಿ ಆರು ತಿಂಗಳು ಕಳೆಯುವುದರಲ್ಲಿ ಅವನ ದೇಹದಲ್ಲಿ ರೋಗ ಹೆಚ್ಚಿಕೊಂಡಿತು. ಗುಪ್ತವ್ಯಾಧಿಯ ಬೇನೆ, ಬೇಗೆಗಳನ್ನು ತಡೆಯಲಾರದೆ ಶಿವಮೊಗ್ಗೆಯ ವೈದ್ಯರೊಬ್ಬರ ಬಳಿ ಓಡಿದನು. ಖಾಯಿಲೆ ಭಯಂಕರವಾಗಿದ್ದಿತು. ಆ ವೈದ್ಯರು ಐದುನೂರು ರೂಪಾಯಿಗಳನ್ನು ಕೇಳಿದರು. ಅವನು ಊರಿಗೆ ಮರಳಿ ದುಡ್ಡಿಗಾಗಿ ಹೆಂಡತಿಯ ಸರ ಕೇಳಿದನು. ಸುಶೀಲೆ ಕೊಡಲಿಲ್ಲ. ಅದರಲ್ಲಿ ಅವಳ ಸೌಭಾಗ್ಯ ಮಾಂಗಲ್ಯವಿದ್ದಿತು. ರೋಷದಿಂದ ಒದ್ದನು. ಸುಶೀಲೆಗೆ ನಾಲ್ಕು ತಿಂಗಳಾಗಿತ್ತು. ಗಂಡನ

ಅತ್ಯಾಚಾರದಿಂದ ಅವಳೂ ನರಳುತ್ತಿದ್ದಳು! ಕಿರುಚಿಕೊಂಡು ಕೆಳಗೆ ಬಿದ್ದಳು. ಏಟು ಹೊಟ್ಟೆಗೆ ಬಿದ್ದಿತು. ಕತ್ತು ಅದುಮಿ ಅವಳ ಕೊರಳಿನ ಸರವನ್ನು ತೆಗೆದುಕೊಂಡು ಓಡಿಹೋದನು. ಊರಿಗೆ ಬರುವಹೊತ್ತಿಗೆ ಗರ್ಭಪಾತವಾಗಿ ಸುಶೀಲೆಯ ದೇಹ ಬೂದಿಯಾಗಿತ್ತು! ಊರಿನವರ ಕಣ್ಣಿಗೆ ಮಣ್ಣೆರಚಿ ತಾಯಿತಂದೆ ಸುದ್ದಿ ಮುಚ್ಚಿಟ್ಟರು. ಮಗನು ಊರಿನಲ್ಲಿ ಇಲ್ಲದಿರುವುದಕ್ಕೆ ಕಥೆ ಕಟ್ಟಿ, ಎಲ್ಲರನ್ನೂ ನಂಬಿಸಲು ಒಂದು ನಾಟಕವನ್ನೇ ಆಡಿದರು. ಆದರೆ ಸುಶೀಲ....ಷಂಡನಾಗೆಂದು, ಮಕ್ಕಳೇ ಇಲ್ಲದೆ ಹೋಗಲಿ ಎಂದು ಗಂಡನನ್ನು ಶಪಿಸಿ ಸತ್ತಿದ್ದಳು. ರಾಮಚಂದ್ರಯ್ಯ ಗೋಳಾಡಿದನು....ಆಮೇಲೆ ಇನ್ನೊಬ್ಬ ಹೆಂಡತಿಯಲ್ಲಿ ತನಗೆ ಸತ್ತುಹುಟ್ಟಿದ ಶಾಪದ ಮಕ್ಕಳು....ಒಂದು, ಆರು ತಿಂಗಳಿಗೆ ಹುಟ್ಟಿದ ಮಗುವಿಗೆ, ಮೈಯೆಲ್ಲ ಹುಣ್ಣು, ಕಣ್ಣೇ ಇರಲಿಲ್ಲ.... ಮತ್ತೊಂದು ಎಂಟು ತಿಂಗಳ ಮಗು, ಕಾಲುಗಳೇ ಇಲ್ಲದ, ಮೂಗೇ ಇಲ್ಲದ ವಿಕೃತವಾದ, ಘೋರವಾದ ಆ ಹೆಣ್ಣು ಮಗು!

"ಅಯ್ಯೋ...........ಪಾಪಿ........" ಎಂದು ಯಾರೋ ಅವನ ಮುಖಕ್ಕೆ ಹೊಡೆದ ಹಾಗಾಯಿತು! "ಅಯ್ಯೋ........ನನ್ನನ್ನು ಏಕೆ ಕೊಂದಿರಿ?" ಎಂದು ಗೋಳಾಡಿದಂತಾಯಿತು.

ಅವನು "ಸುಶೀಲಾ.... ಸುಶೀಲಾ..... ಬೇಡ.... ಹೋಗು.... ಹೋಗು" ಎಂದು ಕೂಗಿಕೊಂಡು ಕಣ್ಣುಬಿಟ್ಟನು. ಎಲ್ಲೆಲ್ಲೂ ಅಂಧಕಾರ. ಬಿಳಿ ಸೀರೆಯುಟ್ಟ ಯಾರೋ ಹೆಂಗಸು ಓಡಿಹೋದ ಹಾಗಾಯಿತು! ಹೆಣ್ಣು ಧ್ವನಿಯೊಂದು ಗಹಗಹಿಸಿ ನಕ್ಕು, ನೀರಿನೊಳಗೆ ಧಡಾರನೆ ಧುಮುಕಿದ ಹಾಗಾಯಿತು. ಅವನ ಮೈ ಬೆವತಿತು. ಪ್ರಾಣ ಗಂಟಲಿನೊಳಗೆ ಸಿಕ್ಕಿಕೊಂಡಂತಾಯಿತು. ರಾಮಚಂದ್ರಯ್ಯ ಒಂದೇ ಉಸಿರಿಗೆ ಆ ಗುಡ್ಡಗಾಡಿನಲ್ಲಿ ಬೀಳುವುದನ್ನೂ, ಏಳುವುದನ್ನೂ ಲೆಕ್ಕಿಸದೆ ಓಡಿದನು. ಎದೆ ಹೆದರಿದ ಪಾರಿವಾಳದಂತೆ ತುಡಿಯುತ್ತಿದ್ದಿತು. ಓಡಿ ಬರುವಾಗ ಕಣ್ಣುಕತ್ತಲೆ ಕಟ್ಟಿಕೊಂಡು ಒಂದು ಕಲ್ಲು ಎಡವಿಬಿದ್ದು ಹಣೆಯೊಡೆದು ರಕ್ತ ಬಂದಿತು. ಉಟ್ಟ ಬಟ್ಟೆಯೆಲ್ಲ ಚಿಂದಿಚಿಂದಿಯಾಯಿತು. ರಾಮಚಂದ್ರಯ್ಯ ಯಾವುದನ್ನೂ ಲೆಕ್ಕಿಸದೆ ಓಡಿಬಂದನು.

ಊರಿನೊಳಗೆ ಬರುತ್ತಿರುವಂತೆ ಬೀದಿಯ ನಾಯಿಗಳು ಬೊಗಳಿದುವು. ಒಂದು ನಾಯಿ ಅಟ್ಟಿಸಿಕೊಂಡು ಬಂದಿತು. ಅದು ಹತ್ತಿರ ಬಂದ ತಕ್ಷಣ ಅವನು ಅದನ್ನು ಬಲವಾಗಿ ಒದ್ದನು! ಆ ನಾಯಿ ಆರ್ತಸ್ವರದಿಂದ ಕುಂಯ್‌ಗುಡುತ್ತ ಓಡಿಹೋಯಿತು. ರಾಮಚಂದ್ರಯ್ಯ ಮತ್ತೂ ವೇಗವಾಗಿ ಓಡಿದನು.

ಅವನು ಮನೆಗೆ ಬರುವ ಹೊತ್ತಿಗೆ ದೊಡ್ಡ ರಾದ್ಧಾಂತ ನಡೆದು ಹೋಗಿದ್ದಿತು. ಮೀನಾಕ್ಷಿ ಕೊಠಡಿಯ ಬಾಗಿಲು ಹಾಕಿತ್ತು. ಒಳಗೆ 'ಬಾಲಚಂದ್ರ' ಒಂದೇ ಸಮನೆ ಅಳುತ್ತಿದ್ದನು. ಊಟಕ್ಕೆ ಏಳಿಸಲು ಬಂದ ಸುಬ್ಬಮ್ಮನವರು, "ಮಿನಾಕ್ಷೀ, ಮೀನಾ....ಬಾಗಿಲು ತೆಗೆಯೇ. ಊಟ ಮಾಡಿ ಮಲಗಿಕೋ. ಮೀನಾ......ಮೀನಾ.....ಬಾಗಿಲು ತೆಗೆಯೇ" ಎಂದು ತಪತಪನೆ ಬಾಗಿಲು ಬಡಿಯುತ್ತಿದ್ದರು. ಆದರೂ ಒಳಗಿನಿಂದ ಉತ್ತರವೇ ಬಂದಿರಲಿಲ್ಲ. ಮಗುವಿನ ಅಳು ಕರ್ಕಶವಾಗಿ ಕೇಳುತ್ತಿದ್ದಿತು.

ರಾಮಚಂದ್ರಯ್ಯ ಹುಚ್ಚನಂತೆ "ಮೀನಾ .....ಮೀನಾ...." ಎಂದು ಹೊರಬಾಗಿಲಲ್ಲಿ ನಿಂತು ಬಾಗಿಲು ಬಡಿದು ಕೂಗಿಕೊಂಡನು. ಸುಬ್ಬಮ್ಮನವರು ಸರ್ರನೆ ಹೋಗಿ ಬಾಗಿಲು ತೆಗೆದರು. ಹುಚ್ಚನಂತೆ ಒಳಗೆ ನುಗ್ಗಿ ಬಂದ ಅವನನ್ನು ನೋಡಿ ಅವರಿಗೆ ಮೈ ನಡುಗಿತು. ಹಣೆಯೆಲ್ಲ ರಕ್ತ. ಬಟ್ಟೆಯೆಲ್ಲ ರಕ್ತ. ಅವನು "ಮೀನಾ, ಮೀನಾ...." ಎಂದು ಕೂಗಿಕೊಂಡು ಮೈಮೇಲೆ ಪರಿವೆಯಿಲ್ಲದೆ ಮೀನಾಕ್ಷಿಯ ಕೊಠಡಿಯ ಕಡೆಗೆ ನುಗ್ಗಿದನು. ಸುಬ್ಬಮ್ಮನವರು ಹೆದರಿಕೊಂಡು ಹಿಂದಕ್ಕೆ ಜಿಗಿದುನಿಂತರು. ರಾಮಚಂದ್ರಯ್ಯ "ಮೀನಾ....ಮೀನಾಕ್ಷೀೀ........ಬಾಗಿಲು ತೆಗೀ.... ....ನಾನು ರಾಮಚಂದ್ರಯ್ಯ" ಎಂದು ಒಂದೇ ಸಮನೆ ಬಾಗಿಲು ಬಡಿದನು. ಬಾಗಿಲಿಗೆ ತಲೆ ಚಚ್ಚಿಕೊಂಡನು. ಒಳಗಿನಿಂದ ಉತ್ತರವೇ ಬರಲಿಲ್ಲ. ಯಾವಾಗ ಮೀನಾಕ್ಷಿ ಬಾಗಿಲು ತೆಗೆಯುವಳು. 'ಯಾವಾಗ ತನ್ನ ಪಾಪಮಯ ಜೀವನದ ಕಥೆಯನ್ನು ಅವಳಿಗೆ ಹೇಳಿ ಅವಳ ಕ್ಷಮೆಯನ್ನು ಕೇಳಿಕೊಂಡೇನು' ಎಂದು ಅವನ ಹೃದಯ ತಲ್ಲಣಿಸಿತು. ಉತ್ತರ ಬರದಿರಲು ಮತ್ತೆ "ಮೀನಾ........ಬಾಗಿಲು ತೆಗೀ.........ನಾನು

ರಾಮಚಂದ್ರಯ್ಯ" ಎಂದು ಬಾಗಿಲಿಗೆ ತಲೆ ಚಚ್ಚಿಕೊಂಡನು. ರಕ್ತ ಚಿಮ್ಮಿ ನೆಲದ ಮೇಲೆ ಚೆಲ್ಲಾಡಿತು. ಮಗುವಿನ ರೋದನ ಧ್ವನಿ ಕೇಳಿ ಅವನ ಮೈ ಕಂಪಿಸಿತು. ಮೈಯ್ಯಲ್ಲಿ ಕೋಪದಿಂದ ರಕ್ತ ಕುದಿದು ಹಣೆಯಿಂದ ರಕ್ತ ಬಳಬಳನೆ ಉಕ್ಕಿ ಮುಖದಮೇಲೆ ಹರಿಯಿತು. ಕಣ್ಣುಗಳು ರಕ್ತದಿಂದ ತೊಯ್ದುವು. ಸೇಡಿನ ಬೆಂಕಿ ಮೈ. ಸುಟ್ಟಿತು. ಪಶ್ಚಾತ್ತಾಪ ಹೃದಯವನ್ನು ದಹಿಸುತ್ತಿದ್ದಿತು. ಅವನು ಎರಡರ ಹೊಡೆತವನ್ನೂ ತಡೆಯಲಾರದೆ ಜ್ಞಾನತಪ್ಪಿ ನೆಲದ ಮೇಲೆ ಬಿದ್ದು ಬಿಟ್ಟನು.

ಸುಬ್ಬಮ್ಮನವರು ಬೀದಿಗೋಡಿ ಬಾಯಿ ಬಡಿದುಕೊಂಡರು. ಐಯ್ಯಂಗಾರರು, ಅವರ ಹೆಂಡತಿ, ಮಕ್ಕಳು, ಲಕ್ಷ್ಮಮ್ಮನವರು ಎಲ್ಲಾ ಓಡಿಬಂದರು. ಮೊದಲಿಯಾರರ ಮನೆಯ ಗಂಡಸರೂ ಓಡಿ ಬಂದರು. ಸುಬ್ಬಮ್ಮನವರು ಅವರಿಗೆ ನಡುಗುತ್ತ ವಿಷಯವನ್ನೆಲ್ಲ ತಿಳಿಸಿ, "ಅಯ್ಯೋ ನನ್ನ ಮಗಳನ್ನು ಬದುಕಿಸಿರಪ್ಪಾ, ಅವಳಿಗೆ ಏನೋ ಆಗಿಹೋಗಿದೆ." ಎಂದು ಬೊಬ್ಬೆಯಿಟ್ಟರು. ತಲೆತಲೆ ಚಚ್ಚಿಕೊಂಡರು.

ಗಂಡಸರೆಲ್ಲ ಸೇರಿ ಕೊಡಲಿಯಿಂದ ಕೊಠಡಿಯ ಬಾಗಿಲು ಒಡೆದರು. ಆ ಶಬ್ದಕ್ಕೆ ಬಾಲಚಂದ್ರ ಕಿಟಾರನೆ ಕಿರುಚಿಕೊಂಡು ಉಸಿರು ಕಟ್ಟಿ ಅತ್ತನು. ಬಾಗಿಲು ಮುರಿದು ಧಡಾರನೆ ತೆರೆದುಕೊಂಡಿತು. ಎಲ್ಲರಿಗಿಂತ ಮುಂದಾಗಿ ಸುಬ್ಬಮ್ಮನವರು ಒಂದೇ ಏಟಿಗೆ ಒಳಗೆ ನುಗ್ಗಿ ಮಗುವನ್ನು ಎತ್ತಿಕೊಂಡರು. ಗಾಬರಿಯಲ್ಲಿ ಸುಬ್ಬಮ್ಮನವರು ಬೆಡ್ ಶೀಟ್ ಎಳೆದರು. ಮಂಚದ ತುದಿಯಲ್ಲಿ ಪಕ್ಕಕ್ಕೆ ತಿರುಗಿಕೊಂಡು ಮಲಗಿದ್ದ ಮೀನಾಕ್ಷಿಯ ಹೆಣ ಕೆಳಗೆ ಬಿದ್ದು ಮುಖ ಮೇಲಾಯಿತು. ಒಳಗೆ ನುಗ್ಗಿದ್ದವರೆಲ್ಲ ಹೆಣದ ವಿಕಾರವಾದ ಮುಖವನ್ನು ನೋಡಿ ಕಿರುಚಿಕೊಂಡು ಹಿಂದಕ್ಕೆ ನೆಗೆದರು. "ಅಯ್ಯೋ ಹೋಗಿಬಿಟ್ಟೆಯಾ ಮೀನಾಕ್ಷೀ..." ಎಂದು ಸುಬ್ಬಮ್ಮನವರು ಘಟ್ಟಿಯಾಗಿ ಕಿರುಚಿಕೊಂಡು, ಬಾಯಿ ಬಡಿದುಕೊಂಡು ಹೊರಕ್ಕೆ ಓಡಿದರು. ಟೇಬಲ್ಲಿನ ಮೇಲೆ ದೊಡ್ಡ ಚಂದ್ರದ ಸೀಸೆಯಿದ್ದಿತು. ಪಕ್ಕದಲ್ಲೇ ಒಂದು ಗ್ಲಾಸಿನ ತುಂಬ ಚಂದ್ರ ಅಂಟಿಕೊಂಡಿದ್ದಿತು. ಮೀನಾಕ್ಷಿಯ ಬಾಯೆಲ್ಲ ಮುಖವೆಲ್ಲ

ಚಂದ್ರಮಯವಾಗಿದ್ದಿತು. ಪಕ್ಕದ ಮನೆಯಾತ ಏನಾಗಿದೆಯೆಂದು ಊಹಿಸಿದರು. ಸರ್ರನೆ ಹೋಗಿ ಪೋಲೀಸರಿಗೆ ಸುದ್ದಿ ತಿಳಿಸಿದರು ಮತ್ತೊಬ್ಬರು ರಾಮಚಂದ್ರಯ್ಯನ ತಲೆಗೆ ನೀರು ತಟ್ಟಿ, ಘಾಯ ತೊಳೆದು ಮದ್ದು ಹಾಕಿದರು.

ಪೋಲೀಸಿನವರು ಬರುವ ವೇಳೆಗೆ ರಾಮಚಂದ್ರಯ್ಯ ಸುಧಾರಿಸಿ ಕೊಂಡಿದ್ದನು. ಮನೆ ಸುಬ್ಬಮ್ಮನವರ ರೋದನದಿಂದ ತುಂಬಿ ಹೋಗಿ ದ್ದಿತು. ರಾಮಚಂದ್ರಯ್ಯ ಗರ ಹೊಡೆದವನಂತೆ, ದೆಯ್ಯ ಬಡಿದ ವನಂತೆ ಮೂಕನಾಗಿ, ಮಂಕನಾಗಿ, ಮೀನಳ ಕೊಠಡಿಯ ಬಾಗಿಲ ಬಳಿ ಕುಳಿತು ಬಿಟ್ಟಿದ್ದನು. ಅರಳಿದ ಬಿರುಗಣ್ಣೋಟ ಎಲ್ಲೋ ನೆಟ್ಟು ಹೋಗಿದ್ದಿತು. ಇಲ್ಲಿ ನಡೆಯುತ್ತಿರುವ ವ್ಯವಹಾರದ ಮೇಲೆ ಕೊಂಚವೂ ಗಮನವಿದ್ದಂತೆ ತೋರಲಿಲ್ಲ. ಅವನು ನಿಜವಾಗಿ ಹುಚ್ಚನಾಗಿದ್ದನು ಮೀನಳ ಅನಿರೀಕ್ಷಿತ, ಘೋರವಾದ ಸಾವು ಅವನ ಬುದ್ಧಿಪಲ್ಲಟ ಮಾಡಿದ್ದಿತು. ಪೋಲೀಸಿನವರು ಮನೆಯೊಳಕ್ಕೆ ಬಂದು ಹೆಣವನ್ನು ತಮ್ಮ ಸುಫರ್ದಿಗೆ ತೆಗೆದುಕೊಂಡು ವಿಚಾರಣೆ ನಡೆಸಿದರು. ರಾಮ ಚಂದ್ರಯ್ಯ ಏನೂ ಹೇಳಿಕೆ ಕೊಡದಾದನು. ಭ್ರಮಿಷ್ಠನಂತೆ ಆಡಿದನು. ಹುಚ್ಚು ನಗೆ ನಕ್ಕನು. ಸುಬ್ಬಮ್ಮನವರು ತಮಗೆ ತಿಳಿದಷ್ಟನ್ನು ರೋದಿಸುತ್ತ ಹೇಳಿದರು. ಮಾರನೆಯ ದಿನ ಬೆಳಗ್ಗೆ ಮಹಜರು ಕ್ರಮ ಜರುಗಿತು. ಮೀನಾಕ್ಷಿಯ ಮುಷ್ಟಿಯಲ್ಲಿ ಒಂದು ಕಾಗದ ಸಿಕ್ಕಿತು.

"ಜೀವನದಲ್ಲಿ ಅತಿ ಘೋರವಾದ ತಪ್ಪು ಮಾಡಿ ನನ್ನ ಸ್ವಂತ ಇಚ್ಛೆಯ ಮೇಲೆ ವಿಷತಿಂದು ಸತ್ತಿದ್ದೇನೆ. ಆ ತಪ್ಪು ನಿಮ ಗಾರಿಗೂ ತಿಳಿಯುವಂತಿಲ್ಲ. ತಿಳಿಯಲು ಪ್ರಯತ್ನಿಸಿದರೆ ಈ ಜನ್ಮದಲ್ಲಿ ನಿಮಗೆ ಅದು ತಿಳಿಯುವಂತಿಲ್ಲ. ಇಷ್ಟು ಹೇಳಬಲ್ಲೆ. ನಾನು ಪಾಪಿ. ದೈವ ನನಗೆ ಮೋಸ ಮಾಡಿತು. ದೈವವನ್ನು, ನನ್ನ ಅಂತರಾತ್ಮವನ್ನು ಎದುರಿಸಿ ಹೋರಾಡುವಷ್ಟು ಆತ್ಮಬಲ ನನ್ನಲ್ಲಿಲ್ಲದೇ ಹೋಯಿತು. ಆದ್ದರಿಂದ ನಾನು ಆತ್ಮಹತ್ಯ

ಮಾಡಿಕೊಳ್ಳುತ್ತಿದ್ದೇನೆ. ನನ್ನ ಆತ್ಮಹತ್ಯೆಗೆ ಕಾಯಾ, ವಾಚಾ, ಮನಸಾ ನನ್ನವರಾರೂ ಕಾರಣರಲ್ಲ. ಇದು ನನ್ನ ಮುದ್ದು ಮಗುವಿನಾಣೆಗೂ ಸತ್ಯ. ನನ್ನದು ಒಂದು ಕಡೆಯ ಆಸೆ. ನನ್ನ ಮಗುವನ್ನು ನನ್ನ ತಾಯಿ ಕರೆದುಕೊಂಡು ಹೋಗಲಿ. ಆ ಮಗು ನನ್ನ ತಾಯಿಯ ಮನೆಗೇ ಹೋಗಬೇಕು. ಅಲ್ಲಿ ಬೆಳೆಯಬೇಕು. ಇದಕ್ಕೆ ನನ್ನವರ ಅನುಮತಿಯನ್ನು ಬೇಡು ತ್ತೇನೆ. ಹಾಗೆ ಮಾಡದಿದ್ದಲ್ಲಿ ನನ್ನ ಆತ್ಮಕ್ಕೆ ತೃಪ್ತಿಯಾಗ ಲಾರದು. ಇದೇ ನನ್ನ ಕಡೆಯ ಬೇಡಿಕೆ."

ಮೀನಾಕ್ಷಿ

ಅವರ ಅದೃಷ್ಟಕ್ಕೆ ಸರಿಯಾಗಿ ಅಕಸ್ಮಾತ್ತು ಐ. ಜಿ. ಪಿ. ಸಾಹೇಬರೂ ಗೇರುಸೊಪ್ಪೆಗೆ ಪ್ರವಾಸ ಬಂದಿದ್ದರು. ಅವರೂ ಕುತೂಹಲದಿಂದ ಬಂದು ಕೇಸನ್ನು ಪರಿಶೀಲಿಸಿದರು. ಅದು ಆತ್ಮಹತ್ಯವೆನ್ನುವುದು ನಿರ್ವಿವಾದವಾಗಿದ್ದಿತು. ಬೇಕಾದಷ್ಟು ಸಾಕ್ಷ್ಯಗಳೂ ದೊರೆತವು. ಡಾಕ್ಟರು ಮೀನಾಕ್ಷಿಯ ಬಾಯಿ ಬಿಡಿಸಿ ಪರೀಕ್ಷಿಸಿದರು. ಇನ್ಸ್‌ಪೆಕ್ಟರಿಗೆ, "ಈಕೆ ಚಂದ್ರದ ಜೊತೆಗೆ ಇಲಿಯ ಪಾಷಾಣವನ್ನೂ ತಿಂದಿದ್ದಾರೆ" ಎಂದು ಹೇಳಿಕೆ ಕೊಟ್ಟರು. ಸತ್ತುಹೋಗಬೇಕೆಂಬ ಆತುರದಲ್ಲಿ ಮೀನಾಕ್ಷಿ ತನ್ನ ಕೈಗೆ ಸಿಕ್ಕಿದ ವಿಷವನ್ನೆಲ್ಲ ತಿಂದಿದ್ದಳು. ಚಂದ್ರವನ್ನು ಕದಡಿ ಕುಡಿದಿದ್ದಳು.

ನಂತರ ಮೀನಾಕ್ಷಿಯ ಶವ ರಾಮಚಂದ್ರಯ್ಯನಿಗೆ ವಹಿಸಲ್ಪಟ್ಟಿತು.

ರಾಮಚಂದ್ರಯ್ಯ ಗರಬಡೆದವನಂತೆ ಕುಳಿತಿದ್ದನು. ಮೀನಾಕ್ಷಿಯನ್ನು ನೋಡಿ ಅವನು ಅಳಲಿಲ್ಲ. ಬದಲು ಅವನ ಮುಖ ಗಂಭೀರವಾಯಿತು. ಎದ್ದು ಹೋಗಿ "ಮೀನಾ ........ ಮೀನಾ" ಎಂದು ಅಕ್ಕರೆಯಿಂದ ಕರೆದು, ಅವಳ ಮೈಮುಟ್ಟಿ ಕಣ್ಣಿಗೊತ್ತಿಕೊಂಡನು. ಒಳಗೆ ಹೋಗಿ ಪಂಚಪಾಳೆ ತಂದು, ಮೀನಾಕ್ಷಿಯ ಹಣೆಯ ತುಂಬ ಕುಂಕುಮವನ್ನಿಟ್ಟನು. ಕೆನ್ನೆಗಳಿಗೆ ಅರಶಿನ ತಡವಿದನು. ಯಾರೋ ಹೂವು ತಂದುಕೊಟ್ಟರು. ಅದನ್ನು ಅವಳ ತುರುಬಿಗೆ

ಮುಡಿಸಿದನು. ದೇವರ ಬಳಿಯ ಗಂಧದ ಬಟ್ಟಲಿನಲ್ಲಿದ್ದ ಗಂಧವನ್ನು ಅವಳ ಮಂಜಿನ ದೇಹದ ಮೇಲೆ ಚಿಮುಕಿಸಿದನು. ಕಾವಾರಿದ ಕೆನ್ನೆಗಳಿಗೆ ಅಕ್ಕರೆಯಿಂದ ಗಂಧ ತಡವಿ, ಮೀನಳನ್ನೊಮ್ಮೆ ದಿಟ್ಟಿಸಿ ನೋಡಿ ಭಯಂಕರವಾಗಿ ನಕ್ಕನು. ಮುಖದ ಮೇಲೆ ಬಾಗಿ ಅವಳ ಹಣೆಯ ಮೇಲೆ ಮುತ್ತಿಟ್ಟನು.

ನಾಲ್ಕರಲ್ಲಿ ಒಬ್ಬನಾಗಿ ರಾಮಚಂದ್ರಯ್ಯ ಮೀನಾಕ್ಷಿಯ ಹೆಣವನ್ನು ಸ್ಮಶಾನಕ್ಕೆ ಹೊತ್ತುಕೊಂಡು ಹೋದನು. ಕಂಬನಿಗರೆಯದೆ, ಅವಳ ದೇಹಕ್ಕೆ ಬೆಂಕಿ ತಗುಲಿಸಿದನು. ಅನನ ಮುದ್ದಿನ ಮೀನಳ ಸುಂದರ ದೇಹ ಧಗಧಗನೆ ಹತ್ತಿಕೊಂಡು ಉರಿಯಿತು. ಅವನು ಬೆರೆಗುಗಣ್ಣುಗಳಿಂದ ಆ ಜ್ವಾಲೆಯನ್ನೇ ನೋಡುತ್ತ ನಿಂತುಬಿಟ್ಟನು. ಪಶ್ಚಾತ್ತಾಪದ ಬೇಗೆಯಿಂದ ಬಳಲಿ ಬಳಲಿ ಕಾಷ್ಟವಾಗಿದ್ದ ದೇಹ ಕರಗಲೆಯಂತೆ ಉರಿದು ಹೋಯಿತು. ಅವನು ಒಂದೇ ಒಂದು ಬಾರಿ ವಿಕಟವಾಗಿ ನಕ್ಕನು. "ಅಯ್ಯೋ, ಮೀನಾ........ಹೋಗಿಬಿಟ್ಟೆಯಾ" ಎಂದು ವಿಕಾರವಾಗಿ ಅರಚಿ ಜ್ಞಾನತಪ್ಪಿ ಬಿದ್ದುಬಿಟ್ಟನು. ಪಕ್ಕದ ಮನೆಯಾತ ತಲೆಗೆ ನೀರು ತಟ್ಟಿ ಶುಶ್ರೂಷೆ ಮಾಡಿದರು. ಅವನು ಸುಧಾರಿಸಿಕೊಳ್ಳುವ ಹೊತ್ತಿಗೆ ಮೀನಳ ದೇಹ ಉರಿದು ಬೂದಿಯಾಗಿತ್ತು.

ಮಧ್ಯಾಹ್ನ ರಾಮಚಂದ್ರಯ್ಯ ಮನೆಗೆ ಬಂದನು. ಸುಬ್ಬಮ್ಮನವರು ಯಾವುದೋ ಪ್ರವೃತ್ತಿಯ ಎಚ್ಚರಿಕೆಯಿಂದ ಮಗುವನ್ನು ಅವನ ಕಣ್ಣಿಂದ ಮರೆಯಾಗಿರಿಸಿದ್ದರು. ಅವನು ನೇರವಾಗಿ ಮೀನಾಕ್ಷಿಯ ಕೊಠಡಿಗೆ ಹೋದನು. ಕೊಠಡಿಯನ್ನೆಲ್ಲ ಶೋಧಿಸಿ ಹೊರಗೆ ಬಂದನು. ಮತ್ತೆ ಪೋಲೀಸ್ ಇನ್ಸ್‌ಪೆಕ್ಟರರ ಮನೆಗೆ ಹೋಗಿ ಅವರೊಡನೆ ಏಕಾಂತದಲ್ಲಿ ಒಂದು ಹೇಳಿಕೆ ಕೊಟ್ಟನು. ಆ ಹೇಳಿಕೆ ಅನನ ಆತ್ಮ ಅವಹೇಳನವಾಗಿದ್ದಿತು. ಮೀನಾಕ್ಷಿಯ ಮೇಲೆ ಅಪವಾದ ಬರದಂತೆ, ಅವಳನ್ನು ಪರಿಶುದ್ಧಳನ್ನಾಗಿಮಾಡಿ, ಅವನು ತನ್ನ ಆತ್ಮಕಥೆಯನ್ನು ಹೇಳಿಕೊಂಡನು. ಇನ್ಸ್‌ಪೆಕ್ಟರರು ಅವನ ಕಥೆ ಕೇಳಿ ಕಣ್ಣೀರಿಟ್ಟರು. "ನಾನು ಪಾಪಿ.........ಅವಳು ದೇವತೆ ........ ನಾನು ಅವಳಿಗೆ ಮೋಸ

ಮಾಡಿದೆ........ಅವಳ ಮೇಲೆ ಅತ್ಯಾಚಾರ ನಡೆಸಿದೆ. ಅವಳ ಬಾಳನ್ನು ಹಾಳುಮಾಡಿದೆ" ಎಂದು ಕಣ್ಣೀರಿಟ್ಟು ಮನೆಗೆ ಬಂದನು. ಅವನ ಹೃದಯ ಹಗುರವಾಯಿತು.

ಮಾರನೆಯ ದಿನ ಬೆಳಗ್ಗೆ ಅವನು ಎಂದಿನಂತೆ ಆಫೀಸಿಗೆ ಹೋದನು. ಸುಬ್ಬಮ್ಮನವರು ಬಾಲಚಂದ್ರನಿಗೆ ಹಾಲು ಹಾಕುತ್ತಿದ್ದರು. ಐದು ತಿಂಗಳ ಬಾಲು, ಅಜ್ಜಿಯ ಮುಖ ನೋಡಿ ಮುದ್ದಾಗಿ ನಗುತ್ತಿದ್ದನು. ಅವರು ಕರ್ಪೂರದ ಬೊಂಬೆಯನ್ನು ಅವನ ಮುಖದ ಬಳಿ ಹಿಡಿದು ಅವನನ್ನು ನಗಿಸುತ್ತಿದ್ದರು. ಪುಟ್ಟ ಕೈಗಳಿಂದ ಬಾಲು ಆ ಬೊಂಬೆಯನ್ನು ಆತುಕೊಳ್ಳಲು ಕೈ ನೀಡುತ್ತಿದ್ದನು. ಆ ಬೊಂಬೆಯನ್ನು ನೋಡಿ ಸುಬ್ಬಮ್ಮನವರಿಗೆ ಹಿಂದಿನ ನೆನಪು ಮರುಕಳಿಸಿತು. ಕಣ್ಣೀರು ಕೋಡಿ ಹರಿಯಿತು. ಶೂನ್ಯದೃಷ್ಟಿಯನ್ನು ಮೀನಳ ಕೊಠಡಿಯ ಕಡೆ ಹರಿಸಿದರು. ಮೀನಳಿಗಾಗಿ ಅವರ ಕಣ್ಣು ತಡಕಾಡಿತು. 'ಮೀನಾ ಎಲ್ಲಿ........ಅಯ್ಯೋ, ಮೀನಾ. ನಮ್ಮನ್ನು ಬಿಟ್ಟು ಹೋಗಿಬಿಟ್ಟೆಯಾ ತಾಯಿ. ನಿನ್ನ ಮುದ್ದು ಮಗುವನ್ನು ಬಿಟ್ಟುಹೋದೆಯಾಮ್ಮಾ........ನಿನಗೇನು ಅಂಥ ಕಷ್ಟ ಬಂದಿದ್ದಿತೇ........ಅಯ್ಯೋ, ಎಲ್ಲಾ ನನ್ನ ತಪ್ಪು........' ಎಂದು ಬಿಕ್ಕಿಬಿಕ್ಕಿ ಅತ್ತರು.

ಅವರ ಜೀವನದಲ್ಲಿ ಮೊದಲನೆಯ ಬಾರಿ ಅವರಿಗೆ ನಿಜವಾದ ಪಶ್ಚಾತ್ತಾಪವಾಯಿತು. ಮೀನಳ ಬಾಳಿನ ಮೇಲೆ ತಾವು ನಡೆಸಿದ ಅನ್ಯಾಯ ನೆನಪಾಯಿತು 'ಚಿನ್ನದಂಥ ಮಗು........ಈ ಮುದುಕನ ಕೈಯಲ್ಲಿಟ್ಟೆ........ಹೆತ್ತ ಮಗಳು, ಸಾಕಿದ ಮಗಳು ಅಂತ ಭೇದಮಾಡಿ ಕಟ್ಟೆ........ಮೀನಾಕ್ಷಿಯನ್ನು ಚಂದ್ರುವಿಗೇ ಮದುವೆ ಮಾಡಿ ಕೊಟ್ಟಿದ್ದರೆ........ಅವರಿಬ್ಬರಿಗೂ ಎಂತಹ ಪ್ರೀತಿ. ನನ್ನ ಮಗಳೂ ಸುಖವಾಗಿರುತ್ತಿದ್ದಳು. ಮೀನಾಕ್ಷಿಯೂ ಸುಖವಾಗಿರುತ್ತಿದ್ದಳು. ........ ಎಂಥಾ ಕೆಲಸ ಮಾಡಿದೆ....ಮೀನಾಕ್ಷಿಯನ್ನು ಕೈಯಾರ ಕೊಂದೆ........' ಎಂದು ಸುಬ್ಬಮ್ಮನವರು ಕಣ್ಣೀರು ಮಿಡಿದು, ಬಾಲುವನ್ನು ದಿಟ್ಟಿಸಿ ನೋಡಿದರು. ಅವನು ಕಣ್ಣರಳಿಸಿ ಕರ್ಪೂರದ ಬೊಂಬೆಯನ್ನೇ ನೋಡಿ ಕೇಕೆ ಹಾಕಿಕೊಂಡು ನಗುತ್ತಿದ್ದನು. "ಅಂಂಂ....ಊಂಂಂ........"

ಎಂದು ಮುದ್ದಾಗಿ ಕೂಗುತ್ತಿದ್ದನು.

ರಾಮಚಂದ್ರಯ್ಯ ಎರಡು ಘಂಟೆಯಾದರೂ ಊಟಕ್ಕೆ ಬರಲಿಲ್ಲ. ಸುಬ್ಬಮ್ಮನವರಿಗೆ ಹೊಟ್ಟೆಯ ಸಂಕಟ ತಡೆಯಲಾಗಲಿಲ್ಲ. ಐಯ್ಯಂಗಾರರ ಮನೆ ಹುಡುಗನೊಡನೆ ಆಫೀಸಿಗೇ ಊಟ ಕಳುಹಿಸಿದರು. ಊಟ ಹಾಗೆಯೇ ಹಿಂದಕ್ಕೆ ಬಂದಿತು. ಮನೆಗೇ ಬಂದು ಊಟ ಮಾಡುವೆನೆಂದು ಹೇಳಿಕಳುಹಿಸಿದ್ದನು.

ಸಾಯಂಕಾಲದ ಹೊತ್ತಿಗೆ ಆಫೀಸಿನ ಆಳು ಸುಬ್ಬಮ್ಮನವರ ಕೈಗೆ ಒಂದು ದೊಡ್ಡ ಲಕ್ಕೋಟೆಯನ್ನು ತಂದುಕೊಟ್ಟು "ಅವ್ವಾ, ಇದನ್ನ ನಿಮ್ಮ ಕೈಗೆ ಕೊಡಹೇಳಿದ್ರು ಬುದ್ಧ್ಯೋರು. ಕಾಗ್ದ ಒಡ್ದು ನೋಡ್ಕೋಬೇಕಂತೆ" ಎಂದು ಹೇಳಿ ಹೋದನು. ಸುಬ್ಬಮ್ಮನವರು ನಡಗುವ ಕೈಗಳಿಂದ ಅದನ್ನು ತೆಗೆದುಕೊಂಡರು. ಅವರಿಗೆ ಏನೂ ಅರ್ಥವಾಗಲಿಲ್ಲ. ಸುಬ್ಬಮ್ಮನವರು ಲಕ್ಕೋಟೆಯನ್ನು ಒಡೆದರು. ಒಳಗೆ ನೂರು ರೂಪಾಯಿಗಳ ಐದು ನೋಟುಗಳಿದ್ದುವು. ಅವರಿಗೆ ಆಶ್ಚರ್ಯವಾಯಿತು. ಅದರ ಜೊತೆ ಒಂದು ಕಾಗದವಿತ್ತು. ಸಾಯಂಕಾಲ ಐಯ್ಯಂಗಾರರ ಮನೆಯ ಹುಡುಗ ಸ್ಕೂಲಿನಿಂದ ಬಂದಮೇಲೆ ಓದಿಸಿಕೊಳ್ಳಬೇಕೆಂದು ಸುಮ್ಮನಾದರು.

ಆಳು ಹೋದ ಕೊಂಚ ಹೊತ್ತಿಗೇ ಊರಿಗೆಲ್ಲ ಕಾಳ್ಗಿಚ್ಚಿನಂತೆ ಸಿಡಿಲು ಸುದ್ದಿ ಹಬ್ಬಿತು, ಸ್ಟೋರ್‌ಕೀಪರ್ ರಾಮಚಂದ್ರಯ್ಯ ವಿದ್ಯುಚ್ಛಕ್ತಿಯ ತಂತಿ ಹಿಡಿದುಕೊಂಡು ಆತ್ಮಹತ್ಯೆ ಮಾಡಿಕೊಂಡರೆಂದು ! ಪಕ್ಕದ ಮನೆಯಾಕೆ ಸುದ್ದಿ ತಿಳಿಸಿದರು. ಸುಬ್ಬಮ್ಮನವರ ಎದೆಗೆ ಬರಸಿಡಿಲು ಬಡಿಯಿತು.

ರಾತ್ರಿ ಹೊತ್ತಿಗೆ ರಾಮಚಂದ್ರಯ್ಯನ ಹೆಣವನ್ನು ಮನೆಗೆ ತಂದು ಹಾಕಿದರು. ಸುಬ್ಬಮ್ಮನವರು ಅತ್ತು ಅತ್ತು ಸಾಕಾಗಿ, ಸುಸ್ತಾಗಿ ಬಿದ್ದುಕೊಂಡರು. ಅಯ್ಯಂಗಾರರ ಸಹಾಯದಿಂದ ಟೆಲಿಗ್ರಾಮು ಕೊಡಿ, ನಾಗವೇಣಮ್ಮನವರನ್ನು ಕರೆಸಿಕೊಂಡರು. ಮಗನ ಹೆಣವನ್ನು ನೋಡಿ ಆಕೆಯ ಸಂಕಟ ವರ್ಣನಾತೀತವಾಗಿದ್ದಿತು. ಬೀಗಿತ್ತಿಯರಿಬ್ಬರು ಸುಖದಲ್ಲಿ ಒಂದಾಗದೇ ಹೋದರೂ ದುಃ[illegible] [illegible]ಾದರು.

ಚಂದ್ರು ಒಳಕೋಣೆಯಲ್ಲಿ ಯಾರೊಡನೆಯೋ ಕುಡಿಯುತ್ತ ಕುಣಿಯುತ್ತ ಲಲ್ಲೆಹೊಡೆಯುತ್ತಿದ್ದನು. ಆನಂದದ ಗುಂಗಿನಲ್ಲಿ ಉನ್ಮತ್ತನಂತೆ ಹಾಡುತ್ತಿದ್ದನು. ನೂಪುರಗಳ ಝಣ್ ಝಣ್ ಶಬ್ದದೊಡನೆ ಬೆರೆತ ಆ ನಗುಲಹರಿಯು ಹೊರಗೆ ತೂರಿಬಂದು ಕಾಮಾಕ್ಷಿಯ ಹೃದಯವನ್ನು ಕೂರಲಗಿನಂತೆ ಇರಿಯುತ್ತಿದ್ದಿತು.

ಕಾಮಾಕ್ಷಿ ತನ್ನ ಮದುವೆಯ ವಜ್ರದುಂಗುರವನ್ನೇ ದೆಯ್ವ ಬಡಿದವಳಂತೆ ನೋಡುತ್ತ ಕುಳಿತುಬಿಟ್ಟಳು. ವಜ್ರದ ಬೆಳಕಿಲ್ಲದ ಆ ಉಂಗುರ ಕಾಂತಿಹೀನವಾಗಿ ಕಂಡಿತು. ಕಾಮಾಕ್ಷಿಯೂ ಸುಖ ಸಂತೋಷಗಳೆಂಬ ವಜ್ರದ ಬೆಳಕನ್ನು ಕಳೆದುಕೊಂಡು ಕಾಂತಿಹೀನಳಾಗಿದ್ದಳು. ಅವಳ ಕಣ್ಣಿಂದ ಕಣ್ಣೀರಕೋಡಿ ಹರಿದು ಬಂದಿತು. ಉಂಗುರದೊಡನಿದ್ದ ರಾಮಚಂದ್ರಯ್ಯನ ಕಾಗದದ ಅಕ್ಷರಗಳು ಅವಳ ಕಣ್ಣೀರಿನಲ್ಲಿ ಅಸ್ಪಷ್ಟವಾಗಿ ಕಂಡವು.

ಪ್ರಿಯ ಮಿತ್ರ ಚಂದ್ರಶೇಖರ್,

[illegible]ನು ವಂಚಕ. ನನ್ನಷ್ಟು ಪಾಪಾತ್ಮರು ಈ ಪ್ರಪಂಚದಲ್ಲಿ [illegible]

[illegible] ಬಾಳನ [illegible]

[illegible]

ಷ್ಟವಾಗಿ... ...ವರಿಬ್ಬರ ಗೋ(
ಕ್ಕಿನಿಂದಲಾದರೂ ನೀರು ತರಿಸುತ್ತಿದ್ದಿತು.

...ರಾಮಣ್ಣನವರು ಮೂರನೆಯ ದಿನ ಸಾಯಂಕಾಲದ ಹೊತ್ತಿ...
...ಬಿಟ್ಟರು. ನೆರೆಹೊರೆಯವರ ಸಹಾಯದಿಂದ ಆ ರಾತ್ರಿ ರಾಮ...
...ಯ್ಯನ ಶವಸಂಸ್ಕಾರ ಮಾಡಿದರು. ಮೀನಾಕ್ಷಿಯ ದೇಹ ಉರಿದ
...ಲ್ಲೇ ರಾಮಚಂದ್ರಯ್ಯನ ದೇಹವೂ ಉರಿದು ಬೂದಿಯಾಯಿತು.

ಹತ್ತನೆಯ ದಿನ ಇಬ್ಬರ ಬೂದಿಯನ್ನೂ ತೆಗೆದುಕೊಂಡು
...ಗಿ ಶರಾವತಿಯಲ್ಲಿ ಕದಡಿದರು. ನಾಗವೇಣಮ್ಮ ಮಗನನ್ನು ಕಳೆ
ಕೊಂಡು, ಸುಬ್ಬಮ್ಮನವರು ಮಗಳನ್ನು ಕಳೆದುಕೊಂಡು ಗೋಳಾ
ಡ್ತಾ ಊರಿಗೆ ಹೊರಟುಬಿಟ್ಟರು. ಆ ಪುಟ್ಟಮನೆ ಎರಡೇ ದಿವಸ
... ಸ್ಮಶಾನವಾಗಿಹೋಯಿತು. ಸಾಕಿದ ಮಗಳ ಸರ್ವನಾಶವನ್ನು
...ರ ಕಂಡು ಆ ಸ್ಮಶಾನವನ್ನು ಬಿಟ್ಟುಹೋದರು, ಸುಬ್ಬಮ್ಮನ
...ಚಂದ್ರ' ಮೀನಾಕ್ಷಿಯ ಬಯಕೆಯಂತೆ. ರಾಗ...

ವಾಯಿತು. ಸಹನೆ ತಂದುಕೋ ಗೆಳೆಯಾ. ವಜ್ರದ ಕಾಂತಿ ನಂದಿದ ಈ ವಜ್ರದುಂಗುರವನ್ನು ನಿನಗೇ ಹಿಂತಿರುಗಿಸಿದ್ದೇನೆ. ಇದರ ನೆನಪಿನಲ್ಲಿ ನಿನ್ನ ಪ್ರೇಮ ಅಮರವಾಗಲಿ. ನಿಮ್ಮ ಪ್ರೇಮ ವನ್ನು ವಂಚಿಸಿದ ಪಾಪಕ್ಕಾಗಿ ಮತ್ತೊಮ್ಮೆ ದೇವರಲ್ಲಿ ಕ್ಷಮೆ ಬೇಡಿ ಕಣ್ಣೀರು ಕರೆದು ಸಾಯುತ್ತಿದ್ದೇನೆ. ಮೀನಾ ಇರು ವಲ್ಲಿಂದಲೇ ನನ್ನನ್ನು ಕ್ಷಮಿಸಲಿ. ಇದೇ ನನ್ನ ಕಡೆಯ ಹಾರೈಕೆ !

ಅನಂತ ವಂದನೆಗಳು.

ರಾಮಚಂದ್ರಯ್ಯ

ಕಾಮಾಕ್ಷಿ ನಿಟ್ಟುಸಿರುಬಿಟ್ಟಳು. 'ಮೀನಾಕ್ಷಿ ಎಂತಹ ಪುಣ್ಯ ಽಂತೆ' ಎಂದುಕೊಂಡು ಅವಳ ಹೃದಯ ತುಂಬಿತು. ಸರ್ರನೆ ಎದ್ದು ಚಂದ್ರುವಿನ ಕೊಠಡಿಯ ಬಳಿ ನಿಂತು ದಬದಬನೆ ಬಾಗಿಲು ಬಡಿದಳು. ವೇಶ್ಯೆಯೊಬ್ಬಳು ಬಾಗಿಲು ತೆಗೆದಳು. ಎದುರಿಗೆ ಹೂವಿನಹಾರ ಹಾಕಿ, ಗಂಧದಕಡ್ಡಿ ಹಚ್ಚಿಟ್ಟ ಮೀನಾಕ್ಷಿಯ ದೊಡ್ಡ ಬಣ್ಣದ ಭಾವಚಿತ್ರ ನಗುತ್ತ ಕುಳಿತಿದ್ದಿತು. ಕಾಮಾಕ್ಷಿ ಕಣ್ಣರಳಿಸಿ ತಂಗಿಯ ಪಠವನ್ನು ಎವೆ ಹಾಕದೆ ನೋಡಿದಳು. ಊದುಕಡ್ಡಿಯ ಸುವಾಸನೆಯೊಡನೆ ಬೆರೆತ ಗಾಳಿ ತೇಲಿ ಬಂದು ಅವಳ ಮೂಗಿಗೆ ಬಡಿಯಿತು. ಕಾಮಾಕ್ಷಿ ನಿಟ್ಟುಸಿರು ಬಿಟ್ಟಳು. ಅವಳ ಕಣ್ಣಲ್ಲಿ ನೀರು ತುಂಬಿಕೊಂಡಿತು. ಯಾವುದೋ ಸದ್ಭಾವನೆಯಿಂದ ಪ್ರಚೋದಿತಳಾಗಿ ಆ ಭಾವಚಿತ್ರಕ್ಕೆ ಕೈಮುಗಿದಳು.

ಚಂದ್ರು ತೂರಾಡುತ್ತ ಹೊರಗೆ ಬಂದನು. ಅವನ ಕಣ್ಣುಗಳು ಕೆಂಡದಂತೆ ಕೆಂಪಗಾಗಿದ್ದುವು. ತೊದಲುತ್ತ ಕೇಳಿದನು.

"ಏನು ಬೇಕಾಗಿದ್ದಿತು ಕಾಮಾಕ್ಷಿ.........ದುಡ್ಡು ಬೇಕೇ ?"

ಕಾಮಾಕ್ಷಿ ವಜ್ರದುಂಗುರವನ್ನೂ, ಕಾಗದವನ್ನೂ ಅವನ ಕೈಯಲ್ಲಿಟ್ಟು ಕಣ್ಣೀರು ತುಂಬಿಕೊಂಡು ಒಳಗೆ ಹೋದಳು.

ಚಂದ್ರು ಆ ವಜ್ರರಹಿತ ವಜ್ರದುಂಗುರವನ್ನು ದಿಟ್ಟಿಸಿ ನೋಡಿ ದನು. ಅದನ್ನು ಬೆರಳಿಗೆ ಹಾಕಿಕೊಂಡು ಕಾಗದವನ್ನು ಬಿಚ್ಚಿ ಓದು ತ್ತಿದ್ದಂತೆ ಅವನ ಕಣ್ಣಲ್ಲಿ ನೀರೂರಿತು. ಓದಿ ಮುಗಿಸಿ ಗಟ್ಟಿಯಾಗಿ

ನಕ್ಕು, "ಮೀನಾ....ಮೀನಾ........" ಎಂದು ಗಳಗಳನೆ ಅತ್ತುಬಿಟ್ಟನು. ಸರ್ರನೆ ಬಾಗಿಲನ್ನು ಹಾಕಿಕೊಂಡು ಮೀನಳ ಭಾವಚಿತ್ರದ ಮುಂದೆ ನಿಂತು ಕಣ್ಣೀರು ತುಂಬಿ ದಿಟ್ಟಿಸಿನೋಡಿದನು. ಅವನ ಹೃದಯದಲ್ಲಿ ದಾರುಣವಾದ ಯಾತನೆಯಾಯಿತು. ತಲೆ ಸುತ್ತುವಂತಾಯಿತು. ಪಲ್ಲಂಗದ ಮೇಲೆ ಕುಕ್ಕರಿಸಿ 'ಜಲಜಾ' ಎಂದು ಅರಚಿದನು. ಜಲಜಾ ಹಾಡಿದಳು, ಗೆಜ್ಜೆ ಕಟ್ಟಿಕೊಂಡು ನರ್ತಿಸಿದಳು. ಚಂದ್ರು ತೊದಲುತ್ತ ಅವಳ ಜೊತೆ ಸ್ವರ ಸೇರಿಸಿದನು.

ಇದ್ದಕ್ಕಿದ್ದಂತೆ ಚಂದ್ರುವಿನ ಕೊಠಡಿಯಲ್ಲಿ ಗಲಾಟೆಯಾಯಿತು. ಫಳ್ಳನೆ ಗ್ಲಾಸು ಒಡೆದ ಶಬ್ದವಾಯಿತು. ಚಂದ್ರು "ಜಲಜಾ.... ಸಾಕು ನಿಲ್ಲಿಸು " ಎಂದು ಆರ್ಭಟಿಸಿದನು. ಕಾಮಾಕ್ಷಿ ಭಯದಿಂದ ಆ ಕೊಠಡಿಯನ್ನೇ ದಿಟ್ಟಿಸಿನೋಡುತ್ತ ನಿಂತುಬಿಟ್ಟಳು. ಅರೆಕ್ಷಣದಲ್ಲಿಯೇ ಕೊಠಡಿಯ ಬಾಗಿಲು ಧಡಾರನೆ ತೆರೆದುಕೊಂಡಿತು. ತೆರೆದ ಬಾಗಿಲಿನಿಂದ ಚಂದ್ರು ನೂಕಿದ ರಭಸಕ್ಕೆ ಜಲಜಾ ಹಜಾರದಲ್ಲಿ ಬಂದುಬಿದ್ದಳು. ಅವಳ ಹಿಂದೆಯೇ ಮದ್ಯದ ಸೀಸೆಗಳು ತೂರಿಬಂದು ಗೋಡೆಗೆ ರಪ್ಪನೆ ಹೊಡೆದು ಚೂರಾಯಿತು. ಹಜಾರದ ಗೋಡೆಗೆಲ್ಲ ಮದ್ಯದ ಅಭಿಷೇಕವಾಯಿತು. ಜಲಜಳ ತಲೆ ಕೂದಲು ಕೆದರಿಹೋಗಿತ್ತು. ಮುಡಿದಿದ್ದ ಹೂವು ಹರಿದು ಜೋತಾಡುತ್ತಿತ್ತು. ಚಂದ್ರು ಹೊರಗೆ ನುಗ್ಗಿಬಂದು

"ನಾಯಿ, ....ಹೊರಟು ಹೋಗು. ನಿಮ್ಮನ್ನೆಲ್ಲ ಗುಂಡಿಟ್ಟು ಕೊಲ್ಲುತ್ತೇನೆ..... ಥೂ, ನಾಯಿಗಳು .....ನನ್ನನ್ನೂ ಬೀದಿಗೆಳೆದ ನಾಯಿಗಳು."

ಎಂದು ಆರ್ಭಟಿಸಿದನು. ಜಲಜ ಸರ್ರನೆ ಎದ್ದು ನಿಂತಳು. ಅವಳ ಕಣ್ಣುಗಳು ಅಪಮಾನದಿಂದ ಕ್ರೋಧದ ಕಿಡಿಗಳನ್ನು ಕಾರುತ್ತಿದ್ದುವು. ಎವೆಯಿಕ್ಕುವುದರಲ್ಲಿ ಜಲಜಾ ಅಷ್ಟೇ ಅಸಹ್ಯದಿಂದ " ಥೂ...." ಎಂದು ಉಗಿದು, ಸರ್ರನೆ ಬಾಗಿಲನ್ನು ತೆಗೆದುಕೊಂಡು ಬೀದಿಗೋಡಿದಳು.

ಕಾಮಾಕ್ಷಿಯ ಮುಖ ಅರ್ಧ ಮೆಚ್ಚುಗೆಯಿಂದ, ಅರ್ಧ ಭೀತಿಯಿಂದ ಬಣ್ಣಗೆಟ್ಟಿತ್ತು. ಚಂದ್ರು ಅರೆಕ್ಷಣ ಕಾಮಾಕ್ಷಿಯನ್ನು ದಿಟ್ಟಿಸಿ ನೋಡಿ, " ಮೀನಾ...." ಎಂದು ಅವಳ ಕಾಲಮೇಲೆ ಬಿದ್ದುಬಿಟ್ಟನು.

ಭಾವಚಿತ್ರದ ಮೀನಳ ಕಣ್ಣುಗಳಲ್ಲಿ ಆನಂದಭಾಷ್ಪ ಮೂಡಿತು.